

# ನಂದಳಿಕೆಯ ನಂದಾದೀಪ

## ಮುದ್ದಣ ೧೫೦ ಸಂಸ್ಮರಣ ಗ್ರಂಥ

ಸಂಪಾದಕರು : ಡಾ. ಜಿ. ಎಂ. ಹೆಗಡೆ



# ನಂದಳಿಕೆಯ ನಂದಾದೀಪ

ಮುದ್ದಣ 150 ಸಂಸ್ಮರಣ ಗ್ರಂಥ

ಸಂಪಾದಕರು

**ಡಾ. ಜಿ. ಎಂ. ಹೆಗಡೆ**

**ಅಕ್ಷರ ಮಂಟಪ**

ನಂ. 1667, 6ನೇ ಅಡ್ಡರಸ್ತೆ, 6ನೇ 'ಸಿ' ಮೇನ್,
ಹಂಪಿನಗರ, ಬೆಂಗಳೂರು-560 104

ನಂದಳಿಕೆಯ ನಂದಾದೀಪ : ಮುದ್ದಣ 150 ಸಂಸ್ಮರಣ ಗ್ರಂಥ
ಲೇಖಕರು : ಡಾ. ಜಿ. ಎಂ. ಹೆಗಡೆ, 6ನೇ ಅಡ್ಡರಸ್ತೆ, ಕಲ್ಯಾಣನಗರ,
ಧಾರವಾಡ – 580007

**Nandalikeya Nandadeepa :** Commemoration volume of Kavi Muddana's 150th Year Celebration (in Kannada)

Written by : **Dr. G. M. Hegde**
6th Cross, Kalvanagar, Dharwad - 580007



Published by

**AKSHARA MANTAPA**
No. 1667, 6th Cross, 6th 'C' Main,
Hampinagar, Bangalore - 560 104

First Impression : 2020
Pages : xviii + 258 = 276
Price : ₹ 220/-
Paper : 70 gsm Maplitho
Size : 1/8th Demmy

Copies : 1000
Layout : Ravindra Alakavadi
Cover Page : Chethan

Printed at : **A.M.Prints,** Bangalore

# ಸಂಪಾದಕರ ಮಾತು

ನಂದಳಿಕೆಯ ಲಕ್ಷ್ಮೀನಾರಾಯಣಪ್ಪ 'ಮುದ್ದಣ'ನಾಗಿ ಕನ್ನಡ ಲೋಕದಲ್ಲಿ ಖ್ಯಾತನಾಗಿದ್ದಾನೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮುದ್ದಣನಿಗೆ ವಿಶಿಷ್ಟ ಸ್ಥಾನ. ಪ್ರತಿಭಾ ಸಂಪನ್ನನೂ, ಅದ್ಭುತ ಮೇಧಾಶಕ್ತಿಯುಳ್ಳವನೂ ಆದ 'ಮುದ್ದಣ' ಹೊಸಗನ್ನಡದ ಅರುಣೋದಯದಲ್ಲಿ ಮೂವತ್ತೊಂದು ವರ್ಷ (೧೮೭೦-೧೯೦೧) ಕಾಲ ಬಾಳಿದ ಕವಿ. ಮುದ್ದಣ 'ರತ್ನಾವತೀ ಕಲ್ಯಾಣ', 'ಕುಮಾರವಿಜಯ' ಎಂಬ ಯಕ್ಷಗಾನ ಕೃತಿಗಳನ್ನೂ 'ಶ್ರೀರಾಮ ಪಟ್ಟಾಭಿಷೇಕ' ವಾರ್ಧಕ ಷಟ್ಪದಿ ಕಾವ್ಯವನ್ನೂ, 'ಅದ್ಭುತರಾಮಾಯಣ', 'ಶ್ರೀರಾಮಾಶ್ವಮೇಧ' ಗದ್ಯಕೃತಿಗಳನ್ನೂ ರಚಿಸಿದ್ದಾನೆ. 'ಭಗವದ್ಗೀತೆ' ಪದ್ಯಾನುವಾದ, 'ಗೋದಾವರಿ' (ಅಪೂರ್ಣ ಕಾದಂಬರಿ), ಸಂಪ್ರದಾಯದ ಹಾಡುಗಳು, ಕನ್ನಡ ರಾಮಾಯಣ ಇವುಗಳನ್ನು ಬರೆದ ಮುದ್ದಣ ದಟ್ಟ ದಾರಿದ್ರ್ಯದಿಂದ ದೈಹಿಕ ಮತ್ತು ಮಾನಸಿಕ ಯಾತನೆಯನ್ನು ಅನುಭವಿಸಿದನು. ಮುದ್ದಣ ಬದುಕಿದ್ದಾಗ ಯಾವ ಮನ್ನಣೆಯನ್ನು ಪಡೆಯದಿದ್ದರೂ ಕನ್ನಡ ಸಾಹಿತ್ಯ ಲೋಕದಲ್ಲಿ ನಿರಂತರವಾಗಿ ಅವನ ಕೃತಿಗಳು ಸಹೃದಯರ ಮೆಚ್ಚುಗೆ ಪ್ರಶಂಸೆಗೆ ಪಾತ್ರವಾಗಿವೆ.

ಮುದ್ದಣ ಕವಿಯ ೧೫೦ ರ ಸಂಭ್ರಮಾಚರಣೆ ವರ್ಷವನ್ನು ಕನ್ನಡನಾಡು ಈಗ ಆಚರಿಸುತ್ತಿದೆ. ಮುದ್ದಣ ಹುಟ್ಟಿದ ನಂದಳಿಕೆ ಗ್ರಾಮ ಈಗ ಸಾಂಸ್ಕೃತಿಕ ತಾಣವಾಗಿ ಪರಿವರ್ತನೆಯಾಗಿದೆ. ಇದಕ್ಕೆ ಕಾರಣ ನಂದಳಿಕೆಯ 'ಕವಿ ಮುದ್ದಣ ಸ್ಮಾರಕ ಮಿತ್ರ ಮಂಡಳಿ'. ೧೯೭೯ರಲ್ಲಿ ಆರಂಭವಾದ ಈ ಮಿತ್ರ ಮಂಡಳಿ ಮುದ್ದಣ ಕವಿಯ ಹೆಸರಿನಲ್ಲಿ ಅದ್ವಿತೀಯ ಕಾರ್ಯ ಮಾಡಿದೆ. ಮುದ್ದಣ ಹುಟ್ಟಿದ ಊರು ಮೂಲಭೂತ ಸೌಕರ್ಯಗಳಿಂದ ಈಗ ಅಭಿವೃದ್ಧಿ ಹೊಂದಿದೆ. ಮುದ್ದಣ ಕವಿಯ ಕೃತಿಗಳ ಪ್ರಕಟಣೆ, ಮುದ್ದಣನ ಯಕ್ಷಗಾನಗಳ ಧ್ವನಿ ಸುರುಳಿ, ರಂಗ ಪ್ರಯೋಗ, ಮುದ್ದಣ ಉತ್ಸವ, ವಿಚಾರ ಸಂಕಿರಣ, ಮುದ್ದಣ ಹೆಸರಿನಲ್ಲಿ ಕವಿ ಸಮ್ಮೇಳನ, ಯಕ್ಷಗಾನ, ಅವಧಾನ, ತಾಳಮದ್ದಳೆ, ಪ್ರವಚನ, ಗಂಜೀಫ ಪ್ರದರ್ಶನ, ಮುದ್ದಣ ವನ, ಮುದ್ದಣ ಸ್ಮಾರಕ ಭವನ, ಗ್ರಂಥಾಲಯ, ಆಸ್ಪತ್ರೆ, ಡಾಂಬರ್ ರಸ್ತೆ, ವಿದ್ಯುತ್, ಗ್ರಾಮಾಭಿವೃದ್ಧಿ, ದೂರವಾಣಿ ಕೇಂದ್ರ, ಅಂಚೆ ಚೀಟಿ ಬಿಡುಗಡೆ ಹೀಗೆ ಹತ್ತಾರು ಕಾರ್ಯಗಳನ್ನು ಎಡಬಿಡದೆ ಸಂಘಟಿಸುತ್ತ ಮುದ್ದಣ ಸ್ಮಾರಕ ಮಿತ್ರ ಮಂಡಳಿ ನಾಡಿಗೇ ಆದರ್ಶ ಪ್ರಾಯವಾಗಿದೆ.

ಮುದ್ದಣ ನಂದಳಿಕೆಯವನು ಎಂಬ ಅಭಿಮಾನ ಊರ ಜನರ ಹೃದಯದಲ್ಲಿ ಮನೆ ಮಾಡಿದೆ. ಈ ಕವಿಯ ಬಗೆಗೆ ಅಲ್ಲಿಯ ಜನರ ಪ್ರೀತಿ ಅಸಾಧಾರಣವಾದದ್ದು.

ಮುದ್ದಣ ಕವಿಯ ಬಗೆಗೆ ಅಪಾರ ಆಸ್ಥೆ ಬೆಳೆಸಿಕೊಂಡು ದುಡಿಯುತ್ತಿರುವ ನಂದಳಿಕೆ ಬಾಲಚಂದ್ರರಾಯರು ನಾಲ್ಕು ದಶಕಗಳಿಂದ ಮುದ್ದಣ ಕಾರ್ಯದಲ್ಲಿ ತೊಡಗಿದ್ದಾರೆ. ಮುದ್ದಣನಿಗೆ ಸಂಬಂಧಿಸಿದಂತೆ **'ಮುದ್ದಣನಿಗೆ ನಮನ'** ಗ್ರಂಥವನ್ನು ಮುದ್ದಣ – ೧೨೫ ಸಂಭ್ರಮದಲ್ಲಿ ಜಯರಾಮ ಕಾರಂತರು ನಂದಳಿಕೆ ಬಾಲಚಂದ್ರರಾಯರು, ಜತೆಗೂಡಿ ಸಂಪಾದಿಸಿ ಪ್ರಕಟಿಸಿದರು. ಅದರಲ್ಲಿ ಎಂಟು ಬೇರೆ ಬೇರೆ ಭಾಗಗಳಿವೆ. ಮುದ್ದಣನನ್ನು ಹತ್ತಿರದಿಂದ ಕಂಡವರು ಬರೆದ ಬರಹಗಳು ಮೊದಲ ಭಾಗದಲ್ಲಿವೆ. ಅದರಲ್ಲಿ ಮುದ್ದಣನ ಗುರುಗಳಾದ ಮಳಲಿ ಸುಬ್ಬರಾಯರು, ಆರ್. ನರಸಿಂಹಾಚಾರ್, ಬೆನಗಲ್ ರಾಮರಾಯರು, ಪಂಜೆ, ಹುರಳಿ ಭೀಮರಾಯರು, ಗೋವಿಂದ ಪೈ ಅವರ ಲೇಖನಗಳು ಸೇರಿವೆ. ಎರಡನೆಯ ಭಾಗದಲ್ಲಿ ಮುದ್ದಣನ 'ರಾಮಾಶ್ವಮೇಧ' ವಿವೇಚನೆಯ ನಾಲ್ಕು ಲೇಖನಗಳಿವೆ. ಮುದ್ದಣನ 'ರಾಮಪಟ್ಟಾಭಿಷೇಕ'ದ ವಿವೇಚನೆ ಮೂರನೆಯ ಭಾಗದಲ್ಲಿದೆ. 'ಅದ್ಭುತ ರಾಮಾಯಣ'ದ ಬಗೆಗೆ ನಾಲ್ಕನೆಯ ಭಾಗದಲ್ಲಿ ಲೇಖನವಿದೆ. ಐದನೆಯ ಭಾಗದಲ್ಲಿ ಮುದ್ದಣನ ಯಕ್ಷಗಾನ ಕೃತಿಗಳ ಬಗೆಗೆ ಸೇಡಿಯಾಪು, ರಾಘವ ನಂಬಿಯಾರ್ ಬರೆದ ಬರಹಗಳಿವೆ. ಆರನೆಯ ಭಾಗದಲ್ಲಿ ಮುದ್ದಣನ ಗದ್ಯಶೈಲಿಯ ಸಮಾಲೋಚನೆಯಿದೆ. ಏಳನೆಯ ಭಾಗದಲ್ಲಿ ಮುದ್ದಣನ ಗ್ರಂಥಗಳ ಕರ್ತೃತ್ವ ಸಮಸ್ಯೆ ಕುರಿತು ಗೋವಿಂದಪೈ ಶಿವರಾಮ ಕಾರಂತರು ಬರೆದ ಲೇಖನಗಳಿವೆ. ಎಂಟನೆಯ ಭಾಗದಲ್ಲಿ ನಂದಳಿಕೆ ಹಾಗೂ ಕವಿ ಸ್ಮಾರಕಕ್ಕೆ ಸಂಬಂಧಿಸಿ ಬರೆಸಿದ ಬರಹಗಳಿವೆ.

ಮುದ್ದಣ ಸ್ಮಾರಕ ಮಿತ್ರ ಮಂಡಳಿಯ ಬೆಳ್ಳಿಹಬ್ಬದ ಸಂದರ್ಭದಲ್ಲಿ **ನಂದಳಿಕೆಯ ನಂದನ** (೨೦೦೪) ಗ್ರಂಥವನ್ನು ನಂದಳಿಕೆ ಬಾಲಚಂದ್ರರಾಯರು ಸಂಪಾದಿಸಿದರು. ಅದಕ್ಕೆ ಹಿರಿಯ ವಿದ್ವಾಂಸರಾದ ಪಾದೇಕಲ್ಲು ವಿಷ್ಣುಭಟ್ಟರು ಮುನ್ನುಡಿ ಬರೆದಿದ್ದಾರೆ. 'ನಂದಳಿಕೆಯ ನಂದನ'ದಲ್ಲಿ ಮೂರು ಭಾಗಗಳಿವೆ. ಮುದ್ದಣನನ್ನು ಕುರಿತ ಮೊದಲ ಭಾಗದಲ್ಲಿ ಮುದ್ದಣ ಸಂಸ್ಮರಣೆಯ ಹನ್ನೊಂದು ಲೇಖನಗಳಿವೆ. ಎರಡನೆಯ ಭಾಗದಲ್ಲಿ ಕವಿ ಸ್ಮರಣೆಯ ವಿಶಿಷ್ಟ ಲೇಖನಗಳಿವೆ. 'ಮುದ್ದಣ ನೂರಿಪ್ಪತ್ತೈದು', 'ಕವಿಯಾಗಿ ಜನಿಸಬೇಡ' ಎಂಬ ಹಾ. ಮಾ. ನಾಯಕರ ಲೇಖನಗಳೆರಡೂ ಅಂಕಣ ಬರಹಗಳಾಗಿವೆ. ಮೂರನೆಯ ಭಾಗದಲ್ಲಿ ಮುದ್ದಣ ಸ್ಮಾರಕವಾಗಿ ನಂದಳಿಕೆಯಲ್ಲಿ ಏನೇನು ಕಾರ್ಯಕ್ರಮಗಳಾದವು, ನಂದಳಿಕೆ ಹೇಗೆ ಕವಿಯ ಹೆಸರಿನಲ್ಲಿ ಅಭಿವೃದ್ಧಿ ಹೊಂದಿತೆಂಬುದನ್ನು ತಿಳಿಸುವ ಲೇಖನಗಳನ್ನೊಳಗೊಂಡಿದೆ.

ಮುದ್ದಣನ ಹೆಸರಿನಲ್ಲಿ ಈಗ ಶತಮಾನೋತ್ತರ ಸುವರ್ಣ ಹಬ್ಬ ನಡೆಯುತ್ತಿದೆ. ಈ ಕಾರ್ಯಕ್ರಮದ ರೂವಾರಿ ಮುದ್ದಣ-೧೨೫ ಸಂಭ್ರಮೋತ್ಸವದ ಬಾಲಚಂದ್ರರಾಯರೇ ಮುಂದಾಗಿ ಓಡಾಡುತ್ತಿದ್ದಾರೆ. ವಯಸ್ಸು ದೇಹಕ್ಕೆ ಮನಸ್ಸಿಗಲ್ಲ ಎಂಬುದಕ್ಕೆ ಸಾಕ್ಷಿಯಾಗಿರುವ ಬಾಲಚಂದ್ರರಾಯರು ಮುದ್ದಣನ ಹೆಸರಿನಲ್ಲಿ ಮತ್ತೊಂದು ಗ್ರಂಥ ಹೊರತರುವ ತಮ್ಮ ಆಸೆಯನ್ನು ಮುಂದಿಟ್ಟರು. ಧಾರವಾಡಕ್ಕೆ ಬಂದು ನಮ್ಮ ಮನೆಯಲ್ಲಿ ಕುಳಿತು ಯೋಜನೆ ಚರ್ಚಿಸಿದರು. ಅದರ ಫಲವೇ ಪ್ರಸ್ತುತ ಗ್ರಂಥವಾಗಿದೆ.

ಮುದ್ದಣ ಕವಿಯ ಕೃತಿಗಳ ಅಧ್ಯಯನ ಬಹುವರ್ಷಗಳಿಂದ ನಡೆಯುತ್ತ ಬಂದಿದೆ. ಮುದ್ದಣನ ಕೃತಿಗಳು ಕನ್ನಡಲೋಕದಲ್ಲಿ ಬಗೆಬಗೆಯ ಸಾಹಿತ್ಯ ಚರ್ಚೆಗೆ ತೆರೆದುಕೊಂಡಿವೆ. ಅದಕ್ಕೆ ಒಂದು ಸ್ಮರಣೀಯ ಇತಿಹಾಸವೇ ಇದೆ. ಮುದ್ದಣ ಬಡತನ, ನೋವು, ದೈಹಿಕ ಯಾತನೆ ಅನುಭವಿಸಿ ಕನ್ನಡ ಸಾಹಿತ್ಯದಲ್ಲಿ ಮಾಡಿದ ಸಾಧನೆ ವಿಮರ್ಶಕರ ಮೆಚ್ಚುಗೆ, ಪ್ರಶಂಸೆಗೆ ಪಾತ್ರವಾಗಿದೆ.

ಮಾಸ್ತಿಯವರು ಬರೆದ 'ಮುದ್ದಣನ ರಾಮಾಶ್ವಮೇಧ' ಲೇಖನ ೧೯೨೯ರಲ್ಲಿ ಪ್ರಕಟವಾದ ಅವರ ವಿಮರ್ಶೆ ೨ರಲ್ಲಿ ಪ್ರಕಟವಾಗಿದೆ. ನವೋದಯ ವಿಮರ್ಶೆಗೆ ಅಸ್ತಿವಾರ ಹಾಕಿದ ಮಾಸ್ತಿಯವರು ಮುದ್ದಣನ ಬಗೆಗೆ ಉದಾರವಾದ ವಿಮರ್ಶೆಯನ್ನು ಬರೆದರು. ಮುದ್ದಣ ಕವಿಯಾಗಿ ಅನುಭವಿಸಿದ ಯಾತನೆಗಳು, ಅವನ ಬಡತನ, ದಾರುಣ ಸ್ಥಿತಿಯನ್ನು ನೆನೆದು ಮರುಗಿದರು. ಮಾಸ್ತಿಯವರು ಅವನ ಸಾಹಿತ್ಯ ಶಕ್ತಿಯನ್ನು ಮೆಚ್ಚಿ 'ಶ್ರೀ ರಾಮಾಶ್ವಮೇಧದ ರಸಪ್ರಸಂಗಗಳನ್ನು ವಿಶ್ಲೇಷಿಸಿದರು. 'ಮುದ್ದಣ ಕವಿ ಕನ್ನಡ ಭಾಷೆಯಲ್ಲಿ ಮಾತ್ರವಲ್ಲ ಪ್ರಪಂಚದ ಇನ್ನು ಯಾವ ಭಾಷೆಯಲ್ಲಾದರೂ ಕವಿಗೋಷ್ಠಿಯ ಅಗ್ರಸ್ಥಾನಗಳಲ್ಲಿ ಒಂದಕ್ಕೆ ಅಧಿಕಾರಿ ಎಂದು ಪಾಠಕರಿಗೆ ತೋರುವದು. ಪ್ರಕೃತಿ ಸೌಂದರ್ಯದ ವರ್ಣನೆಯಲ್ಲಿ ಈತನು ಕಾಳಿದಾಸ ಷೇಕ್ಸಪಿಯರ್‌ರಿಗಿಂತ ಬಹಳ ಕಡಿಮೆಯಾದವನಲ್ಲ. ಪುರಾಣ ಪಾತ್ರಗಳ ಸ್ವಭಾವ ನಿರೂಪಣದಲ್ಲಿ ಈತನಿಗೆ ಶ್ಲಾಘನೀಯವಾದ ಔಚಿತ್ಯ ಜ್ಞಾನವಿದೆ. ಇವನ ಕನ್ನಡ ಶೈಲಿಯ ಸೊಗಸು ರಸ್ಕಿನ್, ಡಿಕ್ವಿನ್ಸಿಗಳ ಇಂಗ್ಲೀಷ್ ಶೈಲಿಯ ಸೊಗಸಿಗೆ ಸಮಾನವಾಗುತ್ತದೆ. ಇಂಥ ಕವಿಯನ್ನು ಪಡೆದದ್ದು ಕರ್ನಾಟಕದ ಸೌಭಾಗ್ಯ (ವಿಮರ್ಶೆ ೨, ಪುಟ ೧೩೪) ಎಂದು ಅತ್ಯುತ್ಸಾಹದಿಂದ ಪ್ರಶಂಸಿಸಿ ಬರೆದರು. ನವೋದಯ ವಿಮರ್ಶೆ ಕಣ್ಣು ತೆರೆಯುತ್ತಿರುವಾಗ ಮುದ್ದಣನ ಬಗೆಗೆ ಮಾಸ್ತಿಯವರು ಹೃದಯದ ಹಾರ್ದಿಕ ಭಾವವನ್ನು ಪ್ರಕಟಿಸಿದರು. ಮಾಸ್ತಿಯವರ ಪ್ರಶಂಸೆಯ ಮಾತುಗಳನ್ನು ಓದಿದ ಎಸ್. ವಿ. ರಂಗಣ್ಣನವರು 'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು' ಎಂಬ ಲೇಖನದ ಮೂಲಕ ತೀವ್ರವಾಗಿ ಪ್ರತಿಕ್ರಿಯಿಸಿದರು.

ಇವೆರಡೂ ಲೇಖನಗಳು ಮುದ್ದಣ ವಿಮರ್ಶೆಯಲ್ಲಿ ಪ್ರಮುಖವಾದುದರಿಂದ ಅವೆರಡನ್ನೂ ಈ ಗ್ರಂಥದಲ್ಲಿ ಮರುಓದಿಗೆ ಅಳವಡಿಸಲಾಗಿದೆ.

ಮುದ್ದಣ ವಿಮರ್ಶೆಗೆ ಸಾಹಿತ್ಯಲೋಕದ ಅನೇಕ ಹಿರಿಯರು ಸ್ಪಂದಿಸಿದ್ದಾರೆ. ತ. ಸು. ಶಾಮರಾಯರು, ಕೀರ್ತಿನಾಥ ಕುರ್ತುಕೋಟಿ, ರಂ. ಶ್ರೀ ಮುಗಳಿ, ಎಂ. ಮರಿಯಪ್ಪ ಭಟ್ಟ, ಕೆ. ನರಸಿಂಹಶಾಸ್ತ್ರಿ, ಎಸ್. ವಿ. ಪರಮೇಶ್ವರಭಟ್ಟ, ಎನ್. ಅನಂತ ರಂಗಾಚಾರ್, ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಅವರ ಮುದ್ದಣ ವಿಮರ್ಶಾ ಲೇಖನಗಳು ಈ ಸಂಪುಟದಲ್ಲಿವೆ. ಹಿರಿಯ ವಿದ್ವಾಂಸರಾದ ಬನ್ನಂಜೆ ಗೋವಿಂದಾಚಾರ್ಯ, ಕ. ವೆಂ. ರಾಜಗೋಪಾಲ, ವೇಣುಗೋಪಾಲ, ಬೇಲೂರ ರಾಮಮೂರ್ತಿ ಅವರು ಬರೆದ ಮುದ್ದಣ ಸಾಹಿತ್ಯಾನುಸಂಧಾನ ಲೇಖನಗಳೂ ಇಲ್ಲಿವೆ.

ಮುದ್ದಣ ಸಾಹಿತ್ಯ ವಿಮರ್ಶೆಯ ವಿಭಿನ್ನ ಮಾದರಿಗಳನ್ನು ಸಾಹಿತ್ಯ ಸಹೃದಯರಿಗೆ ಒದಗಿಸುವದೂ ಕವಿಕೃತಿಗಳ ಅಧ್ಯಯನಕ್ಕೆ, ಮರು ಓದು ವ್ಯಾಖ್ಯಾನಕ್ಕೆ ದಾರಿಯನ್ನು ತೆರೆಯುವದೂ ಇವತ್ತಿನ ವಿಮರ್ಶೆ ಮಾಡುವ ಕಾರ್ಯಗಳಲ್ಲೊಂದಾಗಿದೆ. ಈ ನಿಟ್ಟಿನಲ್ಲಿ 'ನಂದಳಿಕೆಯ ನಂದಾದೀಪ' ಮುದ್ದಣ ಅನುಸಂಧಾನಕ್ಕೆ ಉಪಯುಕ್ತವಾಗಲಿದೆ. ಹಾಗೆ ನೋಡಿದರೆ ಮುದ್ದಣ ವಿಮರ್ಶೆಯ ಸಮಗ್ರ ಲೇಖನಗಳ ಸಂಪುಟ ಪ್ರಕಟವಾಗಬೇಕು. ಬರಲಿರುವ ವರ್ಷಗಳಲ್ಲಿ ಮುದ್ದಣ ಸಾಹಿತ್ಯ ಪ್ರಕಾಶಕರು ಮುಂದೆ ಬಂದು ಅದನ್ನು ಸಾಧ್ಯಗೊಳಿಸಲಿ ಎಂದು ಆಶಿಸುತ್ತೇನೆ.

ಮುದ್ದಣನ ಸಾಹಿತ್ಯ ವಿಮರ್ಶೆಯ ಲೇಖನಗಳನ್ನು ಬರೆದ ಅನೇಕ ಹಿರಿಯರು ಈಗ ನಮ್ಮ ನಡುವೆ ಇಲ್ಲ. ಅವರು ತೆರೆದ ಅಧ್ಯಯನದ ಒಳನೋಟಗಳು ನಮ್ಮನ್ನು ಪುಳಕಿತರನ್ನಾಗಿಸುತ್ತವೆ. ಈ ಗ್ರಂಥದಲ್ಲಿ ಬಂದ ಲೇಖನಗಳನ್ನು ಪುಸ್ತಕ ರೂಪದಲ್ಲಿ ಅಳವಡಿಸುವ ಮೂಲಕ ಅವರ ಚೇತನಕ್ಕೆ ಕೃತಜ್ಞತಾಪೂರ್ವಕ ನುಡಿನಮನಗಳನ್ನು ಸಲ್ಲಿಸುತ್ತೇನೆ.

ಮುದ್ದಣ ಹೆಸರಿನಲ್ಲಿ ಕಳೆದ ನಾಲ್ಕು ದಶಕಗಳಿಂದ (೧೯೭೯–೨೦೨೦) 'ಮುದ್ದಣ ಕಾವ್ಯ ಪ್ರಶಸ್ತಿ'ಯನ್ನು ಕನ್ನಡದ ಯುವ ಕವಿಗೆ ನೀಡುತ್ತ ಪ್ರೋತ್ಸಾಹಿಸುತ್ತ ಬಂದ ಕಾಂತಾವರ ಕನ್ನಡ ಸಂಘದ ಡಾ. ನಾ. ಮೊಗಸಾಲೆ ಅವರ ಕಾರ್ಯವನ್ನು ಇಲ್ಲಿ ನೆನೆಯಬೇಕು. ಮುದ್ದಣ ಕಾವ್ಯ ಪ್ರಶಸ್ತಿ ಪಡೆದ ಅನೇಕ ಪ್ರತಿಭಾವಂತರು ಕನ್ನಡ ಕಾವ್ಯ ಪ್ರಪಂಚದಲ್ಲಿ ಸಾಧನೆ ಮಾಡಿದ್ದಾರೆ.

ಕನ್ನಡದ ಖ್ಯಾತ ಅಂಕಣಕಾರರಾಗಿದ್ದ ಡಾ. ಹಾ. ಮಾ. ನಾಯಕರು ಪ್ರಜಾವಾಣಿ ಪತ್ರಿಕೆಗೆ ಬರೆದ 'ನಂದಳಿಕೆಯ ನಂದಾದೀಪ' ಎಂಬ ಲೇಖನವೇ ಈ ಪುಸ್ತಕದ

ಶೀರ್ಷಿಕೆಗೆ ಪ್ರೇರಣೆಯಾಗಿದೆ. ಆದ್ದರಿಂದ ಅವರ ಲೇಖನವೂ ಇಲ್ಲಿ ಮರುಓದಿಗೆ ಒಳಗೊಂಡಿದೆ. ತಮ್ಮ ಜೀವನವನ್ನು ಮುದ್ದಣ ಸಾಹಿತ್ಯ ಪ್ರಚಾರ, ಸೇವೆಗಾಗಿ ತೊಡಗಿಸಿಕೊಂಡ ನಂದಳಿಕೆ ಬಾಲಚಂದ್ರರಾಯರು ಈಗ 'ಮಹಾರಥ' ಎಂಬ ಪ್ರತ್ಯೇಕ ಸ್ಮರಣ ಸಂಪುಟವನ್ನು ಸಂಪಾದಿಸುತ್ತಿದ್ದು ಅವರು ಮುದ್ದಣ ಮಹಾರಥವನ್ನು ಎಳೆದ ಸಾಹಸಯಾತ್ರೆ ಅದರಲ್ಲಿ ಅನಾವರಣಗೊಳಿಸಿದ್ದಾರೆ. ಮುದ್ದಣ ಭಕ್ತ ನಂದಳಿಕೆ ಬಾಲಚಂದ್ರರಾಯರ ನುಡಿಸೇವೆಗೆ ಕನ್ನಡಿಗರ ಅಭಿನಂದನೆಗಳು.

ಬೆಂಗಳೂರಿನ ಶ್ರೀ ಸಾಯಿ ಸಾಹಿತ್ಯ ಪ್ರಕಾಶನದ ಶ್ರೀ ಚೇತನ ಕಣಬೂರು ಅವರು ಮುದ್ದಣನ ಮೇಲಿನ ಅಭಿಮಾನದಿಂದ ಈ ಪುಸ್ತಕ ಪ್ರಕಟಿಸುತ್ತಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಧಾರವಾಡದ ಮನೋಹರ ಮುದ್ರಣಾಲಯದ ರವೀಂದ್ರ ಹಾಗೂ ಚಂದ್ರಶೇಖರ ಸಹೋದರರು ಈ ಪುಸ್ತಕದ ಅಕ್ಷರ ಜೋಡಣೆ ಮಾಡಿಕೊಟ್ಟಿದ್ದಾರೆ. ಪುಸ್ತಕದ ಎಲ್ಲ ಲೇಖಕರಿಗೂ ಅವುಗಳನ್ನು ಪ್ರಕಟಿಸಿದ ಪ್ರಕಾಶಕರಿಗೂ ಧನ್ಯವಾದಗಳು.

'ನಂದಳಿಕೆಯ ನಂದಾದೀಪ' ಮುದ್ದಣ ಸಾಹಿತ್ಯಪ್ರಿಯರಿಗೆ ಪ್ರಿಯವಾಗಲೆಂದು ಆಶಿಸುತ್ತೇನೆ.

**– ಡಾ. ಜಿ. ಎಂ. ಹೆಗಡೆ**

# ಚಿನ್ನದ ಹರಿವಾಣದಲ್ಲಿ ಕವಿನೆನಪಿನ ಆರತಿ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ಮುದ್ದಣ' ಕಾವ್ಯನಾಮದ ನಂದಳಿಕೆ ಲಕ್ಷ್ಮೀನಾರಾಯಣಪ್ಪ ಅದ್ವಿತೀಯ ಸಾಧನೆ ಮಾಡಿದ ಕವಿ. ಮುದ್ದಣ ಕಾರ್ಕಳ ತಾಲೂಕಿನ ನಂದಳಿಕೆಯವನು ಎಂಬುದು ನಮ್ಮೆಲ್ಲರ ಹೆಮ್ಮೆ. ನಂದಳಿಕೆಯಲ್ಲಿ ಊರಿನ ಹಿರಿಯರು ಸೇರಿಕೊಂಡು ಕವಿ ಮುದ್ದಣ ಸ್ಮಾರಕ ರೈತ ಸಂಘ (ರಿ) ವನ್ನು ೧೯೩೮ರಲ್ಲಿ ಸ್ಥಾಪಿಸಿದರು. ಅದರ ಉದ್ದೇಶಗಳಲ್ಲಿ ಮುದ್ದಣ ಸ್ಮಾರಕ ಭವನ ನಿರ್ಮಾಣವೂ ಸೇರಿತ್ತು. ಇದಕ್ಕಾಗಿ ಶ್ರೀಮತಿ ಚಾವಡಿ ಸೀತಮ್ಮ ಹೆಗ್ಗಡತಿ ಸ್ವಲ್ಪ ಜಮೀನನ್ನು ದಾನ ಮಾಡಿದರು. ಟಿ. ಎ. ಪೈ ಅವರು ಅಡಿಗಲ್ಲನ್ನಿಟ್ಟರು. ಮುಂದೆ ಕೆಲಸ ಹಾಗೇ ಉಳಿಯಿತು. ನಂದಳಿಕೆಯ ತರುಣರೆಲ್ಲ ಸೇರಿ ೧೯೭೭ರಲ್ಲಿ 'ಕವಿ ಮುದ್ದಣ ಸ್ಮಾರಕ ಮಿತ್ರ ಮಂಡಳಿ' (ರಿ) ಆರಂಭಿಸಿ ಮುದ್ದಣ ಹೆಸರಿನಲ್ಲಿ ನಂದಳಿಕೆಯನ್ನು ಸಾಂಸ್ಕೃತಿಕ ಪರಂಪರೆಯ ತಾಣವಾಗಿ ಅಭಿವೃದ್ಧಿಪಡಿಸಿದ್ದು ಈಗ ಇತಿಹಾಸ. ಮುದ್ದಣ ಹೆಸರಿನಲ್ಲಿ ನಂದಳಿಕೆ ಬೆಳೆದ ಬಗೆಯನ್ನು ಹಿಂತಿರುಗಿ ನೋಡಿದಾಗ ರೋಮಾಂಚನವಾಗುತ್ತದೆ. ೧೯೮೭ರಲ್ಲಿ ಕವಿ ಮುದ್ದಣ ಸ್ಮಾರಕ ಮಿತ್ರ ಮಂಡಳಿಯ ಕನಸಿನ ಭವನವನ್ನು ಡಾ. ವೀರೇಂದ್ರ ಹೆಗ್ಗಡೆ ಉದ್ಘಾಟಿಸಿದರು ಮತ್ತು ಮುದ್ದಣ ಸ್ಮಾರಕ ಗ್ರಂಥಾಲಯವನ್ನು ಡಾ. ಶಿವರಾಮ ಕಾರಂತರು ಉದ್ಘಾಟಿಸಿ ಹೇಳಿದ 'ಮುದ್ದಣನ ಕಾಲದ ಗ್ರಾಮೀಣ ಬದುಕಿನ ವೈಭವ ಮತ್ತೆ ನಂದಳಿಕೆಯಲ್ಲಿ ಗತವೈಭವವಾಗಿ ಮೂಡಿಬರಬೇಕು' ಎಂಬ ಮಾತು ನಂದಳಿಕೆಯ ಮುಂದಿನ ಎಲ್ಲ ಸಾಹಿತ್ಯಿಕ ಸಾಂಸ್ಕೃತಿಕ ಚಟುವಟಿಕೆಗಳಿಗೆ 'ಧ್ಯೇಯವಾಕ್ಯ'ವಾಯಿತು. ಅದರಂತೆ ನಡೆದು ಬಂತು.

೧೯೮೨ ಜನವರಿ ೨೪ರಂದು ಮುದ್ದಣನ ವಿಶೇಷ ಅಂಚೆ ಕವರ್ ಉದ್ಘಾಟನೆಗೊಂಡಿತು. ೧೯೯೨ರಲ್ಲಿ ಮುದ್ದಣನ ಏಕಮಾತ್ರ ಪುತ್ರ ಶಿಕ್ಷಕ ಎನ್. ರಾಧಾಕೃಷ್ಣಯ್ಯ ಅವರನ್ನು ಶಿಕ್ಷಕ ದಿನಾಚರಣೆಯ ಅಂಗವಾಗಿ ಭದ್ರಾವತಿಯ ಅವರ ಮನೆಯಲ್ಲಿ ಸನ್ಮಾನಿಸಲಾಯಿತು.

ಕವಿ ಮುದ್ದಣನ ಹೆಸರಿನಲ್ಲಿ ಪುಸ್ತಕ ಪ್ರಕಟನೆ, ಯಕ್ಷಗಾನ ಪ್ರಸಂಗಗಳ ಪುಸ್ತಕಗಳ ಮುದ್ರಣ, ಯಕ್ಷಗಾನ ಹಾಡುಗಳ ಧ್ವನಿ ಮುದ್ರಣ, ಮುದ್ದಣ ಕೃತಿಗಳನ್ನು ಪ್ರಧಾನವಾಗಿರಿಸಿಕೊಂಡ ಕನ್ನಡ ಸಾಹಿತ್ಯ ಸಮ್ಮೇಳನ, ಪ್ರಥಮ ಬಾರಿಗೆ ಡಾ. ವಸಂತ ಭಾರದ್ವಾಜರಿಂದ ಯಕ್ಷಗಾನ ಅಷ್ಟಾವಧಾನ, ಮೊತ್ತ ಮೊದಲ ಬಾರಿಗೆ ಬೆಳ್ಮಣ್ ರಘುಪತಿ

ಭಟ್ ಅವರಿಂದ ಗಂಜೀಫಾ ಕಲಾ ಪ್ರದರ್ಶನ, ಚಂದ್ರಶೇಖರ ಕೆದಿಲಾಯ ಹಾಗೂ ಶತವಧಾನಿ ಗಣೇಶ ಅವರಿಂದ ಕಾವ್ಯ ವಾಚನ ಪ್ರವಚನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಂತರದ ವರ್ಷಗಳಲ್ಲಿ ನಡೆದುವು.

೧೯೯೫ರಿಂದ ಮೊದಲ್ಗೊಂಡು ಮುದ್ದಣ ಸಂಸ್ಮರಣೆ ಮತ್ತು ಮುದ್ದಣ ಪುರಸ್ಕಾರ, ಕವಿ ಮುದ್ದಣ ಸ್ಮಾರಕ ಮಿತ್ರಮಂಡಳಿಯ ರಜತ ಸಂಭ್ರಮದ ಪ್ರಯುಕ್ತ ಇಪ್ಪತ್ತೈದು ಸಾಧಕರಿಗೆ ಸಮ್ಮಾನ ಹಾಗೂ ಸಾಧನೆಗಳನ್ನು ಪರಿಚಯಿಸುವ 'ನಂದಳಿಕೆಯ ನಂದನ' ಗ್ರಂಥ ಲೋಕಾರ್ಪಣಗಳನ್ನು ನೆರವೇರಿಸಲಾಯಿತು.

ನಂದಳಿಕೆ ಸುದೀರ್ಘ ಇತಿಹಾಸವಿರುವ ಊರು. ಸಂಸ್ಕೃತಿ–ಧರ್ಮಗಳ ನೆಲೆವೀಡು. ಮಣ್ಣಿನ ಸತ್ಯಗಳು ದೇವರಾಗಿ, ನಾಗನಾಗಿ, ಬೆರ್ಮೆರಾಗಿ, ಸಿರಿಗಳಾಗಿ, ದೈವಗಳಾಗಿ ಸಂಭವಿಸಿದ ಧರ್ಮದ ನೆಲೆ. ನಂದಳಿಕೆಯ ಮಣ್ಣಿನಲ್ಲಿ ಹುಟ್ಟಿ ಕೇವಲ ಮೂವತ್ತೊಂದು ವರ್ಷ ಬದುಕಿ ಮಹಾಕವಿಯಾಗಿ ಕನ್ನಡ ಸಾರಸ್ವತ ಪ್ರಪಂಚದಲ್ಲಿ ನಕ್ಷತ್ರದಂತೆ ಮಿನುಗುತ್ತಿರುವ ಮಹನೀಯ 'ಕವಿ ಮುದ್ದಣ'. ನವೋದಯ ಕನ್ನಡದ ಮುಂಗೋಳಿ ಎಂದೇ ಖ್ಯಾತರಾದ ಈ ಪುಣ್ಯಾತ್ಮನ ಹೆಸರನ್ನು ಬಳಸಿಕೊಂಡು ಕುಗ್ರಾಮವಾಗಿದ್ದ ನಂದಳಿಕೆಯನ್ನು ಅಭಿವೃದ್ಧಿಪಡಿಸುವ ದೂರದ ಆಲೋಚನೆ ೧೯೭೯ರಲ್ಲಿ ಮುದ್ದಣ ಸ್ಮಾರಕ ಮಿತ್ರ ಮಂಡಳಿ ಸ್ಥಾಪನೆಯಾದಾಗಲೇ ಇತ್ತು. ಕನಸುಗಳು ಕನಸಾಗಿ ಉಳಿಯಲಿಲ್ಲ. ನೆನಸಾಯಿತು. ಮುದ್ದಣ ಮಂದಿರವೂ ತಲೆ ಎತ್ತಿತು.

ಮುದ್ದಣನ ಕಾವ್ಯಗಳಲ್ಲಿ ಬರುವ ಪ್ರಕೃತಿ ವಿವರಣೆ, ಮರ, ಗಿಡ, ಬಳ್ಳಿಗಳ ಹೆಸರನ್ನು ಸಂಗ್ರಹಿಸಿ, ಮುದ್ದಣ ವನವನ್ನು ನಿರ್ಮಿಸುವ ಉದ್ದೇಶವೂ ಸಾಕಾರಗೊಳ್ಳುವ ಅವಕಾಶವಾಯಿತು. ಸರಕಾರ ಭೂಮಿಯನ್ನು ಮಂಜೂರು ಮಾಡಿತು. ಮರ ಬೆಳೆಯುವ ಕಾರ್ಯವೂ ಆರಂಭವಾಯಿತು. ಗ್ರಾಮಾಂತರ ಪ್ರದೇಶಕ್ಕೆ ಅಗತ್ಯವಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪ್ರಸಿದ್ಧ ಕವಿಯ ಊರು ಎಂಬ ನೆಲೆಯಲ್ಲಿ ರಸ್ತೆ ಸೌಲಭ್ಯ ಮುಂತಾದ ಸೌಲಭ್ಯಗಳೂ ನಂದಳಿಕೆಗೆ ಒದಗಿಬಂತು.

ರಾಜ್ಯದ ಪ್ರಖ್ಯಾತ ಕವಿಗಳು, ಚಿಂತಕರು, ಸಾಹಿತಿಗಳು ನಂದಳಿಕೆಗೆ ಬಂದರು. ಮತ್ತೊಮ್ಮೆ ನಂದಳಿಕೆ ರಾಜ್ಯ ಮಟ್ಟದಲ್ಲಿ ಗುರುತಿಸಲ್ಪಟ್ಟಿತು. ಹತ್ತು ಹಲವು ಅಭಿವೃದ್ಧಿ ಕಾರ್ಯಗಳು ನಡೆದವು. ಒಬ್ಬ ಕವಿಯ ನೆನಪಿನಲ್ಲಿ, ಹೆಸರಿನಲ್ಲಿ ಕವಿಯ ಹುಟ್ಟೂರು ಅಭಿವೃದ್ಧಿಯಾಗುತ್ತದೆ. ಆ ಊರು ಜನಪ್ರಿಯವಾಗುತ್ತದೆ. ಅಂತೆಯೇ ನಂದಳಿಕೆಯು ಮುದ್ದಣನಿಂದ ಮತ್ತೆ ಪ್ರಚಾರಕ್ಕೆ ಬಂತು.

ಬೆರ್ಮೆರ್, ಸಿರಿಗಳು, ದೈವಗಳು ನಂದಳಿಕೆಗೆ ಧಾರ್ಮಿಕ, ಸಾಂಸ್ಕೃತಿಕ ಆಯಾಮವನ್ನು ನೀಡುತ್ತಾ ಸಿರಿಗಳ ತವರೂರು ಎಂಬ ಕೀರ್ತಿಗೆ ಪಾತ್ರವಾಯಿತು. ಅಪೂರ್ವ ನಾಗಶಿಲ್ಪಗಳು ಮತ್ತು ಚಾವಡಿ ಅರಮನೆಯ ಶಿಲ್ಪ ವೈಭವವು ಕಾರಣವಾಗಿ

ಸಂಶೋಧಕರ ಗಮನ ಸೆಳೆದಿದ್ದು ಚರಿತ್ರೆಯ ಪುಟಗಳಲ್ಲಿ ದಾಖಲಾಗಿತ್ತು. ಆ ವಿವರಗಳ ಮರು ಓದು ನಿರೂಪಣೆಗಳು ನಡೆಯಲಾರಂಭವಾಯಿತು. ಧಾರ್ಮಿಕ, ಸಾಂಸ್ಕೃತಿಕ ಆಯಾಮವು ಒಂದು ಇತಿಹಾಸವಾಗಿ ದಾಖಲಾದುದನ್ನು ಗಮನಿಸಬಹುದು. ಸೋದೆ ಮಠಾಧೀಶ ಶ್ರೀ ವಾದಿರಾಜರು ಕಾರಣವಾಗಿ ಮಹಾಲಿಂಗೇಶ್ವರ ದೇವರ ದೇವಾಲಯ ಸ್ಥಾಪನೆಯಾಯಿತು. ಸಿರಿಗಳು ಮತ್ತು ಬೆರ್ಮರ್ ಗರ್ಭಗುಡಿಯ ಒಳಗೆ ಸ್ಥಾನ ಪಡೆದ ಸತ್ಯ ಜಾಹೀರಾದಾಗ ಶಿಷ್ಟ, ಜಾನಪದ ಸಂಸ್ಕೃತಿಯ ಸುಗಮ ಸಮಾಗಮಕ್ಕೆ ಬಲು ಪ್ರಬಲವಾದ ಉದಾಹರಣೆ ನಂದಳಿಕೆಯಿಂದಲೇ ಕೊಡಬಹುದಾದಷ್ಟು ವಿಪುಲ ಮಾಹಿತಿಗಳನ್ನು, ಆಧಾರಗಳನ್ನು ಸಂದಳಿಕೆ ಹೊಂದಿದೆ.

ಕವಿ ಮುದ್ದಣನ ಕೃತಿ 'ರಾಮಾಶ್ವಮೇಧ'ವು ಅಮೇರಿಕದಲ್ಲಿ ಅಕ್ಕ ಸಮ್ಮೇಳನದಲ್ಲಿ ಬಿಡುಗಡೆಗೊಂಡಿತು. 'ಕುಮಾರವಿಜಯ' ಮತ್ತು 'ರತ್ನಾವತೀ ಕಲ್ಯಾಣ' ಪ್ರಸಂಗಗಳ ಅರ್ಥಸಹಿತ ಹೊತ್ತಗೆಗಳು ಬಿಡುಗಡೆಗೊಂಡವು. 'ಕುಮಾರವಿಜಯ' ಯಕ್ಷಗಾನ ಪ್ರಸಂಗದ ಹಾಡುಗಳನ್ನು ತೆಂಕುತಿಟ್ಟಿನ ಪ್ರಸಿದ್ಧ ಭಾಗವತ ಪರಂಪರೆಯ ಕೊಂಡಿಯಾದ ಬಲಿಪ ನಾರಾಯಣ ಭಾಗವತರ ನೇತೃತ್ವದ ತಂಡದ ಮೂಲಕ ದಾಖಲಿಸಿಕೊಳ್ಳಲಾಗಿದೆ. 'ರತ್ನಾವತಿ ಕಲ್ಯಾಣ' ಪ್ರಸಂಗದ ಹಾಡುಗಳನ್ನು ಬಡಗುತಿಟ್ಟಿನ ವಿದ್ವಾನ್ ಗಣಪತಿ ಭಟ್ಟ ಹಾಗೂ ಹೆರಂಜಾಲು ಗೋಪಾಲ ಅವರ ಹಾಡುಗಾರಿಕೆಯಲ್ಲಿ ಧ್ವನಿ ಮುದ್ರಿಸಿಕೊಳ್ಳಲಾಗಿದೆ.

೨೦೧೭ರ ನವೆಂಬರ್ ಒಂದರಂದು ಪ್ರಧಾನಿ ನರೇಂದ್ರ ಮೋದಿಯವರು ಮುದ್ದಣನ ವಿಶೇಷ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದರು.

ಕವಿ ಮುದ್ದಣ ಸ್ಮಾರಕ ಮಿತ್ರ ಮಂಡಳಿ ಮುದ್ದಣ ಸಾಹಿತ್ಯದ ಓದು ಪ್ರಚಾರ, ಪ್ರಸಾರದಲ್ಲಿಯೂ ತನ್ನನ್ನು ತೊಡಗಿಸಿಕೊಂಡಿದೆ. ೧೯೭೫ರಲ್ಲಿ ಮುದ್ದಣ ಪ್ರಕಾಶನದ ಮೂಲಕ ಮುದ್ದಣ ಕೃತಿ ವಿಮರ್ಶೆಯ ಗ್ರಂಥಗಳನ್ನು ಪ್ರಕಟಿಸುತ್ತ ಬಂದಿದೆ. ಈಗ ಮುದ್ದಣ ಶತಮಾನೋತ್ತರ ಸುವರ್ಣ ವರ್ಷದಲ್ಲಿ 'ನಂದಳಿಕೆಯ ನಂದಾದೀಪ' ಗ್ರಂಥವನ್ನು ಪ್ರಕಟಿಸುತ್ತಿದ್ದೇವೆ. ಕನ್ನಡದ ಹಿರಿಯ ವಿದ್ವಾಂಸರು ಬರೆದ ವಿಮರ್ಶಾ ಲೇಖನಗಳ ಸಂಪುಟವನ್ನು ವಿದ್ವಾಂಸರಾದ ಡಾ. ಜಿ. ಎಂ. ಹೆಗಡೆ ಸಂಪಾದಿಸಿಕೊಟ್ಟಿದ್ದಾರೆ. ಮುದ್ದಣನ ಮೇಲೆ ಲೇಖನ ಬರೆದುಕೊಟ್ಟ ಲೇಖಕ ಲೋಕಕ್ಕೂ ನಮನಗಳು. ಈ ಗ್ರಂಥವನ್ನು ಪ್ರಕಟಿಸಲು ಮುಂದೆ ಬಂದ ಮಂಡ್ಯದ ಸೌಜನ್ಯ ಪ್ರಕಾಶನಕ್ಕೂ ಕೃತಜ್ಞತೆಗಳು. ಕವಿ ಮುದ್ದಣ ಸ್ಮಾರಕ ಮಿತ್ರ ಮಂಡಳಿಯ ಸಾಂಘಿಕ ಪ್ರಯತ್ನದಿಂದ ನಂದಳಿಕೆಯಲ್ಲಿ ಚಿನ್ನದ ಹರಿದಾಣದಲ್ಲಿ ನೆನಪಿನ ಆರತಿಯನ್ನು ಬೆಳಗಲು ಸಾಧ್ಯವಾಗಿದೆ. ಅದಕ್ಕಾಗಿ ನನ್ನ ಜೊತೆಗೆ ಶ್ರಮಿಸಿದ ಎಲ್ಲರಿಗೂ ಶಿರಬಾಗಿ ವಂದಿಸುತ್ತೇನೆ.

**– ನಂದಳಿಕೆ ಬಾಲಚಂದ್ರರಾಯರು**

# ನಂದಳಿಕೆಯ ನಂದಾದೀಪ

ನಮ್ಮ ದೇಶದಲ್ಲಿ ಲಕ್ಷಾಂತರ ಹಳ್ಳಿಗಳಿವೆ. ಅವನ್ನು ಗುರುತಿಸುವ ಸಲುವಾಗಿ ಪ್ರತಿಯೊಂದಕ್ಕೂ ಒಂದೊಂದು ಹೆಸರಿರುವುದನ್ನು ಬಿಟ್ಟರೆ, ಮಿಕ್ಕೆಲ್ಲ ದೃಷ್ಟಿಗಳಿಂದಲೂ ಬಹುಪಾಲು ಹಳ್ಳಿಗಳು ಅನಾಮಧೇಯವಾಗಿವೆ. ಕೆಲವಕ್ಕೆ ಮಾತ್ರ ಅವುಗಳದೇ ಆದ ವ್ಯಕ್ತಿತ್ವವುಂಟು; ವೈಶಿಷ್ಟ್ಯವುಂಟು. ಇಂಥ ಹಳ್ಳಿಗಳಲ್ಲಿ ಒಂದು ದಕ್ಷಿಣ ಕನ್ನಡ ಜಿಲ್ಲೆಯ ನಂದಳಿಕೆ. ಕಾರ್ಕಳ ತಾಲ್ಲೂಕಿನ ಈ ಹಳ್ಳಿ ಸರ್ವತೋಮುಖವಾಗಿ ಅಭಿವೃದ್ಧಿಗೊಳ್ಳುತ್ತಿರುವ ಒಂದು ಹಳ್ಳಿ. ಮಂಗಳೂರಿನಿಂದ ಇದು ಐವತ್ತೆರಡು ಕಿ. ಮೀ. ದೂರದಲ್ಲಿದೆ. ೩೬೭೫ ಎಕರೆ ವಿಸ್ತೀರ್ಣದ ಈ ಹಳ್ಳಿಯ ಜನಸಂಖ್ಯೆ ೨೬೮೦. ಹಳ್ಳಿಗೆ ಪ್ರಸಿದ್ಧಿ ಬಂದಿರುವುದು ಕವಿ ಮುದ್ದಣನಿಂದ. ಲಕ್ಷ್ಮೀನಾರಾಯಣ ನಿಜನಾಮದ ಈ ಕವಿ (ಜನನ : ಜನವರಿ ೨೪, ೧೮೭೦; ಮರಣ : ೧೫, ಫೆಬ್ರವರಿ ೧೯೦೧) ತನ್ನ ಸಾಹಿತ್ಯ ಸೃಷ್ಟಿಯಿಂದ, ಅದಕ್ಕಿಂತ ಮಿಗಿಲಾಗಿ ಸಾಹಿತ್ಯೇತರ ಕಾರಣಗಳಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾನೆ.

ಕವಿಯಿಂದ ಒಂದೂರಿಗೆ ಏನಾಗುತ್ತದೆ ? ಅವನು ನಮ್ಮೂರಿನವನು ಎಂಬ ಅಭಿಮಾನವಿರುತ್ತದೆ. ಅನಕ್ಷರಸ್ಥರೇ ಬಹುವಾಗಿರುವ ಈ ದೇಶದಲ್ಲಿ ಅಭಿಮಾನಕ್ಕಿಂತ ಲೌಕಿಕ ಲಾಭಗಳು ಮುಖ್ಯವಾದವೆಂದು ಜನ ಭಾವಿಸುವುದು ಸಹಜ ಸ್ವಾಭಾವಿಕ. ಇಂಥ ಕವಿ ನಮ್ಮೂರಿನವನು ಎಂದು ಮೇಲಾಟ ನಡೆಸುವುದರ ಹಿಂದೆ ಈ ಬಗೆಯ ಮನೋಭಾವವಿರುತ್ತದೆ. ಸಂಶೋಧನೆಯ ದೃಷ್ಟಿ ಬೇರೆ; ಲೌಕಿಕ ಪ್ರಯೋಜನ ಬೇರೆ. ಲಕ್ಷ್ಮೀಶ ಸರ್ವಜ್ಞರಂಥ ಕವಿಗಳ ವಿಚಾರದಲ್ಲಿ ಚರ್ಚೆಗಳು ನಡೆದಿವೆ; ನಡೆಯುತ್ತಿವೆ. ಅದರಲ್ಲೂ ಶತಮಾನೋತ್ಸವವೇ ಮೊದಲಾದ ಸ್ಮರಣೆಯ ಸಂದರ್ಭಗಳಲ್ಲಿ ಈ ರೀತಿಯ ಚರ್ಚೆಗಳು ರಭಸಗೊಳ್ಳುತ್ತವೆ. ಕವಿಯ ಹೆಸರಿನಲ್ಲಿ ದೊರೆಯಬಹುದಾದ ಅನುಕೂಲಗಳು ಏನಾದರೂ ಇದ್ದರೆ ಯಾವ ಊರಿನವರು ಅವನ್ನು ಬಿಟ್ಟುಕೊಡಲು ಇಷ್ಟಪಡುತ್ತಾರೆ ?

ಬೇಂದ್ರೆಯವರು ಒಮ್ಮೆ ಒಂದು ಕಥೆ ಹೇಳಿದ್ದರು : "ಆದಿಕವಿ ಪಂಪನ ಸಾವಿರ ವರ್ಷಗಳ ನೆನಪಿನ ಸಮಾರಂಭ ನಡೆದಾಗ ಅರ್ಧಶತಮಾನದ ಹಿಂದೆ ಲಕ್ಷ್ಮೇಶ್ವರ ಊರಿನ ಸುತ್ತಮುತ್ತಲಿನ ಜನರೆಲ್ಲ ಜಮಾಯಿಸಿದ್ದರು. ಪಂಪ ಸ್ಮರಣೆ

ಸತತವಾಗಿ ನಡೆಯಿತು. ಸಮಾರಂಭ ಮುಗಿದರೂ ನಾಲ್ಕಾರು ಜನ ಹಳ್ಳಿಗರು ಕುಳಿತಲ್ಲಿಂದ ಏಳಲೇ ಇಲ್ಲ. "ಯಾಕೆ ಹೀಗೆ?" ಎಂದು ಯಾರೋ ಕೇಳಿದರು. ಅದಕ್ಕೆ ಆ ಹಳ್ಳಿಗರು ಹೇಳಿದರಂತೆ – "ಅಷ್ಟೊಂದು ಜನ ಪಂಪು, ಪಂಪು ಎಂದು ಮಾತಾಡಿದ್ರಲ್ಲ ! ಎಲ್ಲೈತಿ ಪಂಪು ಎಂದು ನೋಡಾಕೆ ಕುಂತೀವಿ!" ಆ ರೈತರಿಗೆ ಪಂಪನ ಪರಮ ಪ್ರಯೋಜನ ಅಷ್ಟೇ. ನೀರಿಗಾಗಿ ಕಷ್ಟಪಡುತ್ತಿದ್ದ ಆ ಊರಿಗೆ ಒಂದು ಪಂಪು ಹಾಕಿಸಿದ್ದಿದ್ದರೆ ಪಂಪ ಅಮರನಾಗುತ್ತಿದ್ದ !

ನಮ್ಮ ಕಾಲದಲ್ಲೇ ಕುವೆಂಪು ಅವರ ವಿಚಾರ ನೋಡಿ. ಅವರ ಗೌರವಾರ್ಥ ಮಾಡಲುದ್ದೇಶಿಸಿದ ಕೆಲಸಗಳು, ಅವರ ತಾಯಿಯ ಹಳ್ಳಿಯಲ್ಲಿ ನಡೆಯಬೇಕೆ ತಂದೆಯ ಊರಿನಲ್ಲಿ ನಡೆಯಬೇಕೆ ಎಂದು ವಾದ ಮಾಡುವವರಿದ್ದಾರೆ. ಕಾರಂತರ ವಿಷಯದಲ್ಲೂ ಹಾಗಾಗಬಹುದು. ಅವರು ಕೋಟ ಗ್ರಾಮದವರೆ ? ಪುತ್ತೂರಿನವರೆ ? ಸಾಲಿಗ್ರಾಮದವರೆ ಎಂದು ಯಾರಾದರೂ ನಾಳೆ ಚರ್ಚೆ ಮಾಡಬಹುದು. ಈ ಮಹನೀಯರ ಹೆಸರಿನಿಂದ ಲಾಭ ಪಡೆದುಕೊಳ್ಳಲು ಎಲ್ಲರೂ ಕಾತರರು ! ಮುದ್ದಣ ನಂದಳಿಕೆಯವನೇ ಆಗಿರುವುದು ಆ ಊರಿನ ಅದೃಷ್ಟವೆಂದೇ ಹೇಳಬೇಕು. ಲೌಕಿಕವಾಗಿ ಅದೇನೂ ಕರುಬುವಂಥ ಅದೃಷ್ಟವಲ್ಲ; ಆ ಮಾತು ಬೇರೆ.

ಮುದ್ದಣ ಬದುಕಿದ್ದು ಕೇವಲ ಮೂವತ್ತೊಂದು ವರ್ಷ. ಅದು ಬಾಳಲ್ಲ, ಬೆಂಕಿ. ಅವನು ಬಡತನದಿಂದ ಬಳಲಿದ; ಪ್ರೋತ್ಸಾಹವಿಲ್ಲದೆ ನರಳಿದ. ಹೆಣ್ಣು ಹೆಸರಿನಲ್ಲಿ ಹಸ್ತಪ್ರತಿ ಸಿದ್ಧಪಡಿಸಿದ. ಅನಾರೋಗ್ಯದ ಯಾತನೆಗೆ ಒಳಗಾದ. ಕನ್ನಡದಲ್ಲಿ ಕವಿಯಾಗಿ ಹುಟ್ಟಬಾರದು ಎಂಬುದಕ್ಕೆ ಒಂದು ಮಾದರಿಯಾದ. ಇದೆಲ್ಲದರಿಂದ ಒಟ್ಟಾಗಿ ಕವಿಯ ಬದುಕು ಒಂದು ಶಾಪವೆನ್ನಿಸಿಬಿಟ್ಟಿತು. ಮುದ್ದಣನ ನೆನಪಿನ ಕೆಲಸಗಳಲ್ಲಿಯೂ ಈ ಶಾಪದ ಬಿಡುಗಡೆಯಾಗಲಿಲ್ಲ. ನಂದಳಿಕೆಯಲ್ಲಿ ನಡೆದ ಚಟುವಟಿಕೆಗಳಿಗೂ ಈ ಶಾಪ ಅಂಟಿತ್ತು. ಆದರೆ ಮನುಷ್ಯನ ದೃಢವಾದ ನಿರ್ಧಾರದ ಮುಂದೆ ಶಾಪಗಳು ಕರಗಿ ಹೋಗುತ್ತವೆ. ಅಸಹಾಯಕ ಪರಿಸ್ಥಿತಿಯಲ್ಲಿಯೂ ಮುದ್ದಣನ ಪ್ರತಿಭೆಯೂ ಅರಳಿತು. ನಿರಾಶಾದಾಯಕ ಸಂದರ್ಭದಲ್ಲಿಯೂ ಅವನ ನೆನಪಿನ ಕೆಲಸ ರೂಪುಗೊಂಡಿತು. ನಂದಳಿಕೆಯ ತರುಣರ ತಂಡವೊಂದು ಮಾಡಿರುವ ಕೆಲಸ ನಮ್ಮ ಹಳ್ಳಿಗಳಿಗೆಲ್ಲ ಮಾರ್ಗದರ್ಶಕವಾಗಿದೆಯೆಂದೇ ಭಾವಿಸಬಹುದು.

ಕವಿ ಮುದ್ದಣನ ಬಗೆಗೆ ನಂದಳಿಕೆಯ ಜನರು ಅಭಿಮಾನ ಪಡುವಂಥದು ತೀರ ಸ್ವಾಭಾವಿಕ. ಅದರ ಫಲವಾಗಿ ಒಂದು ಸ್ಮಾರಕ ಭವನವನ್ನು ಕಟ್ಟುವ ತೀರ್ಮಾನವನ್ನು ಅವರು ತೆಗೆದುಕೊಂಡರು. ಯಾವ ಸ್ಮಾರಕ ಭವನ ಇಲ್ಲದಿದ್ದರೂ ಮುದ್ದಣ

ಬದುಕುತ್ತಾನೆಂದು ನಿರ್ವಿವಾದವಾಗಿದ್ದರೂ ಊರಿನವರು ತಮ್ಮ ತೃಪ್ತಿ ಸಮಾಧಾನಗಳಿಗಾಗಿ ಆ ಕೆಲಸ ಮಾಡಲು ತೊಡಗಿದರು. ಕವಿಯ ಹೆಸರಿನಲ್ಲಿ ನೆನಪಿನಲ್ಲಿ ಊರಿಗೆ ಅನುಕೂಲವಾದುದೇನಾದರೂ ಕೆಲಸ ಮಾಡಲು ಆಶಿಸಿದರು. ಕವಿಯ ಶತಮಾನೋತ್ಸವದ ಯೋಜನೆಗಳು ಹುಟ್ಟದಿರುವಷ್ಟು ಮೊದಲೇ (೧೯೫೮) ಊರಿನ ಹಿರಿಯರು ಕೆಲವರು ಸೇರಿಕೊಂಡು 'ಕವಿ ಮುದ್ದಣ ಸ್ಮಾರಕ ರೈತ ಸಂಘ' ಎಂಬ ಹೆಸರಿನಲ್ಲಿ ನೋಂದಾಯಿತ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಆ ಸಂಸ್ಥೆಯ ಕಾರ್ಯ ಚಟುವಟಿಕೆಗಳಲ್ಲಿ ಮುದ್ದಣ ಸ್ಮಾರಕ ಭವನ ನಿರ್ಮಾಣವೂ ಒಂದು. ಇದಕ್ಕಾಗಿ ಶ್ರೀಮತಿ ಚಾವಡಿ ಸೀತಮ್ಮ ಹೆಗ್ಗಡತಿ ಎನ್ನುವವರು ಸ್ವಲ್ಪ ಜಮೀನನ್ನು ಉದಾರವಾಗಿ ಕೊಟ್ಟರು. ಟಿ.ಎ.ಪೈ ಅವರು ಅಡಿಗಲ್ಲನ್ನಿಟ್ಟರು. ನಮ್ಮ ನಾಡಿನ ಎಷ್ಟೋ ಇಂಥ ಸ್ಮಾರಕಗಳಂತೆ ಇದೂ ನೆಲಬಿಟ್ಟು ಮೇಲೇಳಲಿಲ್ಲ! ಎರಡು ದಶಕಗಳ ಮೇಲೆ ಪೈ ಅವರು ಇನ್ನೊಮ್ಮೆ ಆ ಊರಿಗೆ ಬಂದಿದ್ದಾಗ, ತಾವಿಟ್ಟ ಅಡಿಗಲ್ಲಿನ ಅವಸ್ಥೆಯನ್ನು ಕಂಡು ಊರವರನ್ನು ಎಚ್ಚರಿಸಿದರು. ಕೈಲಾದ ನೆರವಿನ ಭರವಸೆ ಕೊಟ್ಟರು.

ಆ ಹೊತ್ತಿಗಾಗಲೆ 'ಕವಿ ಮುದ್ದಣ ಸ್ಮಾರಕ ರೈತ ಸಂಘ' ಕಣ್ಮರೆಯಾಗಿ ಹೋಗಿತ್ತು. ಬೆಕ್ಕಿನ ಕೊರಳಿಗೆ ಘಂಟೆ ಕಟ್ಟುವವರು ಬೇಕಾಗಿದ್ದರು. ಊರಿನ ತರುಣರು ಕೆಲವರು ಕೂಡಿಕೊಂಡು 'ಕವಿ ಮುದ್ದಣ ಸ್ಮಾರಕ ಮಿತ್ರ ಮಂಡಳಿ' ಎಂಬ ಹೆಸರಿನ ಸಂಘವೊಂದನ್ನು ಸ್ಥಾಪಿಸಿ ನೋಂದಾಯಿಸಿದರು. ತಮ್ಮ ಗ್ರಾಮದ ಅಭಿವೃದ್ಧಿ ಅವರೆಲ್ಲರ ಆಶಯವಾಗಿತ್ತು. ಅದಕ್ಕೆ ಕವಿ ಮುದ್ದಣನ ಹೆಸರು ನೆವವಾಗಿತ್ತು. ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿಗಳಲ್ಲಿ ಆಸಕ್ತರಾಗಿದ್ದ ನಂದಳಿಕೆ ಬಾಲಚಂದ್ರ ರಾವ್ ಎಂಬ ಉತ್ಸಾಹೀ ತರುಣರೊಬ್ಬರು ಸಂಘದ ನೇತೃತ್ವ ವಹಿಸಿದ್ದರು, ಗೌರವಾಧ್ಯಕ್ಷರಾದರು. ಅವರು ಎಷ್ಟು ಕಾರ್ಯ ತತ್ಪರರೆಂದರೆ ಹತ್ತು ವರ್ಷಗಳ ನಂತರ ಈಗಲೂ ಅವರೇ ಸಂಘದ ಗೌರವಾಧ್ಯಕ್ಷರಾಗಿ ಮುಂದುವರಿದಿದ್ದಾರೆ. 'ಮಿತ್ರಮಂಡಳಿ'ಗೆ ಈಗ ಹತ್ತು ವರ್ಷ ತುಂಬಿದೆ. ಈ ಒಂದು ದಶಕದ ಅವಧಿಯಲ್ಲಿ ಸಂಘ ಮಾಡಿರುವ ಕೆಲಸ ವಿಶೇಷ ಉಲ್ಲೇಖಕ್ಕೆ ಅಭಿನಂದನೆಗಳಿಗೆ ಅರ್ಹವಾಗಿದೆ. ನಮ್ಮ ಹಳ್ಳಿಗಳ ತರುಣರು ನಂದಳಿಕೆಯ ಆದರ್ಶವನ್ನು ಪಾಲಿಸಿದ್ದೇ ಆದರೆ ದೇಶದ ಮುಖವೇ ಬದಲಾಗಿ ಹೋಗುತ್ತದೆ. ಉತ್ಸಾಹ, ಶ್ರಮ ಸಂಘಟನೆ, ದುಡಿಮೆ ಇವೆಲ್ಲವೂ ಕೂಡಿ ನಂದಳಿಕೆಗೆ ಒಂದು ವ್ಯಕ್ತಿತ್ವವನ್ನು ತಂದುಕೊಟ್ಟಿವೆ. ಬಾಲಚಂದ್ರರಾಯರು, ಅವರ ಮಿತ್ರಮಂಡಳಿಯವರು ತಮ್ಮ ಊರನ್ನು ಪ್ರಗತಿ ಪಥದಲ್ಲಿ ನಡೆಸುವುದರಲ್ಲಿ ತಕ್ಕಷ್ಟು ಯಶಸ್ವಿಯಾಗಿದ್ದಾರೆ. ತಮ್ಮ ಸಂಘವನ್ನು ನಂದಾದೀಪವನ್ನಾಗಿಸುತ್ತಿದ್ದಾರೆ.

ಮುದ್ದಣ ಸ್ಮಾರಕ ಭವನದ ನಿರ್ಮಾಣ ಮಿತ್ರಮಂಡಳಿಯ ಆಸೆಯೂ ಆಗಿತ್ತು. ಅಡಿಗಲ್ಲನ್ನಿಟ್ಟು ಎರಡು ದಶಕಗಳೇ ಸರಿದಿದ್ದವು! ಆ ವಿಷಯದಲ್ಲಿ ಅನೇಕರು ಅನೇಕ ಆಶ್ವಾಸನೆಗಳನ್ನೂ ಕೊಟ್ಟಿದ್ದರು. ರಾಜಕೀಯಸ್ಥರ ಹೇಳಿಕೆಗಳು ಎಷ್ಟು ಜೊಳ್ಳು ಎಂಬುದು ದೃಢವಾಗಿ ಹೋಗಿತ್ತು. 'ನಂದಳಿಕೆಯಲ್ಲಿ ಕವಿ ಮುದ್ದಣ ಸ್ಮಾರಕ ರಚನೆಯ ಸರ್ಕಾರಿ ಆಶ್ವಾಸನೆಗಳು ಕನ್ನಡ ಕಾವ್ಯ ಜಗತ್ತಿಗೆ ಈ ಶತಮಾನದಲ್ಲಿ ಒದಗಿ ಬಂದ ಕ್ರೂರ ಅವಮಾನದ ಕೊಡುಗೆ' ಎಂದು ಒಂದು ಪತ್ರಿಕೆ ಬರೆಯಿತು. ಈ ಹಿನ್ನೆಲೆಯಲ್ಲಿ ಮಿತ್ರ ಮಂಡಳಿ ಸ್ಮಾರಕ ಕಾರ್ಯವನ್ನು ಕೈಗೆತ್ತಿಕೊಂಡಿತ್ತು. ಯಾವುದೇ ನಿರಾಶೆಗೂ ಆಸ್ಪದ ಕೊಡದೆ ಮಿತ್ರಮಂಡಳಿಯ ಪದಾಧಿಕಾರಿಗಳು ನಂದಳಿಕೆಯಿಂದ ಬೆಂಗಳೂರು ಮುಂಬಯಿವರೆಗೆ ಕಂಬ ಸುತ್ತಿದ್ದರು; ನೋಡಬೇಕಾದ ಎಲ್ಲರನ್ನೂ ನೋಡಿದರು; ಕಛೇರಿಗಳ ಬಾಗಿಲು ಕಾಯ್ದರು. ಅವರ ಈ ದುಡಿಮೆ ವ್ಯರ್ಥವೆನ್ನಿಸಲಿಲ್ಲ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಒಂದು ಲಕ್ಷ ರೂಪಾಯಿ ನೀಡಿತು; ರಾಜ್ಯದ ಪ್ರವಾಸೋದ್ಯಮ ಇಲಾಖೆ ಒಂದು ಲಕ್ಷ ರೂಪಾಯಿ ಕೊಟ್ಟಿತು; ಜಿಲ್ಲಾಧಿಕಾರಿಯವರು ಹನ್ನೆರಡು ಸಾವಿರ ರೂಪಾಯಿ ನೀಡಿದರು. ಮುಂಬಯಿಯಲ್ಲಿ ಅರ್ಧಲಕ್ಷ ರೂಪಾಯಿ ಸಂಗ್ರಹವಾಯಿತು. ಒಟ್ಟಾರೆ ಹತ್ತಿರ ಹತ್ತಿರ ಮೂರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮುದ್ದಣ ಸ್ಮಾರಕ ಭವನ ಸಿದ್ಧಗೊಂಡಿತು; ೧೯೮೭ರಲ್ಲಿ ಉದ್ಘಾಟಿತವಾಯಿತು.

ಮುದ್ದಣ ಬದುಕಿದ್ದು ಮೂವತ್ತೊಂದು ವರ್ಷ, ಮುದ್ದಣ ಸ್ಮಾರಕ ಭವನದ ಯೋಜನೆ, ನಿರ್ವಹಣೆಗಳ ಅವಧಿಯೂ ಹೆಚ್ಚು ಕಡಿಮೆ ಅಷ್ಟೇ ಕಾಲ! ಒಟ್ಟಿನಲ್ಲಿ ಸಂಬಂಧಿಸಿದ ಎಲ್ಲರಿಗೂ ಸಮಾಧಾನ. ನಂದಳಿಕೆ ಬಾಲಚಂದ್ರರಾವ್ ಹೇಳುತ್ತಾರೆ: "ಈಗ ಮುದ್ದಣ ಸ್ಮಾರಕದ ಬಗ್ಗೆ ಅನೇಕರಿಂದ ಸಲಹೆ ಸೂಚನೆಗಳು ಬರುತ್ತಿವೆ. ಬಾಯುಪಚಾರದ ಹೆಗ್ಗಳಿಕೆ. ಮುಂದೇನು ಎಂಬ ಕುತೂಹಲ ಅನೇಕರಿಗಿದೆ. ಇದೆಲ್ಲದರ ಹಿಂದೆ ಮುದ್ದಣ ಉಂಡ ಹಾಗೆ ನಾನು ಹಾಗೂ ನನ್ನ ಮಿತ್ರರು ಉಂಡ ನೋವು. ಮಾಡಿದ ಸಾಲ, ಕೈಬಿಟ್ಟ ಹಣ. ಅನೇಕ ಸಂದರ್ಭದಲ್ಲಿ ನಮ್ಮ ಹುಚ್ಚನ್ನು ಕಂಡು ಗೇಲಿ ಮಾಡಿದವರ ಸಣ್ಣತನ ಈಗಲೂ ಕಣ್ಣೆದುರಿಗೆ ನಿಲ್ಲುತ್ತಿವೆ. ಆದರೂ ಮುದ್ದಣನಿಗೆ ಇದು ಖುಷಿ ನೀಡಿತು. ನಾವು ನಂದಳಿಕೆಯಲ್ಲಿ ಹುಟ್ಟಿದ್ದು ಸಾರ್ಥಕವಾಯಿತು ಎಂಬ ಧನ್ಯತಾಭಾವದ ಇದಿರು ಇದನ್ನೆಲ್ಲ ನಾನು ಮರೆತಿದ್ದೇನೆ. ಈ ಎಲ್ಲವೂ ಆದದ್ದು ಒಳ್ಳೆಯದಕ್ಕೆ, ಇದು ಕನ್ನಡಿಗರೆಲ್ಲರ ಸಹಾಯದಿಂದ ಆಯಿತು ಎಂದು ವಿನಮ್ರವಾಗಿ ಒಪ್ಪಿಕೊಳ್ಳುತ್ತೇನೆ."

ಮುದ್ದಣ ಸ್ಮಾರಕ ಉದ್ದೇಶದಿಂದ ಸರ್ಕಾರದವರು ನಂದಳಿಕೆಯಲ್ಲಿ ಸುಮಾರು ಹತ್ತು ಎಕರೆ ಭೂಮಿಯನ್ನು ಕಾಯ್ದಿರಿಸಿದರು. ಆ ಜಾಗಕ್ಕೆ ತಂತಿಬೇಲಿ ಹಾಕಿಸಿ,

ಜಲ್ಲೊಂದು ಗೇರುವನ ಸ್ಥಾಪಿಸಲಾಗಿದೆ. ಅಲ್ಲೇ ಎರಡೂವರೆ ಎಕರೆ ಭೂಮಿಯಲ್ಲಿ ಪ್ರಾಥಮಿಕ ಆರೋಗ್ಯ ಘಟಕವೊಂದನ್ನು ನಿರ್ಮಿಸಲಾಗಿದೆ. ಮುದ್ದಣ ಸ್ಮಾರಕ ಭವನದಲ್ಲಿ ಒಂದು ಗ್ರಂಥಾಲಯವೂ ಸಭಾಭವನವೂ ಇವೆ. ಆ ಊರಿನಿಂದ ಬಸ್ಸು ಹತ್ತಲು ನಾಲ್ಕು ಮೈಲಿ ನಡೆಯಬೇಕಾಗಿದ್ದ ದಿನಗಳಿದ್ದವು. ಈಗ ಐದು ಬಸ್ಸುಗಳು ದಿನಕ್ಕೆ ಹದಿನೇಳು ಸಲ ಊರಿನಲ್ಲಿ ಬಂದು ಹೋಗುತ್ತಿವೆ! ಊರಿನ ಕೊರಕಲು ದಾರಿ ಶ್ರಮದಾನದ ಫಲವಾಗಿ ಆಧುನಿಕ ರಸ್ತೆಯಾಗಿದೆ. ವಿದ್ಯುದ್ದೀಪಗಳು, ದೂರವಾಣಿ ಸಂಪರ್ಕ ನಂದಳಿಕೆಯನ್ನು ಆಧುನಿಕವಾಗಿಸಿವೆ. ಈ ಪ್ರತಿಯೊಂದು ಕಾರ್ಯದ ಹಿಂದೆಯೂ ಮಿತ್ರಮಂಡಳಿಯ ಕೈವಾಡ, ಬೆಂಬಲಗಳಿವೆ.

ಮುದ್ದಣನ ಹೆಸರು ಹೊತ್ತ ಮಿತ್ರಮಂಡಳಿ ಸ್ಮಾರಕ ಭವನವನ್ನು ಕಟ್ಟಿ ಮುಗಿಸಿರುವುದು ಮಾತ್ರವಲ್ಲದೆ, ಇನ್ನಿತರ ಎಷ್ಟೋ ಮುದ್ದಣ ಕಾರ್ಯಗಳನ್ನೂ ನಡೆಸುತ್ತಿದೆ. ಅದು ಕವಿಯ ಮಗ ರಾಧಾಕೃಷ್ಣಯ್ಯ ಭದ್ರಾವತಿಯಲ್ಲಿ ವಾಸಿಸುತ್ತಿದ್ದಾಗ ಅಲ್ಲಿಗೇ ಹೋಗಿ ಅವರನ್ನು ಸನ್ಮಾನಿಸಿತು. ಸರ್ಕಾರದಿಂದ ಅವರಿಗೆ ತಿಂಗಳಿಗೆ ಇನ್ನೂರೈವತ್ತು ರೂಪಾಯಿ ಮಾಸಿಕ ನೆರವು ಬರುವಂತೆ ಮಾಡಿತು. ಪ್ರತಿವರ್ಷ ಮುದ್ದಣನ ನೆನಪಿನ ಉತ್ಸವಗಳನ್ನು ಆಚರಿಸುತ್ತಿದೆ. ಮುದ್ದಣನಿಗೆ ಸಂಬಂಧಿಸಿದ ಕೆಲಸ ಕಾರ್ಯಗಳು ಎಲ್ಲಿ ನಡೆದರೂ ಅದಕ್ಕೆ ಮಿತ್ರ ಮಂಡಳಿಯ ಸಹಭಾಗಿತ್ವದ ಬೆಂಬಲ ಉಂಟೇ ಉಂಟು. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಪ್ರಕಟಿಸಿದ ಮುದ್ದಣನ ಸಮಗ್ರ ಸಾಹಿತ್ಯದ ಎರಡು ಸಂಪುಟಗಳನ್ನು ಈ ವರ್ಷದ ಆರಂಭದಲ್ಲಿ ನಂದಳಿಕೆಯಲ್ಲಿಯೇ ಬಿಡುಗಡೆ ಮಾಡಲಾಯಿತು. ಮಿತ್ರ ಮಂಡಳಿ ಉದ್ದೇಶಿಸಿರುವ ಇನ್ನಿತರ ಯೋಜನೆಗಳೂ ಅನೇಕ ಇವೆ. ಅವನ್ನೆಲ್ಲ ಕಾರ್ಯಗತಗೊಳಿಸುವುದು ಮಂಡಳಿಗೆ ಖಂಡಿತವಾಗಿಯೂ ಕಷ್ಟವಾಗಲಾರದು.

ಕನ್ನಡ ಸಾಹಿತ್ಯದ ನವಯುಗದ ಹರಿಕಾರನೆಂದು ಮುದ್ದಣ ಕೀರ್ತಿತನಾಗಿದ್ದಾನೆ. ಅವನ ಹೆಸರನ್ನು ಹೊತ್ತುಕೊಂಡು ಸಾರ್ಥಕವಾದ ಹತ್ತು ವರ್ಷಗಳನ್ನು ಕಳೆದಿರುವ 'ಕವಿ ಮುದ್ದಣ ಸ್ಮಾರಕ ಮಿತ್ರ ಮಂಡಳಿ'ಯಾದರೂ ನಮ್ಮ ನಾಡಿನಲ್ಲಿ ನಿರ್ಮಾಣಗೊಳ್ಳಬೇಕಾಗಿರುವ ಹೊಸ ಸೇವಾ ಸಂಸ್ಕೃತಿಯ ಸಂಕೇತವಾಗಿದೆ. ಆದ್ದರಿಂದಲೇ ಮಂಡಳಿಯ ನೇತಾರರ ಸಾಧನೆಯನ್ನು ನಿರಂಜನ ಸ್ತುತಿಸುತ್ತಾರೆ. "ಮುದ್ದಣ ಕನ್ನಡಕ್ಕೆ ಬಂಗಾರದ ಕಿರೀಟವಿಟ್ಟ ಹಿರಿಯ ಜೀವ. ಅವರ ಹುಟ್ಟೂರು ನಂದಳಿಕೆಯನ್ನು ಬಡತನದಿಂದ ಪಾರುಮಾಡಿ ಹೊಸ ಬೆಳಕಿನ ದೀಪ ಹಚ್ಚಿದವರು ನೀವು ಮತ್ತು ನಿಮ್ಮ ಮಿತ್ರರು. ಕಳೆದ ಹತ್ತು ವರ್ಷ ನಂದಳಿಕೆಯ ಪಾಲಿಗೆ ಹರ್ಷ ತಂದಿತು."

ಈ ವರ್ಷ ನಂದಳಿಕೆಗೇ ಏಕೆ? ಹತ್ತು ವರ್ಷಕ್ಕೇ ಏಕೆ? ಅದು ಕಾಲ ದೇಶಗಳನ್ನು ದಾಟಬೇಕು. ದಾಟಬೇಕಾದರೆ ಮಿತ್ರ ಮಂಡಳಿಯಂಥ ಸಂಸ್ಥೆಗಳು ಬೇಕು. ಊರೂರುಗಳಲ್ಲಿ ಮುಂಗೋಳಿಗಳು ಕೂಗಬೇಕು. ನಂದಳಿಕೆಯ ನಂದಾದೀಪ ನಾಡನ್ನೆಲ್ಲ ಬೆಳಗುವಂತಾಗಲಿ.

**– ಡಾ. ಹಾ. ಮಾ. ನಾಯಕ**

# ಪರಿವಿಡಿ

# ಮುದ್ದಣ ಕವಿಯ ಶ್ರೀರಾಮಾಶ್ವಮೇಧ

## ಮಾಸ್ತಿ ವೆಂಕಟೇಶ ಅಯ್ಯಂಗಾರ್

ಮುದ್ದಣ ಕವಿಯ ಕಾವ್ಯಗಳಲ್ಲಿ ಎಲ್ಲರಿಗೂ ಮೆಚ್ಚಿಗೆಯಾಗುವ ಕಾವ್ಯವೆಂದರೆ 'ಶ್ರೀರಾಮಾಶ್ವಮೇಧ' ಕಾವ್ಯವೆಂದು ಧಾರಾಳವಾಗಿ ಹೇಳಬಹುದು. ಇದಕ್ಕೆ ಒಂದು ಕಾರಣ ಅದು ಗದ್ಯ ರೂಪದಲ್ಲಿರುವುದು; ಗದ್ಯವಾದರೂ ಸತ್ವವಿಲ್ಲದ ಶೈಲಿಗೆ ಬೀಳದೆ ಭಾವಗರ್ಭಿತವಾದ ಸುಂದರವಾದ ಮಾರ್ಗದಲ್ಲಿ ರಚಿತವಾಗಿರುವುದು. ಈ ಕಾರಣದಿಂದ ಪಾಮರರಿಗೆ ರಂಜಕವಾಗಿರುವ ಈ ಕಾವ್ಯ ಹಳೆಗನ್ನಡದಲ್ಲಿ ರಚಿತವಾಗಿರುವುದರಿಂದ ಪಂಡಿತರಿಗೂ ಮೆಚ್ಚಾಗಿದೆ. ಇವೆಲ್ಲಕ್ಕಿಂತ ಮುಖ್ಯವಾದ ಕಾರಣ, ಕತೆಯನ್ನು ಹೇಳುವುದರಲ್ಲಿಯೂ ಪ್ರಕೃತಿಯ ಸೌಂದರ್ಯವನ್ನು ವರ್ಣಿಸುವುದರಲ್ಲಿಯೂ ಜೀವನದ ತತ್ತ್ವವನ್ನು ವಿಮರ್ಶಿಸುವುದರಲ್ಲಿಯೂ ಪಾಠಕರ ಹೃದಯದಲ್ಲಿ ವಿವಿಧ ಪರಿಣಾಮಗಳನ್ನು ಉಂಟುಮಾಡುವುದರಲ್ಲಿಯೂ ಈ ಕವಿಗೆ ಇರುವ ಅಸದೃಶವಾದ ಶಕ್ತಿ ಇಲ್ಲಿ ಪೂರ್ಣ ಪರಿಪಾಕವನ್ನು ಹೊಂದಿದೆಯೆನ್ನುವುದು. ಈ ಎಲ್ಲ ಕಾರಣಗಳಿಂದ ಈ ಕಾವ್ಯ ಬಹುವಿಧದ ಪಾಠಕರ ವರ್ಗಕ್ಕೆ ಮೆಚ್ಚಾಗಿ ಈತನ ಇತರ ಕಾವ್ಯಗಳಿಗಿಂತಲೂ, ಇಷ್ಟೇ ಅಲ್ಲದೆ ಕನ್ನಡ ಸಾಹಿತ್ಯದ ಒಂದೆರಡು ಕಾವ್ಯಗಳನ್ನು ಹೊರತು ಇತರ ಎಲ್ಲ ಕಾವ್ಯಗಳಿಗಿಂತಲೂ, ಹೆಚ್ಚಾಗಿ ಪಾಠಕರ ಆದರಣೆಯನ್ನು ಸಂಪಾದಿಸಿದೆ.

ಗ್ರಂಥದ ಆರಂಭದ ದೃಶ್ಯದಲ್ಲಿಯೇ ಮುದ್ದಣನಿಗೆ ಕತೆ ಹೇಳುವುದರಲ್ಲಿ ಇರುವ ಬಹು ವಿಧದ ನೈಪುಣ್ಯವು ಚೆನ್ನಾಗಿ ವ್ಯಕ್ತವಾಗುವುದು. ಈ ನೈಪುಣ್ಯವನ್ನು ವ್ಯಕ್ತಪಡಿಸುವುದಲ್ಲದೆ ಈ ದೃಶ್ಯ ವಿಷಯವನ್ನು ಸುಂದರವಾಗಿ ಆರಂಭಿಸುತ್ತದೆ. ಅದನ್ನು ಇಲ್ಲಿ ಸೂಕ್ಷ್ಮವಾಗಿ ಕೊಡಬಹುದು. ಮಳೆಗಾಲ ಬಂತು. ಕಾಲಪುರುಷನು ಗುಣ ವಿಹೀನನಾಗಿ ನಿಸ್ತೇಜನಾಗಿ ಜಡನಾಗಿರುವನು. ನವಿಲು ಸಂತೋಷದಿಂದ ಮೈಯುಬ್ಬಿ ಕುಣಿಯುತ್ತಿದೆ. ಚಾತಕವು ಬಾಯ್ಬಿಟ್ಟು ಮಳೆಯ ಹನಿಗೆ ಕಾದಿದೆ. ಕೆಂಪೇರಿದ ಕಣ್ಣಿನ ಕೋಗಿಲೆ ಮಾವಿನಮರದ ಸೆಳೆಗೊಂಬಿನಲ್ಲಿ ಮೂಗನಂತಿದೆ. ಈ ರೀತಿಯಲ್ಲಿ ಸಂಪ್ರಾಪ್ತವಾದ ವರ್ಷಾ ಕಾಲದಲ್ಲಿ ಒಂದು ದಿವಸ

ಬೈಗುಂಬೊತ್ತಿನೊಳೆಂದಿನಂತಿರೋಲಗಂ ಪರಿಯೆ ಕಬ್ಬಿಗರ ಬಲ್ಲಹಂ ಮುದ್ದಣನರಮನೆಯಿಂ ಪೊಱಮಟ್ಟು ನೆರೆವೀದಿವಿಡಿದು ಪೊರೆವೀಡಿಂಗೈತರ್ಪುದುಮಾತನ ಮಡದಿ ಮನೋರಮೆ ದೂರದೆ ಕಂಡೆಟ್ಟು ಇದಿರ್ವಂದು

ಕಾಲ್ಗೆ ನೀರಂ ನೀಡಿ ಮತ್ತಂ ಕೈವಿಡಿದೊಳಚೌಕಿಗುಯ್ದು ಮಣೆಯಿತ್ತು ಕುಳ್ಳಿರಿಸಿ ಒಡನೆಯೆ ತನಿವಣ್ಣಂ ತಿನಲಿತ್ತು ಕೆನೆವಾಲಂ ಕುಡಿವೊಡಿತ್ತು ಉಪಚರಿಸುತಿರ್ದಳ್.

ಕವಿ ಕತೆಯನ್ನು ಹೀಗೆ ಆರಂಭಿಸುವನು. ಈ ಆರಂಭದ ಚಿತ್ರದ ಸೊಗಸನ್ನು ವರ್ಣಿಸಿ ಹೇಳಬೇಕಾದದ್ದಿಲ್ಲ. ಇದರಲ್ಲಿ ಪ್ರಕೃತಿಯ ವರ್ಣನೆ ಸೇರಿದೆ. ಒಂದು ಆಸ್ಥಾನವೂ ಅದಕ್ಕೆ ಸಂಬಂಧಪಟ್ಟ ಒಡ್ಡೋಲಗವೂ ಸೂಚಿಸಲ್ಪಟ್ಟಿವೆ. ಅರಮನೆಯಲ್ಲಿ ಸಂಭಾವಿತನಾಗಿರುವ ಕವಿಯ ಪರಿಚಯವನ್ನು ನಾವು ಮಾಡಿಕೊಳ್ಳುತ್ತೇವೆ. ಅವನ ಸಂಸಾರದ ಭವ್ಯ ಸುಖದ ಒಂದು ಭಾಗವನ್ನು ಸ್ವಲ್ಪಮಟ್ಟಿಗೆ ನೋಡುತ್ತೇವೆ. ಇದಿಷ್ಟರಿಂದ ನಮಗೆ ಕವಿಯ ವಿಷಯದಲ್ಲಿ ಮರ್ಯಾದೆಯೂ ಅವನ ಪತ್ನಿಯ ವಿಷಯದಲ್ಲಿ ಗೌರವ ವಿಶ್ವಾಸಗಳೂ ಉಂಟಾಗುತ್ತವೆ. ಏಕೆಂದರೆ ಅವನು ಮಾನ್ಯನಾದ ಕವಿ: ಈಕೆ ಸಂಪ್ರದಾಯವಂತೆಯಾದ ಪತಿಪರಾಯಣೆಯಾದ ಅವನ ಗೃಹಲಕ್ಷ್ಮಿ. ಸ್ವಪ್ನದಲ್ಲಿ ಕಂಡ ಯಾವುದೋ ಸುಂದರವಾದ ಸನ್ನಿವೇಶ ಇಲ್ಲಿ ಕವಿಯ ಜೀವನದಲ್ಲಿ ನಮ್ಮೆದುರಿಗೆ ಬಂದಂತೆ ನಮಗೆ ಭಾವನೆಯುಂಟಾಗುತ್ತದೆ. ಹೀಗೆ ತನ್ನ ಮತ್ತು ತನ್ನ ಪತ್ನಿಯ ವಿಷಯವನ್ನು ಸ್ವಲ್ಪ ಸೂಚಿಸಿ ಕವಿ ಮುಂದಕ್ಕೆ ಹೀಗೆ ಹೇಳುತ್ತಾನೆ.

ಈವುಪಚಾರದಿನಾತನ ಪಸಿವುಃ ಬೞಲ್ಕೆಯುಂ ಮುಡಿಯೆ ಕೆಳದಿ ನಱುದಂಬುಲಮಂ ಸವಿಯಲ್ಕೆಂದು ಮಡಿದೀಯುತುಮಿರೆ ಇಂತು ಸುಖ ಸಲ್ಲಾಪಂಗೊಳ್ಳುತ್ತಿರ್ದರ್.

ಆದೆಂತೆನೆ :

ಮನೋರಮೆ : (ಮೆಲ್ನುಡಿಯಿಂ) ನೋಱ್ಪುದೀಪಗಲ್ಗಳೆಂತೊ ಪಿರಿಯವು ಪಗಲುಮಿರುಳುಂ ಸುರಿವ ಬಲ್ಸೋನೆಯ ಜಿನುಂಗಿನತ್ತಣಿ ನೆನ್ನ ಬಗೆಯಂ ಬೇಸತ್ತುದು ಅಂತದಱಿನೇನಾನುಮೊಂದುನಲ್ಗತೆಯಂ ಪೇೞಿ !

ಮುದ್ದಣಂ : ಪ್ರಾಣೇಶ್ವರಿ ! ತಡೆಯೇಂ ! ಇನಿತೊಂದು ಬಯಕೆ ತಲೆದೋಱಿ ಆವ ಗಹನಂ ? ಆದೊಡಮಾವ ನಲ್ಗತೆಯಂ ಪೇೞ್ವೆಂ ? ಏಂ ಭೋಜಪ್ರಬಂಧಂ ? ವಿಕ್ರಮವಿಜಯಂ ? ಮಹಾವೀರಚರಿತಂ ?

ಮನೋರಮೆ : ಇಸ್ಸಿ ! ಇವರೊಳೆನಗಱ್ಕಱುಲ್ಲಂ; ಉೞುದೊಡ ಮೞುದೊಡಂ ಬೞ್ವೆದೋಱುಪ ರಸಭರಿತಂ ಚರಿತಮೈಸೆ.

ಮುದ್ದಣಂ : ನಿವಗಾವ ರಸದೊಳಿಪ್ಪಂ ? ಶೃಂಗಾರರಸದೊಳೇ ? ವೀರರಸದೊಳೇ ? ಹಾಸ್ಯರಸದೊಳೇ ?

ಮನೋರಮೆ : ಅವ ರಸದೊಳೆಂದೊಡೇಂ ? ನವರಸದೊಳಂ.

ಮುದ್ದಣಂ : ಅಂತಿರೆ ಮತ್ತಮಾ ಕತೆಯಾವುದು ?

ಮನೋರಮೆ : ರಾಮಾಯಣದೊಳೇನಾನುಮೊಂದು.

ಈ ಕವಿಗೆ ರಾಮಾಯಣದ ವಿಷಯದಲ್ಲಿ ಬಹಳ ಪಕ್ಷಪಾತ. ಇವನ ಮುಖ್ಯವಾದ ಮೂರು ಕಾವ್ಯಗಳೂ ರಾಮಾಯಣದಿಂದ ಉದ್ಧರಿಸಿದ ಆಖ್ಯಾನಗಳು. ಕವಿ ಜನಾಂಗದ ಪ್ರತಿನಿಧಿಯೆಂದು ವಿಮರ್ಶೆಯಲ್ಲಿ ಹೇಳುವುದು ವಾಡಿಕೆ. ಮುದ್ದಣನ ಈ ಪಕ್ಷಪಾತಕ್ಕೆ ವಿಮರ್ಶೆಯ ಈ ಸೂತ್ರ ಸುಲಭವಾಗಿ ಅನ್ವಯಿಸುವುದು. ನಮ್ಮ ಜನಾಂಗದ ಜೀವನದಲ್ಲಿ ಆಳವಾಗಿ ಊರಿರುವ ಪುಣ್ಯ ಕಥೆಯೆಂದರೆ ರಾಮಾಯಣವೆಂದೇ ಹೇಳಬಹುದು. ಇದರಿಂದಲೂ ನಮಗೆ ಈ ಕಾವ್ಯದ ವಿಷಯದಲ್ಲಿ ಅದರ ಮೊದಲಲ್ಲೇ ತಲೆದೋರುವುದು. ಅಲ್ಲದೆ ನಮಗೆ ಸಹಾಯಕವಾಗಿ ಮನೋರಮೆ ನಿಂತಿದ್ದಾಳೆ. ನಮಗೂ ಎಲ್ಲ ರಸಗಳಲ್ಲೂ ಇಷ್ಟ, ನಮಗೆ ಬೇಕಾದ್ದನ್ನು ಮನೋರಮೆ ಕೇಳಿರುವಳು. ಇನ್ನು ಮುಂದೆಯೂ ಕತೆ ಸಾಮಾನ್ಯರಾದ ನಮ್ಮ ಯೋಗ್ಯತೆಗೆ ತಕ್ಕುದಾಗಿರುವಂತೆ ಅವಳು ನೋಡಿಕೊಳ್ಳುವುದಕ್ಕೆ ಕಾವಲಿರುತ್ತಾಳೆ. ರಾಮಾಯಣದಲ್ಲಿ ಯಾವ ಭಾಗವನ್ನು ಹೇಳುವುದೆಂದು ಸ್ವಲ್ಪ ಚರ್ಚೆಯಾದ ಮೇಲೆ ಮನೋರಮೆ ರಾಮಾಶ್ವಮೇಧದ ಕತೆಯನ್ನು ಕೇಳಬೇಕೆಂದು ಹೇಳುವಳು. ಮುದ್ದಣನು ಆಗಲಿ, ಯಾವ ಧಾಟಿಯಲ್ಲಿ ಹೇಳಲಿ ? ಪದ್ಯದಲ್ಲಿ ಹೇಳಲೆ ? ಗದ್ಯದಲ್ಲಿ ಹೇಳಲೆ ? ಎನಲು ಮನೋರಮೆ "ಪದ್ಯಂ ವಧ್ಯಂ; ಗದ್ಯಂ ಹೃದ್ಯಂ; ಹೃದ್ಯಮಪ್ಪ ಗದ್ಯದೊಳೆ ಪೇಱುವುದು" ಎಂದು ಉತ್ತರ ಕೊಡುವಳು. ಮುದ್ದಣನು ಸರಸಿ; ಇನ್ನೂ ಚಿಕ್ಕ ವಯಸ್ಸೆಂದು ಕಾಣುತ್ತದೆ. ಹೆಂಡತಿಯೊಡನೆ ಇಲ್ಲಿ ಸ್ವಲ್ಪ ಹಾಸ್ಯ ಮಾಡುತ್ತಾನೆ.

ಮುದ್ದಣಂ : (ನಸುನಗೆಯಿಂ) ಅದಂತಿರ್ಕೆ. ಇಂತಪ್ಪ ನಲ್ಗತೆಯಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಗಡಗಮಂ ಪೊನ್ನ ಕಂಠಿಕೆಯಂ ಮೆಚ್ಚನೀವರ್ ನೀನೀವುದೇಂ ?

ಮನೋರಮೆ : ಪೆಱತೇಂ ಎನ್ನನೆ ನಾನೀವೆಂ.

ಮುದ್ದಣನು ಕವಿಯಾದರೂ ಪ್ರಪಂಚ ಜ್ಞಾನವಿಲ್ಲದವನಲ್ಲ. "ಅಱಿಯಾ ಮುನ್ನಮೆ ನಿನ್ನ ತಾಯ್ತುಂದೆವಿರೆನಗಿತ್ತರೆಂಬುದಂ ?" ಎನ್ನುವನು. ಅದಕ್ಕೆ ಮನೋರಮೆ ಅರಮನೆಯವರು ಕಾವ್ಯವನ್ನು ನೋಡಿದ ಮೇಲಲ್ಲವೆ ಬಿರುದನ್ನು ಕೊಡುವುದು, ತಾನು ಕತೆಯನ್ನು ಕೇಳಿ ಚೆನ್ನಾಗಿದ್ದರೆ ಬಲ್ಲಂತೆ ಸನ್ಮಾನಿಸುವೆನು, ಎಂದು ಹೇಳುವಳು.

ಮುದ್ದಣಂ : ಒಳ್ಳಿತೊಳ್ಳಿತು ! ಕತೆಯನಾಲಿಸಿ ಬಱಿಕ್ಕ ಮೀಯೆ ನೆಂದೊಡೆಬಿಡೆ ನೋೞ್ಪೆಂ.

ಮನೋರಮೆ : ಅನುಂ ನೋೞ್ಪೆಂ ಕತೆಯ ಪುರುಳೆಂತಿರ್ಕು ಮೆಂದು.

ಹೀಗೆ ಒಪ್ಪಂದವಾದ ಮೇಲೆ ಕವಿಯು ಕಾವ್ಯವನ್ನು ಆರಂಭಿಸುವನು. "ಸ್ವಸ್ತಿ ಶ್ರೀಮತ್ಸುರಾಸುರೇಂದ್ರ ನರೇಂದ್ರ ಮುನೀಂದ್ರ ಫಣೀಂದ್ರ ಮಣಿಮಕುಟತತಘಟಿತ." ಈ ಮಾತಿನ ಆಡಂಬರವನ್ನು ಕೇಳಿ ಮನೋರಮೆ

"ಓ ಓ ! ತಡೆ ! ತಡೆ ! ವಸುಧೆಗೊಡೆಯನಪ್ಪ ರಾಮಚಂದ್ರನ ಕತೆಯಂ ಪೇಟಿನೆ ಬಸದಿಗೊಡೆಯರಪ್ಪ ಸುರೇಂದ್ರರ ಚರಿತೆಯಂ ಪೇೞ್ವುದೇಂ ? ಸಾಲ್ಗುಂ, ಸಾಲ್ಗುಂ. ಇಂತೆರ್ದೆಗೊಳ್ವ ಕತೆಗೆಂತುಡುಗೊಜೆಯಂ ಗೆಯ್ವೆನೋ !" ಎಂದು ಹೇಳುವಳು. ಮುದ್ದಣನು ರಾಮಚಂದ್ರನ ಕತೆಯನ್ನು ಹೇಳುವ "ಸಕ್ಕದದೊಮದು ಚಲ್ವು ಇದು" ಎಂದು ಹೇಳುವನು. ಕೇವಲ ಪಾಂಡಿತ್ಯ ಪ್ರದರ್ಶಕವಾದ ಸಂಸ್ಕೃತ ಶಬ್ದ ಭೂಯಿಷ್ಠವಾದ ಕನ್ನಡದ ಶೈಲಿ ನಮ್ಮ ಕಾವ್ಯಗಳಲ್ಲಿ ಹೊಸದಲ್ಲ. ಈಗಣ ಜನರಿಗೆ ಅಂಥ ಶೈಲಿಯ ವಿಷಯದಲ್ಲಿ ಎಷ್ಟು ಬೇಸರ ಎಂಬುದು ಸರ್ವವಿದಿತವಾಗಿದೆ. ನಾವು ಯಾರಾದರೂ ಹೇಳುವಂತೆ ಮನೋರಮೆ "ಲೇಸು, ಲೇಸು ! ನೀರಿಟಿಯದ ಗಂಟಲೊಳ್ ಕಡುಬಂ ತುಱುಕಿದಂತಾಯ್ತು; ಕನ್ನಡದ ಸೊಗಸ ನಜೆಯಲಾರ್ತೆನಿಲ್ಲೆನಗೆ ಸಕ್ಕದದ ಸೊಗಸಂ ಪೇಟುದು ಗಡ !" ಎಂದು ಹೇಳುವಳು.

ಮುದ್ದಣಂ : ಅಪ್ಪೊಡಿನ್ನೆಂತೊ ಒರೆವೆಂ.

ಮನೋರಮೆ : ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದೆ ಪೇೞ್ವುದು; "ಕನ್ನಡಂ ಕತ್ತುರಿ"ಯಲ್ತೆ.

ಮುದ್ದಣಂ : ಅಪ್ಪುದಪ್ಪುದು. ಅದೊಡಂ ಸಕ್ಕದವೊಂದೆ ರನ್ನ ವಣಿಯಂ ಪೊನ್ನಿಂಬಿಗಿದಂತೆಸೆಗುಂ; ಅದಜೆಂ ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ; ರಸಮೊಸರೆ, ಲಕ್ಕಣಂ ಮಿಕ್ಕಿರೆ, ಎಡೆಯೆಡೆಯೊಳ್ ಸಕ್ಕದದನಲ್ನುಡಿ ಮೆಜೆಯೆ ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ.

ಎಂದು ಮಾತು ಕೊಡುವನು.

ಕತೆಯ ಈ ಪ್ರಸ್ತಾವನೆಯಲ್ಲಿ ಕವಿ ಸೌಂದರ್ಯದ ವರ್ಣನೆಯಿಂದ ಪಾಠಕರ ಮನಸ್ಸನ್ನು ರಂಜಿಸಿ ತನ್ನ ಸಂಸಾರದ ಸುಖದ ದಿಗ್ದರ್ಶನದಿಂದ ಅವರಿಗೆ ನೆಮ್ಮದಿಯನ್ನುಂಟು ಮಾಡಿ ಮನೋರಮೆಯ ಮೂಲಕ ಅವರ ಇಷ್ಟವನ್ನು ಕುರಿತು ಪ್ರಸಂಗ ಮಾಡಿ ಸ್ವಲ್ಪ ಹಾಸ್ಯದಿಂದ ಉಲ್ಲಾಸವನ್ನುಂಟು ಮಾಡಿ ಒಂದೆರಡು ಮಾತಿನಲ್ಲಿ ಇಂಥ ಕಾವ್ಯ ಹೇಗಿರಬೇಕೆಂದು ಸೂಚಿಸಿ ಕನ್ನಡಕ್ಕೆ ಮರ್ಯಾದೆಯನ್ನು ಪ್ರಕಾಶಪಡಿಸಿ ಸಂಸ್ಕೃತದ ವಿಷಯದಲ್ಲಿ ಅವಜ್ಞತೆಯನ್ನು ತೋರದೆ ಸುಂದರವಾದ ಕಾವ್ಯವನ್ನು ರಚಿಸುವುದೆಂಬ ಪ್ರತಿಜ್ಞೆಯನ್ನು ತಿಳಿಸಿರುವನು. ಈ ಪ್ರತಿಜ್ಞೆಯನ್ನು ಎಷ್ಟು ಚೆನ್ನಾಗಿ ನೆರವೇರಿಸುವನೆಂಬುದು ಕಾವ್ಯವನ್ನು ಓದಿದವರಿಗೆ ತಿಳಿಯುವುದು.

ಇನ್ನು ಮುಂದೆ ಮುದ್ದಣ ಮನೋರಮೆಯರ ಇನ್ನೂ ಕೆಲವು ಸರಸ ಸಲ್ಲಾಪಗಳನ್ನು ಎತ್ತಿ ಹೇಳುತ್ತೇವೆ. ಈ ಮಧ್ಯೆ ಕವಿಯ ಪ್ರಕೃತಿ ಸೌಂದರ್ಯದ ವರ್ಣನೆಯ ಶಕ್ತಿಯನ್ನು ತೋರಿಸುವಂತೆ ಒಂದು ಕಾವ್ಯ ಭಾಗವನ್ನು ಇಲ್ಲಿ ಕೊಟ್ಟಿದೆ. ವಸಂತ ಋತು ಆರಂಭವಾಗಲು ರಾಮ ದೇವರು ಯಜ್ಞ ಮಾಡುವುದಕ್ಕೆ ಆರಂಭಿಸಿದರೆಂಬ ಸಂದರ್ಭದಲ್ಲಿ ಕವಿಯು ವಸಂತ ಋತುವನ್ನು ಹೀಗೆಂದು ವರ್ಣಿಸಿದ್ದಾನೆ :

ಮಾಮರನೆಳದಳಿರ ರಸಮಂ ಪಿಟಿದು ಕಳಕಂಠನ ಕಂಠನಾಳಕ್ಕೆಜಿದುಬ್ಬಸಮಂ ಕಳೆದು ಕಲನಾದಮಂ ಪೆರ್ಚಿಸಿಯುಂ, ಆರನೇಜಿಲ ದೋರೆವಣ್ಣಂ ತೇದು ನಕ್ಕಿಸುತರಗಿಳಿಯ ನಾಲಗೆಯಂ ತೆಳ್ಳನಾಗಿಸಿ ತೊದಳ್ನುಡಿಯಂ ತಿರ್ದಿಯುಂ, ಪುಷ್ಪಧೂಳಿಯಂಲೆಪ್ಪಂ ಬಟುದದಿರ್ಮುತ್ತೆಯ ಸುರಯಿಯ ಪೊಸಬಂಡನ್ನೊಡಲ್ಗಿತ್ತು ಮಱುದುಂಬಿಗಳ್ಗೆ ಸಂಪಿಗೆ ಯತ್ತಣಿ ನೊದವಿದ ಶಿರೋಭ್ರಮಣಮನಟುಯಿಸಿಯುಂ, ಬಸಂತಂ ಬೆಜ್ಜನೆನೆ ಮೈದೋಱಲೊಡಂ; ಅಂದು ಕೋಡುಕೋಡಿಂದೋಡಿ ಮಲಯಮಂ ಮಱೆಗೊಂಡ ಪವನನೀಗಳತ್ತಣಿಂ ಪೊಱಮಟ್ಟು ಮೆಲ್ಲ ಮೆಲ್ಲ ನೆಡೆಯೆಡೆಯ ಬನಬನಮಂ ಪುಗುತಂದು ಹೊಂಚಿ ಮುಂಚಿ ಕೆಳೆಯಂಗೆ ನೆರವಾದನೆನೆ ದಕ್ಷಿಣಾನಿಲಂ ಮಂದಂ ಮಂದಂ ವಹಿಸುತ್ತಿರ್ಕುಂ; ಫಲವೃಕ್ಷಂಗಳೆಲ್ಲಂ ಕಾಯ್ಕಸುರ್ಗಾಯ್ ಪಣ್ ದೋರೆವೆಣ್ ತನಿವಣ್ಗಳಿಂದೆಸೆಯೆಯುಂ, ಪೂವಳ್ಳಿಗಳ್ ನನೆಕೊನೆಮುಗುಳರೆಮುಗುಳ್ ಬಿರಿಮುಗುಳುಳ್ಳಲರ್ದ ಪೊಸಮಲರ್ಗಳಿಂದೆ ಸೊಗಯಿಸೆಯುಂ, ಮನೋಹರಮಾಯ್ತು ಪೊಸ ಸುಗ್ಗಿ; ಬಿರಯಿಗಳೆರ್ದೆವಡಿ ಬಿಱ್ರನೆ ಬಿರಿಯೆ, ವಿಟವಿತಾನಕ್ಕೆ ಪೊಸಬೇಟದ ಸೊಂಪುನೆರೆಯೆ, ಕುಲಟಾಂಗನೆಯರ್ಗೆ ಜವ್ವನದೇಟ್ಗೆ ಮೆಱೆಯೆ, ಕಾವನೆತ್ತಂ ಮೈದೋಱದೆ ಸಂಚರಿಸಲ್ತೊಡಂ ಗಿದಂ; ರಾಘವನ ಪ್ರತಾಪದಂತಿರೆ ನೇಸಱ ಕಾಯ್ಪುಂ ಪೆರ್ಚಿದುದು; ಪುರಲಕ್ಷ್ಮಿಯೊಡನೆ ವನಲಕ್ಷ್ಮಿಯ ಕೆಳೆತನಂ ಪಿರಿದಾಯ್ತು.

ಈ ವರ್ಣನೆಯಲ್ಲಿ ಕವಿಯ ಊಹೆ ಅವನ ವಸ್ತು ವಿಜ್ಞಾನಕ್ಕೆ ವಿಲಕ್ಷಣವಾದ ಕಳೆಯನ್ನು ಕಟ್ಟಿದೆ. ಮರಿದುಂಬಿಗಳು ತಿಳಿಯದೆ ಸಂಪಿಗೆಯ ಹತ್ತಿರ ಹೋಗಿ ಶಿರೋಭ್ರಮಣ ಉಂಟಾಗಿ ತೊಂದರೆ ಪಡುತ್ತಿವೆಯಂತೆ. ವಸಂತನು ಬಂದು ಅವಕ್ಕೆ ಪುಷ್ಪಧೂಳಿಯನ್ನು ಲೇಪಿಸಿ ಅದಿರ್ಮುತ್ತೆ ಸುರಗಿ ಪುಷ್ಪಗಳ ಹೊಸ ರಸವನ್ನು ಸೇವಿಸುವುದಕ್ಕೆ ಕೊಟ್ಟು ಆ ಭ್ರಾಂತಿಯನ್ನು ನಿವಾರಣೆ ಮಾಡುತ್ತಾನಂತೆ. ಇರುವುದನ್ನು ತಿಳಿಯುವುದು ವಸ್ತುವಿಜ್ಞಾನ. ವಿಜ್ಞಾನಾಂಶವನ್ನು ಪರೋಕ್ಷಾವಸ್ಥೆಯಲ್ಲಿ ಕಣ್ಣೆದುರಿಗೆ ಕಂಡಂತೆ ಅನುಭವಿಸುವುದು ಪ್ರತಿಭೆ. ಪ್ರತಿಭೆಯಿಂದ ಮುಂದೆ ಬಂದ ವಿಜ್ಞಾನಾಂಶಕ್ಕೆ ಆತ್ಮೀಯವಾದ ಒಂದು ವಿಲಾಸವನ್ನು ಆರೋಪಿಸಿ ಅದರ ಅಂದವನ್ನು ಹೆಚ್ಚಿಸುವುದು ಊಹೆ. ಈ ವರ್ಣನೆಯಲ್ಲಿ ಈ ಮೂರು ರೀತಿಯ ಶಕ್ತಿಯೂ ಉಜ್ವಲವಾಗಿ ಕಾಣುತ್ತದೆ. ಹಾಗೆಯೇ ದಕ್ಷಿಣಾನಿಲನ ವರ್ಣನೆಯನ್ನು ನೋಡಿ. ಆ ವರ್ಣನೆಯ ಕೊನೆಯಲ್ಲಿ "ಮಂದಂ ಮಂದಂ ವಹಿಸುತ್ತಿರ್ಕುಂ" ಎಂದು ಹೇಳುವಲ್ಲಿ ತೆಂಗಾಳಿಯ ಧೀರಗಮನವು ರೂಪುಗೊಂಡಿರುವುದನ್ನು ನೋಡಿ. ಕಾವ್ಯ ಪ್ರಪಂಚದಲ್ಲಿ ಸುಳಿದಾಡಿರುವ ಮನಸ್ಸಿಗೆ ಸಂಸ್ಕೃತ ಕಾವ್ಯಗಳಲ್ಲಿ ಅನೇಕ ಕಡೆ ಬಂದಿರಬೇಕಾದ ಈ ಪದ ಸಂಯೋಜನದಿಂದ ತೋರಿಬರುವ ಭಾವನಾ ಪ್ರಪಂಚದ ವಿಸ್ತಾರವೆಂಥದೆಂದು ಊಹಿಸಿ. ಇದಿಷ್ಟರ ಜೊತೆಗೆ ಇಲ್ಲಿ ಜೋಡಿಸಿರುವ ಮಾತುಗಳ ಸೊಗಸನ್ನೂ ಔಚಿತ್ಯವನ್ನೂ ಗಮನಿಸಿ. ಬಿರಿಯೆ, ನೆರೆಯೆ, ಮೆರೆಯೆ ಎಂದು ಮಧ್ಯದಲ್ಲಿ ಅವ್ಯಕ್ತ ಮಧುರವಾಗಿ ಸೇರಿಬರುವ ಅಂತ್ಯಪ್ರಾಸದ ಸೊಗಸನ್ನು ಭಾವಿಸಿ.

ಆಮೇಲೆ ಈ ವರ್ಣನೆ ಉತ್ತಮ ಕವಿತೆಯ ಸರ್ವ ಲಕ್ಷಣಗಳಿಂದ ಸಂಪನ್ನವಾಗಿ ಕವಿಗೆ ಸಾಹಿತ್ಯದಲ್ಲಿ ಅತ್ಯುತ್ತಮವಾದ ಸ್ಥಾನವನ್ನು ಕೊಡತಕ್ಕುದಾಗಿದೆ ಎಂಬುದನ್ನು ಮತ್ತೆ ಹೇಳಬೇಕಾದದ್ದಿಲ್ಲ.

ಈ ಕವಿ ಪ್ರಕೃತಿಯ ಸೌಂದರ್ಯದ ವರ್ಣನೆಯಲ್ಲಿ ಯಾವ ಸೌಲಭ್ಯವನ್ನೂ ಕೌಶಲವನ್ನೂ ತೋರಿಸುವನೋ ಮನುಷ್ಯ ಸ್ವಭಾವ ನಿರೂಪಣದಲ್ಲಿಯೂ ಅದೇ ಸೌಲಭ್ಯವನ್ನೂ ಕೌಶಲ್ಯವನ್ನೂ ತೋರಿಸುವನು. ಸೀತಾದೇವಿ ಒಂದು ಸಲ ಕನ್ನೆವಾಡದ ನೆಲೆವನೆಯ ಮೊಗಸಾಲೆಯಲ್ಲಿ ತೂಗುಮಂಚದಲ್ಲಿ ಕುಳಿತು ಕೆಳದಿಯಾದ ಚಂದ್ರಮತಿಯೊಡನೆ ಇರುತ್ತಿರಲು ಎದುರಿಗೆ ಒಂದು ಗುಬ್ಬಚ್ಚಿ ತನ್ನ ಎಳೆಯಮರಿಗೆ ಗುಟುಕು ಕೊಟ್ಟು ಅದನ್ನು ರೆಕ್ಕೆಯಲ್ಲಿ ಸೇರಿಸಿಕೊಂಡು ಮುದ್ದಿಸಿದುದನ್ನು ನೋಡಿ ದೇವಿ ಮಕ್ಕಳ ಬಯಕೆಯಿಂದ ಹೀಗೆಂದಳಂತೆ :

ಮಿತ್ರೆ ನೋಡೆ ! ನೋಡೆ ! ನೀಡುಂ ನೀಡದ ಪಕ್ಕಿಯುಮೆನ್ನಂ ಬಂಜೆಯೆನುತೇಡಿಪಂತೆನ್ನಿದಿರೊಳ್ ಪಿಳ್ಳೆಯುಂ ಮುದ್ದುಗೆಯ್ಗುಂ. ಇಂತಿರ್ಪಿನಮಿನ್ನೊಲ್ಲೆನೀಯೆಡೆಯಂ. ಎತ್ತಾನುಂ ಪೆಱತೊಂದೆಡೆಗೆ ಪೋಪಂ. ಅಲಸುವೆನೀ ನೋಟಕ್ಕೆ. ಓ ! ಪಕ್ಷಿಯನೊಂದನೆ ಪಗೆ ವನೇತರ್ಕೆಯೊ ನಿರ್ನೆರಂ ! ಎನ್ನನ್ನರ್ಗೆ ಲೋಕಮೆ ಪಗೆ ! ಪಲವಾತಿ ನೇನಕ್ಕುಂ. ನಿಕ್ಕುವಂ ಮಕ್ಕಳಂ ಪಡೆದೋವಲ್ಕಾಂ ನೋಂತೆನಿಲ್ಲಕ್ಕುಂ, ಎಳವರಯದೊಳ್ ನಲ್ಲೂಗಸಂ ಪೆತ್ತು ಬಾಲಕೇಳಿಯಂ ಕಣ್ದಣಿಯೆ ಕಂಡು ಸಂಸಾರದ ಸಾರಮಿದೆನುತೆ ಸಂತಸಂಬಡುವ ಪೆಣ್ಗಳೆ ಧನ್ಯರಲ್ತೆ ! "ಬಂದಳಿವಳ್ ! ಬಂಜೆ ! ಕಂದನಂ ಪಿಡಿಯಲ್ಕೀಯದಿರ್ ! ಬಡವಕ್ಕುಂ ! ಕಿಟ್ಟವಿಡದಿರ್ ! ಕಂದಿ ಬಸವಟೆಗುಂ : ನೋಡವಿಡದಿರ್ ! ಕಣ್ಕೊಂಕುಗುಂ; ನುಡಿಯಿಸಲೆಡೆಗುಡದಿರ್ ! ನುಡಿಯೊಗ್ಗುಗಂ" ಎಂಬ ನಾಡಪೆಣ್ಗಳ ಬಿಱುನುಡಿಗೆ ತಡೆದುಂ ಬಾಱ್ವ ವಂಧ್ಯೆಯರೆ ಜೀವನ್ಮೃತೆಯರ್ ವಲಂ. ಸಖಿ; ಮಾಂಜದುಸಿರ್; ಕುಲಮಂ ವರ್ಧಿಪ ಕಂದನಂ ಪಡೆದು ತೊರೆದ ಮೊಲೆಯೂಡಿ ತೊಟ್ಟಿಲೊಳಿಟ್ಟು ಪಾಡಿ ತೂಗಿ ಕೂಸು ನಿದ್ದೆವೋಪುದುಂ ತಾನುಮರೆಗಟೆಗೆ ಕೆಲದೊಳ್ ಮಂಡಿಸಿ ಬಾಲಲೀಲೆಯಂ ನೆನೆನೆನೆದು ಮತ್ತಂ ಕುವರನೆಟ್ಚಿತ್ತನಾಗೆ ಪಿಡಿದೆತ್ತಿ ಮುಂಡಾಡಿಯುಂ ಮುದ್ದಿಸಿಯುಂ ತೊದಳ್ನುಡಿಯಳ್ ನುಡಿಸಿಯುಂ ಕಿಱುನಗೆಯೊಳ್ ನಗಿಸಿಯುಂ ಪೊಸಬಿನದದಿನಾಡಿಸಿಯುಂ ಮನದ ಬೇಸಱಂ ಕಳೆವೊಂದು ಸೈಪೆನ್ನೊಳೆಂದಿಂಗಾದಪುದೋ !"

ಮುದ್ದಣನಿಗೆ ಈ ಪುಸ್ತಕವನ್ನು ಬರೆಯುವಾಗ್ಗೆ ಪ್ರಾಯಶಃ ಮಕ್ಕಳಿರಲಿಲ್ಲವೆಂದು ನಾನು ಈಗ ಹತ್ತು ವರ್ಷಗಳ ಹಿಂದೆ ಒಂದು ಸಂದರ್ಭದಲ್ಲಿ ಊಹಿಸಿ ಹೇಳಿದೆನು. ಗ್ರಂಥಕರ್ತನ ಚರಿತೆ ಈಚೆಗೆ ತಿಳಿದುಬಂದಿದೆ. ಅದನ್ನು ನೋಡುವುದರಲ್ಲಿ ಈ ಊಹೆ ಸರಿಯಾಗಿರಬೇಕೆಂದು ತೋರುವುದು. ಮುದ್ದಣ ಮನೋರಮೆ ಆಡುವ ಮಾತು ಗಂಡ ಹೆಂಡಿರು ಹೊಸ ಸಂಸಾರದ ರಾಗರಸಭರಿತವಾದ ಪ್ರಣಯದಲ್ಲಿ

ಆಡುವ ಮಾತುಗಳು. ಕವಿ ಅಲ್ಲಲ್ಲಿ ಪತ್ನಿಯನ್ನು ಸಂಬೋಧಿಸಿ ಕರೆಯುವ ಸೊಗಸಿನಿಂದಲೇ ಇದು ಸ್ಪಷ್ಟವಾಗುವುದು. ರಮಣಿ, ಪ್ರಾಣೇಶ್ವರಿ, ಎನ್ನರಸಿ, ಕೇಳೆಲೆ ಬಾಲೆ ಬಾಲೇಂದುಫಾಲೆ, ಪೆಣ್ಮಣಿ ಕೇಳ, ಪ್ರಾಣನಾಯಿಕೆ, ದೇವಿ, ಎನ್ನ ರನ್ನ ಗೈಪಿಡಿ, ಮೋಹನಾಂಗಿ, ಎನ್ನ ನಿಚ್ಚದ ಪೂಜೆಯ ಕಟ್ಟಚ್ಚಿನ ಪ್ರಾಣಲಿಂಗಮೆ, ಒಚ್ಚೇರೆಗಣ್ಣ ಪೆಣ್ಣೆ, ಎನ್ನ ಕೈಮರ್ಚಿನ ಗೆಡೆಯಾಟದ ಮುತ್ತಿನ ಸೆಂಡೆ, ಎನ್ನ ಚೆನ್ನ ಪೊನ್ನರಸಿ, ಎನ್ನ ಸಿಂಗರದ ಸಿರಿಯೆ. ಇವನಿಗೆ ಹೆಂಡತಿಯನ್ನು ಏನೆಂದು ಕರೆಯುವುದೆಂಬ ವಿಷಯದಲ್ಲಿ ಯೋಚನೆಯಿಲ್ಲವೇ ಇಲ್ಲ. ಸಂಸಾರದಲ್ಲಿ ಕೆಲವೇ ಕಾಲ ಕಳೆದ ಮೇಲಾದರೂ ಪತ್ನಿಯ ವಿಚಾರದಲ್ಲಿ ಈ ಉತ್ಸಾಹವಿರುವುದು ಅಪೂರ್ವ. ಈತನು ಪತ್ನಿಯನ್ನು ಹತ್ತು ಹೆಸರಿನಿಂದ ಸಂಬೋಧಿಸುವಂತೆಯೇ ಆಕೆ ಯುವತಿಗೆ ಸಹಜವಾದ ಒಂದು ನಾಚಿಕೆಯಿಂದಲೂ ಇವನ ಪ್ರೀತಿಗೆ ಕಡಮೆಯಲ್ಲದ ತನ್ನ ಒಂದು ಪ್ರೀತಿಯನ್ನು ಸೂಚಿಸುವಂತೆಯೂ, ಇವನನ್ನು ಒಂದೊಂದೇ ಮಾತಿನಿಂದ ರಮಣ, ಎನ್ನೊಡೆಯ, ನಲ್ಲ, ಆಣ್ಮ, ಎನ್ನರಸ ಎಂದು ಸಂಬೋಧಿಸುವಳು. ಅಲ್ಲದೆ ಮುಂದೆ ತಿಳಿಯುವಂತೆ ಕವಿಗೆ ಊಟದ ವಿಷಯದಲ್ಲಿ ಇನ್ನೂ ಉಜ್ವಲವಾದ ಉತ್ಸಾಹ. ಮಕ್ಕಳಾದವರಿಗೆ ಸಾಮಾನ್ಯವಾಗಿ ಈ ಉತ್ಸಾಹವಿರುವುದಿಲ್ಲ. ಮನೋರಮೆಯೂ ಹೊತ್ತು ಹೋಗುವುದಿಲ್ಲವೆಂದು ಬೇಸರಪಡುತ್ತಾ ಕವಿ ಬಂದೊಡನೆ ಕತೆ ಹೇಳೆಂದು ಕೇಳುವುದರಿಂದ ಎಲ್ಲ ಕೆಲಸಕ್ಕಿಂತ ದೊಡ್ಡದಾದ ಮಕ್ಕಳನ್ನು ಸಾಕುವುದೆಂಬ ಕೆಲಸವನ್ನು ಇನ್ನೂ ಕೈಗೊಂಡಿರಲಿಲ್ಲವೆಂದು ತೋರುವುದು. ಸೀತೆ ಪಕ್ಷಿಯನ್ನು ನೋಡಿ ತನ್ನ ಬಂಜೆತನವನ್ನು ನಿಂದಿಸಿಕೊಂಡಳೆಂಬ ಭಾಗದಲ್ಲಿ ಕವಿ ಎಂದಾದರೂ ತನ್ನ ಪತ್ನಿ ಹೀಗೆ ಎಣಿಸುವಳೋ ಎಂದು ತನಗೆ ತೋರಿದ ಭಾವವನ್ನು ವರ್ಣಿಸಿರಬಹುದು. ಇದರಂತೆಯೇ ಮಕ್ಕಳಿಲ್ಲದವರು ಮಕ್ಕಳು ಇರುವವರ ಸುಖವನ್ನು ಹೇಗೆ ನೆನೆಯುವರೆಂಬುದೂ ಈ ಸಂದರ್ಭದಲ್ಲಿ ವರ್ಣಿತವಾಗಿದೆ. ಆ ವರ್ಣನೆಯಲ್ಲಿ ಕೂಡ ಇದೇ ಆತ್ಮೀಯತೆ ಕಂಡು ಬರುವುದು.

ಕವಿ ಕತೆ ಹೇಳುವುದರಲ್ಲಿ ಅತಿಶಯವಾದ ಕೌಶಲವನ್ನು ತೋರಿಸಿರುವನೆಂದೂ ಮನೋರಮೆಯಿಂದ ಪಾಠಕರ ಅಭಿಪ್ರಾಯಕ್ಕೆ ರೂಪುಗೊಟ್ಟಿರುವನಂದೂ ಹೇಳಿದೆ. ಇದು ಈ ಗ್ರಂಥದಲ್ಲಿ ಅನೇಕ ಕಡೆ ಕಂಡು ಬರುವುದು. ಅಂಥ ಒಂದು ಸಂದರ್ಭವನ್ನು ಇಲ್ಲಿ ನಿರೂಪಿಸಬಹುದು. ಶ್ರೀರಾಮನು ಲಕ್ಷ್ಮಣನಿಗೆ ಸೀತೆಯನ್ನು ಕಾಡಿಗೆ ಒಯ್ದು ಅಲ್ಲಿ ಬಿಟ್ಟು ಬರುವಂತೆ ಆಜ್ಞೆಯನ್ನಿತ್ತು ಕಳುಹಿಸಲಾಗಿ ಆತನು ಅತ್ತಿಗೆಯನ್ನು ಕರೆದುಕೊಂಡು ಉತ್ತರಾಭಿಮುಖವಾಗಿ ಹೊರಟ ಸಂದರ್ಭ ಅದು. ಇಲ್ಲಿ ಮೊದಲು ಸೀತೆಯನ್ನು ಕಳುಹಿಸುವುದೇ ಬಿಡುವುದೇ ಎಂದು ನಾಲ್ಕೈದು ಪುಟದಷ್ಟು ಚರ್ಚೆ ಇದೆ. ಲಕ್ಷ್ಮಣನ ಖೇದವನ್ನು ಕುರಿತು ವಿಸ್ತಾರವಾದ ವರ್ಣನೆಯಿದೆ. ಸೀತಾದೇವಿಯ ಪ್ರಯಾಣ ಸನ್ನಾಹದ ವಿವರವಾದ ವರ್ಣನೆ, ಗಂಗಾನದಿಯ ದೀರ್ಘವಾದ ಚಿತ್ರ, ಗಾಳಿ, ನದಿ, ಕಾಡು ಇವುಗಳ ಸರ್ವಲಕ್ಷಣ ಸಮನ್ವಿತವಾದ ಸುಂದರವಾದ

ವಿವರಣೆಗಳು ಇವೆ. ಇದಾದಮೇಲೆ ಕವಿ ಲಕ್ಷ್ಮಣನು, "ನಟ್ಟಡವಿಯಂ ಪೊಕ್ಕು ಕಟ್ಟಕಡೆಯೊಳ್ ಅಣ್ಣನ ಕಟ್ಟಾಣತಿಯನೊರೆದು ಭೂಮಿಜೆಯನುಳಿಸಿ ಪೋದಂ," ಎಂದು ಎರಡು ಮಾತಿನಲ್ಲಿ ಹೇಳಿ "ಶ್ರೀರಾಮಾಶ್ವಮೇಧದೊಳ್ ಸೀತಾ ಪರಿತ್ಯಾಗಮೆಂಬ ಪಂಚಮಾಶ್ವಾಸಂ" ಎಂದು ಆಶ್ವಾಸವನ್ನು ಮುಗಿಸುತ್ತಾನೆ. ಪಾಠಕರಿಗೆ ಕಾಡಿನ ಸೊಗಸೂ ಗಂಗಾ ನದಿಯ ನೀರಿನಲ್ಲಿಯ ಸುಳಿಯ ಚೆಂದವೂ ಬೇಕಾಗಿರುವುದಕ್ಕಿಂತ ಸೀತೆಯ ಪಾಡು ಏನಾಯಿತೆಂದು ತಿಳಿಯುವುದು ಹೆಚ್ಚಾಗಿ ಬೇಕಾಗಿರುತ್ತದೆ. ಕವಿ ಇದನ್ನು ಬಲ್ಲನು. ಆದುದರಿಂದ ಕಾಡಿಗೂ ಸುಳಿಗೂ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಸೀತೆಯನ್ನು ಕಾಡಿನಲ್ಲಿ ಬಿಟ್ಟ ವಿಷಯವನ್ನು ಎರಡು ಮಾತಿನಲ್ಲಿ ಮುಗಿಸುತ್ತಾನೆ. ಇದರಿಂದ ಈ ಸಂದರ್ಭದ ದುಃಖ ನೂರುಮಡಿ ಗುಣಿತವಾಗುವುದು. ಇದಲ್ಲದೆ ವರ್ಣನೆಯ ವಿಸ್ತಾರದಿಂದ ಮತ್ತೊಂದು ಪರಿಣಾಮವು ಪಾಠಕರ ಮನಸ್ಸಿನಲ್ಲಿ ಉಂಟಾಗುತ್ತದೆ. ಸೀತೆ ತಪೋವನವನ್ನು ನೋಡಬೇಕೆಂಬ ಬಯಕೆಯಿಂದ ಹೊರಟಿದ್ದಳು. ಇಲ್ಲಿ ಸುಂದರವಾದ ವನವಿದೆ, ಪಾವನೆಯಾದ ಗಂಗೆ ಇದ್ದಾಳೆ. ಆದರೆ ಆ ಬಯಕೆಯ ಸುಖ ಪ್ರಾಪ್ತವಾಗಲಿಲ್ಲ. ಇದರಿಂದ ಈ ಎಲ್ಲ ಸೌಂದರ್ಯದ ವಿಷಯದಲ್ಲಿ ಸಾಮಾನ್ಯವಾಗಿ ಇರಬಹುದಾದ ಉತ್ಸಾಹಕ್ಕೆ ಪ್ರತಿಯಾಗಿ ಪಾಠಕರ ಮನಸ್ಸಿನಲ್ಲಿ ವಿರಕ್ತಿಯುಂಟಾಗುವುದು. ಲಕ್ಷ್ಮಣನು ಸೀತೆಯನ್ನು ಬಿಟ್ಟು ಹೋದನು ಎಂಬ ಮಾತನ್ನು ಕೇಳಿ ಮನೋರಮೆ ಕಂಬನಿಗರೆದು

ಆಃ ! ಎನ್ನೊಡೆಯ ! ನೀನುಮೆಂತು ಕಲ್ಮನನಾದಯ್. ಒರ್ಬಡವೆಯೆ ದೇವಿಯಂ ಕಾರಡವಿಯೊಳುಟಿದು ಲಕ್ಷ್ಮಣಂ ಪೋನೆಂಬೊಡೆ ಮೃದುನಂಗಮದೊಡಮೆಂತು ಮನಮಾದುದೋ ! ಮೇಣೆಂತು ದೇವಿಯರ್ಗೆ ಕಾವಲಿರದೆ ಪೋದನೋ ! ತೊಜೆದು ಪೋಪನ್ನಂ ಸೀತೆಯೇನೆಂದು ಮಱುಗಿದಳೋ ! ಅಕ್ಕಟಾ ! ಪೆಣ್ಗಳೊಂದು ಬಾಟ್ತೆ ಬಾಟ್ತೆಯೆ !

ಎನ್ನುವಳು. ನಮಗೂ ಕಣ್ಣಿನಲ್ಲಿ ಚಿಮ್ಮಿರುವ ಆಶ್ರುಬಿಂದುವನ್ನು ಒರಸಿಕೊಳ್ಳುವುದಕ್ಕೆ ಇದರಿಂದ ಸ್ವಲ್ಪ ಅವಕಾಶ ಸಿಕ್ಕುತ್ತದೆ. ಈ ಅವಕಾಶದಲ್ಲಿ ಒಂದು ಕ್ಷಣ ಕವಿ ವರ್ಣಿಸುವ ಮೊದಲೇ ಸೀತೆಯ ಅವಸ್ಥೆಯನ್ನು ಭಾವನೆಯಲ್ಲಿ ಸ್ವಲ್ಪ ಕಂಡು ಮತ್ತಷ್ಟು ಕುಗ್ಗುತ್ತೇವೆ. ಮನೋರಮೆಯ ಪ್ರಾರ್ಥನೆಯಂತೆ ಅವನು ಆ ಅವಸ್ಥೆಯನ್ನು ವರ್ಣಿಸುವುದಕ್ಕೆ ಆರಂಭಿಸುವ ವೇಳೆಗೆ ಆ ಖೇದದ ಬಹುಭಾಗವನ್ನು ಅನುಭವಿಸಿ ಮುಗಿಸಿ, ನೊಂದರೂ ಸ್ತಿಮಿತವಾಗಿರುವ ಮನಸ್ಸಿನಿಂದ ಕವಿಯ ವರ್ಣನೆಯನ್ನು ಕೇಳಲು ಸಿದ್ಧರಾಗುತ್ತೇವೆ. ಕತೆ ಕೇಳುವವರ ಮನಸ್ಸನ್ನು ವೀಣೆಯಂತೆ ಕೈಗೆ ತೆಗೆಧುಕೊಂಡು ಅದರಲ್ಲಿ ಇಷ್ಟ ಬಂದ ಭಾವಗಳನ್ನು ಹೀಗೆ ಧಾರಾಳವಾಗಿ ಉಂಟುಮಾಡುವುದು ಕವಿತಾ ಶಕ್ತಿಯ ಪೂರ್ಣಾವೇಶಕ್ಕೆ ಮಾತ್ರ ಸಾಧ್ಯ. ಈ ಕವಿ ಪಾಠಕರ ಮನಸ್ಸನ್ನು ತನ್ನ ಇಷ್ಟದಂತೆ ಪರಿಣಾಮವನ್ನುಂಟು ಮಾಡಬಲ್ಲನು. ಇದೆಲ್ಲ ಮುದ್ದಣನ ಕತೆ ಹೇಳುವ ನೈಪುಣ್ಯವನ್ನು ತೋರಿಸುವುದು.

ಇದೇ ಸಂದರ್ಭದಲ್ಲಿ ಸಮಯಕ್ಕೆ ತಕ್ಕಂತೆ ಮಾತನಾಡಿಸುವ ಶಕ್ತಿಯೂ ಕಾವ್ಯದಲ್ಲಿ ತೋರಿಬರುವುದು. ತಾನು ಸೀತೆಯನ್ನು ಬಿಟ್ಟು ಹೋಗುವೆನೆಂದು ಲಕ್ಷ್ಮಣನು ಹೇಳುವ ಮೊದಲು ದೇವಿ ಸಂದರ್ಭವನ್ನರಿಯದೆ ಮೈದುನನನ್ನು ಕುರಿತು "ಕಂದ, ಈ ಅಡವಿಯಲ್ಲಿ ಆಶ್ರಮವೆಲ್ಲಿಯದು ! ನೀನು ದಾರಿ ತಪ್ಪಿದೆ," ಎಂದು ಹೇಳುವಳು. ತಾನು ಮಾಡಬಂದಿರುವ ಕೆಲಸದ ಧ್ಯಾನದಿಂದ ಖಿನ್ನನಾಗಿರುವ ಲಕ್ಷ್ಮಣನು ಅತ್ತಿಗೆಯ ಈ ಪ್ರೇಮಪೂರಿತವಾದ ಸಂಬೋಧನೆಯನ್ನು ತಡೆಯಲಾರದೆ ಒಡನೆ ಅವಳ ಕಾಲಿಗೆ ಬಿದ್ದು, "ನನ್ನನ್ನು 'ಕಂದ' ಎಂದು ಕರೆಯಬೇಡಿ, 'ಹಗೆ' ಎಂದು ಎಣಿಸಿ," ಎಂದು ತಾನು ಮಾಡಬಂದಿರುವ ಕಾರ್ಯವನ್ನು ತಿಳಿಸುವನು. ಲಕ್ಷ್ಮಣನ ಮಾತನ್ನು ಕೇಳಿ ದೇವಿ ಮೈಮರೆತು ಮತ್ತೆ ಅರಿದು ಬಹುವಿಧವಾಗಿ ಹಂಬಲಿಸಿ ಕೊನೆಗೆ ತನ್ನ ತಾಯ ತಾಳ್ಮೆಗೆ ಎಣೆಯಾದ ತಾಳ್ಮೆಯಿಂದ ಆ ತಾಯ ಪ್ರೇಮಕ್ಕೆ ಸರಿಯಾದ ಪ್ರೇಮದಿಂದ

ಕಂದ, ನಿನ್ನಲ್ಲಿ ತಪ್ಪಿಲ್ಲ. ನಿಮ್ಮ ಅಣ್ಣನು ಕೇಳಿದರೆ "ನಿನ್ನಾಣತಿಗ ಬಲೆ ಮಱುಗಿದಳಿಲ್ಲ. ಮೞ್ನುಡಿದಳಿಲ್ಲ. ಮುನಿಸಾಂತಳಿಲ್ಲ. ಬೆರ್ಚಿದಳಿಲ್ಲ. ಕೂಟ್ಟುದಿಗೊಂಡಳಿಲ್ಲ. ದೂಱಿದಳಿಲ್ಲ. ನೀನೇ ಗತಿಯೆಂದು ನಿನ್ನಡಿಯಂ ನೆನೆಯುತೆ ಕಡೆಪೊಟ್ತಂ ಪಾರುತಿರ್ಪಳೆ"ಂದು ಬಿನ್ನವಿಸಯ್

ಎಂದು ಹೇಳುವಳು.

ಈ ಮಾತು ದೇವಿಯಲ್ಲಿ ಎಷ್ಟು ಉಚಿತವಾದುದು ! ಹೀಗೆಯೇ ಊರ್ಮಿಳೆ ಮೊದಲಾದವರಿಗೆ ಏನು ಹೇಳುವುದೆಂದೂ ತಾನು ಇನ್ನು ಉಪಯೋಗಿಸಲಾಗದ ವಸ್ತ್ರಾಭರಣಗಳನ್ನು ತನ್ನ ದಾಸಿಯರಿಗೆ ಓರಗಿತಿಯರಿಗೆ ಯಾವ ಯಾವುದನ್ನು ಕೊಡಬೇಕೆಂದೂ ಲೋಕಮಾತೆ ಹೇಳಿರುವುದನ್ನು ಕವಿ ವರ್ಣಿಸಿರುವುದೂ ಸಂದರ್ಭೋಚಿತವಾಗಿ ಹೃದಯದ್ರಾವಕವಾಗಿ ಇವೆ. ಇದನ್ನೆಲ್ಲಾ ಕಾವ್ಯವನ್ನು ಓದಿಯೇ ತಿಳಿಯಬೇಕು.

ಸೀತೆಯನ್ನು ತ್ಯಜಿಸಿರುವುದರಿಂದ ರಾಮನ ವಿಷಯದಲ್ಲಿ ನಮಗುಂಟಾಗಿರುವ ಅಸಂತುಷ್ಟಿಯನ್ನು ಕವಿ ಇಷ್ಟರಲ್ಲೇ ಮನೋರಮೆಯ ಬಾಯಲ್ಲಿ ವ್ಯಕ್ತಗೊಳಿಸಿ ಮುಂದಣ ಕತೆಗೆ ಪಾಠಕರ ಮನಸ್ಸನ್ನು ಹೀಗೆ ಸರಿಪಡಿಸಿಕೊಳ್ಳುವನು.

ಮುದ್ದಣ : ಎನ್ನ ಕೊಂಡಾಟದ ಬಾಟ್ವಣಮೆ ! ಇಂತು ಭೂಜಾತೆ ಪ್ರಾಚೇತಸನೊಲ್ಮೆಗಾಪಿಂ ಪುಣ್ಯಾಶ್ರಮದೊಳಿರ್ಪಿನಮಿತ್ತಲ್ ಸಾಕೇತ ನಗರದೊಳ್ ಸೀತಾರಾಮಂ ತನ್ನ ಬಿರ್ದಿನ...

ಮನೋರಮೆ ; ನಲ್ಲ ! ಏ ಮಾತೊ ? ಸೀತೆಯನಂತುಟಿದುಮೇತಱ ಸೀತಾರಾಮಂ ಪೋ ! ಮಾಣ್ ! ಅವಂಗಿನ್ನೆತ್ತಣ ಸೀತೆ ? ಅಪ್ಪೊಡಿನ್ನಾ ಕಲ್ಲೆರ್ದೆಯಂ ರಾಮನೋ ಭೀಮನೋ ? ಏನ್.

ಮುದ್ದಣ : ಎನ್ನ ಕೈಗಳಸಮೆ ! ಇಂತುಮೆಂಬರೆ ! ಶ್ರೀರಾಮಂ ಕಲ್ಲೆರ್ದೆಯನೆ ! ಆಃ ! ಬಟೆಕ್ಕಮಾತನ ಪ್ರಳಾಪಮಂ ನೀ ಕೇಳ್ದುದಿಲ್ಲಂ.

ಮನೋರಮೆ : ಎಂ ತಾನೆ ತಲೆವೊಯ್ದುಂ ಮಱುಗಿದನೆ ?

ಮುದ್ದಣ : ರಾಮಂ ತಲೆವೊಯ್ದನೇಂ ? ತಾಂ ಯಶೋಧನನಪ್ಪಿನಂ ಲೋಕಾಪವಾದ ಭೀತಿಗಡಪಿಗಟ್ಟಿದರಸಿಯೊಳೇಂ ಪಗೆಯೆ ?

ಮನೋರಮೆ : ಪಗೆಯೇಂ ನಗೆಯೇಂ ? ಬಡವೆಯೊರ್ವಳ್ ಕಾಡಿಂಗಾದಳ್ಕೆಸೆ

ಮುದ್ದಣ : ಇಂತಿದನೆ ನೆನೆನೆನೆದಱುಂಬಂ ಪಲುಂಬಿದಂ.

ಮನೋರಮೆ : ಏಂ ತನಗೆ ಪೆಱರ್ ಪೆಂಡಿರಿಲ್ಲೆಂದೆಯೆ ?

ಮುದ್ದಣ : ಪರಿಹಾಸಂ ಸಾಲ್ಗುಂ ಕೇಳ್; ಏಗಳ್ ಲಕ್ಷ್ಮಣಂ ಸೀತೆಯಂ ಕೊಂಡೊಯ್ದನೆಂಬ ವಾರ್ತೆ ಕೇಳಿಸಿದುದಾಗಳೆ ಪಶ್ಚಾತ್ತಾಪದಿಂ ರಾಘವನ ಮನಮೊಳಗೊಳಗೆ ಬೆಂದು ಬೇಗುದಿಯೊಳಿರ್ದತ್ತು.

ಸೀತೆ ವಾಲ್ಮೀಕಿಯ ಆಶ್ರಮವನ್ನು ಸೇರಿದಳೆಂದು ಕವಿ ಈ ಮೊದಲೇ ತಿಳಿಸಿರುತ್ತಾನೆ. ಹೀಗೆ ಹೆಜ್ಜೆ ಹೆಜ್ಜೆಗೂ ಕತೆ ಹೇಳುವಲ್ಲಿ ಕವಿ ಪಾಠಕರ ಮನಸ್ಸಿನ ಯಾವ ಅವಸ್ಥೆಯನ್ನು ಹೇಗೆ ಉಂಟುಮಾಡಿಕೊಳ್ಳುವುದೆಂದು ಚೆನ್ನಾಗಿ ತಿಳಿದು ಆಯಾ ರೀತಿಯಲ್ಲಿ ಅವರ ಮನಸ್ಸನ್ನು ತಿದ್ದಿಕೊಳ್ಳುವನು.

ಈ ಕಾವ್ಯದ ಪ್ರಕೃತಿ ಸೌಂದರ್ಯದ ವರ್ಣನೆಯ ಸೊಗಸನ್ನು ತೋರುವಂತೆ ಈ ಮೊದಲೇ ಉದಾಹರಣೆಯನ್ನು ಕೊಟ್ಟಿದೆ. ಬಹು ಸುಂದರವಾದ ಮತ್ತೊಂದು ವರ್ಣನೆಯ ವಿಮರ್ಶೆಯಿಂದ ಈ ಅಭಿಪ್ರಾಯವನ್ನು ಪುಷ್ಟೀಕರಿಸಬಹುದು. ಶತ್ರುಘ್ನನು ಸೇನಾಸಮೇತನಾಗಿ ಯಜ್ಞಾಶ್ವದ ಹಿಂದೆ ಪ್ರಯಾಣ ಮಾಡುತ್ತಿರಲು ಮುಂದೆ ಒಂದು ನೀಲಪರ್ವತವು ಕಂಡಿತೆಂದು ಕವಿ ವರ್ಣಿಸುತ್ತಾನೆ.

ಅಡಿಗಡಿಗೆ ಬದ್ದ ಬದಸಿಂ ಪಗೆದು ಪತ್ತುವಿಡಿಸಿ ದೆಸೆಗಿಡಿಸಿದೊಂದು ಬಗೆಗೇಡಿಂ ದೆಸೆದೆಸೆಯ ಕಟ್ಟಲೆಯ ಬಿಂದಮೊಂದುಗೂಡಿ ಗುಂಡುಗೊಂಡು ತಮ್ಮ ಪಗೆಯೆ ಬೆಂಗದಿರನಬೊಂದಿಯಂ ಬಂದಿವಿಡಿವೊಂದು ಅವಣೆಯಿಂ ಬಾಂದಳಮನೇಜೆ ಪೋಪುವೆನೆ ನೆರೆದ ನೀರ್ವೊಟ್ಟಣದೊಳ್ ಬೆಚ್ಚಂತಿರೆ ಮೆಯ್ವೆರ್ಚಿ ನಿಗುರ್ದದೊಂದು ನೀಲಪರ್ವತಂ ಮಾಕಾಳಿಯ ಎಡ ಮೊಲೆಯಂತೆ ವಿರಾಜಿಸಿದತ್ತು. ಅಂತದು ದಟ್ಟಯಿಸಿ ಮುಗಿಲ್ಮುಟ್ಟೆ ಬೆಳೆದ ಕರ್ಮುರಂಗಳಿಱುಂಬಿನ ಬನಗಟ್ಟಲೆಯನೊಳ ಕೊಂಡೇಪೊಟ್ಟುಂಚರಿಪ ಖಗಮೃಗಂಗಳ್ಗೆ ತಣ್ಗೊಳನೊಂದುಭ್ರಾಂತಿಯಂ ಪುಟ್ಟಿಸಿ ಒರ್ತರದಿನಿಂಬುಗೊಂಡ ಕರ್ಮುಣಿಯ ಪಾಸಜೆಯಿಂ. ಅಂದು ಚಂಡಿಕೆಯ ಕೂರ್ವಾಳಿಂಪೋಟ್ಟಿಡಿವೋದ ಮಹಿಷಾಸುರನ ಬಿರಿವೊಡೆಯಿಂ ಸುರಿದ ದಂಡೆಗರುಳ್ಗೆ ಪಾಸಟಿಯಪ್ಪ ಅರೆಜರಿದ ಜಾದಿನ ಕೋಡು ಬೆಟ್ಟ ನೊತ್ತುಗೊಂಡು

ಸಿಂಧೂರವಿಲಿಪ್ತಮದಸಿಂಧುರಗಂಡಮಂಡಲದೊಂದು ಪಾಂಗಿನಿಂ ತೋರ್ಪ ತಟ್ಟಲಿಂ, ಪಗಲ್ಗೆ ಪಡಿನೇಸಱನೆ ಇರುಳ್ಗೆ ಪಡಿದಿಂಗಳೆನೆ ತೊಳಗಿ ಬೆಳಗಿ ಬೆಟ್ಟುವಗೆಯಂ ಪಗೆಯನಿಟ್ಟ ಕುಳಿಸದ ಕಡಿಕಂಡದಂತೊಪ್ಪುವಚ್ಚವಳಿಕಿನ ಗಂಡಶೈಲದಿಂ, ನಿಚ್ಚವಯಣಂಬರ್ಪ ಜಾತ್ರೆಯ ಜನರ ಬಿರ್ದಿನ ಪಗಲೂಟದ ಬಾಣಸಿನಾವಿಗೆಯ ತನಿಗೆಂಡ ದೋವರಿಯೆಂಬಂತು ತಟತಟನೆ ಪೊಳೆವ ರಂಗುಮಾಣಿಕವಟ್ಟೆಯಿಂ, ಪುರುಷೋತ್ತಮನ ನಿಡುವಣೆಯ ತ್ರಿಪುಂಡ್ರದೊಂದು ಮಾಟ್ಕೆಯಿಂ ಮೂರುಂಕೆಲನೊಳಿಟೆತರ್ಪ ಬೆಳ್ಳಂಬರಿವರ್ಬಿಯಿಂ, ಉಣ್ಣದರುಣ್ಪಮರ್ದುಮರ್ದಮರ್ದಪೊಂಬಾಟೆದೋಂಟ ದೊತ್ತಿನ ಪೇರುಚ್ಚದಿಂ, ಸಿದ್ಧರಸದ ಮಡುವಿಂ, ಪರುಸಗಲ್ಲಳಿಂ ಮನೋಜ್ಞಂ.

ಈ ವರ್ಣನೆಯಲ್ಲಿ ಚಿತ್ರಗಾರನು ಚಿತ್ರ ಬರೆಯುವುದರಲ್ಲಿ ಯಾವ ಉಪಾಯಗಳನ್ನು ಉಪಯೋಗಿಸುವನೋ ಆ ಉಪಾಯಗಳನ್ನೆಲ್ಲ ಕವಿ ಉಪಯೋಗಿಸಿರುವನು. ಈ ಪರ್ವತದ ವರ್ಣನೆಯುದ್ದಕ್ಕೂ ನೀಲಿಮೆಯ ಸಂಕೇತ ಮತ್ತೆ ಮತ್ತೆ ಮೈದೋರುತ್ತದೆ. ಕತ್ತಲೆಯ ವೃಂದ; ನೆರೆದ ನೀರ್ವೊಟ್ಟಣ; ಮಾಕಾಳಿಯ ಎಡಮೊಲೆ; ಕರ್ಮಣಿಯ ಪಾಸರೆ; ಚಂಡಿಕೆ; ಮಹಿಷಾಸುರ; ಸಿಂಧುರಗಂಡಮಂಡಲ; ಬಾಣಸಿನ ಆವಿಗೆ; ಪುರುಷೋತ್ತಮನ ನಿಡುವಣೆ; ಪೊಂಬಾಳೆಯ ತೋಟ. ಈ ನೀಲಿಮೆ ಚಿತ್ರದ ಒಟ್ಟಿನ ಬಣ್ಣ; ಈ ಒಟ್ಟಿನ ಬಣ್ಣದ ಮೇಲೆ ಒಂದೆರಡು ಬೇರೆಯ ಬಣ್ಣಗಳು. ಮಹಿಷಾಸುರನ ದಂಡೆಗರುಳು, ಅಚ್ಚವಳಿಕಿನ ಗಂಡಶೈಲ; ತನಿಗೆಂಡದಂತಿರುವ ರಂಗುಮಾಣಿಕ; ಮೂರು ಕಡೆಯಿಂದ ಪುರುಷೋತ್ತಮನ ಹಣೆಯ ತ್ರಿಪುಂಡ್ರದಂತೆ ಹರಿದುಬರುವ ಬೇರೆ ಬೇರೆ ಬಣ್ಣದ ನೀರಿನ ಧಾರೆ; ಸ್ಪರ್ಶಶಿಲೆ. ಆ ಒಟ್ಟು ಬಣ್ಣದ ಮೇಲೆ ಈ ಬಣ್ಣಗಳು ಅಂದವಾಗಿ ಲೇಪಿಸಲ್ಪಟ್ಟು ಚಿತ್ರ ಸುಂದರವಾಗಿದೆ. ಸಾಮಾನ್ಯವಾಸ ಪರ್ವತವೊಂದನ್ನು ಅದರ ಸೌಂದರ್ಯವನ್ನು ಗ್ರಹಿಸುವ ಬುದ್ಧಿಯಿಂದ ವರ್ಣಿಸುವ ಸಂದರ್ಭದಲ್ಲಿಯೂ ಈ ಲಕ್ಷಣಗಳು ಕಂಡು ಬರಬಹುದು; ಆದರೆ ಇಲ್ಲಿ ಪರ್ವತವು ಪಾವನವೂ ಪುಣ್ಯಾಶ್ರಯವೂ ಎಂಬ ಒಂದು ಧ್ವನಿಯೂ ಇದೆ. ಮಾಕಾಳಿ; ಮಹಿಷಾಸುರನನ್ನು ಹಿಡಿಯಹೋದ ಚಂಡಿಕೆ; ದಿನವೂ ಬರುತ್ತಿರುವ ಯಾತ್ರಿಕರು; ಪುರುಷೋತ್ತಮನ ನೀಳವಾದ ಹಣೆ. ಒಟ್ಟಿನ ಚಿತ್ರ ಸುಂದರವಾಗುವುದಲ್ಲದೆ ಅದರ ಒಂದೊಂದು ಭಾಗವೂ ಸಂಪೂರ್ಣವಾಗುವಂತೆ ಕರ್ಮಣಿಯ ಪಾಸರೆಯನ್ನೂ, ಪರ್ವತದ ತಳ್ಪಲನ್ನೂ, ಗಂಡಶೈಲವನ್ನೂ, ರಂಗು ಮಾಣಿಕದ ಅಗಟ್ಟೆಯನ್ನೂ, ನೀರಿನ ಧಾರೆಯನ್ನೂ ಕವಿ ವಿವರವಾಗಿ ವರ್ಣಿಸಿರುವನು. ಎಲ್ಲಕ್ಕೂ ತಕ್ಕ ಮಾತು; ಮಾತಿನ ನೆರಿಗೆಯಲ್ಲಿ ಸಣ್ಣ ಮಾತು ದೊಡ್ಡ ಮಾತು ಸೇರಿದೆ. ಮಾತುಗಳ ಯುಕ್ತಿ ಯುಕ್ತವಾದ ವ್ಯೂಹ ರಚನೆಯಿಂದ ವಾಕ್ಯದ ಶಬ್ದ ಮೃದುವಾಗಿ ಕೊನೆಯಾಗಿದೆ. ಈ ವರ್ಣನೆಯ ಚಿತ್ರಕಾರ್ಯ ಅಜಂತದ ಚಿತ್ರಗಳ ಕೌಶಲವನ್ನೂ ಇದರ ಶಬ್ದದ ಸೌಂದರ್ಯ ಶಾಸ್ತ್ರಾನುಗುಣವಾಗಿ ಮೃದಂಗದಲ್ಲಿ ನುಡಿಸಬಹುದಾದ ಒಂದು ಆವರ್ತದ

ನಾದತರಂಗದ ಸೌಂದರ್ಯವನ್ನೂ ಹೋಲುವುದು. ಈ ವರ್ಣನೆ ಭಾವನೆಯಲ್ಲಿಯೂ ಊಹೆಯಲ್ಲಿಯೂ, ಶೈಲಿಯಲ್ಲಿಯೂ ಸಾಹಿತ್ಯ ಸಾಮ್ರಾಜ್ಯದ ಎಲ್ಲೆಯನ್ನು ಮುಟ್ಟಿರುವುದು.

ಈ ಕವಿ ಉಳಿದ ರಸಗಳನ್ನು ಸ್ವಾಧೀನ ಮಾಡಿಕೊಂಡಿದ್ದಂತೆಯೇ ಹಾಸ್ಯವನ್ನೂ ಪಡೆದಿದ್ದನೆಂದು ಈ ಕಾವ್ಯದಲ್ಲಿ ಅಲ್ಲಲ್ಲಿ ತೋರುತ್ತದೆ. ಸತಿಪತಿಯರ ಆರಂಭ ಸಂಭಾಷಣದಲ್ಲಿ ಇದು ಕಾಣುವುದು. ಇದರಂತೆ ಇನ್ನೆರಡು ಸಂವಾದಗಳಿಂದ ಈ ರಸ ಧಾರಾಳವಾಗಿ ಉಕ್ಕಿ ಬರುವುದು. ಈ ಸಂವಾದಗಳಲ್ಲಿ ಈ ಕಾವ್ಯಕ್ಕೆ ಒಂದು ಅಪೂರ್ವವಾದ ಸೊಗಸು ಬಂದಿರುವುದರಿಂದ ಇವುಗಳನ್ನು ಇಲ್ಲಿ ಉದ್ಧರಿಸಿದೆ. ಕಥೆ ಹೇಳುತ್ತಾ ಮುದ್ದಣನು ಮನೋರಮೆಯನ್ನು ಒಂದು ಸಲ 'ದೇವಿ' ಎಂದು ಸಂಬೋಧಿಸುವನು, ಸ್ವಲ್ಪ ಹೊತ್ತು ಕತೆಯನ್ನು ಕೇಳಿದ್ದು ಕವಿಯೊಡನೆ ಎರಡು ಮಾತನಾಡೋಣವೆಂದು ಆಕೆ, ಯಾವ ದೇವಿ, ಶ್ರೀದೇವಿಯೇ, ಭೂದೇವಿಯೇ ಎಂದು ಸಂಭಾಷಣೆಯನ್ನು ಮೊದಲು ಮಾಡುವಳು. ಆಮೇಲೆ ಮಾತು ಹೀಗೆ ನಡೆಯುವುದು :

ಮುದ್ದಣ : ರತಿದೇವಿ.

ಮನೋರಮೆ : ಅಂತಪ್ಪೊಡೆ ನೀಂ ಕಾಮದೇವಂ.

ಮುದ್ದಣ : ಅಕ್ಕೆ ದೇವಿಯೊಂದು ಹಸಾದಂ.

ಮನೋರಮೆ : ಎಲೆ ಮದನ ಮೋಹನರಾಜ ! ಅಂತಿರ್ಪೊಡೆ ನೀಂ ಪೇಟ್ದಿ ರತಿಯನೆ ಬಣ್ಣಿಸಿ ಪೊಗಟ್ ನೋಟ್ಪೆಂ.

ಮುದ್ದಣ : ಓ ! ಏತಱ ಮಾತೊ ! ಎನ್ನಳವೆ ?

ಮನೋರಮೆ : ಆಃ ! ರತಿಯಂ ಬಣ್ಣಿಸಲ್ಕೆ ಸಲ್ಲದ ನೀನೇತರ ಕಾಮದೇವಂ ?

ಮುದ್ದಣ : ಅಂತಪ್ಪೊಡೆ ಸಲ್ವೆಂ ಸಲ್ವೆಂ; ಕಾಮದೇವನೆಂಬೊಂದು ಬಿರುದಂ ಪಡೆದುಮಾಜಿನೆ ? ತೆಗಟ್ಬಿರಿರ್ಕೆ. ಇದೆ ಇದೆ ತೊಡಂಗಿದೆಂ. ಅಸಿದೊಡಲ ಪೂಗಣ್ಣ ಪೆಣ್; ಸಸಿಮೊಗದ ಕಿಸುವಾಯ ಪುಸಿನಡುವಿ ನರಸಿ; ಮಿಡಿಮೊಲೆಯ ಪಿಡಿನಡೆಯ ಬಿಡುಜಡೆಯ ನೀಱೆ; ಬೆಟ್ಟು..

ಮನೋರಮೆ : (ಅರೆನೋಟದಿಂ) ಅಃ ! ಕಬ್ಬಿಗರ್ಗೆ ನೀಂ ಕಲ್ಲಾಯ್ತು ನಕ್ಕುಂ ಎಂದುಂ ಕಾಣದರೊಂದು ಪಾಂಗಿನಿಂ ಪೇಟ್ದಿ ಪೊಚ್ಚರದ ನಿನ್ನೀ ಬಣ್ಣನೆಯನುಡಿಗೇನೆಂಬೆನೊ ! ಒಡಲಸಿದೇಂ ? ಮೊಗದೊಳೇತಱ ಸಸಿ ? ಕಣ್ಗೊಳೇತಱಪೂ ? ನಡುವಿನೊಳೇಂ ಪುಸಿ ? ಎಂದು ಬಾಯಂ ಕಿಸಿದಳ್. ಜಡೆಯಂ ಬಿದಿರ್ಚಲ್ಕೇಂ ದೆವ್ವಮಾಳ್ದುದೆ ? ಪೋ, ನೀಂ ಕಾಮನಲ್ತು ಭೀಮಂ.

ಮುದ್ದಣ : (ಕಿಱುನಗೆಯಿಂ) ಎನ್ನ ಕುಲದೇವಿ! ಇನಿತೊಂದು ಮುನಿಸೇಂ. ಎನ್ನನಗೆಯಿನಿಂತಾಯ್ತಕ್ಕುಂ; ಸೈರಿಸು! ಸೈರಿಸು! ನುಡಿ ನಿಱಿಗೆಯಂ ಬೆದಂಕಿ ಪಾರದಂತುಂ ಇರ್ದಂತೆ ಬಣ್ಣಿಪೊಂದು ಜಾಣ್ಮೆ ದೊರೆಕೊಳ್ವಂತುಂ ಬಾಸೆವೆಣ್ಣೊಂದೊಲ್ಮೆದಾಳ್ದಿ ವಾಕ್ಸಿದ್ಧಿಯಂ ಪಡೆದು ನಿನ್ನಂ ಎನ್ನ ಜನ್ನದಾರದಾಣೆ! ರತಿಯಿಂ ನೂರ್ಮಡಿ ಮಿಗಿಲೆನಿಸಿ ಬಣ್ಣಿಪೆಂ. ಸುವ್ವಿ! ಸುವ್ವಿ! ನಾಲ್ಮೊಗನಗ್ಗಿಟ್ಟಿಕೆಯೊಳೊಗೆದ ಒಳ್ನಗೆಯ ಮುದ್ದುಗುವರಿ! ಸುವ್ವಿ! ಸುವ್ವಿ! ಬೀಣೆ ಪೊತ್ತಗೆಗಳಂ ಪೊತ್ತಕೈಯ ಚಲ್ವೆ! ಸುವ್ವಿ! ಸುವ್ವಿ! ಬಾಣಿ. ಎನ್ನೀ ಮಡದಿರನ್ನೆಯಂ ರತಿಗೆಣೆಯೆಂದು ಪೊಗೞ್ದು ಪಾಡುವೊಂದು ಜಾಣ್ಮೆಯ ಪೊರ್ದುಗೆಯ ನುಡಿ ಬಿನ್ನಣಮನೆನಗೆ ಕರುಣಿಸೌ! ನಿನಗೆಱಗುವೆಂ. ಸುವ್ವಿ! ಆ! ಆ! ಆ! ಆ!! ಆ!!!

ಮನೋರಮೆ : ನೀಂ ಗೈದ ಸರಸತಿಯ ಪೊಗೞ್ಕೆಯ ತುತ್ತ ತುದಿಯ "ಆ! ಆ!!" ಏಂ ?

ಮುದ್ದಣ : ಸಂತದು ಪಾಡಿನ ಜೋಡಿನ ದಾಟಿಯ್ಯೆಸೆ.

ಮನೋರಮೆ : ಆಯ್ತಾಯ್ತು ಚೆಲ್ವ. ಏಂ ನಿನ್ನಂ ಸರಸತಿಯೊಲ್ದಳ್ ?

ಮುದ್ದಣ : ಎಂತೆಂತೊ ಪಾಡಿ ಬೇಡಿ ಒಲ್ಮೆವಡೆದೆಂ. ಈಗಳೆನಸುಂ ತಡಂಬಡದೆ ಬಣ್ಣಿಸಿ ನಿನತೊಂದೊಲ್ಮೆವಡೆದಪೆಂ ಕೇಳ್! ಮಾಕಾಳಿಯ ಮೈವೊಗರ್ಗೆ.........

ಮನೋರಮೆ : ನಿನ್ನ ರತಿಯಂ ಬಣ್ಣಿಪೊಂದು ಸಂಧಿಯೊಳ್ ಮಾಕಾಳಿಯೊಳೇಂ ಕಜ್ಜಂ ?

ಮುದ್ದಣ : ಅಃ! ಎಡರ್ಗೇಡಿಯನೆ ಮಱೆತೆಂ; ಆತನಂ ಬಲಂಗೊಳದಿರ್ಪಿನಂ ಮೊತ್ತಮೊದಲಿನೊಳಿನಿತುಂ ವಿಘ್ನಂ. ಓ ಓ! ಒರ್ಪನೆಯ ಬಿಂಕಣಿಗಿವಿಯ ಮೂಗೊಂಕು ಮೂಗಿನ ಪೇರೊಡಲ ಇಲಿದೇರ ಬೆನಕ! ಇದೆ ಮಣಿವೆಂ. ಈ ರಮಣೀಯಮಪ್ಪ ರತಿದೇವಿಯಂ ಬಣ್ಣಿಪೊಂದು ಕವನದ ಕಜ್ಜದುಜ್ಜುಗದನಿತೊಂದು ಪೊೞ್ತನೀವಾಟ್ಕೆಯೊಳಮೆಡರ್ ಬಾರದಂತು ಕಾವುದು. ಇನಿತೊಂದು ಮೇಲನೊಡರ್ಚಿದೆಯಪ್ಪೊಡೆ ಆ ಬಣ್ಣನೆಯ ಪೊಗೞ್ಕೆಯಪಾಡಿಂಗೊಲ್ವೆನ್ನೀ ಮಡದಿ ಕೂರ್ಮೆಯಿ ನೆನಗೆ ತಿನವಡಿಸುವಾ ಪಸುಗೆಯ ಚಕ್ಕುಲಿಯಂ ಗಾರಿಗೆಯಂ ಪುರಿಗಡಲೆಯು ನವಲಂ ಕರ್ಬಂ ತೇಂಗಾಯುಂ ನಿನಗಂ ಪಾಲಿತ್ತು ಮೊದಲೊಳರ್ಪಿಸುವೆಂ.

ಮನೋರಮೆ : ನಿನ್ನ ಬೆನಕಂ ಒರ್ಪನೆವಾಯೊಳೆಂತುಣ್ಗುಂ.

ಮುದ್ದಣ : ಏಂ ರಮಣಿ ದೇವರುಣ್ಬರೆ ? ಉಣ್ಬೊಡಂತೆಂಬೆನೆ ?

ಮನೋರಮೆ : ಮೇಣ್ಗೊರ್ವನೆ ತಿನಲ್ ಬಗೆವಾ!

ಮುದ್ದಣ : ನೀನೀವುದೇಂ ದಿಟಂ.

ಮನೋರಮೆ : ಎತ್ತಾನುಮಿತ್ತೊಡೇಂ ಗೆಯ್ವಯ್.

ಮುದ್ದಣ : ಇಸ್ಸಿ ! ಅನಿತ್ತು ಭಕ್ಷ್ಯಮನೊರ್ವನೆ ನುಂಗಲಾರ್ಪನೆ ? ಚಕ್ಕುಲಿ ಗಾರಿಗೆಗಳ್ ಕಾಮದೇವಂಗೆ; ಅವಲುಂ ಪುರಿಗಡಲೆಯುಂ ಮುದ್ದಣಂಗೆ; ಕಬ್ಬು ಕಬ್ಬಿಗಂಗೆ; ತೇಂಗಾಯೆನಗ್ಗೈಸೆ.

ಮನೋರಮೆ : ನೀಂ ಜಾಣಂ. ನಿನ್ನ ರತಿದೇವಿಗೇಂ ?

ಮುದ್ದಣ : ತಾನೆ ಒಲ್ದಿೀವ ದೇವಿಗಾವುದಜೊಳಾಸೆಯೊ ?

ಮನೋರಮೆ : ಅಂತಿರೆಯುಂ ಮನೋರಮೆಗೇಂ ?

ಮುದ್ದಣ : ಓವೊ ! ರತಿಯಂ ಬಣ್ಣಿಪೊಂದು ಬೆಸನದೊಳ್ ಮನೋರಮೆಯಂ ಮಜೆದುಟಿದೆಂ; ಅಕ್ಕೆ ! ಕಜ್ಜಿನ ಸಿವುರುಂ ಮುಗ್ಗಿದ ಗಾರಿಗೆವುಡಿಯುಂ ಮನೋರಮೆಗಿರ್ಕೆ

ಮನೋರಮೆ ನೀಂ ಬಲ್ಲಡಸುಗಾಜಿಂ ಸಾಜಂ; ಇರ್ಕೆ; ನೀಂ ಮನದೊಳೆ ಮಂಡಿಗೆಯನುಂಡಂತಾಯ್ತು. ಈಗಳಿಂ ಕೇಳ್ವೆಂ ರತಿಯ ಪೊಸ ಬಣ್ಣನೆಯಂ.

ಹೀಗೆ ಇನ್ನೆರಡು ಮಾತನಾಡಿ ಕವಿ ಕವಿತೆಯನ್ನು ಮತ್ತೆ ಆರಂಭಿಸುವನು.

ಹಾಸ್ಯರಸಯುಕ್ತವಾದ ಇನ್ನೊಂದು ಸಂವಾದವನ್ನು ಮನೋರಮೆಯೇ ಆರಂಭ ಮಾಡುವಳು. ಶತ್ರುಘ್ನನು ಸೈನ್ಯದೊಡನೆ ಒಬ್ಬ ತಪಸ್ವಿಯ ಆಶ್ರಮಕ್ಕೆ ಹೋಗಲು ಆತನು ಶತ್ರುಘ್ನನನ್ನೂ ಸೈನ್ಯವನ್ನೂ ಮನ್ನಿಸಿ ಮೃಷ್ಟಾನ್ನ ಭೋಜನದಿಂದ ತಣಿಸಿ ಸತ್ಕರಿಸಿದನೆಂದು ಕವಿ ಹೇಳುವನು.

ಮನೋರಮೆ : ಎನಗಿದಚ್ಚರಿ ಎಂತುಟಾರ್ತಂ ?

ಮುದ್ದಣ : ಮುನಿಗಳೊಂದು ಜಪದ ತಪದ ಮಂತ್ರದ ಬಲ್ಮೆಯೇಂ ಕಿಜಿದೆ ? ಬೇಡಿದ ಪುರುಳನುಜಿದಿಂ ತಂದೀಗುಂ.

ಮನೋರಮೆ : ಓ ! ಇನಿತೊಂದು ಜಪದ ಬಲ್ಮೆ ನೆರಮಿರ್ಪೊಡಂ ಪೆಜಿತೊಂದಜಿ ಗೊಡವೆಯಿಲ್ಲದಿರ್ಕುಂ ತಾಪಸರ್.

ಮುದ್ದಣ : ಅಪ್ಪುದಪ್ಪುದು, ತಪ್ಪೇಂ ?

ಮನೋರಮೆ : ಅದಂತಿರ್ಕೆ, ನಿನ್ನನ್ನರಪ್ಪ ಕಬ್ಬಿಗರ್ ಮನೆವಾರ್ತೆಯೊಳಿನಿಸೊಂದುಂ ಗೊಡವೆಗೊಳ್ಳದೆ ಕೆಮ್ಮಕೆಮ್ಮನೆ ಪಾಜ್ಗಿತೆಂಯು ಕಬ್ಬದೊಳೇವೊಟ್ಟುಂ ಬೆಮೆಗೊಂಡಿರ್ಪರಲೇ. ಅವರ್ಗೇಂ ಬಟ್ಟೆಯೊ ? ಉಣಲೇಂ ತಿನಲೇಂ ? ಅಂತಿರೊಂದು ಜಪಮಂ ಪಿರಿಯದವಸಿಗಳತ್ತಣಿನುಪದೇಶಂಗೊಂಡೊಡಾಗದೆ ?

ಮುದ್ದಣ : ( ಮುಗುಳ್ನಗೆಯಿಂ) ಏಂ ಎನ್ನುವರೊಂದರವಿಗೆ ನಗುವಾ ? ಅಃ ! ಎಮ್ಮನ್ನರಪ್ಪ ಕಬ್ಬಿಗರ್ಗೇಂ ಕೊರತೆಯೋ ! ತಾನೆ ಬಯಸಿದೊಡಮೆಯನಾಗಳೇ ತಂದೀವ ಮಂತ್ರದ ಜಪದೊಂದು ನೆರಂ ತಮ್ಮೊಳೊಂದಿರದೊಡಲ್ತೆ ಕಾಡಜೋಗಿಗಳತ್ತಣಿನುಪದೇಶಂ ನಾಡಂ ಕಾಡಂ, ಕಾಡಂ ಬೀಡಂ ಗೆಯ್ವೊಂದು ಪೆರ್ಮೆಯ ಬಲ್ಮೆಯ ಕಬ್ಬಿಗರೇಂ ಕಕ್ಕುಲಿತೆಯ ಮುದುದವಸಿಗಳತ್ತಣಿಂ ಪಿರಿಯರಾಗರೆ ? ನುಡಿವರೇ ನದುವೆ ಪುರುಳ್. ಪಿಡಿವರೇನದುವೆ ತಿರುಳ್. ಪಲವೇಂ ಕೆಲವೇಂ ? ತಮ್ಮೊಂದೆ ನುಡಿಯಬಲ್ಪಿಂ ಮೂಜಗಮುಮನಟೆಯಿಸುವ ಪೊಗಟ್ವೆ ಕೊಳ್ವಾಳ್ವ ತಾಳ್ವ ತೂಳ್ವ ಪೂಟ್ವೆ ಪೇಟ್ವೆ ಬಾಟ್ವೆ ಸಿಂಗರದ ಬಣ್ಣಗಬ್ಬಿಗರೆಮ್ಮ ತೆಱನನಿನ್ನುಂ ನೀನಱಿಯಯ್.

ಮನೋರಮೆ : (ಬಿಸವಂದಂಗೊಂಡು) ನಿಮ್ಮವರ್ಗಮಂತಿರೆ ಮಂತ್ರಂ ಸಿದ್ಧಿವರ್ಕುಮೆ ?

ಮುದ್ದಣ : ತಡೆಯೇನಳ್ಕೇಂ ?

ಮನೋರಮೆ : ನಿನ್ನೊಳಮೊಳವೆ ?

ಮುದ್ದಣ : ಎನ್ನೊಳಿಂತಿದು ಪಾಸುವೊಕ್ಕು.

ಮನೋರಮೆ : ಅಃ ! ನೀನುಂ ಬಲ್ಮ್ಮೆಮೆಗಾಱಂ, ನಿನಗಾರತ್ತಣಿನೆಂದುಪದೇಶಮಾಯ್ತು ?

ಮುದ್ದಣ : ಗುರುವತ್ತಣಿನಂದೆಳವೆಯೊಳೆ.

ಮನೋರಮೆ : ಎನ್ನೆಱೆಯ ! ಅದಾವುದೊ ಮಂತ್ರಮೆನ್ನೊಳುಸಿರ ?

ಮುದ್ದಣ : ಆಃ ! ಒಳ್ಳಿತೊಳ್ಳಿತು !! ಮಂತ್ರಂಗಡ ! ತನಗೊರೆವುದು ಗಡ ! ಚಃ ! ಚಃ ! ಪೆಣ್ಗಳ್ಗೀಮಂತ್ರೋಪದೇಶಂ ಸಲ್ವುದೆ ?

ಮನೋರಮೆ : ಆನಱಿಯೆನೆ ! ನಿನ್ನತ್ತಣಿನುಪದೇಶಂ ಬೇಡುವೆನೆ ! ನೀನಾಗಳೆಂದ ಮಂತ್ರಂಗಳೊಳಾವುದದಱ ಪೆಸರೇನೆಂದೆ ಕೇಳ್ದೆಂ.

ಮುದ್ದಣ : ಆಗಳೆಂದ ಮುನಿಗಳ ಮಂತ್ರಂಗಳೊಳಲ್ತು. ಎಮ್ಮ ಮಂತ್ರಂಗಳ ಬಗೆ ಬೇಱೆ, ಮೂಱೆರಡಕ್ಕರದ ಮಂತ್ರಗಳೆಮಗಕ್ಕುಮೆ ! ಎಮ್ಮತಂತು ಕಿಱಿದಲ್ತುಬಲ್ಪಿರಿದು. ಒಂದಕ್ಕರಮಲ್ತೆರಲ್ತು ಮೂಱಲ್ತು. ನಾಲ್ಕೈದುಲ್ತು, ಆಱುಮಲ್ತು. ಏಟಕ್ಕರದ ಬೀಜಮಂತ್ರಂ. ಅಂತದಱಿಂ ಸರ್ವಮಂತ್ರಗಳ್ಗೆ ತಲೆಯೊಳಿರ್ದು ಮೇಲೆನಿಪ್ಪ ಸಪ್ತಾಕ್ಷರೀ ಮಂತ್ರಮೆಂದು ಪೆಸರ್.

ಮನೋರಮೆ : ಹಾಹಾ ! ಆ ಮಂತ್ರಕ್ಕಭಿಮಾನದೇವತೆ ಯಾವುದು ? ಮುನ್ನಮಾರಿದಂ ಜಪಿಸಿ ಸಿದ್ಧಿಗಂಡರ್ ?

ಮುದ್ದಣ : ಪೋಪೋ ? ಇಂತಿವಱಂ ಕೊಂಡೇಂ ಕಜ್ಜಂ ?

ಮನೋರಮೆ : ಇರ್ಕೆ, ಕೇಳೆಂ.

ಮುದ್ದಣ : ಅಂತಾದೊಡೆ ಕೇಳ್ ಪೇೞ್ವೆಂ. ಇಂತೇರ್ಪಟ್ಟಮಂತ್ರ ದಧಿದೇವತೆ ಜ್ಯೇಷ್ಠೆ. ವಮುನ್ನಮೀಶ್ವರಂ ತನ್ನೊಂದು ಲೀಲೆಂನೊಳ್ ಜಪಿಸಿ ಸಿದ್ಧಿಗೊಂಡನಂತದಱನಾತನೆ ಋಷಿ.

ಮನೋರಮೆ : ಓ ಓ ! ಇಂತುಟೆ ಮಂತ್ರದೊಂದು ಮೈಮೆ ! ಎಲೆ ರಮಣ ! ನಿನ್ನಡಿಗಳ್ಗೆಱಗುವೆಂ ಎನ್ನತಿನಿತೊಂದು ಬಿನ್ನಪಂ. ಅಂತು ಸಂದಸಿದ್ಧಿಯ ಮಂತ್ರಮಾವುದೊ ಕೂರ್ಮೆಯಿಂ ತಿಳಿಯೆ ಪೇೞ್.

ಮುದ್ದಣ : ಆಗಳೇ ಪೇೞ್ದೆನಲ್ತೆ ಸಪ್ತಾಕ್ಷರೀಮಂತ್ರಮೆಂದು.

ಮನೋರಮೆ : ಅಂತು ಪೆಸರನಲ್ತು ಮೂಲಮನೆ ಕುರಿತೆನ್ನೊಳಾಡಿ ತೋಱ.

ಮುದ್ದಣ : ಅಬ್ಬಾ ! ಪೆಣ್ಣೇಂ ಗಡಸುಗಾರ್ತಿಯೊ ! ಆಗಳ್ ಪೆಸರೇನೆಂದಳ್; ಈಗಳ್ ಮೂಲಮಂ ಕೇಳ್ವಳ್. ಇನ್ನೇವಳೋ ? ಮೂಱಟೆಯ ಜನ್ನದಾರದಾಣೆ ! ಉತ್ತರಿಗೆಯಾಣೆ ! ಆಗದಾಗದು. ಕೇಳ್ವುದರ್ಕೆ ಪೇೞ್ವುದರ್ಕೆ ನಿಮಗಧಿಕಾರಮಿರದು. ಕಣ್ಗೆ ಕಾಲ್ಗೆ ಕೇಡು !

ಎಂದು ಮತ್ತಷ್ಟು ಚರ್ಚೆ ಮಾಡಿ "ನೀಡುಂ ಭಾವಿಸಿ"

ಮುದ್ದಣ : ಎಲೆ ಪೆಣ್ಣೆ ! ನೀನಾರೊಳಮೆಂದೆಂದಿಂಗಮುಸಿರಲ್ಬಾರದು ಜೋಕೆ.

ಮನೋರಮೆ : ಎಂದುಮೆಂತುಮುಸಿರೆನಾಡೆಂ.

ಮುದ್ದಣ : ಅಂತಾದೊಡಿಂತಿದು ಕೇಳ್. ಭ...ವ...ಪೆಱರೊಳಾಡೆನೆಂಬ ನಂಬುಗೈಯಂ ಪೊಯ್.

ಮನೋರಮೆ : ಇದೆ. ಪಿಡಿ ನಂಬುಗೈಯಂ ನಿನ್ನಾಣೆ, ಕುಲದೈವದಾಣೆ, ಎಂದುಂ ಪೆಱವರೊಳೊರೆಯೆಂ.

ಮುದ್ದಣ : ಉಂ ! ಭವ...ತಿ...ಭಿ...ಪೆಣ್ಗಳಂ ನಂಬಲಾಗದೆಂಬರ್ ಬಲ್ಲರ್. ನೀನೆಂತೊ ಮಱವೆಯೊಳ್ ಪೆಱರೊಡನುಸಿರ್ದುರ್ ಗುಟ್ಟಂ ಬಿಟ್ಟೊಡೆಮ್ಮನ್ನರಬಾೞ್ ಪಾೞಕ್ಕುಂ.

ಮನೋರಮೆ : ಆನೇಂ ಮೋಡೆಯೇ ! ಪೋ ! ತನ್ನಾಣೆ ಕಣ್ಣಾಣೆ ಪೇೞೆಂ.

ಮುದ್ದಣ : (ಎಕ್ಕಟಿಯೊಳ್) "ಭವತಿ ಭಿಕ್ಷಾಂ ದೇಹಿ" ಎಂಬುದಿಸುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತಾಕ್ಷರೀಮಂತ್ರಂ. ಆರೊಳಾನುಮುಸಿರದಿರ್.

ಮನೋರಮೆ : (ಅರೆಮುನಿಸಿಂ) ಪೋ ಮಾಣಿಲೆ ರಮಣ ! ನಿನ್ನ ನುಡಿಯಿಂ ಸಾಜಂ ನಿಕ್ಕುವಮೆಂದೇ ಬಗೆದೆಂ. ಈತೆಱನ ಮಾಟದ ಕವಡು ನುಡಿಯ

ಕೊಂಕೆಂಬುದನರಿಯದಾದೆಂ. ನೀಂ ಕಬ್ಬಿಗನೋ ಸಬ್ಬವಕಾಱನೊ ? ನಿನ್ನೀ ಕಬ್ಬದ ಸೊಗಸೆಮ್ಮನ್ನರಪ್ಪ ಜಾಣೆಲಿವೆಣ್ಗಳೆ ಕೊಂಡಾಡುವರಲ್ಲದೆ ಬಲ್ಲರೇನೊಲ್ವರೆ ?

ಮುದ್ದಣ : ಸಾಲ್ಗುಮೀ ಪರಿಹಾಸಂ. ಮುಂಗತೆಯಂ ಕೇಳ್.

ಮುದ್ದಣ ಮನೋರಮೆಯರ ಸಂವಾದವನ್ನು ನೋಡಿದವರಿಗೆ ಇದರಂಥ ಇನ್ನೆಷ್ಟು ಸಂವಾದವನ್ನಾದರೂ ಓದಬಹುದೆಂದು ಎನ್ನಿಸುವುದು. ಈ ಕಾರಣದಿಂದಲೂ ಕಾವ್ಯದ ವಿಷಯದಲ್ಲಿ ನಮ್ಮೆಲ್ಲರ ಅಭಿಪ್ರಾಯವನ್ನು ಮನೋರಮೆ ಸೂಚಿಸುವಳಾದ ಕಾರಣದಿಂದಲೂ ಈ ಕವಿಯ ಜೊತೆಗೆ ಇಲ್ಲಿ ಮಾಡಿರುವ ಪರಿಚಯವನ್ನು ಸಂತೋಷವಾಗಿ ಮುಗಿಸುವುದೆಂಬ ಉದ್ದೇಶದಿಂದಲೂ ಈಗ ಈ ಕಾವ್ಯದ ಉಪಸಂಹಾರದ ಸಂಭಾಷಣವನ್ನೂ ಇಲ್ಲಿ ಕೊಡಬಹುದು. ರಾಮನು ಸೀತೆಯನ್ನು ಕರೆದುಕೊಂಡು ಪಟ್ಟಣಕ್ಕೆ ಹೋದನೆಂದು ಕವಿ ಹೇಳಲು ಮನೋರಮೆ, "ಓ ! ರಾಮನೊಳ್ಪಿದನಕ್ಕೆ! ಸೊಗಂ ಬಾಟ್ಗೆ! ರಾಮಂಗೆ ಗೆಲವಕ್ಕೆ! ರಾಮನಂ ಕೊಂಡಾಡುಗೆ !" ಎಂದು ಹಲವು ವಿಧವಾಗಿ ಹರಸುವಳು. ಮುದ್ದಣನು "ನೀನು ಹರಸುವ ಹರಕೆ ಬಹಳ ಸೊಗಸು" ಎಂದು "ಇನ್ನೆತ್ತಂ ನಿರಾಮಯಂ, ನಿರಾಕುಳಂ; ಸುಭಿಕ್ಷಂ; ಶಾಂತಿ......." ಎಂದು ಹೇಳತೊಡಗುವನು.

ಮನೋರಮೆ : ಏನೆಲೆ ರಮಣ ! ಇಂದಿದೇನೆತ್ತಣ ಶಾಂತಿ ಗೀಂತಿಗಳ್ ? ಅಂತಪ್ಪೊಡೆ ನೀಂಪೇೞ್ವ ನಲ್ಗತೆ ಮುಗಿಯವಂದುದು.

ಮುದ್ದಣ : ಉಂ ! ಎಂತೆಂತೊ ರಗಳೆಯ ಪಾೞ್ಗತೆ ಕಡೆಗಂಡುದು.

ಮನೋರಮೆ : ಚೀ ! ಶ್ರೀರಾಮ ಪುಣ್ಯಚರಿತಮಂ ಪಾೞ್ಗತೆಯೆಂದು ಇೞಿಕೆಯ್ದು ತೆಗೞ್ವಿ !

ಮುದ್ದಣ : ಶ್ರೀರಾಮಚರಿತಮನಿೞಿಸಿ ಕುೞಿಸಿ ನುಡಿದೆನಿಲ್ಲಂ ಪುರುಳಿಲ್ಲದ ಸಲ್ಲದ ಪೊಲ್ಲದೆನ್ನ ಬಱುವಣ್ಣನೆಯ ಬೇಸಱಿಕೆಯ ಪಾೞಿಬ್ಬಮಂ ಪೊಳೆಂದೆ ನುಡಿದೆಂ.

ಮನೋರಮೆ : (ಸವಿನಯಂ) ತಮ್ಮೊಡೆಯಂ ತಾಮೆ ಪೊಗೞ್ವರೆ ಬಲ್ಲರ್ ? ಅಲ್ಲದಂದು ನವರಸದ ತನಿರಸಮೊೞಿವ ಬಣ್ಣಗಬ್ಬಮಂ ಪೊಳ್ಗೆಂದೊರೆವ ನಿನಗಮೇಂ ನಿರಹಂಕೃತಿಯೊ ನಿನ್ನ ಜಾಣ್ಮೆಯೊಳ್.

ಮುದ್ದಣ : ಏನೆನ್ನ ಕಬ್ಬಂ ನಿನಗೆ ಮೆಚ್ಚುಗೆಯಾಯ್ತೆ !

ಮನೋರಮೆ : ಎನಗೊರ್ವಳ್ಗೆಂದೊಡೇಂ. ನಾಡೊಳೆಲ್ಲರ್ಗಂ.

ಮುದ್ದಣ : (ನಕ್ಕು) ಎನ್ನೊಳೊಂದಭಿಮಾನದಿನಿಂತುಸಿರ್ವೆಯಕ್ಕುಂ.

ಮನೋರಮೆ : ಎನ್ನ ಮುದ್ದಿನರಸ ! ಅಂತಲ್ತು; ನಿನ್ನ ಪೆಸರೆಂತಂತು ಕಬ್ಬಮುಂ ಮುದ್ದುಮುದ್ದಾಯ್ತು ಜಗಕೆ.

ಮುದ್ದಣ : ಇಂತೀ ನುಡಿಯಿನೆನಂ ನೀನೇೞೆಪಂತಿರಿರ್ಕುಂ.

ಮನೋರಮೆ : ಉಃ ! ಉಃ ! ಗುಣದೊಳ್ ಪುರುಡುಂಟೆ ? ಸಾಜಂ. ನಿನ್ನೀ ಜಾಣ್ಮೆಯ ಬಣ್ಣನೆಯ ನಲ್ಗತೆ ಕೇಳ್ವರನೆಂತಪ್ಪರುಮಂ ಬಗೆಯನಿರ್ಕುೞೆಗೊಳ್ಗುಂ. ನಾಡ ಮಾತೇಕೆ ! ಎನಗೆಂತೋ ಮೇಣುಂ ಮೇಣ್ ಕೇಳ್ವೆನೆಂಬೊಂದಾಸೆ ಪುಟ್ಟುಗುಂ.

ಮುದ್ದಣ : ಎನ್ನಾಣೆ !

ಮನೋರಮೆ : ನಿನ್ನಾಣೆ ! ಕಡೆಯೇಂ ? ಕಮ್ಮಲರ್ ಮಗಮಗಿಸದೇಂ ಪೋಕುಂ !

ಮುದ್ದಣ : ಮುತ್ತಬ್ಬೆಯಾಣೆ !

ಮನೋರಮೆ : ಮುತ್ತಬ್ಬೆಯಾಣೆ ! ಇಸ್ಸಿ ! ಪುಸಿಯನೇವೊಟ್ಟಿಂಗ ಮುಸಿರೆಂ, ಈವಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲಮೆಂದಾಯ್ತು.

ಮುದ್ದಣ : ಎಂತುಂ ನಿನಗೆ ಸೊಗಸಾಯ್ತಲೇ ! ಇದುವೆ ಪರಮಾನಂದಮೆನಗೆ.

ಮನೋರಮೆ : ಬಿನ್ನಣದ ಬಣ್ಣನೆಯ ನುಡಿಯಲ್ತು; ಬಲ್ಸೊಗಸು ಬಲ್ಸೊಗಸು ನೀನೆಂದ ಕತೆ.

ಮುದ್ದಣ : ಅಂತಪ್ಪೊಡೆ ತಾಱಲೆ ನೀನೆಂದ ಮೆಚ್ಚಿನುಡುಗೊಱೆಯಂ.

ಮನೋರಮೆ : (ಕಣ್ಚೆಗಡುಗೊಂಡಂತೆ ನಟಿಸಿ) ಇನ್ನೇಂ ಜಾಣನೋ ! ನೀನಱೆಯುದಱಂತೆ ಮಿಣ್ಣನಿರ್ದುದವೆನ್ನಿಂದೆನ್ನಂ ಕಟ್ಟಿಸಿದ ದಿಟ್ಟಂ, ನೀನಗೇನೆಂಬೆನೇನೆಂಬೆನೊ ! ನಿನ್ನಾ ಬಣ್ಣವಾತಿಗೆ ಮಾಱುವೋದೆಂ (ಎಂದು ವಿಚಾರದಿಂ) ಆಯ್ತಾಯ್ತು, ಪೇೞ್ದಿ ಕತೆಗೆ ಮಂಗಳಮಂ ಮಾಡು; ಮೆಚ್ಚುಗಿಚ್ಚು ಬಱೆಕ್ಕಮಲ್ತೆ.

ಮುದ್ದಣ : ಬಱೆದೆ ಮಂಗಳಮಕ್ಕುಮೆ ! ಹೋಳಿಗೆ ತುಪ್ಪಮಂ ತಿನವಡಿಸಬೇಡಾ !

ಮನೋರಮೆ : ಹೋಳಿಗೆ ತುಪ್ಪಕ್ಕಿಂದೇಂ ನಿನಗೆ ಶೋಭನಮೆ ?

ಮುದ್ದಣ : ಇಂದೆನಗೆಂದೊಡೇಂ ? ಎನಗಂ ನಿನಗಂ.

ಮನೋರಮೆ : ಪೋ ಸಾಲ್ಗುಮೀ ಬಣ್ಣದ ಕೊಂಕುನುಡಿ. ರಾಘವನ ಯಜ್ಞಮೆಂತು ಪರಿಸಮಾಪ್ತಿಯಾಯ್ತು ಪೇೞ್.

ಹೀಗೆ ಮನೋರಮೆಯ ಅಪೇಕ್ಷೆಯಂತೆ ಕವಿ ಯಜ್ಞವು ಸಾಂಗವಾಗಿ ನಡೆದ ವಿಷಯವನ್ನು ಹೇಳಿ "ಮಂಗಳಂ ಶುಭಂ ಭದ್ರಂ ಕಲ್ಯಾಣಂ" ಎಂದು ಮಂಗಳವನ್ನು ಹೇಳುವನು. ಅಷ್ಟರಲ್ಲಿ ಮನೋರಮೆ ಎದ್ದು ಹೋಗುವಳು. ಮುದ್ದಣನು ಅವಳನ್ನು ತಡೆದು

ಬಲ್ಸಿಡಕುಗಾರ್ತಿ ಕಣಾ ! ಮುದ್ದಣನುಮಂ ಟಕ್ಕಿಪ ಪೆಂಡಿರೊಳರೆ ? ಕೊಂಕು ನುಡಿಯೊಂದು ನೆವದಿಂ ಬಿಂಕನಿರ್ದೊಡಾಯ್ತು ! ಮೆಚ್ಚನಿತ್ತಲ್ಲದೆ ಪೋಪೊಡೇಂ ಬಿಡುವೆನೆ !

ಮನೋರಮೆ : ಕತೆಗೆ ಮಂಗಳಮಂ ಮಾಡದೆ ಬಱದೆ ಉಡುಗೊಱೆ ತುಡುಗೊಱೆಯೆಂದೊಡೇಂ ?

ಮುದ್ದಣ : ಕತೆಗೆ ಮಂಗಳಮನಾಗಳೆ ಪೇೞ್ದಿನುಱದೆನಿಲ್ಲ. ಈಗಳುಱದುದೊಂದೆ ನಿನ್ನುಡುಗೊಱೆ.

ಮನೋರಮೆ : ಉಡುಗೊರೆಯ ಕಾಟಕ್ಕಿನ್ನೆತ್ತಪೋಪೆಂ ? ನೀನೇಂ ಬೇಡುವಯ್ ?

ಮುದ್ದಣ : (ಮುಸಿಮುನಿಸಿಂ) ಬೇಡುವೊಡೇಂ ತಿರಿಕನೇ ? ಮನೆಗೆ ಬಂದೆನೆ ! ಮೆಚ್ಚಿತ್ತೊಡದನೆ ಕೈಕೊಳ್ವೆಂ.

ಮನೋರಮೆ : ಆನೆಂತುಂ ಪರಾಧೀನೆ, ಮೇಣೆನಗೊಡಮೆಯಾವುದು ? ಏನನೀವೆನೆಂತೀವೆಂ ?

ಮುದ್ದಣ : ಏನೋ ! ಎಂತೋ ? ಆಂ ಮೆಚ್ಚುವಂತುಂ, ಕತೆಯ ಮುರುಳ್ಗೋವಂತುಂ ನಾಲ್ವರ್ ತಲೆದೂಗುವಂತುಂ ಉಡುಗೊಱೆ ಗೆಯ್ಯೊಡಾಯ್ತು.

ಮನೋರಮೆ : ಅಂತಪ್ಪೊಡಿಂತಿದು........ನಿನ್ನೀ ಕಬ್ಬಮನೋದುವ ಜಾಣರೇವಗೆಯುಡುಗೊಱೆಯನೀಯೆಂಬರಾವಗೆಯ ಮೆಚ್ಚನೀವೆಂ.

ಎಂದು ಉಡುಗೊರೆಯನ್ನು ಕೊಡುವಳು. ಉಡುಗೊರೆ ಯಾವುದೆಂದು ಕವಿ ಹೇಳುವುದಿಲ್ಲ. ಪ್ರಾಯಃ ಅದು ಏನೆಂದು ನಾವು ಊಹಿಸಬಹುದು. ಅವಳು ಸೀತೆಗೆ ಒಳ್ಳೆಯದಾಯಿತೆಂಬ ಸಂತೋಷದಿಂದ ತುಂಬಿ ತುಳುಕುತ್ತಿದ್ದ ತನ್ನ ಆನಂದವನ್ನೂ ಇಂಥ ಒಳ್ಳೆಯ ಕತೆಯನ್ನು ಇಷ್ಟು ಚೆನ್ನಾಗಿ ಹೇಳಿದ "ಕಬ್ಬಿಗರ ಬಲ್ಲಹ" ಮುದ್ದಣನ ವಿಷಯದಲ್ಲಿ ತನಗೆ ಉಂಟಾಗಿದ್ದ ಮೆಚ್ಚುಗೆಯನ್ನೂ ತನ್ನ 'ನಿತ್ಯದ ಪೂಜೆಯ ಕಟ್ಟುಚ್ಚಿನ ಪ್ರಾಣಲಿಂಗ'ವಾದ ಪತಿದೈವದ ವಿಷಯದಲ್ಲಿ ತನಗಿದ್ದ ಭಕ್ತಿ ಪ್ರೀತಿಗಳನ್ನೂ ತೋರಿಸುವಂತೆ ಸ್ವಲ್ಪ ಉತ್ಸಾಹದಿಂದಲೂ ಸ್ವಲ್ಪ ನಾಚಿಕೆಯಿಂದಲೂ ಒಂದು ಮುತ್ತನ್ನು ಕೊಟ್ಟಳೆಂದು ತೋರುತ್ತದೆ. ಸತಿಪತಿಗಳ ಈ ಸಂಭಾಷಣೆಗಳನ್ನು ಕೇಳಿರುವ ನಮಗೆ ಅರಮನೆಯಲ್ಲಿ ಕವಿಗೆ ಬರಬಹುದಾಗಿದ್ದ ಇನ್ನು ಯಾವ ಮರ್ಯಾದೆಗಿಂತಲೂ ಇದು ಅವನಿಗೆ ಹೆಚ್ಚು ಮರ್ಯಾದೆಯೆಂದು ತೋರಬೇಕು. ಕವಿಯೂ ಹಾಗೆಯೇ ವರ್ಣಿಸುತ್ತಿದ್ದನೆಂಬುದರಲ್ಲಿ ಸಂದೇಹವಿಲ್ಲ. ಮುದ್ದಣನಿಗೆ ಇನ್ನು ಯಾವ ಸೌಭಾಗ್ಯವೂ ಸಂಪತ್ತೂ ಇದ್ದರೂ ಇಲ್ಲದಿದ್ದರೂ ದೇವರ ವಿಷಯದಲ್ಲಿ ನಿಶ್ಚಲವಾದ ಭಕ್ತಿಯಿಂದ ನಡೆದುಕೊಳ್ಳುವ ಸಂಸಾರದ ಶಾಂತಿ ಸೌಖ್ಯಗಳ ಅತುಲವಾದ ಸಂಪತ್ತು ಲಭಿಸಿತ್ತೆಂದು ನಾವು ಸಂತೋಷಪಡಬೇಕು.

ಮೇಲೆ ಉದ್ಧರಿಸಿರುವ ಕಾವ್ಯ ಭಾಗಗಳಿಂದ ಮುದ್ದಣ ಕವಿಯ ಕವಿತಾ ಶಕ್ತಿಯ ಸಮಗ್ರತೆ ವ್ಯಕ್ತವಾಗಿರಬೇಕು. ಇವುಗಳ ಜೊತೆಗೆ ಈ ಕಾವ್ಯದಿಂದ ಇಂಥ ಇನ್ನಷ್ಟು ಭಾಗಗಳನ್ನು ಸುಲಭವಾಗಿ ಎತ್ತಿ ತೋರಿಸಬಹುದು. ಕವಿತೆಯ ಆತ್ಮವೆನಿಸಿದ ಭಾವದಲ್ಲಿ ಹೇಗೋ ಹಾಗೆ ಅದರ ದೇಹವೆನಿಸುವ ಭಾಷೆಯಲ್ಲೂ ಈತನಿಗೆ ಸಮಗ್ರ ಕೌಶಲವುಂಟೆಂದು ಮೇಲೆ ಸೂಚಿಸಿದೆ. ಈ ಕಾವ್ಯವನ್ನು ಓದುತ್ತಿದ್ದರೆ, ಮುದ್ದಣ ಕವಿ ಕನ್ನಡ ಭಾಷೆಯಲ್ಲಿ ಮಾತ್ರವಲ್ಲ, ಪ್ರಪಂಚದ ಇನ್ನು ಯಾವ ಭಾಷೆಯಲ್ಲಾದರೂ ಕವಿಗೋಷ್ಠಿಯ ಅಗ್ರ ಸ್ಥಾನಗಳಲ್ಲಿ ಒಂದಕ್ಕೆ ಅಧಿಕಾರಿ, ಎಂದು ಪಾಠಕರಿಗೆ ತೋರುವುದು. ಪ್ರಕೃತಿ ಸೌಂದರ್ಯದ ವರ್ಣನೆಯಲ್ಲಿ ಈತನು ಕಾಳಿದಾಸ ಷೇಕ್ಸ್‌ಪಿಯರರಿಗಿಂತ ಬಹಳ ಕಡಿಮೆಯಾದವನಲ್ಲ. ಪುರಾಣ ಪಾತ್ರಗಳ ಸ್ವಭಾವ ನಿರೂಪಣದಲ್ಲಿ ಈತನಿಗೆ ಶ್ಲಾಘನೀಯವಾದ ಔಚಿತ್ಯ ಜ್ಞಾನವಿದೆ. ಇವನ ಕನ್ನಡದ ಶೈಲಿಯ ಸೊಗಸು ರಸ್ಕಿನ್ ಡಿಕ್ವಿನ್ಸಿಗಳ ಇಂಗ್ಲಿಷ್ ಶೈಲಿಯ ಸೊಗಸಿಗೆ ಸಮಾನವಾಗುತ್ತದೆ. ಇಂಥ ಕವಿಯನ್ನು ಪಡೆದದ್ದು ಕರ್ನಾಟಕದ ಸೌಭಾಗ್ಯ. ಇಂಥ ಕವಿಯನ್ನು ಅಷ್ಟು ಚಿಕ್ಕ ವಯಸ್ಸಿನಲ್ಲಿ ಕಳೆದುಕೊಂಡದ್ದು ಕನ್ನಡಿಗರೆಲ್ಲರ ದುರ್ದೈವ. ಮುದ್ದಣ ಕವಿ ಸಾಮಾನ್ಯನಾಗಿ ಹುಟ್ಟಿ ಸಾಮಾನ್ಯವಾಗಿ ಬೆಳೆದು ಎಲ್ಲೋ ಒಂದು ಮೂಲೆಯಲ್ಲಿ ತನ್ನ ದಿನಗಳನ್ನು ಕಳೆದು ದಿವಂಗತನಾದನು. ಆದರೆ ಆತನ ಕಾವ್ಯದ ಸೌಂದರ್ಯ ಸೌರಭ್ಯಗಳನ್ನು ನೋಡಿದರೆ ಅವನ ಆತ್ಮ ಎಷ್ಟು ಸಂಸ್ಕಾರದಿಂದ ಎಷ್ಟರಮಟ್ಟಿಗೆ ಉತ್ತೀರ್ಣವಾಗಿ ಅವನ ಜನರ ಇನ್ನೆಂತಹ ಪೂಜೆಗೆ ಅರ್ಹವಾಗಿತ್ತೆಂದು ನಮಗೆ ತಿಳಿಯುವುದು. ಮುದ್ದಣ ಕವಿಯ ಜೀವನ ಚರಿತೆಯನ್ನೂ ಅವನ ಕಾವ್ಯವನ್ನೂ ಕುರಿತು ಯೋಚಿಸುವವರಿಗೆ ನಮ್ಮ ಜನಾಂಗದ ಉತ್ತಮ ಜೀವನದ ಪ್ರತಿನಿಧಿಯಂತೆ ತೋರುವ ಈತನ ವಿಷಯದಲ್ಲಿ ಆಂಗ್ಲೇಯ ಕವಿ ವರ್ಡ್ಸ್‌ವರ್ತ್ ಮಿಲ್ಟನ್ ಮಹಾಕವಿಯ ವಿಷಯದಲ್ಲಿ

Poet ! thou shouldst be living at this hour :

ಎಂದು ಮುಂತಾಗಿ ಹೇಳಿದ ಮಾತುಗಳನ್ನು

> India hath need of thee. She is a fen
> Of stagnant waters. Temple, sword and pen
> Have forfeited their ancient Indian dower
> Of inward happiness

ಎಂದು ತಿರುಗಿಸಿ ಹೇಳೋಣವೆಂದು ತೋರುವುದು. ದೇಶದ ಸ್ಥಿತಿಯ ವಿಷಯದಲ್ಲಿ ಹೇಗೋ ಹಾಗೆಯೇ ಕವಿಯ ಗುಣದ ವಿಷಯದಲ್ಲೂ ಜೀವನಚರಿತೆಯ ವಿಷಯದಲ್ಲೂ ಆ ಪದ್ಯದ ಮಾತುಗಳು ಚೆನ್ನಾಗಿ ಒಪ್ಪುವವು.

ಈ ಕಾವ್ಯವನ್ನು ಕುರಿತು ಇನ್ನೂ ಒಂದೆರಡು ವಿಷಯಗಳನ್ನು ಹೇಳಬಹುದಾಗಿತ್ತು. ಆದರೆ ಈಗಾಗಲೇ ದೀರ್ಘವಾಗಿರುವ ಈ ಉಪನ್ಯಾಸವನ್ನು ಮತ್ತಷ್ಟು ದೀರ್ಘವಾಗಿ ಮಾಡುವುದು ನನಗೆ ಇಷ್ಟವಿಲ್ಲ. ಅಲ್ಲದೆ ಕಾವ್ಯದ ರುಚಿಯನ್ನು ತಿಳಿಯುವುದಕ್ಕೆ ಆ ವಿಷಯಗಳ ಚರ್ಚೆ ಆವಶ್ಯಕವಲ್ಲ. ಮುಖ್ಯವಾಗಿ ಈ ಪ್ರಶಂಸೆಯನ್ನು ಓದುವುದರಿಂದ ನಮ್ಮ ಜನರಿಗೆ ಶ್ರೀರಾಮಾಶ್ವಮೇಧ ಕಾವ್ಯದ ವಿಷಯದಲ್ಲೂ ಅದರ ಕರ್ತೃವಾದ ಮುದ್ದಣ ಕವಿಯ ವಿಷಯದಲ್ಲೂ ಆದರ ಉಂಟಾಗಿ ಮುದ್ದಣ ಕವಿ ಅಖಿಲ ಕರ್ನಾಟಕಕ್ಕೆ ಮಾಡಿರುವ ಪರಮೋಪಕಾರದ ಸ್ಮರಣೆ ನಮ್ಮ ಜನರಲ್ಲಿ ವಾಡಿಕೆಯಾಗಲೆಂದು ನಾನು ಹಾರೈಸುತ್ತೇನೆ. ಈ ಕಾವ್ಯವನ್ನು ಯಾರೇ ಆಗಲಿ ಮತ್ತೆ ಮತ್ತೆ ಓದಿದ ಹಾಗೆ ಅದರ ವಿಷಯದಲ್ಲಿ ಹಾಫೀಸ್ ಕವಿಯ ಕಾವ್ಯವನ್ನು ಕುರಿತು ಹೇಳಿದ ಈ ಮಾತುಗಳನ್ನು ಹೇಳುವರು :

> Song such as this hath need of no man's praise.
> Beauty like this can be concealed from none.
> Why should I hold a candle to the rays
> Of such a sun ?

---

ಕೃಪೆ : ವಿಮರ್ಶೆ ೨ - ೧೯೨೯

*****

# ಮುದ್ದಣ

## ಕೀರ್ತಿನಾಥ ಕುರ್ತುಕೋಟಿ

'ಅದ್ಭುತ ರಾಮಾಯಣ' ಮತ್ತು 'ರಾಮಾಶ್ವಮೇಧ'ದಂಥ ಗಂಭೀರವಾದ ಗದ್ಯ ಕಾವ್ಯಗಳನ್ನು ಸೃಷ್ಟಿಸಿದ ಮುದ್ದಣನ ಹಾಸ್ಯಪ್ರಜ್ಞೆ ಅವನ ಕೃತಿಗಳಲ್ಲಿಯ ಅನುಷಂಗಿಕ ಗುಣವೆಂದೇ ನಮ್ಮ ತಿಳುವಳಿಕೆಯಾಗಿದೆ. ಉಡುಪಿಯ ಬೋರ್ಡ ಶಾಲೆಯಲ್ಲಿ ವ್ಯಾಯಾಮ ಶಿಕ್ಷಕರಾಗಿದ್ದ ನಂದಳಿಕೆ ಲಕ್ಷ್ಮೀನಾರಾಯಣಪ್ಪನವರು ಮುದ್ದಣನಾಗಿ ಪರಿವರ್ತಿತರಾಗಿದ್ದು ಕನ್ನಡ ಸಾಹಿತ್ಯದ ಇತಿಹಾಸದಲ್ಲಿಯ ಒಂದು ಸೋಜಿಗದ ಸಂಗತಿಯಾಗಿದೆ. ಮಳಲಿ ಸುಬ್ಬರಾಯರ ಹತ್ತಿರ ಅವರು ಕಲಿತದ್ದು ಸಂಸ್ಕೃತ ಮತ್ತು ಹಳೆಗನ್ನಡದ ಕೃತಿಗಳನ್ನು. 'ಶಬ್ದಮಣಿ ದರ್ಪಣ' ಮತ್ತು ಕಿಟೆಲ್ ಕೋಶಗಳು ಅವರಿಗೆ ನಿತ್ಯ ಅಭ್ಯಾಸದ ಕೃತಿಗಳಾಗಿದ್ದವು. ನಂದಳಿಕೆಯವರು ಹಳೆಗನ್ನಡವನ್ನು ಕಲಿತು ಮುದ್ದಣನಾದ ಈ ಸಂಗತಿ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ್ದಾಗಿದೆ. ಮುದ್ದಣನ ಮೂರೂ ಕೃತಿಗಳ ವಸ್ತು (ಅವನ ಯಕ್ಷಗಾನಗಳನ್ನು ಹೊರತುಪಡಿಸಿ) ರಾಮಾಯಣದಿಂದ ತೆಗೆದುಕೊಂಡದ್ದು. ಮುದ್ದಣನ ದೃಷ್ಟಿಯಿಂದ ರಾಮಾಯಣ ಆದರ್ಶವೆನ್ನಬಹುದಾದ ಒಂದು ಪವಿತ್ರ ಗ್ರಂಥ. ಆ ಕಾವ್ಯವನ್ನು ಹಳೆಗನ್ನಡದಲ್ಲಿ ತನ್ನದಲ್ಲದ ಭಾಷೆಯಲ್ಲಿ ಪುನಃ ಸೃಷ್ಟಿಸುವಾಗ ತನಗೇ ಅರಿವಿಲ್ಲದ ಒಂದು ಉದ್ದೇಶ ಮುದ್ದಣನಿಗೆ ಪ್ರೇರಣೆಯನ್ನು ಕೊಟ್ಟಿರಬೇಕು. ಮುದ್ದಣ ಕಾವ್ಯವನ್ನು ಬರೆಯುವ ಹೊತ್ತಿಗೆ ಬಂಕಿಮಚಂದ್ರರ ಕಾದಂಬರಿಗಳು ಕನ್ನಡದಲ್ಲಿ ಭಾಷಾಂತರವಾಗಿ ಪ್ರಕಟವಾಗತೊಡಗಿದ್ದವು. ಮುದ್ದಣನ 'ಗೋದಾವರಿ' ಎಂಬ ಹೆಸರಿನ ಕಾದಂಬರಿಯ ಒಂದು ಭಾಗ ಪ್ರಕಟವಾಗಲಿಲ್ಲ.

ಹಳೆಯ ಕತೆಯನ್ನು ತಿರುಗಿ ಹೇಳುವದು ಮತ್ತು ಕಾದಂಬರಿಯ ಮೂಲಕವಾಗಿ ಹೊಸ ಕತೆಯೊಂದನ್ನು ಹುಟ್ಟಿಸಿ ಹೇಳುವದೂ ಒಂದೇ ಅಲ್ಲ. ಹಳೆಯ ಕತೆಯ ಸತ್ಯ ನಮಗೆ ದೊರೆಯುವದು ಭಾಷೆಯ ಮೂಲಕವಾಗಿ. ನಾವು ಸತ್ಯವೆಂದು ತಡವಿ ನೋಡುತ್ತಿರುವದು ಭಾಷೆಯ ಸತ್ಯವನ್ನು, ಭಾಷೆಯ ಪ್ರಾಮಾಣಿಕತೆಯನ್ನು. 'ಹಾ ರಾಮಾ ಎಂದು ಸೀತೆ ಬಾಯಳಿದಳ್ತಳ್'. ಸೀತೆಯ ದುಃಖವನ್ನು ನಿರೂಪಿಸುವ ಈ ಹಳೆಗನ್ನಡ ವಾಕ್ಯ 'ಶಬ್ದಮಣಿ ದರ್ಪಣ'ದ ಒಂದು ಸೂತ್ರವೂ ಹೌದು. ಮುದ್ದಣನ ಪಾಲಿಗೆ ಇದು 'ಭೂಸ್ವಾಭಾವ್ಯಂಗೊಂಡ ವಿಯದ್ಗಂಗಾಸಲಿಲದ' ಒಂದು ಹನಿ. ರಾಮಾಯಣದ ಕತೆ ಬ್ರಹ್ಮಲೋಕದಲ್ಲಿಯೇ

ಮೊದಲು ಸೃಷ್ಟಿಯಾದದ್ದು. ಆ ರಾಮಾಯಣವನ್ನು ಮೊದಲು ಕೇಳಿದವನು ವಾಲ್ಮೀಕಿ. ವಾಲ್ಮೀಕಿ ಹೇಳಿದ ಕತೆಯನ್ನು ಉಳಿದವರು ಕೇಳಿದರು, ಬೇರೆ ಬೇರೆ ಭಾಷೆಗಳಲ್ಲಿ ಬೇರೆಯವರಿಗೆ ಹೇಳಿದರು. ಈ ದೀರ್ಘವಾದ ಪ್ರಕ್ರಿಯೆಯಲ್ಲಿ ಅದಕ್ಕೆ ನೆಲದ ಸಂಬಂಧ ತಪ್ಪಿದ್ದಲ್ಲ. ಮುದ್ದಣ ಕೇಳಿದ್ದು ಶೇಷ ರಾಮಾಯಣವನ್ನು. ಮೊದಲು ಶೇಷ ವಾತ್ಸ್ಯಾಯನನಿಗೆ ಹೇಳಿದ ಕತೆಯನ್ನು ಕೇಳಿದ್ದ ಮುದ್ದಣ ತನ್ನ ಮಡದಿ ಮನೋರಮೆಗೆ ಈ ಕತೆಯನ್ನು ಹೇಳಿದ. ಆದರೆ ಈ ಮುದ್ದಣ ಯಾರು? ಮುದ್ದಣನ ಸತ್ತೆಯನ್ನು ಒಪ್ಪಿಕೊಂಡ ಮೇಲೆ ಮನೋರಮೆಯ ಸತ್ತೆಯ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಆದರೆ ಮುದ್ದಣ ಯಾರು ? ರಾಮ ಅಯೋಧ್ಯೆಯ ರಾಜ. ಸಾವಿರಾರು ವರ್ಷಗಳ ಹಿಂದೆ ಜೀವಿಸಿದ್ದನಂತೆ. ನಂದಳಿಕೆಯವರು ಉಡುಪಿಯ ಬೋರ್ಡ ಶಾಲೆಯಲ್ಲಿಯ ಉಪಾಧ್ಯಾಯರು, ಹತ್ತು ರೂಪಾಯಿಯ ಸಂಬಳದಲ್ಲಿ ಬಡತನದ ಜೀವನವನ್ನು ಸಾಗಿಸುತ್ತಿದ್ದವರು. ಆದರೆ ಮುದ್ದಣ ಇತಿಹಾಸಕ್ಕಾಗಲಿ, ಪುರಾಣಕ್ಕಾಗಲಿ ಸೇರಿದವನೇ ಅಲ್ಲ. ಅವನು 'ರಾಮಾಶ್ವಮೇಧಂ' ಎಂಬ ಗದ್ಯಕಾವ್ಯದ ಕಥಾಮುಖದಲ್ಲಿ ಅದೂ ಕಾರ್ಗಾಲದ ಮನೋಹರವಾದ ವರ್ಣನೆ ಮುಗಿದ ಕೂಡಲೇ ಹುಟ್ಟಿ ಬಂದವನು. ಅರಮನೆಯಿಂದ ಹೊರವಂಟು, ನೆರೆ ಬೀದಿಯನ್ನು ಹಿಡಿದು ತನ್ನ ಮನೆಗೆ ಬಂದವನು. ಆದರೆ ಇವನ ಸತ್ತೆ ಅಯೋಧ್ಯೆಯ ರಾಮ ಮತ್ತು ಉಡುಪಿಯ ನಂದಳಿಕೆಯವರ ಸತ್ತೆಗಿಂತ ಭಿನ್ನವಾದದ್ದು. ಇವನ ಸತ್ತೆ ಕಲಾತ್ಮಕವಾದದ್ದೆಂದು ಮಾತ್ರ ಹೇಳಬಹುದು. ಮುದ್ದಣನ ಕಲಾತ್ಮಕ ಸತ್ತೆಯಲ್ಲಿ ಕೂಡ ಸೂಕ್ಷ್ಮವಾದ ತಾರತಮ್ಯಗಳಿವೆ ಎನ್ನುವದು ಮರೆಯುವಂತಿಲ್ಲ. ಪ್ರಾಚೀನರ ಕಾವ್ಯಗಳಲ್ಲಿಯೂ ಈ ಕಲಾತ್ಮಕ ಸತ್ತೆ ಇತ್ತು. ಆದರೆ ಮುದ್ದಣನದು ವರ್ತಮಾನದ ಸತ್ತೆ. ಬಂಕಿಮಚಂದ್ರರ 'ನಲ್ಗತೆ'ಗಳಲ್ಲಿ ಅದು ಆಗಲೇ ಪ್ರಕಟವಾಗಿತ್ತು.

ನಲ್ಗತೆ ಹಳೆಯ ಪುರಾಣವನ್ನು, ಅದರ ವಾಸ್ತವತೆಯನ್ನು ಅಲ್ಲಗಳೆಯುವಷ್ಟು ಇನ್ನು ಪ್ರಬುದ್ಧವಾಗಿಲ್ಲ. ಆದರೆ ಪೌರಾಣಿಕ ಸತ್ಯವನ್ನು ಪ್ರಶ್ನಿಸುವ ಧೈರ್ಯ ಅದಕ್ಕೆ ಬಂದಿದೆ. ಮುದ್ದಣನ ಇನ್ನೊಂದು ರೂಪವಾಗಿರುವ ಮನೋರಮೆ ಆ ಕೆಲಸವನ್ನು ಮಾಡುತ್ತಾಳೆ. ಕತೆ ಹೇಳಿದವನು ಮುದ್ದಣ, ಅದನ್ನು ಕೇಳಿ ಆನಂದ ಪಟ್ಟವಳು ಮನೋರಮೆ. ರಾಮನ ಕತೆ ಇವರ ನಡುವಿನ ಸಂವಾದವಾಗುತ್ತದೆ. 'ವಿಕ್ರಮ ವಿಜಯ', 'ಭೋಜ ಪ್ರಬಂಧ' ಇವುಗಳನ್ನು ನಿರಾಕರಿಸಿ ರಾಮಾಯಣದ ಅದರಲ್ಲಿಯೂ ರಾಮ ಅಶ್ವಮೇಧ ಯಜ್ಞ ಮಾಡಿದ ಕತೆಯನ್ನು ಹೇಳೆಂದು ಬಿನ್ನವಿಸಿಕೊಳ್ಳುವವಳು ಅವಳು. ಕತೆಯ ಆಯ್ಕೆಯ ಅಧಿಕಾರ ಶ್ರೋತೃವಿನದು, ಅಂತೂ ಉತ್ತರರಾಮಚರಿತವನ್ನು ಹೇಳುವ ಕೆಲಸ ಮುದ್ದಣನಿಗೆ ಬಂದಿತು. ಇದಕ್ಕೂ ಮೊದಲು 'ಅದ್ಭುತ ರಾಮಾಯಣ'ದಲ್ಲಿ ಸೀತೆಯ ಆದಿಶಕ್ತಿಯ ಸ್ವರೂಪವನ್ನು ಮುದ್ದಣ ನಿರೂಪಿಸಿದ್ದ. ಆದರೆ 'ರಾಮಾಶ್ವಮೇಧ' ಪ್ರಸಂಗದಲ್ಲಿ ಸೀತೆಯ ಕರುಣ ಚಿತ್ರವಿದೆ. ಬಹುಶಃ ಮನೋರಮೆಗೆ ಬೇಕಾದದ್ದು ಅದೇ. ರಾಮ–ಪೊನ್ನ ಸೀತೆಯೊಡಗೂಡಿ ಅಶ್ವಮೇಧ ಯಜ್ಞವನ್ನು ಪ್ರಾರಂಭಿಸಿದ ಎಂದು

ಮುದ್ದಣ ಹೇಳುತ್ತಲೇ ಮನೋರಮೆ, "ಪೊನ್ನ ಸೀತೆ ಏಕೆಂಬೈ ? ರನ್ನ ಸೀತೆ ಎತ್ತವೋದಳ್", ಎಂದು ಕೇಳಿ ಕತೆಯ ದಿಕ್ಕನ್ನು ತಿರುಗಿಸುತ್ತಾಳೆ. ಸೀತಾ ಪರಿತ್ಯಾಗದ ಕತೆಯನ್ನು ಮುದ್ದಣ ಹೇಳಲೇ ಬೇಕಾಗುತ್ತದೆ.

ಪ್ರಾರಂಭದಲ್ಲಿ ಸೀತಾಪರಿತ್ಯಾಗ, ಕೊನೆಯಲ್ಲಿ ರಾಮ ಮತ್ತು ಸೀತೆಯರ ಪುನರ್ಮಿಲನ ಇವು ಈ ಗದ್ಯಕಾವ್ಯದ ಮುಖ್ಯವಾದ ರಸಸ್ಥಾನಗಳು. ಕಾಲಕ್ರಮದಲ್ಲಿ ಒಂದಕ್ಕೊಂದು ದೂರವಾದ ಈ ಎರಡು ಘಟನೆಗಳನ್ನು ಅಶ್ವಮೇಧದ ಕುದುರೆಯ ಸಂಚಾರ ಒಂದು ಗೂಡಿಸುತ್ತದೆ. ರಾಮನ ಅಶ್ವಮೇಧ ಯಜ್ಞದ ಕತೆಯನ್ನು ತಾನಾಗಿಯೇ ವರಿಸಿದರೂ ಮನೋರಮೆಗೆ ಅದರಲ್ಲಿ ಆಸಕ್ತಿ ಇದ್ದಂತೆ ಕಾಣುವದಿಲ್ಲ. ಕತೆ ಕೇಳುತ್ತಲೇ ತೂಕಡಿಸುತ್ತಾಳೆ. ಸಕಲಗುಣ ಸಂಪನ್ನೆ, ಏಕಗುಣವಿಹೀನೆ ಎಂದು ಮುದ್ದಣ ಆಕ್ಷೇಪಿಸುತ್ತಾನೆ. ಆದರೆ ಕತೆಯೆನ್ನುವದು ನಿಡುರಗಳೆಯಾದರೆ ಮತ್ತೇನು ಮಾಡಬೇಕು ? ಮನೋರಮೆಯ ಈ ಪ್ರತಿಕ್ರಿಯೆಯಲ್ಲಿ ಆಧುನಿಕ ಕಾದಂಬರಿ ಹುಟ್ಟಿಕೊಂಡಿತೆಂದರೆ ಅತಿಶಯೋಕ್ತಿಯಲ್ಲ. ಆಶ್ರಮದ ಇಬ್ಬರು ಮಕ್ಕಳು ಕುದುರೆಯನ್ನು ಕಟ್ಟಿದರೆಂಬುದನ್ನು ಕೇಳಿ ಅವಳ ಆಸಕ್ತಿ ಮತ್ತೆ ಜಾಗೃತವಾಗುತ್ತದೆ. ಅವರ ಹೆಸರುಗಳನ್ನು ಬೇಕೆಂದೇ ಮುದ್ದಣ ಹೇಳುವದಿಲ್ಲ. ಹೆಸರಿಲ್ಲದ ಆ ಮಕ್ಕಳು ಮುಂದೆ ಆ ಹೆಸರುಗಳು ಗೊತ್ತಾಗುವವರೆಗೆ ಒಂದು ಕಾದಂಬರಿಯ ಪಾತ್ರಗಳಾಗುತ್ತವೆ. 'ರಾಮಾಶ್ವಮೇಧ'ದಲ್ಲಿ ಹೆಜ್ಜೆ ಹೆಜ್ಜೆಗೆ ಕಾದಂಬರಿಯನ್ನು ಪುರಾಣದಿಂದ ವಿಂಗಡಿಸಿ ಹೇಳುವ ಪ್ರಯತ್ನವಿದೆ. ಶತ್ರುಘ್ನನ ಸಾವಿರಗಟ್ಟಲೆ ಸೈನಿಕರಿಗೆ ಅರಣ್ಯಕನೆಂಬ ಮುನಿ ಸತ್ಕಾರ ಮಾಡಿದ ಎಂದು ಕೇಳಿದ ಮನೋರಮೆ, ಸತ್ಕಾರವೆಂದರೆ ಬರಿಯ ಬಾಯುಪಚಾರವೇ ಎಂದು ಕೇಳುತ್ತಾಳೆ. ಗದ್ಯ ಕಾವ್ಯದಲ್ಲಿ ಹುದುಗಿಕೊಂಡಿರುವ ಕಾದಂಬರಿ ಕೇಳುತ್ತಿರುವ ಪ್ರಶ್ನೆ ಇದಾಗಿದೆ. ಕಾದಂಬರಿ ಬೇಡುವದು ಈ ನೆಲದ ವಾಸ್ತವತೆಯನ್ನು. ಮುದ್ದಣ ಮುಂದೆ ಹೇಳುವ ಸಪ್ತಾಕ್ಷರಿ ಮಂತ್ರದ ಮಹಿಮೆಯೆಂದರೆ ಪುರಾಣದ ವಿಡಂಬನೆ. ನಂದಳಿಕೆಯವರಿಗೆ ಪೌರಾಣಿಕ ಸತ್ಯದಲ್ಲಿ ಅಪನಂಬಿಕೆಯಿದೆ ಎಂದು ಹೇಳುವಂತಿಲ್ಲವಾದರೂ, ಪೌರಾಣಿಕ ಸತ್ಯವನ್ನು ವಿಡಂಬಿಸುವ, ಪ್ರಶ್ನಿಸುವ ಸ್ವಾತಂತ್ರ್ಯ ಅವರಲ್ಲಿಯ ಕಾದಂಬರೀ ಪ್ರಜ್ಞೆಗೆ ಇದೆ ಎಂದು ಹೇಳಬಹುದು.

ಮುದ್ದಣ ಮನೋರಮೆಯರ ಪಾತ್ರ ರಚನೆಯ ಅವಶ್ಯಕತೆಯನ್ನು ಪರೀಕ್ಷಿಸಲು ಇಷ್ಟೆಲ್ಲ ಮಾತು ಬೆಳೆಸಬೇಕಾಯಿತು. ಮುದ್ದಣ ಎಂದರೆ ನಂದಳಿಕೆಯವರು ಎಂಬ ಸುಲಭವಾದ ಸಮೀಕರಣ 'ರಾಮಾಶ್ವಮೇಧ'ವನ್ನು ತಿಳಿಯಲು ಸಹಾಯ ಮಾಡುವದಿಲ್ಲ. ಮುದ್ದಣ ಸಂಪೂರ್ಣವಾಗಿ ಒಂದು ಕಾಲ್ಪನಿಕ ಪಾತ್ರ, ಮನೋರಮೆಯು ಅಷ್ಟೇ. ಅವರಿಬ್ಬರೂ ಕೂಡಿಕೊಂಡು ರಾಮಚರಿತೆಯನ್ನು ನಿರ್ಮಿಸುತ್ತ ಅದರ ಅರ್ಥ ಮತ್ತು ಮೌಲ್ಯಗಳನ್ನು ನಿರ್ಣಯಿಸುತ್ತಾರೆ. ಅವರು 'ರಾಮಾಶ್ವಮೇಧ'ದ ಜಗತ್ತಿನಲ್ಲಿ ವಾಸ ಮಾಡುವವರೇ ಇಷ್ಟೆ. ರಾಮ-ಸೀತೆಯರು ಲವ-ಕುಶರು ನಿಶ್ಚಿತವಾಗಿ ರಾಮಚರಿತೆಯ ಲೋಕದಲ್ಲಿಯವರು. ಮುದ್ದಣ ಮನೋರಮೆಯರು ನಿಶ್ಚಿತವಾಗಿ ರಾಮಚರಿತೆಗೆ ಸೇರಿದವರಲ್ಲ, ಅವರು ಹೊರಗಿನ

ವಾಸ್ತವ ಜಗತ್ತಿನವರು ಅಲ್ಲ. ಅವರು ಭಾಷೆಯಲ್ಲಿ ಹುಟ್ಟಿದವರೆಂದು ಹೇಳಿದರೆ ಸತ್ಯಕ್ಕೆ ಹೆಚ್ಚು ಸಮೀಪವಾಗಬಹುದು. 'ರಾಮಾಶ್ವಮೇಧ'ದ ಪ್ರಾರಂಭದ ವರ್ಷಾಕಾಲದ ವರ್ಣನೆ ಈ ಮಾತಿಗೆ ಸಾಕ್ಷಿಯಾಗಿದೆ. "ಓವೊ । ಕಾಲ ಪುರುಷಂಗೆ ಗುಣಮನಮಿಲ್ಲಂ ಗಡ । ನಿಸ್ತೇಜಂ ಗಡ । ಒಡಲೊಳ್ ಗುಡುಗುಟ್ಟುಗುಂ ಗಡ । ಏನರೆ ಮನೆವಾಗಿಲಂ ಮುಗಿಲ್ವೆರೆಯಿಂ ಬಾಸಣಿಸಿರ್ಪರ್ ? ಮಡದಿ ಬಾನ್ನೀರೆಯೋರ್ವಳ್ ಚಂಚಲದೃಷ್ಟಿಯಿಂದತ್ತಮಿತ್ತಂ ನೋಳ್ಪಳ್ ಮಾಲಿಗೆ ಮರ್ದಂ ಕೊಂಡುಯ್ವಡಕ್ಕುಂ ಸಿಡಿಲಾಳ್ ತಡೆಯದೆಡೆಯ ನಡುವೆಟ್ಟುಗಳ್ಗೆ ತಡೆಯದೆ ಬಂದೆರಗುಗುಂ; ಕುತ್ತಮೇಂ ? ಸುಗ್ಗಿಯೊಳುಂಡುದಂ ಕಾರೊಳ್ ಕಾರುವನಕ್ಕುಂ ಕಾಲಂ ಕಷ್ಟಂ । ಕಷ್ಟಂ ।"

ಕಾಲಪುರುಷನ ಬೇನೆಯ ರೂಪಕದ ಮೂಲಕವಾಗಿ ಮಳೆಗಾಲವನ್ನು ಬಣ್ಣಿಸಿರುವದರಿಂದ ಇದು ಕಾವ್ಯವೆಂದು ನಿರ್ಣಯವನ್ನು ಕೊಡಬಹುದು. ಆದರೆ ಆಕಾಶದ ಕೋಣೆಯಲ್ಲಿ ಬಾನ್ನೀರೆ ಚಂಚಲ ದೃಷ್ಟಿಯಿಂದ ನೋಡುತ್ತಿರುವಾಗ ಮಲಗಿದ ಕಾಲಪುರುಷನ ಚಿತ್ರ ತನ್ನ ವಾಸ್ತವತೆಯಿಂದ ಏನನ್ನು ಸೂಚಿಸುತ್ತದೆ ? ಮೊದಲನೆಯದಾಗಿ ಕಪಿಸಮಯದ ಕಲಾತ್ಮಕತೆಯಿಂದ ಈ ವರ್ಣನೆ ಬಿಡುಗಡೆಯನ್ನು ಪಡೆಯುತ್ತದೆ. ವರ್ಷ ವರ್ಷವೂ ಬರುವ ಅದೇ ಮಳೆಗಾಲ. ಆದರೆ ಅದು ಯಾವ ಭಾಷೆಯಲ್ಲಿ ಮೂಡುತ್ತದೆನ್ನುವದು ಮುಖ್ಯವಾಗಿದೆ. "ಸುಗ್ಗಿಯೊಳುಂಡುದಂ ಕಾರೊಳ್ ಕಾರುವನಕ್ಕುಂ" ಕಾಲಪುರುಷನಿಗೆ ಆಗಿರುವ ಈ ಅಜೀರ್ಣ ರೋಗಕ್ಕೆ ಈ ವರ್ಣನೆ 'ಮೂಲಿಗೆ ಮರ್ದ'ನ್ನು ಹುಡುಕುವಂತಿದೆ. ಹೊಸ ಸಾಹಿತ್ಯದ ಅತಿಭಾಷೆಯನ್ನು ಮುದ್ದಣ ಇಲ್ಲಿ ಸೃಷ್ಟಿಸುತ್ತಿದ್ದಾನೆ. ಅತಿಭಾಷೆಯ ಒಂದು ಲಕ್ಷಣವೆಂದರೆ ಅದಕ್ಕೆ ತನ್ನ ಅರಿವು ಸಂಪೂರ್ಣವಾಗಿರುತ್ತದೆ. 'ಸಮಾಗತೋ ರಾಜವದುದ್ಧತದ್ಯುತಿಃ ಘನಾಗಮೋಕಾಮಿಜನಪ್ರಿಯಃ ಪ್ರಿಯೇ' ಕಾಳಿದಾಸನ ವರ್ಷಾಗಮದ ಈ ವರ್ಣನೆ ಕೂಡ ಅತಿಭಾಷೆಯೇ. ಮುದ್ದಣ ಬದಲು ಮಾಡಿದ್ದು ಈ ಅತಿಭಾಷೆಯನ್ನು. ಇಲ್ಲಿಯ ಕಾಲಪುರುಷನಿಗೆ ಉದ್ಧತದ್ಯುತಿ ಇಲ್ಲ, ಅವನು 'ನಿಸ್ತೇಜಂ ಗಡ'. ಅವನು ಮತ್ತೆ ಕಳೆಯುಳ್ಳವನಾಗಬೇಕಾದರೆ ಸುಗ್ಗಿಯಲ್ಲಿ ಉಂಡದ್ದನ್ನು ಕಾರಿನಲ್ಲಿ ಕಾರಬೇಕು. ಉಂಡದ್ದು ಅತಿಯಾದರೆ ವಮನಕ್ರಿಯೆ ಅಗತ್ಯವಾಗಿದೆ. ಪಡುಗಡಲ ಕಾರ್ಗಾಲದ ವರ್ಣನೆಯೇ ಹಳೆಯ ರೀತಿಯ ವರ್ಣನೆಗೆ 'ಮೂಲಿಗೆ ಮರ್ದಾ'ಗುತ್ತದೆ. 'ಅದ್ಭುತ ರಾಮಾಯಣ'ದಲ್ಲಿ ರಾಮ ಪರಮ ಪುರುಷನಾದರೆ ಸೀತೆ ಆದಿಶಕ್ತಿ. ಆದರೆ 'ರಾಮಾಶ್ವಮೇಧ'ದಲ್ಲಿ ಮಾತ್ರ ಅವನು 'ವಸುಧೆಗೊಡೆಯನಪ್ಪ' ರಾಮಚಂದ್ರ. 'ಸೀತೆಯನುಳಿದೇತರ ಸೀತಾರಾಮಂ' ಎಂದು ಮನೋರಮೆ ನಿರ್ಭಯವಾಗಿ ಟೀಕಿಸುವಷ್ಟು ಅವನು ಸಾಮಾನ್ಯ ಮನುಷ್ಯನಾಗಿದ್ದಾನೆ. ಹಳೆಯದಾದ ಗದ್ಯ ಕಾವ್ಯದಲ್ಲಿ ಕಾದಂಬರಿಯ ನಿರೂಪಣೆಯನ್ನು ಮುದ್ದಣ ಪ್ರತಿಷ್ಠಾಪಿಸಿದ್ದಾನೆ.

ಮುದ್ದಣ ಮನೋರಮೆಯರ ಸಂವಾದ ಆಧುನಿಕ ವಿಮರ್ಶಕರಿಗೆಲ್ಲ ಪ್ರಿಯವಾದದ್ದು. ಚಿತ್ರಕ್ಕಿರುವ ಚೌಕಟ್ಟು 'ಶಿವನಾಣೆ ಸುವರ್ಣ'. ಆದರೆ ಚಿತ್ರ ಸಾಮಾನ್ಯವಾದದ್ದು ಎಂಬ ನಿರ್ಣಯ ಈಗ ನಮಗೆಲ್ಲ ಬಾಯಿಪಾಠವಾಗಿದೆ.

ಕೃತಿಯ ಮೌಲ್ಯಮಾಪನದ ಅವಸರದಲ್ಲಿ ಇಂಥ ನಿರ್ಣಯಗಳು ಅನಿವಾರ್ಯವಾಗುತ್ತವೆ. ಈ ನಿರ್ಣಯದ ಜವಾಬ್ದಾರಿಯೂ ಮುದ್ದಣನದೇ. ಕೃತಿಯಲ್ಲಿ ಹೊಸದು ಮತ್ತು ಹಳೆಯದು ಸಂದುಬಿಡದಂತೆ ಒಂದುಗೂಡಿರುವದೇ ಇದಕ್ಕೆ ಕಾರಣವಾಗಿದೆ. ಮುದ್ದಣನ ಪ್ರಯತ್ನ ರಾಮನ ಕತೆಯನ್ನು ಹೊಸದಾಗಿಸುವದಾಗಿದೆ. ಅಥವಾ ಹೀಗೂ ಹೇಳಬಹುದು, ಚಿತ್ರ ಸಾಮಾನ್ಯವಾಗಿರಲೆಂದೇ ಅದರ ಚೌಕಟ್ಟು ಸುವರ್ಣದ್ದಾಗಿದೆ.

---

ಕೃಪೆ : ಕನ್ನಡ ಸಾಹಿತ್ಯ ಸಂಗಾತಿ – ೧೯೯೫

*****

# ಮುದ್ದಣ ಕವಿ ಕೃತಿ ಸಮೀಕ್ಷೆ

## ತ. ಸು. ಶಾಮರಾಯ

ಮುದ್ದಣ ಪುರಾತನ ಕವಿಯಲ್ಲ; ಆಧುನಿಕ. ಕ್ರಿ.ಶ. ೧೮೭೦ ಆತನ ಜನನ. ಈಗ ಜೀವಿಸಿದ್ದರೆ ಕವಿಗೆ ನೂರೈವತ್ತು ವರ್ಷಗಳು ಆಗುತ್ತಿತ್ತು. ಕನ್ನಡಿಗರ ದುರ್ದೈವದಿಂದ ಮುದ್ದಣನ ಜೀವನ ಕುಸುಮ ಸಂಪೂರ್ಣ ಅರಳಿ ಮಘಮಘಿಸುವ ಮುನ್ನವೇ 'ಗುಣಮಣಮಿಲ್ಲದ' ಕಾರಣಪುರುಷ ಆ ಕವಿಪುಷ್ಪವನ್ನು ತೊಟ್ಟು ಕಳಚಿ ಕಿತ್ತು ಹಾಕಿದ.

'ಮುದ್ದಣ' ಎಂಬುದು ಕವಿಯ ಕಾವ್ಯನಾಮ. ಆತನ ನಿಜವಾದ ಹೆಸರು ಲಕ್ಷ್ಮೀನಾರಣಪ್ಪ. ಉಡುಪಿಯ ಬಳಿ ಇರುವ 'ನಂದಳಿಕೆ' ಎಂಬ ಚಿಕ್ಕದೊಂದು ಹಳ್ಳಿ ಆತನ ಹುಟ್ಟಿದೂರು. ಅಲ್ಲಿ ಪಾಠಾಳಿ ತಿಮ್ಮಪ್ಪಯ್ಯ ಮಹಲಕ್ಷ್ಮಮ್ಮ ಎಂಬ ಬಡ ಬ್ರಾಹ್ಮಣ ದಂಪತಿಗಳು; ಅವರ ಹಿರಿಯ ಮಗ ನಮ್ಮ ಕವಿ. ಮಗು ಹುಟ್ಟಿದಾಗ ತಾಯಿಗೆ ಇನ್ನೂ ಹದಿನೈದೇ ವರ್ಷ ವಯಸ್ಸು. ಈ ಆಟದ ಬೊಂಬೆಯನ್ನು ಮುದ್ದಿನಿಂದ "ಮುದ್ದಣ್ಣ' ಎಂದು ಕರೆದಳು. ತಾಯಿ ಇಟ್ಟ ಈ ಮುದ್ದಿನ ಹೆಸರೇ ಕವಿಯ ಮುಂದಿನ ಕಾವ್ಯನಾಮವಾಯಿತು.

ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದ ನಾರಣಪ್ಪನಿಗೆ ವಿದ್ಯಾಭ್ಯಾಸ ಹೆಚ್ಚು ಸಾಗಲಿಲ್ಲ. ಹುಟ್ಟಿದೂರಿನ ಹಳ್ಳಿಯ ಶಾಲೆಯಲ್ಲಿ ವಾಚನಶಕ್ತಿಯನ್ನು ಪಡೆದು ಇಂಗ್ಲಿಷ್ ಕಲಿಯಲು ಉಡುಪಿಗೆ ಹೋದ. ಅಲ್ಲಿ ಕ್ಯಾಟ್, ರ್‍ಯಾಟ್, ಮ್ಯಾಟ್ ಕಲಿಯುವಷ್ಟರಲ್ಲಿ ಅದು ಕುಂಟು ಬಿತ್ತು. ಜ್ಞಾನದಾಹದಿಂದ ತಹತಹಗೊಳ್ಳುತ್ತಿದ್ದ ನಾರಣಪ್ಪನಿಗೆ ಊರಿಗೆ ಹಿಂದಿರುಗುವ ಮನಸ್ಸಾಗಲಿಲ್ಲ. ಇಂಗ್ಲಿಷ್ ಶಾಲೆಯ ಅಭ್ಯಾಸ ತನಗೆ ಎಟುಕದೆಂದುಕೊಂಡು ಬಡವರ ಬಂಧುವಾದ ಕನ್ನಡ "ಟ್ರೈನಿಂಗ್ ಸ್ಕೂಲನ್ನು' ಆಶ್ರಯಿಸಿದ. ಆದರೂ ಇಂಗ್ಲಿಷ್ ಮೇಲಿನ ಮೋಹ ಆರಲೊಲ್ಲದು. ಶಾಲೆಯಲ್ಲಿ ಕಲಿಸುತ್ತಿರುವ ಕನ್ನಡ ಆತನ ಚುರುಕು ಬುದ್ಧಿಗೆ ಸಾಲದಾಯಿತು; ಆತನ ವಿರಾಮಕಾಲವನ್ನೆಲ್ಲಾ ತುಂಬುವಷ್ಟು ಆಹಾರ ಅಲ್ಲಿ ದೊರೆಯುತ್ತಿರಲಿಲ್ಲ. ಆದ್ದರಿಂದ ಇಂಗ್ಲಿಷ್ ಪಂಡಿತರನ್ನು ಆಶ್ರಯಿಸಿ ಮನೆಯಲ್ಲಿಯೇ ತನ್ನ ಅಭ್ಯಾಸವನ್ನು ಮುಂದುವರಿಸಿದ. ಮಿತಭಾಷಿಯೂ ವಿನಯಪರನೂ ಆದ ಆತನಿಗೆ ಆಶ್ರಯ ದೊರೆಯುವುದು ಅಷ್ಟೇನೂ ಕಷ್ಟವಾಗಿರಲಿಲ್ಲ. ಬೆರಳು ತೋರಿಸಿದರೆ ಹಸ್ತ ನುಂಗುವ

ಈ ಹೈದನ ಕುಶಾಗ್ರ ಬುದ್ಧಿಯನ್ನು ಕಂಡು ಆಶ್ರಯವಿತ್ತವರಿಗೂ ಎಷ್ಟೋ ಉತ್ಸಾಹ. ಕೆಲಕಾಲ ಇಂಗ್ಲಿಷ್ ಕನ್ನಡಗಳೆರಡೂ ಕೈಹಿಡಿದುಕೊಂಡೇ ಆತನನ್ನು ಅನುಸರಿಸಿದವು.

ಮಾತು ಮಾತಿಗೂ ತಲೆಯಮೇಲೆ ಮಟುಕುವ ಹಿರಿಯರ ಕಾಟವಿಲ್ಲದೆ ಹಾರುವ ಹಕ್ಕಿಯಂತೆ ಬೆಳೆಯುತ್ತಿದ್ದ ನಾರಣಪ್ಪನಿಗೆ ತನ್ನ ಒಲವಿಗೆ ತಕ್ಕಂತೆ ನಡೆಯಲು ಹೆಚ್ಚು ಅಡ್ಡಿ ಆತಂಕಗಳೇನೂ ಇರಲಿಲ್ಲ. ಮಂಗಳೂರು ಯಕ್ಷಗಾನಗಳ ತೌರುಮನೆ. ಕವಿಗೆ ಸಂಗೀತದ ಮೇಲೆ ಬಹು ಗೀಳು. ಶಾಸ್ತ್ರೀಯವಾದ ಸಂಗೀತ ತನಗೆ "ಮೊಲದ ಕೋಡು; ಮಳಲ ನೈ.' ಆದರೆ ಯಕ್ಷಗಾನ ಪ್ರಸಂಗಗಳನ್ನು ನೋಡುವುದಕ್ಕಾಗಲಿ ಕೇಳುವುದಕ್ಕಾಗಲಿ ಯಾರದೇನು ಅಡ್ಡಿ ? ಆಕಾಶ ನೋಡುವುದಕ್ಕೆ ನೂಕು ನುಗ್ಗಲೆ ? ಎಲ್ಲಿ ಪ್ರಸಂಗವಾಗುತ್ತಿದ್ದರೆ ಅಲ್ಲಿ ಹುಡುಗ ಹಾಜರು. ರಸಿಕನೂ ವಿನೋದಪ್ರಿಯನೂ ಆಗಿದ್ದ ಈ ಹುಡುಗನಿಗೆ ಭಾಗವತರಾಟದವರ ಪರಿಚಯವೂ ಸ್ನೇಹವೂ ದೊರೆಯುವುದು ಅಷ್ಟೇನೂ ಕಷ್ಟವಾಗಲಿಲ್ಲವೆಂದು ತೋರುತ್ತದೆ. ಬರಬರುತ್ತಾ ಈ ಬಾಂಧವ್ಯ ಬಲಿತು ನಾರಣಪ್ಪನ ಜೀವನಕ್ಕೂ ಯಕ್ಷ ಗಾನಕ್ಕೂ ನಿಕಟಸಂಬಂಧವುಂಟಾಯಿತು. ಆಗಾಗ ಅವುಗಳಲ್ಲಿ ಚಿಕ್ಕ ಪುಟ್ಟ ಪಾತ್ರಗಳನ್ನು ನಟನೆ ಮಾಡಿ ತೋರುತ್ತಿದ್ದನು. ಯಕ್ಷಗಾನದ ಪಾತ್ರಗಳ ಬಾಯಲ್ಲಿ ಬರುವ ಪ್ರಾಸಬದ್ಧವಾದ ಮಾತುಗಳಲ್ಲಿ ಹುಡುಗನಿಗೆ ಏನೋ ಒಂದು ಮೋಹ. ಅಲ್ಲಿ ಕಾಣಬರುವ ಪ್ರಾಸ ಅನುಪ್ರಾಸ ಯಮಕಾದಿಗಳ ಗೆಜ್ಜೆಯ ಶಬ್ದವನ್ನು ಆತನ ಕಿವಿ ಅರಗಿಸಿಕೊಂಡಿತು. ಅವುಗಳ ಧಾಟಿಯನ್ನು ಅನುಕರಿಸಿ ಆಗಾಗ ಒಂದೊಂದು ತುಂಡು ಪದ್ಯವನ್ನು ತಾನೂ ಕಟ್ಟುವುದು, ಅದನ್ನು ಯಕ್ಷಗಾನ ಪ್ರಸಂಗದ ಕಾಲದಲ್ಲಿ ಪ್ರಯೋಗಿಸುವುದು, ಇದರಿಂದ ಜನ ಮೆಚ್ಚಿದುದನ್ನು ಕಂಡು ಹುರಿಗೊಳ್ಳುವುದು, ಮಾತನಾಡುವಾಗಲೂ ಪ್ರಾಸಬದ್ಧವಾಗಿಯೇ ಮಾತನಾಡಿ ಜನರನ್ನು ವಿನೋದಗೊಳಿಸುವುದು ಈ ಬಗೆಯಾದ ವಿದ್ಯಾಭ್ಯಾಸ ಕವಿಯಲ್ಲಿ ಬಹುವಾಗಿ ಮುಂದುವರಿಯುತ್ತಾ ಹೋಯಿತೆಂದು ತೋರುತ್ತದೆ. ಈ ಕಾಲದಲ್ಲಿ. ಸುಮಾರು ಹದಿನೆಂಟು ವರ್ಷ ವಯಸ್ಸಾಗುವ ವೇಳೆಗೆ ಟ್ರೈನಿಂಗ್ ಸ್ಕೂಲಿನ ಪರೀಕ್ಷೆ ಪಾಸಾಯಿತು. ಅಲ್ಲಿಗೆ ಶಾಲೆಯ ಅಭ್ಯಾಸವೂ ಕೊನೆಗೊಂಡಿತು.

ತಾರುಣ್ಯದೊಡನೆ ಹೊಟ್ಟೆಯ ಪಾಡಿನ ಯೋಚನೆ ತಲೆದೋರಿತು ನಾರಣಪ್ಪನಿಗೆ. ವಿದ್ಯಾಭ್ಯಾಸದ ನೆಪದಿಂದ ಹೇಗೋ ಹೊಟ್ಟೆಯ ಕಾಲಕ್ಷೇಪ ನಡೆಯುತ್ತಿತ್ತು, ಇದುವರೆಗೆ. ಈಗ ? ಕನ್ನಡ ಓದಿಗೂ ಹೊಟ್ಟೆಯ ಹಿಟ್ಟಿಗೂ ಬಹು ದೂರ. ಪುಣ್ಯಕ್ಕೆ "ಟ್ರೈನಿಂಗ್ ಸ್ಕೂಲಿ'ನ ಹೆಡ್ಮಾಸ್ಟರು ಗಟ್ಟಿ ಮುಟ್ಟಾಗಿದ್ದ ಈ ಹುಡುಗನನ್ನು ಅಂಗಸಾಧನೆ ಕಲಿಯುವುದಕ್ಕಾಗಿ ಮದ್ರಾಸಿಗೆ ಕಳುಹಿಸಿಕೊಟ್ಟರು. ಸರ್ಕಾರದ ವೆಚ್ಚದಿಂದ ಅಲ್ಲಿಗೆ ಹೋಗಿ ಕಲಿತು ತೇರ್ಗಡೆ ಹೊಂದಿ ಹಿಂದಿರುಗಿದ ಮೇಲೆ ಉಡುಪಿಯ ಹೈಸ್ಕೂಲಿನಲ್ಲಿ ಕಸರತ್ ಕಲಿಸುವ ಉಪಾಧ್ಯಾಯರ ಕೆಲಸ ದೊರಕಿತು. ಸಂಬಳ ತಿಂಗಳ ಮೂವತ್ತು ದಿನಗಳೂ ದುಡಿದರೆ ಹತ್ತು ರೂಪಾಯಿ.

ಸಂಬಳ ಹತ್ತು ರೂಪಾಯಿಗಳಾದರೂ ಚಿಂತೆ ಇಲ್ಲ; ಉಡುಪಿಯಲ್ಲಿ ಮಳಲಿ ಸುಬ್ಬರಾಯರ ಸ್ನೇಹ ದೊರೆಯಿತು. ಸುಬ್ಬರಾಯರು ಉಡುಪಿ ಹೈಸ್ಕೂಲಿನ ಉಪಾಧ್ಯಾಯರು. ಹಲವು ಮರಾಠಿ ನಾಟಕಗಳನ್ನೂ ಯಕ್ಷಗಾನಗಳನ್ನೂ ಬರೆದು ಸುತ್ತುಮುತ್ತ ಸುಪ್ರಸಿದ್ಧರಾಗಿದ್ದರು. ನಮ್ಮ ನಾರಣಪ್ಪ ಅವರನ್ನು ಆಶ್ರಯಿಸಿ ಜೇನ್ಸವಿಯ ತನ್ನ ನುಡಿಗಳಿಂದ ಅವರ ಮನವೊಲಿಸಿದ. ಅವರು ನೂತನವಾಗಿ ರಚಿಸಿದ್ದ ಯಕ್ಷಗಾನಗಳನ್ನು ಕೊಂಡೊಯ್ದು ಓದಿದ. ಯಕ್ಷಗಾನಗಳನ್ನು ಬರೆಯಲು ತನಗೂ ಕುತೂಹಲವಿರುವುದಾಗಿ ನಮ್ರತೆಯಿಂದ ಅವರಲ್ಲಿ ವಿಜ್ಞಾಪಿಸಿಕೊಂಡ. ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸುವಂತೆ ಅವರನ್ನು ಪ್ರಾರ್ಥಿಸಿದ. ಅವರ ಸಹಾಯವನ್ನು ಪಡೆದು ಸಂಸ್ಕೃತ 'ರತ್ನಾವಳೀ' ನಾಟಕದ ಕಥೆಯನ್ನು ಯಕ್ಷಗಾನ ಪ್ರಸಂಗವಾಗಿ ಬರೆಯಲು ಮೊದಲು ಮಾಡಿದ. ನಾಟಕವೆಂದರೆ ನಾಂದೀಶ್ಲೋಕ ಬೇಡವೇ ? ಸಂಸ್ಕೃತದ ಪರಿಚಯ ಸ್ವಲ್ಪವೂ ಇಲ್ಲದ ನಾರಣಪ್ಪ ಎರಡು ಸಲ ಪ್ರಯತ್ನಪಟ್ಟರೂ ನಾಂದಿ ಪದ್ಯ ಬರೆಯುಲಾಗಲಿಲ್ಲವಂತೆ! ಗುರುಗಳಿಂದಲೇ ಅದನ್ನು ಬರೆಸಿಕೊಂಡನಂತೆ! ಪ್ರಸಂಗದಲ್ಲಿ ಅವಶ್ಯವಾದ ಹಾಡುಗಳಿಗೆ ತಕ್ಕ ಧಾಟಿಗಳನ್ನು ಹೊಂದಿಸಿಕೊಳ್ಳುವುದೂ ಆಗದೆ ತಾನು ನೋಡಿದ್ದ ಯಕ್ಷಗಾನದ ಹಾಡುಗಳನ್ನೇ ಧಾಟಿಗೆ ಉಪಯೋಗಿಸಿದನಂತೆ! ಮನಸ್ಸೊಂದಿದ್ದರೆ, ಉತ್ಸಾಹವೊಂದಿದ್ದರೆ ಅಡ್ಡಿಯಾಗಬಲ್ಲ ಅರಕೆಯಾವುದು ? ಹೇಗೋ ರತ್ನಾವತೀ ಕಲ್ಯಾಣವನ್ನು ಬರೆದು ಮುಗಿಸಿದ.

ಹೀಗೆ 'ಕಸರತ್ ಕಲಿಸುವ ಮೇಷ್ಟರು ಕ್ರಮವಾಗಿ ಕವಿಯಾಗತೊಡಗಿದ.' ಒಂದು ಗ್ರಂಥವನ್ನು ಬರೆದು ಹುರಿಗೊಂಡ ಕವಿ ಎರಡನೆಯದನ್ನು ಬರೆಯಲು ಕೈಹಾಕಿದ. ಸ್ಕಾಂಧಪುರಾಣದಲ್ಲಿ ಬರುವ ಷಣ್ಮುಖಚರಿತ್ರೆಯನ್ನು ಗುರುಗಳಾದ ಸುಬ್ಬರಾಯರ ಸಹಾಯದಿಂದ ಓದಿದ. ಹೈಸ್ಕೂಲಿನ ಸಾರಸ್ವತ ವಾತಾವರಣದ ಉಪಯೋಗವನ್ನು ಚೆನ್ನಾಗಿಯೇ ಮಾಡಿಕೊಳ್ಳುತ್ತಿದ್ದ. ಕೈಗೆ ಸಿಕ್ಕಿದ ಕನ್ನಡ ಗ್ರಂಥಗಳನ್ನೆಲ್ಲಾ ಓದಿ ಮುಗಿಸುತ್ತಿದ್ದ. ಇದರ ಫಲವಾಗಿ ಒಳಗಿದ್ದ ಪ್ರತಿಭೆ ಹೊರದೋರಲು ಅವಶ್ಯವಾದ ಶಬ್ದಸಂಪತ್ತು ಯಥೇಷ್ಟವಾಗಿ ಆತನ ವಶವಾಯ್ತು. ಸಂಗೀತ ಸಾಹಿತ್ಯಗಳೆರಡೂ ಸಾರಸ್ವತಾಮೃತದ ಯಮಳನದಿಗಳು ತಾನೆ ? ಕವಿ ಸಂಗೀತವನ್ನು ತಕ್ಕಮಟ್ಟಿಗೆ ಅಭ್ಯಾಸ ಮಾಡಿದ, ಪಿಟೀಲು ವಾದನದ ಸಹಾಯದಿಂದ. ಈ ಎರಡರ ಜ್ಞಾನವನ್ನು ಪ್ರಯೋಗಿಸಿ ತನ್ನ ಎರಡನೆಯ ಯಕ್ಷಗಾನ 'ಕುಮಾರ ವಿಜಯ'ವನ್ನು ಬರೆದ. ಗ್ರಂಥ ಪ್ರೌಢಿಮೆಯಿಂದ ಕೂಡಿರುವುದರ ಜೊತೆಗೆ ಹಾಡುಗಳಿಗೆ ಹೊಸ ಹೊಸ ಮಟ್ಟುಗಳೂ ಹುಟ್ಟಿಕೊಂಡವು. ತನಗೆ ತಾನೇ ಓದಿಕೊಂಡಾಗ ಕವಿಗೆ ತನ್ನ ಕೃತಿ ಬಹು ಮೆಚ್ಚಿಗೆಯಾಗಿರಬೇಕು. ಅದನ್ನು

ಸರ್ಪಭೂಷಣ ಭಕ್ತ ಕವಿತಾ ।
ದರ್ಪಣಾಬ್ಧಿ ಗಭೀರ ಗುರುವೆನಿ ।
ಸಿರ್ಪ ಮಳಲೀ ಸುಬ್ಬರಾಯರಿಗರ್ಪಿಸುವೆನಿದನು ॥

ಎಂದು ತುಂಬುಹೃದಯದಿಂದ ಗುರುಗಳಿಗೆ ಕಾಣಿಕೆಯಾಗಿ ಅರ್ಪಿಸಿದ.

ಮೇಲಿನ ಯಕ್ಷಗಾನಗಳೆರಡರಲ್ಲಿ 'ಕುಮಾರವಿಜಯ'ವು ಸಾಹಿತ್ಯದೃಷ್ಟಿಯಿಂದ ಗಮನಾರ್ಹವಾದುದು. ಹಿಂದೂ ಮುದ್ರಣಾಲಯದ ಚಾಲಕರ ಔದಾರ್ಯದಿಂದ ಅವೆರಡೂ ಅಚ್ಚಾಗಿ ಪ್ರಕಟವಾದುವಾದರೂ 'ರತ್ನಾವತೀಕಲ್ಯಾಣ'ದಲ್ಲಿ ಕವಿಯ ವ್ಯಕ್ತಿತ್ವ ಅಷ್ಟಾಗಿ ಎದ್ದು ಕಂಡುಬರುತ್ತಿಲ್ಲ. ಕಲಿಕೆಯ ಕೈಯೇ ಹೊರತು ಪರಿಣತಿಗೊಂಡ ಚಾತುರ್ಯ ಅಲ್ಲಿಲ್ಲ. ಆದರೂ ಅದಕ್ಕೆ ದೊರೆತ ಪುರಸ್ಕಾರ 'ಕುಮಾರವಿಜಯ'ಕ್ಕೆ ದೊರೆಯಲಿಲ್ಲ. 'ರತ್ನಾವತೀಕಲ್ಯಾಣ'ವು ಕೆಲವು ಕಡೆ ರಂಗಭೂಮಿಯ ಮುಖ ಕಂಡಿತಂತೆ ! 'ಕುಮಾರವಿಜಯ'ಕ್ಕೆ ಆ ಭಾಗ್ಯವೂ ಇಲ್ಲದೆ ಹೋಯಿತು.

ಇಷ್ಟರಲ್ಲಿ ಸುಬ್ಬರಾಯರಿಗೆ ಕುಂದಾಪುರಕ್ಕೆ ವರ್ಗವಾಯ್ತು ಜ್ಞಾನದಾಹದಿಂದ ತಹತಹಗೊಳ್ಳುತ್ತಿದ್ದ ನಾರಣಪ್ಪ ಗುರುವಿನ ಅಗಲಿಕೆಯನ್ನು ಸಹಿಸದಾದ ; ಪ್ರಯತ್ನಪಟ್ಟು ಕೆಲವು ತಿಂಗಳೊಳಗಾಗಿ ತಾನೂ ಕುಂದಾಪುರಕ್ಕೇ ವರ್ಗ ಮಾಡಿಸಿಕೊಂಡ. ಆದರೆ ಈ ಮಧ್ಯೆ ಆತನಿಗೆ ಯಕ್ಷಗಾನಗಳ ಮೇಲಿನ ಮೋಹ ಹರಿದು ಹೋಗಿತ್ತು ; ಪ್ರೌಢಕಾವ್ಯಗಳನ್ನು ಬರೆಯಬೇಕೆಂಬ ಉತ್ಸಾಹ ಬಲಿತುಕೊಂಡಿತ್ತು. ವಾಕ್ಸಂಪತ್ತನ್ನು ಗಳಿಸುವುದಕ್ಕಾಗಿ ಹಳಗನ್ನಡ ಗ್ರಂಥಗಳನ್ನು ಅಭ್ಯಸಿಸಲು ಮೊದಲುಮಾಡಿದ. ಗುರುಗಳ ಮನೆಯಲ್ಲಿದ್ದ ಗ್ರಂಥಭಂಡಾರವನ್ನು, ಅಗತ್ಯವಿದ್ದೆಡೆ ಕಿಟಲ್ ಡಿಕ್ಷನರಿಯ ನೆರವನ್ನು ಪಡೆದು, ಕೊಳ್ಳೆ ಹೊಡೆದ. ಕೆಲವು ಕಾಲ ಸಾರಸ್ವತ ತಪಸ್ಸನ್ನೇ ನಡೆಸಿದನೆಂದು ಹೇಳಬಹುದು. ಆಗ್ಗೆ "ಶಬ್ದ ಮಣಿದರ್ಪಣ ಮುಂತಾದ ವ್ಯಾಕರಣಗಳು ನಿತ್ಯದ ಪಾರಾಯಣ ಪುಸ್ತಕಗಳು; ಹಳಗನ್ನಡ ಭಾಷಾ ವಾಗ್ದೇವಿಯೇ ಇಷ್ಟದೇವತೆ ; ಇವುಗಳಲ್ಲಿ ಅತ್ಯಾಸಕ್ತಿಯೇ ದೃಢ ಭಕ್ತಿ. ಇವರ (ನಾರಣಪ್ಪನ) ಇಂತಹ ಏಕಾಗ್ರವಾದ ತಪಸ್ಸಾಧನೆಗೆ ಸಂತುಷ್ಟಳಾದ ಈ ದೇವತೆಯು ಪ್ರಸನ್ನಚಿತ್ತಳಾಗಿ ಹಳಗನ್ನಡದ ನೂತನ ಭಾಷಾಶೈಲಿಯನ್ನು ವರಪ್ರದಾನವಾಗಿತ್ತಳೋ – ಎಂಬಂತೆ ಇವರ ನೂತನ ಕವಿತಾ ಪಾಂಡಿತ್ಯವು ಅಭಿವೃದ್ಧಿಗೊಂಡಿತು.' *

ಕವಿಯು ಮೊದಲನೆಯದಾಗಿ ಕನ್ನಡದಲ್ಲಿ ಪ್ರಚಾರದಲ್ಲಿಲ್ಲದಿದ್ದ ಅದ್ಭುತ ರಾಮಾಯಣವನ್ನು ಕನ್ನಡಕ್ಕೆ ತರಲು ಪ್ರಯತ್ನಿಸಿದ. ದಿನದಿನವೂ ಗುರುಗಳಿಂದ ಎರಡು ಮೂರು ಅಧ್ಯಾಯಗಳಷ್ಟು ಸಂಸ್ಕೃತಮೂಲವನ್ನು ಓದಿಸಿ ಕೇಳುವುದು, ಮರುದಿನದ ಹೊತ್ತಿಗೆ ಅದಿಷ್ಟನ್ನು ಹಳಗನ್ನಡದಲ್ಲಿ ಬರೆದು ಗುರುಗಳೆದುರಿಗೆ ಓದುವುದು, ಅವರೇನಾದರೂ ಸೂಚನೆಗಳನ್ನು ಕೊಟ್ಟರೆ ನಗುಮುಖದಿಂದ ಅದನ್ನು ಸ್ವೀಕರಿಸಿ ತನ್ನ ಗ್ರಂಥದಲ್ಲಿ ಎತ್ತಿಕೊಳ್ಳುವುದು – ಈ ಕ್ರಮದಿಂದ ಕನ್ನಡ ಅದ್ಭುತರಾಮಾಯಣವು ಸಾಗುತ್ತಾ ಹೋಯಿತು. ಬರಬರುತ್ತಾ ಕಾವ್ಯ ಹೆಚ್ಚು ಹೆಚ್ಚು

---

* ಶ್ರೀಮಾನ್ ಮಳಲಿ ಸುಬ್ಬರಾಯರು 'ಮುದ್ದಣ'ದಲ್ಲಿ ಬರೆದಿರುವ ಲೇಖನ.

ಪ್ರೌಢವಾಗುತ್ತಿರುವುದನ್ನು ಕಂಡು ಗುರುಗಳ ಕುತೂಹಲ ಕೆರಳಿತು; ಆತನ ದಿನದಿನದ ಬರಹವನ್ನು ನೋಡಲು ತವಕಪಡಹತ್ತಿದರು. ಈ ಆದರವನ್ನು ಕಂಡು ಕವಿ ಹೆಚ್ಚು ಹೆಚ್ಚು ಉತ್ಸಾಹದಿಂದ ಕಾವ್ಯವನ್ನು ಬರೆಯತೊಡಗಿದ. ಕಾವ್ಯ ಪೂರ್ಣವಾದ ಮೇಲೆ ಮತ್ತೊಮ್ಮೆ ಸಮಗ್ರವಾಗಿ ಗುರುಗಳ ಬಳಿ ಓದಿದ. ಅವರು ಮೆಚ್ಚಿ ಅದನ್ನು ಛಾಪಿಸುವಂತೆ ಪ್ರೋತ್ಸಾಹಿಸಿದರು. ಆದರೆ ಯಕ್ಷಗಾನಗಳನ್ನು ಛಾಪಿಸಿ ಒಮ್ಮೆ ಕೈ ಸುಟ್ಟುಕೊಂಡಿದ್ದ, ನಾರಣಪ್ಪ. ಅವುಗಳ ಪ್ರತಿಗಳೆಲ್ಲಾ ಮೂಸುವವರಿಲ್ಲದೆ ಮೂಲೆಯಲ್ಲೇ ಬಿದ್ದಿದ್ದವು. ಮತ್ತೊಮ್ಮೆ ಮುಂದೆ ಬರಲು ಧೈರ್ಯ ಸಾಲದಾಯಿತು. ಕಾವ್ಯವನ್ನು ಛಾಪಿಸಬೇಕೆಂಬ ಆಶೆಯಿದ್ದರೂ ಹಣವಿಲ್ಲ ; ಅಲ್ಲದೆ ಕಾವ್ಯವು ತನ್ನದೆಂದು ತಿಳಿದರೆ 'ನೂತನ ಕವಿತೆಯೆಂದು ಜರೆದು ಕುಂದಿಡು'ವರೆಂಬ ಭಯ. ಏನು ಮಾಡಬೇಕು ? ಯಾರ ಮಗುವೆಂದಾದರೂ ಹೇಳಲಿ ತನ್ನ ಮಗು ಎಲ್ಲಿಯಾದರೂ ಸುಖವಾಗಿದ್ದರೆ ಸಾಕೆಂಬ ತಾಯ ಹಂಬಲದಂತೆ ಕವಿ ತನ್ನ ಹೆಸರು ಮರೆಸಿ ಕಾವ್ಯವನ್ನು ಬಯಲಿಗೆ ಬಿಡಬೇಕೆಂದು ನಿಶ್ಚಯಿಸಿದ. ಪುರಾತನ ಗ್ರಂಥಸಂಗ್ರಹದಲ್ಲಿ ದೊರೆತ ಅನಾಮ ಕರ್ತೃಕ ಗ್ರಂಥವೆಂದು ಹೇಳಿ ಅದನ್ನು 'ಕಾವ್ಯಮಂಜರಿ'ಯ ಸಂಚಾಲಕರ ಬಳಿಗೆ ಕಳುಹಿಸಿದ.

'ಅದ್ಭುತ ರಾಮಾಯಣ' ಬರೆದು ಮುಗಿಸಿದುದು ಕ್ರಿ.ಶ. ೧೮೯೫ ರಲ್ಲಿ. ಕವಿಯು ಸ್ವಹಸ್ತದಿಂದ ಹಾಗೆಂದು ಬರೆದಿದ್ದಾನೆ, ತನ್ನ ಹಸ್ತಪ್ರತಿಯ ಮೇಲೆ. ಅಲ್ಲದೆ ತಾನೇ ಕಾವ್ಯ ಕರ್ತೃವೆಂದೂ ಹೇಳಿಕೊಂಡಿದ್ದಾನೆ. ಇದನ್ನು ನೋಡಿದ ಮೇಲೆ ಗ್ರಂಥಕರ್ತೃ ನಾರಣಪ್ಪನೇ ಅಲ್ಲಲ್ಲಿ ಕವಿಯು ಮಾಡಿರುವ ತಿದ್ದುಪಾಟುಗಳೂ ಆತನ ಸ್ವಹಸ್ತಾಕ್ಷರದಲ್ಲಿ ಹಾಗೆಯೇ ಉಳಿದುಕೊಂಡಿವೆ.

ಅದ್ಭುತರಾಮಾಯಣವನ್ನು ಅಚ್ಚಿನಲ್ಲಿ ಕಂಡೊಡನೆಯೇ ಕವಿಗೆ ಮತ್ತೊಂದು ಗ್ರಂಥವನ್ನು ಆರಂಭಿಸಬೇಕೆಂಬ ಮಹದಾಕಾಂಕ್ಷೆ ಉದಿಸಿತು. ಯಾವ ಗ್ರಂಥವನ್ನು ಬರೆಯಬೇಕು ? ಯಾವ ಗ್ರಂಥವೆಂದರೇನು ? 'ಉಳಿದೊಡಂ ಅಳಿದೊಡಂ ಬಟ್ಟೆದೋರಿಪ' ರಸಭರಿತವಾದ ಚರಿತೆಯೊಂದನ್ನು ಬರೆಯಬೇಕು. ಅಂತಹ ಕಾವ್ಯವಸ್ತುಗಳನ್ನು ಮೊಗೆಮೊಗೆದಷ್ಟೂ ಮೊಟುಕಾಗದ ಮಹಾಸಾಗರ ರಾಮಾಯಣ. ಆ ಮಹಾಕಾವ್ಯದಿಂದ ಯಾವುದಾದರೊಂದು ಭಾಗವನ್ನು ಆಯ್ದುಕೊಳ್ಳಬೇಕು. ಕವಿಗೆ ಕನ್ನಡ 'ಜೈಮಿನಿಭಾರತ' ಮುಖೋದ್ಗತವಾಗಿತ್ತು. ಅದರಲ್ಲಿ ಬಂದಿರುವ ಮನೋಹರವಾದ ಸೀತಾವನವಾಸವು ಕವಿಯ ಮನಸ್ಸನ್ನು ಸೂರೆಗೊಂಡು ಸೆರೆಹಿಡಿದಿತ್ತು. ಅದನ್ನೇ ಕಾವ್ಯ ರೂಪದಲ್ಲಿ ಬರೆಯಬೇಕೆನ್ನಿಸಿತು. 'ಪದ್ಮಪುರಾಣ'ದಲ್ಲಿ ಕಂಡುಬರುವ 'ರಾಮಾಶ್ವಮೇಧ'ದ ಭಾಗವನ್ನು ಗುರುಗಳಲ್ಲಿ ಅಭ್ಯಸಿಸಲು ಮೊದಲು ಮಾಡಿದ. ರಾಮನು ರಾವಣನನ್ನು ಸಂಹರಿಸಿ ಮಡದಿಯಾದ ಸೀತೆಯೊಡನೆ ಹಿಂದಿರುಗಿ ಅಯೋಧ್ಯೆಯಲ್ಲಿ ಪಟ್ಟಾಭಿಷಿಕ್ತನಾಗುವವರೆಗೆ ಮೂಲದಲ್ಲಿ ಕಥೆ ಸುಮಾರು ನಾಲ್ಕು ಅಧ್ಯಾಯಗಳಷ್ಟಾಗುತ್ತದೆ. ಇದರಲ್ಲಿ ಕಥೆಗಿಂತಲೂ ವರ್ಣನೆಗೇ ಹೆಚ್ಚು ಪ್ರಾಧಾನ್ಯ. ಕಾವ್ಯಕರ್ಮದಲ್ಲಿ ಇನ್ನೂ ಎಳೆಯವನಾಗಿದ್ದ ಕವಿಗೆ ವರ್ಣನೆಯ ಮೇಲೆ

ಮಮತೆ ಹೆಚ್ಚು. ಅಲ್ಲದೆ ಅಷ್ಟು ಭಾಗವೇ ಒಂದು ಕಾವ್ಯಕ್ಕೆ ಅಖಂಡವಾದ ಸುಂದರ ವಸ್ತುವಾಗಿಯೂ ಕಾಣಿಸಿತು. ಇದರ ಫಲವಾಗಿ 'ರಾಮಪಟ್ಟಾಭಿಷೇಕ' ಸೃಷ್ಟಿಯಾಯಿತು. ತನ್ನ ಕಾವ್ಯಗಳನ್ನು ಬೆಳಕಿಗೆ ತರಲು ಸೊಗಸಾದ ಉಪಾಯವೂ ದೊರೆತಿತ್ತು. ಹಿಂದಿನ ಯಾವಳೋ ಕವಿಯಿತ್ರಿ 'ಲಕ್ಷ್ಮಿ' ಎಂಬುವಳು ಈ ಕಾವ್ಯವನ್ನು ಬರೆದಳೆಂದು ಹೇಳಿ ಅದನ್ನು 'ಕಾವ್ಯಮಂಜರಿ'ಗೆ ಕಳುಹಿಸಿದ. ಕವಿಯು ಈ ಹೆಸರನ್ನು ಬಳಸಿದಾಗ ಬಹುಶಃ ತನ್ನ ತಾಯಿಯನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದನೋ ಏನೋ ! ಅಥವಾ ಕೆಲವರು ಊಹಿಸುವಂತೆ ಈತನು ಉಡುಪಿಯಲ್ಲಿ ಊಟ ಮಾಡುತ್ತಿದ್ದ ಹೋಟಲ ಮಾಲೀಕನ ಮಗಳು 'ಲಕ್ಷ್ಮಿ' ಕಣ್ಣ ಮುಂದೆ ಕುಣಿದಾಡುತ್ತಿದ್ದಳೋ ಏನೋ !

ಆ ಕಾಲಕ್ಕೆ ಬಿ. ವೆಂಕಟಾಚಾರ್ಯರ ಕಾದಂಬರಿಗಳು ಎಲ್ಲೆಲ್ಲಿಯೂ ಗರಿಗೆದರಿ ಹಾರುತ್ತಿದ್ದವು. ಅವುಗಳ ಕಥಾಸಂವಿಧಾನ ಚಾತುರ್ಯ, ಸುಂದರಶೈಲಿಗಳನ್ನು ಕಂಡು ಜನ ಬಹು ಮೆಚ್ಚಿತ್ತು. ನಮ್ಮ ಕವಿಯೂ ಆ ಗ್ರಂಥಗಳನ್ನು ಮೆಚ್ಚಿ ಬಹು ಉತ್ಸಾಹದಿಂದ ಓದಿದ. ಜನಮೆಚ್ಚಿಗೆಗೆ ಸುಂದರಶೈಲಿಯ ಗದ್ಯವೇ ಹೆದ್ದಾರಿ; ಪ್ರೌಢಕಾವ್ಯಗಳು ಎಲ್ಲಿಯೋ ಮೂಲೆಯಲ್ಲಿರುವ ಮೂವರಿಗೆ ಮೆಚ್ಚಿಗೆಯಾಗಬಹುದು; ಸರ್ವಮಾನ್ಯವಾಗಲು ಚಮತ್ಕಾರವಾದ ಸಂಭಾಷಣೆ ಕಥೆಯ ನಡುವೆ ಸುಳಿದು ಹಾಸ್ಯದ ತರಂಗಗಳನ್ನೆಬ್ಬಿಸಬೇಕು – ಎಂದುಕೊಂಡನೆಂದು ತೋರುತ್ತದೆ, ನಮ್ಮ ಕವಿ, ವೆಂಕಟಾಚಾರ್ಯರ ಕಾದಂಬರಿಗಳನ್ನು ಓದಿದಂದು 'ಪದ್ಯಂ ವಧ್ಯಂ; ಗದ್ಯಂ ಹೃದ್ಯಂ; ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು' ತನ್ನ ಕಥೆಯನ್ನು. 'ಎಡೆಎಡೆಯೊಳ್ ರಸಮೊಸರೆ, ಲಕ್ಕಣಂ ಮಿಕ್ಕಿರೆ' ಕಾವ್ಯಸೃಷ್ಟಿಯಾಗಬೇಕು. 'ಕರ್ಮಣಿ ಸರದೊಳ್ ಚೆಂಬವಳಮಂ ಕೋದಂತೆ' ಅಲ್ಲಲ್ಲಿ 'ಸಕ್ಕದದ ನಲ್ನುಡಿ' ಮೆರೆಯುತ್ತಿರಬೇಕು. ಇತರರ ಅನುಕರಣೆ ಅಗತ್ಯವಿಲ್ಲ; ಹಳಗನ್ನಡದಲ್ಲಿ ತನ್ನ ಕಾವ್ಯವನ್ನು ಬರೆಯಬೇಕು. ಹೀಗೆ ನಿಶ್ಚಯಿಸಿದ ಕವಿ 'ರಾಮಾಶ್ವಮೇಧದ' ಅಭ್ಯಾಸವನ್ನು ಗುರುಗಳ ಬಳಿ ಮುಂದುವರಿಸಿದ. ಇದನ್ನು ಓದಿ ಮುಗಿಸುವ ಹೊತ್ತಿಗೆ ಕನ್ನಡ 'ಶ್ರೀ ರಾಮಾಶ್ವಮೇಧಂ'ವೂ ಮುಗಿಯಿತು.

ಕಾವ್ಯವನ್ನು ಬರೆದುದಾದ ಮೇಲೆ ಕವಿ ತನ್ನ ಕಾವ್ಯವನ್ನು ತಾನೇ ಓದಿದ. 'ತನ್ನ ಕಾವ್ಯಕ್ಕೆ ತಾನೆ ಮಣಿ'ಯುವಂತಿತ್ತು. 'ಈವಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲಮೆಂದಾಯ್ತು.' ತಾನೆಂದ ಕತೆ 'ಬಲ್ಸೊಗಸಂ ಬಲ್ಸೊಗಸು' ಎಂದುಕೊಂಡ. ತನ್ನ ಆಪ್ತಮಿತ್ರರಿಗೆ ಅದನ್ನು ತೋರಿಸಿದ. ಅವರು ಅದನ್ನು ಮೆಚ್ಚಿ ಅರಮನೆಯ ಉಡುಗೊರೆಗೆ ಯೋಗ್ಯವಾದುದೆಂದು ಹೊಗಳಿದರು. ತಮಗೆ ಮಾತ್ರವೇ ಅಲ್ಲ, 'ನಾಡೊಳೆಲ್ಲರ್ಗಂ' ಆದರವಾಗುವುದೆಂದು ಕವಿಯನ್ನು ಹುರಿದುಂಬಿಸಿದರು. ಉತ್ಸಾಹಿತನಾದ ಕವಿ ಇದನ್ನೂ ಕಾವ್ಯಮಂಜರಿಗೆ ಕಳುಹಿಸಿದ. ತನ್ನ ತಾಯಿ ಚಿಕ್ಕಂದಿನಲ್ಲಿ ತನ್ನನ್ನು ಮುದ್ದಿನಿಂದ 'ಮುದ್ದಣ್ಣ' ಎಂದು ಕರೆಯುತ್ತಿದ್ದಳಷ್ಟೆ. ಕವಿಗೆ ತಾಯಿಯ ಆ ಮಮತೆಯ ಮಾತು ಕಿವಿಯಲ್ಲಿ ಅಮೃತದ ಸೋನೆಯನ್ನು ಸುರಿಸುತ್ತಿತ್ತು. ಅದನ್ನೇ ತನ್ನ ಕಾವ್ಯಕರ್ತೃವಿನ ಹೆಸರಾಗಿ ಬಳಸಿದ. ಹೇಗಿದ್ದರೂ ತನ್ನ ಹೆಸರನ್ನು

ಮುಚ್ಚಿಡಬೇಕಾಗಿತ್ತು. ತನ್ನ ಹೆಸರನ್ನು; ಹೇಳಿಯೂ ಹೇಳದಂತೆ ಮಾಡಲು ಕವಿಗೆ ಬಹು ಅನುಕೂಲವಾಯ್ತು.

'ಶ್ರೀರಾಮಾಶ್ವಮೇಧಂ' ಕನ್ನಡ ಕಾವ್ಯ ಪ್ರಪಂಚದಲ್ಲಿ ಹೊಸದೊಂದು ಹೆದ್ದಾರಿಯನ್ನು ತೋರಿ ತೊಳಗಿ ಬೆಳಗಿತು; ಎಲ್ಲೆಲ್ಲಿಯೂ ಪ್ರಶಂಸಿತವಾಯಿತು. ಯಾರ ಬಾಯಲ್ಲಿ ನೋಡಿದರೂ ಮುದ್ದಣ-ಮನೋರಮೆಯರ ಸಂಭಾಷಣಾ ವಾಕ್ಯಗಳೇ. ಯಾವ ಮಾಸಪತ್ರಿಕೆಯನ್ನು ನೋಡಿದರೂ ಅದರ ಮೇಲಿನ ಆದರದ ವಾಕ್ಯಗಳೇ. ಕನ್ನಡ ಮಾಸಪತ್ರಿಕೆಗಳು ಮಾತ್ರವೇ ಅಲ್ಲ; ಇಂಗ್ಲಿಷ್ ಪತ್ರಿಕೆಗಳು ಸಹ ಅಲ್ಲಲ್ಲಿ ಆ ಕಾವ್ಯವನ್ನು ಮುಕ್ತಕಂಠದಿಂದ ಹೊಗಳಿದವು. ಇದನ್ನು ತನ್ನ ಜೀವಿತ ಕಾಲದಲ್ಲಿಯೇ ಕಂಡ ಕವಿ ನಿಜವಾಗಿಯೂ ಧನ್ಯ. ಕವಿಗೆ ತನ್ನ ಕಾವ್ಯಗಳಿಂದ ದ್ರವ್ಯಪುರಸ್ಕಾರವೇನೂ ದೊರಕದೇ ಹೋಗಿರಬಹುದು; ಆದರೇನು? ಕವಿ ನಿತ್ಯತೃಪ್ತ. ಕಾವ್ಯವು ತನ್ನದೆಂದು ಜನರಿಗೆ ಅರಿವಾಗದೇ ಹೋಗಿರಬಹುದು; ಕವಿಗೆ ಅದರಿಂದ ಕೊರತೆಯಾಗಲಿಲ್ಲ. ಕವಿಯ ಮನೋವೃತ್ತಿಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸಿರುವ ಕನ್ನಡಿಯಂತಿದೆ, ಆಗಿನ ಕಾಲದಲ್ಲಿ ಆತನಿಗೂ ದಿವಂಗತ ಶ್ರೀಮಾನ್ ಬೆನಗಲ್ ರಾಮರಾಯರಿಗೂ ನಡೆದ ಸಂಭಾಷಣೆಯೊಂದು. ಆ ಸಂಭಾಷಣೆಯಿಂದ ಈ ಕಾವ್ಯಗಳ ಕರ್ತೃ ಲಕ್ಷ್ಮೀನಾರಾಯಣ ಕವಿಯೇ ಎಂಬುದೂ, ಅವುಗಳಲ್ಲಿ ಕವಿ ತನ್ನ ಹೆಸರನ್ನು ಬಯಿಟ್ಟುದಕ್ಕೆ ಕಾರಣವೂ ಸ್ಪಷ್ಟವಾಗುವುದಲ್ಲದೆ ಕವಿಯು ಎಂತಹ ಅನಾಸಕ್ತಮನಸ್ಕನಾಗಿದ್ದನೆಂಬುದೂ ಸ್ಪಷ್ಟವಾಗುತ್ತದೆ. ಆದರೂ ಇವುಗಳು ಅನ್ಯಕರ್ತೃಕವೆಂಬ ವಾದ ಸಮೂಲವಾಗಿ ಹೊರಟುಹೋಗಿಲ್ಲ.* ಬಹುಜನರ ನಂಬಿಕೆಯೇನೋ ಇವು ಲಕ್ಷ್ಮೀನಾರಾಯಣ ಕವಿಯವೆಂದೇ. ಅಲ್ಲವೆಂದು ಹೇಳುವವರ ವಾದಸರಣಿ ಅಷ್ಟು ದೃಢಮೂಲವಾದುದಲ್ಲ; ಯುಕ್ತಿಯುಕ್ತವಾಗಿಲ್ಲ.

ಕ್ರಿ. ಶ. ೧೯೦೧ನೇ ಫೆಬ್ರವರಿ ೧೬ನೇ ತಾರೀಖು ಕವಿ ದಿವಂಗತನಾದ. ಈ ಮಧ್ಯಕಾಲದಲ್ಲಿ ಕವಿಯು ದಾರುಣವಾದ ರೋಗಪೀಡಿತನಾಗಿದ್ದ. ಕ್ಷಯರೋಗದ ಹಿಡಿತಕ್ಕೆ ಸಿಕ್ಕಿ ನರಳುತ್ತಿದ್ದರೂ ಕನ್ನಡದ ಮಮತೆ ಆತನನ್ನು ಬಿಡದಾಯಿತು. 'ಜೊ ಜೊ' ಎಂಬ ಸುಂದರವಾದ, ಅರ್ಥಗರ್ಭಿತವಾದ, ವಿಚಾರಪರಿಪ್ಲುತವಾದ ಲೇಖನವೊಂದನ್ನೂ 'ಗೋದಾವರಿ' ಎಂಬ ಕಾಲ್ಪನಿಕ ಕಾದಂಬರಿಯ ಪ್ರಥಮಾಧ್ಯಾಯವನ್ನೂ ಬರೆದು ಮುಗಿಸಿದ. ಈ ಕಾದಂಬರಿ ಕೊನೆಯಾಗುವ ಸುಯೋಗ ಕನ್ನಡಿಗರಿಗಿರಲಿಲ್ಲ. ಕನ್ನಡದ ಸ್ವತಂತ್ರ ಕಾದಂಬರಿಯೊಂದು ಹೊರಬರುವ ಕಾಲ ಇನ್ನೂ ಬಂದಿರಲಿಲ್ಲವೇನೋ ! ಇದ್ದೊಬ್ಬ ಮಗ ಇನ್ನೂ ಹಸುಗೂಸು. ಕೈಹಿಡಿದ ಮಡದಿ ಸಂಸಾರದ ಮೆಟ್ಟಿಲು ತುಳಿದು ಇನ್ನೂ ಮೂರು-ನಾಲ್ಕು

---

* 'ಮದ್ದಣ್ಣ ಕಾವ್ಯ'ದಲ್ಲಿ ಎಂ. ಎ. ರಾಮಾನುಜಯ್ಯಂಗಾರ್ ಇವರ ಲೇಖನವನ್ನು ನೋಡಿ.

ವರ್ಷಗಳು ಕೂಡ ಆಗಿಲ್ಲ. ಆದರೆ ವಿಧಿ ಇವುಗಳನ್ನು ಗಣಿಸಿ, ಮೀನ–ಮೇಷಗಳನ್ನು ಗುಣಿಸುತ್ತಾ ಇರುವವನೇ ? ನಿರ್ದಾಕ್ಷಿಣ್ಯದಿಂದ ಕೊಂಡೊಯ್ದ 'ಕಾಲಾಯ ತಸ್ಮೈ ನಮಃ'.

## ೨. ಕವಿಯ ಕಾವ್ಯಗಳು

ಲಕ್ಷ್ಮೀನಾರಾಯಣ ಕವಿಯು ಹಲವು ಗ್ರಂಥಗಳನ್ನು ಬರೆದಿರುವನಾದರೂ ಅವುಗಳಲ್ಲಿ ಮುಖ್ಯವಾದುವು ಮೂರು – 'ಅದ್ಭುತ ರಾಮಾಯಣ', 'ರಾಮಪಟ್ಟಾಭಿಷೇಕ', 'ರಾಮಾಶ್ವಮೇಧ'. ಮೂರೂ ರಾಮಾಯಣದ ಕಥೆಗಳೇ. ಉಳಿದ ಕಾವ್ಯಗಳು ಶಿಖರಕ್ಕೆ ದಾರಿಮಾಡಿಕೊಟ್ಟ ಸಾನುಪ್ರದೇಶಗಳಷ್ಟೆ.

ಮುದ್ದಣ್ಣ ಕವಿ ತನ್ನ ಕಾವ್ಯವಸ್ತುಗಳನ್ನು ಆಯ್ದುಕೊಂಡುದು ವಾಲ್ಮೀಕಿಕೃತ ರಾಮಾಯಣದಿಂದ ಅಲ್ಲ; ಅದರ ಅಣಕಗಳಿಂದ. ರಾಮಾಯಣವು ಕಾವ್ಯವೇ, ಧರ್ಮಗ್ರಂಥವೇ ಎಂಬ ಚರ್ಚೆಯಲ್ಲಿ ಅದು ಬರಿಯ ಕಾವ್ಯವೆಂದು ಗ್ರಹಿಕೆಯಾದಾಗ ಸಂಪ್ರದಾಯ ಶರಣರು ಧರ್ಮದ ಬೇರೊಂದು ಪ್ರತಿಮೆಯನ್ನು ಆ ಮೂಲವಸ್ತುವಿನಿಂದಲೇ ಮಾಡಿಕೊಂಡು ಆರಾಧಿಸತೊಡಗಿದರೆಂದು ತೋರುತ್ತದೆ. 'ಅಳಿದೊಡಂ ಉಳಿದೊಡಂ ಬಟ್ಟೆದೋರಿಪ ಚರಿತೆ'ಯನ್ನು ಬರೆಯುವ ಆದರ್ಶ ಲಕ್ಷ್ಮೀನಾರಾಯಣ ಕವಿಯದು. ಆದುದರಿಂದ ಶುದ್ಧ ಧರ್ಮಗ್ರಂಥಗಳನ್ನೇ ಆಯ್ದುಕೊಂಡು ಅವುಗಳಿಗೆ ಕಾವ್ಯದ ಉಡುಪನ್ನು ತೊಡಿಸಲು ಪ್ರಯತ್ನಿಸಿದನೋ ಏನೋ ? ವಿಗ್ರಹ ಮೂಲವಿಗ್ರಹವೇ; ಕವಿಯು ತೊಡಿಸಿರುವ ಉಡುಪು ಹೊಸದು, ತೊಡವು ಹೊಸವು. ಇದರಿಂದ ಈತನ ಕಾವ್ಯಗಳ ಮೇಲ್ಮೆ ಉನ್ನತೋನ್ನತವಾಗುವದು ಅಸಾಧ್ಯವಾಗಿದೆ. ವಿಗ್ರಹಕ್ಕೆ ಉಪಯೋಗಿಸುವ ಮೂಲವಸ್ತು ಬಂಗಾರಕ್ಕೆ ಬದಲಾಗಿ ಹಿತ್ತಾಳೆಯಾಗಿರುವಾಗ ಅದು ಎಷ್ಟು ಸುಂದರವಾಗಿದ್ದರೂ ಬಂಗಾರದ ಬೆಲೆ ಹೇಗೆ ಬರಬೇಕು ?

ಕವಿಯು ಬರೆದಿರುವ ಮೂರು ಕಾವ್ಯಗಳಲ್ಲಿ ಮೊದಲನೆಯದು ಅದ್ಭುತರಾಮಾಯಣ; ಕವಿಯು ಕೊಟ್ಟಿರುವ ಪ್ರಥಮ ಫಲ. ಇದರ ಮೂಲ ಬರಿಯ ಪುರಾಣದ ಬದನೆಯಕಾಯಿ. ನೀತಿ ನಿರೂಪಣೆ ಅಲ್ಲಿನ ಹೆಗ್ಗುರಿ. ಕವಿ ಅದರಿಂದ ರಸನಿರೂಪಣೆಯನ್ನೂ, ಮನೋರಂಜನೆಯನ್ನೂ ಸಾಧಿಸಲು ಪ್ರಯತ್ನಪಟ್ಟಿದ್ದಾನೆ. ನೀರಸವಾದ ಕಂತೆಯ ಪುರಾಣವನ್ನೆಲ್ಲಾ ಬಿಟ್ಟುಬಿಟ್ಟು ರಸವತ್ತಾಗಬಲ್ಲ ಸನ್ನಿವೇಶಗಳನ್ನು ಮಾತ್ರ ಆಯ್ದುಕೊಂಡಿದ್ದಾನೆ. ಈ ಕಾರ್ಯದಲ್ಲಿ ಒಳ್ಳೆಯ ಸಂಗ್ರಹಕಾರನ ಕುಶಲತೆಯನ್ನು ನಾವು ಕವಿಯಲ್ಲಿ ಕಾಣಬಹುದು.

ಅದ್ಭುತರಾಮಾಯಣದ ಕಥೆ ಅದರ ಹೆಸರೆಂತಂತೆ ಅದ್ಭುತವಾದುದು. ರಾಜಕುವರಿ ಶ್ರೀಮತಿ ಜಗದ್ವಿಖ್ಯಾತಳಾದ ಸುಂದರಿ. ಅವಳ ಸೌಂದರ್ಯಕ್ಕೆ ಮನಸೋತ ನಾರದ ಪರ್ವತರು ಆಕೆಯ ಪಾಣಿಗ್ರಹಣಕ್ಕಾಗಿ ಆಕೆಯ ತಂದೆಯಲ್ಲಿ ಪ್ರಾರ್ಥಿಸಿದರು. ಇಬ್ಬರೂ ಸತ್ಕುಲಪ್ರಸೂತರು; ಜಗದ್ವಿಖ್ಯಾತರಾದ ಮಹರ್ಷಿಗಳು.

ಕನ್ಯಾಪಿತೃವಿಗೆ ಉಭಯ ಸಂಕಟ ಬಂದಿತು. ಮಗಳು ಒಪ್ಪಿದವರಿಗೆ ಆಕೆಯನ್ನು ಕೊಟ್ಟು ಲಗ್ನಮಾಡುವುದಾಗಿ ಹೇಳಿದ. ಇಬ್ಬರೂ ಶ್ರೀಹರಿಯನ್ನು ಕುರಿತು ತಪಸ್ಸುಮಾಡಿ ಆತನ ಸುಸ್ವರೂಪವನ್ನು ತಮಗೆ ಅನುಗ್ರಹಿಸುವಂತೆ ಬೇಡಿದರು. ಅರಮನೆಯ ಸ್ವತ್ತಿಗೆ ಈ ಹೆಗ್ಗಣಗಳು ಹೀಗೆ ಗುರುಗುಟ್ಟುತ್ತಿದ್ದರೆ ಶ್ರೀಮತಿ ಶ್ರೀಪತಿಯನ್ನಲ್ಲದೆ ಬೇರೊಬ್ಬರ ಕೈಹಿಡಿಯೆನೆಂದು ಮನದಲ್ಲಿ ಮಾಡಿಕೊಂಡಿದ್ದಾಳೆ. ಆಕೆಯ ಅನನ್ಯ ಸೇವೆಯನ್ನು ಕೈಕೊಳ್ಳಲು ಶ್ರೀಹರಿಯು ಕಾತರನಾಗಿದ್ದಾನೆ. ಹೀಗಾಗಿ ಶ್ರೀಮತಿಯ ಸ್ವಯಂವರವೇರ್ಪಟ್ಟಾಗ ಶ್ರೀಹರಿ ಉಪಾಯದಿಂದ ಋಷಿಗಳಿಬ್ಬರಿಗೂ ಚಳ್ಳೆಹಣ್ಣು ತಿನ್ನಿಸಿ ತಾನು ಹೆಣ್ಣನ್ನು ವಶಪಡಿಸಿಕೊಳ್ಳುತ್ತಾನೆ. ಕುಪಿತರಾದ ಈ ಋಷಿಗಳು ಶ್ರೀಹರಿಯನ್ನು ಮಾನವನಾಗಿ ಹುಟ್ಟುವಂತೆಯೂ ಶ್ರೀಮತಿಯನ್ನು ಮರುಜನ್ಮದಲ್ಲಿ ರಾಕ್ಷಸನು ಕದ್ದೊಯ್ಯುವಂತೆಯೂ ಶಪಿಸುತ್ತಾರೆ. ಬ್ರಹ್ಮವಾಕ್ಯ ಅಮೋಘವಾದುದು ತಾನೇ! ಹರಿಯಾದರೇನು, ಅವರಪ್ಪನಾದರೇನು ? ಆತನು ಮಾನವನಾದ ರಾಮನಾಗಿ ಹುಟ್ಟಲೇಬೇಕಾಯಿತು. ಶ್ರೀಮತಿ ರಾವಣನ ಮಗಳಾಗಿ ಹುಟ್ಟಿ ತನ್ನ ತಾಯಿಯಾದ ಮಂಡೋದರಿಯಿಂದ ಅಗಲಿ ದೂರವಾಗಿ, ಜನಕರಾಜನ ಯಜ್ಞದ ಸಮಯದಲ್ಲಿ ಭೂಮಿಯಲ್ಲಿ ದೊರೆತುದರಿಂದ ಭೂಮಿಜೆಯೆಂದು ವಿಖ್ಯಾತಳಾದಳು. ಸೀತಾಜನನ, ಸೀತಾಕಲ್ಯಾಣ ಇತ್ಯಾದಿಗಳಿಂದ ಹಿಡಿದು ರಾವಣಮಥನ, ರಾಮಪಟ್ಟಾಭಿಷೇಕದವರೆಗೆ ಕಥೆ ಚುಟುಕಿ ಚಪ್ಪರದಲ್ಲಿ ಮುಗಿದುಹೋಗುತ್ತದೆ. ಅನಂತರ ಅದ್ಭುತರಾಮಾಯಣ ಆರಂಭವಾಗುತ್ತದೆ. ರಾಮಪಟ್ಟಾಭಿಷೇಕಕ್ಕಾಗಿ ನೆರದಿದ್ದ ಋಷಿಗಳು ಮೃಷ್ಟಾನ್ನದಿಂದ ತಣಿದು, ಮುಕ್ತಕಂಠದಿಂದ ರಾಮನನ್ನು ಹೊಗಳುವರು. ರಾಮನ ಪರಾಕ್ರಮದ ವರ್ಣನೆ ಕೇಳಿ ಕೇಳಿ ಸೀತೆಗೆ ತಲೆ ಚಿಟ್ಟು ಹಿಡಿದುಹೋಗಿತ್ತೋ ಏನೋ! ಸಹಸ್ರಕಂಠ ರಾವಣನನ್ನು ಜಯಿಸದ ಮೇಲೆ ಆತನೆಂತಹ ಪರಾಕ್ರಮಿ ? ಎಂದು ಹೀಯಾಳಿಸಿದಳು. ದಶಕಂಠವೈರಿಗೆ ರೋಷ ಹುಟ್ಟಿ ಸಹಸ್ರಕಂಠನ ಮೇಲೆ ಯುದ್ಧಕ್ಕೆ ಹೊರಡುವನು. ಆದರೇನು ? ಹೊಟ್ಟೆಯಲ್ಲಿನ ಸಿಟ್ಟು ರಟ್ಟೆಯಲಿಲ್ಲ; ಜೀವದೊಡನೆ ಹಿಂದಿರುಗುವುದೇ ಕಷ್ಟವಾಗುತ್ತದೆ, ರಾಮನಿಗೆ. ಆಗ ಸೀತೆ ಕರಾಳರೂಪವನ್ನು ಧರಿಸಿ ರಕ್ಕಸನನ್ನು ಒಕ್ಕಲಿಕ್ಕಿ ರಾಮನನ್ನು ರಕ್ಷಿಸುತ್ತಾಳೆ. ರಾಮನೂ ಸಮಸ್ತ ದೇವತೆಗಳೂ ಆಕೆಯನ್ನು ಹೊಗಳುತ್ತಾರೆ.

ಮೇಲಿನ ಕಥೆ ಶಕ್ತ್ಯಾರಾಧಕರ ಕಲ್ಪನೆ; ಪರಮಪುರುಷನಾದ ರಾಮನಿಗಿಂತಲೂ ಪ್ರಕೃತಿ ಸ್ವರೂಪಿಣಿಯಾದ ಸೀತೆ ಹೆಚ್ಚು ಮಹಿಮಾನ್ವಿತಳೆಂಬುದನ್ನು ತೋರುವುದಕ್ಕಾಗಿ ಸೃಷ್ಟಿಯಾದುದು. ಈ ಭಾವವೇ ನಮ್ಮ ಮನಸ್ಸಿಗೆ ಅಷ್ಟು ಹಿಡಿಸಲೊಲ್ಲದು. ವಾಲ್ಮೀಕಿ ರಾಮಾಯಣದ ಸೀತೆಯನ್ನೂ ಅದ್ಭುತ ರಾಮಾಯಣದ ಸೀತೆಯನ್ನೂ ಜೊತೆ ಜೊತೆಯಾಗಿ ಚಿತ್ರಿಸಿ ಕವಿ ನಮ್ಮೆದುರು ಇಟ್ಟಿದ್ದಾನೆ. ನಮಗೆ ಯಾವುದೂ ಸುಂದರವೋ, ಸ್ಪೃಹಣೀಯವೋ ಆಲೋಚನೆ ಮಾಡೋಣ. ಸೀತೆ ತಪಸ್ವಿಗಳ ಪ್ರಾರ್ಥನೆಯನ್ನು ಮನ್ನಿಸಿ ಸಹಸ್ರಕಂಠರಾವಣನ ವಧೆಗಾಗಿ ಕರಾಳ ರೂಪವನ್ನು ತಾಳುತ್ತಾಳೆ.

"ತ್ರಿರ್ದಿದ ಕೂಂದಲ್ ನಿಗುರ್ದುರ್ ಕೆದರ್ದಿರೆ; ಪೆರೆನೊಸಲ್ ಪೆನೊರ್ಸಲಾಗಿರೆ; ಎಸಳ್ಗಣ್ ಗುಳಿಗಣ್ಣಾಗೆ; ನಗೆಮೊಗಂ ಉರಿ ಮೊಗಮಾಗೆ; ಸುಲಿಪಲ್ ನಿಡುವಲ್ಲಾಗೆ; ತಳಿರ್ನಾಲಗೆ ಜೋಲ್ನಾಲಿಗೆಯಾಗೆ ಸೀತೆ ಕರಾಳಮುಖಿಯಾದಳ್. ಕಕ್ಕಸ ಸಮಾದ ನಾಲ್ದೋಳುಂ, ಕಲ್ಲೆರ್ದೆಯುಂ, ಬಲ್ದೊಡೆಗಳುಂ ಮೊಗಕ್ಕೆ ತಕ್ಕುವಾದುವು. ಗಳದ ರುಂಡಮಾಲೆಯುಂ, ಕೆಯ್ಯ ಎಲ್ವುದೊಡವುಂ ದಿಟ್ಟಿಸಲ್ತೀರದು. ಇಂತು ಲೋಕೋತ್ತರ ಸುಂದರಿಯಪ್ಪಾ ಸೀತೆಯೊಡನೆ ಅದ್ಭುತರೂಪದಿಂ ಮಾಕಾಳಿಯಾಗಿ ದಿಮ್ಮನೆ ತಿರೆಗೆ ಧುಮ್ಮಿಕ್ಕುತೆ. ಕೋರೆವಲ್ಗಳ್ ಮಿನುಗೆ, ತುಟಿಯಲುಗೆ, ನಾಲಗೆ ನೀಡೆ, ಕಣ್ಣಾಪೆ ರಾಟಳದಂತೆ ಸುತ್ತೆ ಸೂಲಂ-ಕಡುಗಂ ತಲೆಯೋಡು ಇಂತಿವುಗಳಂ ಪಿಡಿದು ಪಕ್ಕಿ ವೇಗದಿಂ ರಕ್ಕಸನೆಡೆಗೆ ಸಾರ್ತಂದಳ್"

ಈ ಗಾಳಿಯ ಮಾರಮ್ಮನನ್ನು ಕಂಡು ಬೆದರಿ ಓಡಿಹೋಗಬಹುದೇ ಹೊರತು ಕ್ಷಣ ನಿಂತು ಅವಳ ಸೌಂದರ್ಯಾನುಭವದಿಂದ ಆನಂದಿಸುವಂತಿಲ್ಲ. ನಮ್ಮ ಸೀತೆ ಹೀಗಾದುದನ್ನು ಕಾಣಲು ನಾವು ಸರ್ವಾತ್ಮನಾ ಇಷ್ಟಪಡುವುದಿಲ್ಲ. ನಳನಳಿಸಿ ಕಳಕಳಿಸಿ ಬಳುಕುವ ಆ ಕೋಮಲವಲ್ಲರಿಯಾದ ಸುರಸುಂದರಿಯೆಲ್ಲಿ ? ಈ ಜಾಲಿಮರದ ಮೋಟೆಲ್ಲಿ ? ಪತಿವ್ರತಾ ಶಿರೋಮಣಿಯಾದ ಆ ಭೀರುವನ್ನು ಹೀಗೆ ಬಯಲಿಗೆಳೆದ ಮೂಲ ಕರ್ತೃಗಳು ಅಷ್ಟೇನೂ ಪ್ರಶಂಸಾರ್ಹರೆಂದು ಹೇಳಲಾಗುವುದಿಲ್ಲ. ನಮ್ಮ ಕವಿ ಈ ಕಥಾವಸ್ತುವನ್ನು ಆಯ್ದುಕೊಂಡುದಾದರೂ ಅಷ್ಟು ಉನ್ನತವಾದ ಅಭಿರುಚಿಯೆಂದು ಹೇಳಲಾರೆವು.

ಪುರಾಣದ ಕಥಾಕಟ್ಟಡದಲ್ಲಿ ಹೆಚ್ಚು ವ್ಯತ್ಯಾಸವನ್ನು ಮಾಡಿಕೊಳ್ಳಲು ಕವಿಗೆ ಸ್ವಾತಂತ್ರ್ಯವಿಲ್ಲ. ಆದರೆ ಕಥೆಯ ಮೂಲರೇಖೆಗಳಿಗೆ ತನ್ನದೇ ಆದ ಬಣ್ಣಗಳನ್ನು ತುಂಬಿ ಕವಿ ಮನೋಜ್ಞವಾಗಿ ಮಾಡಿದ್ದಾನೆ. ಇದ್ದುದರಲ್ಲಿ; ಬರಿಯ ಭಾಷಾಂತರಕಾರನಾಗಿಲ್ಲ. ಕವಿಯ ಬರಹದಲ್ಲಿ ಅಂತಹ ಉನ್ನತವಾದ ಕಲ್ಪನಾ ಸಾಮರ್ಥ್ಯ ಭಾವಾವೇಷಗಳಿಲ್ಲದಿದ್ದರೂ ಚಿಂತೆಯಿಲ್ಲ; ಮಾತುಗಳಲ್ಲಿ ಮಾಧುರ್ಯವಿದೆ, ಅವುಗಳ ಬಳಕೆಯಲ್ಲಿ ಕುಶಲತೆಯಿದೆ. ಕವಿಯ ಶೈಲಿಯಲ್ಲಿ ಸರಳತೆಯಿದೆ. ಆತನ ವರ್ಣನೆಗಳಲ್ಲಿ ಸಹಜತೆಯಿದೆ. ರಾಮನು ವನವಾಸದ ಅನುಭವಗಳನ್ನು ಹೇಗೆ ಸುಖಮಯವಾಗಿ ಮಾಡಿಕೊಂಡನೆಂಬುದನ್ನು ವರ್ಣಿಸುವ ಕವಿಯ ಮಾತುಗಳ ಮೊನಚನ್ನು, ಪ್ರಭಾವವನ್ನು ಸ್ವಲ್ಪ ನೋಡೋಣ – ರಾಮನು ಗೋದಾವರಿ ತೀರದಲ್ಲಿ ತನ್ನ ಪರ್ಣಶಾಲೆಯನ್ನು ಮಾಡಿಕೊಂಡಿದ್ದಾನೆ. ಆತ

"ಕಾಡೇ ನಾಡಾಗೆ, ಎಲೆವನೆಯರಮನೆಯಾಗೆ ಸಂತಸದೊಳಿರ್ದಂ. ಲಕ್ಷ್ಮಣನ್ ಅಣ್ಣನನ್ ಅಯ್ಯನಂತೆ, ಸೀತೆಯಂ ಮಾತೆಯಂತೆ ಭಾವಿಸಿ ನಿಚ್ಚಂ ಸೇವಿಸುತಿರ್ಪಂ. ಸೀತೆಯುಂ ಪತಿಯೇ ಗತಿಯೆಂದು ಬಗೆದು ಆವಗಂ ಪೂಜಿಸುತಿರ್ಪಳ್. ರಾಘವನ್ ಓರೊರ್ಮೆ ಮಡದಿಗೆ ವನದಿರವಂ ಬಿತ್ತರಿಪಂ ಕಣ್ಣಿದಿರೋಳ್ ಬರ್ಪ ಬಗೆವಗೆಯ

ಮಿಗಂಗಳಂ ಬಣ್ಣಿಪಂ; ಪಲವಣ್ಣದ ಪಕ್ಕಿಗಳಂ ತೋರಿಪಂ; ಪೂವಳ್ಳಿಗಳ ಪೆಸರನೊರೆವಂ. ಸೀತೆ ಪತಿ ಬೇಂಟೆಯಾಡಿ ಬರೆ ಕೆಯ್ಯ ಬಿಲ್ಲಂ ಕೊಂಡಿಟ್ಟು, ಆಸನವನಿತ್ತು ಉಪಚರಿಸುವಳ್. ಮೇಣ್ ಲಕ್ಷ್ಮಣಂ ಪಣ್ಗಳಂ ಪಿರಿತಂದು ಇವರ್ಗುರ್ಮರ್ಪಿಸಿ, ತಾನಿರುಳೊಳವರ್ಗೆ ಕಾವಲಾಗಿರ್ಪಂ"

ಈ ವಾಕ್ಯಗಳ ಜೋಡಣೆ ರಮ್ಯವಾಗಿದೆಯೆಂದು ಬಾಯ್‌ಬಿಟ್ಟು ಹೇಳಬೇಕೇ ?

ಕವಿಯ ಎರಡನೆಯ ಕಾವ್ಯವಾದ 'ರಾಮಪಟ್ಟಾಭಿಷೇಕ'ದ ಕಥಾವಸ್ತು ಹೆಚ್ಚು ಉದಾತ್ತವಾದುದು; ಕಾವ್ಯಯೋಗ್ಯವಾದುದು; ಭಾವಪೂರ್ಣವಾದುದು. ಹದಿನಾಲ್ಕು ವರುಷಗಳು ವನವಾಸದ ಕಡುಕಷ್ಟವನ್ನು ಅನುಭವಿಸಿದ ಸೀತಾರಾಮಲಕ್ಷ್ಮಣರು ತಮ್ಮ ತಾಯ್ನಾಡಿಗೆ-ಹುಟ್ಟಿದೂರಿಗೆ-ಹಿಂದಿರುಗುತ್ತಿದ್ದಾರೆ. ಅವರ ಮನಸ್ಸಿನ ಆನಂದ ಅವರಿಗೇ ವೇದ್ಯ. ಅವರನ್ನು ನಿರೀಕ್ಷಿಸುತ್ತಿರುವವರ ಸುಖ ಬರುತ್ತಿರುವವರ ಸುಖಕ್ಕಿಂತ ಕಡಿಮೆಯಾದುದೇನೂ ಅಲ್ಲ. ಅಣ್ಣನ ಅಗಲಿಕೆಯಿಂದ ಬೆಂದು ಬೆಂಗಾಡಾದ ಭರತನ ಹೃದಯದಲ್ಲಿ ಆನಂದ ಅಂಕುರಿಸಿ ಹದಿನಾಲ್ಕು ವರ್ಷಗಳಾಗಿತ್ತು. ಇಂದು ಅಣ್ಣ ಬಂದರೆ, ಆ ಸಂತೋಷದ ಸೋನೆಯಿಂದ ಆತನ ಹೃದಯ ತಣ್ಣಗಾಗಬೇಕು. ಇನ್ನು ಮಗನನ್ನು ಕಣ್ಣ ಬೊಂಬೆಯಂತೆ ಕಾಣುತ್ತಿದ್ದ ಕೌಸಲ್ಯಾದೇವಿಗೆ ಆತನನ್ನು ಕಾಣಲು ಕಣ್ಣುಗಳು ಕಾತರಿಸುತ್ತಾ ಇವೆ; ಮನಸ್ಸು ಹಾತುವರಿಯುತ್ತಿದೆ. ಅಣ್ಣ ಬರುತ್ತಿರುವನೆಂದು ಕೇಳಿದೊಡನೆಯೇ ಭರತನಿಗಾಗುವ ಸಂಭ್ರಮವನ್ನು ನೋಡಿ –

ಅಟವಿಯಂ ಪೊರಟಿಹರೆ ? ಬಹರೆ ? ದಾರಿಯೊಳೇಂ ಪೊ ।
ರಟುದಿಲ್ಲವೇ ರಾಮನೊಳ್ಳಿತಾಗಿಹನೆ ? ಪ ।
ರ್ಯಟನದಿಂ ಬಾಡಿಹರೆ ? ಬರುತುಮಿರ್ಪರೆ ? ಬಹರೆ ? ಬಂದರೇ ?
ಪೇಳೆಂದನು ......

ಇನ್ನು ತಾಯಿ-ಮಕ್ಕಳಿಗಾದ ಆನಂದ ಮಾತುಗಳನ್ನು ಮೀರಿದುದು. ಸಾಗರವನ್ನೂ ಗಗನವನ್ನೂ ಹೋಲಿಸುವುದುಕ್ಕೆ ಬೇರೊಂದು ಸಾಮ್ಯ ಎಲ್ಲಿದೆ ? ಹಾಗೆಯೇ ರಾಮ-ಕೌಸಲ್ಯೆಯರ ಸಮಾಗಮಸೌಖ್ಯ ಉಪಮಾತೀತವಾದುದು. ಅವರ "ಅನ್ಯೋನ್ಯದರ್ಶನಸುಖಂ, ದಾಶರಥಿ ಕೌಸಲ್ಯೆಯರ ದರ್ಶನದ ಸುಖದಂತೆವೋಲ್" ಆದುದು. ಹಿಂದಿರುಗಿದ ರಾಮನನ್ನು ಎಲ್ಲರೂ ಆದರಿಸಿದರು. ಮರುದಿನ ಪಟ್ಟಾಭಿಷೇಕವಾಯಿತು. ಪಟ್ಟಾಭಿಷೇಕದ ದಿನ ಜಗತ್ತೇ ಸಂತೋಷಸಮುದ್ರವಾಗಿದೆ. ಆ ದಿನ ಬೆಳಿಗ್ಗೆ ಕೂಗುವ ಕಾಗೆ ಕೂಡ ರಾಮಪ್ರಾರ್ಥನೆಯಲ್ಲಿ ನಿರತವಾಗಿದೆಯಂತೆ! ಕಾಗೆಯ 'ಕಾ-ಕಾ' ಕಠಿಣಧ್ವನಿಗೆ ಕವಿ ಚಮತ್ಕಾರದಿಂದ ಕೊಟ್ಟಿರುವ ಅರ್ಥವನ್ನು ನೋಡಿ –

ಪಗೆಯವಂ ದ್ರೋಹಚಿಂತಕನೆಂದೆಣಿಸದೆ ಮರೆ ।
ಪೂಗಲೆನ್ನನಿರದೆ ಕಾದವನೆಂದು ರಾಮನಂ ।
ಪೊಗಳಿ ಕಾಕಾಯೆಂದು ಬೇಡಿಕೊಂಡಪುದೆನಲ್ ಕಾಗೆ ಕೂಗಿದುದಾಗಳೆ

ಈ ಬಗೆಯಾದ ಚಮತ್ಕಾರ-ಕೈಚಳಕ ಕಾವ್ಯದ ಉದ್ದಕ್ಕೂ ಕಂಡುಬರುತ್ತದೆ. ಸಮುದ್ರಘೋಷ ತನ್ನಲ್ಲಿರುವ ನೀರೇ ಹಲವು ಹೆಸರುಗಳಿಂದ ಹೇಗೆ ಹಲವಾರು ಜನಗಳಿಗೆ ಆದರಣೀಯವಾಗಬಲ್ಲದೆಂಬುದನ್ನು ತೋರಿಸುವಂತೆ –

ಸುರರಿಗಮೃತಂ ಬೇಕೆ ? ಮನಮುಂಟೆ ಕಾಲಕಂ ।
ಧರೆಗೆ ವಿಷದೊಳ್ ? ಬಾಲಚಂದ್ರಂಗೆ ಪಯಮಿಹುದೆ ? ।
ಶರಮುಂಟೆ ವೀರರ್ಗೆ ? ಕೀಲಾಲಮಸುರರ್ಗೆ ದೊರೆತುದೇ ? ಲಾವಣ್ಯಮಂ ।

ಸ್ಮರನಿಚ್ಛೆಪನೆ ? ಕುಶಮನರಸುವರೆ ಯಮಿಗಳ್ ? ಘ !
ನ ರಸಮಂ ಕೊಂಡರೆ ರಸಜ್ಞರ್ ? ಉಂಟೆನ್ನುಮಾ !
ದರದೆ ತಾನೀವೆನೆಂದೊರೆವಂತೆ ಮೊರೆವಂ ತೆರತೆರದಿಂದಬ್ಧಿರಾಜಂ ॥

ಹೀಗೆಯೇ ಸಮುದ್ರವರ್ಣನೆಯ ಹಲವು ಪದ್ಯಗಳು ಕವಿಯ ಸರಸತೆಯನ್ನೂ ಸೂಕ್ಷ್ಮಬುದ್ಧಿಯನ್ನೂ ಹೊರದೋರುತ್ತವೆ. ಈ ಚಾತುರ್ಯದ ಜೊತೆಗೆ ಅನುಪ್ರಾಸ, ಯಮಕ, ವಿರೋಧಾಭಾಸಾದಿ ಅಲಂಕಾರಗಳೂ ಕಾವ್ಯದಲ್ಲಿ ಹುಲುಸಾಗಿಯೇ ಇವೆ.

ತಪ್ಪಲೊಳ್ ಕಲ್ಲರಳೆ, ಗಿರಿಯುರುಳೆ, ತಿರೆಪೊರಳೆ
ತೆಪ್ಪಬಾನೊಳ್ ಪಾರೆ ಕಡಲಾರೆ ನಿಲಲಾರೆ
ಬಪ್ಪನೀ ಪೊಳ್ತಿಗೆಲೆ ಭರತ ನೆಲೆಯರಿತು ಸಲೆ ಸಂತಸದೆ ಪೋಪುದೆಂದು ॥

ಇತ್ಯಾದಿ ಪದ್ಯಗಳಲ್ಲಿ ಕವಿಯ ಪ್ರತಿಭೆಗಿಂತಲೂ ಪಾಂಡಿತ್ಯಕ್ಕೆ ಪ್ರತಿಷ್ಠೆ ಹೆಚ್ಚು. ಕವಿಯ ಕಾಲದ ಜನರು ಆದರಿಸುತ್ತಿದ್ದುದಾದರೂ ಅದನ್ನೇ. ಕಾವ್ಯದ ಉದ್ದಿಶ್ಯ ಜನಮನೋರಂಜನೆಯೇ ಅಲ್ಲವೇ ? "ಪೊಸ ಬಾಸಿಗಂ ಕಟ್ಟಿದೊಡಮೇನೋ, ಮುಡಿದ ಭೋಗಿಗಳಿಲ್ಲದೆ ಬಾಡಿಪೋಗದೆ ?" ಆದುದರಿಂದ ಜನರ ಅಭಿರುಚಿಯನ್ನು ಸಂಪೂರ್ಣ ಅನಾದರ ಮಾಡುವುದು ಅಸಾಧ್ಯ; ಅನುಚಿತ. ಕವಿಯು ಜನಮೆಚ್ಚಿಗೆಗಾಗಿ ಪಾಂಡಿತ್ಯವನ್ನು ಪ್ರದರ್ಶನ ಮಾಡಿರುವನಾದರೂ ಅಲ್ಲಲ್ಲಿ ಆತನ ಕವಿಹೃದಯದಿಂದ ಕಾವ್ಯಮಯವಾದ ಪದ್ಯಗಳು ಅರಳಿವೆ. ಅಡವಿಗೆ ಹೋಗಿರುವ ಸೀತೆಯ ಸ್ಥಿತಿಯನ್ನು ಚಿತ್ರಿಸಿಕೊಳ್ಳುತ್ತಾ ಭರತನು ಹೇಳಿಕೊಳ್ಳುತ್ತಾನೆ –

ತಂಬೆಲರ್ ಸೊಂಕೆ ಬಳ್ಕುವ ಲತಾಂಗಮದಿರಿಸಿ ।
ಲಂ ಬೇರೆ ತಡೆದುದುಂಟೆ ? ಬಗ್ಗದೊವಲಂ ಕಂಡೊ ।
ಡೆಂ ಬೆರ್ಚುವೆರೆಳೆಗಣ್ ಪರಿವ ಪೆರ್ಬುಲಿನೋಟಮಂ ಸಹಿಸಲುಂಟೆ ? ವನದಿ॥

ತುಂಬಿಯುಲಿಗಳ್ಕುವತಸೀಕುಸುಮಕರ್ಣಮೆಂ ।
ತಿಂಬಕ್ಕು ಸಿಂಹಗರ್ಜನೆಗೆ ? ಬಿಡುಗಲ್ನೆಲದೊ ।
ಳುಂ ಬಾಡುತಿರ್ಪ ತಳಿರಡಿ ನಡೆಯೆ ಕಾಪಥದೊಳೆಂತಪ್ಪುದವನಿಸುತೆಗೆ ?

ಇಲ್ಲಿನ ಲತಾಂಗ, ಎರಳೆಗಣ್, ಅತಸೀಕುಸುಮವರ್ಣ, ತಳಿರಡಿ ಈ ಉಪಮೆಗಳು ಸಾರ್ಥಕವಾದುವು.

ಸಿಂಹಾವಲೋಕನಕ್ರಮವನ್ನನುಸರಿಸಿ ರನ್ನ ಮಹಾಕವಿ ತನ್ನ ಗದಾಯುದ್ಧದಲ್ಲಿ ಭಾರತವನ್ನೆಲ್ಲಾ ಹೇಳಿದನಂತೆ. ನಮ್ಮ ಲಕ್ಷ್ಮೀ ನಾರಾಯಣ ಕವಿಯೂ ಅಂತಹುದೇ ಒಂದು ಕೆಲಸ ನಡೆಸಿದ್ದಾನೆ. ದುರ್ಯೋಧನನು ಯುದ್ಧರಂಗದಲ್ಲಿ ಪೋಗುತ್ತಿರುವಾಗಲೂ ಸತ್ತು ಬಿದ್ದಿದ್ದ ಶವಗಳನ್ನು ಕಂಡಾಗಲೂ ಹಿಂದಿನ ಕಥೆಯನ್ನೆಲ್ಲಾ ಜ್ಞಾಪಿಸಿಕೊಂಡರೆ, ಇಲ್ಲಿ ಶ್ರೀರಾಮನು ಪುಷ್ಪಕ ವಿಮಾನದಲ್ಲಿ ಹಿಂದಿರುಗುತ್ತಾ ತಾವು ತಂಗಿದ್ದ ಸ್ಥಳಗಳನ್ನು ಸೀತೆಗೆ ತೋರಿಸುತ್ತಾ ಹಳೆಯ ಕಥೆಯನ್ನೆಲ್ಲಾ ನೆನಪಿಗೆ ತರುತ್ತಾನೆ. ಈ ಸುಂದರವಾದ ಸನ್ನಿವೇಶಸೃಷ್ಟಿ ಕವಿಯ ಸ್ವಂತ ಕಲ್ಪನೆ. ಆತನ ಪ್ರತಿಭೆಗೆ ಇದೊಂದು ಹಿರಿಯ ಸಾಕ್ಷಿ. ಕವಿಯ ಕಲಾಕೌಶಲ ಸ್ತೋತ್ರಾರ್ಹವಾಗಿದೆ.

## ೩. ಶ್ರೀರಾಮಾಶ್ವಮೇಧಂ

ಕವಿಯ ರಾಮಾಯಣ ಕಾವ್ಯಗಳ ಮಾಲೆಯಲ್ಲಿ 'ಶ್ರೀರಾಮಾಶ್ವಮೇಧಂ' ಕಡೆಯದಾದರೂ ಅಗ್ರಗಣ್ಯವಾದುದು. ಆತನ ಕಾವ್ಯಶಕ್ತಿ ಇಲ್ಲಿ ಪರಿಣತವಾಗಿದೆ. ಹಿಂದೆ ಎಂದೆಂದೂ ಪುರಾಣಕಥೆಗಳಲ್ಲಿ ಕಾಣಬರದ ನವೀನತೆ ಈತನ ಕಥಾನಿರೂಪಣೆಯಲ್ಲಿ ಕಂಡುಬರುತ್ತದೆ. ಕಥೆಯನ್ನು ಪ್ರಾರಂಭಿಸುವುದೇ ಒಂದು ಕಾದಂಬರಿಯ ಬೆಗಡುಗೊಳಿಸುವ ಸುಂದರ ಶೈಲಿಯಿಂದ. "ಓವೋ ! ಕಾಲಪುರುಷಂಗೆ ಗುಣಮಣಮಿಲ್ಲಂ ಗಡ ! ನಿಸ್ತೇಜಂ ಗಡ ! ಜಡಂ ಗಡ ! ಒಡಲೊಳ್ ಗುಡುಗುಟ್ಟುಗುಂ ಗಡ !" ಇತ್ಯಾದಿ ವಾಕ್ಯಗಳು ನಮ್ಮನ್ನು ಸಮ್ಮೋಹನಾಸ್ತ್ರದಂತೆ ಕಾವ್ಯ ಪ್ರಪಂಚಕ್ಕೆ ಸೆಳೆದೊಯ್ಯುತ್ತವೆ. ಕಾವ್ಯವೆಂದರೆ ಸಾಗರದ ವರ್ಣನೆ, ಜಂಬೂದ್ವೀಪದ ವರ್ಣನೆ, ಮೇರುಪರ್ವತದ ವರ್ಣನೆ – ಇತ್ಯಾದಿ ವರ್ಣನೆಗಳ ಪಟ್ಟಿಗಳನ್ನು ಕೇಳಿ ಕೇಳಿ ತಲೆಚಿಟ್ಟು ಹಿಡಿದ ಜನ, ಇದೇನೋ ನವೀನತೆಯೆಂದು ಇತ್ತ ಹೊರಳುವುದು ಸಹಜ. ಹೀಗೆ ಜನರನ್ನು ಬುಟ್ಟಿಗೆ ಹಾಕಿಕೊಂಡು, ಅವರಿಗೆ ವರ್ಷಾಕಾಲದ ವರ್ಣನೆಯನ್ನು ರಮ್ಯವಾದ ರೀತಿಯಲ್ಲಿ ಮಾಡಿತೋರಿಸುತ್ತಾನೆ ಕವಿ. ಕಥೆ ನಡೆಯುತ್ತಿರುವುದೂ, ಕವಿ ಕಥೆಯನ್ನು ಹೇಳುತ್ತಿರುವುದೂ ಊರಿನ ಮಧ್ಯದಲ್ಲಿ. ಆದುದರಿಂದ ಕವಿಯ ವರ್ಷಾಕಾಲದ ವರ್ಣನೆಯಲ್ಲಿ ತಂದಿರುವ ಸೋಗೆನವಿಲು, ಚಾದಗೆ, ಕೋಗಿಲೆ, ತಾಮ್ರತುಂಡಾದಿ ಹಕ್ಕಿಗಳ ವರ್ಣನೆಗೆ ಸಂಪೂರ್ಣ ಔಚಿತ್ಯವನ್ನು ತರುವುದು ಸಾಧ್ಯವಿಲ್ಲ. ಬಹುಶಃ ಕಥೆ ಹೇಳಲು ಕಾರಣಕ್ಕೆ ವರ್ಷಾಕಾಲದ ವರ್ಣನೆ ಸಹಾಯಕವಾಗಿ ಬಂದಿದೆಯೆಂದು ತೋರುತ್ತದೆ; ವರ್ಷಾಕಾಲದ ಜಿನುಗಿನಿಂದ ಬೇಸರಗೊಂಡ ಮನೋರಮೆ ತನ್ನ ಮನದನ್ನನಾದ ಮುದ್ದಣನನ್ನು ಕಥೆ ಹೇಳುವಂತೆ ಪ್ರಾರ್ಥಿಸಿದಳು. ಔಚಿತ್ಯ ಹೀಗಾದರೂ ಇರಲಿ, ವರ್ಣನೆ ರಮ್ಯವಾಗಿದೆ; ಚಮತ್ಕಾರಯುಕ್ತವಾಗಿದೆ; ನವೀನವಾಗಿದೆ.

ರಾಮಾಶ್ವಮೇಧದ ಕಥೆಗೆ ಮೂಲ ವಾಲ್ಮೀಕಿರಾಮಾಯಣದ ಉತ್ತರಕಾಂಡ. ಅಲ್ಲಿ ಬರುವ ಕಥೆ ರಾಮಾಶ್ವಮೇಧದ ಕಥೆಗಿಂತ ಎಲ್ಲ ವಿಧದಿಂದಲೂ ಹೆಚ್ಚು ಸುಂದರವಾಗಿದೆ. ರಾಮಾಯಣದಲ್ಲಿ ಕಥಾಸರಣಿ ಹೀಗಿದೆ :-

ರಾವಣನ ತೊಡೆಸೋಂಕಿನಿಂದ ಕಳಂಕಿತಳಾದ ಸೀತೆಯನ್ನು ರಾಮನು ಪರಿಗ್ರಹಿಸಿದುದು ಪ್ರಜೆಗಳಲ್ಲಿ ಹಲವರಿಗೆ ಸರಿಬೀಳಲಿಲ್ಲ. ಲೋಕದ ಸ್ತ್ರೀಯರ ನಡುವಳಿಕೆಯೇ ಕೆಟ್ಟುಹೋಗಬಹುದು, ರಾಮಸೀತೆಯರ ಉದಾಹರಣೆಯಿಂದ – ಎಂಬ ಭಯವನ್ನು ಬಿತ್ತುತ್ತಾ ಹೊರಟರು ಅವರು, ತಮ್ಮ ಗೊಣಗುವಿಕೆಯಿಂದ. ಇದನ್ನು ಗೂಢಚಾರರಿಂದ ಅರಿತ ಆದರ್ಶರಾಜನಾದ ರಾಮಚಂದ್ರ ಬಹುದುಃಖಿತನಾದ. ಜನರಿಗೆ ತನ್ನ ನಡುವಳಿಕೆ ಕೆಟ್ಟದೊಂದು ಉದಾಹರಣೆಯಾಗುವುದು ಆತನಿಗೆ ಸಹನೆಯಾಗಲಿಲ್ಲ. ತನ್ನ ಸುಖವನ್ನು ತ್ಯಾಗಮಾಡಲು ಸಿದ್ಧನಾದನು. ತಮ್ಮನಾದ ಲಕ್ಷ್ಮಣನನ್ನು ಕರೆದು ಸೀತೆಯನ್ನು ಕೊಂಡೊಯ್ದು ವಾಲ್ಮೀಕಿ ಋಷಿಗಳ ಆಶ್ರಮದಲ್ಲಿ ಬಿಟ್ಟುಬರುವಂತೆ ಪ್ರಾರ್ಥಿಸಿದ. ದುಃಖಭಾರದಿಂದ ನಿರ್ವಿಣ್ಣ ಹೃದಯನಾದ ಲಕ್ಷ್ಮಣ ಗತ್ಯಂತರವಿಲ್ಲದೆ ಅಣ್ಣನ ಮಾತನ್ನು ನಡೆಸಿದ. ಅತ್ತಿಗೆಯನ್ನು ರಥದಲ್ಲಿ ಕೂರಿಸಿಕೊಂಡು, ಗಂಗಾನದಿಯನ್ನು ದಾಟಿಸಿದ ಮೇಲೆ ಇದ್ದ ಸಂಗತಿಯನ್ನು ಅತ್ತಿಗೆಗೆ ನಿವೇದಿಸಿ, ಅಲ್ಲಿ ಆಕೆಯನ್ನು ಬಿಟ್ಟು ಬರುತ್ತಾನೆ. ಸೀತೆಗೆ ಅಪಾರ ದುಃಖವುಂಟಾದರೂ ಸ್ಥಿರಳಾಗಿ, ರಾಮನಿಗೆ ಮಂಗಳವನ್ನು ಕೋರಿ, ಮೈದುನನನ್ನು ಹಿಂದಕ್ಕೆ ಕಳುಹಿಸುತ್ತಾಳೆ. ಸ್ವಲ್ಪಕಾಲದಲ್ಲೇ ಕೆಲವು ಋಷಿಕುಮಾರರು ಅಡವಿಯಲ್ಲಿ ಒಂಟಿಯಾಗಿ ಅಳುತ್ತಿದ್ದ ಪೂರ್ಣಗರ್ಭಿಣಿಯಾದ ಸೀತೆಯನ್ನು ವಾಲ್ಮೀಕಿ ಋಷಿಗಳ ಬಳಿಗೆ ಕರೆದೊಯ್ಯುತ್ತಾರೆ. ಆತನು ಆಕೆಯನ್ನು ಋಷಿಪತ್ನಿಯರ ವಶಕ್ಕೆ ಒಪ್ಪಿಸುತ್ತಾನೆ. ಕೆಲವು ಕಾಲದ ಮೇಲೆ ಆಕೆ ಲವ-ಕುಶರನ್ನು ಪ್ರಸವಿಸುತ್ತಾಳೆ. ಅನಂತರ ಅನೇಕ ವರ್ಷಗಳು ಉರುಳಿ, ಸೀತೆಯ ಮಕ್ಕಳು ತಾರುಣ್ಯವನ್ನು ಪಡೆಯುತ್ತಾರೆ. ಕವಿಗುರುವಾದ ವಾಲ್ಮೀಕಿಯ ಶಿಷ್ಯರಾಗಿ ರಾಮಾಯಣವನ್ನು ದಿವ್ಯಕಂಠದಿಂದ ಹಾಡುವುದರಲ್ಲಿ ಅದ್ಭುತ ಕೌಶಲವನ್ನು ಪಡೆಯುತ್ತಾರೆ. ಅಷ್ಟರಲ್ಲಿ ರಾಮಚಂದ್ರನು ಅಶ್ವಮೇಧ ಯಾಗವನ್ನು ನಡೆಸಲು ಆಹ್ವಾನಿತನಾದ ವಾಲ್ಮೀಕಿ ಋಷಿ ಶಿಷ್ಯರೊಡನೆ ಆ ಯಜ್ಞಕ್ಕೆ ಹೋಗುತ್ತಾನೆ. ಯಾಗದ ದಿನ ರಾತ್ರಿ ದಿವ್ಯವಾದ ಬೆಳದಿಂಗಳಿನಲ್ಲಿ ಲವ-ಕುಶರು ಕೊಳಲಿನ ಶ್ರುತಿಯೊಡನೆ ತಮ್ಮ ದಿವ್ಯ ಧ್ವನಿಯನ್ನು ಮಿಳನ ಮಾಡಿ ವಾಲ್ಮೀಕಿಕೃತ ರಾಮಾಯಣವನ್ನು ಹಾಡುತ್ತಾರೆ. ಈ ಸುಕುಮಾರರು ಸೀತಾ ಕುಮಾರರೆಂದೂ ರಾಮನಿಗೆ ಗೊತ್ತಾಗಲು, ಆತನು ವಾಲ್ಮೀಕಿಗೆ ಹೇಳಿಕಳುಹಿಸಿ ಸೀತೆಯನ್ನು ಅಲ್ಲಿಗೆ ಕರೆಸುತ್ತಾನೆ. ಸೀತೆ ಪೂತೆಯೆಂದು ವಾಲ್ಮೀಕಿ ಎಷ್ಟು ಸಮಾಧಾನ ಮಾಡಿದರೂ ಕೇಳದೆ ಯಜ್ಞಕ್ಕಾಗಿ ನೆರೆದಿರುವ ಸಮಸ್ತ ಜನಗಳ ಎದುರಿನಲ್ಲಿ ಆಕೆಯು ಪ್ರತಿಜ್ಞೆ ಮಾಡಿ ತಾನು ನಿಸ್ಪೃಹಳೆಂಬುದನ್ನು ತಿಳುಹಿಸಬೇಕೆಂದು ರಾಮಚಂದ್ರನು ಹಟ ಹಿಡಿಯುತ್ತಾನೆ. ಈ ದಿವ್ಯ ದರ್ಶನಕ್ಕಾಗಿ ದೇವತೆಗಳೆಲ್ಲರೂ ಸ್ವರ್ಗದಿಂದ ಕೆಳಗಿಳಿದುಬರುತ್ತಾರೆ. ಸೀತೆಯು ತಲೆ ತಗ್ಗಿಸಿಕೊಂಡು ಅಂಜಲಿಬದ್ಧಳಾಗಿ ಪ್ರತಿಜ್ಞೆ ಮಾಡುತ್ತಾಳೆ –

ಯಥಾಹಂ ರಾಘವಾದನ್ಯಂ ಮನಸಾಪಿ ನ ಚಿಂತಯೇ ।
ತಥಾ ಮೇ ಮಾಧವೀ ದೇವೀ ವಿವರಂ ದಾತುಮರ್ಹತಿ ॥

ಮನಸಾ ಕರ್ಮಣಾ ವಾಚಾ ಯಥಾ ರಾಮಂ ಸಮರ್ಚಯೇ ।
ತಥಾ ಮೇ ಮಾಧವೀ ದೇವೀ ವಿವರಂ ದಾತುಮರ್ಹತಿ ॥

ಯಥೈತತ್ ಸತ್ಯಮುಕ್ತಂ ಮೇ ವೇದ್ಮಿ ರಾಮಾತ್ ಪರಂ ನ ಚ ।
ತಥಾ ಮೇ ಮಾಧವೀ ದೇವೀ ವಿವರಂ ದಾತುಮರ್ಹತಿ ।

ಪ್ರತಿಜ್ಞೆ ಮುಗಿಯುತ್ತಿರುವಂತೆಯೇ ಭೂಮಿಯು ಬಿರಿದು ದಿವ್ಯ ಸಿಂಹಾಸನವೊಂದು ಮೇಲೆದ್ದು ಬರುತ್ತದೆ. ಅದರ ಮೇಲೆ ಭೂದೇವಿ ವಿರಾಜಿಸುತ್ತಿದ್ದಾಳೆ. ನಾಲ್ವರು ನಾಗ ಶ್ರೇಷ್ಠರು ಅದನ್ನು ಹೊತ್ತಿದ್ದಾರೆ. ಭೂಮಾತೆ ಸೀತಾದೇವಿಯನ್ನು ಎತ್ತಿ ಎದೆಗಪ್ಪಿಕೊಂಡು ಭೂಗರ್ಭದಲ್ಲಿ ಅಂತರ್ಧಾನವಾಗುತ್ತಾಳೆ. ಸೀತೆಯ ರಸಾತಲಗಮನದಿಂದ ದುಃಖಾಂಧನಾದ ರಾಮನು ಗಟ್ಟಿಯಾಗಿ ರೋಧಿಸುತ್ತಾನೆ; ತನ್ನ ಮಡದಿಯನ್ನು ಪುನಃ ತನಗೆ ನೀಡುವಂತೆ ಅತ್ತೆಯಾದ ಭೂದೇವಿಯನ್ನು ಪರಿ ಪರಿಯಾಗಿ ಬೇಡಿ ಕಾಡುತ್ತಾನೆ; ತನ್ನನ್ನು ತಾನೇ ಹಳಿದುಕೊಂಡನು ಹಂಬಲಿಸುತ್ತಾನೆ; ಭೂಮಿಯನ್ನೆಲ್ಲಾ ಸುಟ್ಟು ಬೂದಿ ಮಾಡುವುದಾಗಿ ಕೂಗಾಡುತ್ತಾನೆ. ಆಗ ಬ್ರಹ್ಮ ಪ್ರತ್ಯಕ್ಷನಾಗಿ ರಾಮನಿಗೆ ಸ್ವಸ್ವರೂಪ ಜ್ಞಾನವಿತ್ತು ದೇವಲೋಕದಲ್ಲಿ ಪುನಃ ಆಕೆಯ ದರ್ಶನವಾಗುವುದೆಂದು ಸಮಾಧಾನ ಮಾಡುತ್ತಾನೆ.

ಲಕ್ಷ್ಮೀನಾರಾಯಣಕವಿ ತನ್ನ ಕಾವ್ಯಕ್ಕೆ ಅಳವಡಿಸಿಕೊಂಡ ಕಥೆ ಈ ಸುಂದರ ಕಥಾನಕವಲ್ಲ; ಪದ್ಮಪುರಾಣದಲ್ಲಿ ಬರುವ ರಾಮಾಶ್ವಮೇಧದ ಕಥೆ. ರಾಮಾಯಣದ ಕಥೆಯನ್ನು ಪುರಾಣಕಾರರು ಕುಲಗೆಡಿಸಿದ್ದಾರೆ. ಬಹು ಜನರ ಮನಃಕಷಾಯಕ್ಕೆ ಹೆದರಿ ಮಡದಿಯನ್ನು ತ್ಯಾಗಮಾಡಿದ ರಾಮನಿಗಿಂತ ಕೀಳು ಅಗಸನೊಬ್ಬನು ಆಡಿದ ಕುಹಕದ ಮಾತುಗಳಿಗೆ ಮನ್ನಣೆ ಕೊಟ್ಟು ಹೆಂಡತಿಯನ್ನು ಅಡವಿಗಟ್ಟಿದ ರಾಮ ಅವರಿಗೆ ಹೆಚ್ಚು ಮಹಿಮಾನ್ವಿತನಾಗಿ; ಆದರ್ಶ ಚಕ್ರವರ್ತಿಯಾಗಿ ತೋರಿದ. ಹಾಗೆಯೇ ಸಂಗೀತಶಾಸ್ತ್ರದಲ್ಲಿ ಅದ್ಭುತ ಪಂಡಿತರಾಗಿ ರಾಮಾಯಣವನ್ನು ವಾಚೋವಿಧೇಯವಾಗಿ ಮಾಡಿಕೊಂಡಿದ್ದ ಲವ-ಕುಶರು ಪುರಾಣಕಾರರ ಚಾಪಲ್ಯದಿಂದ ಅಸಾಧ್ಯರಾದ ಯುದ್ಧವಿದ್ಯಾಚತುರರಾಗಿ ಹೋಗುತ್ತಾರೆ. 'ಪುತ್ರಾದಿಚ್ಛೇತ್ ಪರಾಜಯಂ' ಭಾಗ್ಯ ರಾಮನಿಗೆ ಒದಗುತ್ತದೆ. ಅವರ ನಿಶಿತ ಶರಗಳ ರುಚಿಯುಂಡ ಮೇಲೆಯೇ ರಾಮನಿಗೆ ಅವರ ಪರಿಚಯವಾಗುವುದು.

ಮುದ್ದಣ ಕವಿ ತನ್ನ ಕಾವ್ಯವಸ್ತುವನ್ನು ಸಂಸ್ಕೃತ ರಾಮಾಶ್ವಮೇಧದಿಂದಲೇ ಆಯ್ದುಕೊಂಡಿರುವನಾದರೂ ಪುಣ್ಯಕ್ಕೆ ಜೈಮಿನಿಭಾರತವನ್ನು ಆದರ್ಶವಾಗಿಟ್ಟುಕೊಂಡಿರುವುದರಿಂದ ಕಾವ್ಯದಲ್ಲಿ ತಲೆದೋರಿರುವ ಹಲವು ಯುದ್ಧಗಳ ವರ್ಣನೆ ಹೃದಯಂಗಮವಾಗಿದೆ. ಉದಾಹರಣೆಗೆ ಲವ-ಕುಶರು

ರಾಮ ಲಕ್ಷ್ಮಣ ಭರತ ಶತ್ರುಘ್ನರೊಡನೆ ಹೋರಾಡುವ ಸನ್ನಿವೇಶವನ್ನು ನೋಡಬಹುದು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದಾದ ಲವ-ಕುಶರು ರಾಮ-ಲಕ್ಷ್ಮಣರನ್ನು ಬಡಿದುಹಾಕುತ್ತಿರುವ ಸನ್ನಿವೇಶ ರೋಮಾಂಚಕಾರಕವಾಗಿದೆ. ಅವರ ಯುದ್ಧದ ಕಾಪಿಗಿಂತಲೂ, ಆ ಎಳೆಯ ಮಕ್ಕಳ ಸುಳಿದಾಟ ನಮ್ಮ ಮನಸ್ಸಿಗೆ ಹೆಚ್ಚು ಆಹ್ಲಾದಕರವಾಗಿದೆ. ಸನ್ನಿವೇಶ ಅಸಹಜವಾದರೂ ಸುಂದರವಾಗಿದೆ. ಆ ಮಕ್ಕಳ ಮುಗ್ಧತನದ ಮಾತುಗಳೂ, ಪ್ರಾಯಕ್ಕೆ ಮಿಕ್ಕ ಶೌರ್ಯವೂ ನಮ್ಮ ಮನಸ್ಸನ್ನು ಸೆಳೆಯುತ್ತವೆ. ಇಲ್ಲಿನ ಕಥಾಚಮತ್ಕಾರವೂ ಮಾತಿನ ಮೆರುಗೂ ಮುದ್ದಣನ ಸ್ವಂತ ಸೃಷ್ಟಿ. ಆತನು ಪುರಾಣದ ಕಥೆಗಳಲ್ಲಿ ಕೆಲವನ್ನು ಹ್ರಸ್ವ ಮಾಡಿದ್ದಾನೆ; ಹಲವನ್ನು ಲೋಪಮಾಡಿದ್ದಾನೆ; ಒಂದೆರಡು ಕಡೆ ಇರುವ ಕಥೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಮಾಡಿದ್ದಾನೆ. ಕಥೆಯ ಓರೆಕೋರೆಗಳನ್ನು ತಿದ್ದಿ, ಹೊಸ ಬಣ್ಣವನ್ನು ಬಳಿದು ರಂಗುರಂಗಾಗಿ ಮಾಡಿದ್ದಾನೆ.

ರಾಮಾಯಣದಲ್ಲಿ ರಾಮನು ಸೀತೆಯನ್ನು ಅಗಲುವ ಸನ್ನಿವೇಶವೂ, ಆಕೆಯನ್ನು ಲಕ್ಷ್ಮಣನು ಕೊಂಡೊಯ್ದು ವಾಲ್ಮೀಕಿ ಋಷಿಯ ಆಶ್ರಮಕ್ಕೆ ಬಿಟ್ಟುಬರುವ ಭಾಗವೂ ಹೃದಯಂಗಮವಾಗಿದೆ; ರಸವತ್ತಾಗಿದೆ. ತಾನು ಸೀತೆಯನ್ನು ಪರಿಗ್ರಹಿಸಿದುದರಿಂದ ಜನರು ಅಸಮಾಧಾನಗೊಂಡಿರುವರೆಂದು ಕೇಳಿ ರಾಮನಿಗೆ ಅತ್ಯಂತ ವ್ಯಥೆಯಾಗುತ್ತದೆ. ತನ್ನ ತಮ್ಮಂದಿರನ್ನು ಕರಸಿ ಸೀತೆ ಶುದ್ಧಳೆಂಬುದನ್ನು ತಾನು ಅರಿತಿರುವುದಾಗಿಯೂ, ಲೋಕಾಪವಾದಕ್ಕಾಗಿ ತ್ಯಜಿಸಬೇಕಾಗಿರುವುದರಿಂದ ಆಕೆಯನ್ನು ಕೊಂಡೊಯ್ದು ವಾಲ್ಮೀಕಿ ಋಷಿಯ ಆಶ್ರಮದಲ್ಲಿ ಬಿಟ್ಟುಬರುವಂತೆಯೂ ತಿಳಿಸುತ್ತಾನೆ. (ದಟ್ಟಡವಿಯಲ್ಲಲ್ಲ). ಆ ದಿನ ಬೆಳಗ್ಗೆ ತಾನೇ ಸೀತೆಯೊಡನೆ ಪ್ರಮದವನದಲ್ಲಿ ವಿಹರಿಸುತ್ತಾ ಅಪತ್ಯ ಲಾಭವನ್ನು ಕರುಣಿಸಲು ಆಸನ್ನಳಾಗಿರುವ ಆಕೆಗೆ ಪುಣ್ಯಾಶ್ರಮ ದರ್ಶನವನ್ನು ಮಾಡಿಸುವೆನೆಂದು ಮಾತು ಕೊಟ್ಟಿದ್ದಾನೆ. ಈಗ ಅದನ್ನು ನೆರವೇರಿಸುವಂತೆ ತಮ್ಮನಿಗೆ ಆಜ್ಞೆ ಮಾಡುತ್ತಾನೆ. ಮನಸ್ಸಿನ ಕ್ಷೋಭೆಯನ್ನು ಮುಚ್ಚಿಕೊಳ್ಳುವುದಕ್ಕಾಗಿ ಕೃತಕ ಕ್ರೌರ್ಯವನ್ನು ಅವಲಂಬಿಸುತ್ತಾನೆ. ಸೀತೆಯನ್ನು ತ್ಯಜಿಸುವ ಭಾಗ ಮೊಟಕಾಗಿದೆ, ಮೊನಚಾಗಿದೆ. ಕೇವಲ ಶ್ಮಶಾನಮೌನವೊಂದು ಮೇಲೆದ್ದು ನಿಂತಿರುವ ಭಾವ ಮನಸ್ಸಿಗೆ ಸ್ಫುರಿಸುತ್ತದೆ. ಈ ಚೊಕ್ಕ ಬಂಗಾರದಂತಹ ಕಥಾವಸ್ತುವಿನಿಂದ ಎಂತಹ ಸುಂದರವಾದ ಕಾವ್ಯಾಭರಣವನ್ನು ಸೃಷ್ಟಿಸಬಹುದಾಗಿತ್ತು! ಆದರೆ ಸೃಷ್ಟಿಕರ್ತನಾಗಬಲ್ಲ ಕಲಾನೈಪುಣ್ಯವೊಂದು ದೈವದತ್ತವಾಗಿರಬೇಕಲ್ಲ ! ಪದ್ಮಪುರಾಣದಲ್ಲಿ ಈ ಭಾಗ ಬಹು ನೀರಸವಾಗಿದೆ. ಅಲ್ಲಿನ ಪಾತ್ರಗಳು ನಿರ್ಜೀವವಾದ ಯಂತ್ರದಂತೆ ನಡೆದುಕೊಳ್ಳುತ್ತವೆ. ಅಗಸ ಹೇಳಿದ – 'ಬಿಟ್ಟ ಹೆಂಡತಿಯನ್ನು ಕಟ್ಟಿಕೊಳ್ಳಲು ನಾನೇನು ರಾಮನಲ್ಲ' ಎಂದು. ಆ ಕೀಲನ್ನು ತಿರುಗಿಸಿದೊಡನೆಯೇ ರಾಮನ ಬೊಂಬೆ ಲಕ್ಷ್ಮಣನ ಕಡೆ ತಿರುಗಿ 'ಸೀತೆಯನ್ನು ಅಡವಿಗೆ ಕಳುಹಿಸು' ಎಂದಿತು. ಸೀತೆ ರಾಮಯಂತ್ರದಿಂದ ಲಕ್ಷ್ಮಣಯಂತ್ರಕ್ಕೆ ಬಿದ್ದಳು. ಲಕ್ಷ್ಮಣ ಆಕೆಯನ್ನು ಸಾಗಿಸಿ ಬಂದ.

ಪದ್ಮಪುರಾಣದಲ್ಲಿ ಹೆಬ್ಬಿದಿರಿನಂತೆ ಬೆಳೆದುಕೊಂಡಿರುವ ನೂರಾರು ಉಪಕಥೆಗಳು ಮುಖ್ಯಕಥೆಯನ್ನು ಮುಚ್ಚಿ ಹಾಕಿಬಿಟ್ಟಿವೆ. ಅನೇಕ ವೇಳೆ ಮುಖ್ಯಕಥೆಗೂ ಉಪಕಥೆಗಳಿಗೂ ಯಾವ ಒಂದು ಸಂಬಂಧವನ್ನು ತರುವುದಕ್ಕೂ ಸಾಧ್ಯವಿಲ್ಲದೆ ಹೋಗುತ್ತದೆ. ಅಶ್ವಮೇಧದ ಕುದುರೆ ದೇಶದೇಶದ ಮೇಲೆ ಸಂಚರಿಸುತ್ತಾ ಆರಣ್ಯಕಮುನಿಯ ಆಶ್ರಮವನ್ನು ಪ್ರವೇಶಿಸುತ್ತದೆ. ಶತ್ರುಘ್ನ ಮಗ್ಗುಲಲ್ಲಿದ್ದ ಮಂತ್ರಿಯನ್ನು ಆಶ್ರಮ ಯಾರದೆಂದು ಕೇಳಿದ. ಆರಣ್ಯಕ ಮುನಿಯದೆಂದು ಗೊತ್ತಾಯಿತು. ಆತನ ಕಥೆಯನ್ನೆಲ್ಲಾ ವಿಸ್ತಾರವಾಗಿ ಪ್ರತಿಪಾದಿಸಿದ್ದಾಯಿತು. ಕಾರಣಾಂತರಗಳಿಂದ ಆ ಕಥೆ ಗೋಮಹಾತ್ಮೆಗೆ ತಿರುಗಿತು. ಗೋಮಹಾತ್ಮೆಯನ್ನು ವಿಸ್ತಾರವಾಗಿ ಪ್ರತಿಪಾದಿಸಿದುದಾದ ಮೇಲೆ, ಗೋವುಹತ್ತಿನಿಂದ ಉದ್ಧಾರವಾದವರ ಕಥೆಗಳನ್ನು ಹೇಳದಿದ್ದರಾಗುತ್ತದೆಯೇ ? ಜನಕಮಹಾರಾಜ ನರಕಕ್ಕೆ ಹೋಗಿ ಅಲ್ಲಿದ್ದವರನ್ನೆಲ್ಲಾ ಉದ್ಧರಿಸಿದ ಕಥೆ ಬರಬೇಕು. 'ನರಕ' ಎಂಬ ಮಾತು ಬಂದಮೇಲೆ ನರಕದ ಸಂಪೂರ್ಣ ವರ್ಣನೆ, ಯಾವ ಯಾವ ಪಾಪಗಳಿಗೆ ಯಾವ ಯಾವ ಶಿಕ್ಷೆ ಇತ್ಯಾದಿಗಳ ವಿವೇಚನೆಯಾಗದಿದ್ದರೆ ಆ ಮಾತನ್ನು ಉಪಯೋಗಿಸಿದುದಕ್ಕೆ ಸಾರ್ಥಕವೇನು ? ಈ ಅಸಂಬದ್ಧ ಪ್ರಲಾಪ ಮುದ್ದಣನಿಗೆ ಸರಿದೋರಲಿಲ್ಲ. ಈ ಕಳೆಗಳನ್ನೆಲ್ಲಾ ಕಿತ್ತುಹಾಕಿ, ತನಗೆ ಬೇಕಾದ ಬೆಳೆಯನ್ನು ಮಾತ್ರ ಸುಂದರವಾಗಿ ಹಬ್ಬಿಸಿದ. ಆರಣ್ಯಕ ಮುನಿಯು ತಪಸ್ಸು ಮಾಡುತ್ತಿರಲು, ಈ ನರಲೋಕದ ತವಸಿಯಂ ಕಂಡು ಪಗೆಗೊಂಡ ನಾಕಲೋಕದ ದೇವರ್ಕಳ ಗೆಯ್ಮೆಯನ್ನು ಹೃದಯಂಗಮವಾಗಿ ವರ್ಣನೆ ಮಾಡಿದ. ಸೋರ್ಮುಡಿಯ ಸೊರ್ಕಿನ ಮಂಜುಘೋಷೆ, ಕೊಂಕುಗೊರಳ ಬಿಂಕದ ರಂಭೆ, ಬಡನಡುವಿನ ಮೇನಕೆ, ಕಿಕ್ಕಿರಿದ ಕಕ್ಕಸಮೊಲೆಯ ತಿಲೋತ್ತಮೆ, ಕುಡುನೋಟದ ಕುಡುಪುನೂರ್ವಶಿ ಇವರು ಆರಣ್ಯಕಮುನಿಯ ತಪೋಭಂಗ ಮಾಡಲೆಂದು ಬಂದು, ಆತನೆದುರು ಹಾವಭಾವವಿಲಾಸ ವಿಭ್ರಮಗಳನ್ನು ಬೀರುತ್ತಾ ರಸಿಕರಸಪರಿಪೂರ್ಣವಾದ ಮಾತುಗಳಿಂದ ಆತನ ಮನಸ್ಸನ್ನು ಸೆಳೆಯಲೆತ್ನಿಸುವ ಪ್ರಯತ್ನವು ಮನೋಹರವಾಗಿದೆ.

'ಸಾಹಿತ್ಯ ಜೀವನದ ಪ್ರತಿಬಿಂಬ.' ಅದರಲ್ಲಿ ಸೃಷ್ಟಿಯಾಗಿರುವ ಪಾತ್ರಗಳು ಕವಿಯ ಅನುಭವದ ಅಚ್ಚಿನಲ್ಲಿ ಹೊರಬಿದ್ದು, ಪ್ರತಿಭೆಯ ಉಜ್ಜುವಿಕೆಯಿಂದ ಉಜ್ವಲಗೊಂಡುವು; ಊಹೆ ಕಲ್ಪನಾಶಕ್ತಿಗಳ ಬಣ್ಣವನ್ನುಂಡು ಬಳೆದವುಗಳು. ಸೀತೆ ಅಡವಿಗೆ ಹೋದುದು ಪೂರ್ಣಗರ್ಭಿಣಿಯಾಗಿದ್ದಾಗ. ಅದಕ್ಕೂ ಮೊದಲು ಹಲವು ವರ್ಷಗಳು ಆಕೆಯು ಪುತ್ರವಿಹೀನಳಾಗಿದ್ದಳು. ಆಗ ಆಕೆಯಲ್ಲಿ ಸ್ತ್ರೀಸಹಜವಾದ ಪುತ್ರದೋಹಳ ಚಿಂತೆ ಸ್ವಲ್ಪವಾದರೂ ಹುಟ್ಟಿರಲಿಕ್ಕಿಲ್ಲವೆ ? ಪುರಾಣಕರ್ತರ ದೃಷ್ಟಿಗೆ ದೇವಾಂಶರಾದ ರಾಮಸೀತೆಯರಲ್ಲಿ ಮಾನವಪ್ರಕೃತಿಯನ್ನು ಆರೋಪಿಸುವುದು ಅಪಚಾರವೆಂದು ಕಂಡಿತೋ ಏನೊ ! ಅವರು ಆ ಕಾರ್ಯಕ್ಕೆ ಕೈ ಹಾಕಲಿಲ್ಲ. ನಮ್ಮ ಕವಿ ಈ ಭಾಗವನ್ನು ಹೊಸದಾಗಿ ಸೃಷ್ಟಿಸಿದ್ದಾನೆ. ಆತನ ಪ್ರತಿಭೆಯ ಫಲವಾಗಿ ಕಾವ್ಯ ರಸಮಯವಾಗಿದೆ.

ಸೀತೆ ಒಂದು ದಿನ ತನ್ನ ನಲ್ಗೆಳತಿ ಚಂದ್ರಮತಿಯೊಡನೆ ಮೊಗಸಾಲೆಯ ತೂಗು ಮಂಚದ ಮೇಲೆ ಕುಳಿತು ಸಲ್ಲಾಪ ಸುಖದಲ್ಲಿ ಮಗ್ನಳಾಗಿರುವಾಗ ಒಂದು ಗುಬ್ಬಿ ತನ್ನ ಮರಿಗೆ ಗುಟುಕೀಯುತ್ತಾ ಲಲ್ಲೆಗೈವುದನ್ನು ಕಾಣುತ್ತಾಳೆ. ಬಹುಕಾಲವಾದರೂ ಮಕ್ಕಳಾಗದೆ ಇದ್ದ ಸೀತೆಗೆ ಮಕ್ಕಳ ಬಯಕೆ ತಲೆದೋರುತ್ತದೆ. ಸಖಿಯನ್ನು ಕುರಿತು 'ಮಿತ್ರೆ ನೋಡೆ ನೋಡೆ ನೀಡುಂ ನೀಡದ ಪಕ್ಕಿಯುಮೆನ್ನಂ ಬಂಜೆಯೆನುತೆ ಏಡಿಪಂತಿರೆ ಎನ್ನಿದರೊಳ್ ಪಿಳ್ಳೆಯಂ ಮುದ್ದುಗೆಯ್ಗುಂ. ಇಂತಿರ್ಪಿನಂ ಇನ್ನೊಲ್ಲನೀ ಎಡೆಯಂ. ಎತ್ತಾನುಂ ಪೆರತೊಂದೆಡೆಗೆ ಪೋಪಂ ಅಲಸುವೆನೀ ನೋಟಕ್ಕೆ' ಎನ್ನುತ್ತಾಳೆ. ಮಕ್ಕಳಿಂದಾಗುವ ಸುಖವನ್ನು ಹಾಗೆಯೇ ಚಿತ್ರಿಸಿಕೊಳ್ಳುತ್ತಾ ಹೇಳುತ್ತಾಳೆ – 'ಅಬ್ಬೆ ! ಪಿಡಿ, ನಡದಪೆನ್ ಎನುತುಂ ಎರಳ್ಮೂರಡಿಯಿಡುತೆ ಪೊಂಗಿ, ತಾಯ ನಿಡುದೋಳಂ ತಾಂಗಿ, ಮೆಲ್ಲನೊತ್ತಿನೊಳಂಕಮನೇರಿ, ನುಣ್ಗಲ್ಲಮಂ ಪಿಡಿದಲುಗಿಸಿ, ಈಗಳ್ ನಡೆಗಲ್ತೆನೆನುತೆ ಕೇಳಿಪ ಕಂದನೆಂದಿಂಗೆ ಪುಟ್ಟುವನೋ ! ಆಡುತಾಡುತೆ ನೆವಮಿಲ್ಲದೆ ನಗುತೆ, ಪರಿದು ತಾಯ್ತಂದೆವಿರ್ ಮುಂತಿರೆ, ಬೆನ್ನನೆ ಸಾರ್ದಯ್ಯನ ಕಣ್ಗಳಂ ಕಿರಿಗೆಯ್ಗಳಿಂ ಮುಚ್ಚುತಾನಾರೆಂದು ಕೇಳ್ವ, ಮಾತೆಯ ಮೇಲುದುರ ಸೆರಂಗಿನೊಳ್ ತಲೆಯಂಬಯ್ತು, ಆಂ ಗುಮ್ಮಂ ನುಂಗುವೆನ್. ಅಲ್ಲದೊಡೆ ತನಿವಣ್ಣನೀಯಿಂ ಎನಗೆ ಎನುತಂ ಕಾಡುವ; ಪೆರತೊರ್ಮೆ ತಂದೆಯ ಪಿಂದೆಸೆಯೊಳ್ ಅಡಂಗಿ, ತಾನೆಲ್ಲಿರ್ಪೆನೆನುತಬ್ಬೆಯಂ ಕೇಳ್ವ; ಮತ್ತಮದೊರ್ಮೆ ಕೈಪಿಡಿಯಂ ಲೀಲೆಯಿಂ ದಿಟ್ಟಿಸಿ ಮಾರ್ಪೊಳೆವ ಮುದ್ದು ಮೊಗಮಂ ಪಡಿಗೂಸುಗೆತ್ತು ತಂದೀವುದೆಂದು ಚಲದಿಂ ಮರುಗುವ; ಮಗುಳ್ದೊರ್ಮೆ ತಾಯ್ ಪೊಯ್ದಳೆಂದು ತಾತಂಗೆ ತೋರಿಪ; ತಾತನಬ್ಬರಿಸೆ ತಾಯೊಳ್ ದೂರುವ; ನಿರ್ನೆರಂ ಜರಚುವ, ಜರುಚಾಡಿ ಬಳಲ್ವ, ಬಳಲ್ದು ಮರುಗುವ ಮರುಗಿ ಪರಿತಂದು ಅಬ್ಬೆಯ ಕಾಲಂ ಬಿಗಿವಿಡಿವ, ಬಿಗಿವಿಡಿದು ಬೆಣ್ಣೆಯ ನೀವುದೆಂದು ಮುಂಜೆರಗಂ ಸೆಳೆವ, ಇಂತು ತನುಮನ ಮನಪ್ಪುಕೆಯ್ವ ದಿವ್ಯಸುಂದರವಿಗ್ರಹಂ ಕುಮಾರನೆನಗಪ್ಪನೆಂದಿಗೂ ಸಖಿ !'

ಈ ಪುತ್ರರ ಹಂಬಲ ಸೀತೆಯದಾಗಿರಬಹುದು. ಅಥವಾ ಕವಿಯ ಅನುಭವವೇದ್ಯವಾದ ಮತ್ತಾರದಾದರೂ ಆಗಿರಬಹುದು. ಹೃದಯ ಸಂವೇದಿಯಾದ ಈ ಭಾಗವನ್ನು ಕಂಡರೆ ಮುದ್ದಣ ತನ್ನ ಮನೋರಮೆಯಲ್ಲಿ ಕಂಡ ಪುತ್ರದೋಹಳವಿರಬಹುದೆ ಇದು ಎನ್ನಿಸುತ್ತದೆ.

ಲಕ್ಷ್ಮಣನ ಪಾತ್ರಸೃಷ್ಟಿಯಲ್ಲಿ ಕವಿಯ ಪ್ರತಿಭೆ ಮುಗಿಲು ಮುಟ್ಟಿದೆ. ಸೀತಾಪರಿತ್ಯಾಗ ಸಮಯದಲ್ಲಿ ಆತನು ನಡೆದುಕೊಳ್ಳುವ ರೀತಿ ಸ್ವಲ್ಪ ಪ್ರಾಕೃತವಾಗಿ ಕಾಣುವುದಾದರೂ ಆತನ ಹೃದಯ ಸಂಕ್ಷೋಭೆಯನ್ನು ಬಹಳ ಚೆನ್ನಾಗಿ ವ್ಯಕ್ತಗೊಳಿಸುತ್ತದೆ. ಸೀತೆಯನ್ನು ಅಡವಿಯಲ್ಲಿ ಬಿಟ್ಟು ಬಾ ಎಂಬ ಅಣ್ಣನಾಣತಿಯನ್ನು ಕೇಳಿದೊಡನೆಯೇ, ಆತನನ್ನು ಕುರಿತು ಲಕ್ಷ್ಮಣ ಹೀಗೆ ಹೇಳುತ್ತಾನೆ – 'ಜೀಯ ! ಅಣ್ಣನಾಜ್ಞೆಯಂ ಮೀರಿ ನಡೆಯೆ ಕುಂಭೀಪಾಕಂ; ನಿರ್ದುಷ್ಟೆಯಾದೀ ಅತ್ತಿಗೆಯಂ ಅರಿದುಂ ನಟ್ಟಡವಿಗುಯ್ದು ಬಿಡೆ ರೌರವಂ. ಎನ್ನೊಡೆಯ ! ಅದರೊಳಂ ತುಂಬಿದ

ಬಿಸಿರಿಯಲ್ತೆ ! ಎಂತಯ್ ಕೊಂಡೊಯ್ದು, ಪಾಪಿ ಕೈವಲ್ಯ ಲಕ್ಷ್ಮಿಯಂ ಬಿಡುವಂತಿರೆ, ನಿರ್ಘೃಣನಾಂ ಭಾಗ್ಯ ಲಕ್ಷ್ಮಿಯಂ ಬಿಡುವೆಂ ?' ರಾಮ ಸುಲಭವಾಗಿಯೇ ಸಮಸ್ಯೆಯನ್ನು ಬಿಡಿಸುತ್ತಾನೆ – 'ಬಾಲ ! ಇಂತುಸಿರಲಾಗದಯ್.' ವೀಸಂ ದೋಸಮಿಲ್ಲಂ. ಮಾರ್ನುಡಿಯದಿರ್, ಪೋ ಪೋ ಎಂದುಸಿರ್ದಂ. ಕಸಿವಿಸಿಗೊಂಡ ಲಕ್ಷ್ಮಣ – 'ಎಲೆ ಅಣ್ಣ ! ಇದೆಕೊಳ್ ಚಂಡಾಲಂ ಸಿದ್ಧಮಿರ್ಪೆಂ. ಅಡಿಯಾಣೆ ! ಆಣೆಯಂತಂತು ನಡೆವೆಂ. ಮುನ್ನಂ ಭಾರ್ಗವಂ ತಂದೆಯ ನನ್ನಿಗೆ ಮಾತೆ ರೇಣುಕೆಯಂ ಕೊಲ್ಲವೆ ! ಅಂತಿರಲ್ ನೀನಯ್ಯಂಗೆ ಪಡಿಯಾಗಿರೆ ಮಾತೆ ಸೀತೆಯಂ ಕೊಲ್ವೆನೊ ಮೇಣ್ ಕಾಡೊಳ್ ಸಿಂಗದಿಕ್ಕೆಯೊಳ್ ಬಿಸುಳ್ವೆನೊ ಪೇಳ' ಎಂದು ಹೇಳಿ ಕಠಿಣಕಾರ್ಯಕ್ಕೆ ತನ್ನ ಮನಸ್ಸನ್ನು ಸ್ಥಿರಗೊಳಿಸುತ್ತಾನೆ.

ಈ ಸನ್ನಿವೇಶದಲ್ಲಿ ರಾಮನು ನಡೆದುಕೊಳ್ಳುವ ರೀತಿ, ಆತನ ಬಾಯಲ್ಲಿ ಬರುವ ಮಾತುಗಳು ಅಷ್ಟು ಶ್ರೇಷ್ಠವಾದುವೆಂದು ಹೇಳಿಕೊಳ್ಳುವಂತಿಲ್ಲ. ರಜಕನ ಪರುಷೋಕ್ತಿಗಳನ್ನು ಕೇಳಿ ತನಗೆ ತಾನೇ ಆತ ಹೀಗೆ ಹೇಳಿಕೊಳ್ಳುತ್ತಾನಂತೆ ! 'ಹಾ ! ಹಾ ! ಪೊಂಜುರಿಗೆಯೆಂದೇ ಎರ್ದೆಗೊತ್ತಿದೆಂ. ಇಂತು ಕರುಳಂ ಕೊರೆಗುಮೆಂದರಿತೆನಿಲ್ಲಕ್ಕಟಾ ! ಪಾವನೆಯೆಂದೇ ಒಪ್ಪುಗೊಂಡೆನದರನೀ ವಿಲಗಮೊಂದಕ್ಕೆ ತಲೆಮಟ್ಟೆಂ. ಆಃ ! ರಜಕನೆನ್ನನೇಳಿಸಿದ ನಿಲ್ಲಂ; ಆದಂ ಎಳ್ಚರಿಸಿದಂ. ಸಾಜಂ, ಆಗಳ್ ರಕ್ಕಸನ ಬಂದಿಯೊಳ್ ಬಾಳ್ದಳಂ ಮಗಳ್ದು ಮಾನಾಳ್ವೊಡಕ್ಕುಮೆ ? ಇನ್ನೇವೆಂ ? ಕೆಯ್ವಲನೊಳ್ ಬೆಳೆದ ಕುರುಂಬುಲ್ಲಂ ಕಿಳ್ತು ಬಿಸುಡುವಂತಿರೆ ಸೀತೆಯಂ ಬಿಡುವೆಂ.' ಹೀಗೆಂದು ಮನದಲ್ಲಿ ನಿಶ್ಚಯಿಸಿದ ರಾಮ ತಮ್ಮಂದಿರ ಮುಂದೆಯೂ ತನ್ನ ನಿಶ್ಚಯವನ್ನು ಹೀಗೆಯೇ ಉಗ್ಘಡಿಸುವನು. 'ನಿರ್ಮೋಕ ನಿರ್ಮುಕ್ತ ನಿರ್ಮಲನಪ್ಪ ಫಣಿಯೆಂತಂತೀ ಸೀತೆಯಂ ತೊರೆದೇ ಸೊಗಂ ಬಾಳ್ವೆನ್. ಇದು ಸಿದ್ಧಂ.' ಈ ಸಿದ್ಧಾಂತವನ್ನು ಕಂಡು ನಮಗೆ ರಾಮನ ಮೇಲಿನ ಗೌರವ ಸ್ವಲ್ಪಮಟ್ಟಿಗೆ ಇಳಿದುಹೋಗುತ್ತದೆ. ಕವಿ ಮೂಲವನ್ನು ಮೂಲೆಗೊತ್ತಿ ತನ್ನ ಕೈವಾಡವನ್ನು ಸ್ವಲ್ಪ ತೋರಬಾರದಾಗಿತ್ತೆ ? ಎನ್ನಿಸುತ್ತದೆ. ಕವಿಗೂ ಇಲ್ಲಿ ಸೀತೆಗಾಗಿರುವ ಅನ್ಯಾಯ ಅರಿವಾಗದೆ ಹೋಗಿಲ್ಲ. ಆದರೂ ಹೆಚ್ಚು ಸ್ವತಂತ್ರವನ್ನು ವಹಿಸಹೊರಟಿಲ್ಲ.

ಇಲ್ಲಿನ ಪಾತ್ರಗಳಲ್ಲೆಲ್ಲಾ ಲಕ್ಷ್ಮಣನ ಪಾತ್ರವೇ ಅತ್ಯಂತ ಸುಂದರವಾಗಿ ಚಿತ್ರಿತವಾಗಿರುವುದು. ಆತನ ನಡವಳಿಕೆಯನ್ನು ಕಂಡು ನಾವು ಆರ್ದ್ರಹೃದಯರಾಗಿ ಅತನನ್ನು ಬಾಯ್ತುಂಬ ಹೊಗಳಬೇಕೆಂದುಕೊಳ್ಳುತ್ತೇವೆ. ರಾಮನ ಆಜ್ಞೆಯನ್ನು ಹೊತ್ತು ಹೃದಯಭಾರದಿಂದ ಆತನಿಗೆ ರಾತ್ರಿಯೆಲ್ಲಾ ನಿದ್ರೆಯಿಲ್ಲ. ಬೆಳಗಾಗುತ್ತಲೇ ರಥವನ್ನು ತಂದು ಸೀತಾಮಾತೆಯ ಅರಮನೆಯ ಮುಂದೆ ನಿಲ್ಲಿಸುತ್ತಾನೆ. ಪೆಣ್ಗೊಲೆಗಾಗಿ ಸಿದ್ಧವಾಗಿ ನಿಂತಿರುವ ತೇರು ಕುದುರೆಗಳನ್ನು ಪರಿಪರಿಯಾಗಿ ನಿಂದಿಸುತ್ತಾನೆ. ತನ್ನನ್ನು ತಾನೇ ಬೇಕಾದಷ್ಟು ನಿಂದಿಸಿಕೊಳ್ಳುತ್ತಾನೆ. ಇದೇ ಸಮಯದಲ್ಲಿ ಸೀತೆಗಾದರೋ, ಆಕೆಯ ಉತ್ಸಾಹಕ್ಕೆ ಸೀಮೆ ಸಾಲದು. ಋಷಿಪತ್ನಿಯರಿಗೆ ದಾನ ಮಾಡಲೆಂದು ಬೇಕಾದಷ್ಟು ಪರಿಕರಗಳನ್ನು ಅಣಿಮಾಡಿಕೊಂಡು ಅವುಗಳೊಡನೆ

ರಥವೇರುತ್ತಾಳೆ. ಮನೆಯಲ್ಲಿ ಇನ್ನೂ ಒಬ್ಬರೂ ಮೇಲಕ್ಕೆದ್ದಿಲ್ಲ. ಹೋಗಿ ಬರುವೆನೆಂದು ಯಾರಿಗೂ ಹೇಳುವುದಕ್ಕೂ ಆಕೆಗೆ ವ್ಯವಧಾನವಿಲ್ಲ. ಅವರು ಏಳುವತನಕ ಕಾದಿದ್ದು ಹೇಳಿಬರುವಷ್ಟು ತಾಳ್ಮೆಯೂ ಆಕೆಗಿಲ್ಲ. 'ಇರ್ಕೆ ರಾಘವಂ ಪೇಳ್ವಂ; ಅಲ್ಲದೊಡೆ ತಾಂ ತಮಗೆ ನೆಲೆಗೆಯ್ವರ್' ಎಂದುಕೊಳ್ಳುತ್ತಾಳೆ. ಪಾಪ ! 'ಎಂತುಂ ಕಿರಿದುಂ ದಿನಕ್ಕೆ ಮರಳ್ದು ಬರ್ಪೆವಲ್ತೆ !' ಎಂದು ಆಕೆಯ ಸಮಾಧಾನ. ದುರ್ವಿಧಿ ಬೆನ್ನ ಹಿಂದೆಯೇ ವಿಕಟಾಟ್ಟಹಾಸದಿಂದ ಕೇಕೆ ಹಾಕುತ್ತಿರುವುದನ್ನು ಆಕೆಯೇನುಬಲ್ಲಳು ? ಆದರೆ ಆ ದುರ್ವಿಧಿಯ ಅರಿವಿರುವ ಲಕ್ಷ್ಮಣನಿಗೆ ರಥಚೀತ್ಕಾರ ಧ್ವನಿಯು 'ದೇವಿಯರಂ ಬಿಡುವುದಾಗದು; ಅನ್ನೆಯಮಕ್ಕುಂ' ಎಂದು ಕಿರಿಚುತ್ತಿರುವಂತೆ ಬೋಧೆಯಾಗುತ್ತದೆ. ರಥ ವೇಗದಿಂದ ಹಿಂದಕ್ಕೆ ಹಾರುತ್ತಿರುವ ಪತಾಕೆ "ರಾಘವನೂಣೆಯಮಂ ಕಾಣೆ'ನೆಂದು ವಿಮುಖವಾಗುತ್ತಿರುವಂತೆ ಭಾಸವಾಗುತ್ತದೆ. ಉದ್ವಿಗ್ನ ಚಿತ್ತನಾಗಿ ಪ್ರಯಾಣಮಾಡುತ್ತಾ ಆತ ಗಂಗಾತಡಿಯನ್ನು ಸೇರುತ್ತಾನೆ. ಸೀತೆ ಸಂತೋಷದಿಂದ ಗಂಗೆಯ ಗುಣಸ್ತವನವನ್ನು ಹಾಡಿಕೊಂಡರೆ 'ಸೌಮಿತ್ರಿಯೂ ತನ್ನ ಸುತ್ತಮುತ್ತ ಪಿರಿಯರನ್ನುದ್ಧರಿಸಿ ಭಾಗೀರಥಿಯಂ ಬಲ್ಲಂತೆ ಪೊಗಳ್ದಂ.'

ನಾವೆಯಲ್ಲಿ ನದಿಯನ್ನು ದಾಟಿ ಕ್ಷಣಕಾಲ ವಿಶ್ರಮಿಸಿದ ಮೇಲೆ ಇಬ್ಬರೂ ಪಾಪನಾಶಿನಿಯಲ್ಲಿ ಸ್ನಾನ ಮಾಡಿದರು. ಸೀತಾದೇವಿ ಕೈಯಲಿದ್ದ ರಾಮಮುದ್ರಿಕೆಗೆ ಮೈದುನನು ತಂದಿದ್ದ ಹೂಗಳಿಂದ ಪೂಜೆಮಾಡಿ, ಹಣ್ಣುಗಳ ನೈವೇದ್ಯವನ್ನು ಸಮರ್ಪಿಸಿ, ತೀರ್ಥಪ್ರಸಾದಗಳನ್ನು ಮೈದುನನಿಗಿತ್ತು ತಾನೂ ಊಟಮಾಡಿದಳು. ಬಿಸಿಲಿಳಿಯುವವರೆಗೆ ಅಲ್ಲಿ ತಂಗಿದ್ದು ಅನಂತರ ಮುಂದಕ್ಕೆ ಪ್ರಯಾಣ ಬೆಳಸಿದರು. ಅಲ್ಲಿಯವರೆಗೆ ರಥದಲ್ಲಿದ್ದುದರಿಂದ ಜೊತೆಜೊತೆಯಾಗಿಯೇ ಪ್ರಯಾಣವಾಗುತ್ತಿತ್ತು; ಈಗ ಕಾಲ್ನಡೆ. ಋಷಿಪತ್ನಿಯರನ್ನು ಕಾಣುವ ತವಕದಿಂದ ಸೀತೆಗೆ ನಡೆ ಮುಂಚುತ್ತಿದೆ. ಲಕ್ಷ್ಮಣನಿಗಾದರೋ ಅಣ್ಣನ ಅಪ್ಪಣೆಯನ್ನು ಅತ್ತಿಗೆಗೆ ತಿಳಿಸುವುದು ಹೇಗೆ ? ಆಕೆಯನ್ನು ಅಡವಿಯಲ್ಲಿ ಬಿಟ್ಟು ಹೋಗುವುದು ಹೇಗೆ ? ಎಂಬ ದುಗುಡದಿಂದ ನಡೆ ಹಿಂದಾಗುತ್ತದೆ. ಆಗ ಸೀತೆ ಮೈದುನನನ್ನು ಕುರಿತು – ಏನು ಕಂದ ! ನಡೆಯಲ್ಲಿ ಹಿಂದೆ ಬಿದ್ದೆಯಲ್ಲ ! ದಾರಿಯಲ್ಲಿ ಕಲ್ಲುಮುಳ್ಳುಗಳೇನೂ ಇಲ್ಲ. ಹೆಣ್ಣಾದ ನಾನು ಮುಂದೆ ಹೋಗುತ್ತಿರಲಾಗಿ ಗಂಡುಗಲಿಯಾದ ನೀನು ನಡೆಯಲಾರೆಯೆಂದರೆ ನಾಚಿಕೆಗೇಡಲ್ಲವೆ ? ಬಾ ಬಾ ಎಂದು ಹೇಳಿ, ಆತನು ಬರುವವರೆಗೆ ಕಾದಿದ್ದು ಅನಂತರ ಜೊತೆಗೂಂಡು ನಡೆಯುತ್ತಾಳೆ. ಮೂಕನಂತೆ ಬರುತ್ತಿರುವ ಆತನನ್ನು ಮಾತಿಗೆಳೆಯಬೇಕೆಂದು – ನೋಡು ! ಈ ಅರಣ್ಯ ಎಷ್ಟು ರಮ್ಯವಾಗಿದೆ. ಆದರೂ ದಂಡಕಾರಣ್ಯಕ್ಕೆ ಸಮಾನವಾಗಲಾರದು ನೋಡು. ಎಂದು ಹೇಳುತ್ತಾಳೆ. ಆಕೆ ಎಷ್ಟು ಪ್ರಯತ್ನಿಸಿದರೂ ಲಕ್ಷ್ಮಣನ ಬಾಯಿಂದ ಹುಂ ! ಉಹುಂ ! ಎಂಬುದಕ್ಕಿಂತ ಹೆಚ್ಚು ಮಾತು ಹೊರಡವಲ್ಲದು. ಆತ ಬಳಲಿರಬೇಕೆಂದು ಸೀತೆಯೇ ತನ್ನ ನಡಗೆಯ ವೇಗವನ್ನು ತಗ್ಗಿಸಿದಳು. ಬಹುದೂರ ನಡೆದು ಘೋರಾರಣ್ಯವೊಂದನ್ನು ಹೊಕ್ಕುದಾಯ್ತು.

ಸೀತೆಯ ಮನದಲ್ಲಿ ಸಂದೇಹ ಮೂಡಿತು. ಋಶ್ಯಾಶ್ರಮ ದೊರೆವುದಕ್ಕೆ ಬದಲು ಪ್ರಯಾಣ ಮುಂದುವರಿದಂತೆಲ್ಲಾ ಕಾನನ ಹೆಚ್ಚು ದಟ್ಟವಾಗುತ್ತಾ ಬರುತ್ತಿತ್ತು. ಜನ ಸಂಚಾರದ ಕುರುಹೇ ಅಲ್ಲಿ ಕಾಣವಲ್ಲದು. ಕ್ರೂರವಾದ ವನ್ಯಮೃಗಗಳು ಹಾದೇ ಹಗಲೇ ಕಣ್ಣಿಗೆ ಬೀಳುತ್ತಿವೆ. ನಡೆದ ಆಯಾಸದ ಜೊತೆಗೆ ಕಾಲಿಗೆ ಕಲ್ಮುಳ್ಳುಗಳು ನಟ್ಟು ರಕ್ತ ಸುರಿಯಲಾರಂಭವಾಯಿತು. ಏನು ಲಕ್ಷ್ಮಣಾ ! ಈ ಕಾರಡವಿಯಲ್ಲಿ ಎಲ್ಲಾದರೂ ಋಷ್ಯಾಶ್ರಮವಿರುವುದುಂಟೆ ? ನಿಜವಾಗಿಯೂ ನೀನು ದಾರಿ ತಪ್ಪಿರುವಂತೆ ತೋರುತ್ತದೆ – ಎಂದು ತನ್ನ ಶಂಕೆಯನ್ನು ಹೊರದೋರಿದಳು. ಈ ಮಾತಿಗೆ ಲಕ್ಷ್ಮಣ ಏನುತ್ತರ ಕೊಡಬಹುದು ? ಆಕೆಯ ಸ್ಥಿತಿಯನ್ನು ಕಂಡು ಹೊಟ್ಟೆಯುರಿದು ಹೋಗಿದೆ. 'ಒಂದೆಡೆಯೊಳಗ್ರಜನ ಕಟ್ಟಾಣತಿ; ಒಂದೆಡೆಗೆ ಸೀತೆಯತ್ತಣ ಮರುಕಂ. ದೇವಿಗೆ ನೀನಂಜದಿರೆಂಬೊಡುಂಟೆ? ಪುರಕೆ ಮರಲ್ಚುವೆನೆಂಬೊಡುಂಟೆ? ತಾನೆ ಕಾವಲಿರ್ಪೆನೆಂಬೊಡುಂಟೆ? ಅಃ! ತಲೆವೋಕನೊಂದು ಮಾಟಮೆ!' ಗಳಗಳ ಅಳುತ್ತಾ ಅತ್ತಿಗೆಯ ಪಾದಗಳನ್ನು ಮುಟ್ಟಿ ನಮಸ್ಕರಿಸಿ 'ದೇವಿಯರೆನ್ನಂ ಕಂದನೆಂದು ಸಂಬೋಧಿಸದಿರಿಂ; ಪಗೆವವನೆಂದೇ ಬಗೆಯಿಂ. ಇನ್ನೆವರಮಣ್ಣನಾಣತಿಯಂ ನಿಮ್ಮೊಳೆಂದೆನಿಲ್ಲ. ನಾಡೊಳಾವನೊ ಮಡಿವಳನೋರ್ವನಭದ್ರಮಾಗೆ ದೇವಿಯರೊಳ್ ಕುಂದಿಟ್ಟು ದೇವರಂ ಚುನ್ನವಾಡಿದಂ ಗಡ ! ಅಂತೀ ದೂಸರಿನಗ್ರಭವಂ ನಿಮ್ಮಂ ವಿಪಿನದೊಳಿಳಿಸಿ ಬರ್ಪುದೆಂದೆನ್ನಂ ಪೇಳ್ದಂ. ಇದೆಕೊಳ್ಳಿಂ, ಸ್ವಾಮಿಕಾರ್ಯಧುರಂಧರಂ, ಅಗ್ರಜನ್ಮಾಜ್ಞಾನುವರ್ತಿ, ವೀರಾಗ್ರಗಣ್ಯಂ, ಕೃತಕೃತ್ಯಂ. ನಚ್ಚಿನ ಮೈದುನನೆಂ, ಲಕ್ಷ್ಮಣನೆಂ, ಈ ಒಸೆಗೆಯಂ ಪೇಳಲ್ಕೆಂದು ಬಂದು ಬೆನ್ನಿಕ್ಕಿ ಪೊಳಲ್ಗೆ ಪೋದಪೆಂ' ಎಂದು ಹೊಟ್ಟೆಯುರಿಯನ್ನು ಹೊರಹೊಯ್ದುಕೊಳ್ಳುತ್ತಾನೆ.

ಲಕ್ಷ್ಮಣನ ಬಾಯಿಂದ ಬರುವ ಒಂದೊಂದು ಮಾತೂ ಹೊಟ್ಟೆಯುರಿಯಿಂದ ಹಾರಿಬರುತ್ತಿರುವ ಕೆಂಡದುಂಡೆಗಳು. ತಾನು ತನ್ನ ಜೀವನದಲ್ಲಿ ತೋರಿದ ಸ್ವಾರ್ಥತ್ಯಾಗಕ್ಕೆ, ಭ್ರಾತೃವಾತ್ಸಲ್ಯಕ್ಕೆ ಇದೇ ಪುರಸ್ಕಾರ! ತನ್ನ ಬಾಳು ಉದ್ದಕ್ಕೂ ಒಂದೇ ಹಾಡಾಯಿತು. 'ಜಗದೆ ದುಃಖದೊಳೆ ಪಳಂಗಿದರ್ಗೆ ಮೇಣುಂ ಮೇಣುಂ ದುಃಖಮೊದವೆ ಬೀರದ ರೋಸಕ್ಕೆಡೆವರ್ಕುಂ ಇಂತು ಲಕ್ಷ್ಮಣಂ ಪಾಷಾಣ ಕಠಿಣ ಹೃದಯನಾದ ನೈಸೆ! ಎಂತುಂ ಕುರುಪೋದುದೆ? ಮನದೊಳೆ ಮಮ್ಮಲಂ ಮರುಗಿದಂ, ನೊಂದಂ, ಬೆಂದಂ.'

ಲಕ್ಷ್ಮಣನ ಮಾತುಗಳನ್ನು ಕೇಳಿ ಸೀತೆಯ ಸಂಕಟ ತುಂಬಿ ಕೋಡಿ ಹರಯುತ್ತದೆ. ತನ್ನ ಸಂಕಟವನ್ನು ಬಗೆಬಗೆಯಾಗಿ ಹಾಡಿಕೊಳ್ಳುತ್ತಾ ಗಟ್ಟಿಯಾಗಿ ರೋದಿಸಿದಳು. ರಾಮನನ್ನು ನೆನೆದು ಪರಿಪರಿಯಾಗಿ ಹಂಬಲಿಸಿದಳು. ತನ್ನ ದುಸ್ಥಿತಿಯನ್ನು ನೆನೆದು 'ಕುರುಂಬನ ಕುತ್ತಕ್ಕೆ ಕುರಿಯ ಪಿತ್ತಮೆ ಮದ್ದಾಯ್ತೆ?" ಎಂಬ ಸಾಮತಿಯನ್ನು ಆರೋಪಿಸಿಕೊಂಡಳು. ತನ್ನಲ್ಲಿ ಅತುಳವಾದ ಭಕ್ತಿವಿಶ್ವಾಸ ಮಮತೆಗಳನ್ನಿಟ್ಟಿದ್ದ ಹಲವರ ಹೆಸರು ಹೇಳಿ, ಇವರೆಲ್ಲರಿದ್ದೂ ತನ್ನ ಬಾಳು ಈ

ದುರ್ಗತಿಗಿಳಿಯಬೇಕೆ ? ಎಂದು ಪ್ರಶ್ನಿಸಿದಳು. ಅನಂತರ ತನ್ನಲ್ಲಿಯೇ 'ಪೆಣ್ಣೊಂದು ಬಾಳ್ಕೆ ಬಾಳ್ಕೆಯೇ ?' ಎಂದುಕೊಂಡು 'ಇಂತಿದೇಂ ಕಾನನ ರೋದನಮಾಗದೆ ? ಬೊಮ್ಮನೆನ್ನ ಪಣೆಯೊಳ್ ಬರೆದುದಿಂತುಟೈಸೆ' ಎಂದು ಸಮಾಧಾನಪಟ್ಟುಕೊಳ್ಳುತ್ತಾಳೆ. ಈಕೆಯ ಈ ವಾಕ್ಯಗಳನ್ನು ಕೇಳಿ ಲಕ್ಷ್ಮಣನಿಗೆ ಏನುತ್ತರ ಕೊಡುವುದಕ್ಕೂ ತೋಚುವುದಿಲ್ಲ. ಆಗ ಒಳಗೇ ಕುದಿಯುತ್ತಾ ತಲೆತಗ್ಗಿಸಿ ನಿಂತಿರುವ ಮೈದುನನನ್ನು ಕುರಿತು ಸೀತೆ 'ಕಂದಾ ! ಏತರ್ಕೆ ನಿಂದಿರ್ಪೈ ? ತಳ್ವಿದನೆಂದು ನಿನ್ನೊಳಗ್ರಜಂ ಕೋಪಿಸನೆ ? ಅಣ್ಣನಾಜ್ಞೆ ಸಂದುದಲಾ ! ಪೋ ಪೋಗೈ' ಎಂದು ಹೇಳಿದಳು.

ಸೀತೆಯ ಒಂದೊಂದು ನುಡಿಯೂ ಚೂಪಾದ ಬಾಣದಂತೆ ಬಂದು ಲಕ್ಷ್ಮಣನ ಮರ್ಮಸ್ಥಾನದಲ್ಲಿ ನಾಟುವುವು. ತನ್ನನ್ನು ತಾನೇ ಹಳಿದುಕೊಳ್ಳುತ್ತಾ 'ಅಣ್ಣನಾಣತಿಯೆಂಬೊಂದು ನೇಣ್ ಗೋಣಂ ಬಿಗಿದೀಳ್ಗುಂ. ಆಗಳೆ ಬಲ್ಲಗೆಯೊಳ್ ಬೇಡಿದೆಂ. ದೇವರ ಚಿತ್ತಕ್ಕೆ ಬಾರದಾಯ್ತು ! ಎನ್ನೊಂದು ಮುನ್ನೊಡಲ ಅಳಿಗೆಯ್ಮೆಯ ಬೆಸುಗೆಯಿನೀಗಳೀ ಪಾತಕಕ್ಕೆ ಕೈ ನೀಡುವೊಡಾದೆಂ. ಅಂತಿರೆ ಗೋರಿಟ್ಟ ಸೈಪಂ ದುರ್ವಿಷಯಂಗಳ್ಗೆ ಸೂರೆಗೊಟ್ಟು ನಿರಯದ ಬಾಗಿಲ್ಗಾಪಿಗೆಂದು ದಕ್ಷಿಣಾಭಿಮುಖನಾಗಿ ಪೋಪನಂತೆ ಪಾಳ್ಗೋದ ನಾಡಿಂಗೆ ಮರಲಲ್ಕಿರ್ಪೆಂ.' ಎಂದು ಹೇಳಿಕೊಳ್ಳುವನು. ಆತನ ಮೂಕರೋದನದಲ್ಲಿ ಅಡಗಿರುವ ಅಳಲ ಆಳವನ್ನು ಅರಿತು ಸೀತೆಯೇ ಆತನನ್ನು ಸಮಾಧಾನಪಡಿಸುತ್ತಾಳೆ. 'ಕಯ್ವಿಡಿದ ನಲ್ಲನೇ ಮುನಿವೆಡೆಯೊಳಾರೇನೆಂಗುಂ ? ನಿನ್ನೊಳೇನಪರಾಧಂ ? ಪೆಣ್ಣೆನಿಸೆ ಪುಟ್ಟಿದೆನ್ನದೆಯೆ ದೋಷಂ' ಎಂದು ಹೇಳಿ, ತನ್ನನ್ನು ತ್ಯಜಿಸಿದ ರಾಮಚಂದ್ರನಿಗೆ ಕ್ಷತ್ರಿಯ ರಮಣಿಗೆ ಉಚಿತವಾದ ಸಂದೇಶವೊಂದನ್ನು ಕೊಟ್ಟು ಕಳುಹುತ್ತಾಳೆ – 'ನಿನ್ನಂ ನಿನ್ನಣ್ಣಂ ಕೇಳ್ದೊಡೆ, ನಿನ್ನಾಣತಿಗಬಲೆ ಮರುಗಿದಳಿಲ್ಲ, ಮಾರ್ನುಡಿದಳಿಲ್ಲ, ಮುನಿಸಾಂತಳಿಲ್ಲ, ಬೆರ್ಚಿದಳಿಲ್ಲ, ಕೂಳ್ಕುದಿಗೊಂಡಳಿಲ್ಲ, ದೂರಿದಳಿಲ್ಲ. ನೀನೆ ಗತಿಯೆಂದು ನಿನ್ನಡಿಯಂ ನೆನೆಯುತೆ ಕಡೆವೊಳ್ತಂ ಪಾರುತಿರ್ಪಳ್ ......' ಅನ್ಯಾಯ ಮಾಡಿದವನಿಗೆ ಈ ಮಾತುಗಳಿಗಿಂತಲೂ ಹೆಚ್ಚಿನ ಶಿಕ್ಷೆ ಇನ್ನಿಲ್ಲ. ಅನಂತರ ಸೀತೆ ತನ್ನನ್ನು ಹೆತ್ತವಳ ಕ್ಷಮೆಯನ್ನು ಕೈಕೊಂಡು ಲಕ್ಷ್ಮಣನನ್ನು ಹರಸಿ ಕಳುಹುವಳು – 'ನಿನಗೆ ಮೇಲಕ್ಕೆ ! ಮೇಣ್ ಪಯಣಂ ಸೊಗಮಕ್ಕೆ ! ಎಮ್ಮೆಲ್ಲರ್ಗೆ ಶ್ರೀರಾಮನಡಿದಾವರೆಯೊಲ್ಮೆಯೊಂದು ವಜ್ರ ಪಂಜರಮಕ್ಕೆ ! ಪೋಗಯ್.'

ಆಗ ಸೌಮಿತ್ರಿ ಸೀತಾಮಾತೆಯನ್ನು ಬಲವೆಂದು, ಕೈಮುಗಿದು, ಕಂಡ ಕಂಡ ದೇವರುಗಳನ್ನೆಲ್ಲಾ ತನ್ನ ಅತ್ತಿಗೆಯನ್ನು ಸಂರಕ್ಷಿಸುವಂತೆ ಬೇಡಿ, 'ನಡೆಯಟ್ಟೆ'ಯಂತೆ ಹಿಂದಿರುಗಿದ. ಇತ್ತ ಸೀತೆ ತಾನು ಹುಟ್ಟಿದ, ಸೇರಿದ ಕುಲಗಳೆರಡನ್ನೂ ನೆನೆದು 'ಯಾರೇನು ಮಾಡುವರು, ಯಾರಿಂದಲೇನಹುದು ಪೂರ್ವಜನ್ಮದ ಕರ್ಮ ವಿಧಿ ಬೆನ್ನ ಬಿಡದು' ಎಂದು ರೋದಿಸುತ್ತಿರುವಾಗ ಕಾರಣಾಂತರಗಳಿಂದ ಅಲ್ಲಿಗೆ ಬಂದ ವಾಲ್ಮೀಕಿ ತನ್ನಾಶ್ರಮಕ್ಕೆ ಆಕೆಯನ್ನು ಕರೆದೊಯ್ದು

ಪೋಷಿಸುತ್ತಿರುತ್ತಾನೆ. ಅಲ್ಲಿ ಆಕೆ ಅವಳಿ ಮಕ್ಕಳನ್ನು ಹೆರುತ್ತಾಳೆ. ಸೀತಾಕುಮಾರರಾದ ಲವಕುಶರು ದಿನದಿನಕ್ಕೆ ಶುಕ್ಲ ಪಕ್ಷದ ಚಂದ್ರನಂತೆ ಕಳೆಗೊಂಡು ಬೆಳೆಯುತ್ತಿರುತ್ತಾರೆ.

ಮುದ್ದಣನ ಕಾವ್ಯದಲ್ಲಿ ಅತ್ಯಂತ ರಸವತ್ತಾದ ಭಾಗವೆಂದರೆ ಮುದ್ದಣ-ಮನೋರಮೆಯರ ಸಂಭಾಷಣೆ. ಹಿರಿಯ ವಿಮರ್ಶಕರೊಬ್ಬರು ರಾಮಾಶ್ವಮೇಧದ ಕಥೆಯಲ್ಲಿ ಬರುವ ಈ ಸಂಭಾಷಣೆಯನ್ನು ಸಾಮಾನ್ಯಚಿತ್ರಕ್ಕೆ ಹಾಕಿರುವ ಸುವರ್ಣದ ಚೌಕಟ್ಟೆಂದು ಕರೆದಿದ್ದಾರೆ. ಈ ದಂಪತಿಗಳ ಸೃಷ್ಟಿಕವಿಯ ರಸಿಕತೆಗೆ, ಕಾವ್ಯ ಮೀಮಾಂಸಾನುಭವಕ್ಕೆ ಹಿರಿಯ ಸಾಕ್ಷಿ. ಅದರಲ್ಲಿಯೂ ಮುದ್ದಣನ ಮಾತುಗಳಿಗಿಂತಲೂ ಮನೋರಮೆಯ ಮಾತುಗಳು ಹೆಚ್ಚು ಮನೋಜ್ಞವಾಗಿವೆ. ಮುದ್ದಣನು ಬರಿಯ ಸಂಪ್ರದಾಯದ ಪ್ರತಿನಿಧಿ. ಮನೋರಮೆ ವಿಮರ್ಶೆಯ ಹೊಸ ನೋಟದಿಂದ ಎಲ್ಲವನ್ನೂ ಸಮಾಲೋಚಿಸಬಲ್ಲ ಕವಿಯ ಆಂತರಿಕ ಭಾವನೆಗಳ ಬಾಹ್ಯಸ್ವರೂಪ. ಅದಕ್ಕೂ ಹೆಚ್ಚಾಗಿ ಸಂಸಾರವನ್ನು ಸುಖಮಯವಾಗಿ ಮಾಡಬಲ್ಲ ಗೃಹಲಕ್ಷ್ಮಿ. ಓದುಗರ ಬೆಂಬಲಕ್ಕೆ ಸದಾ ನಿಂತು ಅವರ ಮನಸ್ಸಿನಲ್ಲಿ ಏಳಬಹುದಾದ ಸಂದೇಹಗಳನ್ನೂ, ಭಾವಗಳನ್ನೂ ಬಯಲಿಗಿಡುತ್ತಾಳೆ. ಒಳ್ಳೆಯ ರಸಿಕ ರಸಜ್ಞಳು. ಕವಿಯು ಅವಳಿಗೆ ಕಥೆ ಹೇಳಲೆಂದೇ ವರ್ಷಾಕಾಲವನ್ನು ಸೃಷ್ಟಿಸಿದ್ದಾನೆ. ಹೊರಗಿನಿಂದ ಬಂದ ಗಂಡನಿಗೆ ಆಕೆ ತಕ್ಕ ಉಪಚಾರವನ್ನು ಮಾಡಿ, ಆತನ ಹಸಿವು ಬಳಲಿಕೆಗಳನ್ನು ಹೋಗಲಾಡಿಸಿ, ಸವಿಯಲು ನರುದಂಬಲವಿತ್ತು, ಸುಖಸಲ್ಲಾಪಕ್ಕೆ ಆರಂಭಿಸುತ್ತಾಳೆ. ವರ್ಷಾಕಾಲದ ಜಡಿಮಳೆಯಿಂದ ಆಕೆಗೆ ಬೇಸರ ಹುಟ್ಟಿಹೋಗಿದೆ. ಯಾವುದಾದರೊಂದು ಕಥೆಯನ್ನು ಹೇಳೆಂದು ಕೇಳುತ್ತಾಳೆ. ಅದು ನವರಸಭರಿತವಾಗಿರಬೇಕಂತೆ ! ರಾಮಾಯಣದಲ್ಲಿ ಸೀತಾಸ್ವಯಂವರ ಭಾಗವನ್ನು ಆಗಲೇ ಕೇಳಿದ್ದಾಳೆ. ಸೀತಾಪಹರಣದ ಕಥೆ ಹೇಳಬೇಕೆಂದರೆ 'ಉಹುಃ ಆನೊಲ್ಲೆಂ' ಎನ್ನುತ್ತಾಳೆ. ಆಕೆ ರಾಮಾಶ್ವಮೇಧವನ್ನು ಇನ್ನೂ ಕೇಳಿಲ್ಲ. 'ಪದ್ಯಂ ವಧ್ಯಂ, ಗದ್ಯಂ, ಹೃದ್ಯಂ, ಹೃದ್ಯಮಪ್ಪ ಗದ್ಯದೊಳೆ ಪೇಳ್ವುದೆಂದು' ಕೇಳಿಕೊಳ್ಳುತ್ತಾಳೆ.

ಮುದ್ದಣ – ಅದಂತಿರ್ಕೆ. ಇಂತಪ್ಪ ನಲ್ಗತೆಯಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಗಡಗಮಂ ಪೊನ್ನ ಕಂಠಿಕೆಯಂ ಮೆಚ್ಚನೀವರ್, ನೀನೀವುದೇಂ ?

ಮನೋರಮೆ – ಎನ್ನನೆ ನಾನೀವೆಂ.

ಮುದ್ದಣ – ಬಲ್ಲಿದಸುಗಾರ್ತಿಯೈಸೆ. ಅರಿಯೆಯಾ ಮುನ್ನವೆಂ ನಿನ್ನ ತಾಯ್ತಂದೆವಿರ್ ಎನಗಿತ್ತರೆಂಬುದಂ ?

ಮನೋರಮೆ – ಇದೇತರ ನುಡಿ. ಪೋಕೆ. ಆಂ ಪರಾಧೀನೆ ಗಡ ! ಪುರಾಣಮನೋದಿದಂ ಬಳಿಯಲ್ತೆ ದಕ್ಷಿಣೆಯ ನೀವುದು ? ಅರಮನೆಯವರುಂ ಕಬ್ಬಮಂ ಕಂಡಲ್ತೆ ಕಚ್ಚುಳಿಯ ನಿತ್ತರ್. ಆನುಂ ಕಥೆಯಂ ಕೇಳ್ದು ಬಲ್ಲಂತೆ ಸಮ್ಮಾನಿಸುವೆಂ.

ಮುದ್ದಣ – ಒಳ್ಳಿತೊಳ್ಳಿತು. ಕತೆಯನಾಲಿಸಿ ಲಾಲಿಸಿ ಬಳಿಕ್ಕಮೀಯೆನೆಂದೊಡೆ ಬಿಡೆಂ. ನೋಳ್ಪೆಂ.

ಮನೋರಮೆ – ಆನುಂ ನೋಳ್ಪೆಂ ಕತೆಯ ಪುರುಳೆಂತಿರ್ಕುಮೆಂದು.

ಮುದ್ದಣ – ಆದೊಡಾಲಿಸು. ಸ್ವಸ್ತಿ ಶ್ರೀಮತ್ ಸುರಾ ಸುರೇಂದ್ರ ನರೇಂದ್ರ ಮುನೀಂದ್ರ ಫಣೀಂದ್ರ ಮಣಿಮಕುಟ ತಟಘಟಿತ ......

ಮನೋರಮೆ ಈ 'ಸಕ್ಕದದ ಚಲ್ವ'ನ್ನು ತಡೆಯದಿದ್ದರೆ ಮತ್ತೊಂದು 'ಅಂಭಃ ಕುಂಭೀನ ಕುಂಭೀನಸಮಕರ ಮಹಾ ಕೂರ್ಮಕೀರ್ಣೋರ್ಮಿಮಾಲಾ' ವೃತವಾದ ಗಂಟಲಲ್ಲಿಳಿಯದ ಪ್ರೌಢಕಾವ್ಯವೊಂದು ಸೃಷ್ಟಿಯಾಗುತ್ತಿತ್ತೋ ಏನೋ ! ಪುಣ್ಯಕ್ಕೆ ಆಕೆ ಅದನ್ನು ಅಷ್ಟಕ್ಕೇ ತಡೆದು 'ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದೆ ಪೇಳ್ವುದು' ಎಂದು ವಿಧಿಸುತ್ತಾಳೆ. ಸಂಸ್ಕೃತಪದ ಪ್ರಯೋಗ ಕನ್ನಡಕಾವ್ಯದಲ್ಲಿ ಅನಿವಾರ್ಯವಾಗಿರುವುದಾದರೂ ಅತಿಯಾಗಿ ಸಂಸ್ಕೃತವನ್ನು ಬೆರೆಸುವ ವಿಚಾರದಲ್ಲಿ ಒಂದು ಬಗೆಯ ವಿರೋಧಭಾವ ಬಹುಕಾಲದಿಂದ ನಮ್ಮ ಜನರಲ್ಲಿ ನೆಲಸಿರುವುದು ನಮಗೆ ಕಂಡುಬರುತ್ತದೆ. ಸಂಸ್ಕೃತವನ್ನು ಅತಿಯಾಗಿ ಬೆರೆಸುವುದನ್ನು ಪ್ರತಿಭಟಿಸಿಯೇ 'ಮುತ್ತಂ ಮೆಳಸಂ ಕೋದಂತಿರೆ', 'ಬೆರಸಲ್ತಕ್ಕುದೇ ಘೃತಮುಮಂ ತೈಲಮುಮಂ' ಇತ್ಯಾದಿ ಸೂಕ್ತಿಗಳು ಹುಟ್ಟಿಕೊಂಡವು. ಮುದ್ದಣಕವಿ ಸೌವರ್ಣಮಧ್ಯಗಾಮಿ. 'ಸಕ್ಕದಮೊಂದೆ ರನ್ನ ವಣಿಯಂ ಪೊನ್ನಿಂ ಬಿಗಿದಂತೆಸೆಗುಂ; ಅದರಿಂ ಕರ್ಮಣಿ ಸರದೊಳ್ ಚಂಬವಳಮಂ ಕೋದಂತಿರೆ, ರಸಮೊಸರೆ, ಲಕ್ಕಣಂ ಮಿಕ್ಕಿರೆ, ಎಡೆಎಡೆಯೊಳ್ ಸಕ್ಕದದ ನಲ್ನುಡಿ ಮೆರೆಯೆ, ತಿರುಳ್ಗನ್ನಡದೊಳ್ ಕತೆಯನುಸಿರ್ವೆಂ' ಎಂದು ಮಾತುಕೊಟ್ಟು ಕಾವ್ಯವನ್ನು ಆರಂಭಿಸುತ್ತಾನೆ.

ಮುದ್ದಣ ಮನೋರಮೆಯರು ಕಾವ್ಯದ ಮಧ್ಯದಲ್ಲೆಲ್ಲಾ ಹಾಸುಹೊಕ್ಕಾಗಿ ಸೇರಿಹೋಗಿದ್ದಾರೆ. ಆ ನವದಂಪತಿಗಳ ಚಲ್ಲಾಟ ಕಾವ್ಯವನ್ನು ರಸಮಯವಾಗಿ ಮಾಡಿದೆ. ಮುದ್ದಣ ತನ್ನ ಮಡದಿಯನ್ನು ಎಷ್ಟೆಷ್ಟು ವಿಧವಾದ ಹೆಸರುಗಳಿಂದ ಕರೆದರೂ ಆತನಿಗೆ ತೃಪ್ತಿಯಿಲ್ಲ. ಪ್ರಾಣೇಶ್ವರಿ, ಮೋಹನಾಂಗಿ, ಸುಂದರಿ, ಎನ್ನರಸಿ, ಕಾಂತೆ, ಕಮಲನೇತ್ರೆ – ಇತ್ಯಾದಿ ಸರ್ವ ಸಾಮಾನ್ಯವಾದ ಮೋಹದ ಮಾತುಗಳಿರಲಿ; ನಿಚ್ಚನಿಡು ಗುಂಕುಮದ ಬಿಂಕದ ಮೆಚ್ಚುಗಾರ್ತಿ, ಇಚ್ಚೆಗಾರನ ಬೆಚಪಚ್ಚೆಯ ಕೈಗನ್ನಡಿ, ಮೀಂ ಮಚ್ಚಲಚ್ಚಣದ ಸಿರಿಗೈಯೆ, ಎನ್ನ ನಿಚ್ಚದ ಪೂಜೆಯ ಕಟ್ಟಚ್ಚಿನ ಪ್ರಾಣಲಿಂಗಮೆ, ಎನ್ನ ಕೈಮರ್ಚಿನ ಗೆಡೆಯಾಟದ ಮುತ್ತಿನ ಸೆಂಡೆ, ಎನ್ನರೆವೊಡಲ ಮುದ್ದುಮೊಗದ ಶೃಂಗಾರಿ, ಎನ್ನತ್ತೆಯ ಮಗಳೆ ಮುತ್ತಿನ ಸೆಂಡೆ, ಕಾಮಮದಾಂಧ ಸಿಂಧುರ ಬಂಧುರಯಾನೆ – ಇತ್ಯಾದಿ ನೂರಾರು ಹೆಸರುಗಳಿಂದ ಅವಳನ್ನು ಸಂಬೋಧಿಸಿ ಸಂತೋಷಗೊಳಿಸುತ್ತಾನೆ, ಸಂತೋಷಗೊಳ್ಳುತ್ತಾನೆ. ಆ ಗರತಿ ಹತ್ತುಸಲಕ್ಕೊಂದು ಸಲ ರಮಣ, ಮೋಹನಾಂಗ – ಎಂಬ ಒಂದೊಂದು ನುಡಿಗಳಿಂದ ತನ್ನ ಆಣ್ಮನನ್ನು ಕರೆದು ತನ್ನ ಸ್ತ್ರೀಸಹಜತೆಯನ್ನು ಬೀರುತ್ತಾಳೆ. ಒಮ್ಮೊಮ್ಮೆ ಆತನ ಬಣ್ಣನೆಯನ್ನು ಕೇಳಿ 'ಬರಿವರಿದೆ ಬಣ್ಣಿಸಿ ಬಣ್ಣಿಸಿ, ಕರೆಕರೆದು ಕರಕರಿಸದಿರ್; ಎನಗೆ ತಲೆನೋವುದು' ಎಂದು ಪುಸಿಮುನಿಸನ್ನು ತೋರುವುದೂ ಉಂಟು.

ಅಥವಾ ಅದನ್ನು ಒಂದು ಸರಸವಾದ ಸಂಭಾಷಣೆಗೆ ದಾರಿಮಾಡಿಕೊಳ್ಳಬಹುದು. ಒಮ್ಮೆ ಕಥೆ ಹೇಳುತ್ತಾ ಹೇಳುತ್ತಾ ಹೆಂಡತಿಯನ್ನು 'ದೇವಿ' ಎಂದು ಸಂಬೋಧಿಸುತ್ತಾನೆ, ಮುದ್ದಣ.

ಮನೋರಮೆ – ಆವ ದೇವಿ ? ಏಂ ಶ್ರೀದೇವಿ ಭೂದೇವಿ ?

ಮುದ್ದಣ – ರತಿದೇವಿ.

ಮನೋರಮೆ – ಅಂತಪ್ಪೊಡೆ ನೀಂ ಕಾಮದೇವಂ.

ಮುದ್ದಣ – ಅಕ್ಕೆ ದೇವಿಯೊಂದು ಹಸಾದಂ.

ಮನೋರಮೆ – ಎಲೆ ಮದನಮೋಹನರಾಜ ! ಅಂತಪ್ಪೊಡೆ ನೀಂ ಪೇಳ್ದ ರತಿಯನೆ ಬಣ್ಣಿಸಿ ಪೊಗಳ್ ನೋಳ್ಪೆಂ.

ಮುದ್ದಣ – ಓ ಏತರ ಮಾತೊ ಎನ್ನಳವೆ ?

ಮನೋರಮೆ – ಆಃ ರತಿಯಂ ಬಣ್ಣಿಸಲ್ಕೆ ಸಲ್ಲದ ನೀನೇತರ ಕಾಮದೇವಂ ?

ಮುದ್ದಣ – ಅಂತಪ್ಪೊಡೆ ಸಲ್ವೆಂ ಸಲ್ವೆಂ. ಕಾಮದೇವನೆಂಬೊಂದು ಬಿರುದಂ ಪಡೆದುಮಾರೆನೆ ? ತೆಗಳದಿರ್ ಇರ್ಕೆ. ಇದೆ ಇದೆ ತೊಡಂಗಿದೆಂ. ಅಸಿಯೊಡಲ ಪೂಗಣ್ಣ ಪೆಣ್; ಸಸಿಮೊಗದ ಕಿಸುವಾಯ ಪುಸಿನಡುವಿನರಸಿ. ಮಿಡಿಮೊಲೆಯ ಪಿಡಿನಡೆಯ, ಬಿಡುಜಡೆಯ ನೀರೆ; ಬೆಟ್ಟುದಿ ....

ಮನೋರಮೆಗೆ ಈ ಮಾತುಗಳಲ್ಲಿ ಅಡಗಿರುವ ದ್ವಂದ್ವಾರ್ಥ ಅರ್ಥವಾಯ್ತು ಅವನನ್ನು ಮುಂದಕ್ಕೆ ಹೇಳಲು ಬಿಡದೆ,

ಮನೋರಮೆ – (ಅರೆ ನೋಟದಿಂ) ಆಃ ಕಬ್ಬಿಗರ್ಗೆ ನೀಂ ಕಲ್ಲಾಯ್ತುವಕ್ಕುಂ. ಎಂದುಂ ಕಾಣದರೊಂದು ಪಾಂಗಿನಿಂ ಪೇಳ್ದ ಪೊಚ್ಚರದ ನಿನ್ನೀ ಬಣ್ಣನೆಯ ನುಡಿಗೇನೆಂಬೆನೊ ! ಒಡಲಸಿದೇಂ ? ಮೊಗದೊಳೇತರ ಸಸಿ ? ಕಣ್ಣೊಳೇತರ ಪೂ ? ನಡುವಿನೊಳೇಂ ಪುಸಿ ? ಎಂದು ಬಾಯಂ ಕಿಸಿದಳ್ ? ಜಡೆಯಂ ಬಿದಿರ್ಚಲ್ಕೇಂ ದೆವ್ವಮಾಳ್ದುದೇ ? ಪೋ, ನೀಂ ಕಾಮನಲ್ತು, ಭೀಮಂ.

ಎಂದು ಛೀಮಾರಿ ಹಾಕಿದಳು. ಮುದ್ದಣ ತನ್ನ ಬೇಳೇಕಾಳು ಬೇಯದುದನ್ನು ಕಂಡು, ಮಾತಿನ ಓಟವನ್ನು ಬದಲಾಯಿಸಿ, ಸರಸ್ವತಿಯನ್ನು ಸ್ತೋತ್ರಮಾಡಿ ಆಕೆಯಿಂದ ವರವನ್ನು ಪಡೆದು ತನ್ನ ಹೆಂಡತಿಯನ್ನು ರತಿಗೆ ನೂರ್ಮಡಿಯಾಗಿ ವರ್ಣಿಸುವೆನೆಂದು ಹೇಳಿ ಸ್ತೋತ್ರ ಮಾಡುತ್ತಾನೆ. ಕವಿಗೆ ತಾನು ಕಟ್ಟುತ್ತಿರುವ ಆಟಕ್ಕೆ ತನಗೇ ನಗು. ಸರಸ್ವತಿಯ ಸ್ತೋತ್ರ ಮಾಡುತ್ತಾ ಗಟ್ಟಿಯಾಗಿ ನಗುತ್ತಾನೆ. ಎಷ್ಟು ಪ್ರಯತ್ನಪಟ್ಟರೂ ಮನೋರಮೆಯ ಎರಳೆಗಣ್ಣಿನಿಂದ ಇದನ್ನು ಮುಚ್ಚಿಡಲಾಗಲಿಲ್ಲ. ಅವಳು ಕೇಳಿಯೇ ಬಿಟ್ಟಳು.

ಮನೋರಮೆ – ನೀಂ ಗೆಯ್ದ ಸರಸತಿಯ ಪೊಗಳ್ಕೆಯ ತುತ್ತತುದಿಯ ಆ ! ಆ ! ಏಂ ?

ಮುದ್ದಣ – ಅಂತದು ಪಾಡಿನ ಜೋಡಿನ ದಾಟಿಯ್ಯೆಸೆ !

ಮನೋರಮೆ ಏನು ಕೇವಲ ಮೊದ್ದು ಹುಡುಗಿಯೆ ? 'ಆಯ್ತಾಯ್ತು ಚೆಲ್ವ, ಏಂ ನಿನ್ನ ಸರಿಸತಿಯೊಲ್ದಳ್ ?' ಎಂದು ಕೇಳಿದಳು. ಮುದ್ದಣ ಎಷ್ಟೋ ಕಷ್ಟಪಟ್ಟು ಅವಳನ್ನು ಒಲಿಸಿಕೊಂಡುದಾಗಿ ಹೇಳಿ ರತಿಯ ವರ್ಣನೆಗೆ ಪ್ರಾರಂಭಿಸುತ್ತಾನೆ. 'ಮಾಕಾಳಿಯ ಮೆಯ್ವೊಗರ್ಗೆ .......' ಎಂದು ಬಾಯ್ಬಿಡುತ್ತಿದ್ದಂತೆಯೇ ಮನೋರಮೆ ಅವನನ್ನು ತಡೆಗಟ್ಟಿ 'ನಿನ್ನ ರತಿಯಂ ಬಣ್ಣಿಪೊಂದು ಸಂಧಿಯೊಳ್ ಮಾಕಾಳಿಯೊಳೇಂ ಕಜ್ಜಂ ?' ಎಂದು ಕೇಳುತ್ತಾಳೆ. ಅದಕ್ಕೆ ಉತ್ತರ ಕೊಡಲು ತೋಚದೆ ಎಡಗೇಡಿ (ವಿಘ್ನೇಶ್ವರ)ಯನ್ನು ಮರೆತುದರಿಂದ ಮೊತ್ತಮೊದಲಿನಲ್ಲೇ ವಿಘ್ನ ಬಂದಿತೆಂದು ಹೇಳಿಕೊಂಡು, ಆತನನ್ನು ಸ್ತೋತ್ರ ಮಾಡುತ್ತಾ, ತಾನು ಮಾಡಲಿರುವ ರತಿಯ ವರ್ಣನೆಗೆ ವಿಘ್ನ ಬರದಿದ್ದರೆ 'ಆ ಬಣ್ಣನೆಯ ಪೊಗಳ್ಕೆಯ ಪಾಡಿಂಗೊಲ್ವೆನ್ನೀ ಮಡದಿ, ಕೂರ್ಮೆಯಿನೆನಗೆ ತಿನವಡಿಸುವಾ ಪಸುಗೆಯ ಚಕ್ಕುಲಿಯಂ, ಗಾರಿಗೆಯಂ, ಪುರಿಗಡಲೆಯಂ, ಅವಲಂ, ಕರ್ಬಂ, ತೇಂಗಾಯಂ, ನಿನಗಂ ಪಾಲಿತ್ತು ಮೊದಲೊಳರ್ಪಿಸುವೆಂ' ಎಂದು ಹರಸಿಕೊಳ್ಳುತ್ತಾನೆ. ಇವನು ಮಾಡುತ್ತಿರುವ ಅಟಾಟೋಪವನ್ನೆಲ್ಲಾ ಕಂಡು ಮನೋರಮೆಗೆ ಮತ್ತಷ್ಟು ಕೀಟಲೆ ಮಾಡಬೇಕೆನ್ನಿಸಿತು.

ಮನೋರಮೆ – ನಿನ್ನ ಬೆಸಕಂ ಒರ್ಪನೆವಾಯೊಳೆಂತುಣ್ಗುಂ ?

ಮುದ್ದಣ – ಏಂ ರಮಣಿ ! ದೇವರುಣ್ಬರೆ ? ಉಣ್ಬೊಡಂ ತೆಂಬೆನೆ ?

ಮನೋರಮೆ – ಮೇಣೊರ್ವನೆ ತಿನಲ್ ಬಗೆವಾ ?

ಮುದ್ದಣ – ನೀನೀವುದೇರ ದಿಟಂ – ತಾನು ಮಾಡಲಿರುವ ವರ್ಣನೆಗೆ ಮನೆಯಲ್ಲಿ ಏಕಾದಶಿ ಎಲ್ಲಿ ಆಗುವುದೋ ಎಂಬ ಅಳುಕು ಅವನಿಗೆ ! ಮನೋರಮೆಗೂ ಸ್ವಲ್ಪ ಮಟ್ಟಿಗೆ ಗೊತ್ತು ಅವನ ಸ್ವಭಾವ. ಆದುದರಿಂದಲೇ ತಿಂಡಿಯನ್ನು ಕೊಡುವೆನೆಂದು ನಂಬುಗೆಯೀಯದೆ 'ಎತ್ತಾನುಮಿತ್ತೊಡೇಂ ಗೆಯ್ವಯ್' ಎಂದು ಕೇಳುತ್ತಾಳೆ.

ಮುದ್ದಣ – ಇಸ್ಸಿ. ಅನಿತ್ತು ಭಕ್ಷ್ಯಮನೊರ್ವನೆ ಸುಂಗಲಾಂ ರಾವೆ ? ಚಕ್ಕುಲಿ ಗಾರಿಗೆಗಳ್ ಕಾಮದೇವಂಗೆ; ಅವಲುಂ ಪುರಿಗಡಲೆಯುಂ ಮುದ್ದಣಂಗೆ; ಕಬ್ಬು ಕಬ್ಬಿಗಂಗೆ; ತೇಂಗಾಯೆನಗ್ಯೆಸೆ.

ಎಲ್ಲವನ್ನೂ ತಾನೇ ತಿನ್ನಲು ಬಗೆಯುತ್ತಿರುವುದನ್ನು ಕಂಡು

ಮನೋರಮೆ – ನೀಂ ಜಾಣಂ. ನೆನ್ನ ರತಿದೇವಿಗೇಂ ?

ಮುದ್ದಣ – ತಾನೆ ಒಲ್ದೀವ ದೇವಿಗಾವುದರೊಳಾಸೆಯೊ !

ಮನೋರಮೆ – ಅಂತಿರೆಯುಂ ಮನೋರಮೆಗೇಂ ?

ಮುದ್ದಣ – ಓವೋ ! ರತಿಯಂ ಬಣ್ಣಿಪೊಂದು ಬೆಸನಡೊಳ್ ಮನೋರಮೆಯಂ ಮರೆದುಳಿದೆಂ. ಅಕ್ಕೆ ಕಜ್ಜನಸಿವುರುಂ ಮುಗ್ಗಿದ ಗಾರಿಗೆವುಡಿಯುಂ ಮನೋರಮೆಗಿರ್ಕೆ.

ಮನೋರಮೆ – ನೀಂ ಬಲ್ಗಡಸುಗಾರಂ, ಸಾಜಂ. ಇರ್ಕೆ ನೀಂ ಮನದೊಳೆ ಮಂಡಿಗೆಯನುಂಡಂತಾಯ್ತು. ಈಗಳಿಂ ಕೇಳ್ವೆಂ, ರತಿಯ ಪೊಸಬಣ್ಣನೆಯಂ.

ಮುದ್ದಣ ರತಿವರ್ಣನೆಗೆ ಆರಂಭ ಮಾಡಿದ. ಈ ಬಾರಿ ಮನೋರಮೆಗೆ ಅರ್ಥವಾಗದಂತೆ ಕ್ಲಿಷ್ಟಪದಗಳಲ್ಲಿ ತನ್ನ ಶ್ಲೇಷಾರ್ಥವನ್ನು ಹುದುಗಿಸಿಟ್ಟ. ಇದರಿಂದ ಪ್ರತಿಯೊಂದು ಬಾರಿಯೂ ಅವಳು ಆ ಮಾತುಗಳ ಅರ್ಥವನ್ನು ಕೇಳಬೇಕಾಯಿತು.

ಮುದ್ದಣ – ಆಂ ಬಣ್ಣಿಪ ರತಿಗೆ ಮಿಂದ ಮರಗೂಳನೊಂದು ಮೆಪ್ಪೊಗರ್. [ಅಗ್ನಿಗೆ ಅಭಿಷೇಕ ಮಾಡಿದಂತೆ ನಿನ್ನ ಮೈ ಬಣ್ಣ !]

ಮನೋರಮೆ – ಮರಗೂಳನೆಂದೊಡಾರ್ ?

ಮುದ್ದಣ – ದೆಸೆವಳರೊಳೊರ್ವಂ – ಹೇಳುತ್ತಿರುವುದು ನಿಜವಾದರೂ ಅವಳಿಗೆ ತಕ್ಷಣ ಸ್ಫುರಿಸುವಂತಿಲ್ಲ.

ಮನೋರಮೆ – ಉಂ ! ಹುಂ !

ಮುದ್ದಣ – ಸಿಂಗರದ ಮಲೆನಾಡಿಗನೆಂದೊಡಾವಂ ?

ಮುದ್ದಣ – ಮಲೆಯೊಳೆ ನೆಲೆಗೊಂಡಿರ್ಪ ನಾಲ್ಗೈಯ ದೇವರ್.

ತನ್ನನ್ನು ಮಂಗನ ಮೂತಿಯವಳೆಂದು ಕರೆದುದು ಅರ್ಥವಾಗುವುದಿಲ್ಲ ಪಾಪ ! ಮಲೆನಾಡ ಹೆಣ್ಣಾದ ಮನೋರಮೆಗೆ ತಮ್ಮ ನಾಡವರು ಬಹುರೂಪವತಿಯರೆಂದು ಹೆಮ್ಮೆ.

ಮನೋರಮೆ – ಇಂತಪ್ಪ ದೇವರೊಲ್ಮೆವಡೆದ ಮಲೆನಾಡ ಪೆಣ್ಗಳ್ ಕಣ್ಗೆ ಚಲ್ವೆಯರಾದರಕ್ಕುಂ.

ಮುದ್ದಣ – ಅಪ್ಪುದು. ಮತ್ತಮಾ ನೀರೆಗೆ ಇರುಳ್ಗಣ್ಣಗೆಂ ತಂತೊಪ್ಪುವ ಬಟ್ಟ ನುಣ್ಗಣ್. (ಪಾಪ ಮನೋರಮೆಗೆ ಗೂಬೆ ಕಣ್ಣಂತೆ ! ಅವಳಿಗೆ ಅರ್ಥವಾಗಬೇಕಿತ್ತು!)

ಮನೋರಮೆ – ಇರುಳ್ಗಣ್ಣನೆಂದೊಡೆ ಆವ ಸೈಪುಳ್ಳಂ ?

ಮುದ್ದಣ – ಇರುಳ್ಗಣ್ಣನೆಂದು ಚಂದವನಕ್ಕುಂ.

ಮನೋರಮೆ ಮೆಚ್ಚಿ "ನೀಂ ಬಣ್ಣನೆಯೊಳೆರಡನೆಯ ಬೊಮ್ಮಂ ನಿಕ್ಕುವಂ. ಎನ್ನೀ ಜೋಲ್ಮುಡಿಯುಂ ಪೊಸರದಾಣೆ ! ನಿನಗಾವ ಭಕ್ಷ್ಯದೊಳಿಷ್ಟಂ ? ಪೂರಣಗಡುಬನೀವೆನೋ ! ಚಕ್ಕುಲಿಯಂ ?" ಎಂದು ಕೇಳುತ್ತಾಳೆ.

ಮನೋರಮೆಯು ಸೂಕ್ಷ್ಮಮತಿಯಾದರೂ ಋಜುಬುದ್ಧಿಯುಳ್ಳವಳು. ಅನೇಕ ವೇಳೆ ಗಂಡನ ಕವಡು ಕೊಂಕುನುಡಿಗಳನ್ನು ಸತ್ಯವೆಂದೇ ಭ್ರಮಿಸಿ ಮೋಸ

ಹೋಗುತ್ತಾಳೆ. ರಾಮನ ಯಜ್ಞಾಶ್ವವು ಅಲ್ಲಲ್ಲಿ ತಿರುಗುತ್ತಾ ಆರಣ್ಯಕಋಷಿಯ ಆಶ್ರಮಕ್ಕೆ ಬಂದಿತು. ಆತನು ಶತ್ರುಘ್ನನಿಗೂ ಆತನ ಸೈನ್ಯಕ್ಕೂ ಬೇಕಾದಷ್ಟು ಉಪಚಾರ ಮಾಡಿದ. ಇದನ್ನು ಕೇಳಿ ಮನೋರಮೆಗೆ ಅತ್ಯಾಶ್ಚರ್ಯವಾಯಿತು. ಉಪಚಾರವೆಂದರೆ ಬರಿಯ ಬಾಯುಪಚಾರವೆ ? ಅಷ್ಟು ಸಹಸ್ರ ಸಹಸ್ರ ಸಂಖ್ಯೆಯ ಸೈನ್ಯಕ್ಕೆಲ್ಲಾ ಕೂಳ್ನೀರಿತ್ತು ಸಮ್ಮಾನಿಸುವುದು ಹೇಗೆ ಸಾಧ್ಯ ? ಎಂದು ತನ್ನ ಮನದನ್ನನಲ್ಲಿ ತನ್ನ ಸಂದೇಹವನ್ನು ಸೂಚಿಸಿದಳು. ಆತನಿಂದ ಅದರ ಗುಟ್ಟು ಗೊತ್ತಾಯಿತು. ಏಕಾಕ್ಷರಿ, ದ್ವ್ಯಕ್ಷರಿ, ತ್ರ್ಯಕ್ಷರಿ – ಇತ್ಯಾದಿ ಮಂತ್ರಗಳ ಬಲದಿಂದ ಅವರು ಏನನ್ನು ಬೇಕಾದರೂ ಸಾಧಿಸಬಲ್ಲರು. ಇದೇ ನೆಪದಿಂದ ತನ್ನ ಗಂಡನನ್ನು ಸ್ವಲ್ಪ ಹಾಸ್ಯ ಮಾಡಬೇಕೆನ್ನಿಸಿತು ಮನೋರಮೆಗೆ.

ಮನೋರಮೆ – ನಿನ್ನನ್ನರಪ್ಪ ಕಬ್ಬಿಗರ್ ಮನೆವಾಳ್ತೆಯೊಳಿನಿಸೊಂದಂ ಗೊಡವೆಗೊಳ್ಳದೆ ಕೆಮ್ಮಕೆಮ್ಮನೆ ಪಾಳ್ಗೆತೆಯ ಕಬ್ಬದೊಳೇವೊಳ್ತುಂ ಬೆಮೆಗೊಂಡಿರ್ಪರಲೇ ! ಅವರ್ಗೇಂ ಬಟ್ಟೆಂಬೊ ! ಉಣಲೇಂ ತಿನಲೇಂ ? ಅಂತಿರೊಂದು ಜಪಮಂ ಪಿರಿಯದವಸಿಗಳತ್ತಣಿನುಪದೇಶಂಗೊಂಡಡಾಗದೆ ?

ಮುದ್ದಣ – (ಮುಗುಳ್ನಗೆಯಿಂ) ... ನಾಡಂ ಕಾಡಂ, ಕಾಡಂ ಬೀಡಂಗೆಯ್ವೊಂದು ಪೆರ್ಮೆಯ ಬಲ್ಮೆಯ ಕಬ್ಬಿಗರೇಂ ಮುದುದವಸಿಗಳತ್ತಣಿಂ ಪಿರಿಯರಾಗರೆ ? ... ಸಿಂಗರದ ಬಣ್ಣಗಬ್ಬಿಗರೆಮ್ಮ ತೆರನಿನ್ನುಂ ನೀನರಿಯಯ್.

ಮನೋರಮೆ – (ಬಿಸವಂದಂಗೊಂಡು) ನಿಮ್ಮವರ್ಗಮಂತಿರೆ ಮಂತ್ರಂ ಸಿದ್ಧಿವರ್ಕುಮೆ ?

ಮುದ್ದಣ – ತಡೆಯೇವಳ್ಕೇಂ ?

ಮನೋರಮೆ – ನಿನ್ನೊಳಮೊಳವೆ ?

ಮುದ್ದಣ – ಎನ್ನೊಳಿಂತಿದು ಪಾಸುವೊಕ್ಕು.

ಮನೋರಮೆ – ಆಃ ನೀನುಂ ಬಲ್ಮೆವೆಗಾರಂ. ನಿನಗಾರತ್ತಣಿನೆಂದುಪದೇಶಮಾಯ್ತು ?

ಮುದ್ದಣ – ಗುರುವತ್ತಣಿಂದೆಳವೆಯೊಳೆ.

ಮನೋರಮೆ – ಅದಾವುದೋ ಮಂತ್ರಮೆನ್ನೊಳುಸಿರ.

ಮುದ್ದಣ – ಆಃ ಒಳ್ಳಿತೊಳ್ಳಿತು. ಮಂತ್ರಂಗಡ ! ತನಗೊರೆವುದು ಗಡ ! ಚೀಃ ! ಚೀಃ ! ಪೆಣ್ಗಳ್ಗೆ ಮಂತ್ರೋಪದೇಶಂ ಸಲ್ಗುಮೆ ?

ಮನೋರಮೆ – ಆನರಿಯೆನೆ ? ನಿನ್ನತ್ತಣಿನುಪದೇಶಂ ಬೇಡುವೆನೆ ? ನೀವಾಗಳೆಂದ ಮಂತ್ರಂಗಳೊಳಾವುದದರ ಪೆಸರೇನೆಂದೆ ಕೇಳ್ವೆಂ.

ಮುದ್ದಣ – ಆಗಳೆಂದ ಮುನಿಗಳ ಮಂತ್ರಂಗಳೊಳಲ್ತು. ಎಮ್ಮ ಮಂತ್ರಗಳ ಬಗೆ ಬೇರೆ. ಮೂರೆರಡಕ್ಕರದ ಮಂತ್ರಂಗಳೆಮಗಕ್ಕುಮೆ ? ಎಮ್ಮ ತಂತು ಕಿರಿದಲ್ತು ಬಲ್ಪಿರಿದು. ಒಂದಕ್ಕರ ಮಲ್ತು, ಎರಡಲ್ತು, ಮೂರಲ್ತು, ನಾಲ್ಕೈದಲ್ತು, ಆರುಮಲ್ತು ! ಏಳಕ್ಕರದ ಬೀಜಮಂತ್ರಂ. ಸರ್ವ ಮಂತ್ರಗಳ್ಗೆ ತಲೆಯೊಳಿರ್ದು ಮೇಲೆನಿಪ್ಪ ಸಪ್ತಾಕ್ಷರೀ ಮಂತ್ರಮೆಂದು ಪೆಸರ್.

ಮನೋರಮೆ – ಹಾ ! ಹಾ ! ಆ ಮಂತ್ರಕ್ಕಭಿಮಾನದೇವತೆ ಯಾವುದು ? ಮುನ್ನ ಮಾರಿದಂ ಜಪಿಸಿ ಸಿದ್ಧಿಗಂಡರ್ ?

ಮುದ್ದಣ – ಪೋ ! ಪೋ ! ಇಂತಿವರಂ ಕೊಂಡೇಂ ಕಜ್ಜಂ.

ಮನೋರಮೆ – ಇರ್ಕೆ, ಕೇಳ್ವೆಂ.

ಮುದ್ದಣ – ಅಂತಾದೊಡೆ ಕೇಳ್ ಪೇಳ್ವೆಂ. ಇಂತೇರ್ಪಟ್ಟ ಮಂತ್ರದಧಿದೇವತೆ ಜ್ಯೇಷ್ಠೆ. ಮುನ್ನಮೀಶ್ವರಂ ತನ್ನೊಂದು ಲೀಲೆಯೊಳ್ ಜಪಿಸಿ ಸಿದ್ಧಿಗೊಂಡನದರಿಂ ಆತನೆ ಋಷಿ.

ಈ ಹಿರಿಯ ಮಂತ್ರದ ಮೂಲವನ್ನರಿಯಬೇಕೆಂದು ಮನೋರಮೆಗೆ ಕುತೂಹಲ ಕೆರಳಿತು. ಆದರೆ ಅದನ್ನು ಮುದ್ದಣ ಸ್ವಲ್ಪಕ್ಕೆ ಹೇಳಿಯಾನೆ ? ಅವಳನ್ನು ಚಿಟುಗುಮುಳ್ಳಾಡಿಸುತ್ತಾನೆ. 'ಕೇಳ್ವುದರ್ಕೆ ಪೇಳ್ವುದರ್ಕೆ ನಿಮಗಧಿಕಾರಮಿರದು. ಕಣ್ಗೆ ಕಾಲ್ಗೆ ಕೇಡು' ಎಂದು ಹೆದರಿಸುತ್ತಾನೆ. ಆದರೆ ಮನೋರಮೆ ಹಿಡಿದ ಪಟ್ಟು ಬಿಡುವುದಿಲ್ಲ. ಮುದ್ದಣ ಏನೋ ಪ್ರಪಂಚ ಪ್ರಳಯವಾದಂತೆ ನಟಿಸುತ್ತಾ 'ಚೀಃ ಎಳವೆಂಡಿರ ಕೈಯೊಳಿಪ್ಪ ಕಬ್ಬಿಗರ ಬಾಳ್ಕೆಯೆ ದೂಷ್ಯಂ' ಎಂದು ಕೊರಚಾಡಿ ಅವಳಿಂದ ಯಾರಲ್ಲಿಯೂ ಉಸಿರುವುದಿಲ್ಲವೆಂದು ನಂಬುಗೆಯನ್ನು ಪಡೆದು ಅನಂತರ ಲುಬ್ಧನು ಹಣ ಬಿಚ್ಚಿದಂತೆ ಒಂದೊಂದೇ ಅಕ್ಷರಗಳಲ್ಲಿ ಮಂತ್ರವನ್ನು ಹೇಳುತ್ತಾನೆ.

ಮುದ್ದಣ – ಅಂತಾದೊಡಿಂತಿದು ಕೇಳ್ 'ಭ ... ವ ... ಪೆರರೊಳಾಡೆನೆಂಬ ನಂಬುಗೈಯ್ಯಂ ಪೊಯ್.

ಮನೋರಮೆ – ಇದೆ ಪಿಡಿ ನಂಬುಗೆಯ್ಯಂ. ನಿನ್ನಾಣೆ ಕುಲದೈವದಾಣೆ – ಎಂದುಂ ಪೆರರೊಳೊರೆಯೆಂ.

ಮುದ್ದಣ – ಉಂ ! 'ಭ ... ವ ... ತಿ ... ಭಿ...' ಪೆಣ್ಗಳಂ ನಂಬಲಾಗದೆಂಬರ್ ಬಲ್ಲರ್. ನೀನೆಂತೊ ಮರೆಯೊಳೆ ಪೆರರೊಡನುಸಿರ್ದು ಗುಟ್ಟಂ ಬಿಟ್ಟೊಡೆ ಎಮ್ಮನ್ನರ ಬಾಳ್ ಪಾಳಕ್ಕುಂ.

ಮನೋರಮೆ – ಆನೇಂ ಮೋಡೆಯೇ ! ಪೋ ! ತನ್ನಾಣೆ ! ಕಣ್ಣಾಣೆ ! ಕೇಳ್ವೆಂ.

ಮುದ್ದಣ – (ಎಕ್ಕಟಿಯೋಳ್) 'ಭವತಿ ಭಿಕ್ಷಾಂ ದೇಹಿ' ಎಂಬುದಿದುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತಾಕ್ಷರೀ ಮಂತ್ರಂ, ಆರೊಳಾನುಮುಸಿರದಿರ್.

ಮನೋರಮೆ – (ಅರೆ ಮುನಿಸಿಂ) ಪೊ ! ಮಾಣಲೆ ರಮಣ. ನಿನ್ನ ನುಡಿಯಂ ಸಾಜಂ ನಿಕ್ಕುವಮೆಂದೇ ಬಗೆದೆಂ. ಈ ತೆರನ ಮಾಟದ ಕವಡುನುಡಿಯ ಕೊಂಕೆಂಬುದನರಿಯದಾದೆಂ. ನೀಂ ಕಬ್ಬಿಗನೋ ಸಬ್ಬವಕಾರನೋ ! ನಿನ್ನೀ ಕಬ್ಬದ ಸೊಗಸೆಮ್ಮನ್ನರಪ್ಪ ಜಾಣಿಲಿವೆಣ್ಗಳೆ ಕೊಂಡಾಡುವರಲ್ಲದೆ ಬಲ್ಲರೇನೋಲ್ವರೆ ?

ಮುದ್ದಣನು ಸಂಭಾಷಣೆಯನ್ನು ಅಲ್ಲಿಗೆ ನಿಲ್ಲಿಸಿ ಕಥೆಯನ್ನು ಮುಂದುವರಿಸುತ್ತಾನೆ. ಈ ತಿಳಿಹಾಸ್ಯದ ಹಿಂದೆ ಅಡಗಿರುವ ಸತ್ಯದ ಮಟುಕನ್ನು ಮರೆಯದೆ ಗಮನಿಸಬೇಕು.

ಮನೋರಮೆಗೆ ಸೀತೆಯಲ್ಲಿ ಅಪಾರ ಆತ್ಮೀಯತೆ. ಲಕ್ಷ್ಮಣನು ಸೀತೆಯನ್ನು ಅಡವಿಯಲ್ಲಿ ಬಿಟ್ಟು ಹೋದನೆಂದು ಹೇಳಲು 'ಆಃ ಎನ್ನೊಡೆಯ, ನೀನುಮೆಂತು ಕಲ್ಮನನಾದಯ್, ಒರ್ತಡವೆಯೆ ದೇವಿಯಂ ಕಾರಡವಿಯೊಳುಳಿದು ಲಕ್ಷ್ಮಣಂ ಪೋದನೆಂಬೊಡೆ ?' ಎಂದು ಕಣ್ಣೀರು ಮಿಡಿಯುತ್ತಾಳೆ. ಆಕೆಯು ವಾಲ್ಮೀಕಿ ಋಷಿಗಳ ಆಶ್ರಮವನ್ನು ಸೇರಿದ ಕಥೆಯನ್ನು ಹೇಳುವತನಕ ಯಜ್ಞದ ಕುದುರೆಯ ವಿಚಾರವನ್ನು ಮುಂದುವರಿಸಗೊಡುವುದಿಲ್ಲ. 'ಸುಡುಸುಡು ನಿನ್ನ ಜನ್ನಗುದುರೆಯಂ ! ಆ ಕಥೆಗೀಗಳೆ ಪೊಳ್ತೆ ? ಸೀತೆಯೇನಾದಳ್, ಎಂತಿರ್ದಳೆಂದು ಪೇಳಯ್' ಎಂದು ಅಂಗಲಾಚುತ್ತಾಳೆ. ಅದನ್ನು ವಿವರಿಸಿ, ಕಥೆಯನ್ನು ಮುಂದುವರಿಸಬೇಕೆಂದು ಮುದ್ದಣ 'ಅತ್ತಲ್ ಸಾಕೇತನಗರದೊಳ್ ಸೀತಾರಾಮಂ' ಎಂದು ರಾಗವೆತ್ತುತ್ತಾನೆ. ಸೀತೆಯ ದುರವಸ್ಥೆಯನ್ನು ಕೇಳಿ ರಾಮನ ಮೇಲೆ ಅಸಹ್ಯವಾದ ತಾತ್ಸಾರ ಹುಟ್ಟಿದೆ, ಮನೋರಮೆಗೆ. 'ನಲ್ಲ ! ಏ ಮಾತೊ ! ಸೀತೆಯನಂತುಳಿದುಮೇತರ ಸೀತಾರಾಮಂ ? ಪೋ ಮಾಣ್ ! ಅವಂಗಿನ್ನೆತ್ತಣ ಸೀತೆ ?' ಎನ್ನುತ್ತಾಳೆ. ಮುದ್ದಣ ರಾಮನನ್ನು ವಹಿಸಿಕೊಂಡು ಮಾತನಾಡುವವನಂತೆ 'ರಾಮಂ ಕಲ್ಲೆರ್ದೆಯನೆ ? ಬಳಿಕ್ಕಮಾತನ ಪ್ರಳಾಪಂ ನೀಂ ಕೇಳ್ದುದಿಲ್ಲ' ಎನ್ನುತ್ತಾನೆ. ಮನೋರಮೆ ಹೊಟ್ಟೆಯುರಿಯಿಂದ 'ಏಂ ತಾನೆ ತಲೆವೊಯ್ದು ಮಲುಗಿದನೆ !' ಎನ್ನುತ್ತಾಳೆ. ರಾಮನು ಸೀತೆಯನ್ನು ಏತಕ್ಕಾದರೂ ತ್ಯಾಗ ಮಾಡರಲಿ. 'ಬಡವೆಯೊರ್ವಳ್ ಕಾಡಿಂಗಾದಳ್ಯೆಸೆ.' ರಾಮನು ಗಳಗಳ ಅತ್ತಿದ್ದರೆ 'ಏಂ ತನಗೆ ಪೆರರ್ ಪೆಂಡಿರಿಲ್ಲೆಂದೆಯೆ ?' ಎಂದು ಕೇಳುವಷ್ಟು ಅಳವ ಹೊಟ್ಟೆಯಲ್ಲಿನ ಅಕ್ಕಸ. ಪುನಃ ರಾಮನು ಸೀತೆಯನ್ನು ಸ್ವೀಕರಿಸಿದ ಎಂದು ಹರಸುವಳ. ಮುದ್ದಣ ಹೇಳುವಂತೆ ಆಕೆ ರಾಮನನ್ನು ಹರಸುವ ಹರಕೆ "ಸೊಗಸು, ಬಲ್ಸೊಗಸು'.

ಕವಿಯು ವರ್ಣನೆಯಲ್ಲಿ ಕೇವಲ ಚತುರನೇ ನಿಜ; ಕಾವ್ಯದ ಮಧ್ಯದಲ್ಲಿ ಬರುವ ಮಧುಮಾಸದ ವರ್ಣನೆ, ತೆಂಗಾಳಿಯ ವರ್ಣನೆ – ಇತ್ಯಾದಿಗಳು ಹೃದಯಂಗಮವಾಗಿವೆ. ಆದರೆ ಎಲ್ಲ ವರ್ಣನೆಗಳೂ ಹೃದಯಂಗಮವಾಗಿವೆಯೆಂದು ಹೇಳಲಾಗುವುದಿಲ್ಲ. ಕವಿಯು ವಿಮರ್ಶಕನಾಗಿ ತನ್ನ ಕಾವ್ಯವನ್ನು ಓದಿಕೊಂಡಾಗ

ಆತನಿಗೂ ಅದರ ಅರಿವಾಯಿತೋ ಏನೋ ! ಆದುದರಿಂದ ಅದನ್ನು ಮನೋರಮೆಯ ಬಾಯಲ್ಲಿ ಹೇಳಿಸಿದ್ದಾನೆ. ಕಥೆಯನ್ನು ಕೇಳುತ್ತಾ ಕೇಳುತ್ತಾ ಮನೋರಮೆಗೆ ತೂಕಡಿಕೆ ಬರುತ್ತದೆ. ಆಗ ಮುದ್ದಣನು 'ಸಕಲ ಗುಣಸಂಪನ್ನೆ ! ಏಕ ಗುಣಹೀನೆ !' ಎಂದು ಹೀಯಾಳಿಸುತ್ತಾನೆ. ಆಗ ಮನೋರಮೆಯು 'ತೂಕಡಿಸದೇವೆನೊ ! ಕಿವಿಗಳ್ಗೆ ಪುರುಳಮರದ ಗುರ್ದಿನಾಟದ ಬರುರಗಳೆಯ ನಿಡುಗತೆಗೆ' ಎಂದು ನಿರ್ದಾಕ್ಷಿಣ್ಯವಾಗಿ ಉತ್ತರ ಹೇಳುತ್ತಾಳೆ. ಮುದ್ದಣ ತನ್ನ ಕಂತೆ ಕಟ್ಟಿಟ್ಟು, ಮುಂದೆ ಕಥೆ ಸುಂದರಗೊಳ್ಳುವುದೆಂದು ಭರವಸೆಯಿತ್ತು ಮುಂದುವರಿಯುತ್ತಾನೆ. ಹೀಗೆಯೇ ಮತ್ತೊಮ್ಮೆ ಕಥೆಯ ಮಧ್ಯದಲ್ಲಿ ಆತನನ್ನು ತಡೆದು 'ಎನ್ನರಸ ! ನೀನೋರ್ವ ನಪೂರ್ವಂ ಬಣ್ಣಗಬ್ಬಿಗರ ಬಲ್ಲಹಂ ಗಡ ! ಪೋಪೋಪ ಬಟ್ಟೆಯೊಳ್ ಅಡವಿವೆಟ್ಟುಗಳನೆ ಬಣ್ಣಿಪಯ್. ಅಶ್ವಮೆತ್ತಾನುಂ ನಾಡಂ ಪುಗದೆ ?' ಎಂದು ಕೇಳುತ್ತಾಳೆ. ನಮ್ಮ ಮನಸ್ಸಿನಲ್ಲಿ ಆ ಭಾವ ಮೂಡುವಷ್ಟರಲ್ಲಿ ಅದನ್ನು ಎತ್ತಿ ತೋರಲು ಮನೋರಮೆ ಸಿದ್ಧ. ಕಥೆಯ ಸರಣಿ ಎಲ್ಲಿಯಾದರೂ ದಾರಿತಪ್ಪಿದರೆ ಅದನ್ನು ನಮಗಿಂತಲೂ ಮನೋರಮೆಯೇ ಮೊದಲು ಕಂಡು ಹಿಡಿಯುತ್ತಾಳೆ. 'ಅಡಿ ಮುಡಿಯಿಲ್ಲದ ನಿನ್ನ ಕಥೆಗೆ ಎನಗೆ ತಲೆನೋವುದು' ಎಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತಾಳೆ.

ಕಾವ್ಯ ಆರಂಭವಾಗುವುದು ಮನೋಹರವಾದ ಒಂದು ಸಂಭಾಷಣೆಯಿಂದ. ಕಾವ್ಯ ಮುಗಿಯುವುದೂ ಮನೋಹರವಾದ ಸಂಭಾಷಣೆಯೊಡನೆ. ಕಾವ್ಯದ ಆರಂಭದಲ್ಲಿ ಕಾವ್ಯ ಮೆಚ್ಚಿಗೆಯಾದರೆ ಸಮ್ಮಾನಿಸಬೇಕೆಂದು ನಿಶ್ಚಿತವಾಗಿತ್ತು ತಾನೆ ! ಕಾವ್ಯ ಕೊನೆಯಾದಂದು ಪುನಃ ಅದರ ಪ್ರಸ್ತಾಪ ಬರುತ್ತದೆ. ಸಹೃದಯಳಾದ ಮನೋರಮೆ ಅದರ ವಿಚಾರವನ್ನು ಸಂಪೂರ್ಣವಾಗಿ ಮರೆತು ಕಾವ್ಯದಮೇಲೆ ಮೆಚ್ಚಿಗೆಯನ್ನು ಸೂಚಿಸುತ್ತಾಳೆ. ಮುದ್ದಣ ಒಮ್ಮೆ ಅವಳು ಹಾಗೆ ಹೇಳಿದುದು ಸಾಲದೆಂದು ಹಲವು ಸಲ ಅವಳ ಬಾಯಿಂದ ಆ ಮಾತನ್ನು ಹೊರಡಿಸುತ್ತಾನೆ. ಮನೋರಮೆ ಅರಿಯದೆ ತನ್ನ ಕೈಗಳನ್ನು ತಾನೇ ಸುತ್ತಿಸುತ್ತಿ ಕಟ್ಟುತ್ತಾಳೆ. ಮುದ್ದಣ ಆಕೆಯನ್ನು ಮರುಳುಗೊಳಿಸುತ್ತಿರುವ ಚಾತುರ್ಯವನ್ನು ನೋಡಿ. ಕಥೆಯು ಮುಗಿಯುತ್ತಾ ಬಂದಿತೆಂದು ಅರಿತು ಮನೋರಮೆ,

ಮನೋರಮೆ – ಅಂತಪ್ಪೊಡೆ ನೀಂ ಪೇಳ್ವ ನಲ್ಗತೆ ಮುಗಿಯೆವಂದುದು.

ಮುದ್ದಣ – ಎಂತೆಂತೊ ರಗಳೆಯ ಪಾಳ್ಗತೆ ಕಡೆಗಂಡುದು.

ಮನೋರಮೆ – ಚೀಃ ! ಶ್ರೀರಾಮಪುಣ್ಯಚರಿತಮಂ ಪಾಳ್ಗತೆಯೆಂದು ಇಳಿಕೆಗೆಯ್ದು ತೆಗಳ್ವೆ !

ಮುದ್ದಣ – ಶ್ರೀರಾಮಚರಿತವಂನಿಳಿಸಿ ನುಡಿದೆನಿಲ್ಲಂ. ಪುರುಳಿಲ್ಲದ ಸಲ್ಲದ ಬರುವಣ್ಣನೆಯ ಬೇಸರಿಕೆಯ ಪಾಳ್ಗಬ್ಬಮಂ ಪೊಳ್ಗೆಂದೆ ನುಡಿದೆಂ.

ಮಡದಿ ಹಿಂದೆ ಆಡಿದ್ದ ಮಾತುಗಳನ್ನು ಅವಳ ಮೇಲೆಯೇ ಪ್ರಯೋಗಿಸಿದ, ಮುದ್ದಣ. ಮನೋರಮೆಗೆ ತಾನು ಆಡಿದ್ದ ಮಾತುಗಳ ಅರಿವೇ ಇಲ್ಲ. ಕಾವ್ಯಸೌಂದರ್ಯವನ್ನು ಸವಿದು ಆಕೆ ಮೈಮರೆತು ಮಾತಾಡುತ್ತಿದ್ದಾಳೆ.

ಮನೋರಮೆ – ತಮ್ಮೊಡಮೆಯಂ ತಾಮೆ ಪೊಗಳ್ವರೆ ಬಲ್ಲರ್ ? ಅಲ್ಲದಂದು ನವರಸದ ತನಿರಸಮೊರೆವ ಬಣ್ಣಗಬ್ಬಮಂ ಪೊಳ್ಳೆಂದೊರೆವ ನಿನಗಮೇನಹಂಕೃತಿಯೊ ನಿನ್ನಾ ಜಾಣ್ಮೆಯೊಳ್.

ಮುದ್ದಣ – ಏನೆನ್ನ ಕಬ್ಬಂ ನಿನಗೆ ಮೆಚ್ಚಿಗೆಯಾಯ್ತೆ ?

ಮನೋರಮೆ – ಎನಗೊರ್ವಳ್ಗೆಂದೊಡೇಂ. ನಾಡೊಳೆಲ್ಲರ್ಗಂ.

ಮುದ್ದಣ – (ನಕ್ಕು) ಎನ್ನೊಳೊಂದಭಿಮಾನದಿನಿಂತುಸಿರ್ವಯಕ್ಕುಂ.

ಮನೋರಮೆ – ಎನ್ನ ಮುದ್ದಿನರಸ ! ಅಂತಲ್ತು. ನಿನ್ನ ಪೆಸರೆಂತಂತು ಕಬ್ಬಮುಂ ಮುದ್ದು ಮುದ್ದಾಯ್ತು ಜಗಕೆ.

ಮುದ್ದಣ – ಇಂತೀ ನುಡಿಯಿನೆನ್ನಂ ನೀನೇಳಿಪಂತಿರಿರ್ಕುಂ.

ಮನೋರಮೆ – ಉಃ ! ಉಃ ! ಗುಣದೊಳ್ ಪುರುಡುಂಟೆ ಸಾಜಂ. ನಿನ್ನೀ ಜಾಣ್ಮೆಯ ಬಣ್ಣನೆಯ ನಲ್ಗತೆ ಕೇಳ್ವರನೆಂತಪ್ಪರುಮಂ ಮೇಣುಂ ಕೇಳ್ವೆಂ, ಕೇಳ್ವೆನೆಂಬೊಂದಾಸೆ ಪುಟ್ಟಿಸುಗುಂ.

ಮುದ್ದಣ – ಎನ್ನಾಣೆ !

ಮನೋರಮೆ – ನಿನ್ನಾಣೆ ! ತಡೆಯೇಂ ? ಕಮ್ಮಲರ್ ಮಗ ಮಗಿಸದೇಂ ಪೋಕುಂ ?

ಮುದ್ದಣ – ಮುತ್ತಬ್ಬೆಯಾಣೆ ?

ಮನೋರಮೆ – ಮುತ್ತಬ್ಬೆಯಾಣೆ ! ಇಸ್ಸಿ ! ಪುಸಿಯನೇ ವೊಳ್ತಿಂಗಮುಸಿರೆಂ. ಈ ವಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲಮೆಂದಾಯ್ತು.

ಮುದ್ದಣ – ಎಂತುಂ ನಿನಗೆ ಸೊಗಸಾಯ್ತಲೆ ! ಇದುವೆ ಪರಮಾನಂದಮೆನಗೆ.

ಮನೋರಮೆ – ಬಿನ್ನಣದ ಬಣ್ಣನೆಯ ನುಡಿಯಲ್ತು; ಬಲ್ಸೊಗಸು ಬಲ್ಸೊಗಸು ನೀನೆಂದ ಕತೆ.

ಇಷ್ಟು ದಿಗ್ಬಂಧನಗಳನ್ನು ಮಾಡಿಕೊಂಡು ಮುದ್ದಣ ಹಕ್ಕಿಯನ್ನು ತನ್ನ ಬಲೆಯಲ್ಲಿ ಬೀಳಿಸಿಕೊಳ್ಳುತ್ತಾನೆ. ಈಗ ತನ್ನ ಅಂತರ್ಯವನ್ನು ಹೊರದೋರುತ್ತಾನೆ. 'ಅಂತಪ್ಪೊಡೆ ತಾರೆಲೆ ನೀನೆಂದ ಮೆಚ್ಚಿನುಡುಗೊರೆಯಂ' ಎಂದು ತನಗೆ ಸಲ್ಲಬೇಕಾದುದನ್ನು ಸಲ್ಲಿಸುವಂತೆ ಕೇಳುತ್ತಾನೆ. ಮನೋರಮೆಯು ಮೆಟ್ಟಿ ಬಿದ್ದು ಕೈ ಕೈ ಹಿಚಿಕಿಕೊಳ್ಳುತ್ತಾಳೆ. ಏನು ಮಾಡುವುದಕ್ಕೂ ತೋಚದೆ 'ಕಥೆಗೆ ಮಂಗಳವಾಗಲಿ'

ಎನ್ನುತ್ತಾಳೆ. ಮುದ್ದಣ ಮಂಗಳ ಮಾಡಬೇಕಾದರೆ ಆತನಿಗೆ ಹೋಳಿಗೆ ತುಪ್ಪ ಬೇಕು. ಸಂತೋಷದ ಭರದಲ್ಲಿ ಇನ್ನೆರಡು ಸರಸವಾಕ್ಯಗಳನ್ನಾಡಿ ಮುದ್ದಣ ಕಾವ್ಯಕ್ಕೆ ಮಂಗಳವನ್ನು ಹಾಡುತ್ತಾನೆ. ಆತನು ಹಾಡುತ್ತಿದ್ದಂತೆಯೇ ಮನೋರಮೆ ಎದ್ದು ಹೊರಟು ಹೋಗಲು ಯತ್ನಿಸುತ್ತಾಳೆ. ಆದರೆ 'ಮುದ್ದಣನಂ ಟಕ್ಕಿಪ ಪೆಂಡಿರೊಳರೆ ?' ಕೈ ಹಿಡಿದು ಅವಳನ್ನು ಕೂರಿಸಿ ಉಡುಗರೆ ಕೊಡೆನ್ನುತ್ತಾವೆ. ಉಡುಗರೆಯ ಕಾಟವನ್ನು ತಡೆಯಲಾರದೆ ಮನೋರಮೆ ... ನೀನೇಂ ಬೇಡುವಯ್

ಮುದ್ದಣ – ಬೇಡುವೊಡೇಂ ತಿರುಕನೆ ? ಮನೆಗೆ ಬಂದೆನೆ ? ಮೆಚ್ಚಿತ್ತೊಡದನೆ ಕೆಯ್ಕೊಳ್ವೆಂ.

ಮನೋರಮೆ – ಆನೆಂತುಂ ಪರಾಧೀನೆ. ಮೇಣೆನಗೊಡಮೆ ಯಾವುದು ? ಏನನೇವೆಂ ? ಎಂತೀವೆಂ ?

ಮುದ್ದಣ – ಏನೋ ! ಎಂತೋ ! ಆಂ ಮೆಚ್ಚುವಂತುಂ, ಕತೆಯ ಪುರುಳ್ಗೊವಂತುಂ, ನಾಲ್ವರ್ ತಲೆದೂಗುವಂತುಂ ಉಡುಗೊರೆಗೆಯ್ದೊಡಾಯ್ತು.

ಇಂತಹ ಉಡುಗೊರೆಯೇನಿರಬಹುದು ? ರಸಿಕರಸಜ್ಞರಾದ ಹಿರಿಯ ಸಾಹಿತಿಗಳೊಬ್ಬರು ಆಕೆಯು ಒಂದು ಮುತ್ತಿತ್ತಿರಬಹುದೆಂದು ಹೇಳಿದ್ದಾರೆ. ಇರಬಹುದು. ಅದಕ್ಕಿಂತಲೂ ಮೆಚ್ಚಿಗೆಯಾದ ಉಡುಗೊರೆ ಮತ್ತೇನಿದ್ದೀತು ?

ಶ್ರೀಮಾನ್ ಭೀಮರಾಯರು 'ಕವಿಯ ನೆನಪು' ಎಂಬ ತಮ್ಮ ಲೇಖನವೊಂದರಲ್ಲಿ ಕಾವ್ಯಸ್ಥರಾಗಿರುವ ಈ ದಂಪತಿಗಳನ್ನು ಕುರಿತು ಹೀಗೆ ಹೇಳಿದ್ದಾರೆ – "...... ನಿಜವಾದ ಮುದ್ದಣ – ಮನೋರಮೆ ಯಾರೆಂದರೆ ಆ ಗಂಡಹೆಂಡಿರೇ, ಕವಿ ಮತ್ತು ಆತನ ಹೆಂಡತಿ. ಮನೆಗೆ ಬಂದ ಹೊಸದರಲ್ಲಿ (ಹಳತಾಗುವಷ್ಟು ಕಾಲ ಅವರು ಒಟ್ಟಿಗೆ ಬಾಳಲೇ ಇಲ್ಲವಲ್ಲ !) ಮುಗ್ಧೆಯಾದ ಈ ಚಿಕ್ಕವಳನ್ನು, ಈ ಕವಿ ಬೇಕುಬೇಕೆಂದೇ ಕೆಣಕಿ, ರೇಗಿಸಿ, ಅಳಿಸಿ, ನಗಿಸಿದುದನ್ನು ನಾನು ಕಂಡಿದ್ದೇನೆ. ಬಳಿಕ, ಕೊಂಚಕಾಲ ಕಳೆದ ಮೇಲೆ ಆಕೆಯೇ 'ಮನೋರಮೆ'ಯಂತೆ, ಈ 'ಮುದ್ದಣ'ನಿಗೆ ಉತ್ತರ ಕೊಡುವುದನ್ನೂ ಕೇಳಿದ್ದೇನೆ. ಇದನ್ನು ಕಂಡವರು 'ರಾಮಾಶ್ವಮೇಧ'ವನ್ನೇನೂ ಓದಬೇಕಿಲ್ಲ."

ಪಾಠಕರ ಹೃದಯ ತಣ್ಪುಗೊಂಡು, ಸಂತೋಷ ಸಂಪೂರ್ಣವಾಗಿ ಅರಳಬೇಕಾದರೆ ಕವಿಯ ಹೃದಯದಲ್ಲಿರುವ ಅನುಭವದ ಬುಗ್ಗೆ ಛಿಲ್ಲೆಂದು ಚಿಮ್ಮದೇ ಹೇಗೆ ಸಾಧ್ಯ ?

## ೪. ಮುದ್ದಣನ ವೈಶಿಷ್ಟ್ಯ

ಇತರರು ಹಾಕಿದ ಸಂಪ್ರದಾಯಕ್ಕೆ ಶರಣಾಗದೆ, ತನ್ನದೇ ಆದ ನೂತನ ಸಂಪ್ರದಾಯವೊಂದನ್ನು ಸೃಷ್ಟಿಸಬಲ್ಲ ಪ್ರತಿಭೆಯೇ ಹಿರಿತನಕ್ಕೆ ಹೆಗ್ಗುರುತು. ಈ ಮಾತು ಸಾಹಿತ್ಯ ಪ್ರಪಂಚಕ್ಕೂ ಸೇರಿದುದು. ಹೊಸಮಾರ್ಗವೊಂದನ್ನು ತೋರಿದ

ಕವಿಬ್ರಹ್ಮರೆಲ್ಲರೂ ಹಿರಿಯ ಕವಿಗಳೆಂದು ಹೆಸರಾಗಿ ಬಾಳಿ, ಸಾರಸ್ವತ ಪ್ರಪಂಚದ ಧ್ರುವತಾರೆಗಳಾಗಿ ಉಳಿದಿದ್ದಾರೆ. ಅವರ ಸಾಲಿನಲ್ಲಿ ಮುದ್ದಣನಿಗೇನಾದರೂ ಸ್ವಲ್ಪ ಸ್ಥಾನವುಂಟೆ? ಆತನಲ್ಲಿ ಕಾಣುವುದು ಬರಿಯ ಅಂಧಾನುಕರಣೆಯೆ ಅಥವಾ ಹೊಸತನವೇನಾದರೂ ಕಂಡುಬರುತ್ತದೆಯೆ? ಆತನು ಆಯ್ದುಕೊಂಡ ಕಥಾವಸ್ತುಗಳೆಲ್ಲವೂ ಪುರಾಣಾಂತರ್ಗತವಾದುವು; ಆದುದರಿಂದ ಅವುಗಳಲ್ಲಿ ಹೊಸತನವಿದ್ದರೆ, ಅದೆಲ್ಲಿದೆ ಎಂಬುದನ್ನು ಸ್ವಲ್ಪ ವಿವೇಚನೆ ಮಾಡೋಣ.

ಕನ್ನಡ ಸಾಹಿತ್ಯಯಾತ್ರೆಗೆ ಹೊರಟವರು ಜೈನ, ಬ್ರಾಹ್ಮಣ, ವೀರಶೈವ ಸಾಹಿತ್ಯಗಳನ್ನು ಸಂದರ್ಶನ ಮಾಡಿಕೊಂಡು ಮುಂದಕ್ಕೆ ಪ್ರಯಾಣ ಬೆಳಸಿದರೆ, ಸುಮಾರು ಎರಡು ಶತಮಾನಗಳ ದೊಡ್ಡ ಮರಳುಕಾಡೊಂದನ್ನು ದಾಟಬೇಕಾಗುತ್ತದೆ. ಆ ಮರುಭೂಮಿಯ ಈಚೆಯ ಕೊನೆಯಲ್ಲಿ ಕಂಡುಬರುವ ನಂದನವನದ ಹೆಬ್ಬಾಗಿಲೇ ಮುದ್ದಣಕವಿ. ಆಧುನಿಕ ಕನ್ನಡಯುಗ ಆರಂಭವಾಗುವುದು ಮುದ್ದಣನಿಂದ. ಕನ್ನಡ ಯಾರಿಗೂ ಬೇಡದ ವಸ್ತುವಾಗಿದ್ದಾಗ ಅದಕ್ಕೆ ನೀರಂ ಹೊಯ್ದು ಬೆಳಸಿದ ಕೀರ್ತಿ ಮುದ್ದಣನದು. ಸಂಪ್ರದಾಯ ನೂತನ ಮಾರ್ಗಗಳೆರಡನ್ನೂ ಸಂಗಮಗೊಳಿಸಿ, ಇಬ್ಬಣದವರ ದೃಷ್ಟಿಯನ್ನೂ ಏಕಕಾಲದಲ್ಲಿ ಆಕರ್ಷಿಸಿದ ಪೌರುಷ ಆತನದು. ತಾನು ಬರೆದ ಕಥೆಗಳು 'ಉಳಿದೊಡಂ ಅಳಿದೊಡಂ ಬಟ್ಟೆದೋರಿಪ' ಪುರಾಣ ಕಥನಗಳು. ಆದರೆ ಅವುಗಳನ್ನು ಬರೆದ ರೀತಿ ನವೀನವಾದುದು. ಪುರಾಣ ಕಥಾಕಟ್ಟಡದಲ್ಲಿ ಹೊಸತೊಂದನ್ನು ತಂದಾಗ ಸಂಪ್ರದಾಯದ ಜನರ ಕಣ್ಣುಕುಕ್ಕಿ, ಅವರು ಸಿಡಿದೇಳುವರು. ಈ ಬೆದರಿಕೆ ಲಕ್ಷ್ಮೀನಾರಾಯಣ ಕವಿಯನ್ನು ಎದೆಗುಂದಿಸಲಿಲ್ಲ. ಆತನು ಧೈರ್ಯದಿಂದ ಆ ಕೆಲಸಕ್ಕೆ ಕೈ ಹಾಕಿದ. ಲಕ್ಷ್ಮೀನಾರಾಯಣ ಕವಿ ತನ್ನ ಕಥೆಗಳನ್ನು ನಿರೂಪಿಸಿದುದು ಗದ್ಯದಲ್ಲಿ. 'ಗದ್ಯಂ ಕವೀನಾಂ ನಿಕಷಂ ವದಂತಿ' ಎಂದು ಹೇಳಿದ್ದರೂ, ನಮ್ಮ ಜನ ಅದನ್ನು ಗಮನಿಸಿದಂತೆ ಕಾಣುವುದಿಲ್ಲ. ಪದ್ಯದಲ್ಲಿ ಬರೆದುದು ಮಾತ್ರವೇ ಪುರಸ್ಕಾರ ಯೋಗ್ಯವೆಂಬ ಭಾವನೆಯು ಬಲಿತೋ ಏನೋ, ಶಾಸ್ತ್ರವಿಚಾರಗಳನ್ನು ಸಹ ಛಂದಸ್ಸಿನಲ್ಲಿ ಅಳವಡಿಸಿದರು. ಗದ್ಯದ ಮೇಲಿದ್ದ ಅನಾದರ, ಮುದ್ದಣನು ಕಾವ್ಯಗಳನ್ನು ಬರೆಯಹೊರಡುವ ಮುನ್ನ ಸ್ವಲ್ಪಮಟ್ಟಿಗೆ ಅಳಿಸುತ್ತಾ ಬಂದಿತ್ತಾದರೂ, ತಾನೇ ಸ್ವತಃ ಪದ್ಯಕಾವ್ಯವನ್ನು ಬರೆದವನಾದರೂ, 'ಪದ್ಯಂ ವದ್ಯಂ' ಎಂದು ಅದನ್ನು ಘಂಟಾಘೋಷವಾಗಿ ತೆಗಳಿ, 'ಗದ್ಯಂ ಹೃದ್ಯಂ' ಎಂದು ಗದ್ಯದ ಧಾಟಿಯನ್ನು ತನ್ನ ಕಾವ್ಯಗಳಿಗೆ ಸ್ವೀಕರಿಸಿದುದು ಆತನ ಮನೋನಿಗ್ರಹಶಕ್ತಿಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಮುದ್ದಣನ ಗದ್ಯವು ಆದರ್ಶಯುತವಾದುದೆಂದು ನಿರ್ವಿವಾದವಾಗಿ ಸಾಧಿಸುವುದು ಸಾಧ್ಯವಿಲ್ಲ. ಆತನ ಶೈಲಿಯಲ್ಲಿ ಅನೇಕ ವೇಳೆ ಕೃತಕತೆ ಕಂಡುಬರುತ್ತದೆ. ಆತನು ಸ್ವತಃ ಸಂಪಾದಿಸಿ ಅರಗಿಸಿಕೊಂಡಿದ್ದ ಪಾಂಡಿತ್ಯ ಮತ್ತು ಬರೆದು ಬರೆದು ಪರಿಣತಿಗೊಂಡಿದ್ದ ಆತನ ಲೇಖಣಿಯ ಪ್ರಭಾವ ಇವುಗಳೇ ಈ ಬಗೆಯಾದ ಶೈಲಿಗೆ ಮೂಲಕಾರಣವೆಂದು ತೋರುತ್ತದೆ. ಅನೇಕ ವೇಳೆ ಆತನ ಗದ್ಯಗಳ ಮಧ್ಯೆ ಗೆರೆಯೆಳೆದರೆ ಅವು ಪದ್ಯಗಳಾಗಿ

ಬಿಡುತ್ತವೆ – ಎಲೆ ತರಳ ! ನಿನ್ನ ಬಿಂಕದ ನೆಲೆಯೇಂ ? ಕಟ್ಟುರದ ಬರದ ಬಾಯಾಯ್ತುರಿಯಂ ಗೆಲಲಾರ್ಪೊಡೆ ಪೋರ್ಪೊಡೆ ಮೆಯ್ಗಲಿಗಳ್ ನಾಣಿಲಿಗಳಂತು ಜಂಕಿಪರೊಳರೆ ? ... ಜಡಿವರೊ ಬಡಿವರೊ ಸೆರೆವಿಡಿದಿಡುವರೋ ಮೇಣಲ್ಲದಂದು ಶೂಲದ ಮೊನೆಗೇರಿಡುವರೊ ಬರಿದೇಂ ಬಿಡುವರೊ ಹಾ ಕಂದ ನಿನ್ನನರಗುಲಿ ರಾಯರ್ ... ಇವುಗಳು ಗದ್ಯದ ವೇಷವನ್ನು ಧರಿಸಿ ಬಂದಿರುವ ಪದ್ಯಗಳೆಂದು ಹೇಳಬೇಕಾದುದೇ ಇಲ್ಲ. ಆದರೆ ಮುದ್ದಣನ ಕಾವ್ಯಗಳಲ್ಲಿ ಸುಂದರವಾದ ವೃತ್ತಗಂಧಿ ಶೈಲಿಗೆ ಹಲವು ಉದಾಹರಣೆಗಳು ದೊರೆಯುತ್ತವೆ.

ಮುದ್ದಣ ನೂತನ ಮಾರ್ಗಾನುಸಂಧಾನಕ್ಕೆ ಮತ್ತೊಂದು ಉದಾಹರಣೆ ಆತನು ಪದಗಳನ್ನು ಬಳಸುವುದರಲ್ಲಿ ಮಾಡಿಕೊಂಡಿರುವ ನಿರ್ಧಾರದಲ್ಲಿ ಕಂಡುಬರುತ್ತದೆ. ಸಂಸ್ಕೃತದ ಪ್ರಭಾವ ಕನ್ನಡ ಸಾಹಿತ್ಯದ ಮೇಲೆ ಬಿದ್ದಂದಿನಿಂದ ಅದರ ಮಾತುಗಳ ಬಳಕೆ ಬಲವಾಯಿತು. ಅಗತ್ಯವಿರಲಿ ಬಿಡಲಿ ಸಂಸ್ಕೃತ ಮಾತನ್ನು ಬಳಸುವುದು ಒಂದು 'ಫ್ಯಾಶನ್' ಆಗಿಹೋಯ್ತು. ಇದನ್ನು ಕಂಡು ಕನ್ನಡ ಪ್ರೇಮಿಗಳು ಬಲವಾಗಿ ಪ್ರತಿಭಟಿಸುತ್ತಾ ಬಂದರು. ಸಂಸ್ಕೃತಪದಗಳನ್ನು ಬಳಸುವುದೇ ಇಲ್ಲವೆಂದು ಪ್ರತಿಜ್ಞೆ ಮಾಡಿ ಕಾವ್ಯವನ್ನು ಬರೆಯ ಹೊರಟ, ಒಬ್ಬ ಕವಿ. ಆದರೇನು? ಮತ್ತೊಬ್ಬ 'ಶ್ರೀರಾಮಾನಟಿ ಕೌಸ್ತುಭದ್ಯುತಿಕಿರತ್ಪುಷ್ಪಾಂಜಲಿ ಕ್ಷೇಪ ವಕ್ಷೋರಂಗಸ್ಥಿತೆ'ಯನ್ನು ಹೊರಗೆ ತಂದ. ಲಕ್ಷ್ಮೀ ನಾರಾಯಣಕವಿಯು ಸೂಚಿಸಿದ ಮಾರ್ಗವು ಸರ್ವಜನಾದರಣೀಯವೆಂದು ತೋರುತ್ತದೆ. 'ಕರ್ಮಣಿ ಸರದೊಳ್ ಚೆಂಬವಳಮಂ ಕೋದಂ'ತಿರಬೇಕು. ಕನ್ನಡ ಗ್ರಂಥಗಳಲ್ಲಿನ ಸಂಸ್ಕೃತ ಎಲ್ಲಿಯೋ ಅಲ್ಲೊಂದು ಇಲ್ಲೊಂದು ಹವಳ ಅಲಂಕಾರಕ್ಕೆ : ಸರವೇನೋ ಕರಿಮಣಿಯದೇ.

ಮುದ್ದಣನು ಕಾವ್ಯವನ್ನು ಆರಂಭಿಸಿರುವ ರೀತಿ ಆತನಿಗೇ ವಿಶಿಷ್ಟವಾದುದು. ಅದುವರೆಗೆ, ಆತನಂತೆ ಪುರಾಣಕಾವ್ಯಗಳನ್ನು ಆ ರೀತಿ ಆರಂಭ ಮಾಡಿದವರಾರೂ ಇರಲಿಲ್ಲ. ಕಾದಂಬರಿಯ ವಿಶಿಷ್ಟ ರೀತಿಯೊಂದು ಈ ಕಥೆಯ ಆರಂಭದಲ್ಲಿ ಕಂಡು ಬರುತ್ತದೆ. ಅದರಲ್ಲಿ ಅಡಗಿರುವ ಹಾಸ್ಯವೂ ಬಹು ನವುರಾದುದು; ಸುಂದರವಾದುದು.

ಇಲ್ಲಕ್ಕಿಂತಲೂ ಹೆಚ್ಚಾಗಿ ಮುದ್ದಣನ ವೈಶಿಷ್ಟ್ಯವಿರುವುದು ಆತನು ತಂದಿರುವ ಮುದ್ದಣ – ಮನೋರಮೆಯರ ಸಂಭಾಷಣೆಯಲ್ಲಿ. ನಿರ್ದುಷ್ಟವಾದ ತಿಳಿಯಾದ ಹಾಸ್ಯ ಕನ್ನಡ ಕಾವ್ಯಪ್ರಪಂಚಕ್ಕೆ ಹೊಸದು; ಇಲ್ಲವೇ ಇಲ್ಲವೆಂದರೂ ಅತಿಶಯೋಕ್ತಿಯಾಗಲಾರದು. ಮುದ್ದಣನು ಈ ಹಾಸ್ಯರಸವನ್ನು ತರಂಗ ತರಂಗವಾಗಿ ಎಬ್ಬಿಸಿದ್ದಾನೆ, ತನ್ನ ಕಾವ್ಯದ ಉದ್ದಕ್ಕೂ. ಅನೇಕ ವೇಳೆ ಈ ಹಾಸ್ಯ ಅರ್ಥಪೂರ್ಣವಾದುದಿರಬಹುದು. ಕಟುವಾದ ಸತ್ಯವೊಂದು ಅದರ ಹಿಂದೆ ಅಡಗಿರಬಹುದು. 'ಭವತಿ ಭಿಕ್ಷಾಂದೇಹಿ, ಇದುವೇ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತಾಕ್ಷರೀ ಮಂತ್ರಂ' ಎಂದು ಕವಿ ಹೇಳಿದಾಗ, ನಾವು ಗಹಗಹಿಸಿ ನಗುವೆವಾದರೂ,

ಸ್ವಲ್ಪಮಟ್ಟಿಗೆ ಅಂತರ್ಮುಖಿಗಳಾದಾಗ ಅದರ ಸತ್ಯತೆಯ ಅನುಭವ ನಮಗಾದೀತು. ಕವಿಯು ತನ್ನ ಅನುಭವದ ಕುಲುಮೆಯಲ್ಲಿ ಕಾಸಿ, ಹೊರದೆಗೆದಿರುವ ಕಾಳಿಕೆ ಳೆದ ಕೂರಸಿಯದು ಎಂದು ಸ್ಪಷ್ಟವಾಗುತ್ತದೆ.

ಕಡೆಯದಾಗಿ ಶ್ರೀಮಾನ್ ಡಿ. ವಿ. ಗುಂಡಪ್ಪನವರು ಹೇಳುವಂತೆ ಆತನು ಜಗತ್ತಿಗೊಂದು ಹಿರಿಯ ಸಂದೇಶವನ್ನು ಬೀರಿದ್ದಾನೆ. 'ಧನಿಕರಾಗುವುದು ನಿಮಗೆ ಸಾಧ್ಯವೊ ಇಲ್ಲವೊ ನಾನರಿಯೆ. ಆದರೆ, ಧನಿಕರಾಗುವ ಪ್ರಯತ್ನದಲ್ಲಿ ನಿಮ್ಮ ಆತ್ಮವನ್ನು ಅಧೋಗತಿಗೆ ತಳ್ಳುವ ಸಂಭವವುಂಟು. ಆದರೆ ಸ್ವಲ್ಪ ಪ್ರಯಾಸದಿಂದ ರಸಿಕರಾಗುವುದು ನಿಮಗೆ ಸಾಧ್ಯ. ನೀವು ರಸಿಕರಾದರೆ ಧನಿಕರು ಕೊಂಡುಕೊಳ್ಳಬಹುದಾದ ಸುಖ ಶಾಂತಿಗಳಿಗಿಂತ ಮಿಗಿಲಾದ ಸುಖಶಾಂತಿಗಳನ್ನು ನೀವು ಪಡೆಯಬಹುದಲ್ಲದೆ, ನಿಮ್ಮ ಆತ್ಮವನ್ನು ಅದರಿಂದ ಉನ್ನತಿಗೆ ತಂದುಕೊಳ್ಳಲಾಗುವುದು. ಆದುದರಿಂದ ನಿಮ್ಮ ಮನೆಗಳಲ್ಲಿ ಧನಧಾನ್ಯ ಸಂಪತ್ತು ಹೆಚ್ಚಾಗಿಯಾದರೂ ಇರಲಿ; ಕಡಮೆಯಾಗಿಯಾದರೂ ಇರಲಿ; ಕಾವ್ಯಸಂಪತ್ತು ಮಾತ್ರ ಯಥೇಷ್ಟವಾಗಿರುವಂತೆ ಮಾಡಿಕೊಂಡು, ಮುದ್ದಣ – ಮನೋರಮೆಯಂತೆ ಸತ್ಕಥಾವಿನೋದದಲ್ಲಿ ಬಾಳಿರಿ.'

ಹಿರಿಯಕವಿಯ ಸಂದೇಶವೆಂದು ಹೇಳಿರುವ ಈ ಹಿರಿಯರ ನುಡಿಗಳನ್ನು ನಮ್ಮ ಕ್ಷೇಮಕ್ಕಾಗಿ ನಾವು ಗಮನಿಸುವುದು ಅತ್ಯಗತ್ಯ – ಲೋಕಾಸ್ಸಮಸ್ತಾಸ್ಸುಖಿನೋ ಭವಂತು.

---

ಕೃಪೆ : ಮುದ್ದಣ ಗ್ರಂಥ ೧೯೪೩

# ಮುದ್ದಣ

## ರಂ. ಶ್ರೀ ಮುಗಳಿ

೧೯ನೆಯ ಶತಮಾನದ ಕೊನೆ ಕೊನೆಗೆ ಉದಯವಾಗಿ ೨೦ನೆಯ ಶತಮಾನದ ಮೊದಲಲ್ಲಿ ಅಸ್ತನಾದ ಮುದ್ದಣನು ಹಳೆಯ ಮತ್ತು ಹೊಸ ಸಾಹಿತ್ಯಗಳ ಸಂಧಿ ಸಮಯದ ಸಂಕೇತವಾದನು. ಸೂರ್ಯಾಸ್ತದ ಹೊತ್ತಿಗೆ ಬೆಳ್ಳಗೆ ಹೊಳೆದ ಬೆಳ್ಳಿ ಸಂಜೆಯಾದೊಡನೆ ಕೆಲಕಾಲ ಮಾತ್ರ ತಳತಳಿಸಿ ಮುಳುಗಿದಂತೆ ಅವನ ಅಲ್ಪ ಜೀವನವಾಯಿತು. ನಂದಳಿಕೆ ಲಕ್ಷ್ಮೀನಾರಾಯಣ ಮತ್ತು ಮುದ್ದಣರು ಇಬ್ಬರೂ ಬೇರೆಯೋ ಒಂದೆಯೋ ಎಂಬ ಭೇದಾಭೇದ ಚರ್ಚೆ ಹಿಂದೆ ನಡೆದು ಭೇದವು ಕವಿ ಮಾಯೆಯಿಂದ ಕಲ್ಪಿತವಾದದ್ದೆಂದು ತಿಳಿದು ಅಭೇದ ಸಿದ್ಧಾಂತವು ಈಗ ಸ್ಥಾಪಿತವಾಗಿದೆ ! ಅದೀಗ ಗತಕಾಲದ ವಾದವಾಯಿತು. ಮುದ್ದಣನು ತನ್ನ ಮೂವತ್ತೊಂದು ವರ್ಷಗಳ ಅಲ್ಪಾಯುಷ್ಯದಲ್ಲಿ ಹತ್ತಿಪ್ಪತ್ತು ರೂಪಾಯಿ ಸಂಬಳದ ವ್ಯಾಯಾಮ ಶಿಕ್ಷಕನಾಗಿ ಕನ್ನಡ ವ್ಯಾಸಂಗ ಪರಿಣತಿಯನ್ನು ಪಡೆಯುವ ಸಾಹಸ ಮಾಡಿದ್ದಲ್ಲದೆ 'ರತ್ನಾವತೀ ಕಲ್ಯಾಣ', 'ಕುಮಾರ ವಿಜಯ' ಎಂಬ ಯಕ್ಷಗಾನ ಪ್ರಸಂಗಗಳನ್ನೂ 'ಅದ್ಭುತ ರಾಮಾಯಣ', 'ರಾಮ ಪಟ್ಟಾಭಿಷೇಕ', 'ರಾಮಾಶ್ವಮೇಧ' ಎಂಬ ಕಾವ್ಯಗಳನ್ನೂ ರಚಿಸಿ ಕನ್ನಡ ನುಡಿಯ ಕಣಜಕ್ಕೆ ನೀಡಿದನು. ಇದಲ್ಲದೆ 'ಗೋದಾವರಿ' ಎಂಬ ಕಾದಂಬರಿಯ ಕೆಲವು ಪರಿಚ್ಛೇದ, ಭಗವದ್ಗೀತೆ-ರಾಮಾಯಣಗಳ ಕನ್ನಡ ಅನುವಾದ, ಕಾಮಶಾಸ್ತ್ರವನ್ನು ಕುರಿತು ಗ್ರಂಥ, ಸಂಶೋಧನೆಯ ಲೇಖನ ಇವನ್ನು ಬರೆದಿದ್ದಾನೆ. ವ್ಯಾಕರಣ, ನಿಘಂಟು ಇವುಗಳಿಗೆ ಸಂಬಂಧಿಸಿದ ಗ್ರಂಥಗಳ ಯೋಜನೆ ಮಾಡಿದ್ದನಂತೆ. ಅವನು ವಿಷಮ ಪರಿಸ್ಥಿತಿಯೊಡನೆ ಹೋರಾಡುತ್ತ ಇನ್ನೂ ಮೇಲಾದ ಅದ್ಭುತ ಕಾರ್ಯಗಳನ್ನು ಮಾಡಿದರೆ ಜನ ನಂಬಲಿಕ್ಕಿಲ್ಲವೆಂದು ಭಾವಿಸಿಯೋ ಏನೋ ಮೃತ್ಯು ಅವನನ್ನು ಬೇಗ ಅಪ್ಪಿಕೊಂಡಿತು.

ಮುದ್ದಣನ ಜೀವನ ಚರಿತ್ರೆಯಲ್ಲಿ ನಮ್ಮ ಕನಿಕರ ಕೈವಾರಗಳನ್ನು ಸೆಳೆದುಕೊಳ್ಳುವ ವಿಶೇಷವಿದೆ. ಆದರೂ ಅವನ ಗ್ರಂಥಗಳ ವಿಮರ್ಶೆಯಲ್ಲಿ ನಾವು ಮೈಮರೆಯಕೂಡದು. ಅವನ ಮೇಲೆ ಹಳೆಯ ಕಾವ್ಯದ ಸಂಸ್ಕಾರಗಳಾದಂತೆ ಹೊಸ ಪಾಶ್ಚಾತ್ಯ ಪದ್ಧತಿಯ ಸಾಹಿತ್ಯದ ಸಂಸ್ಕಾರಗಳೂ ಆದುವು. ಬಿ. ವೆಂಕಟಾಚಾರ್ಯರ ಕಾದಂಬರಿಗಳನ್ನು ಅವನು ಓದಿಕೊಂಡಿದ್ದನು. ಹಳೆಯ

ತಂತ್ರ, ಹೊಸ ಮಂತ್ರ ಎರಡೂ ಅವನನ್ನು ಆಕರ್ಷಿಸಿದ್ದುವು. ಇನ್ನೂ ಹೆಚ್ಚಾದ ಇಂಗ್ಲೀಷ್ ಶಿಕ್ಷಣವನ್ನು ಪಡೆದಿದ್ದರೆ ಮತ್ತು ತನಗೆ ತೋರಿದಂತೆ ಬರೆದರೆ ಅಂದಿನ ಕನ್ನಡನಾಡಿನಲ್ಲಿ ಮನ್ನಣೆ ದೊರೆಯಬಹುದೆಂಬ ನಂಬಿಕೆ ಅವನಲ್ಲಿ ಹುಟ್ಟಿದರೆ ಅವನು ಹೊಸ ತಂತ್ರ, ಹೊಸ ಶೈಲಿಗಳನ್ನು ಅಂಗೀಕರಿಸಿ ಸ್ವತಂತ್ರ ನಿರ್ಮಾಣವನ್ನು ಮಾಡಬಹುದಾಗಿತ್ತು. ಆದರೆ ಅವೆರಡೂ ಅಂದಿನ ಪರಿಸ್ಥಿತಿಯಲ್ಲಿ ಸಾಧ್ಯವಿರಲಿಲ್ಲ. ಅಪರಿಹಾರ್ಯವಾಗಿ ಅವನು ಹಳೆಯ ತಂತ್ರವನ್ನು ಸ್ವೀಕರಿಸಿದನು, ಅದರಲ್ಲಿ ಸಾಧ್ಯವಾದಷ್ಟು ಹೊಸ ಮಂತ್ರವನ್ನು ಊದಿದನು.

ಅವನ 'ಅದ್ಭುತ ರಾಮಾಯಣ'ವು ಶಾಕ್ತ ಸಂಪ್ರದಾಯದ ರಾಮಾಯಣ ಕಥೆಯನ್ನು ಗದ್ಯದಲ್ಲಿ ಸಂಗ್ರಹಗೊಳಿಸಿದೆ. ವ್ಯಾಯಾಮ ಶಿಕ್ಷಕನು ಅಂಗ ಸಾಧನೆಯಲ್ಲಿ ಕೆಲವು ಬೈಠಕುಗಳನ್ನು ತೆಗೆದು ನೋಡುವಂತೆ ಮುದ್ದಣನು ಇದರಲ್ಲಿ ತನ್ನ ನುಡಿಬಲ್ಮೆಯನ್ನೂ ಸಂಗ್ರಹ ಚಾತುರ್ಯವನ್ನೂ ಅರಿತುಕೊಳ್ಳಲು ಹವಣಿಸಿದ್ದಾನೆ. ರೀತಿ ಪ್ರಧಾನವಾದ ಚಿಕ್ಕ ಗ್ರಂಥವಿದು. ಮೂಲದಲ್ಲಿದ್ದ ವಸ್ತು, ಪಾತ್ರಗಳನ್ನು ಅವನು ಇದ್ದಂತೆ ಎತ್ತಿಕೊಂಡಿದ್ದಾನೆ. ವ್ಯತ್ಯಾಸ ಮಾಡುವ ಉದ್ದೇಶವು ಅವನಲ್ಲಿಲ್ಲ. ನೀರಸವಾದ ಭಾಗಗಳನ್ನು ಬಿಟ್ಟು ಅವಶ್ಯವಾದುವುಗಳನ್ನು ಸಂಕ್ಷೇಪಿಸಿ ಮುಖ್ಯವಾದ ಕಥಾನಕವನ್ನು ಮೂಲದಂತೆ ಸ್ವಾರಸ್ಯವಾಗಿ ಅನುವಾದ ಮಾಡುವುದು ಅವನ ಉದ್ದೇಶವಿತ್ತು. ಅದು ಕೈಗೂಡಿದೆಯೆನ್ನಬೇಕು. ಆದರೆ ಇದು 'ಸುಂದರವಾದ ವಚನಕಾವ್ಯ' ಎನ್ನಲು ನಾವು ಸಿದ್ಧರಿಲ್ಲ. 'ಈ ವಚನಕಾವ್ಯ ಉತ್ತಮವಾದ ಕೆಲವು ಕಥೆಗಳನ್ನು ಒಳಗೊಂಡಿರುವುದರಿಂದ ಓದುವದಕ್ಕೆ ತುಂಬ ಸೊಗಸಾಗಿದೆ. ಮುದ್ದಣನ ಅದ್ಭುತ ರಾಮಾಯಣವನ್ನು ಓದುತ್ತಿದ್ದರೆ ಆಧುನಿಕ ಸಣ್ಣ ಕಥೆಗಳನ್ನು ಓದುತ್ತಿರುವಂತೆ ನಮಗೆ ಭಾಸವಾಗುತ್ತದೆ' ಎಂಬ ಪ್ರಶಂಸೆ ಹೆಚ್ಚೆಂದು ನಮಗೆ ತೋರುತ್ತದೆ. ಅದರ ಗುಣಭಾಗವೆಲ್ಲ ಚೊಕ್ಕಟವಾದ, ಬಿಗಿಯಾದರೂ ತಿಳಿಯಾದ ಹಳಗನ್ನಡ ಗದ್ಯದಲ್ಲಿದೆ. ಅಲ್ಲಲ್ಲಿ ಕವಿಗೆ ತಿಳಿದೋ ತಿಳಿಯದೆಯೋ ಹೊಸಗನ್ನಡ ಪ್ರಯೋಗಗಳು ಬಂದಿವೆ. ಚಿಕ್ಕ ಚಿಕ್ಕ ವಾಕ್ಯಗಳು ಹೊಸ ಗದ್ಯದ ಗುರುತಾಗಿ ಮೆರೆಯುತ್ತವೆ. ತದ್ಭವಗಳ ಅತಿರೇಕ, ಪ್ರಾಸದ ಆಡಂಬರ, ಅಚ್ಚಗನ್ನಡದ ಹುಚ್ಚು ಆವೇಶ ಒಮ್ಮೊಮ್ಮೆ ಈ ಶೈಲಿಯನ್ನು ಕೃತಕಗೊಳಿಸಿದರೂ ಮುದ್ದಣನು ತನ್ನದೇ ಆದ ಪ್ರೌಢ ಪ್ರಸನ್ನ ಗದ್ಯದ ಹೊಳಹನ್ನು ಹಾಕುತ್ತಿದ್ದನೆಂದು ತಿಳಿಯಬೇಕು.

'ರಾಮ ಪಟ್ಟಾಭಿಷೇಕ'ವು ಮುದ್ದಣನ ಒಂದೇ ಒಂದಾದ ಪದ್ಯಕಾವ್ಯ. ಇದನ್ನು ವಾರ್ಧಕ ಷಟ್ಪದಿಯಲ್ಲಿ ಬರೆಯಲಾಗಿದೆ. ವನವಾಸದಿಂದ ಮರಳಿ ಬಂದ ಮೇಲೆ ಜರುಗಿದ ರಾಮ ಪಟ್ಟಾಭಿಷೇಕವೇ ಇದರ ವಿಷಯ. ಇದರಲ್ಲಿ ಕಥಾಭಾಗ ಕಡಿಮೆ, ವರ್ಣನಾ ಭಾಗವೇ ಹೆಚ್ಚು, ರಾಮನ ನಿರೀಕ್ಷೆಯನ್ನು ಮಾಡುತ್ತಿರುವ ಭರತನ ಪ್ರೇಮಾದರ, ಉತ್ಸುಕತೆ, ಸಂಭ್ರಮ ಇವುಗಳ ಚಿತ್ರ ಸೊಗಸಾಗಿದೆ. 'ರಾಮನಾಮಾಮೃತದ ಬಿಂದಿಗೆ'ಯೆಂಬುದು ಸಾರ್ಥಕವಾಗುವಂತೆ ರಾಮಭಕ್ತಿ, ನಾಮಸ್ಮರಣೆಗಳಿಗೆ ಇದರಲ್ಲಿ ಪ್ರಾಮುಖ್ಯ ಬಂದಿದೆ. ವರ್ಣನೆಗಳಲ್ಲಿ ಸಮುದ್ರ

ವರ್ಣನೆ, ರಾಮನು ಹಿಂದೆ ಸಂದರ್ಶಿಸಿದ ಸ್ಥಳಗಳ ವರ್ಣನೆ ಮುಂತಾದುವು ಚಮತ್ಕೃತಿ ಪ್ರಧಾನವಾಗಿ ಬಂದಿವೆ. 'ಅದರಲ್ಲಿ ಸುಲಭತೆಯಿರುವಂತೆ ಕ್ಲಿಷ್ಟತೆಯೂ ಇರುವುದು. ಶಬ್ದ ಚಮತ್ಕಾರಗಳಿರುವಂತೆ ಅರ್ಥ ಚಮತ್ಕಾರಗಳೂ ಕಂಡುಬರುವವು' ಎಂಬ ಹೇಳಿಕೆ ಸರಿಯಾಗಿದೆ. ಒಟ್ಟಿನಲ್ಲಿ ಗದ್ಯ ಕಥೆ ಬರೆಯುವ ವಿಷಯದಲ್ಲಿ 'ಅದ್ಭುತ ರಾಮಾಯಣ'ವು ಒಂದು ಕವಿತಾ ಪ್ರಯೋಗವಾದಂತೆ ಪದ್ಯ ಕಾವ್ಯದಲ್ಲಿ ಇದು ಪ್ರಯೋಗವಾಗಿದೆ. ಕ್ರಮೇಣ ಬೆಳೆಯುತ್ತಿರುವ ಮುದ್ದಣನ ಪ್ರತಿಭೆ, ಪಳಗುತ್ತಿರುವ ಶೈಲಿ ಇವುಗಳಿಗೆ ಇಲ್ಲಿ ಸಾಕ್ಷ್ಯ ದೊರೆಯುತ್ತವೆ. ಆದರೆ ಪಾಂಡಿತ್ಯ-ಚಮತ್ಕೃತಿಗಳ ವ್ಯಾಮೋಹವು ಅವನನ್ನು ಬಿಡಲೊಲ್ಲದು ಎಂಬುದನ್ನು ಇಲ್ಲಿ ಕಾಣಬಹುದು.

'ರಾಮಾಶ್ವಮೇಧವು' ಮುದ್ದಣನ ಮೂರನೆಯ ಮತ್ತು ಕೊನೆಯ ಕಾವ್ಯ. ಮೊದಲಿನೆರಡರಲ್ಲಿ ಹೇಗೋ ಹಾಗೇ ಇಲ್ಲಿಯೂ ರಾಮಾಯಣಕ್ಕೆ ಸಂಬಂಧಿಸಿದ ಕಥಾನಕವಿರುತ್ತದೆ. 'ಅದ್ಭುತ ರಾಮಾಯಣ'ದಲ್ಲಿ ಅಂಗಸಾಧನೆ ಮಾಡಿದ ಗದ್ಯವು ಇಲ್ಲಿ ಪಳಗಿದ ಜಟ್ಟಿಯಂತಾಗಿದೆ. 'ರಾಮ ಪಟ್ಟಾಭಿಷೇಕ'ದಲ್ಲಿ ತೋರಿದ ಕಲ್ಪನಾ ಚಮತ್ಕೃತಿ ಅಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತದೆ. ಪದ್ಮಪುರಾಣದಲ್ಲಿಯ 'ಶೇಷ ರಾಮಾಯಣ'ವೇ ಇದರ ಮುಖ್ಯ ಕಥಾನಕಕ್ಕೆ ಆಕರವಾಗಿದೆ. ಸಾಮಾನ್ಯವಾಗಿ ಕಥಾಸಂಗತಿಗಳಲ್ಲಿ ಇದಕ್ಕೂ ಮೂಲಕ್ಕೂ ಭೇದವು ಕಡಿಮೆ. ಇರುವ ಭೇದವೆಲ್ಲ ಸೃಷ್ಟಿ ವರ್ಣನೆ, ಕಥಾಕ್ರಮ, ವಸ್ತುವಿಸ್ತರ ಹಾಗೂ ಮುಖ್ಯವಾಗಿ ಮುದ್ದಣ-ಮನೋರಮೆಯರ ಸರಸ ದಾಂಪತ್ಯದ ಸಂವಾದ ಸ್ವಾರಸ್ಯದ ಹೊರಕಟ್ಟು ಇವುಗಳಲ್ಲಿರುತ್ತದೆ. 'ಓವೊ ಕಾಲ ಪುರುಷಂಗೆ ಗುಣಮಣಮಿಲ್ಲಂಗಡ' ಎಂದು ಕಥಾಮುಖವು ಆರಂಭವಾಗಲು ವಾಚಕರು ಅದರ ನವೀನತೆಯಿಂದ ಚಕಿತರಾಗುತ್ತಾರೆ. ದೇವತಾ ಪ್ರಾರ್ಥನೆ, ಗುರುಸ್ತುತಿ, ಕುಕವಿನಿಂದೆ, ಆತ್ಮಸ್ತುತಿ ಇದು ಯಾವುದೂ ಇಲ್ಲದೆ ಮಳೆಗಾಲದ ವರ್ಣನೆಯ ಸ್ವತಂತ್ರ ರೂಪಕದಲ್ಲಿ ಮೊದಲಾಗುವ ಈ ಗದ್ಯಕಾವ್ಯ ಕ್ರಾಂತಿಕಾರಕವೆಂದು ತೋರುತ್ತದೆ. ಮುದ್ದಣ-ಮನೋರಮೆಯರ ಸಂವಾದವು ಆಮೇಲೆ ನಗೆಯ ತೆರೆ ತೆರೆಗಳನ್ನು ಎಬ್ಬಿಸಲು ಕವಿಯ ಬಗ್ಗೆ ಹೆಮ್ಮೆ ಇನ್ನೂ ಹೆಚ್ಚುತ್ತದೆ. ಶೈಲಿಯೆಲ್ಲ ಹಳೆಯದಾದರೂ ಮುದ್ದಣನು ಹೊಸ ಮಂತ್ರವನ್ನು ಅರಿತ ಮಾಂತ್ರಿಕನಾಗಿದ್ದನೆಂದು 'ರಾಮಾಶ್ವಮೇಧ'ದ ಈ ಭಾಗವು ಸಾರುತ್ತದೆ. ಮುಂದೆಯೂ ಈ ದಂಪತಿಗಳ ಸಂಭಾಷಣೆಗಳು ಬಂದಲ್ಲೆಲ್ಲ ಮೋಹಕವಾಗಿವೆ. ಪೌರಾಣಿಕ ಕಥಾನಕಕ್ಕೆ ಮುದ್ದಣನು ಕೊಟ್ಟ ಈ ಪರಿವೇಷವನ್ನು ನೋಡಿದರೆ ನಿಜವಾಗಿಯೂ ಕನ್ನಡ ಕಾವ್ಯ ಸೃಷ್ಟಿಗೆ ಅಚ್ಚ ಹೊಸಬರಾದ ರಸಿಕ ದಂಪತಿಗಳನ್ನು ಕವಿ ಮತ್ತು ಪಾಠಕಿಯರನ್ನಾಗಿ ನಿರ್ಮಿಸಿ ಮುದ್ದಣನು ಕತೆಯಲ್ಲಿ ಹೊಸ ಜೀವನವನ್ನು ತುಂಬಿರುವನೆಂದು ತೋರುತ್ತದೆ. ಆದರೆ ಕತೆಯ ಉದ್ದಳತೆಯಲ್ಲಿ ಇದರ ಆಳವು ತೀರ ಕಡಿಮೆಯಾಗಿರುವಾಗ, ಮುಖ್ಯ ಕಥೆಯ ಕಲೆ ಸಾಂಪ್ರದಾಯಿಕವಾಗಿ ಸಾಮಾನ್ಯ ಕೌಶಲದಿಂದ ಕೂಡಿರುವಾಗ, ಇಡಿಯ ಕಥಾರಚನೆ ಗುಣಪೂರ್ಣವೆಂದಾಗಲಿ ಉಜ್ವಲವೆಂದಾಗಲಿ ಹೇಳುವುದು ಸಾಧ್ಯವಿಲ್ಲ. ಪಾತ್ರ ದೃಷ್ಟಿಯಿಂದ ಕಥೋಪಕಥೆಗಳ

ಓಟದಲ್ಲಿ ವ್ಯಕ್ತಿಗಳನ್ನು ಕಡಿಕಡಿದು ಚಿತ್ರಿಸುವ ಪುರಾಣ ವೃತ್ತಿ ಬಹುಭಾಗದಲ್ಲಿ ತೋರಿದೆಯಾದರೂ ರಾಮ–ಸೀತೆ, ಮುದ್ದಣ–ಮನೋರಮೆ ಈ ಹಳೆಯ ಹಾಗೂ ಹೊಸ ಆದರ್ಶ ದಂಪತಿಗಳ ವಿಷಯದಲ್ಲಿ ಕವಿ ಒಂದು ಪಾತ್ರ ಕಲ್ಪನೆಯನ್ನು ಪೂರ್ಣಗೊಳಿಸಲು ಪ್ರಯತ್ನಿಸಿರುವನು. ರಾಮನ ಪಾತ್ರ ನಿರ್ಮಾಣವು ಮಾತ್ರ ತುಂಬ ವಾದಗ್ರಸ್ತವಾಗಿದೆ. ಸೀತಾಪರಿತ್ಯಾಗದ ಸಂದರ್ಭದಲ್ಲಿ ಅವನನ್ನು ಸಮರ್ಥಿಸುವುದು ಯಾವ ಕವಿಗೂ ಕಷ್ಟ. ಮುದ್ದಣನು ಅವನಲ್ಲಿ ಮುಕ್ಕಿದ ವಿಕಾರವಶತೆಯನ್ನೂ ಸಲ್ಲದ ನಿಷ್ಠುರತೆಯನ್ನೂ ಆರೋಪಿಸಿ ಅವನಿಗೂ ಸೀತೆಗೂ ಕೂಡಿಯೆ ಅನ್ಯಾಯ ಮಾಡಿದ್ದಾನೆ. ಅಲ್ಲದೆ ರಾಮನು ಒಮ್ಮೆ ದೇವ ಮತ್ತೊಮ್ಮೆ ಮಾನವನಾಗಿ ಅಸ್ಥಿರವಾದ ಅಸಂಗತವಾದ ವ್ಯಕ್ತಿತ್ವವನ್ನು ತೋರುತ್ತಾನೆ. ಸೀತೆಯ ಸ್ವಭಾವ ಚಿತ್ರವು ಮಾತ್ರ ಇಲ್ಲಿ ಬಂದಿರುವಷ್ಟು ಸಮರ್ಪಕವಾಗಿದೆ.

'ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ ರಸಮೊಸರೆ ಲಕ್ಕಣಂ ಮಿಕ್ಕಿರೆ ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ' ಎಂದು ಮುದ್ದಣನು ತನ್ನ ಹೃದ್ಯವಾದ ಗದ್ಯ ಶೈಲಿಯ ಆದರ್ಶವನ್ನು ಸಾರಿದ್ದಾನೆ. ಈ ತಿರುಳ್ಗನ್ನಡವು ಅವನಿಗೆ ಬಹುಮಟ್ಟಿಗೆ ಸಾಧಿಸಿದೆ. ಆದರೂ ನಿಷ್ಕಾರಣವಾದ ಸಂಸ್ಕೃತ, ಕ್ಲಿಷ್ಟವಾದ ಕನ್ನಡ ಇವುಗಳಿಂದ ಅವನಿಗೆ ಒಂದೇ ಸಮನಾದ ಸಿದ್ಧಿ ದೊರೆತಿಲ್ಲ. 'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು' ಎಂಬ ಶ್ರೀ ಎಸ್. ವಿ. ರಂಗಣ್ಣನವರ ತೀರ್ಮಾನವು 'ರಾಮಾಶ್ವಮೇಧ'ಕ್ಕೆ ಒಟ್ಟಿನಲ್ಲಿ ಸರಿ ಹೋಗುತ್ತದೆ. ಆದರೆ ಸಾಮಾನ್ಯ ಚಿತ್ರದಲ್ಲಿಯೂ ಅಲ್ಲಲ್ಲಿ ಮಿನುಗುತ್ತಿರುವ ಸುವರ್ಣದ ಗೆರೆಗಳನ್ನು ನೋಡಿ ನಾವು ಮುಗ್ಧರಾಗಬೇಕು.

ಮುದ್ದಣನು ಮಹಾಕವಿಯೇ ? ಎಂಬ ಪ್ರಶ್ನೆಗೆ ಉತ್ತರಗಳು ಒಂದೇ ರೀತಿಯಾಗಿಲ್ಲ. 'ರಾಮಾಶ್ವಮೇಧ'ದಲ್ಲಿಯ ಸಮಯ ಸ್ವತಂತ್ರವಾದ ವರ್ಷಾರಂಭ ಚಿತ್ರದಲ್ಲಿಯ ಕಲ್ಪನಾ ವೈಭವ, ಕನ್ನಡಕ್ಕೆ ನವೋನವವಾದ ಮುದ್ದಣ–ಮನೋರಮೆಯರ ಸಂವಾದ ಪರಿವೇಷ, ಅಲ್ಲಲ್ಲಿ ಅನೂನವಾಗಿ ಸಹಜ ಲೀಲೆಯಿಂದ ಸೊಲ್ಲುವ ತಿರುಳ್ಗನ್ನಡ ಇವು ಮಹಾಕವಿ ಯೋಗ್ಯವಾಗಿವೆ. ಅವನಲ್ಲಿ ಮಹಾಕವಿಯ ಅಂಶವಿದೆಯಾದರೂ ಒಟ್ಟಿನಲ್ಲಿ ಅವನು ಸತ್ಕವಿಯಾಗಿ ತನ್ನ ಕೃತಿಗಳಲ್ಲಿ ತೋರಿದ್ದಾನೆ. ಅವನ ಅಲ್ಪಾಯುಷಿಯಾದ ಬಾಳಿನಲ್ಲಿ, ದಿನ ದಿನದ ಜೀವನ ಕಲಹದಲ್ಲಿ ಅವನು ಈ ನೆಲೆಯನ್ನು ಮುಟ್ಟಿ ಮೆರೆದದ್ದು ಸೋಜಿಗವೇ ಸರಿ.

---

ಕೃಪೆ – ಕನ್ನಡ ಸಾಹಿತ್ಯ ಚರಿತ್ರೆ

*****

# ಮುದ್ದಣ

## ಪ್ರೊ. ಎಂ. ಮರಿಯಪ್ಪ ಭಟ್ಟ

ಗದ್ಯ ಸುಖಕ್ಕೆ ಮನಸೋತು 'ಪದ್ಯಂ ವಧ್ಯಂ, ಗದ್ಯಂ ಹೃದ್ಯಂ, ಹೃದ್ಯವಪ್ಪ ಗದ್ಯದೊಳೆ ಪೇಳ್ವುದು' ಎಂಬುದಾಗಿ ಪಣತೊಟ್ಟು ಮುದ್ದಣನು 'ಶ್ರೀ ರಾಮಾಶ್ವಮೇಧ'ವೆಂಬ ಹಳಗನ್ನಡ ಗದ್ಯ ಕಾವ್ಯವನ್ನು ರಚಿಸಿದನು. ಇದು ಈ ಶತಮಾನದ ಆದಿಯಲ್ಲಿ ಹುಟ್ಟಿದ ಗ್ರಂಥ. ಪ್ರಸ್ತುತಕ್ಕೆ ಹಳಗನ್ನಡ ಗದ್ಯಾಶ್ರಮ ಗುರುತರ ಕೃತಿಗಳಲ್ಲಿ ಇದು ಕೊನೆಯ ರಚನೆಯೆನ್ನಬಹುದು. ಕಾಲಾವಧಿಯಲ್ಲಿ ಕೊನೆಯದಾದರೂ ಕೃತಿಯ ಬೆಲೆ ಕಿರಿದಲ್ಲ.

ಮುದ್ದಣನ ನಿಜವಾದ ಹೆಸರು ಲಕ್ಷ್ಮೀನಾರಾಯಣನೆಂದು, ೧೮೭೦ರಲ್ಲಿ ಉಡುಪಿಯ ನಂದಳಿಕೆ ಗ್ರಾಮದಲ್ಲಿ ಬಡ ಕುಟುಂಬದಲ್ಲಿ ಜನಿಸಿದನು. ಸರಸ್ವತಿಯ ಕೃಪಾಕಟಾಕ್ಷಕ್ಕೆ ಪಾತ್ರನಾದ ಈ ಕವಿಯು ಬಡವನಾಗಿಯೇ ಬಾಳಿ ಬಡವನಾಗಿಯೂ ರೋಗಗ್ರಸ್ತನಾಗಿಯೂ ತನ್ನ ೩೧ನೆಯ ವಯಸ್ಸಿನಲ್ಲಿ ಅಕಾಲ ಮರಣಕ್ಕೆ ತುತ್ತಾದನು. ಪ್ರತಿಕೂಲ ಪರಿಸ್ಥಿತಿಯಿಂದ ಹೇಳುವಂಥ ವಿದ್ಯಾಭ್ಯಾಸ ಶಾಲೆ ಕಾಲೇಜುಗಳಲ್ಲಿ ಲಭಿಸಲಿಲ್ಲ. ಸ್ವತಃ ಪ್ರತಿಭಾಶಾಲಿ; ಸ್ವಪ್ರಯತ್ನದಿಂದಲೇ ಪಾಂಡಿತ್ಯ ಗಳಿಸಿದನು. ಜೀವನಕ್ಕೆ ವ್ಯಾಯಾಮ ಶಿಕ್ಷಕನಾಗಿ ದುಡಿದನು. ಕಡಿಮೆ ಸಂಬಳದ – ಕನ್ನಡ ಸಾಹಿತ್ಯಕ್ಕೆ ಯಾವ ಸಂಬಂಧವೂ ಇಲ್ಲದ ಉದ್ಯೋಗದಲ್ಲಿರುತ್ತಾ ಕನ್ನಡ ದೀಕ್ಷೆಯನ್ನು ಕೈಕೊಂಡನು. ಆರಂಭದಲ್ಲಿ ಯಕ್ಷಗಾನ ಪ್ರಸಂಗ ರಚನೆಯಲ್ಲಿ ಪ್ರಯೋಗ ನಡೆಸಿದನು. 'ಅದ್ಭುತ ರಾಮಾಯಣ'ವೆಂಬ ಉತ್ತರಕಾಂಡ ರಾಮಾಯಣದ ಕಥಾ ವಸ್ತುವನ್ನೊಳಗೊಂಡ ಗದ್ಯ ಕೃತಿಯನ್ನು ಹಳಗನ್ನಡದಲ್ಲಿ ಬರೆದನು. ಇದರಲ್ಲಿ ಮತ್ತಿನ 'ಶ್ರೀ ರಾಮಾಶ್ವಮೇಧ'ದ ಪಕ್ವತೆ ಕಂಡುಬರುವುದಿಲ್ಲ; ಆದರೂ ಸರಳ ಸುಂದರವಾಗಿದೆ. 'ಶ್ರೀರಾಮ ಪಟ್ಟಾಭಿಷೇಕ'ವೆಂಬೊಂದು ಖಂಡಕಾವ್ಯವನ್ನು (ಶೇಷ ರಾಮಾಯಣದ ಆಧಾರದ ಮೇಲೆ) ಷಟ್ಪದಿಯಲ್ಲಿ ಬರೆದನು. ಇಷ್ಟಕ್ಕೆ ಮುದ್ದಣನು ಚಿರಸ್ಮರಣೀಯನಾಗುತ್ತಿದ್ದಿಲ್ಲ; ಆತನ ಶ್ರೀರಾಮಾಶ್ವಮೇಧವು ಹಳಗನ್ನಡದ ಗದ್ಯ ವಾಙ್ಮಯಕ್ಕೆ ಒಂದು ಅಪೂರ್ವ ಕಾಣಿಕೆಯಾಗಿ ಸಂದಿತು; ಇದರಿಂದ ಹಳಗನ್ನಡ ಗದ್ಯಾಶ್ರಮದಲ್ಲಿ ಮುದ್ದಣನಿಗೂ ಒಂದು ಭದ್ರವಾದ ಸ್ಥಾನವೇರ್ಪಟ್ಟಿತು.

ಶ್ರೀರಾಮಾಶ್ವಮೇಧದ ಧಾಟಿ ಹಳೆಯದಾದರೂ, ಕೆಲವು ಹೊಸ ಮಟ್ಟುಗಳನ್ನು ಈತನು ತಂದನು. ಕಥಾ ನಿರೂಪಣೆಯಲ್ಲಿ ಒಂದು ನವೀನತೆಯನ್ನು

ಇವನು ತೋರಿಸಿರುವನು. ಕಥಾಮುಖವನ್ನು ನವೀನ ರೀತಿಯಲ್ಲಿ ಪ್ರಾರಂಭಿಸಿರುವನು : "ಓವೋ ಕಾಲಪುರುಷಂಗೆ ಗುಣಮಣಮಿಲ್ಲಂ ಗಡ; ನಿಸ್ತೇಜಂ ಗಡ ! ಒಡಲೊಳ್ ಗುಡುಗುಟ್ಟುಂಗುಂ ಗಡ ! ಏನರಮನೆ ವಾಗಿಲಂ ಮುಗಿಲ್ದೆರೆಯಿಂ ಬಾಸಣಿಸಿರ್ಪರ್...ಸುಗ್ಗಿಯೊಳುಂಡುದಂ ಕಾರೊಳ್ ಕಾಱುವ ನಕ್ಕುಂ." ಇಲ್ಲಿ ಪುರಾಣ ಸಂಪ್ರದಾಯವನ್ನು ತೀರ ಬಿಟ್ಟು ಹೊಸ ಮಟ್ಟನ್ನು ಹಾಕಿದ್ದಾನೆ. ಗ್ರಂಥದ ಉದ್ದಕ್ಕೂ – ಕಥೆಯ ಓಟ ಕುಂಟುವಲ್ಲಿ – ಸಂಧರ್ಭೋಚಿತವಾದ ಮುದ್ದಣ ಮನೋರಮೆಯರ ಸ್ವಾರಸ್ಯವಾದ ಸಂವಾದಗಳು ಬಂದು ಕಥೆಯ ನೀರಸತೆಯನ್ನು ಹೋಗಲಾಡಿಸಿ ಓದುಗರನ್ನು ರಸದೋಕುಳಿಯಲ್ಲಿ ಬಿಡುವುವು. ಮತ್ತೆ ನವಸ್ಫೂರ್ತಿಯಿಂದ ಕಥೆ ಸಾಗುವುದು. ಈ ಸಂವಾದಗಳಲ್ಲಿ ತಿಳಿಯಾದ ಹಾಸ್ಯದ ಹೊನಲೇ ಹೆಚ್ಚಾಗಿ ಹರಿಯುವುದು. ಈತನು ವರ್ಣನೆಗಳನ್ನು ಚೆನ್ನಾಗಿ ಮಾಡಿದ್ದಾನೆ. ಈತನ ಮಾತುಗಳಲ್ಲಿ ಉಕ್ತಿ ಗೌರವ ಅರ್ಥ ಚಮತ್ಕಾರಗಳನ್ನು ಕಾಣುತ್ತೇವೆ. ಪಾತ್ರ ನಿರ್ಮಾಣದಲ್ಲಿ ಯಶಸ್ವಿಯಾದಷ್ಟು ಸನ್ನಿವೇಶ ರಚನೆಯಲ್ಲಿ ಆಗಲಿಲ್ಲ. ಸನ್ನಿವೇಶ ರಚನೆ ಅಷ್ಟು ಸುಂದರವಾಗದಿದ್ದುದಕ್ಕೆ ಆತನು ಅನುಸರಿಸಿದ ಮೂಲವೂ ಸ್ವಲ್ಪ ಮಟ್ಟಿಗೆ ಕಾರಣವಾಗಿರಬಹುದು. ಯಾವ ಕಾರಣದಿಂದಲೋ ಆತನು ವಾಲ್ಮೀಕಿ ರಾಮಾಯಣದ ಉತ್ತರಕಾಂಡದಲ್ಲಿ ಹೇಳಲ್ಪಟ್ಟ ರಾಮಾಶ್ವಮೇಧ ಕಥೆಯನ್ನು ಅನುಸರಿಸದೆ ಪದ್ಮಪುರಾಣದೊಳಗಿನ ಕಥೆಯನ್ನು ಅನುಸರಿಸಿರುವನು. ಆದುದರಿಂದ ಮಹಿಮಾ ನಿರ್ಮಾಣಕ್ಕಾಗಿ ಸನ್ನಿವೇಶಗಳಲ್ಲಿ ಸಹಜತೆ ದೂರವಾಗುವುದು ಅನಿವಾರ್ಯವಾಯಿತೆನ್ನಬಹುದು. ಅಶ್ವಮೇಧದ ಕುದುರೆಯ ಪರ್ಯಟನದಂತೆ ಕಥೆಯೂ ಎಲ್ಲೆಲ್ಲೋ ಕವಲು ಕವಲಾಗಿ ಗೊತ್ತು ಗುರಿಯಿಲ್ಲದೆ ಹೋಗುತ್ತಾ ಒಮ್ಮೊಮ್ಮೆ ಬೇಸರಿಕೆಯನ್ನುಂಟು ಮಾಡುವುದು.

ಮುದ್ದಣನು ಚಿತ್ರಿಸಿದ ರಾಮನು ಸ್ವಲ್ಪ ಕಾಂತಿಹೀನನೆಂದೇ ಹೇಳಬೇಕು. ಮನೋರಮೆಯ ಮುಖಾಂತರ ರಾಮನನ್ನು ಒಮ್ಮೊಮ್ಮೆ ಸರಿಯಾಗಿ ಹಂಗಿಸಿ ಬಿಡುವನು. ಮುದ್ದಣನು "ಸಾಕೇತ ನಗರದೊಳ್ ಸೀತಾ ರಾಮಂ ತನ್ನ ಬಿರ್ದಿನ..." ಎನ್ನುವಾಗ ಮನೋರಮೆ ನಡುವೆ ಬಾಯಿ ಹಾಕಿ, "ನಲ್ಲ, ಏ ಮಾತೊ ? ಸೀತೆಯೆನುಂತುಟಿದುಮೇತಱ ಸೀತಾ ರಾಮಂ. ಪೋಮಾಣ್, ಅವಂಗಿನ್ನೆತ್ತಣಸೀತೆ, ಅಪ್ಪೊಡಿನ್ನಾ ಕಲ್ಲೆರ್ದೆಯಂ ರಾಮನೊ ಭೀಮನೊ ಏನ್ ?" ಎಂದು ಮುಂತಾಗಿ ಸಂವಾದಿಸಿ ಸೀತೆಯ ಪಕ್ಷವನ್ನು ವಹಿಸುವುದು ಬಹಳ ಸ್ವಾರಸ್ಯವಾದರೂ ಸೀತಾರಾಮನ ಕಾಂತಿ ಕುಂದುವುದು. ಸೀತಾ ಪರಿತ್ಯಾಗಕ್ಕೆ ಮುಂಚಿತವಾಗಿ 'ಸೀತೆಗೆ ನೀರ್‌ನಿಂದು ದಿನಕ್ರಮದಿಂ ಬಸಿಱ್ ಬಳೆಯುವುದಕ್ಕೆ' ಮುಂಚಿತವಾಗಿ ಮಕ್ಕಳ ಬಯಕೆಯಿಂದ ಜಾನಕಿಯು ಸಖಿ ಚಂದ್ರಮತಿಯೊಡನೆ ಆಡಿದ ಮಾತುಗಳು ಬಹಳ ಮನೋಹರವಾಗಿ ಸೀತೆಯ ಚಿತ್ರಕ್ಕೆ ಸ್ತ್ರೀ ಸಹಜ ಶೋಭೆಯನ್ನು ಕೊಟ್ಟಿವೆ. "ಇಲ್ಲಿನ ಪಾತ್ರಗಳಲ್ಲೆಲ್ಲಾ ಲಕ್ಷ್ಮಣನ ಪಾತ್ರವೇ ಅತ್ಯಂತ ಸುಂದರವಾಗಿ ಚಿತ್ರಿತವಾಗಿರುವುದು. ಆತನ ನಡವಳಿಕೆಯನ್ನು ಕಂಡು ನಾವು ಆರ್ದ್ರ ಹೃದಯರಾಗಿ

ಆತನನ್ನು ಬಾಯ್ತುಂಬ ಹೊಗಳಬೇಕೆಂದುಕೊಳ್ಳುತ್ತೇವೆ" ರಾಮನ ಆಜ್ಞಾ ನಿರ್ವಹಣೆಯನ್ನು ಮಾಡಬೇಕಾದರೆ ಅವನು ಪಡುವ ಮನೋವೇದನೆ ವರ್ಣನಾತೀತವಾಗಿದೆ. ಏನೊಂದೂ ಶಂಕಿಸದ ಸೀತಾಮಾತೆಯೊಡನೆ ಅವನು ದಾರುಣ ವಾರ್ತೆಯನ್ನುಸಿರಿದುದು ಅವನ ಅವಸಾನವನ್ನೇ ಉಸಿರಿದಂತೆ ಭಾಸವಾಗುವುದು. 'ಇಂತು ಲಕ್ಷ್ಮಣಂ ಪಾಷಾಣಕಠಿನ ಹೃದಯನಾದನ್ಯಸೆ ಎಂತುಂ ಕುಱು ಪೋದುದೆ, ಮಮ್ಮಲ ಮಱುಗಿದಂ, ನೊಂದಂ ಬೇಂದಂ' ಮುಂದೆ ಸೀತೆ "ಬಿಱುಗಾಳಿಂಬು ಪೋೞಯಿಗರೆವುಱಿದು ಬಾಡುವ ಕಪ್ಪುರ ವಾಟೆಯಂತೆ...ಹಮ್ಮೈದಂಬೋದಳ್"...ಇತ್ಯಾದಿ ವರ್ಣನೆಯಲ್ಲಿ ಲಕ್ಷ್ಮಣನ ಮನಸ್ಸಿನೊಳಗಣ ಹೊಯ್ದಾಟವು ಬಹಳ ಮನೋಹರವಾಗಿ ಚಿತ್ರಿತವಾಗಿದೆ. ಇಲ್ಲಿ ಮುದ್ದಣನು ಲಕ್ಷ್ಮೀಶನ ಭಾವನೆಗಳನ್ನು ಇಡಿ ಇಡಿಯಾಗಿ ಉಪಯೋಗಿಸಿಕೊಂಡಿರುವುದನ್ನು ಕಾಣಬಹುದು. (ಉದಾ : ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿಮುರಿದಿಳೆಗೊರಗುವಂತೆ, ಲಕ್ಷ್ಮಣನ ಮಾತು ಕಿವಿದೆರೆಗೆ ಬೀಳದ ಮುನ್ನಹಮ್ಮೈಸಿ ಬಿದ್ದಳಂಗನೆ ಧರೆಗೆ ನಡುನಡುಗುತೆ ಇತ್ಯಾದಿ) ಆದರೆ ಎಲ್ಲವನ್ನೂ ತನ್ನದೇ ಆದ ಹೃದ್ಯವಾದ ಗದ್ಯದಲ್ಲಿ ಹೇಳುವುದು ಚೆನ್ನ.

'ರಾಮಾಶ್ವಮೇಧ'ವು ಅಷ್ಟು ಹೃದ್ಯವಾಗುವುದಕ್ಕೆ ಪ್ರಬಲವಾದ ಕಾರಣ ಅದರೊಳಗಣ ಕಥಾವಸ್ತುವಲ್ಲ; ಅದರೊಳಗೆ ಆದಿಯಿಂದ ಅಂತ್ಯದವರೆಗೂ ಅಲ್ಲಲ್ಲಿ ಬರುವ ಮುದ್ದಣ ಮನೋರಮೆಯರ ಸಂಭಾಷಣೆ. ಅಂಥ ರಸಿಕತೆಯ ಸಾಹಿತ್ಯ ರಚನೆ ಕನ್ನಡ ಸಾಹಿತ್ಯದಲ್ಲಿ ಅದೇ ಮೊದಲು. ಈ ರಸಿಕ ದಂಪತಿಗಳ ಮಾತು ಮೊದಲಾಯಿತೆಂದರೆ, ವಾತಾವರಣವೇ ವಿದ್ಯುನ್ಮಯವಾಗುವುದು. ಅವರ ಮಾತೇ ಮುಂದುವರಿಯುತ್ತಿರಲಿ, ಕಥೆಯೇಕೆ ಎಂಬಂತಿದೆ. ಒಂದು ಉದಾಹರಣೆಯಿಂದ ತೃಪ್ತಿ ಪಡೋಣ.

ಅರಣ್ಯಕ ಆತಿಥ್ಯವನ್ನು ವರ್ಣಿಸಿದ ಮುದ್ದಣನೊಡನೆ, ಮಡದಿ ಮನೋರಮೆ ಕೇಳುವುದು – ಎನ್ನ ಚೆನ್ನಿಗ ! ಆತಿಥ್ಯಮೆಂದೊಡೇಂ, ಬಱಿದೆ ಬಾಯುಪಚಾರಮೆ ?

ಮುದ್ದಣ – ಅನಿಬರುಮಂ ಯಥೇಚ್ಛಂ ಮೃಷ್ಟಾನ್ನ ಭೋಜನದಿಂ ತಣಿಪಿದಂ.

ಮನೋರಮೆ – ಎನಗಿದಚ್ಚರಿ, ಎಂತುಟಾರ್ತಂ.

ಮುದ್ದಣ – ಏಂ ಮುನಿಗಳೊಂದು ಜಪದ ಮಂತ್ರದ ಬಲ್ಮೆಯೇಂ ಕಿಱಿದೇ ? ಬೇಡಿದ ಪುರುಳನುಱಿದಿಂ ತಂದೀಗುಂ.

ಮನೋರಮೆ – ಅಂತುಟೇಂ ಗನಂ ! ಆವುದೋ ಮಂತ್ರಂ ?

ಮುದ್ದಣ – ಆವುದೇಂ ? ಏಕಾಕ್ಷರಿ, ದ್ವ್ಯಕ್ಷರಿ, ತ್ರ್ಯಕ್ಷರಿ, ಚತುರಾಕ್ಷರಿ, ಪಂಚಾಕ್ಷರಿ, ಷಡಕ್ಷರಿ, ಮುಂತಪ್ಪ ಪ್ರಸಿದ್ಧ ಮಂತ್ರಂಗಳೊಳವಲ್ತೆ.

ಮನೋರಮೆ – ಅಂತದಿರ್ಕೆ, ನಿನ್ನನ್ನರಪ್ಪ ಕಬ್ಬಿಗರ್ ಮನೆವಾಳ್ತಿಯೊಳಿನಿ ಸೊಂದುಂ ಗೊಡವೆಗೊಳ್ಳದೆ ಕೆಮ್ಮ ಕೆಮ್ಮನೆ ಪಾಟ್ಗಿತೆಯ ಕಬ್ಬದೊಳೇ ವೊಱ್ತುಂ ಬೆಮಗೊಂಡಿರ್ಪರಲೇ. ಅವರ್ಗೇಂ ಬಟ್ಟೆಯೋ ? ಉಣಲೇಂ ತಿನಲೇಂ ? ಅಂತಿರಲೊಂದು ಜಪಮಂ ಪಿರಿಯದವಸಿಗಳತ್ತಣಿನುಪದೇಶಂ ಗೊಂಡೊಡಾಗದೆ ?

ಮುದ್ದಣ – (ಮುಗುಳ್ನಗೆಯಿಂ) – ಏಂ, ಎಮ್ಮವರೊಂದಿರವಿಂಗೆ ನಗುವಾ ? ಆಃ ; ಎಮ್ಮನ್ನರಪ್ಪ ಕಬ್ಬಿಗರ್ಗೇಂ ಕೊಱತೆಯೊ.

ಎಂದು ಬಹಳ ಸ್ವಾರಸ್ಯವಾಗಿ ಈ ದಂಪತಿಗಳು ಮುಂದುವರಿಯುತ್ತಾರೆ. ಕೊನೆಗೆ ಮನೋರಮೆಯಿಂದ ಎಷ್ಟೆಷ್ಟೋ ಆಣೆ ಹಾಕಿಸಿ "ಭವತಿ ಭಿಕ್ಷಾಂದೇಹಿ" ಎಂಬ ಸಪ್ತಾಕ್ಷರೀ ಮಂತ್ರವೇ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಮಹಾ ಮಂತ್ರ ಎಂದು ಮುದ್ದಣನು ಹೇಳುತ್ತಾನೆ. ಇದನ್ನು ಹೇಳುವಲ್ಲಿ ಕವಿಯು ತನ್ನ ದಾರಿದ್ರ್ಯಾವಸ್ಥೆಯನ್ನು ತೋಡಿಕೊಂಡಿರುವನೆಂಬುದು ನಿಸ್ಸಂದೇಹ.

---

ಕೃಪೆ – ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ

*****

# ಮುದ್ದಣ ಕೃತಿ ವಿಮರ್ಶೆ

## ಕೀರ್ತಿನಾಥ ಕುರ್ತಕೋಟಿ

ಹತ್ತೊಂಬತ್ತನೆಯ ಶತಮಾನದಲ್ಲಿ ಹುಟ್ಟಿ, ಇಪ್ಪತ್ತನೆಯ ಶತಮಾನದ ಕೆಲವು ವರ್ಷಗಳನ್ನು ಕಳೆದು, ಒಂದು ದೃಷ್ಟಿಯಿಂದ ಅಜ್ಞಾತವಾಗಿದ್ದ ಮುದ್ದಣನ ಕೃತಿಗಳ ಶೋಧ, ಅದರಿಂದುಂಟಾದ ಅಚ್ಚರಿಯ ಕೋಲಾಹಲ, ಆ ಕೃತಿಗಳಿಗೆ ವಿಮರ್ಶಕರು ತೋರಿಸಿರುವ ಭಿನ್ನ ಪ್ರತಿಕ್ರಿಯೆಗಳು, ಮುದ್ದಣನ ಜೀವನದ ಬಗ್ಗೆ ಮತ್ತು ಅವನ ಸಾಹಿತ್ಯದ ಬಗ್ಗೆ ವಿದ್ವಾಂಸರು ತಳೆದಿರುವ ಆಸಕ್ತಿ – ಇವೆಲ್ಲವುಗಳ ಇತಿಹಾಸ ಮನೋರಂಜಕವಾಗಿದೆ. ಮುದ್ದಣ ಹಾಗೆ ಅಲಕ್ಷಿತ ಕವಿಯೇನೂ ಅಲ್ಲ. ಅವನ ಕೃತಿಗಳ ಅಭ್ಯಾಸ ವಿವರವಾಗಿದೆಯಲ್ಲದೆ ಆಳವೂ ಆಗಿದೆ. ವಿಮರ್ಶಕರು ಮುದ್ದಣನ ಕೃತಿಗಳನ್ನು ಪರಿಶೀಲಿಸಿ, ಪರೀಕ್ಷಿಸಿ ಕೆಲವು ವೈಶಿಷ್ಟ್ಯಗಳನ್ನು ಕಂಡು ಹಿಡಿದಿದ್ದಾರೆ, ಕೆಲವು ನಿರ್ಣಯಗಳಿಗೆ ಬಂದು ಮುಟ್ಟಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದು : ಮುದ್ದಣ ಆಧುನಿಕ ಸಾಹಿತ್ಯಕ್ಕೆ ಮೊದಲಿಗ; ಅವನು ಶ್ರೇಷ್ಠ ತರಗತಿಯ ಕತೆಗಾರ, ವರ್ಣನಾ ನಿಪುಣ; ಮುದ್ದಣನ ಹಾಸ್ಯ ಹಳೆಗನ್ನಡ ಸಾಹಿತ್ಯದಲ್ಲಿಯೇ ಅಪೂರ್ವವಾದದ್ದು; ಮುದ್ದಣನ ಗದ್ಯ ಶೈಲಿ ಅನನ್ಯವಾದದ್ದು ಇತ್ಯಾದಿ. ವಿಮರ್ಶಕರು ಗುರುತಿಸಿರುವ ಈ ವೈಶಿಷ್ಟ್ಯಗಳು ಬೆಲೆಯುಳ್ಳವಾಗಿವೆ. ಆದರೆ ಇವು 'ರಾಮಾಶ್ವಮೇಧಂ' ಕೃತಿಗೆ ಮಾತ್ರ ಸೀಮಿತವಾಗಿವೆ. ಅವನ ಗ್ರಂಥಗಳಲ್ಲಿ 'ರಾಮಾಶ್ವಮೇಧಂ' ಶ್ರೇಷ್ಠವಾದದ್ದೆಂಬ ಸಂಗತಿಯೇನೋ ನಿರ್ವಿವಾದವಾಗಿದೆ. ಆದರೆ ಈ ರೀತಿಯ ಅಭ್ಯಾಸ ಸಮಗ್ರವಾಗಿಲ್ಲವೆಂಬ ಮಾತೂ ಅಷ್ಟೇ ನಿಜವಾಗಿದೆ. ಮುದ್ದಣನಿಗೆ ಆರೋಪಿಸಿರುವ ಆಧುನಿಕತೆಯಲ್ಲಿ ಅವನ ಕಾವ್ಯವಸ್ತುವಿಗೆ ಸಂಬಂಧಿಸಿದ್ದೆಷ್ಟು ಮತ್ತು ಕಾಲಮಾನಕ್ಕೆ ಸಂಬಂಧಿಸಿದ್ದೆಷ್ಟು ಎಂಬ ಮಾತು ಇನ್ನೂ ನಿರ್ಣಯವಾಗಬೇಕಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಮುದ್ದಣನ ಕಾವ್ಯ ಪ್ರಯತ್ನದ ಮಹತ್ವವೇನು ಮತ್ತು ಅದರ ಬೆಲೆ ಎಷ್ಟೆಂಬ ಮಾತು ನಿರ್ಣಯವಾಗಬೇಕಾಗಿದೆ.

ಮುದ್ದಣ ರಚಿಸಿರುವ ಯಕ್ಷಗಾನ ಪ್ರಸಂಗಗಳನ್ನು ಬಿಟ್ಟರೆ ಅವನ ಪ್ರಮುಖ ಕೃತಿಗಳಲ್ಲಿ ಮೇಲುನೋಟಕ್ಕೆ ಕೆಲವು ಸಮಾನ ಲಕ್ಷಣಗಳು ಕಾಣ ಸಿಗುತ್ತವೆ. 'ಶ್ರೀರಾಮ ಪಟ್ಟಾಭಿಷೇಕಂ', 'ಅದ್ಭುತ ರಾಮಾಯಣ' ಮತ್ತು 'ರಾಮಾಶ್ವಮೇಧಂ' ಈ ಮೂರೂ ಕೃತಿಗಳ ಮೂಲದ್ರವ್ಯ ರಾಮಾಯಣದಿಂದ ಬಂದದ್ದು. ಅಲ್ಲದೆ ಈ ಮೂರೂ ಕೃತಿಗಳಲ್ಲಿ ಕವಿ ಕಾವ್ಯದ ಮಾಧ್ಯಮಕ್ಕಾಗಿ, ಅಭಿವ್ಯಕ್ತಿಯ ರೀತಿಗಾಗಿ

ತಡಕಾಡುತ್ತಿರುವದು ಸ್ಪಷ್ಟವಾಗಿದೆ. ಇವೆರಡೂ ಸಂಗತಿಗಳು ಸಂಪೂರ್ಣವಾಗಿ ವ್ಯಕ್ತಿಗತವಾದವುಗಳು. ಮುದ್ದಣನಿಗೆ ರಾಮಾಯಣದ ವಸ್ತುವೇ ಏಕೆ ಪ್ರಿಯವಾಯಿತು ಎಂದು ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಹೇಳುವದು ಬಿಗಿಯಾದ ಮಾತು. ಇನ್ನು ಅಭಿವ್ಯಕ್ತಿಯ ರೀತಿಯ ವಿಷಯವೂ ಹಾಗೆಯೇ. ಮುದ್ದಣ ಗದ್ಯದಿಂದ ಪದ್ಯಕ್ಕೆ ಹಾಸುಹೊಯ್ಯುತ್ತ ಕೊನೆಗೆ 'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂಬ ನಿರ್ಣಯಕ್ಕೆ ಬರುವ ಸಂಗತಿ ಕೂಡ ಅವನು ವ್ಯಕ್ತಿಗತವಾಗಿ ಪಡೆದಿರುವ ಸಿದ್ಧಿಯನ್ನು ಸೂಚಿಸುತ್ತದೆಯೇ ಹೊರತು ಸಾರ್ವತ್ರಿಕವಾದ ಸತ್ಯವನ್ನಲ್ಲ.

ಆದರೆ ಮುದ್ದಣನ ಈ ವೈಯಕ್ತಿಕ ಸಮಸ್ಯೆಗಳ ಮಹತ್ವವನ್ನರಿತರೆ ಅವನ ಕಾವ್ಯ ಪ್ರಯತ್ನದ ಮಹತ್ವವನ್ನೂ ತಿಳಿಯಬಹುದಾಗಿದೆ. ನಮ್ಮ ಪ್ರಾಚೀನ ಕವಿಗಳಲ್ಲಿ ಮುದ್ದಣನಂತೆ ಇಂಥ ಸಮಸ್ಯೆಯನ್ನೆದುರಿಸಿದವರು ಕ್ವಚಿತ್ತಾಗಿ ದೊರೆಯಬಹುದು. ಮುದ್ದಣ ಬದುಕಿದ್ದ ವಾತಾವರಣದಲ್ಲಿ ಆಯ್ಕೆಗೆ ಅವಕಾಶವಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಚೀನ ಕಾವ್ಯಪ್ರಿಯರಾದ ಪಂಡಿತರಿಗೇನೂ ಕೊರತೆಯಿರಲಿಲ್ಲ; ಅದರಂತೆಯೇ ಪಂಜೆಯವರಂಥ ಹೊಸ ವಿದ್ವಾಂಸರು ಹೊಸ ಕಾವ್ಯ ಮಾರ್ಗವನ್ನು ತೆರೆಯುವದರಲ್ಲಿದ್ದರು. ಮುದ್ದಣ ಹಳೆಯ ಕಾವ್ಯ ಸಂಪ್ರದಾಯಕ್ಕೆ ಮನಸೋತವನು. ಆದರೆ ಆಗಿನ ಕಾಲಕ್ಕೆ ಹಳೆಯ ಪರಂಪರೆಯೊಂದಿಗೆ ಜೀವಂತವಾಗಿ ಬೆಸೆದುಕೊಳ್ಳುವದೂ ಅಷ್ಟು ಸುಲಭವಾಗಿರಲಿಲ್ಲ. ಮುದ್ದಣ ಪ್ರಯತ್ನ ಪೂರ್ವಕವಾಗಿ ಹಳೆಯ ಸಂಪ್ರದಾಯದ ಕಟ್ಟುಪಾಡುಗಳನ್ನು, ಭಾಷೆಯನ್ನು, ಅದರ ಹಿಂದಿನ ಜೀವನ ಮೌಲ್ಯಗಳನ್ನು ತನ್ನದಾಗಿಸಿಕೊಳ್ಳಬೇಕಾಯಿತು. ಅವನ ಕೃತಿ ರಚನೆಯಲ್ಲಿ ಪ್ರಾಚೀನ ಕಾವ್ಯ ಮಾರ್ಗದ ಜೀರ್ಣೋದ್ಧಾರ ಕಾಣುವದಿಲ್ಲ. ಪ್ರಾಚೀನ ಪರಂಪರೆಗೆ ತಕ್ಕಂತೆ ತನ್ನನ್ನೇ ಪುನರ್ನಿರ್ಮಿಸಿಕೊಂಡ ಕವಿ ಮುದ್ದಣ. ಅವನ ಗದ್ಯ ಪದ್ಯಗಳನ್ನು ಈ ದೃಷ್ಟಿಯಿಂದ ಪರೀಕ್ಷಿಸಿದಾಗ ಅವನ ಪ್ರಯತ್ನದಲ್ಲಿಯ ಆಯಾಸವೆಲ್ಲ ಸ್ಪಷ್ಟವಾಗಿ ಗೋಚರಿಸುತ್ತದೆ.

'ಅದ್ಭುತ ರಾಮಾಯಣ' ಮುದ್ದಣ ಬರೆದಿರಬಹುದಾದ ಪ್ರಥಮ ಕೃತಿ ಎಂದು ವಿಮರ್ಶಕರ ಅಭಿಪ್ರಾಯವಿದೆಯಾದರೂ, 'ಶ್ರೀರಾಮ ಪಟ್ಟಾಭಿಷೇಕಂ'ದಿಂದ ಅವನ ಅಭ್ಯಾಸವನ್ನು ಪ್ರಾರಂಭಿಸುವದು ಒಳ್ಳೆಯದು. ಅವನ ಕೃತಿಗಳಲ್ಲೆಲ್ಲ ಇದು ಚಿಕ್ಕದು, ಅಲ್ಲದೆ ಇದೊಂದೇ ಅವನ ಪದ್ಯಕೃತಿ. ಈ ಕವಿತೆಯ ವಸ್ತು ಬಹಳ ಸಣ್ಣದು, ರಾಮನ ಪಟ್ಟಾಭಿಷೇಕದ ವರ್ಣನೆ. ಮುದ್ದಣ ಆಧುನಿಕ ಕಾವ್ಯ ಮಾರ್ಗವನ್ನು ಅನುಸರಿಸಿದ್ದರೆ ಇದೊಂದು ಭಾವಗೀತವಾಗಬಹುದಾಗಿತ್ತು. ವಸ್ತು ಚಿಕ್ಕದಾಗಿದ್ದರೂ ಕವಿ ಅದನ್ನು ಐದು ಸಂಧಿಗಳಲ್ಲಿ ವಿಸ್ತರಿಸಿ ಬರೆದಿದ್ದಾನೆ. ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿರುವ ಈ ಕವಿತೆಗೆ ಆದರ್ಶ 'ಲಕ್ಷ್ಮೀಶನ ಜೈಮಿನಿ ಭಾರತ'. ಭಾಷೆಯ ಉಪಯೋಗದಲ್ಲಿ ಕಥನ ರೀತಿಯಲ್ಲಿ, ವರ್ಣನೆಯ ಶೈಲಿಯಲ್ಲಿ, ಅಲಂಕಾರ ಯೋಜನೆಯಲ್ಲಿ ಲಕ್ಷ್ಮೀಶನ ತದ್ರೂಪ ಅನುಕರಣ ಹೆಜ್ಜೆ ಹೆಜ್ಜೆಗೂ ಕಾಣುತ್ತದೆ. ಆದರೆ ಆಧುನಿಕ ಕವಿಗಳಲ್ಲಿಯಂತೆ ಮುದ್ದಣನ ಮನಸ್ಸು ಅನುಕರಣದ ಪಾಪ

ಪ್ರಜ್ಞೆಯಿಂದ ಕಲುಷಿತವಾಗುವದಿಲ್ಲ. ಹಳೆಯ ಕಾವ್ಯ ಸ್ವರೂಪವನ್ನು ಮನಸಾ ಒಪ್ಪಿಕೊಂಡದ್ದರಿಂದ ಮುದ್ದಣನಿಗೆ ಈ ಬಗೆಯ ಸಲೀಲವಾದ ಅನುಕರಣ ಸಾಧ್ಯವಾಯಿತು.

ಲಕ್ಷ್ಮೀಶನಲ್ಲಿಯಂತೆ ಮುದ್ದಣನ ಈ ಕವಿತೆಯಲ್ಲಿಯೂ ಕಾವ್ಯವಸ್ತು ನಾಟಕೀಯವಾಗಿ ಬೆಳೆದು ಬರುವದಿಲ್ಲ. ಈ ಕವಿತೆಯನ್ನು ಕೇವಲ ಅದರ ವರ್ಣನೆಯ ಸೊಗಸಿಗಾಗಿಯೇ ಓದಬೇಕು. ರಾಮ ಸೀತೆಯರು ವನವಾಸದಿಂದ ಮರಳಿ ಬರುವಾಗಿನ ಸಮುದ್ರ ವರ್ಣನೆ, ನಂದಿಗ್ರಾಮದಲ್ಲಿ ಭರತನ ನಿರೀಕ್ಷೆಯ ವರ್ಣನೆ, ವನವಾಸದ ಸ್ಮೃತಿ ವರ್ಣನೆ, ರಾಮ ಮತ್ತು ಕೌಸಲ್ಯೆಯರ ಪುನರ್ಮಿಲನದ ವರ್ಣನೆ, ಪುರ ಜನರ ಸಂಭ್ರಮದ ವರ್ಣನೆ, ಕೊನೆಯಲ್ಲಿಯ ಪಟ್ಟಾಭಿಷೇಕದ ವರ್ಣನೆ ಹೀಗೆ ಇಡೀ ಕವಿತೆಯೇ ವರ್ಣನೆಯ ಕ್ರಮದಲ್ಲಿ ರೂಪ ತಾಳುತ್ತದೆ. ವರ್ಣನೆಗಳು ಅಚ್ಚುಕಟ್ಟಾಗಿವೆಯಲ್ಲದೆ ಕವಿ ಅವುಗಳಿಗೆ ಹೊಸ ವಿವರಗಳನ್ನು ಯಾವಾಗಲೂ ಜೋಡಿಸುವ ಪ್ರಯತ್ನದಲ್ಲಿ ಇರುತ್ತಾನೆ. ಜೈಮಿನಿ ಭಾರತದಲ್ಲಿಯೂ ಕಾಣದ ಕೆಲ ವಿವರಗಳು ಮುದ್ದಣನ ಸಮುದ್ರ ವರ್ಣನೆಯಲ್ಲಿ ಮತ್ತು ಪಟ್ಟಾಭಿಷೇಕದ ವರ್ಣನೆಯಲ್ಲಿ ದೊರೆಯುತ್ತವೆ.

ಒಂದು ದೃಷ್ಟಿಯಿಂದ ಕನ್ನಡದಲ್ಲಿ ಲಕ್ಷ್ಮೀಶನೇ ಇಂಥ ಕಾವ್ಯಮಾರ್ಗವನ್ನು ಕಳೆಯೇರಿಸಿದ ಕವಿಯಾಗಿದ್ದಾನೆ. ಕಾವ್ಯ ಪರಂಪರೆಯ ವಿಕಾಸದಲ್ಲಿ ಇದೊಂದು ಅನಿವಾರ್ಯವಾದ ಸ್ಥಿತಿಯಾಗಿದೆ. ಕುಮಾರವ್ಯಾಸನಿಂದೀಚೆಗೆ ಬಂದ ಕವಿಗಳೆಲ್ಲ ನಾಟಕೀಯತೆಯನ್ನು ಕಳೆದುಕೊಳ್ಳುತ್ತಲೇ ಬಂದಿದ್ದಾರೆ. ಚಾಮರಸ, ಷಡಕ್ಷರಿ, ರತ್ನಾಕರವರ್ಣಿ, ಲಕ್ಷ್ಮೀಶ ಇವರೆಲ್ಲ ವರ್ಣನೆಯ ಭಿನ್ನ ಭಿನ್ನ ಶೈಲಿಗಳನ್ನು ಪ್ರಯೋಗಕ್ಕೆ ತಂದ ಕವಿಗಳು. ಇವರಲ್ಲಿ ಲಕ್ಷ್ಮೀಶ ಮತ್ತು ರತ್ನಾಕರವರ್ಣಿ ಇವರು ತಮಗೆ ನಾಟಕೀಯತೆ ಸಾಧ್ಯವಾಗದ್ದರಿಂದಲೋ ಏನೋ ತಮ್ಮ ಪ್ರತಿಭೆಯನ್ನು ವರ್ಣನೆಗಳಿಗೇ ಧಾರೆಯೆರೆದರು. ಒಂದು ಕಾವ್ಯ ಪರಂಪರೆ ಅವಸಾನ ಹೊಂದುವ ಪೂರ್ವ ಸೂಚನೆ ಈ ಸ್ಥಿತಿಯಲ್ಲಿ ಕಾಣುತ್ತದೆ. ಕಾವ್ಯ ವಸ್ತುವಿನಲ್ಲಿ ತನ್ಮಯನಾಗಿ ಅದರ ನಿರ್ವಹಣದಲ್ಲಿ ತನ್ಮಯತೆಯಿಂದ ಬಿಡುಗಡೆಯನ್ನು ಪಡೆಯಬಲ್ಲ ಕವಿ ನಾಟಕವನ್ನು ನಿರ್ಮಿಸುತ್ತಾನೆ; ಕಾವ್ಯ ವಸ್ತುವಿನಿಂದ ದೂರವಿದ್ದುಕೊಂಡು ಅದರ ಸೌಂದರ್ಯದಲ್ಲಿ ಲೀನನಾದ ಕವಿ ಬಣ್ಣಿಸತೊಡಗುತ್ತಾನೆ. ವಸ್ತು ಇನ್ನೊಬ್ಬರದಾಗಿ ಬಣ್ಣ ತನ್ನದಾದಾಗ ಈ ಅವಸ್ಥೆ ಸಹಜವೇ. ಲಕ್ಷ್ಮೀಶನ ಉತ್ಕೃಷ್ಟ ವರ್ಣನೆಗಳು ಕೂಡ ಅವನು ಕಾವ್ಯ ವಸ್ತುವಿನಿಂದ ಎಷ್ಟು ದೂರ ಹೋಗಿದ್ದಾನೆನ್ನುವದಕ್ಕೆ ನಿದರ್ಶನಗಳಾಗಿವೆ.

ಆದರೆ ಲಕ್ಷ್ಮೀಶನ ಕಾವ್ಯಕ್ಕೂ ಮುದ್ದಣನ 'ರಾಮ ಪಟ್ಟಾಭಿಷೇಕಂ'ಕ್ಕೂ ಇರುವ ಅಂತರವೆಂದರೆ ಲಕ್ಷ್ಮೀಶನಲ್ಲಿ ಕಂಡುಬರುವ ಅಲಂಕಾರ ಸಿದ್ಧಿ ಮುದ್ದಣನಲ್ಲಿ ಕಾಣುವುದಿಲ್ಲ. ಲಕ್ಷ್ಮೀಶನ ಅಲಂಕಾರಗಳು ಜೀವನಾನುಭವವನ್ನು ಮೋಡಿಯಿಂದೆಂಬಂತೆ ಕಾವ್ಯಾನುಭವವನ್ನಾಗಿ ಮಾರ್ಪಡಿಸುತ್ತವೆ. ಸೀತಾ ಪರಿತ್ಯಾಗದ

ಸನ್ನಿವೇಶದಲ್ಲಿ ರಾಮಚಂದ್ರನ ಯಶೋವಿಸ್ತರವನ್ನು ವರ್ಣಿಸುವ ಲಕ್ಷ್ಮೀಶನ ಪದ್ಯವನ್ನು ನೋಡಬೇಕು. ಬಿಳಿಯ ವಸ್ತುಗಳನ್ನು ರಾಶಿಯಾಗಿ ಕೂಡಿಹಾಕಿ ಅವೆಲ್ಲಕ್ಕೂ ಒಂದೊಂದು ಕಪ್ಪು ವಸ್ತುವಿನ ಸಂಗವನ್ನು ಜೋಡಿಸಿ, ರಾಮಚಂದ್ರನ ಯಶಸ್ಸು 'ತನ್ನ ಕಾಳಿಮದ ಕೂಟ'ವನ್ನು ಅರಸುತ್ತ ಎಂದು ಹೇಳುವದರಲ್ಲಿ ಅಲಂಕಾರದ ಚಮತ್ಕಾರವಿದೆ. ಆದರೆ ಅದಕ್ಕಿಂತ ಹೆಚ್ಚಾಗಿ ಸಮೃದ್ಧಿಯ ಒಡಲಿನಲ್ಲಿಯೇ ಹುದುಗಿರುವ ಸಾವಿನ ಬಯಕೆಯ ಸೂಚನೆ ಈ ವರ್ಣನೆಯಲ್ಲಿ ಪ್ರಕಟವಾಗಿ ಬಿಡುತ್ತದೆ. ಮುಂದೆ ಬರುವ ಸೀತಾ ಪರಿತ್ಯಾಗಕ್ಕೆ ಕಾರಣ ಕೂಡ ರಾಮನ ಈ ಯಶಾಪಶಯಗಳ ಚಿಂತೆಯೇ ಎಂಬುದನ್ನು ನೆನೆದಾಗ ಈ ವರ್ಣನೆಯ ಬೆಲೆ ಇನ್ನೂ ಹೆಚ್ಚಾಗುತ್ತದೆ. ಮುದ್ದಣನಲ್ಲಿ ಅಲಂಕಾರಿಕ ಚಮತ್ಕಾರಗಳೇನೋ ಬೇಕಾದಷ್ಟಿವೆ. ಆದರೆ ಲಕ್ಷ್ಮೀಶನ ಕಾವ್ಯಸಿದ್ಧಿ ಅವುಗಳಲ್ಲಿ ಕಾಣುವದಿಲ್ಲ. ಉದಾಹರಣೆಗೆ ಈ ಕೆಳಗಿನ ಪದ್ಯವನ್ನು ಪರೀಕ್ಷಿಸಬಹುದು.

ಕತ್ತುರಿ ಕರಂಡ ಬಾಯ್ಮಸೆಯೊಳಗೆ ದಾಳಿಂಬ ।
ವಿತ್ತುವಲ್ಗಾಪಿಟ್ಟು ತೊಂಡೆವಣ್ಬುಟಿದರೆಯ ।
ನೆತ್ತಲುಂ ಬಿಗಿದು ಮುತ್ತುಗದಳಿರ್ನಾಲಗೆವಣೆಯೊಳಿರ್ದು ಬಾಸೆವೆಣ್ಣು ॥
ಮತ್ತೇನನೆಸಗಿದಪಳಿನಿಯನಾಲೋಕದಿಂ ।
ದಿತ್ತಲೈತಂದೊಡನೆ ನೆಲಸಿರ್ಪುದೆಂದೇಕ ।
ಚಿತ್ತದಿಂ ಮೌನಗೊಂಡಭವನಂ ಧ್ಯಾನಿಪಳೆ ವ್ರತಮೆನಿತು ಪೊಳ್ತಿರ್ಪುದು ॥

ಕೈಕೆಯನ್ನು ರಾಮ ಮಾತಾಡಿಸಿದಾಗ ಅವಳು ಮಾತಾಡದಿರಲು ರಾಮ ಈ ಮೌನವೇಕೆಂದು ನುಡಿಯುತ್ತಾನೆ. ಕೈಕೆಯ ಮೌನದ ವರ್ಣನೆ ಈ ರೂಪ ತಾಳಿದೆ. ಕಸ್ತೂರಿಯ ಕರಡಿಗೆ, ದಾಳಿಂಬದ ಬೀಜ, ತೊಂಡೆಯ ಹಣ್ಣು, ಮೊದಲಾದ ಕವಿಸಮಯದ ಸರಕಿನೊಂದಿಗೆ ಸರಸ್ವತಿ; ಬ್ರಹ್ಮ, ಈಶ್ವರ ಮೊದಲಾದ ದೇವತೆಗಳೂ, ಈ ವರ್ಣನೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಒಂದು ಸಣ್ಣ ಪ್ರಶ್ನೆಗೆ ಇಷ್ಟು ದೊಡ್ಡ ಅಲಂಕಾರದ ಭಾರವೇಕೆ ಎಂಬ ಪ್ರಶ್ನೆ ಇಲ್ಲಿ ಅಸಂಗತ. ಆದರೆ ಇದರಿಂದಾಗುವ ಕಾವ್ಯ ಪ್ರಯೋಜನವೇನೆಂಬುದು ಎಷ್ಟು ವಿಚಾರ ಮಾಡಿದರೂ ಬಗೆಹರಿಯುವದಿಲ್ಲ. ಕವಿ ಅಭಿವ್ಯಕ್ತಿಯ ಯಾವ ರೀತಿಯನ್ನು ಅನುಸರಿಸಿದರೂ ಆಕ್ಷೇಪಿಸುವಂತಿಲ್ಲ. ಆದರೆ ಅದರಿಂದ ಕವಿತೆಗೆ ಲಾಭ ದೊರೆಯಬೇಕು.

ಈ ಕವಿತೆ ಲಕ್ಷ್ಮೀಶನ ಅನುಕರಣವೆಂದೇ ವಿಫಲವಾಗಿದೆ ಎಂದು ಹೇಳುವಂತಿಲ್ಲ. ಅನುಕರಣದ ಸಿದ್ಧಿ ಎಂಥದೆಂಬುದನ್ನು 'ರಾಮಾಶ್ವಮೇಧಂ'ದಲ್ಲಿ ನೋಡಬಹುದು. ಹಳೆಯ ಕಾವ್ಯ ಪರಂಪರೆಯನ್ನು ತನ್ನದಾಗಿಸಿಕೊಳ್ಳುವಾಗಿನ ಪ್ರಯತ್ನದಲ್ಲಿ ಮುದ್ದಣನ ಮೊದಲ ಸಿದ್ಧಿ ತಾಂತ್ರಿಕವಾಗಿದೆಯೆಂದಷ್ಟೇ ಇಲ್ಲಿ ಹೇಳಬಹುದು.

-೨-

'ಅದ್ಭುತ ರಾಮಾಯಣ' ಮುದ್ದಣನ ಮೊದಲ ಗದ್ಯ ಗ್ರಂಥವಾಗಿದೆ. ಈ ಕೃತಿ ಹೇಳುವ ಕಥೆ ಹಳೆಯದಾದರೂ ಕಾವ್ಯವಸ್ತು ಹೊಸದಾಗಿರುವದರಿಂದ ಕಾಲಮಾನದ ದೃಷ್ಟಿಯಿಂದ ಹೊಸಬನಾದ ಮುದ್ದಣನನ್ನು ಅದು ಆಕರ್ಷಿಸಿರಬೇಕು. ಮೂಲದಲ್ಲಿಯೇ 'ಅದ್ಭುತ ರಾಮಾಯಣ' ಶಾಕ್ತ ಪಂಥದ ಹೆಚ್ಚಳವನ್ನು ಸಾರುವ ತನ್ನ ಕಾವ್ಯತ್ವವನ್ನು ಬಹುಮಟ್ಟಿಗೆ ಕಳೆದುಕೊಂಡು ಅತ್ಯುಕ್ತಿಯ ಮೂಲಕವಾಗಿ ಧಾರ್ಮಿಕ ಅಂಶಗಳನ್ನು ಎತ್ತಿ ತೋರಿಸುವ ಕೃತಿಯಾಗಿದೆ. ಪುರಾಣ ಪುಣ್ಯ ಕಥೆಯಾದಾಗ ಈ ಅದ್ಭುತಗಳು ಅಗತ್ಯವಾಗಿವೆಯೇನೋ ಹತ್ತು ತಲೆಯ ರಾವಣನನ್ನು ಸಂಹರಿಸಿದ ಪುರಾಣ ಪುರುಷನಾದ ರಾಮನಿಗಿಂತ ಸಹಸ್ರ ಕಂಠ ರಾವಣನನ್ನು ಸಂಹರಿಸುವ ಸೀತೆಯ ಯೋಗ್ಯತೆ ಆಧ್ಯಾತ್ಮಿಕವಾಗಿ ದೊಡ್ಡದೆಂದು ತೋರಿಸುವ ಉದ್ದೇಶ ಇಲ್ಲಿದೆ. ಪ್ರಕೃತಿ ಮತ್ತು ಪುರುಷರ ಯೋಗ್ಯತೆಯ ಸ್ಪರ್ಧೆ ಬಹಳ ಹಳೆಯದು. ಅದರ ಒಂದು ರೂಪ ಈ ರಾಮಾಯಣದಲ್ಲಿದೆ. ಜಾನಕಿ ಇಲ್ಲಿ ಪರಾಪ್ರಕೃತಿ; ಆದ್ಯಾಶಕ್ತಿ. ದಶಕಂಠ ರಾವಣನನ್ನು ಸಂಹರಿಸಿದ ರಾಮನ ಹೆಂಡತಿಯಾಗಿ, ಪತಿವ್ರತೆಯಾಗಿರುವದು ನಟನೆ ಮಾತ್ರ. ಸಹಸ್ರಕಂಠ ರಾವಣನನ್ನು ಕೊಲ್ಲುವಾಗ ಅವಳು ಮಹಾಕಾಳಿಯಾಗಿ ಪ್ರಕಟವಾಗುತ್ತಾಳೆ. ಮುದ್ದಣ ಹೇಳುವಂತೆ ನಮ್ಮ ನಾಡಿನ ಶತಕೋಟಿ (?) ರಾಮಾಯಣಗಳಲ್ಲಿ ಇದೂ ಒಂದು.

ಆದರೆ ಇಲ್ಲಿ ಬರುವ ತೊಂದರೆಯೆಂದರೆ ಈ ಪುರಾಣವೇ ಮೊದಲು ಸಾಕಷ್ಟು ಪೌರಾಣಿಕವಾಗಿಲ್ಲ. ವಾಲ್ಮೀಕಿ ರಾಮಾಯಣದಲ್ಲಿಯೂ ಸಾಕಷ್ಟು ಅದ್ಭುತಗಳಿವೆ. ರಾವಣ ಕುಂಭಕರ್ಣರಂಥ ರಾಕ್ಷಸರಲ್ಲದೆ, ಮಾಯಾಮೃಗ, ಸಮುದ್ರ ಲಂಘನದಂಥ ಸಂಗತಿಗಳೂ ಇವೆ. ಆದರೆ ಈ ಸಂಗತಿಗಳ ಹಿಂದಿರುವ ಕಲ್ಪನಾಶಕ್ತಿಗೆ ಸತ್ಯದ ಸ್ವರೂಪವನ್ನು ಅರಿಯುವ ಕುತೂಹಲವಿದೆ. ವಾಲ್ಮೀಕಿಯ ರಾವಣ ಅತಿ ಮಾನುಷ ಶಕ್ತಿಯ ಮತ್ತು ಅಹಂಕಾರದ ಅಪ್ರತಿಮ ಸಂಕೇತವಾಗಿದ್ದಾನೆ. ಅವನಲ್ಲಿ ಮಾನುಷ ತತ್ವವೂ ವಿಜೃಂಭಿಸುತ್ತದೆ. ಅದೇ 'ಅದ್ಭುತ ರಾಮಾಯಣ'ದ ಸಹಸ್ರಕಂಠ ರಾವಣ ಸ್ಪರ್ಧೆಯ ಅನುಕರಣ ಮಾತ್ರ. ನೂರು ಸುಳ್ಳು ಹೇಳುವವನಿಗೆ ಲಕ್ಷ ಸುಳ್ಳು ಹೇಳುವವನೊಬ್ಬ ಗಂಟು ಬಿದ್ದಂತೆ ಪುರಾಣದ ಅವಸ್ಥೆಯಾಗಿದೆ. ವಾಲ್ಮೀಕಿ ರಾಮಾಯಣದಲ್ಲಿ ರಾವಣನ ವಧೆ ರಾಮನ ವನವಾಸ, ಸೀತಾಪಹರಣ ಮತ್ತು ವಿಶ್ವದ ಸಂತ್ರಾಸ ಇವುಗಳಿಗೆ ಅವಶ್ಯವಾದ ಫಲ ಶ್ರುತಿಯಾಗಿದೆ. ರಾಮನ ಸಾಮರ್ಥ್ಯದ ಪರೀಕ್ಷೆಯಲ್ಲದೆ ಅವನ ಅಂತರಂಗದ ಸತ್ವ ಪರೀಕ್ಷೆಯೂ ಈ ಮೂಲಕವಾಗಿ ನಡೆಯಬೇಕಾಗುತ್ತದೆ. ಅದೇ ಯಾರನ್ನೂ ಪೀಡಿಸದೆ, ತನ್ನ ಸಾವಿರ ತಲೆಗಳೇ ಭಾರವಾಗಿ ದೀವಿಯಲ್ಲಿ ತನ್ನ ಪಾಡಿಗೆ ಕುಳಿತಿರುವ ಸಹಸ್ರಕಂಠ ರಾವಣನ ವಧೆ ಕಿಡಿಗೇಡಿತನ ಮಾತ್ರವಾಗಿದೆ. ವೇದಗಳ ಉಪಬೃಂಹಣವೆಂದು ಕರೆಯಲಾಗುವ ನಮ್ಮ ಪುರಾಣಗಳಿಗೆ ಒಂದು ಧಾರ್ಮಿಕ ಉದ್ದೇಶದ ಜೊತೆಗೆ ವಿಶಾಲವಾದ ಒಂದು ಸಾಮಷ್ಟಿಕ ದರ್ಶನ, ಬುದ್ಧಿ ಭಾವಗಳ ಅಪರೂಪವಾದ ಹೊಂದಾಣಿಕೆ

ಇದ್ದವು. ಸರ್ಗ, ಉಪಸರ್ಗ, ವಂಶಾವಳಿಗಳಿಂದ ಕೂಡಿದ ಒಂದು ಪುರಾಣದ ರಚನಾವಿಧಾನ ಬ್ರಹ್ಮಾಂಡದ ರಚನಾ ವಿಧಾನವನ್ನು ಹೋಲುತ್ತದೆ. ಆದರೆ ಬರಬರುತ್ತ ಪುರಾಣಗಳ ರಚನೆ ಹೆಚ್ಚಾಗಿ ಅವುಗಳ ಅಗ್ಗದ ಬಳಕೆಯೂ ನಡೆಯಿತು. 'ಅದ್ಭುತ ರಾಮಾಯಣ' ಇಂಥ ಅಗ್ಗದ ಪುರಾಣಗಳಲ್ಲೊಂದಾಗಿದೆ.

ಮೂಲ ಪುರಾಣದ ಈ ದೋಷಗಳೆಲ್ಲ ಮುದ್ದಣನ ಅನುವಾದದಲ್ಲಿ ಬಂದಿದ್ದರೆ ಆಶ್ಚರ್ಯವೇನಿಲ್ಲ. ಸುದೈವಕ್ಕೆ ಕನ್ನಡ ಅನುವಾದ ಸಂಗ್ರಹವಾಗಿರುವುದರಿಂದ ಈ ವಿಕಾರಗಳು ಅಷ್ಟೊಂದಾಗಿ ಕಾಣುವುದಿಲ್ಲ. ಕೇವಲ ಸಂಕ್ಷೇಪದಿಂದಾಗಿಯೇ ಪುರಾಣದ ಮುಖ್ಯ ಕಥೆ ಮತ್ತು ಉಪಾಖ್ಯಾನಗಳ ಒಂದು ಸಂಬಂಧವನ್ನು ಕಾಣುವಂತಾಗಿದೆ. ಶ್ರೀಮತಿಯ ಸ್ವಯಂವರದಲ್ಲಿ ನಾರದ ಪರ್ವತರ ಫಜೀತಿ, ಮತ್ತು ನಾರದನ ಗಾಯನ ಸಾಧನೆ ಈ ಪ್ರಸಂಗಗಳಲ್ಲಿ ಅಷ್ಟೇನೂ ಸೂಕ್ಷ್ಮವಲ್ಲದ ಅಸಂಬದ್ಧವಾದ ವಿನೋದವಿದೆ. ಈ ಹಗುರವಾದ ವಿನೋದದ ಹಿನ್ನೆಲೆಯಲ್ಲಿ ಸಹಸ್ರಕಂಠ ರಾವಣನ ಕಲ್ಪನೆಯ ಅಸಂಬದ್ಧತೆಯನ್ನು ಹೇಗೋ ನಂಬಿ ಬಿಡಬಹುದು. ಅವಸರದ ಬರವಣಿಗೆಯ ಮೂಲಕವಾಗಿ ಎಲ್ಲ ಅನುಭವವನ್ನೂ ಅದರ ವಿಷಮತೆಯ ಅರಿವಾಗದಂತೆ ನುಂಗಬಹುದು. ಮುದ್ದಣ ಇನ್ನಷ್ಟು ಚತುರತೆಯನ್ನೂ ಉಪಯೋಗಿಸಿದ್ದರೆ ಅಥವಾ ಆಧುನಿಕ ಮನೋವೃತ್ತಿಯನ್ನು ಪಡೆದುಕೊಂಡಿದ್ದರೆ ಇಡೀ ಪುರಾಣವನ್ನೇ ಒಂದು ಅದ್ಭುತರಮ್ಯ ವೈನೋದಿಕವನ್ನಾಗಿ ಮಾರ್ಪಡಿಸುವುದು ಶಕ್ಯವಾಗುತ್ತಿತ್ತು. ಆದರೆ ಸೀತೆ ಪರಾತತ್ವದ ಗಂಭೀರತೆ ಕಥೆಯ ವಿನೋದವನ್ನು ಕುತ್ತಿಗೆ ಹಿಚುಕುವಂತೆ ಮಾಡಿದೆ.

ಮುದ್ದಣನ ಬರವಣಿಗೆಯಲ್ಲಿಯ ನಾಟ್ಯ ಪ್ರಜ್ಞೆಯ ಅಭಾವದಿಂದಾಗಿ ಇಲ್ಲಿಯ ಇದ್ದುಬಿದ್ದ ನೈಜ ಅದ್ಭುತವೂ ಕಾವ್ಯವಾಗಿ ಮಾರ್ಪಡುವುದಿಲ್ಲ. ಕಥೆಗೆ ಶಿಖರ ಪ್ರಾಯವಾದ ಸಹಸ್ರಕಂಠ ರಾವಣ ಮತ್ತು ರಾಮ ಇವರ ಯುದ್ಧದ ವರ್ಣನೆ ನಾಟ್ಯದ ಅಭಾವದಿಂದಲೇ ಸಪ್ಪಗಾಗಿ ಹೋಗಿದೆ. ಕ್ಷಣ ಕ್ಷಣಕ್ಕೂ ಸೋಲುವ ರಾಮನ ಅಹಂಕಾರ ನುಚ್ಚು ನೂರಾಗುವ ಪ್ರಕ್ರಿಯೆಯನ್ನೂ ಕವಿ ವಿವರವಾಗಿ ವರ್ಣಿಸಬಹುದಿತ್ತು. ಹಿಂದೆ ರಾವಣನನ್ನು ಸಂಹರಿಸಿದಾಗ ಪ್ರಯೋಗಿಸಿದ ಅಸ್ತ್ರವನ್ನೇ ಪ್ರಯೋಗಿಸಿ ಅದು ವಿಫಲವಾಯಿತೆಂಬುದನ್ನು ಕೂಡ ಅರಿಯದೆ ರಾಮ ದಾನವನ ಮರುಗಣೆಯಿಂದ ಮೂರ್ಛೆ ಹೋಗಿ ಬಿಡುತ್ತಾನೆ. ಈ ಪ್ರಸಂಗದಲ್ಲಿ ಸ್ವಲ್ಪಾದರೂ ಯುದ್ಧದ ವರ್ಣನೆಯಿದೆ. ಮುಂದೆ ಸೀತೆ ಮಹಾಕಾಳಿಯಾಗಿ ಸಹಸ್ರವದನನನ್ನು ಸಂಹರಿಸಲು ತೊಡಗಿದಾಗ "ಎವೆಯುಲಗುವ ನಿತರೊಳೆ ದಾನವನ ಸಹಸ್ರಕಂಠಂಗಳುಂ ಗಾಳಿಗೆ ಮಾಂಗಾಯದಿರ್ವಂತದಿರ್ದುವು" ಎಂದು ಒಂದು ವಾಕ್ಯದಲ್ಲಿ ರಾಮನನ್ನೂ ಸೋಲಿಸಿದ ಮಹಾವೀರನ ಇತಿಹಾಸ ಮುಗಿದು ಹೋಗುತ್ತದೆ. ಸೀತೆಯ ಮಹಾಕಾಳಿಯ ರೂಪವರ್ಣನೆಯೊಂದನ್ನು ಬಿಟ್ಟರೆ ಬೇರೆ ಯಾವ ಕಡೆಗೂ 'ಅದ್ಭುತ'ದ ಅನುಭವವಾಗುವುದಿಲ್ಲ.

ಈ ಮೊದಲೇ ಹೇಳಿರುವಂತೆ ಈ ಕೃತಿಯ ಅಭಿವ್ಯಕ್ತಿಯ ರೀತಿ – ಗದ್ಯ; ಭಾಷೆ ಹಳೆಗನ್ನಡ. ಮುದ್ದಣನ ಪದ್ಯಕ್ಕೆ ಲಕ್ಷ್ಮೀಶನ ಮೇಲ್ಪಂಕ್ತಿ ಕೈಗೆ ನಿಲುಕುವಷ್ಟು ದೂರದಲ್ಲಿತ್ತು. ಆದರೆ ಗದ್ಯದ ಬರವಣಿಗೆಗೆ ಮಾತ್ರ ಹರಿಹರನ ಗದ್ಯ ಭಾಗಗಳಿಗೋ ಚಂಪೂ ಕಾವ್ಯಗಳಿಗೋ ಮೊರೆ ಹೋಗಬೇಕಾಗಿತ್ತು. 'ವೊಡ್ಡಾರಾಧನ'ವನ್ನು ಮುದ್ದಣ ನೋಡಿದ್ದನೋ ಇಲ್ಲವೋ ಹೇಳಬರುವಂತಿಲ್ಲ. ಹೀಗಾಗಿ ಮುದ್ದಣನು ಗದ್ಯ ರಚನೆಗಾಗಿ ತನ್ನ ಕಾಲ ಮೇಲೆಯೇ ನಿಲ್ಲಬೇಕಾಯಿತು. 'ಅದ್ಭುತ ರಾಮಾಯಣ'ದ ಗದ್ಯಶೈಲಿ ಮುದ್ದಣನ ಪ್ರಯೋಗಗಳನ್ನು ಪ್ರತಿಫಲಿಸುತ್ತದೆ. ಜೀವಂತವಾದ ಹಳೆಗನ್ನಡವನ್ನು ಗದ್ಯದಲ್ಲಿ ಹೇಗೆ ಪ್ರಯೋಗಿಸಬಹುದೆಂಬುದನ್ನು ಕವಿ ಕಲಿತಿದ್ದು ಈ ಕೃತಿಯಲ್ಲಿಯೇ. ಶೈಲಿ ಎಲ್ಲ ಕಡೆಗೂ ಒಂದೇ ಸಮವಾಗಿಲ್ಲ. ಆದರೆ ಶೈಲಿಯ ವಿಷಮತೆಯೇ ಕವಿಯ ಪ್ರಯತ್ನಕ್ಕೆ ಸಾಕ್ಷಿಯಾಗುತ್ತದೆ. ಕೊನೆಯ ಎರಡು ಆಶ್ವಾಸದಲ್ಲಿ ಹಳೆಗನ್ನಡದ ಗದ್ಯಲಯವನ್ನು ಮುದ್ದಣ ಪ್ರಭುತ್ವದಿಂದ ನಿಯಂತ್ರಿಸುವುದು ಕಂಡು ಬರುತ್ತದೆ. ಆದರೆ ಎಷ್ಟೋ ಕಡೆಗಳಲ್ಲಿ ಅವನ ಹಳೆಗನ್ನಡ ಅವನ ಹೊಸಗನ್ನಡದ ಪ್ರಜ್ಞೆಯನ್ನೇ ಹೆಚ್ಚಾಗಿ ಪ್ರಕಟಿಸುತ್ತದೆ. ಉದಾಹರಣೆಗೆ ಈ ಕೆಳಗಿನ ಗದ್ಯ ಭಾಗವನ್ನು ನೋಡಬೇಕು.

"ಇಹಗಿಹಗೆ ರಾಘವಂಗೆ ಸೀತೆಯೊಳ್ ಪ್ರೀತಿಯುಂ ಲಕ್ಷ್ಮಣನೊಳ್ ಕಾರುಣ್ಯಮುಂ, ಸೀತೆಗೆ ಪತಿಯೊಳ್ ಭಕ್ತಿಯುಂ ಮೈದುನನೊಳ್ ದಯೆಯುಂ, ಲಕ್ಷ್ಮಣಂಗೆ ಅಣ್ಣನೊಳ್ ವಿಶ್ವಾಸಮುಂ ಅತ್ತಿಗೆಯೊಳ್ ವಿನಯಮುಂ ಅನ್ಯೋನ್ಯಮಾಗಿರ್ದುವು. ರಾಘವನೋರೊರ್ಮೆ ಮಡದಿಗೆ ವನದಿರವಂ ಬಿತ್ತರಿಪಂ; ಕಣ್ಣೆದಿರೊಳ್ ಬರ್ಪ ಬಗೆಬಗೆಯ ಮಿಗಗಳಂ ಬಣ್ಣಿಪಂ; ಪಲವಣ್ಣದ ಪಕ್ಕಿಗಳಂ ತೋರಿಪಂ; ಪೂವಳ್ಳಿಗಳ ಪೆಸರನೊರೆವಂ........"

ವ್ಯಾಕರಣದ ದೃಷ್ಟಿಯಿಂದ ಇದೆಲ್ಲ ಹಳೆಗನ್ನಡವೇ. ಆದರೆ ಈ ಭಾಗದಲ್ಲಿಯ ವಾಕ್ಯ ರಚನೆ ಹೊಸಗನ್ನಡದ್ದು. ಹೊಸಗನ್ನಡಕ್ಕೂ ಹಳೆಗನ್ನಡಕ್ಕೂ ಸಾಮಾನ್ಯವಾಗಿರುವ ಕೆಲ ಶಬ್ದಗಳನ್ನು – ಪ್ರೀತಿ, ದಯೆ, ಕಾರುಣ್ಯ, ಅಣ್ಣ, ಅತ್ತಿಗೆ – ಉಪಯೋಗಿಸಿದ್ದೇ ಇದಕ್ಕೆ ಕಾರಣವಲ್ಲ. ಕೆಲವು ಶಬ್ದಗಳನ್ನು ಹೊಸಗನ್ನಡದ ಅರ್ಥ ಛಾಯೆಯಿಂದ ಉಪಯೋಗಿಸಿದ್ದಾನೆ. ಮುಖ್ಯವಾಗಿ 'ಕಾರುಣ್ಯ' ಮತ್ತು 'ವಿಶ್ವಾಸ' ಈ ಅರ್ಥದಲ್ಲಿ ಉಪಯೋಗಿಸುವದು ಸಾಧ್ಯವಾಗುತ್ತಿರಲಿಲ್ಲ, ಕೃತಿಯಲ್ಲಿ ಎಲ್ಲೆಲ್ಲಿಯೂ ಹೀಗೆ ಆಗಿದೆ ಎಂದು ಮಾತ್ರ ತಿಳಿಯಬಾರದು, ಮುದ್ದಣ ಇನ್ನೂ ಹಳೆಯದನ್ನು ಸಂಸ್ಕಾರದಲ್ಲಿ ಅರಗಿಸಿಕೊಳ್ಳುವ ಪ್ರಕ್ರಿಯೆಯಲ್ಲಿದ್ದಾನೆ ಎಂಬುದಿಷ್ಟೇ ಸೂಚನೆ.

–೩–

ಈ ಮೊದಲು ಚರ್ಚಿಸಲಾದ ಮುದ್ದಣನ ಎರಡೂ ಕೃತಿಗಳು ಪ್ರಾಯೋಗಿಕವಾದವುಗಳು. ಗದ್ಯ ಪದ್ಯಗಳ ಲಯ ವಿನ್ಯಾಸವನ್ನು ಕವಿ ಕಲಿಯುತ್ತಿರುವದು ಈ ಕೃತಿಗಳಲ್ಲಿ ಸ್ಪಷ್ಟವಾಗಿದೆ. ಆದ್ದರಿಂದ ಅವುಗಳಲ್ಲಿ ಯಾವುದೇ

ರೀತಿಯ ಸಿದ್ಧಿಯನ್ನು ಅಪೇಕ್ಷಿಸಿ ಅದು ದೊರೆಯದೆಂದು ಕೃತಿಕಾರನನ್ನು ದೂರುವದು ತಪ್ಪಾಗಬಹುದು. ಆದರೆ 'ರಾಮಾಶ್ವಮೇಧಂ' ಮಾತ್ರ ನಿರ್ವಿವಾದವಾಗಿದ್ದ ಕೃತಿಯಾಗಿದೆ. ಕವಿಯ ಯಶಾಪಯಶಗಳು ಈ ಕೃತಿಯ ಪರೀಕ್ಷೆಯಿಂದಲೇ ನಿರ್ಣಯವಾಗಬೇಕಾಗಿದೆ. ಮೊದಲಿನ ಕೃತಿಗಳು ಕವಿ ಏನನ್ನು ವಿಧಿಸ ಬಯಸಿದ ಎಂಬುದನ್ನು ತಿಳಿಸುತ್ತಿದ್ದರೆ ಈ ಕೃತಿಯಲ್ಲಿ ಅವನು ಸಾಧಿಸಿದ್ದೇನು ಎಂಬುದು ಗೊತ್ತಾಗುವಂತಿದೆ.

'ರಾಮಾಶ್ವಮೇಧಂ'ದ ವಿರಚನೆಯನ್ನು ಪರೀಕ್ಷಿಸಿದಾಗ ಅದರಲ್ಲಿ ಲಕ್ಷ್ಮೀಶನ ಕಾವ್ಯದ ಪ್ರಭಾವವನ್ನು ಗುರುತಿಸದೆ ಇರಲಾಗುವದಿಲ್ಲ. ಲಕ್ಷ್ಮೀಶನ ಜೈಮಿನಿ ಭಾರತದ ವಸ್ತುವಿಗೂ 'ರಾಮಾಶ್ವಮೇಧಂ'ದ ವಸ್ತುವಿಗೂ ಇರುವ ಸಾಮ್ಯ ಸುವ್ಯಕ್ತವಾಗಿದೆ. ಸೀತಾಪರಿತ್ಯಾಗದ ಸನ್ನಿವೇಶದಲ್ಲಿ ಮುದ್ದಣ ಲಕ್ಷ್ಮೀಶನಿಂದ ಪ್ರಭಾವಿತನಷ್ಟೇ ಅಲ್ಲ ಅವನಿಂದ ಸ್ಫೂರ್ತನೂ ಆಗಿದ್ದಾನೆ. ಉಪಕಥೆಗಳಲ್ಲಿ ಕೂಡ ಅಲ್ಲಲ್ಲಿ ಕವಿ ಲಕ್ಷ್ಮೀಶನಿಂದ ಪ್ರಭಾವಿತನಾಗಿರುವದು ಕಾಣುತ್ತದೆ. ಲಕ್ಷ್ಮೀಶನಲ್ಲಿ ಅಗ್ನಿಯನ್ನು ಮನೆಯಳಿಯನನ್ನಾಗಿ ಮಾಡಿಕೊಂಡ ರಾಜನಿದ್ದರೆ ಇಲ್ಲಿ ಶಿವನ್ನು ಮನೆಯಳಿಯನನ್ನಾಗಿ ಮಾಡಿಕೊಂಡ ಅರಸನಿದ್ದಾನೆ. ಇಲ್ಲಿಯೂ ಜನ್ನಗುದುರೆ ಕಲ್ಲಾಗಿ ಮಾರ್ಪಟ್ಟು ರಾಮ ಮಹಿಮೆಯನ್ನು ಕೇಳಿ ಪುನಃ ಕುದುರೆಯಾಗುತ್ತದೆ.

ಆದರೆ ಇವೆರಡೂ ಕಥೆಗಳ ನಡುವಿನ ಸಾಮ್ಯ ಇದಕ್ಕೂ ಹೆಚ್ಚು ಮುಂದೆ ಹೋಗಲಾರದು. ರಾಮಾಯಣ ಮಹಾಭಾರತಗಳಲ್ಲಿ ಬರುವ ಅಶ್ವಮೇಧದ ಕಥೆಗಳು ಎರಡೂ ಕಾವ್ಯಗಳ ಅರ್ಥಪೂರ್ಣತೆಯನ್ನು ಭಿನ್ನ ರೀತಿಗಳಲ್ಲಿ ವಿಸ್ತರಿಸುತ್ತವೆ. ಅಶ್ವಮೇಧಯಾಗ ಕ್ಷತ್ರಿಯರ ಪುರುಷಾರ್ಥಗಳ ಸಂಕೇತವೇನೋ ಹೌದು. ಆದರೆ ಮಹಾಭಾರತದಲ್ಲಿ ಪಾಂಡವರ ಅಶ್ವಮೇಧ ಕೇವಲ ಅವರ ಪುರುಷಾರ್ಥ ಸಿದ್ಧಿಗೆ ಸಂಕೇತವಷ್ಟೇ ಅಲ್ಲ, ಅವರ ಅವಸಾನದ ಸೂಚನೆಯೂ ಅಲ್ಲಿ ಅಡಗಿದೆ. ಯಾಗದ ಪರಿಸಮಾಪ್ತಿಯಲ್ಲಿ ಅವರು ಪುಣ್ಯಗಳಿಸಿ ಮುಂದೆ ಸ್ವರ್ಗದ ಹಾದಿಯನ್ನು ಹಿಡಿಯಬೇಕು. ಅವರು ಹೊರಟು ಹೋದರೆ ವೀರಭೋಗ್ಯಳಾದ ವಸುಂಧರೆ ಬಂಜೆಯಾಗುವದಿಲ್ಲ. ಜೈಮಿನಿ ಭಾರತದಲ್ಲಿ ಪಾಂಡವರಿಗೆ ಎದುರಾಗುವ ವೀರರೆಲ್ಲ ಪಾಂಡವರಿಗಿಂತ ಹೆಚ್ಚಿನ ವೀರರು, ಅವರಿಗಿಂತ ಹೆಚ್ಚಿನ ಕೃಷ್ಣಭಕ್ತರು. ಯಜ್ಞದ ಕುದುರೆಗೆ ಬೆಂಗಾವಲಾಗಿ ಕೃಷ್ಣನಿರದಿದ್ದರೆ ಅವರು ಗೆಲ್ಲುವ ಭರವಸೆ ಇರಲಿಲ್ಲ. ಪಾಂಡವ ಕೌರವರ ಸಂಗ್ರಾಮ ಜೀವನ ಮೌಲ್ಯಗಳ ಸಂಘರ್ಷವಾಗಿದ್ದರೆ ಅಶ್ವಮೇಧ ಪರ್ವದಲ್ಲಿಯ ಯುದ್ಧಗಳು ಆತ್ಮ ಪರೀಕ್ಷೆಯ ಉದಾಹರಣೆಗಳಾಗಿವೆ. ಇಲ್ಲಿ ಮುಖ್ಯವಾಗಿ ಲಕ್ಷ್ಮೀಶನಲ್ಲಿ – ಅಶ್ವಮೇಧದ ಕುದುರೆ ಭೌತಿಕವಾಗಿ ಪ್ರತ್ಯಕ್ಷವಾಗುವದಷ್ಟೇ ಅಲ್ಲದೆ ಕೊನೆಯವರೆಗೆ ಮಹತ್ವದ ಪಾತ್ರವನ್ನು ವಹಿಸುತ್ತದೆ. ಪಾಂಡವರ ಸತ್ವ ಪರೀಕ್ಷೆ ನಡೆಯುವದೇ ಈ ಕುದುರೆಯ ಮೂಲಕವಾಗಿ ಅದರ ರೂಪಾಂತರಗಳು ಅರ್ಜುನನಿಗೆ ಬೆವರು ತರಿಸುತ್ತವೆ. ಅದು ಯಾವ ರಾಜ್ಯವನ್ನು ಸೇರುವದೋ, ಅಲ್ಲಿ ಯಾವ ಅನುಭವ ಕಾದಿರುವದೋ ಎಂಬ ಆತಂಕ ಹೆಜ್ಜೆ ಹೆಜ್ಜೆಗೂ ತಪ್ಪಿಲ್ಲ.

ಆದರೆ ರಾಮಾಯಣವಲ್ಲಿ ಅಶ್ವಮೇಧ ಪಡೆಯುವ ಅರ್ಥ ವ್ಯಾಪ್ತಿ ಬೇರೆಯಾಗಿದೆ. ಉತ್ತರ ರಾಮಾಯಣದ ಅಶ್ವಮೇಧ ಪ್ರಸಂಗ ರಾಮ ಹಾಗೂ ಕುಶಲವರ ಪುನರ್ಮಿಲನಕ್ಕೆ ಅನಿವಾರ್ಯವಾದ ನಿಮಿತ್ತವಾಗಿದೆ. ಇದೇ ಕಾರಣಕ್ಕಾಗಿ ಲಕ್ಷ್ಮೀಶ ಕುಶಲತೆಯಿಂದ ರಾಮಾಯಣದ ಈ ಪ್ರಸಂಗವನ್ನು ಬಭ್ರುವಾಹನನ ಪ್ರಸಂಗದಲ್ಲಿ ಉಪಯೋಗಿಸಿಕೊಂಡ. ಶೇಷರಾಮಾಯಣದಲ್ಲಿ ಬರುವ ಹಲವಾರು ಉಪಕಥೆಗಳ ನಾಯಕರು ರಾಮನ ಸಾಮರ್ಥ್ಯವನ್ನು ಪರೀಕ್ಷಿಸುವುದಿಲ್ಲ. ಒಂದೆರಡು ಸಾರೆ ಅಂಥ ಪ್ರಸಂಗ ಬಂದರೂ ರಾಮನ ಮಹಿಮೆಯಿಂದ ಅಶ್ವಮೇಧದ ಕುದುರೆ ಪಾರಾಗಿಬಿಡುತ್ತದೆ. ಕುದುರೆಯ ದೇಶ ಸಂಚಾರದ ಉದ್ದೇಶ ರಾಮಚಂದ್ರನ ಸತ್ವವನ್ನು ಪರೀಕ್ಷಿಸುವದಲ್ಲ. ಅದರ ಗುರಿ ಒಂದೇ ವಾಲ್ಮೀಕಿಯ ಆಶ್ರಮ, ಕುಶಲವರೊಡನೆ ರಾಮನ ಪುನರ್ಮಿಲನ. ಮಹಾಭಾರತದಲ್ಲಿ ಗೋತ್ರಹನನದ ಪಾಪವನ್ನು ಕಳೆಯುವುದಕ್ಕಾಗಿ ಯುಧಿಷ್ಠಿರ ಯಜ್ಞ ದೀಕ್ಷಿತನಾಗಿದ್ದರೂ ಕುದುರೆಯ ಬೆನ್ನ ಹಿಂದೆ ಹೊರಟ ಭೀಮಾರ್ಜುನರ ಸಾಹಸ ಪ್ರದರ್ಶನವೇ ಅಲ್ಲಿ ಮುಖ್ಯವಾಗಿ ಬಿಡುತ್ತದೆ. ರಾಮಾಯಣದಲ್ಲಿಯೂ ಹೆಂಡಿರು ಮಕ್ಕಳಿಲ್ಲದ ರಾಮ ಅವರನ್ನು ಪಡೆಯುವುದಕ್ಕಾಗಿಯೇ ಕುದುರೆಯನ್ನು ಸಂಚಾರಕ್ಕೆ ಬಿಟ್ಟಂತಾಗಿದೆ. ಮುದ್ದಣನಲ್ಲಿಯೂ ಅಷ್ಟೇ. ಸೀತಾ ಪರಿತ್ಯಾಗದ ಕಥೆ ಮತ್ತು ಕೊನೆಯದಾಗಿ ಪುನರ್ಮಿಲನದ ಪ್ರಸಂಗ ಇವನ್ನು ಸುಸೂತ್ರವಾಗಿ ನಡೆಸಿಕೊಟ್ಟು ಜನ್ನ ಕುದುರೆ ಕೃತಕೃತ್ಯವಾಗುತ್ತದೆ. ಕಥೆಯ ನಡುವೆ ಕೂಡ ಅದು ಶತ್ರುಘ್ನ ಮೊದಲಾದವರಿಗೆ ಪುಣ್ಯಕ್ಷೇತ್ರಗಳ ದರ್ಶನ ಮಾಡಿಸುತ್ತ ನಡುನಡುವೆ ಓಗರ ಸ್ಮೃತಿ ಪಟಲದಿಂದ ಮರೆಯಾಗುತ್ತಿರುತ್ತದೆ. ಅದರ ಕಡಿವಾಣವನ್ನು ಜಗ್ಗಿ ಹಿಡಿದು ಗಿಡಕ್ಕೆ ಕಟ್ಟಿ ಸ್ಥಿರವಾಗಿ ನಿಲ್ಲಿಸುವವ ಲವನೊಬ್ಬನೇ.

ಹೀಗಾಗಿ ಈ ಕೃತಿಯಲ್ಲಿ ಬರುವ ಉಪಕಥೆಗಳು ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ರಾಮನ ಮಹಿಮೆಯನ್ನು ಎತ್ತಿ ತೋರಿಸುವ ಕಥೆಗಳಾಗಿವೆ. ಕಾಮಾಕ್ಷಿ ದರ್ಶನದ ಕಥೆ, ನೀಲಾಚಲ ದರ್ಶನದ ಕಥೆ, ಚ್ಯವನನ ಕಥೆ, ಸುಬಾಹು ಯುದ್ಧ, ಹನುಮಂತನ ಪರಾಜಯ ಇವು ಇಂಥ ಕಥೆಗಳು. ರಾಮನ ಅಂತಃಸತ್ವವನ್ನು ಪರೀಕ್ಷಿಸುವ ಸಾಮರ್ಥ್ಯ ಸೀತಾ ಪರಿತ್ಯಾಗದ ಕಥೆಗಷ್ಟೇ ಇರುವದು. ಹಾಗಾದರೆ ಮುಖ್ಯ ಕಥೆಗೆ ಈ ಉಳಿದ ಕಥೆಗಳಿಂದ ಆಗುವ ಪ್ರಯೋಜನವಾದರೂ ಏನು ಎಂದು ಪ್ರಶ್ನೆಯೇಳುವದು ಸಹಜವಾಗಿದೆ. ಈ ಕಥೆಗಳಲ್ಲಿ ಜ್ವಾಲೆಯಂಥ ಸೇಡಿನ ಹೆಣ್ಣಾಗಲಿ, ಬಭ್ರುವಾಹನನಂಥ ವೀರನಾಗಲಿ, ಚಂದ್ರಹಾಸನಂಥ ಭಕ್ತನಾಗಲಿ ಬರುವದಿಲ್ಲ. ಕುದುರೆಯ ದೇಶ ಸಂಚಾರ ಮುಗಿಯುವವರೆಗೆ ರಾಮ ದೂರ ಅಯೋಧ್ಯೆಯಲ್ಲಿಯೇ ಇದ್ದಾನೆ. ಅಂದ ಮೇಲೆ ಎರಡು ಶಕ್ತಿಗಳ ಪ್ರತ್ಯಕ್ಷ ಸಂಘರ್ಷ ಅಸಂಭವವೇ ಆಗಿದೆ. ಈ ಸಮಸ್ಯೆಗೆ ಒಂದು ಸಮಾಧಾನವನ್ನು ಹೇಳಬಹುದು. ಪ್ರಾಚೀನ ಕಾವ್ಯ ಸ್ವರೂಪವನ್ನು ಮುದ್ದಣ ಸಂಪೂರ್ಣವಾಗಿ ಒಪ್ಪಿಕೊಂಡಿದ್ದರಿಂದ, ಹಳೆಯ ಕಾವ್ಯ ಪ್ರಕಾರದ ವಿಧಾನದಲ್ಲಿಯೇ ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಂಡಿದ್ದಾನೆ.

ಈ ವಿಚಾರವನ್ನು ಇನ್ನೂ ಸ್ವಲ್ಪ ವಿಸ್ತರಿಸಬಹುದಾಗಿದೆ. ಜೀವನ ಮೌಲ್ಯಗಳಿಗೂ ಕಾವ್ಯದ ರಚನಾ ವಿಧಾನಕ್ಕೂ ಇರುವ ಸಂಬಂಧದ ಪ್ರಶ್ನೆ ಇದು. ಅಶ್ವಮೇಧದ ಪ್ರಸಂಗದಲ್ಲಿಯ ಮುಖ್ಯ ಕಥೆಗೂ ಉಪಕಥೆಗೂ ಇರುವ ಸಂಬಂಧ ಮೌಲ್ಯಗಳ ಸಂಬಂಧವಾಗಿದೆ. ರಾಮನ ಅಯೋಧ್ಯೆಗೂ ವಾಲ್ಮೀಕಿಯ ಆಶ್ರಮಕ್ಕೂ ನಡುವೆ ಇರುವ ಪ್ರದೇಶದಲ್ಲಿಯ ಮೌಲ್ಯಗಳ ಸೃಷ್ಟಿಯನ್ನು ಒಂದುಗೂಡಿಸಲು ಅಶ್ವಮೇಧ ಒಂದು ನಿಮಿತ್ತವಾಗುತ್ತದೆ. ಉದಾಹರಣೆಗಾಗಿ ಚ್ಯವನನ ಕಥೆಯನ್ನೇ ನೋಡಬಹುದು. ಚ್ಯವನನ ಕಥೆಗೂ ರಾಮನ ಕಥೆಗೂ ನೇರವಾದ ಸಂಬಂಧವಿಲ್ಲ. ಚ್ಯವನ ಕುದುರೆಯನ್ನು ಕಂಡ ಮೇಲೆ ರಾಮನ ದರ್ಶನಕ್ಕೆಂದು ಅಯೋಧ್ಯೆಗೆ ಹೋದ ಎಂಬಷ್ಟೇ ಹೇಳಲಾಗಿದೆ. ಆದರೆ ಶರ್ಯಾತಿ ರಾಜನ ಮಗಳು ಮುದುಕನಾದ ಚ್ಯವನನನ್ನು ಗಂಡನನ್ನಾಗಿ ಪಡೆದು, ಅಶ್ವಿನೀ ಕುಮಾರರ ಅನುಗ್ರಹದಿಂದ ಗಂಡನಿಗೆ ಯೌವನವನ್ನು ದೊರಕಿಸಿಕೊಟ್ಟು ಪಾತಿವ್ರತ್ಯವನ್ನು ಮೆರೆಯುವ ಕಥೆಯು ಜೀವನ ಮೌಲ್ಯಗಳು ರಾಮಾಯಣದವೇ ಆಗಿವೆ. ಮಹಾಭಾರತದಲ್ಲಿ ಬರುವ ಸಾವಿತ್ರಿಯ ಉಪಾಖ್ಯಾನದಷ್ಟೇ ಸತ್ವಯುತವಾದ ಕಥೆ ಇದು. ಶರ್ಯಾತಿಯ ಮಗಳ ಪಾತಿವ್ರತ್ಯ ಸೀತೆಯ ಪಾತಿವ್ರತ್ಯದಷ್ಟೇ ದೊಡ್ಡದಾಗಿದೆ. ಅವಳಿಗೆ ಚ್ಯವನನ ಆರೈಕೆ ಮತ್ತು ಅವನ ಪುನರುಜ್ಜೀವನದ ಚಿಂತೆ ಇವೇ ತಪಸ್ಸಾಗುತ್ತವೆ. ಭೃಗುವಿನ ಮಗನಾದ ಚ್ಯವನ ಹುಟ್ಟಿನಿಂದಲೇ ತಪಸ್ವಿ. ಅವನ ಮೈಮೇಲೆಲ್ಲ ಹುತ್ತ ಬೆಳೆದು ತಪಸ್ಸನ್ನೇ ತನ್ನ ಬೆಳವಣಿಗೆಗೆ ವಿಘ್ನವನ್ನಾಗಿ ಮಾಡಿಕೊಳ್ಳುವಂಥ ಉಗ್ರ ತಪಸ್ವಿ ಆದ್ದರಿಂದ ತಪಸ್ಸಿಗೆ ವಿರುದ್ಧವಾದ ಮಾರ್ಗದಲ್ಲಿ ನಡೆದಾಗಲೇ ಅವನ ಜೀವನಕ್ಕೊಂದು ಸಫಲತೆ ಬರುತ್ತದೆ. ಶರ್ಯಾತಿಯ ಮಗಳ ಪುಣ್ಯದಿಂದಲೇ ಅವನು ಈ ಕೃತಕೃತ್ಯತೆಯನ್ನು ಪಡೆಯುತ್ತಾನೆ. ರಾಮ ಸೀತೆಯರ ದಾಂಪತ್ಯ, ಅಹಲ್ಯೋದ್ಧಾರ ಮೊದಲಾದ ಸಂಗತಿಗಳ ಮೌಲ್ಯಗಳೇ ಇಲ್ಲಿ ಭಿನ್ನ ರೀತಿಯಲ್ಲಿ ಪ್ರಕಟವಾಗುತ್ತವೆ. ಚ್ಯವನನ ತಾಯಿಯ ಕಥೆಯಲ್ಲಿ ಸೀತಾಪಹರಣದ ಅಂಶಗಳು ಧ್ವನಿಪೂರ್ಣವಾಗಿ ಹುದುಗಿಕೊಂಡಿವೆ. ಇಂಥ ಮೌಲ್ಯಗಳ ಸಜೀವ ಸ್ಪರ್ಶದಿಂದ ಇಡೀ ಕಥೆ ಮುದ್ದಣನಲ್ಲಿ ಪುನಃ ಸೃಷ್ಟಿಗೊಳ್ಳುತ್ತದೆ.

'ರಾಮಾಶ್ವಮೇಧಂ'ದಲ್ಲಿಯ ಎಲ್ಲ ಉಪಕಥೆಗಳೂ ಇದೇ ಮಟ್ಟದಲ್ಲಿ ಕೆಲಸ ಮಾಡುತ್ತವೆಂದು ಹೇಳಲಾಗುವದಿಲ್ಲ. ಶೇಷ ರಾಮಾಯಣದ ಕಾಲಕ್ಕಾಗಲೇ ರಾಮ ಪರಮಾತ್ಮನಾಗಿ, ಪುರುಷೋತ್ತಮನಾಗಿ ಭಕ್ತಿ ಕಾವ್ಯದ ಸೊಗಡು ಅಂಟಿಕೊಂಡಿತ್ತು. ಮುದ್ದಣನಿಗಂತೂ ಅದರಿಂದ ಬಿಡುಗಡೆ ಇಲ್ಲ. ಅಲ್ಲದೆ ಪೌರಾಣಿಕತೆ ವ್ರತಗಳಲ್ಲಿ, ಕ್ಷೇತ್ರ ದರ್ಶನದಲ್ಲಿ, ಪುಣ್ಯಾಚರಣೆಯಲ್ಲಿ ಪ್ರಕಟವಾಗಬೇಕಿತ್ತು. ಹೀಗಾಗಿ ಕೆಲ ಕಥೆಗಳಿಗೆ ಈ ಜಿಡ್ಡು ಮೆತ್ತಿದ್ದರೆ ಆಶ್ಚರ್ಯವೇನಿಲ್ಲ. ಪುಣ್ಯಕ್ಕೆ ಈ ಉಪಕಥೆಗಳನ್ನು ಮುದ್ದಣ ಅಷ್ಟೊಂದು ದೀರ್ಘವಾಗಿ ಬೆಳೆಸಿಕೊಂಡು ಹೋಗಿಲ್ಲ. ಇದರಿಂದಾಗಿ ಮುಖ್ಯ ಕಥೆಯ ಪ್ರಭಾವ ಉಳಿದ ಕಥೆಗಳ ಬಾಹುಲ್ಯದಿಂದ ಮರೆಯಾಗುವ ಅವಕಾಶ ಕಡಿಮೆಯಾಗಿದೆ.

ಸೀತಾ ಪರಿತ್ಯಾಗ ಮತ್ತು ಪುನರ್ಮಿಲನಗಳ ನಿರೂಪಣೆಯಲ್ಲಿ ಮುದ್ದಣನ ಕಾವ್ಯಶಕ್ತಿ ಇನ್ನಷ್ಟು ಕಳೆಗೊಂಡಿದೆ. ಮನೋರಮೆಯ ಮೂಲಕವಾಗಿ ರಾಮಾಯಣದ ಬಗ್ಗೆ ತನಗಿರುವ ಪಕ್ಷಪಾತವನ್ನು ಮೊದಲೇ ತಿಳಿಸಿ ಬಿಟ್ಟಿದ್ದಾನೆ ಮುದ್ದಣ. ಮುದ್ದಣನ ಕವಿತ್ವ ಶಕ್ತಿಯ ಸುಕುಮಾರ ಸ್ವಭಾವವನ್ನು ಈ ಪಕ್ಷಪಾತದಿಂದ ಅರಿಯಬಹುದಾಗಿದೆ. ಅವನ ಕೃತಿಗಳಲ್ಲಿಯ ನಾಟ್ಯ ಪ್ರಜ್ಞೆಯ ಅಭಾವವನ್ನು ಕುರಿತು ಈ ಮೊದಲೇ ಸೂಚಿಸಲಾಗಿದೆ. ಅಂತೇ ವೀರರಸದ ನಿರೂಪಣೆಯಲ್ಲಾಗಲೀ, ಪ್ರತ್ಯಕ್ಷ ಕಾರ್ಯಗಳ ಸಂಘರ್ಷದಲ್ಲಾಗಲಿ ಅವನ ಶೈಲಿಗೆ ಕಳೆ ಬರುವುದೇ ಇಲ್ಲ. ಅವನ ಜನ್ಮಗುಮರೆ ಸಾಧ್ಯವಿದ್ದಷ್ಟು ಯುದ್ಧದ ಪ್ರಸಂಗಗಳನ್ನು ತಪ್ಪಿಸುತ್ತಲೇ ತಿರುಗುತ್ತದೆ. ಅಂಥ ಪ್ರಸಂಗಗಳು ಅನಿವಾರ್ಯವಾದಾಗ ಕಥೆಯ ಶೈಲಿ ಮನಸ್ಸಿಲ್ಲದ ಮನಸ್ಸಿನಿಂದ ಆ ಕಾರ್ಯವನ್ನು ಹೇಗೋ ನಿರ್ವಹಿಸುತ್ತದೆ. ಸುಬಾಹು ಯುದ್ಧ, ಹನುಮತ್ಪರಾಜಯ ಇಂಥ ಪ್ರಕರಣಗಳಲ್ಲಿ ಮುದ್ದಣ ಹಳೆಯ ಕಾವ್ಯಗಳ ಕೋಶಗಳಿಂದ ವರ್ಣನೆಗಳನ್ನು ನೆನಪಿಟ್ಟು ಪ್ರಯೋಗಿಸುತ್ತಾನೆ. ಅವು ಗುರಿ ತಾಕಿದರೆ ಕಾವ್ಯ ಸಾರ್ಥಕವಾಯಿತು. ಇಲ್ಲದಿದ್ದರೆ ತಪ್ಪು ಹಳೆಯ ಕವಿಗಳದು ! ಮುದ್ದಣನಲ್ಲಿ ಸಂಘರ್ಷವೆಲ್ಲ ಅಂತಃಕರಣದ ತಲಮಲದಲ್ಲಿ ಮಾತ್ರ ವ್ಯಕ್ತವಾಗಬೇಕು. ಅದಕ್ಕೆ ತಕ್ಕ ಸನ್ನಿವೇಶವೆಂದರೆ ಸೀತಾ ಪರಿತ್ಯಾಗ.

ಈ ಪ್ರಸಂಗದ ನಿರೂಪಣೆಯಲ್ಲಿ ರಸಸೃಷ್ಟಿ, ಕಾವ್ಯ ಸಂಕೇತಗಳು ಮತ್ತು ಕಥೆಯ ಜೀವನ ಮೌಲ್ಯಗಳು ಬೇರ್ಪಡಿಸಲಾರದಷ್ಟು ಬೆಸೆದುಕೊಂಡಿವೆ. ಇಲ್ಲಿ ಇನ್ನೊಂದು ಸಂಗತಿಯ ಬಗ್ಗೆಯೂ ಸ್ವಲ್ಪ ವಿಚಾರ ಅವಶ್ಯವಾಗಿದೆ. ಸೀತಾ ಪರಿತ್ಯಾಗದ ಸಂದರ್ಭದಲ್ಲಿ ಮುದ್ದಣನ ರಾಮನ ಪಾತ್ರ ರಚನೆ ಸಾಮಾನ್ಯವಾಗಿ ವಿಮರ್ಶಕರ ಟೀಕೆಗೆ ಗುರಿಯಾಗಿದೆ. ಅಗಸನೊಬ್ಬನ ಹೊಣೆಗೇಡಿತನದ ಮಾತನ್ನು ಕೇಳಿ, ಅದರ ತೂಕವೆಷ್ಟು ಎಂದು ವಿವೇಚಿಸುವಷ್ಟು ತಾಳ್ಮೆಯೂ ಇಲ್ಲದೆ, ಸೀತೆಯ ಬಯಕೆಯನ್ನೇ ನೆವ ಮಾಡಿಕೊಂಡು ರಾಮ ಸೀತೆಯನ್ನು ಕಾಡಿಗಟ್ಟಿದ ಎಂಬ ಸಂಗತಿಯಲ್ಲಿ ರಾಮನ ಅನುದಾತ್ತ ವರ್ತನೆಯನ್ನು ಗುರುತಿಸಿ, ಇದಕ್ಕಾಗಿ ಮುದ್ದಣನನ್ನು ದೂರಲಾಗಿದೆ. ಸೀತಾ ಪರಿತ್ಯಾಗ ಉತ್ತರ ರಾಮಾಯಣದ ಒಂದು ವಾಸ್ತವ ಸಂಗತಿಯಾಗಿದೆ. ಉದಾತ್ತವಾಗಲಿ ಅನುದಾತ್ತವಾಗಲಿ ರಾಮ ಸೀತೆಯನ್ನು ತೊರೆಯಲೇ ಬೇಕು. ರಾಮನ ಪಾತ್ರದ ನಡೆವಳಿಕೆಯಲ್ಲಿನ ನೈತಿಕತೆ ಅನೈತಿಕತೆಗಳಿಗಿಂತ ಸಮಸ್ಯೆಯ ಅನಿವಾರ್ಯತೆಯನ್ನು ಗುರುತಿಸಿದರೆ ಹೆಚ್ಚು ಕ್ಷೇಮ. ಇಷ್ಟೇ, ಸೀತೆಯನ್ನು ಕಾಡಿಗಟ್ಟಿದ ಮೇಲೆ ಅವಳ ವಿರಹದ ಅಗ್ನಿ ದಿವ್ಯವನ್ನು ಹಾಯ್ದು ರಾಮ ಪಡೆದದ್ದೇನು ಎಂಬ ವಿವರ ಮುದ್ದಣನಲ್ಲಿ ಬಂದಿಲ್ಲ. ಅದಕ್ಕಾಗಿ ಭವಭೂತಿಯ ರಾಮನನ್ನು ಕಾಣಬೇಕು. ಉತ್ತರ ರಾಮಾಯಣದಲ್ಲಿ ಸೀತಾ ಪರಿತ್ಯಾಗ ರಾಮನ ಅವತಾರ ಸಮಾಪ್ತಿಯ ಪ್ರತಿಕ್ರಿಯೆಯಲ್ಲಿ ಮೊದಲ ಹೆಜ್ಜೆಯಾಗಿದ್ದರೆ ಭವಭೂತಿಯಲ್ಲಿ ವಿರಹದ ಮೂಲಕವಾಗಿ ರಾಮ ಪಡೆಯುವ ತಾತ್ವಿಕ ಪುನರ್ಜನ್ಮ ಚಿತ್ರಿತವಾಗಿದೆ. ಈ ವರ್ಣನೆ ಮುದ್ದಣನಲ್ಲಿ ಇಲ್ಲ. ಭವಭೂತಿಗೆ ರಾಮ ಹೇಗೋ ಹಾಗೆ ಮುದ್ದಣನಿಗೆ ಸೀತೆ.

ರಾಮನ ವಿರಹ ಮುದ್ದಣನಲ್ಲಿ ಒಂದು ಅವಸ್ಥೆಯಲ್ಲ, ಉತ್ಕಟವಾದ ಭಾವ ಮಾತ್ರ "ಅನುಗಾಲಮಿ ವಿಯೋಗ ದುಃಖಮಂ ನೆನೆನೆನೆದು ಪಳಯಿಸುತಿರ್ದಂ". ಇದೇ ಭಾವವನ್ನು ಹತ್ತು ಮಾತುಗಳಲ್ಲಿ ಮೂಡಿಸಲಾಗಿದೆ. ಇದಾದ ಮೇಲೆ ರಾಮ ಯಜ್ಞ ದೀಕ್ಷಿತನಾಗಿ ಸ್ವರ್ಣ ಸೀತೆಯಂತೆ ಒಂದು ವ್ರತದ ಆವಶ್ಯಕ ಯಂತ್ರವಾಗಿ ಬಿಡುತ್ತಾನೆ.

ಆದರೆ ಇದರಿಂದುಂಟಾಗುವ ಅನುಕೂಲವೆಂದರೆ ಸೀತೆಯ ವ್ಯಕ್ತಿತ್ವ ಪರಿಪಾಕದ ಸ್ಥಿತಿಗೆ ಹೋಗಿ ಮುಟ್ಟುತ್ತದೆ. ಈ ಪ್ರತಿಕ್ರಿಯೆಯ ವಿವರಗಳನ್ನೆಲ್ಲ ಮುದ್ದಣನಲ್ಲಿ ಕಾಣಬಹುದು. ಲಕ್ಷ್ಮಣ ಬಂದು ಬೆಳಗಿನ ಹೊತ್ತು ಸೀತೆಯನ್ನು ಎಚ್ಚರಿಸಿದಾಗ ಸಂಭ್ರಮದಿಂದ ಕಾಡಿಗೆ ಹೊರಟ ಸೀತೆ ಪಡೆದದ್ದೇನನ್ನು ? ಸೀತೆಯ ಮನಃಸ್ಥಿತಿಗೂ ವಸ್ತುಸ್ಥಿತಿಗೂ ಇರುವ ಘೋರವಾದ ಅಂತರಕ್ಕೆ ಮೂಕಸಾಕ್ಷಿಯಾಗಿ ಲಕ್ಷ್ಮಣ ಅವಳ ಜೊತೆಗೆ ನಡೆಯುತ್ತಾನೆ. ಅರಣ್ಯದಲ್ಲಿ ಮುನಿಗಳ ಆಶ್ರಮಗಳನ್ನು ಕಾಣದೆ ಸೀತೆ ಹೌಹಾರುತ್ತಾಳೆ. ಲಕ್ಷ್ಮಣ ಅಣ್ಣನ ಆಣತಿಯನ್ನು ಅರುಹಿದಾಗ, "ಬಿರುಗಾಳಿಯ ಪೊಯ್ಲಿಗರೆಮುರಿದು ಬಾಡುವ ಕಪ್ಪುರವಾರೆಯಂತೆ" ಬಿದ್ದು ನಿಶ್ಚೇಷ್ಟಿತಳಾಗುತ್ತಾಳೆ. ("ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದಿಳೆಗೊರಗುವಂತೆ" – ಲಕ್ಷ್ಮೀಶ.) ಆಮೇಲೆ ಲಕ್ಷ್ಮಣನ ಶೈತ್ಯೋಪಚಾರದಿಂದ ಎಚ್ಚತ್ತು ದುಃಖವೆಲ್ಲ ಮರುಕಳಿಸಿದಂತಾಗಿ ತನ್ನನ್ನೇ ದೂರಿಕೊಳ್ಳುತ್ತಾಳೆ. ಪರಿತ್ಯಾಗದ ಅನ್ಯಾಯದ ಹಿಂದಿನ ತರ್ಕಹೀನತೆಯನ್ನು ಮೊದಮೊದಲು ಅವಳು ಒಪ್ಪಿಕೊಳ್ಳುವದಿಲ್ಲ. ಒಂದು ವೇಳೆ ರಾಮ ಇಂಥ ನಿರ್ಣಯವನ್ನು ಕೈಕೊಂಡಿದ್ದರೂ ಉಳಿದವರೆಲ್ಲ ಅವನಿಗೆ ಸಲಹೆ ಹೇಳದೆ ಸುಮ್ಮನಿದ್ದರೇಕೆ ಎಂಬುದು ಅವಳ ಪ್ರಶ್ನೆ. ಲಕ್ಷ್ಮಣ ಮಾತನಾಡದೆ ಕಲ್ಲಿನಂತೆ ಎದುರು ನಿಂತಾಗಲೂ ತನ್ನದೆಲ್ಲ ಅರಣ್ಯ ರೋದನವೆಂದು ಗೊತ್ತಾದ ಮೇಲೆ ಅವಳ ಮನಸ್ಸು ತನ್ನ ಮುಂದಿನ ಕರ್ತವ್ಯವೇನೆಂದು ವಿಚಾರಿಸುತ್ತದೆ. ಕಾಲಿಗೆರಗಿದ ಲಕ್ಷ್ಮಣನನ್ನು ಸಮಾಧಾನ ಪಡಿಸುತ್ತ ಅವನು ಅಯೋಧ್ಯೆಗೆ ಹೋದ ಮೇಲೆ ಏನೇನು ಮಾಡಬೇಕೆಂಬುದನ್ನು ಅವನಿಗೆ ಹೇಳುತ್ತಾಳೆ. ದುಃಖವಿದ್ದರೂ ಆ ದುಃಖಕ್ಕೆ ಇನ್ನೊಬ್ಬರು ಹೊಣೆಗಾರರಲ್ಲ ಎಂಬ ಅರಿವು ಅವಳಿಗೆ ಈಗ ಬಂದಿದೆ. "ಎಮ್ಮೆಲ್ಲರ್ಗೆ ಶ್ರೀರಾಮನಡಿದಾವರೆಯೊಲ್ಮೆಯೊಂದೆ ವಜ್ರಪಂಜರಮಕ್ಕೆ–" ಎಂದು ಆಶೀರ್ವದಿಸುತ್ತಾಳೆ. ಈ ಆಶೀರ್ವಾದದ ಹಿಂದೆ ಇನ್ನೂ ದುಃಖ ಕೋಪಗಳು ಗುಡುಗಾಡುತ್ತವೆ. ಆದರೂ ಲಕ್ಷ್ಮಣ ಎದುರಿಗಿರುವವರೆಗೆ ಅವಳು ಸಂಯಮದಿಂದಲೇ ವರ್ತಿಸುತ್ತಾಳೆ. ಲಕ್ಷ್ಮಣ ಅವಳನ್ನು ಬಿಟ್ಟು ಹೋದ ಮೇಲೆ ಮಾತ್ರ ಅವಳ ದುಃಖ ಕೋಡಿವರಿಯುತ್ತದೆ; ಆತ್ಮ ನಿಂದೆಗೂ ತೊಡಗುತ್ತಾಳೆ. ಆದರೆ ಈ ಅನುಭವ ಅವಳನ್ನು ಇನ್ನೊಂದು ಹೆಚ್ಚಿನ ಅನುಭವಕ್ಕೆ ಕರೆದೊಯ್ಯುತ್ತದೆ.

"ಉಃ ! ಪೋಕೆ ಪಟುವಟಿಲಿನೇಂ ? ಇವು ಭೋಗಂಗಳ್ ನಶ್ವರಂಗಳಲ್ತೆ ? ಆನೆ ರಾಯಗುವರಿಯಾಗಿ ಪುಟ್ಟೆನೆ ? ಕಾಡಂ ಪೊಕ್ಕು ರಕ್ಕಸರ ಬಂದಿಗೊಳಗಾಗೆನೆ ?

ದೇವಿಯಾಗೆನೆ? ಈಗಣೀ ಬವಣೆಗೆ ಬಾರೆನೆ? ಸಾಜಂ ಸುಖ ದುಃಖಂಗಳ್ ಪಗಲಿರುಳಂತೆವೊಲ್ ಲೋಕದೊಳ್ ಪರಿವರ್ತಿಸಿರ್ಕುಂ. ಇದವರೊಳೆನಗಟ್ಟಿಜು ಪೋಯ್ತು. ಶ್ರೀರಾಮನೊಲ್ಮೆಯೊಂದೆ ಶಾಶ್ವತಂ. ಆತನ ನಾಮಸ್ಮರಣೆಯೆ ಎನಗೆ ಬಟ್ಟೆ. ಹೇ ಕಲ್ಯಾಣರೂಪ ! ನೀನೆನ್ನಂ ಕೈವಿಡದಿರಯ್ ಹೇ ಕರುಣಾಕರ ! ದೆಸೆಗೆಟ್ಟೆನ್ನಂ ಮರೆಯದಿರ್. ಹೇ ಜಗದೊಡೆಯ ಪೆಣ್ಣೆನ್ನೊಳ್ ಕರುಣೆಯಿರಲಯ್. ರಾಮಾ ! ರಾಮಾ !! ರಾಮಾ !!! ಎಂದು ಧ್ಯಾನದೊಳಿರ್ದಳ್."

ಕಲಕಿದ ನೀರು ಸಾವಕಾಶವಾಗಿ ತಿಳಿಯಾಗುವಂತೆ ಸೀತೆ ಒಂದು ಸಾತ್ವಿಕ ಸಮಾಧಾನದ ನೆಲೆಯನ್ನು ಮುಟ್ಟುತ್ತಾಳೆ. ಈ ಅನುಭವದ ಮೌಲ್ಯಗಳು ನಿಚ್ಚಳವಾಗಿ ಕಣ್ಣಿಗೆ ಕಟ್ಟುತ್ತವೆ. ಸುಖ ದುಃಖಗಳ ಮೋಹದಿಂದ ಬಿಡುಗಡೆ ದೊರೆತ ಕೂಡಲೇ ಜೀವನವನ್ನು ಬೇರೆ ನೆಲೆಯಿಂದ ನೋಡಲು ಅವಳಿಗೆ ಸಾಧ್ಯವಾಗುತ್ತದೆ. ಇನ್ನು ಮೇಲೆ ರಾಮ ಅವಳಿಗೆ ಗಂಡನಲ್ಲ, ದೇವರು, ಜಗದೊಡೆಯ. ಸೀತೆಗೆ ಈ ಮೊದಲೂ ಪಾತಿವ್ರತ್ಯದ ನೀತಿಪಾಠ ಗೊತ್ತಿತ್ತು. ಆದರೆ ಅದು ಅನುಭವವಾಗುವದು ಮಾತ್ರ ಈಗ. ಹೆಂಡತಿಯ ವ್ಯಕ್ತಿತ್ವದಿಂದ ತನ್ನನ್ನು ಬಿಡಿಸಿಕೊಂಡ ಸೀತೆಗೆ ರಾಮನ ಅನ್ಯಾಯದ ಬಿಸಿ ತಾಗುವದಿಲ್ಲ. ದೇವರು ಕೊಡುವ ದುಃಖವನ್ನು ಸ್ವೀಕರಿಸುವಂತೆ ರಾಮನ ಈ ಅನ್ಯಾಯವನ್ನು ಸೀತೆ ಸ್ವೀಕರಿಸುತ್ತಾಳೆ. ಮೇಲೆ ಉದಾಹರಿಸಿದ ಗದ್ಯ ಭಾಗದಲ್ಲಿಯ ಕೊನೆಯ ವಾಕ್ಯಗಳಲ್ಲಿಯ 'ಕೈವಿಡದಿರಯ್', 'ಮರೆಯದಿರ್', 'ಕರುಣೆಯಿರಲಯ್' ಎಂಬ ಶಬ್ದಗಳು ಪರಿತ್ಯಾಗಕ್ಕೆ ತೀರ ವಿರುದ್ಧವಾದ ಅರ್ಥವನ್ನು ಕೊಡುತ್ತವೆ. ಈ ಮನಸ್ಥಿತಿಯಲ್ಲಿ ರಾಮನ ಧ್ಯಾನ ಸೀತೆಗೆ ಸುಲಭ ಸಾಧ್ಯವಾಗುತ್ತದೆ.

ಇದರ ಮುಂದಿನ ಗದ್ಯ ಭಾಗದಲ್ಲಿ ಬರುವ ವಾಲ್ಮೀಕಿಯ ಸುಂದರವಾದ ವರ್ಣನೆ ಸೀತೆಯ ಧ್ಯಾನಕ್ಕೆ ತಕ್ಕ ಫಲಶ್ರುತಿಯಾಗಿದೆ. ಈ ವರ್ಣನೆಯಲ್ಲಿ ಮುದ್ದಣ ಉಪಯೋಗಿಸಿರುವ ಪ್ರತಿಮೆಗಳೆಲ್ಲ ಈ ಲೋಕವನ್ನು ಮೀರಿ ನೆಲೆಯಿಂದ ಬಂದವುಗಳಾಗಿವೆ. ಸೀತೆ ಮತ್ತು ವಾಲ್ಮೀಕಿಯರ ಸಂದರ್ಶನದ ಒಂದು ದ್ವಿಧಾಭಾವವನ್ನೂ ತೋರಿಸಲು ಮುದ್ದಣ ಪ್ರಯತ್ನಿಸಿದ್ದಾನೆ. ವಾಲ್ಮೀಕಿಯನ್ನು ರಾವಣನಂತೆ ಇನ್ನೊಬ್ಬ ಕಪಟ ತಪಸ್ವಿಯೆಂದು ತಿಳಿಯುವದು ಸೀತೆಯ ಅನುಭವಕ್ಕೆ ಇನ್ನೂ ಒಂದು ಪುಟ ಕಡಿಮೆಯಾಗಿದೆಯೆಂಬುದನ್ನು ಸೂಚಿಸುತ್ತದೆ. ಅಲ್ಲದೆ ಲಕ್ಷ್ಮೀಶನ "ಹರುಷವಿಮ್ಮಡಿಸಿದುದು ಶೋಕಮೊತ್ತರಿಸಿದುದು ಬೆರಸಿದುದು ಲಜ್ಜೆ ಭೂಮಿಜೆಗಂದು" ಎಂಬ ವರ್ಣನೆಯ ಸಂಕೀರ್ಣತೆಯನ್ನು ಇನ್ನೂ ಹೆಚ್ಚು ವಿಸ್ತರಿಸಿ ಬರೆದಂತಾಗಿದೆ. ಸೀತೆಯ ಭಯ ತಾತ್ವಿಕ ಭಯವೂ ಹೌದು. ವಾಲ್ಮೀಕಿ ಅವಳಿಗೆ ಕೇವಲ ಆಶ್ರಯದಾತನಲ್ಲ, ಸತ್ಯದರ್ಶನಕ್ಕೆ ಅವನಿಂದ ಸಹಾಯವೂ ಬೇಕಾಗಿದೆ. 'ಆಗಳ್ ಭೂಸುತೆಗೆ ಮನದ ಭಯದ ಕವಲ್ ಪತ್ತುವಿಡೆ, ಸಂದೆಯಮೆನಸುಂ ಪೆಡಂಮೆಟ್ಟೆ, ದಿಟದ ನಂಬುಗೆಯಿಂಬುಗೊಳೆ' ಎಂಬ ವರ್ಣನೆ ಸೀತೆಯ ಅನುಭವದ ಜೆಲೆಗಳನ್ನು ಸ್ವಚ್ಛವಾಗಿ ಪ್ರತಿಬಿಂಬಿಸುತ್ತದೆ.

ಮುದ್ದಣ ಮುಖ್ಯವಾಗಿ ವರ್ಣಕ ಕವಿಯಾಗಿರುವದರಿಂದ ಚಿತ್ರಗಳ ಮುಖಾಂತರವಾಗಿಯೇ ಇವೆಲ್ಲವನ್ನೂ ಸಾಧಿಸುತ್ತಾನೆ. ಅವನ ವರ್ಣನೆಗಳಲ್ಲಿ ಕೆಲವು ಮಾತ್ರ ಅಲಂಕಾರಿಕ ತೃಪ್ತಿಗಾಗಿ ಬಂದಿವೆಯಾದರೂ, ಉಳಿದವುಗಳಲ್ಲಿ ಕಾವ್ಯೋದ್ದೇಶವನ್ನೂ ಸಫಲಗೊಳಿಸುವ ಸಾಮರ್ಥ್ಯವಿದೆ. ಸೀತೆಯ ಮಕ್ಕಳ ಬಯಕೆಯ ವರ್ಣನೆ ರಾಮಾಯಣದ ಪ್ರಧಾನ ಮೌಲ್ಯವಾದ ಸಂತಾನದ ಅಪೇಕ್ಷೆಯನ್ನು ಸುಂದರವಾಗಿ ನಿರೂಪಿಸುತ್ತದೆ. ಸೀತೆ ವನವಾಸಕ್ಕೆ ಹೋಗುವ ಬಯಕೆಯನ್ನು ರಾಮನಿಗೆ ತಿಳಿಸಿದಾಗ ಬರುವ ರಾತ್ರಿಯ ವರ್ಣನೆ ಇನ್ನೂ ಹೆಚ್ಚು ಧ್ವನಿ ಪೂರ್ಣವಾಗಿದೆ. ಸೀತಾ ಪರಿತ್ಯಾಗದ ಹೊತ್ತಿನಲ್ಲಿ ರಾಮನ ಮನಸ್ಸಿನಲ್ಲಿ ಹುಟ್ಟುವ ನೈತಿಕ ಗೊಂದಲ, ಕಳವಳಗಳ ಪ್ರತಿಚಿತ್ರ ಈ ವರ್ಣನೆಯಲ್ಲಿದೆ.

“ಅನಿತರೊಳ್ ನೀಲಿಯ ಕಡುವಣ್ಣದೊಳಳ್ದಿದ ಪಂದಿಯ ತೊವಲಂ ಮುಸುಂಕಿಟ್ಟು ಮೈದೋರದೆ ಲೋಕಮಂ ನುಂಗಲ್ಕೆಂದು ಬಂದ ಮಂದೇಹ ರಾಕ್ಷಸನೆನೆ ಕಳ್ತಲೆಯೆತ್ತಂ ಪರ್ಜಿದುದು. ಇದು ನಾಡಿದು ಕಾಡಿದು ನೆರೆಯಿದು ಕೆರೆಯಿದು ನೆಲನಿದು ಪೊಲನಿದು ಬೆಟ್ಟಿದು ತಿಟ್ಟಿದು ನರನಿದು ಮರನಿದು ದರಿಯಿದೋವರಿಯಿದೆಂದು ಬಗೆಯಲ್ಬಾರದಾಯ್ತು ಆ ಸಮಯದೊಳ್ ಜಿಸುಗೈಯನಟ್ಟಿದ ಬೇಹುಕಾಜಿರ ಸೋವೆನಲಾಗನದೊಳೆಡೆಯೊಳ್ ಅರಿಲುಂ ಭೂಮುಖದ ಮನೆ ಮನೆಯೊಳ್ ಸೊಡರುಮೆಸೆದುವು...”

ಇಂಥಾ ತಮೋಲೋಕದ ಒಡಲಿನಿಂದಲೇ ಸೀತಾ ಪರಿತ್ಯಾಗದ ಸಂದೇಶವನ್ನು ಬೇಹುಗಾರ ಹೊತ್ತು ತರುತ್ತಾನೆಂಬುದನ್ನು ನೆನೆದರೆ ಈ ವರ್ಣನೆಯ ಧ್ವನಿಶಕ್ತಿ ಎಷ್ಟೆಂಬುದು ಗೊತ್ತಾಗುತ್ತದೆ. ಮುದ್ದಣನಲ್ಲಿ ಇಂಥ ಹಲವಾರು ವರ್ಣನೆಗಳಿವೆ. ಅವನ್ನೆಲ್ಲ ಚರ್ಚಿಸಲು ಇಲ್ಲಿ ಅವಕಾಶವಿಲ್ಲ. ರಾಮಕಥೆಯಲ್ಲಿ ಜೀವನ ಮೌಲ್ಯಗಳು ಕಾವ್ಯದಲ್ಲಿ ಹೇಗೆ ಅಲಂಕಾರಗಳಲ್ಲಿ ಮಾರ್ಪಟ್ಟು ಬೇರೆ ರೀತಿಯ ಅನುಭವವನ್ನು ನೀಡುತ್ತವೆಂಬುದನ್ನು ತೋರಿಸಲು ಮೇಲೆ ಕೊಟ್ಟಿರುವ ಉದಾಹರಣೆಯೊಂದು ಸಾಕು.

‘ರಾಮಾಶ್ವಮೇಧಂ’ದಲ್ಲಿಯ ಮೂಲಚಿತ್ರ ಇದು. ಮೊದಲಿನೆರಡು ಕೃತಿಗಳಿಗಿಂತ ಇಲ್ಲಿ ಪುರಾಣದ ಉಪಯೋಗ ಹೆಚ್ಚು ಬೆಲೆಯುಳ್ಳದ್ದಾಗಿದೆ. ವಿಷಯಾಂತರವಾದರೂ ಅಡ್ಡಿ ಇಲ್ಲ. ಈ ಪುರಾಣದ ಉಪಯೋಗದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕು. ಹೆಚ್ಚು ಆಧುನಿಕರಾಗಿದ್ದ ಬಿ. ಎಂ. ಶ್ರೀ, ದೇವುಡು ಅಥವಾ ಕೈಲಾಸಂರಿಗಿದ್ದಂತೆ ಮುದ್ದಣನಿಗೆ ಪುರಾಣಗಳ ಪುನರುಜ್ಜೀವನದ ಲವಲವಿಕೆ ಇರಲಿಲ್ಲ. ಅದಕ್ಕೆ ಅಗತ್ಯವೂ ಇರಲಿಲ್ಲ. ಸ್ವಂತದ ಅರ್ಥಪೂರ್ಣತೆಯ ಕೊರತೆಯನ್ನು ತುಂಬಿಕೊಳ್ಳುವದಕ್ಕಾಗಿ ಪುರಾಣಗಳನ್ನು ಮೊರೆಹೋಗುವದು ಬೇರೆ. ಮುದ್ದಣನಂತೆ ಪುರಾಣಗಳ ಪ್ರಪಂಚಕ್ಕೆ ಸೇರಿಕೊಳ್ಳುವದು ಬೇರೆ. ಸ್ವಂತದ

ದರ್ಶನವನ್ನು ಪ್ರಕಟಗೊಳಿಸಲು ಸಮಕಾಲೀನ ಜೀವನದಲ್ಲಿ ಸಾಮಗ್ರಿ ದೊರೆಯದಿದ್ದಾಗ ಪುರಾಣಗಳಿಂದ ಅದನ್ನು ತೆಗೆದುಕೊಂಡು, ಆ ಸಾಮಗ್ರಿಗೆ ಬೇರೆ ಬಣ್ಣ ಕೊಟ್ಟು ಪುನಃ ಸೃಷ್ಟಿಸುವದು ಸಾಹಿತ್ಯದಲ್ಲಿ ತೀರ ಇತ್ತೀಚಿನ ವಾಡಿಕೆಯಾಗಿದೆ. ಆದರೆ ಪುರಾಣಗಳ ಪುನರುಜ್ಜೀವನದಲ್ಲಾಗಲಿ, ಅಥವಾ ಪುರಾಣಗಳ ಭಿನ್ನ ಉಪಯೋಗದಲ್ಲಾಗಲಿ ಕಾಣುವ ಜೀವನ ಮೌಲ್ಯಗಳು ಪುರಾಣಗಳ ಮೌಲ್ಯಗಳಿಗಿಂತ ಭಿನ್ನವಾಗಿರುತ್ತವೆ. ಮುದ್ದಣನ ಕೃತಿಗಳಲ್ಲಿ ಇಂಥ ಅಭಿವ್ಯಕ್ತಿಯನ್ನು ನಿರೀಕ್ಷಿಸುವದು ಸಾಧ್ಯವಿಲ್ಲ. ಅವನು ಸಂಪೂರ್ಣವಾಗಿ ಪೌರಾಣಿಕ ಪ್ರಪಂಚಕ್ಕೆ ಸೇರಿದ, ಅಲ್ಲಿಯ ಮೌಲ್ಯಗಳನ್ನು ಒಪ್ಪಿಕೊಂಡ ಕವಿಯಾಗಿದ್ದಾನೆ. ಇದರಿಂದಾಗಿ ಅವನ ಮೌಲ್ಯಗಳ ಪ್ರಪಂಚ ಕಿರಿಯದಾಗಿದ್ದರೂ ಸಮಗ್ರವಾಗಿದೆಯೆಂದೇ ಹೇಳಬೇಕು. ಕವಿ ಅಲ್ಲಲ್ಲಿ ಚಿರಪರಿಚಿತವಾದ ನೀತಿಪಾಠವನ್ನೇ ಬರೆಯುತ್ತಿದ್ದಾನೆಂದು ಅನ್ನಿಸಬಹುದು. ಆದರೆ ಮೌಲ್ಯಗಳ ವರ್ಣ ಸಮೂಹದಲ್ಲಿ ಇಂಥ ನೀತಿಯೂ ಒಂದಾಗಿದೆ ಎಂಬುದನ್ನು ಮರೆಯುವಂತಿಲ್ಲ. ಉಳಿದ ಮೌಲ್ಯಗಳಿಗಿಂತ ಈ ನೀತಿಪಾಠಗಳು ಕೃತಿಯ ರಸಪ್ರಪಂಚದ ಹೊರಗೆ ನಿಂತಿರುವದರಿಂದ ಅವುಗಳಷ್ಟೇ ಎದ್ದು ಕಾಣುತ್ತವೆ. ವರ್ಣನೆಗಳಲ್ಲಿ, ಅಲಂಕಾರಗಳಲ್ಲಿ ಸೂಕ್ಷ್ಮವಾದ ಮೌಲ್ಯಗಳು ಹುದುಗಿಕೊಂಡಿರುತ್ತವೆ ಇದರಿಂದಾಗಿ ಕೃತಿಬಂಧದ ಸಮಗ್ರವಾದ ಅಭ್ಯಾಸ ಅಗತ್ಯವಾಗುತ್ತದೆ. ಪೌರಾಣಿಕ ದೃಷ್ಟಿಕೋನವನ್ನು ತನ್ನದಾಗಿ ಅಳವಡಿಸಿಕೊಂಡ ಕವಿಗೆ ಜೀವನ ಮೌಲ್ಯಗಳನ್ನು ಒತ್ತಿ ಹೇಳುವ ಅವಶ್ಯಕತೆ ಇರುವದಿಲ್ಲ. ಅಭಿಜಾತ ಸಾಹಿತ್ಯದಲ್ಲಿ ವಾಚ್ಯವಾದ ಅಭಿವ್ಯಕ್ತಿಗಿಂತ ವ್ಯಂಗ್ಯ ಹೆಚ್ಚು ಮಹತ್ವದ್ದಾಗುವದು ಇದೇ ಕಾರಣಕ್ಕಾಗಿ.

ಮುದ್ದಣನ ಪೌರಾಣಿಕ ದೃಷ್ಟಿಕೋನವನ್ನು ಅವನ ಮೂಲಕಥೆಯಲ್ಲಿ ಕಾಣಬಹುದು; ಅದಕ್ಕಿಂತ ಹೆಚ್ಚಾಗಿ ಅವನ 'ಚಿತ್ರದ ಚೌಕಟ್ಟಿ'ನಲ್ಲಿ ಕಾಣಬಹುದು. ಕಥಾ ಮುಖದಲ್ಲಿಯ ಮಳೆಗಾಲದ ವರ್ಣನೆಯಲ್ಲಿ ಒಂದಿಷ್ಟು ನವೀನತೆಯಿದೆ. ಇಂಥ ಚಿತ್ರಮಯವಾದ ವರ್ಣನೆ ಹಳೆಯ ಕಾವ್ಯಗಳಲ್ಲಿ ಅಪರೂಪವೇನಲ್ಲ. ಆದರೆ ಮಳೆಗಾಲದ ವರ್ಣನೆಯಲ್ಲಿರುವ ಕಾಲಪುರುಷನ ಬೇನೆಯ ಚಿತ್ರ ಒಂದಿಷ್ಟು ಅಪೂರ್ವವಾಗಿದೆ. 'ದುರ್ದಿನ' ಶಬ್ದದ ಧ್ವನಿ ಸಮೂಹ ಮುದ್ದಣನಿಗೆ ಈ ಚಿತ್ರವನ್ನು ಸ್ಫುರಿಸಿತೋ, ಅಥವಾ ಇದು ಕವಿಯ ಸ್ವಂತ ಬೇನೆಯ ಚಿತ್ರವೋ ಅಷ್ಟು ಸುಲಭವಾಗಿ ಹೇಳಲು ಬರುವುದಿಲ್ಲ. ಮುಂದೆ ಮಾತ್ರ ಈ ತೆರದ ಕಾಡುಂ ನಾಡುಂ ಮನೋಜ್ಞಮಾಗೆ........ ಎಂದು ಪ್ರಾರಂಭವಾಗುವ ಗದ್ಯ ಭಾಗದಲ್ಲಿ ನಂದಳಿಕೆಯವರು ಮರೆಯಾಗಿ ಮುದ್ದಣ ಪ್ರತ್ಯಕ್ಷನಾಗುತ್ತಾನೆ. 'ಎಂದಿನಂತಿರೋಲಗಂ ಪರಿಯೆ ಕಬ್ಬಿಗರ ಬಲ್ಲಹಂ ಮುದ್ದಣಂ' ಎಂಬ ವಿವರವನ್ನು ಮರೆಯುವಂತಿಲ್ಲ. ಮುದ್ದಣನ ವ್ಯಕ್ತಿತ್ವ, ಮನೋವೃತ್ತಿ, ದೃಷ್ಟಿಕೋನಗಳನ್ನು ಈ ಸಣ್ಣ ವರ್ಣನೆಯಿಂದ ತಿಳಿದುಕೊಳ್ಳಬಹುದು.

ಇದು ಹಳೆಯ ಕವಿಯ ಚಿತ್ರ. ದೊರೆ, ಓಲಗ, ಕಾವ್ಯಪಠಣ, ಉಡುಗೊರೆ - ಇಂಥ ಬಾಹ್ಯ ಸಂಕೇತಗಳ ಮೂಲಕ ಇಂಥವನು ನಿರ್ಮಿಸಲಿರುವ ಕಾವ್ಯ ಎಂಥದೆಂಬುದು ಗೊತ್ತಾಗುತ್ತದೆ. ಮುಂದೆ ಮನೋರಮೆಯೊಡನೆ ಆಗುವ ಸಂವಾದದಲ್ಲಿ ಕಾವ್ಯವಸ್ತು, ಅಭಿವ್ಯಕ್ತಿಯ ರೀತಿ, ಕಾವ್ಯೋದ್ದೇಶ, ಕಾವ್ಯ ಲಕ್ಷಣಗಳು, ಭಾಷೆ ಇವೆಲ್ಲ ನಿರ್ಣೀತವಾಗುತ್ತವೆ. ಗದ್ಯದಲ್ಲಿ ಬರೆಯುವದಕ್ಕೆ ಸಮರ್ಥನೆ. ಕನ್ನಡ ಸಂಸ್ಕೃತಗಳ ಸಮಸ್ಯೆಗೆ ಪರಿಹಾರ ಇವುಗಳನ್ನೂ ಮುದ್ದಣ ಹೇಳಿಬಿಡುತ್ತಾನೆ. ಒಟ್ಟಿನಲ್ಲಿ ತನ್ನದು ಕನ್ನಡ ಸಂಪ್ರದಾಯಕ್ಕೆ ಹೊಂದಿಕೊಳ್ಳುವ ಹೊಸ ಕಾವ್ಯ ಎಂದು ಸಿದ್ಧಪಡಿಸುತ್ತಾನೆ.

ಕಥಾ ಮುಖದಲ್ಲಲ್ಲದೆ ಬೇರೆ ಎರಡು ಕಡೆಗೆ, ಮುದ್ದಣ ಮನೋರಮೆಯೊಡನೆ ಸಂಭಾಷಿಸುತ್ತಿರುವಾಗಲೇ, ಕವಿಯ ಪ್ರಸ್ತಾಪ ಬರುತ್ತದೆ. ಇವೆರಡೂ ಸಂದರ್ಭಗಳಲ್ಲಿ ಕವಿಯ ವಿಡಂಬನೆಯಿದೆ. ಮನೋರಮೆಯನ್ನು ರತಿಯೊಡನೆ ಹೋಲಿಸಿ ಬಣ್ಣಿಸುವಾಗ ಹಳೆಯ ಕಾವ್ಯಗಳ ವರ್ಣನೆಯ ಪದ್ಧತಿಯನ್ನು ಮುದ್ದಣ ವಿಡಂಬಿಸುತ್ತಾನೆ. ಆ ವರ್ಣನೆಯ ಹುಯಿಲು ಕರ್ಣಕಠೋರವಾಗಿದೆಯಲ್ಲದೆ ಅದರಿಂದುಂಟಾಗುವ ಚಿತ್ರ ಪರಂಪರೆ ಹೊಟ್ಟೆ ತುಂಬ ನಗಿಸುವಂಥದು. ಇನ್ನೊಂದು ಸಂದರ್ಭವೆಂದರೆ ಅರಣ್ಯಕಮುನಿ ಶತ್ರುಘ್ನನ ಸಾವಿರ ಲೆಕ್ಕದ ಸೈನ್ಯಕ್ಕೆ ಉಣಬಡಿಸಿದನೆಂಬ ಮಾತನ್ನು ಕೇಳಿ ಮನೋರಮೆ ಸಂಶಯವನ್ನು ವ್ಯಕ್ತಪಡಿಸುವ ಸನ್ನಿವೇಶ. 'ಓಂ ಭವತಿ ಭಿಕ್ಷಾಂದೇಹಿ'ಯೆಂಬ ಸಪ್ತಾಕ್ಷರೀ ಮಂತ್ರವನ್ನೂ ವಶಪಡಿಸಿಕೊಂಡಿರುವ ಕಬ್ಬಿಗರ ಬಡತನದ ಕರುಣಪೂರ್ಣವಾದ ವಿಡಂಬನೆ. ಇವೆರಡೂ ಸಂದರ್ಭಗಳಲ್ಲಿ ಕಂಡುಬರುವ ಕವಿಯ ವಿದೂಷಕ ಪಾತ್ರ ಮುದ್ದಣನ ಆಧುನಿಕ ದೃಷ್ಟಿಕೋನದ ಫಲವೆಂದು ತೋರುವದಿಲ್ಲ. ಪ್ರತಿಕ್ರಿಯೆಯ ಪರಿಣಾಮವಾಗಿ ಹುಟ್ಟಬಂದ ವಿಡಂಬನೆಯಾಗಿದ್ದರೆ ಅದರ ಶೈಲಿ ಹೀಗಿರುತ್ತಿರಲಿಲ್ಲ. ಹಳೆಯ ಕವಿಗಳ ವರ್ಣನೆಯ ರೀತಿಯನ್ನು ಹಾಸ್ಯ ಮಾಡಿದ ಮುದ್ದಣ ತನ್ನ ಕೃತಿಯಲ್ಲಿ ಯಾವ ಸಂಕೋಚವೂ ಇಲ್ಲದೆ ಅಂಥ ವರ್ಣನೆಗಳನ್ನು ಉಪಯೋಗಿಸುತ್ತಾನೆ. ಸಪ್ತಾಕ್ಷರೀ ಮಂತ್ರದ ಟೀಕೆ ಅರಮನೆಯಲ್ಲಿ ರನ್ನದೊಡವುಗಳನ್ನು ಪಡೆಯುವ ಕವಿಗೆ ಹೇಗೆ ಸ್ಫುರಿಸಿತೋ ದೇವರೇ ಬಲ್ಲ. ಆದರೆ ಇದು ಹೇಳಿ ಕೇಳಿ ಹಾಸ್ಯ ಪ್ರಸಂಗ. ಅಂದಮೇಲೆ ಈ ವಿಡಂಬನೆಯನ್ನು ಗಂಭೀರವಾಗಿ ಪರ್ಯಾಲೋಚಿಸಿ ಮುದ್ದಣನಲ್ಲಿ ಆಧುನಿಕತೆಯನ್ನು ಅರಸುವದು ಅಷ್ಟು ಸಮಂಜಸವಾಗಲಾರದು. ಇಷ್ಟೇ ಈ ವಿಡಂಬನೆಗಳಿಂದ ಮುದ್ದಣನಿಗೆ ಹಳೆಯ ಕಾವ್ಯಗಳ ಪರಿಚಯ ಎಷ್ಟು ನಿಕಟವಾಗಿತ್ತೆಂಬುದು ಗೊತ್ತಾಗುತ್ತದೆ.

ಮುದ್ದಣ ಮನೋರಮೆಯರ ಸಂವಾದಗಳ ಬಗ್ಗೆ ಬೇರೆಯಾಗಿಯೇ ವಿಚಾರ ಮಾಡಬೇಕು. ಮೊದಲನೆಯ ಕಾರಣ ಇವು ಹಳೆಗನ್ನಡ ಸಾಹಿತ್ಯದಲ್ಲಿ

ಅಪೂರ್ವವಾಗಿರುವದು, ಎರಡನೆಯ ಕಾರಣ ವಿಮರ್ಶಕರೆಲ್ಲರೂ ಇವುಗಳನ್ನು ಮೆಚ್ಚಿಕೊಂಡಿರುವದು. ಮುದ್ದಣ ಮನೋರಮೆಯರ ಪಾತ್ರ ಸೃಷ್ಟಿಯ ಮೋಹಕತೆ, ಸರಸ-ವಿನೋದ, ಸಂಭಾಷಣೆಯ ಚತುರತೆ ಇವು ಆಧುನಿಕರನ್ನು ಆಕರ್ಷಿಸಿದ್ದರೆ ಆಚ್ಚರಿಯೇನಲ್ಲ. ಮುದ್ದಣನ ವಿನಯ, ಮನೋರಮೆಯ ರಸಿಕತೆ ಈ ಸಂವಾದಗಳ ಮೂಲಕ ಅನ್ಯಾದೃಶವಾಗಿ ಪ್ರಕಟವಾಗಿವೆ. ಇವರ ಪ್ರತಿಭೆ ರಾಜಶೇಖರ ಹೇಳುವಂತೆ ಭಾವಯಿತ್ರೀ ಹಾಗೂ ಕಾರಯಿತ್ರೀ ಎಂದು ಎರಡು ವಿಧವಾಗಿವೆ. ಮಳೆಗಾಲದಿಂದ ಕಾಮನ ಹಬ್ಬದವರೆಗೆ ಇಬ್ಬರೂ ಕೂಡಿ ಈ ಕಾವ್ಯವನ್ನು ನಿರ್ಮಿಸಿದರೆಂಬ ಸೂಚನೆ ಕೃತಿಯಲ್ಲಿಯೇ ದೊರೆಯುತ್ತದೆ. ಇದೆಲ್ಲ ನಿಜ. ಆದರೆ ಈ ಸಂವಾದಗಳಿಂದ ಕೃತಿಗೆ ತಾಂತ್ರಿಕ ಪ್ರಯೋಜನವೇನಾದರೂ ದೊರೆಯುತ್ತದೆಯೇ ? ಇವರ ಸಂಭಾಷಣೆಗಳು ಕೃತಿಯ ಹೊರಗೇ ಉಳಿಯುವದಲ್ಲದೆ ತಮ್ಮ ಮೆರುಗಿನಿಂದ ಮೂಲಕೃತಿಯ ಅಂದವನ್ನು ಮಂಕಾಗಿಸುತ್ತವೆಯೇ ಎಂಬ ಸಂಶಯ ಕೂಡ ಬಾರದಿಲ್ಲ. ಸಾಮಾನ್ಯವಾದ ಚಿತ್ರಕ್ಕೆ ಸುವರ್ಣದ ಚೌಕಟ್ಟು ಎನ್ನುವದು ಮುದ್ದಣನ ಬಗ್ಗೆ ಸರ್ವಸಮ್ಮತವಾದ ನಿರ್ಣಯವಾಗಿದೆ. ಸಂವಾದಗಳ ಹೊಸ ರುಚಿಯನ್ನು ಸವಿದ ನಾಲಗೆಗೆ ರಾಮಾಶ್ವಮೇಧದ ಕಥನ ನಿಡುರಗಳೆಯಾಗಿ ಬೇಸರವನ್ನು ತರಿಸಿರಬೇಕು. ಏನೇ ಇದ್ದರೂ ಈ ನಿರ್ಣಯದ ಹಿಂದಿನ ಮನೋಭಾವ ಹೊಸ ರೀತಿಯನ್ನು ಮೆಚ್ಚಿಕೊಂಡು ಹಳೆಯ ತಿರುಳನ್ನು ತಿರಸ್ಕರಿಸುವದಾಗಿದೆ. ಮುದ್ದಣನ ಈ ಸಂವಾದಗಳಷ್ಟನ್ನೇ ಬರೆದಿದ್ದರೂ ದೊಡ್ಡ ಕವಿಯಾಗಬಲ್ಲನೇ ಕೃತಿ ಸಫಲವಾಗಬಹುದಿತ್ತೇ ಎಂದು ನಮ್ಮನ್ನು ನಾವೇ ಕೇಳಿಕೊಳ್ಳಬೇಕಾಗಿದೆ ಅಥವಾ ಚೌಕಟ್ಟು ಅಂದವಾಗಿದೆಯೆಂದು ಹಳೆಯ ಚಿತ್ರವೊಂದಕ್ಕೆ ಅದನ್ನು ಉಪಯೋಗಿಸಿದನೇ ಮುದ್ದಣ ? ನಾಲು ಸಿಕ್ಕಿತೆಂದು ಕುದುರೆಯ ಖರೀದಿಸ ಹೊರಟ ಸ್ಥಿತಿ ಆಯಿತು ಇದು.

ಮುದ್ದಣನ ಈ ಸಂವಾದಗಳಿಗೆ ತಾಂತ್ರಿಕ ಪ್ರಯೋಜನವಿದೆ. ರಾಮಾಶ್ವಮೇಧದ ಕತೆ ಸೀತಾ ಪರಿತ್ಯಾಗದ ಸನ್ನಿವೇಶವೊಂದನ್ನು ಬಿಟ್ಟರೆ ಉಳಿದದ್ದೇ ಸಂಚಾರದ ಕತೆ. ಕುದುರೆ ಹೋದ ಕಡೆಗೆಲ್ಲ ಒಂದು ಕತೆ ಹುಟ್ಟಿಕೊಳ್ಳುತ್ತದೆ. ಆದರೆ ಅದೂ ಕಣ್ಣೆದುರಿಗೆ ಪ್ರತ್ಯಕ್ಷವಾಗಿ ನಡೆಯುವ ಪ್ರಸಂಗವೇ ಆಗಬೇಕೆಂಬ ನಿಯಮವೇನೂ ಇಲ್ಲ. ಇತರ ಕೆಲವು ಕತೆಗಳನ್ನು ಸಚಿವನಾದ ಸುಮತಿ ಶತ್ರುಘ್ನನಿಗೆ ಹೇಳುತ್ತಾನೆ. ಇವುಗಳನ್ನೆಲ್ಲ ಸಂಗ್ರಹಿಸಿ ಮುದ್ದಣ ಮನೋರಮೆಗೆ ಹೇಳುತ್ತಾನೆ. ಆದರೆ ಇವೂ ಸ್ವಕಪೋಲಕಲ್ಪಿತವಲ್ಲ, "ಮುನ್ನಮಾರಾರ್ಗಿದನೊರೆದರ್ ?" ಎಂದು ಕೇಳಿದ ಮನೋರಮೆಯ ಒರಶ್ನೆಗೆ ಮುದ್ದಣ, "ಮುನ್ನಂಶೇಷಂ ವಾತ್ಸ್ಯಾಯನಂಗೆ ಪೇಳ್ದನದನೆಯೆ ನಿನಗೆ ಬಿತ್ತರಿಪೆಂ. ಆದೊಡೆ ಬಲ್ಲತೆಕಣಾ ಒಂದೆರಳ್ದಿವಸಕ್ಕೆ ಮುಡಿಯದು" ಎಂದು ಉತ್ತರ ಹೇಳುತ್ತಾನೆ ಈ ಬಗೆಯ ಕಥನತಂತ್ರ ಭಾರತೀಯ ಕಾವ್ಯಗಳಲ್ಲಿ ಹೊಸದೇನಲ್ಲ. ಮಹಾಭಾರತದ ಕಥೆಯನ್ನು ಒಟ್ಟು ಎಷ್ಟು ಕತೆಗಾರರು

ಎಷ್ಟು ಸಹೃದಯರಿಗೆ ಹೇಳಿದರು ಎಂಬುದನ್ನು ನೆನೆದರೆ ಈ ತಂತ್ರದ ಪ್ರಾಚೀನತೆ ಗೊತ್ತಾಗುತ್ತದೆ. ಮುಖ್ಯವಾಗಿ ಇವು ಕೇಳಿದ ಕತೆಗಳು, ಇನ್ನೊಬ್ಬರು ಕೇಳಲೆಂದೇ ನಿರ್ಮಿತವಾದ ಕತೆಗಳು. ಕಥನ ಮತ್ತು ಶ್ರವಣಗಳಿಂದ ಈ ಕತೆಯಲ್ಲಿ ರಸ ಜಿನುಗಬೇಕು. ದ್ರಷ್ಟಾರರು ಮುನಿಗಳು ಹೇಳಿದ ಕತೆಯಾಗಿದ್ದರಿಂದ ಪ್ರಮಾಣೀಭೂತವಾದ ಸತ್ಯವಾಗುತ್ತದೆ. ಅದು ಯಾರದೋ ಕತೆಯಾಗುವದರಿಂದ ಹೇಳಿಕೆಯಲ್ಲಿ ವಸ್ತುನಿಷ್ಠವಾಗುತ್ತದೆ. ಮೂಲಕಥೆ ಮತ್ತು ಉಪಾಖ್ಯಾನಗಳ ಐಕ್ಯದ ಸೂತ್ರ ಕತೆಗಾರನ ಕೈಯಲ್ಲಿರುತ್ತದೆ. ನಮ್ಮ ಪುರಾಣಗಳಲ್ಲಿ ಬಂದಿರುವ ಈ ಕಥನ ತಂತ್ರದ ಅಭ್ಯಾಸ ಇನ್ನೂ ವಿಶದವಾಗಿ ಆಗಬೇಕಾಗಿದೆ. ಕಾವ್ಯಸ್ವರೂಪದ ಮೇಲೆ ಈ ತಂತ್ರದ ಪ್ರಭಾವವೇನೆಂಬುದು ನಿರ್ಣಯವಾಗಬೇಕು.

ಈ ಬಗೆಯ ತಂತ್ರದ ಸ್ವಾರಸ್ಯವೇನೆಂಬುದನ್ನು ಮುದ್ದಣನಿಂದಲೇ ಅರಿಯಬಹುದು. ಕತೆಯ ವಾಸ್ತವಿಕ ಸತ್ತೆಯ ಬಗ್ಗೆ ಮನೋರಮೆ ಮಾರ್ಮಿಕವಾದ ಪ್ರಶ್ನೆಗಳನ್ನು ಕೇಳುತ್ತಾಳೆ. ಅವಳು ಹೀಗೆ ಕೇಳುವ ಪ್ರಶ್ನೆಗಳು ಕಾವ್ಯದ ಸ್ವರೂಪವನ್ನು ನಿರ್ಣಯಿಸುತ್ತವೆ. ಪ್ರಾರಂಭಕ್ಕೆ ಮುದ್ದಣ ಅಯೋಧ್ಯಾ ನಗರದ ಹೊರವಳಯವನ್ನು ವರ್ಣಿಸಿದಾಗ, ಮನೋರಮೆ, "ರಮಣ ! ಇದೇಂ ನೋಟ್ಟುದು ನೋಟ್ಟುದೆಂದು ಪೊಳೆಯಂ ಬೆಳೆಯುನಾವುದಂ ಬಣ್ಣಿಸಲ್ ಪೋಪಯ್ ! ಮೇಣುಂ ತೋರಿದಪುದೆತ್ತಣಿನಿದುಂ" ಎಂದು ಆಕ್ಷೇಪವನ್ನೆತ್ತುತ್ತಾಳೆ. ಹೇಳಿ ಕೇಳಿ ಕಥೆಯೆಂದ ಮೇಲೆ ನಾಟಕದ ರೀತಿಯಲ್ಲಿ ಪ್ರತ್ಯಕ್ಷ ವರ್ಣನೆ ಸಾಧ್ಯವಿಲ್ಲ. ರಾಮನ ದರ್ಶನಾರ್ಥವಾಗಿ ಅಯೋಧ್ಯೆಗೆ ಹೊರಟಿದ್ದ ಅಗಸ್ತ್ಯ ತನ್ನ ಶಿಷ್ಯರಿಗೆ ನುಡಿದ ನುಡಿಗಳಿವು ಎಂದು ಮುದ್ದಣ ಸಮಾಧಾನ ಹೇಳುತ್ತಾನೆ. 'ಪಗಲುಮಿರುಳುಂ ಸುರಿವ ಬಲ್ಸೋನೆ'ಯ ಬೇಸರವನ್ನು ಕಳೆಯಲು ಮುದ್ದಣ ಹೇಳುತ್ತಿರುವ 'ನಲ್ಗತೆ'ಗೆ ಒಳ್ಳೆಯ ಪ್ರಾರಂಭ ! 'ಬಾಣ ಕಾದಂಬರಿ', 'ದಶಕುಮಾರ ಚರಿತ'ಗಳಂಥ ಕಾವ್ಯ ಪ್ರಕಾರಕ್ಕೆ ಈ ಹೆಸರು ಉಚಿತವಾಗಿದೆ. ಮುದ್ದಣನ ಉದ್ದೇಶವೂ ಅದೇ ಆಗಿರಬಹುದು. ಮನೋರಮೆಯ ಪ್ರತಿಕ್ರಿಯೆಗಳೆಲ್ಲ – ಇವುಗಳಲ್ಲಿ ಸಿದ್ದೆಯೂ ಒಂದು ವಿಮರ್ಶಾತ್ಮಕವಾಗಿವೆ. ಒಂದು ವೇಳೆ ರಾಮನ ಜನ್ನಗುದುರೆ ಕಥೆಯ ಮಧ್ಯದಲ್ಲಿ ತಪ್ಪಿಸಿಕೊಳ್ಳಬಹುದು. ಆದರೆ ಮನೋರಮೆಯ ಲಕ್ಷ್ಯ ಮೊದಲಿನಿಂದ ಕೊನೆಯವರೆಗೆ ತಪ್ಪುವದಿಲ್ಲ. ಕತೆಯ ಸೃಷ್ಟಿಕರ್ತನಾದ ಮುದ್ದಣ ತನ್ನ ಸೃಷ್ಟಿಯ ಅಧಿದೇವತೆಗೆ ಮಣಿಯುವ ನಾಟಕ ಕೇವಲ ಚಮತ್ಕಾರದಿಂದ ಕೂಡಿರುವದಷ್ಟೇ ಅಲ್ಲ, ಅರ್ಥಪೂರ್ಣವೂ ಆಗಿದೆ. ಸೃಜನಶಕ್ತಿಯ ಕಾವು, ಮೈಮರೆತ ಮುದ್ದಣನಿಗಿದ್ದರೆ ಸೃಷ್ಟಿಯ ಆರೈಕೆ, ಎಚ್ಚರ, ಜಾಣ್ಮೆ ಮತ್ತು ಗಟ್ಟಿ ನೆಲದ ಅರಿವು ಮನೋರಮೆಗೆ ಇವೆ.

ಇಲ್ಲಿಯವರೆಗೆ ಮುದ್ದಣನ ಸಾಹಿತ್ಯ ಕೃತಿಗಳಲ್ಲಿಯ ಬೆಳವಣಿಗೆಯನ್ನು ನೋಡಿದ್ದಾಯಿತು. ಮುದ್ದಣ ಕಾಲಮಾನದ ದೃಷ್ಟಿಯಿಂದ ಆಧುನಿಕನಾಗಿದ್ದರೂ ಕನ್ನಡ ಕಾವ್ಯದ ಸಂಪ್ರದಾಯಕ್ಕೆ ತನ್ನನ್ನು ಹೊಂದಿಸಿಕೊಂಡ ಕವಿ ಆದರೆ ಇವನ

ಸಂಪ್ರದಾಯ ನಿಷ್ಠೆ ಅಂಧಾನುಕರಣವಲ್ಲ. ಸಂಧಿಕಾಲದಲ್ಲಿ ಆಯ್ಕೆಯ ಪ್ರಸಂಗ ಬಂದಾಗ ತನ್ನ ಪ್ರಕೃತಿಮಾನಕ್ಕೆ ಹೊಂದಿಕೊಳ್ಳುವ ರೀತಿಯನ್ನು ಆರಿಸಿಕೊಂಡು ಅದರಲ್ಲಿ ಬಹುಮಟ್ಟಿಗೆ ಯಶಸ್ವಿಯಾದ ಕವಿ. ಅವನ ಗದ್ಯ ಹೊಸ ಗದ್ಯದಂತೆ ವಿಚಾರಶೀಲವಾದ ಬರವಣಿಗೆಯಾಗದೆ ಇನ್ನೊಂದು ಕಾವ್ಯ ಪ್ರಕಾರವಾಗಿದೆ. ಕಥನ ತಂತ್ರವಲ್ಲಿ ಪ್ರಾಚೀನ ತಂತ್ರಗಳ ಉತ್ಕೃಷ್ಟ ಉಪಯೋಗ ಅವನಲ್ಲಿ ದೊರೆಯುತ್ತದೆ. ಇವನ್ನೆಲ್ಲ ಆಧುನಿಕನಾಗಿದ್ದುಕೊಂಡೂ ಸಾಧ್ಯಮಾಡಿ ತೋರಿಸಿದ ಕವಿಯ ಪ್ರಯತ್ನ ನಿಜವಾಗಿಯೂ ಶ್ಲಾಘನೀಯವಾಗಿದೆ.

---

ಕೃಪೆ : ಜಾಣ ಮುದ್ದಣ – ೧೯೭೦

*****

# ಜಾಣ ಮುದ್ದಣ

## ಕೆ. ನರಸಿಂಹ ಶಾಸ್ತ್ರಿ

"ಮುದ್ದಣನ ರಸಿಕತೆ, ಮಡದಿಯ ಒಲುಮೆ ಪಡೆವ ಮೋಡಿ ಹರೆಯದ ದಂಪತಿಗಳಿಗೆ ಮಾತ್ರವೆ ಮೀಸಲಾದುದೆಂದು ಯಾರೂ ಭಾವಿಸಲಾಗದು. ವಯೋಧಿಕರು ಸಹ ಪರಿಭಾವಿಸಿ ಸ್ಫೂರ್ತಿ ಪಡೆಯಲು ಇದು ಅರ್ಹವಾಗಿದೆ."

ಈ ಅರ್ಥ ಬರುವ ಮಾತುಗಳನ್ನು ಪ್ರಸಿದ್ಧ ಬರಹಗಾರರಾದ ಶ್ರೀಮಾನ್ ನಾಗೇಗೌಡರು ಮಂಗಳೂರಿನಲ್ಲಿ ಏರ್ಪಡಿಸಿದ್ದ ಮುದ್ದಣ ಕವಿಯ ಶತಮಾನೋತ್ಸವ ಸಂದರ್ಭದಲ್ಲಿ ಅಧ್ಯಕ್ಷ ಪೀಠದಿಂದ ಘೋಷಿಸಿದರು. ಕವಿಯ ದರ್ಶನ ಜೀವನವನ್ನು ಹೇಗೆ ಮುಟ್ಟಿದೆ ಎಂಬುದು ನಮಗೆ ಇದರಿಂದ ವೇದ್ಯವಾಗುತ್ತದೆ.

ಸಾಮಾನ್ಯವಾಗಿ ನೇಹ ಕುಂದುವ ಇಳಿ ವಯಸ್ಸಿನಲ್ಲಿ ಸತಿ-ಪತಿಯರು ಹೇಗೆ ಎರಕಗೊಂಡಿರಬೇಕೆಂಬುದನ್ನು ಕುರಿತು ಹೊನ್ನಮ್ಮ ಹಾಡಿದ್ದಾಳೆ. ನಮ್ಮಲ್ಲಿ ದಾಂಪತ್ಯದ ಕೈಪಿಡಿ (***) ಗಳು ಇನ್ನೂ ಬಂದಿಲ್ಲ. ಕವಿಗಳು ಜಾಣ್ಮೆಯಿಂದ ತಾವು ಕಂಡು ಅನುಭವಿಸಿದ ಸಂಗತಿಗಳನ್ನು ಸರಸವಾಗಿ ಬಣ್ಣಿಸಿದ್ದಾರೆ. ಅಂಥವರಲ್ಲಿ ಮುದ್ದಣ ಅಗ್ರಗಣ್ಯ.

ಇವನು ಒಂದು ರಸಿಕ ದಾಂಪತ್ಯವನ್ನು ಲೋಕದ ಆದರ್ಶ ದಾಂಪತ್ಯಕ್ಕೆ ಸಂವಾದಿಯಾಗಿ ಹೇಗೆ ಹೆಣೆದಿದ್ದಾನೆಂಬುದನ್ನು ಸಂಕ್ಷೇಪವಾಗಿ ಈ ಲೇಖನದಲ್ಲಿ ತಿಳಿಸುತ್ತೇನೆ.

ಇವನ ರಾಮಾಶ್ವಮೇಧದ ೧೬೭ ಪುಟಗಳಲ್ಲಿ (ಕಾವ್ಯಾಲಯ, ತೃತೀಯ ಮುದ್ರಣ ೧೯೬೬) ಸುಮಾರು ೧೬-೧೭ ಪುಟಗಳು ಸತಿ-ಪತಿಯರ ಸಂಭಾಷಣೆಗೆ ಮೀಸಲಾಗಿದೆ. ಒಂದು ದೃಷ್ಟಿಯಲ್ಲಿ ಇದು ಕವಿಯೇ ಕೈಗೊಂಡ ಕಾವ್ಯ ವಿಮರ್ಶೆ, ಆತ್ಮ ವಿವೇಚನೆ. ಆದರೂ ಜನ ಓದಿ ಪರವಶರಾಗಿರುವುದು ಇವರ ಸರಸ ದಾಂಪತ್ಯದ ಪರಿಯನ್ನು ಕಂಡೇ ಹೊರತು ಕಾವ್ಯ ವಿಮರ್ಶೆಯ ಪರಿಯಿಂದಲ್ಲ. ಕಥಾಮುಖ ಕಥೋಪಸಂಹಾರಗಳಲ್ಲಿ ಇವರಾಡುವ ಸರಸ ಲೋಕೋತ್ತರವಾಗಿದೆ. ಯಾವ ಸಾಹಿತ್ಯಕ್ಕಾದರೂ ಭೂಷಣವಾಗಿದೆ. ಮದನಮೋಹನ ರಾಜನು ಮಾಡುವ ರತೀದೇವಿಯ ವರ್ಣನೆ, ಭವತಿ ಭಿಕ್ಷಾಂ ದೇಹಿ, ಮತ್ತು ಕಾಮನ ಹುಣ್ಣಿಮೆಯ ಹಬ್ಬ ಈ ಪ್ರಕರಣಗಳು ಪ್ರತ್ಯೇಕವಾಗಿ ಸೊಗಸಾಗಿವೆ. ಅಲ್ಲಲ್ಲಿ ಬರುವ ಚಿಟಕೆಗಳು

ಎಷ್ಟು ಚಿಕ್ಕವಾದರೂ ನಮ್ಮನ್ನು ಸೆರೆಹಿಡಿದು ಉದ್ಬೋಧಿಸುತ್ತವೆ. ಎಲ್ಲಿಯೂ ಯಾವುದೂ ಔಚಿತ್ಯ ಮೀರಿಲ್ಲ. (ಕಾವ್ಯ ಶೋಭಾಕರಗಳಾದ ವಿಷಯಗಳಲ್ಲಿ ಔಚಿತ್ಯ ಬಹು ಮುಖ್ಯವಾದುದೆಂದು ನಮ್ಮ ಆಲಂಕಾರಿಕರ ಮತ.)

ಕವಿ ಎಷ್ಟು ಜಾಣತನದ ಮಾತುಗಳಿಂದ ದಂಪತಿಗಳ ಅನ್ಯೋನ್ಯತೆಯನ್ನು ಅನುರಾಗವನ್ನು ಕಾಣಿಸಿದ್ದಾನೆಂಬುದನ್ನು ಅರಿತರೆ ಮುದ್ದಣನ ಜನಪ್ರಿಯತೆಯ ರಹಸ್ಯವನ್ನು ನಾವು ಅರಿತಂತೆ ಆಗುತ್ತದೆ. ಮೇಲೆ ಮೇಲೆ ಓದಿದರೂ ಇವು ಹೃದಯವನ್ನು ಸ್ಪಂದಿಸುತ್ತವೆ. ಮತ್ತೆ ಮತ್ತೆ ಓದಿದಾಗ ಭಾವವುಕ್ಕಿ ಉದ್ವೇಗಗೊಳ್ಳುತ್ತೇವೆ. ಸುಖೀ ದಂಪತಿಗಳು ಆನಂದ ತುಂದಿಲರಾದರೆ ವಿರಸ ದಾಂಪತ್ಯದವರು ವಿಕಟ ವಿಧಿಯ ಅಟ್ಟಹಾಸವನ್ನು ಶಪಿಸುವಂತಾಗುತ್ತದೆ.

ವರ್ಷಾ ಕಾಲದಲ್ಲಿ ಒಂದು ದಿವಸ, ಹಗಲೂ ಇರುಳೂ ಸುರಿವ ಬಲ್ ಸೋನೆಯ ಜಿನುಂಗಿನಿಂದ ಮನ ಬೇಸತ್ತಿದೆ. ನಿಡಿದಾದ ಹಗಲು ಸಂಜೆಗಿಳಿಯುತ್ತದೆ. ಅರಮನೆಗೆ ಹೋದ ಕಬ್ಬಿಗರ ಬಲ್ಲಹ ಮುದ್ದಣನ ದಾರಿ ಕಾಯುತ್ತಿದ್ದಾಳೆ, ಅವನ ಮಡದಿ ಮನೋರಮೆ. ಎಂದಿನಂತೆ ಬೈಗುಹೊತ್ತಿನಲ್ಲಿ ಓಲಗ ಮುಗಿದಿದೆ. ಇಲ್ಲಿ ಕವಿ ಬಳಸಿದ ಮನೆ ಮಾತುಗಳು ರಸಿಕ ವಾಚಕರ ಹೃದಯ–ವೀಣೆಯನ್ನು ಮಿಡಿದು ಧ್ವನಿಸುತ್ತವೆ. ಧ್ವನಿ ನಿರಂತರವಾಗಿ ಪ್ರಸರಿಸುತ್ತದೆ. ಚಿತ್ರ ಮನಃಪಟಲದ ಮೇಲೆ ಹಾದು ನಿಲ್ಲುತ್ತದೆ.

ಇಲ್ಲಿ ಕವಿ ಮರೆತಾದರೂ ಪತಿ–ಪತ್ನಿ ಎಂಬ ಬಳಕೆಯ ಪದಗಳನ್ನು ಉಪಯೋಗಿಸಿಲ್ಲ. ಮಡದಿ, ಎರೆಯು, ನಲ್ಲ ಮುಂತಾದ ಪದಗಳನ್ನು ಉಪಯೋಗಿಸಿದ್ದಾನೆ. ಸಂಸ್ಕೃತದಲ್ಲಿ ಪಾಲನಾರ್ಥಕ ಧಾತುವಿನಿಂದ ನಿಷ್ಪನ್ನವಾದ ಪತಿ–ಪತ್ನೀ ಪದಗಳು ರಕ್ಷ್ಯ ರಕ್ಷಕ ಭಾವವನ್ನು ಸೂಚಿಸುತ್ತವೆ. ಕನ್ನಡದ ಎರೆ ಧಾತುವಿನಿಂದ ಆದ ಎರೆಯ ಎರತಿ ಈ ಪದಗಳು ಇಚ್ಚಿತ ತ್ಯಾಗವನ್ನು ಸೂಚಿಸುತ್ತವೆ. ಹಾಗೆಯೇ ನಲ್ಲ, ನಲ್ ಎಂಬುದರಿಂದ ಮಡದಿ, ಮಡಮೆ ಎಂಬುದರಿಂದ ಬಂದು ಬಹು ಪ್ರಿಯವಾದ ಅರ್ಥವನ್ನು ಕೊಡುತ್ತವೆ. ಮಡದಿ ಎಂಬ ಪದವು ಸಂಸ್ಕೃತದ ಭಾಮಾ ಶ್ಯಾಮಾ (ಕಾಳಿದಾಸನು ಮೇಘ ಸಂದೇಶದಲ್ಲಿ ಉಪಯೋಗಿಸಿದ ಬಹು ಸುಂದರವಾದ ಪದ) ಇವಕ್ಕೆ ಸಂವಾದಿಯಾಗಿ ಉಕ್ಕುವ ಹರೆಯವನ್ನೂ ಸೌಂದರ್ಯವನ್ನೂ ಸೂಚಿಸುತ್ತದೆ. ಇವನ್ನೆಲ್ಲಾ ಕವಿಯ ಸೂಕ್ಷ್ಮ ಬುದ್ಧಿ ವಿವೇಚಿಸಿ ಉಚಿತ ಪದಗಳ ಆಯ್ಕೆಯನ್ನು ನಡೆಸಿದೆ. ಕಾವ್ಯದುದ್ದಕ್ಕೂ ಹೀಗೆಯೇ ಇರುವುದಾದರೂ ಸೌಲಭ್ಯಕ್ಕಾಗಿ ಸಂಗ್ರಹಕ್ಕಾಗಿ ಜನ ಹೆಚ್ಚಾಗಿ ಓದಿರುವರೆಂಬುದಕ್ಕಾಗಿ ನಾನು ಸಂವಾದದ ಭಾಗವನ್ನು ಮಾತ್ರ ಆಯ್ದಿದ್ದೇನೆ. ಕಾವ್ಯ ಸೌರಭ ಇದಕ್ಕೆ ಕಡಿಮೆಯಾದುದಲ್ಲ.

ಕವಿಯು ಮಡದಿಯನ್ನು ಸಂಬೋಧಿಸುವ ಹಲವು ಮಾತುಗಳನ್ನು ಈಗ ನೆನೆಯೋಣ. ಅವುಗಳಲ್ಲಿ ಮೊಟ್ಟ ಮೊದಲನೆಯದು ಪ್ರಾಣೇಶ್ವರಿ !

"ಪ್ರಾಣೇಶ್ವರಿ, ಇನಿತೊಂದು ಬಯಕೆ ತಲೆದೋರೆ ಆವಗಹನಂ ?" ಒಡನೆಯೇ ಬರುವ ಪದ, ನೀಂ ಬಲ್ ಗಡಸುಗಾರ್ತಿ ! ಕವಿಗೆ ಹೆಂಡತಿ ಸಾಕಿದ ಬೆಕ್ಕಲ್ಲ – ಗಡಸು ಎಂಬ ಪದ ಸಂಸ್ಕೃತದ ವೈಯಾತ್ಯ ಎಂಬುದಕ್ಕೆ ಸಮನಾಗಿದೆ. ವೈಯಾತ್ಯ ಸುರತದಲ್ಲಿ ಅವಶ್ಯ ಲಕ್ಷಣವೆಂದು ಶೃಂಗಾರಜ್ಞರು ನಿರೂಪಿಸಿದ್ದಾರೆ. ಅವಳೂ ಇವನನ್ನು ಗಡಸುಗಾರ ಎಂದು ಸಂಬೋಧಿಸಿದ್ದಾಳೆ.

ಅವಳು ಪ್ರಾಣೇಶ್ವರಿ ಎಂಬುದನ್ನು ಕವಿ ಮೊದಲ ಉಪಚಾರದಲ್ಲಿ ನಿದರ್ಶಿಸಿದ್ದಾನೆ. ಕವಿ ಹೊರಟಿರುವುದು ಅರಮನೆಯಿಂದ ಪೊರೆವೀಡಿಗೆ, ಅರಮನೆ ಪೂರ್ಣ ಗೃಹವಲ್ಲ ಎಂಬ ಮಾತಿನ ಬೆಡಗು ಕವಿ ದೃಷ್ಟಿಯಲ್ಲಿದೆ. ಆದುದರಿಂದ ತನ್ನ ಬೀಡಿಗೆ ಹೋಗಲು ಅವನು ತಡೆಮಾಡುವಂತಿಲ್ಲ. ನೆರೆ ಬೀದಿ (ಸಮೀಪದ ಹಾದಿ) ಹಿಡಿದಿದ್ದಾನೆ. ಅವನು ಬರುವುದು ಪೊರೆವೀಡಿಂಗೆ ! ಪೊರೆವ ಬೀಡು ಇದು ! ಅದು ಮನೆ, ಇದು ಬೀಡು ! ಸಂಬಳ ಸಲ್ಲುವುದು ಅಲ್ಲಿ, ಆರೈಕೆ ಇಲ್ಲಿ. ಪೊರೆಯೆಂಬುದಕ್ಕೆ ಜೋಡಣೆ ಕೂಡಣೆಯೆಂಬ ಅರ್ಥಗಳೂ ಇವೆ ಎಂಬುದನ್ನು ನಾವು ಗಮನಿಸಿದರೆ ಇಲ್ಲಿನ ಸ್ವಾರಸ್ಯ ಹೊಳೆಯುತ್ತದೆ. (ಮೆಯ್ ಪೊರೆ. ಹಾವಿನ ಪೊರೆ ಎಂಬಂತೆ.)

ಕಾರ್ಯಕ್ಷೇತ್ರದಿಂದ ಮರಳುವ ಪ್ರತಿಯೊಬ್ಬ ಗಂಡಸೂ ತನಗಾಗಿ ತವಕಿಸುವ ನಲ್ಲೆಯನ್ನು ಸ್ಮರಿಸುತ್ತಾನೆ. ಅವಳು ನಿಜವಾದ ನಲ್ಲಳಾಗಿದ್ದರೆ ಇವನಿಗಾಗಿ ಉತ್ಕಂಠಿತಳಾಗಿರುತ್ತಾಳೆ. ಹೀಗಿದ್ದರೆ ಬಾಡಿಗೆ ಮನೆ (ಬೀಡು) ಆದರೂ ಮುದ್ದಣನಿಗೆ ದೊರೆತ ಸ್ವಾಗತೋಪಚಾರ ಎಲ್ಲರಿಗೂ ದೊರೆಯುತ್ತದೆ.

ಕೆಳದಿ ದೂರದೆ ಕಂಡು ಇದಿರೆದ್ದು ಕಾಲಿಗೆ ನೀರನ್ನು ನೀಡಿ ಕೈಪಿಡಿದು ಒಳಚೌಕಿಗೊಯ್ದು ಮಣೆಯಿತ್ತು ಕುಳ್ಳಿರಿಸಿ ಒಡನೆಯೆ ತನಿವಣ್ಣನ್ನು ತಿನಲಿತ್ತು ಕೆನೆ ಹಾಲನ್ನು ಕುಡಿಯಲು ಕೊಟ್ಟು ಉಪಚರಿಸಿ ಬಳಲಿಕೆ ಕಳೆದ ಮೇಲೆ ನರುದಂಬುಲವನ್ನು ಸವಿಯಲ್ಕೆಂದು ಮಡಿದೀಯುತ್ತ ಸುಖ–ಸಲ್ಲಾಪಕ್ಕೆ ಅಣಿಯಾಗುತ್ತಾಳೆ. ಮನೆಯಲ್ಲಿ ಗರತಿಯಿದ್ದರೆ ಹೀಗೆ, ಇಲ್ಲದಿದ್ದರೆ – ತಾಯಿ ಹೊಟ್ಟೆ ನೋಡುತ್ತಾಳೆ, ಹೆಂಡತಿ ಮಟ್ಟೆ ನೋಡುತ್ತಾಳೆ – ಎಂಬ ನಾಣ್ನುಡಿ ಜ್ಞಾಪಕಕ್ಕೆ ಬರುತ್ತದೆ. "ಷಾಡ್ಗುಣ್ಯಯುಕ್ತಾ ಕುಲಧರ್ಮಪತ್ನೀ" ಪೋಷಣೆಯಲ್ಲಿ ಅವಳು ಮಾತೆಯಂತೆ ಇರುತ್ತಾಳೆ.

ಮೇಲಿನ ಕವಿವಾಕ್ಯದಲ್ಲಿ ಬರುವ ತನಿವಣ್ಣು, ಕೆನೆಹಾಲು, ನರುದಂಬುಲ, ಸವಿಯಲಿಕ್ಕೆಂದು ಮಡಿದೀಯುವುದು, ಹಾಗೆಯೇ ಒಂದರ ಮುಂದೊಂದು ನಡೆಯಿತೆಂದು ಹೇಳುವ ಕ್ರಿಯಾಸಮುಚ್ಚಯ ಸಹ ರಸಿಕ ವಾಚಕರ ಹೃದಯವನ್ನು ಕೆಣಕಿ ಅಣಕಿಸುತ್ತದೆ. ಇಲ್ಲಿ ಪ್ರಾಣೇಶ್ವರಿ ಎಂದು ಸಂಬೋಧಿಸುವುದಕ್ಕಿಂತ ಅತ್ಯುಚಿತವಾದ ಪದ ಬೇರೊಂದಿಲ್ಲ.

ಹಾಗೆಯೇ ಹೆಣ್ಣು ಕಬ್ಬಿಗರ ಬಲ್ಲಹನನ್ನೆ ಪ್ರಶ್ನಿಸುತ್ತ ತನ್ನತನವನ್ನು ಸಾಧಿಸುವಾಗ – "ಆವ ರಸದೊಳೆಂದೊಡೇಂ ನವರಸದೊಳಂ ಸೀತಾಪಹರಣದ ಕಥೆಯ ನಾನೊಲ್ಲೆಂ, ಪದ್ಯಂ ವದ್ಯಂ ಗದ್ಯಂ ಹೃದ್ಯಂ, ಹೃದ್ಯಮಪ್ಪ ನಲ್ಗತೆಯಂ ಚಿತ್ತರಿಸಿದೊಡೆ (ಆಶೆಬುರುಕ ಕವಿಗೆ ಅರಮನೆಯಲ್ಲಿ ದೊರೆಯುವ ರನ್ನಗಡಗ ಪೊನ್ನ ಕಂಠಿಕೆಗಳಿಗಿಂತ ಮಿಗಿಲಾಗಿ) ಎನ್ನನೆ ನಾನೀವೆಂ – ಮುಂತಾಗಿ ದಿಟ್ಟತನವನ್ನು ತೋರಿಸುವಾಗ ಕವಿ ಅವಳನ್ನು 'ನೀಂಬಲ್ ಗಡಸುಗಾರ್ತಿಯೈಸೆ' ಎನ್ನುತ್ತಾನೆ. ಇಲ್ಲಿ ಬಹು ಸುಂದರವಾದ ಪದ ಇದು.

ಮುಂದೆ ಇವರು ಪರಸ್ಪರ ಸಂಬೋಧಿಸಿರುವ ಪದಗಳ ಪಟ್ಟಿ ಮಾಡಿದ್ದೇನೆ. ಕೆಲವನ್ನಾದರೂ ನಾವು ನಮ್ಮದಾಗಿಸಿಕೊಳ್ಳುವುದು ಮೇಲು –

ರಮಣಿ, (೫ ಸಲ ಬಂದಿದೆ) ಪ್ರಾಣೇಶ್ವರಿ, ಬಾಲೆ, (೩ ಸಲ ಬಂದಿದೆ) ಗಡಸುಗಾರ್ತಿ, ಮನೋರಮೆ, ಎನ್ನರಸಿ, ಪೆಣ್ಣೆ ( ಈ ಸಂಬೋಧನೆ ದ. ಕ. ಜಿಲ್ಲೆಯ ರೂಢಿ) ಕಾಂತೆ, ಸುಂದರಿ (ಇವು ಒಂದೊಂದೂ ಎರಡೆರಡು ಸಲ ಬಂದಿವೆ). ಹೀಗೆ ಇನ್ನುಳಿದ ಪದಗಳು – ಬಾಲೇಂದು ಫಾಲೆ, ಚನ್ನರಸಿ, ಹೊನ್ನರಸಿ, (ಜನಪದ ಸಾಹಿತ್ಯದ ಪದಗಳು) ಮೋಹನಾಂಗಿ, ಎನ್ನ ಕೊಂಡಾಟದ ಬಾಳ್ವಣಮೆ, ಎನ್ನ ಕೈಗಳಸಮೆ, ನಿಚ್ಚನಿಡುಗುಂಕುಮದ ಬಿಂಕದ ಮೆಚ್ಚುಗಾರ್ತಿ, ಇಚ್ಚೆಗಾರನ ಬೆಚ್ಚ ಪಚ್ಚೆಯ ಕೈಗನ್ನಡಿ, ಎನ್ನಮೀಂಮಚ್ಚಲಚ್ಚಣದ ಸಿರಿಗ್ಯೆಯೆ, ಮೂಗೊಂಕು ಮೂಗೆರೆಯ ಗುಜ್ಜುಗೊರಲ ತರಳೆ, ಒಚ್ಚೇರೆಗಣ್ಣ ಹೆಣ್ಣೆ, ಮೆಚ್ಚುಗಾರ್ತಿ, ಎನ್ನ ನಿಚ್ಚದ ಪೂಜೆಯ ಕಟ್ಟಚ್ಚಿನ ಪ್ರಾಣಲಿಂಗಮೆ, ಕೈಮರ್ಚಿನ ಗೆಡೆಯಾಟದ ಮುತ್ತಿನ ಸೆಂಡೆ, ಎನ್ನ ಚನ್ನ ಪೊನ್ನರಸಿ, ರಮಣೀಮಣಿ, ಸಿಂಗರದ ಸಿರಿಯೆ, ಕಾಮಕಲ್ಪವಲ್ಲರಿ, ನಸೆಗಾರ್ತಿ, ದೇವಿ, ರತಿದೇವಿ, ಅಸಿದೊಡಲ ಪೂಗಣ್ಣ ಪೆಣ್, ಸಸಿಮೊಗದ ಕಿಸುವಾಯ ಪುಸಿನಡುವಿನರಸಿ, ಮಿಡಿಮೊಲೆಯ ಪಿಡಿನಡೆಯ ಬಿಡುಜಡೆಯ ನೀರೆ, ಕುಲದೇವಿ, ಸಕಲಗುಣ ಸಂಪನ್ನೆ, ಏಕಗುಣ ಹೀನೆ, ಜೀವಿತೇಶ್ವರಿ ಎನ್ನತ್ತೆಯ ಮಗಳೆ, ಮುತ್ತಿನ ಸೆಂಡೆ, ಎನ್ನ ಚಿತ್ತರದ ಚಿತ್ತರದ ಬೊಂಬೆ, ರಂಬೆ, ಮೋಹದ ಗಿಳಿಯೆ, ಎನ್ನರೆವೊಡಲ ಮುದ್ದುಮೊಗದ ಸಿಂಗಾರಿ, ಎನ್ನ ಪೊನ್ನ ಪದಗದ ರನ್ನದಾರದ ಬಚ್ಚಳೆ, ನೀರೆ, ಚಪಳೆ, ಬೆಳತಿಗೆಗಣ್ಣ ಪೆಣ್ಣೆ, ನನೆಯಂಬಿನ ಕೊಂಬಿನ ನಾಡೆ ನಾಡೆನಿಕ್ಕುಳಿಸಿದ ಕೈಯ್ಯ ಮೆಯ್ಯ ನರುಗಂಪಿನ ಸೊಂಪಿನ ಚಲ್ಲಗಾರ್ತಿ, ಸುಭಗೆ, ಕುಲನೇತ್ರೆ, ಕಮನೀಯಗಾತ್ರೆ, ಎಲೆಸೊಬಗೆ, ಕಾಮಿನಿ, ಕಾಮಕಳಾನಿಧಾನೆ, ಕಾಮಮದಾಂಧಗಂಧ ಸಿಂಧುರ ಬಂಧುರಯಾನೆ, ಕಾಮಕಾಳೋರಗೆ ಕಣ್ಮಣಿಯೆ, ಪೆಣ್ಮಣಿಯೆ, ರಾಮಾಭಿರಾಮೆ, ಸುಗ್ರೀವೆ, ನೀಲಕುಂತಳೆ, ಕುಮುದನಯನೆ, ಪದ್ಮಗಂಧಿ, ಕೇಸರ ಮಧ್ಯೆ, ಅಂಗದ ವಿರಾಜಿತೆ, ಎರತಿ, ಎನ್ನ ಕಣ್ಣೆ, ಪಟ್ಟದ ರಾಣಿ, ಶೋಭನಾಂಗಿ, ರನ್ನೆ, ಬಲ್ ಸೆಡಕುಗಾರ್ತಿ, ಗರತಿ (ಗೊರವಿತಿ ಸಾಧುಚರಿತ್ರೆ) ಮಡದಿರನ್ನೆ.

ಮುದ್ದಣನನ್ನು ಸಂಬೋಧಿಸುವಾಗ ಮನೋರಮೆಯ ಮಾತುಗಳಿವು ರಮಣ (ಮೂರು ಸಲ) ಎನ್ನೊಡೆಯ ಜಾಣ (ಇವು ಎರಡೆರಡು ಸಲ ಬಂದಿವೆ)

ಪ್ರಿಯನಲ್ಲ, ಅಣ್ಮ, ಎನ್ನರಸ, ಕಾಮದೇವ, ಮುದ್ದು ಮೊಗದ ಮದನ ಮೋಹನ ರಾಜ, ಗಡಸುಗಾರ, ಚನ್ನಿಗ, ಎನ್ನರನ್ನ, ಗತಕಿ, ಎನ್ನೆರೆಯ. ಮುದ್ದಿನರಸ ಮುಂತಾಗಿ.

ಜಿಲ್ಲೆಗೆ ಸಹಜವಾದ ಆಣೆ ಹಾಕುವ ಮಾತುಗಳಲ್ಲಿ ಮುದ್ದಣನ ಆಣೆಗಳು – ಕೊರಲಾಣೆ (ರೂಢಿ), ಉಂಗುರದಾಣೆ, ಕುಲದೈವದಾಣೆ, ಎನ್ನಾಣೆ, ನಿನ್ನಾಣೆ, ಜೋಲ್ಮುಡಿಯ ಪೂಸರಂಗಳಾಣೆ, ಮುತ್ತಜ್ಜೆಯಾಣೆ, ಶ್ರೀರಾಮನಾಣೆ, ಜನ್ನರದಾಣೆ, ಕಚಂಗಳಾಣೆ.

ಈ ಪದಗಳಲ್ಲಿ ನಿಘಂಟುವಿನ ಅರ್ಥ ನಮಗೆ ಪ್ರಧಾನವಲ್ಲ. ರಸಿಕರ ಹೃದಯವನ್ನು ಇವು ಸೂರೆಗೊಳ್ಳುವುದು ಅವುಗಳಿಗಿರುವ ಧ್ವನ್ಯರ್ಥದಿಂದ. ಇದನ್ನು ಅರಿತಾಗಳೆ ಕಾವ್ಯದ ಸ್ವಾರಸ್ಯದ ಅರಿವು ಮೂಡುವುದು.

೧೬೭ ಪುಟಗಳ ಚಿಕ್ಕ ಕಾವ್ಯದಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಗಳ ಮಟ್ಟಕ್ಕೆ ಮೀರಿದ ಸು. ೩೦೦೦ ಪದಗಳನ್ನು ಸಮುಚಿತವಾಗಿ ಬಳಸಿದ ಈ ಮಹಾಕವಿ ೧೭ ಪುಟಗಳ ಸರಸ ಸಂಭಾಷಣೆಯಲ್ಲಿ ಹತ್ತಿರ ಹತ್ತಿರ ನೂರು ಸಲ ವಿವಿಧ ಭಂಗಿಗಳಲ್ಲಿ ತನ್ನ ಬೆಳತಿಗೆಗಣ್ಣ ಹೆಣ್ಣನ್ನು ಸಂಬೋಧಿಸಿದ್ದಾನೆಂದರೆ ಅಚ್ಚರಿ ಪಡಬೇಕಾಗಿಲ್ಲ. ಸುಮ್ಮನೆ ಕಥೆ ಹೇಳದೆ ಕರೆ ಕರೆದು ಕರಕರಿಸಬೇಡ ಎಂದು ಅವಳು ಹುಸಿಮುನಿಸಿನಿಂದ ಹೇಳಬೇಕಾಗುತ್ತದೆ.

ಈ ಸಂಬೋಧನೆಯ ಪದಗಳ ಸಂದರ್ಭಗಳನ್ನು ನೆನೆಯುವಾಗ ನಮಗೆ ರೋಮಾಂಚವಾಗುತ್ತದೆ. ತನಗೆ ರಾಜೋಪಚಾರ ನಡೆಯುವಾಗ ಅವಳು ಪ್ರಾಣೇಶ್ವರಿ, ಸಮಸಮವಾಗಿ ಸೆಣಸುವಾಗ ಗಡಸುಗಾರ್ತಿ, ಕೊಂಕು ಬಿಂಕಗಳನ್ನು ತೋರಿದಾಗ ಅವಳು ಸೆಡಕುಗಾರ್ತಿ, ಸರಯೂ ನದಿಯ ಸೊಂಪಾದ ದಡಗಳನ್ನು ಕಾಣಿಸುವಾಗ ಅವಳು ಪ್ರಿಯೆ, ಯೋಗಾಭ್ಯಾಸದ ಪುರಾಣ ಶ್ರಮಣದ ಋಷಿ ವರ್ಗದವರೊಡನೆ ಪುಣ್ಯಾಶ್ರಮದಲ್ಲಿ ಸೀತೆಯಿರುವಳೆಂದಾಗ ಮುದ್ದಣನು ಮಡದಿಯನ್ನು ಕೊಂಡಾಟದ ಬಾಳ್ವಣಮೆ ಎಂದು ಸಂಬೋಧಿಸುತ್ತಾನೆ. ಪುಣ್ಯ ವನಿತೆಯ ಭಾವ ಆಗ ಅವನಲ್ಲಿ ಮೂಡಿದೆ. ಕಾಮನ ಹುಣ್ಣಿಮೆಯಲ್ಲಿ ಇವನ ಕಾಮಿನಿ ಕಾಮಕಳಾನಿಧಾನೆಯಾಗುತ್ತಾಳೆ. ಕಾಮಮದಾಂಧ ಸಿಂಧುರ ಬಂಧುರಯಾನೆಯಾಗಿ ಇವಳು ಮೆರೆಯುತ್ತಾಳೆ. ರಾಮಾಯಣದ ನೆನಪು ಬಂದಾಗ ಅವಳು ರಾಮಾಭಿರಾಮೆ ಹಾಗೂ ಸುಗ್ರೀವೆ ಮುಂತಾದ ಕಪಿನಾಯಕರ ಹೆಸರು ಹೊತ್ತು ರಂಜಿಸುತ್ತಾಳೆ.

ಇತ್ತ ಸಾಕೇತ ನಗರದೊಳ್ ಸೀತಾರಾಮಂ ಎಂದು ಕವಿ ಆರಂಭಿಸಿದಾಗ – ಸೀತೆಯನಂತುಳಿದುಂ ಏತರ ಸೀತಾರಾಮಂ, ಅಪ್ಪೊಡಾ ಕಲ್ಲೆರ್ದೆಯಂ ರಾಮನೊ ಭೀಮನೊ ತಾನೆ ತಲೆವೊಯ್ದು ಮರುಗಿದನೆ ? ("ವಿಷವೃಕ್ಷೋಪಿ ಸಂವರ್ಧ್ಯ ಸ್ವಯಛೇತ್ತುಮ ಸಾಂಪ್ರತಂ" ಎಂಬ ಮಾಘಕವಿಯ ಮಾತು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ). ಪಗೆಯೇಂ ನಗೆಯೇಂ ಬಡವೆಯೋರ್ವಳ್ ಕಾಡಿಂಗಾದಳ್ಯೆಸೆ (ಇಲ್ಲಿ

ಕರುಣೆ ಕಟ್ಟೆಯೊಡೆಯುತ್ತದೆ) ಪಲುಂಬಿದಮ್ - ಏನ್ ತನಗೆ ಪೆರರ್ ಪೆಂಡಿರಿಲ್ಲೆಂದೆಯೆ ? ಹೀಗೆ ಸೀತೆಗಾಗಿ ತನ್ನ ಸ್ತ್ರೀತ್ವ - ಸ್ತ್ರೀಪ್ರಾತಿನಿಧ್ಯವನ್ನು ತಳೆದು ಸೆಟೆದಾಗಲೂ ಮನೋರಮೆ ಮುದ್ದಣನನ್ನು ನಲ್ಲ ಎಂದೆ ಸಂಬೋಧಿಸುತ್ತಾಳೆ. ಅವಳ ಪ್ರತಿರೋಧ ರಾಮನ ಮೇಲೆಯೆ ಹೊರತು ಕವಿಯ ಮೇಲಲ್ಲ. ತನಗೆ ಅದು ಸಹಿಸದಾಗ ನಲ್ಲ ನೀನುಮೆಂತು ಕಲ್ಮನನಾದಯ್ ಎನ್ನುತ್ತಾಳೆ. ಇಲ್ಲಿ ಸೀತೆಯ ಸಹೋದರಿಯೆ ಇವಳು. ಆದುದರಿಂದ ಕಬ್ಬಿಗರ ಬಲ್ಲಹನಿಗೆ ಇವಳು ಕೊಂಡಾಟದ ಬಾಳ್ವಣ ಆಗುತ್ತಾಳೆ. ಮನೋರಮೆಯು ಪತಿಯನ್ನು ಸಂಬೋಧಿಸುವಾಗ ಆಡುವ ಕೆಲವೇ ನುಡಿಗಳಾದರೂ ಸಂದರ್ಭೋಚಿತವಾಗಿ ರಸಸ್ಯಂದಿಯಾಗಿವೆ. ಮುದ್ದು ಮುದ್ದಾದ ಮಾತಿನಿಂದ ಅವನು ಅವಳಿಗೆ ಮುದ್ದಣನಾಗಿದ್ದಾನೆ. 'ಸಂದೆಯ ಮಿನ್ನುಂ ಪೋಪುದಿಲ್ಲ' ಎನ್ನುವಾಗ ಅವನು 'ಎನ್ನೊಡೆಯ'ನಾಗುತ್ತಾನೆ. ಅಭ್ಯಾಗತರೆಲ್ಲರನ್ನೂ ಆರಣ್ಯಕನು ಆತಿಥ್ಯದಿಂದ ಸತ್ಕರಿಸಿದನೆಂಬುದನ್ನು 'ಎಂತುಟಾರ್ತಂ' ಎಂದು ಪ್ರಶ್ನಿಸುವಾಗ ಅವನು ಚೆನ್ನಿಗ. ಸಪ್ತಾಕ್ಷರೀ ಮಂತ್ರದ ಮಹಿಮೆ ಅವನಿಗೆ ತಿಳಿದಿದೆ ಎಂದಾಗ ಅವನು ಬಲ್ ಮೈಮೆಗಾರ, ಕಥೆ ಮುಗಿಯುತ್ತ ಬಂದಂತೆ ಮಡದಿ ರನ್ನೆಗೆ ಇವನು ಮುದ್ದು ಮೊಗದ ಚೆನ್ನಿಗರಾಯನಾಗುತ್ತಾನೆ.

ಮುದ್ದಣನ ಶೃಂಗಾರದಂತೆ ವಿನೋದವೂ ರಮ್ಯವಾಗಿದೆ. ಹೆಂಡತಿ ಹೇಗಿದ್ದರೂ ಗಂಡನಿಗೆ ಅವಳು ದೇವಿ, ಅಂಥಿಂಥ ದೇವಿಯಲ್ಲ ರತಿದೇವಿ. ಮದನಮೋಹನ ರಾಜನು ಅವನಾಗಿಯೇ ಒಪ್ಪಿಕೊಂಡ ರತಿದೇವಿಯನ್ನು ಬಣ್ಣಿಸುತ್ತಾನೆ - ಅವನ ರತಿದೇವಿಗೆ ಮಿಂದ ಮರಗೂಳನೊಂದು ಮೆಯ್ವೊಗರ್ (ಮರಗೂಳನೆಂದರೆ ದೆಸೆವಳರೊಳೊರ್ವಂ - ಅಗ್ನಿ, ಅವಳಿಗೆ ತೊಳೆದ ಕೆಂಡದಂತೆ ಮೈಬಣ್ಣ !) ಮಲೆನಾಡಿಗನೊಂದು ಭಂಗಿಯ ಮೊಗಂ (ಮಲೆನಾಡಿಗನೆಂದರೆ ನಾಲ್ಗೆಯ ದೇವರ್-ಮಂಗ) ಇರುಳಣ್ಣಂಗೆಂತಂ ತೊಪ್ಪುವ ಬಟ್ಟನುಣ್ಗಣ್ (ಇರುಳ್ಗಣ್ಣನೆಂದು ಚಂದ್ರಮ, ಇಲ್ಲಿ ಗೂಬೆ) ಹೀಗೆ ತಾತಂದ ಚೆಂದುಳ್ಳ ಹುಡುಗಿಯನ್ನು ಜಾಣ ಮುದ್ದಣನು ಬಣ್ಣಿಸುತ್ತ ಮಲೆನಾಡ ಪೆಣ್ಗಳ್ ಕಣ್ಗೆ ಚೆಲ್ವೆಯರಾದರೆಂದು ಪಕ್ಕದ ಜಿಲ್ಲೆಗೆ ಬೀಗರ ಹಾಡು ಹಾಡಿದ್ದಾನೆ ! ಆಗ ಮಾದೇವಿಯ ಕಡೆವೊಳ್ತಿನ ರೂಪಿಗೆ (ಲಯ ಕಾಲದ ಕಾಳಿಗೆ) ಪಡಿವರಿಜಾಗುತ್ತಾಳೆ, ರತಿದೇವಿ. (ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ ಎಂಬ ಹಾಡನ್ನು ಇಲ್ಲಿ ಜ್ಞಾಪಿಸಬಹುದು) ಹೀಗೆಯೆ 'ಭವತಿ ಭಿಕ್ಷಾಂದೇಹಿ' ಮತ್ತು 'ಕಾಮನ ಹಬ್ಬ' ಈ ಪ್ರಕರಣಗಳು ಸೊಗಸಾಗಿವೆ.

ಸುಬಾಹು ಮಹಾರಾಜನ ಮಗ ಗಂಡುಗಲಿ ದಮನನು ಕುದುರೆಯನ್ನು ಕಟ್ಟಿದನೆಂಬಲ್ಲಿ ಕವಿ ಮಡದಿಯನ್ನು ಕಾಮಕಲ್ಪವಲ್ಲರಿ, ನಸೆಗಾರ್ತಿ, (ನಸೆ ಎಂದರೆ ತುರಿ) ಎಂದು ಸಂಬೋಧಿಸಿದ್ದಾನೆ. ಸಂದರ್ಭೋಚಿತವಾಗಿ ಈ ಎರಡು ಪದಗಳ ಅರ್ಥ ವ್ಯಾಪ್ತಿಯನ್ನು ನೆನೆಯುವಾಗ ವಿಶ್ವದ ಹಲವಾರು ಅದ್ಭುತ ಸಾಹಸಗಳಿಗೆ ಪ್ರೇರಕವಾದ ಸಂಗತಿಗಳು ಕಣ್ಣೆದಿರು ಸುಳಿದು ಹೋಗುತ್ತವೆ. ಜಗತ್ತಿನ ವೀರ

ರೌದ್ರಾದ್ಭುತ ಕರುಣ ಜಿಗುಪ್ಸೆಗಳಿಗೆ ಹಿನ್ನೆಲೆ ಶೃಂಗಾರವೆಂಬುದು ಕವಿಯ ಅಭಿಮತವೆಂದು ಇದು ಸೂಚಿಸುತ್ತದೆ.

ನಿದ್ದೆಯ ಬಿಣ್ಪಿನಿಂದ ಅವಳು ತೂಕಡಿಸುವಾಗ ಸಕಲಗುಣ ಸಂಪನ್ನೆ ಏಕ ಗುಣಹೀನೆ ಎನ್ನುತ್ತಾನೆ. ಆದರೆ ಎರಡನೆಯ ಮಾತನ್ನು ಅವಳು ಒಪ್ಪುವುದಿಲ್ಲ. "ಹುರುಳಿಲ್ಲದ ಪುರುಳ ಮರದ ಗುರ್ದಿನಾಟದ ಬಹು ರಗಳೆಯ ನಿಡುಗತೆಗೆ" ಅವಳು ತೂಕಡಿಸದೆ ಏನು ಮಾಡಿಯಾಳು ? ಅವಳಿಗೆ ವೀರರಸ ಮೆಚ್ಚಲಿಲ್ಲವೆಂದಲ್ಲ. ಮೆಚ್ಚು ಮುಚ್ಚು ಈ ಬಗೆಯಲ್ಲಿ ಯಥಾಸ್ಥಿತಿ ಅವಳ ಹೃದಯ. ಎದೆವೊಗುವ ಹೊಚ್ಚ ಹೊಸ ನಲ್ಗತೆಯಾದರೆ ಅವಳು ಮೆಚ್ಚಿಯೇ ಮೆಚ್ಚುವಳು. ಇಲ್ಲಿ ಯುದ್ಧ ವರ್ಣನೆಯ ಕವಿಯನ್ನು ಅವಳು ವಿಮರ್ಶಿಸಿದ ರೀತಿ ಸಹೃದಯ ಕವಿರಸಿಕವಾಚಕ ವರ್ಗಕ್ಕೆ ಮನೋಜ್ಞವಾಗಿ ಮನೋರಮೆ ತನ್ನ ಹೆಸರನ್ನು ಸಾರ್ಥಕಪಡಿಸಿಕೊಳ್ಳುತ್ತಾಳೆ.

ನವ್ಯವಾಗಿ ಹೇಳುವ ಹುರುಪಿನಲ್ಲಿ ಕಥೆ ಅಡಿ ಮುಡಿಯಿಲ್ಲದೆ ತೊಡರಿದಾಗ ಅವಳ ಎಚ್ಚರಿಕೆಯ ನುಡಿಯಿಂದ ಕವಿ ಜಾಗೃತನಾಗಿ ಅತ್ತೆಯ ಮಗಳೆ, ಮುತ್ತಿನಸೆಂಡೆ ಎಂದು ಸಂಬೋಧಿಸುತ್ತಾನೆ. ನಿಡುಗತೆಯ ನಿರಿಗೆಯಿಲ್ಲದ ಮೀಟೆನಿಸದ ಕೂಟದಿಂದ ಅವಳಿಗೆ ತಲೆನೋವು ಬಂದಿದೆ.

ಹೊಚ್ಚ ಹೊಸತು ಎಲ್ಲರಿಗೂ ಇಷ್ಟವಾದರೂ ಅದಕ್ಕೆ ಅಡಿಮುಡಿ ಬೇಕು. ಅದು ಮೀಟೆನಿಸಬೇಕು. ಇಂಥವೇ ನುಡಿ "ಪದ್ಯಂ ವಧ್ಯಂ ಗದ್ಯಂ ಹೃದ್ಯಂ" ಎಂಬುದು. ಮುದ್ದಣ ಜಾಣ, ಅದನ್ನು ಹೆಂಡತಿಯ ಬಾಯಿಂದ ಹೇಳಿಸಿದ್ದಾನೆ. ಸಂಪ್ರದಾಯದ ಪದ್ಯಗಳಿಂದ ಕೈಸುಟ್ಟುಕೊಂಡಿದ್ದಾನೆ. ನವ್ಯ ಸಾಧಿಸಿಲ್ಲ. ನೂರು ವರ್ಷಗಳಿಂದ ಈ ತೊಡಕು ಇನ್ನೂ ಬಗೆಹರಿದಿಲ್ಲ. ಪದ ಪದಗಳಲ್ಲಿ ನಾದ ನಿನದಿಸುವಂತೆ ಛಂದೋಮಯವಾಗಿ ಗದ್ಯವನ್ನು ನುಡಿಯುವ ಜಾಣ ಮುದ್ದಣ ಪದ್ಯ ದ್ವೇಷಿಯಲ್ಲ. ಪದ್ಯವೆಂದು ಗದ್ಯಕ್ಕೆ ಗೆರೆ ಎಳೆಯುವುದು ಅಥವಾ ಹಾಡಿದ್ದನ್ನೆ ಹಾಡುವುದು ತನ್ನ ವಿಪುಲಪದ ಭಂಡಾರವನ್ನು ಅಸಮರ್ಥವಾಗಿ ಪದ್ಯದ ಇಕ್ಕಟ್ಟಿನಲ್ಲಿ ತೊಡಗಿಸುವುದು ಅವನಿಗೆ ಇಷ್ಟವಾಗಲಿಲ್ಲ. ಗದ್ಯದಲ್ಲಿ ಕಂಡ ಹೊಚ್ಚ ಹೊಸತನ್ನು ಪದ್ಯದಲ್ಲಿ ಕಾಣುವುದು ಅವನಿಗೆ ಶಕ್ಯವಾಗಲಿಲ್ಲ. ಇಂದಿಗೂ ಕನ್ನಡ ಕವಿಗಳಿಗೆ ಅದು ಶಕ್ಯವಾಗಿಲ್ಲ. ಈಗಿನ ನವ್ಯತೆ ಒಂದು ಸಾಧನೆ ಅಷ್ಟೆ – ಮುದ್ದಣನು ಪದ್ಯವನ್ನು ಬಿಟ್ಟು ಗದ್ಯವನ್ನು ಹಿಡಿದಂತೆ. ಇದೇ ಸಿದ್ಧಿಯೆಂದರೆ ನಾವು ಒಡಂಬಡಲಾರೆವು.

ಕೊನೆಯ ಉಡುಗೊರೆಯ ಕಾಟವಂತೂ ಚಲ್ವಿನ ಕಣಿ ಮುದ್ದಣನು ಮಂಟಕ್ಕಿಪ ಪೆಂಡಿರೊಳರೆ ? ಇವನು ಹೇಳಿದ ಕಥೆ ಇವಳೊಬ್ಬಳಿಗೇ ಅಲ್ಲ. ಇವನ ಹೆಸರು ಹಾಗೂ ಹೇಗೊ ಕಥೆಯೂ ಜಗಕ್ಕೆ ಮುದ್ದು ಮುದ್ದಾಯ್ತು ಎಂದು ಅವಳಿಂದಲೇ ಹೇಳಿಸಿ ನೀನೆಂದ 'ಉಡುಗೊರೆಯನ್ನು ತಾ' ಎಂದು ಮಡದಿಯ ಸೆರಗು ಹಿಡಿದು ನಿಲ್ಲಿಸಿದ್ದಾನೆ. ಅವಳು "ಪರಾಧೀನೆ". ಮುನ್ನವೆ

ಕಾಯ್ತುಂದೆಯರ್ ತನಗಿತ್ತರೆಂಬುದನ್ನು ಮುದ್ದಣ ಆಗಲೇ ತಿಳಿಸಿದ್ದಾನೆ. ಇನ್ನು ಒಡವೆ ಯಾವುದು ? ಏನೀವೆಂ ಎಂತೀವೆಂ ಎಂದು ಬೆಬ್ಬಳಿಸಿ ಅವಳು ಓದುಗರ ವರೆ ಹೋಗುತ್ತಾಳೆ. "ನಿನ್ನೀ ಕಬ್ಬಮನೋದುವ ಜಾಣರ್ ಏವಗೆಯುಡುಗೊರೆಯನೀಯೆಂಬರ್ ಆವಗೆ ಮೆಚ್ಚನೀವೆಂ" ಎನ್ನುತ್ತಾಳೆ.

ಹೀಗೆ ದಂಪತಿಗಳು ಒಂದು ಸಮಸ್ಯೆಯನ್ನೊಡ್ಡಿ ನಮ್ಮಿಂದ ಬೀಳ್ಕೊಂಡು ಚಿರಂತನವಾಗಿ ಉಳಿಯುತ್ತಾರೆ.

ಹಲವು ಕಾವ್ಯಗಳಿಗೆ ವಸ್ತುವಾದ ಶೇಷರಾಮಾಯಣ ಈ ಕಾವ್ಯದ ವಸ್ತು. ಅದರಲ್ಲಿ ಯಾವ ಹೆಚ್ಚು ಬದಲಾವಣೆಯನ್ನೂ ಕವಿ ಮಾಡಿಲ್ಲ. ಕಥನಕಲೆ ಹೊಸತು. ಕವಿಯ ಪ್ರೌಢಿಮೆ ಕಾವ್ಯದಲ್ಲಿ ಕಂಡು ಬಂದರೂ ಲಕ್ಷ್ಮೀಶನಂತೆ ವಿದ್ವಚ್ಚಾತುರ್ಯ ಪ್ರದರ್ಶನಕ್ಕೆ ಇವನು ಹೋಗಿಲ್ಲ. ಆದರೆ ಕುಮಾರವ್ಯಾಸನಂತೆ ಸರಳನೂ ಅಲ್ಲ. ಭಾಷೆಯ ಮುನ್ನಡೆಗೆ ಸಾಧಕವಾಗುವಂತಹ ಹಲವು ಬೆಡಗಿನ ಹೊಸ ಪದಗಳನ್ನು ಇವನು ರಚಿಸಿದ್ದಾನೆ. ನುಡಿ ನಿರಿಗೆಯ ಅಂದವನ್ನು ಮೆರೆದಿದ್ದಾನೆ, ಕಸುವನ್ನು ಕಾಣಿಸಿದ್ದಾನೆ. ಮಹಾಕವಿಯ ಪಟ್ಟ ಇವನಿಗೆ ಕಟ್ಟುವುದೂ ಬಿಡುವುದೂ ಅಭಿಪ್ರಾಯದ ಮಾತು. ಆದರೂ ಈ ಕಾವ್ಯ ಚಿತ್ರಣವನ್ನು ಸಾಮಾನ್ಯವೆಂದು ಕರೆದು ಅದಕ್ಕೆ ಸುವರ್ಣದ ಚೌಕಟ್ಟಿನ ಕಿರೀಟವಿಟ್ಟ ಸಹೃದಯ ವಿಮರ್ಶಕರ ವಾಣಿ ನನಗೆ ಒಪ್ಪಿತವಾಗಿಲ್ಲ. ಅವರ ಸುಂದರ ಪ್ರಾಸಮಯ ವಾಕ್ಯಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ. ಮುದ್ದಣನ ವಿಶಿಷ್ಟ ಗದ್ಯ ಶೈಲಿ ಬೆರಗುಗೊಳಿಸುವಂಥದು.

ಅರಳಿದ ಹೂವಿಗೆ ಪನ್ನೀರನ್ನು ಚುಮುಕಿಸಿದಂತೆ ಇದೆ, ನಡು ನಡುವಿನ ಇವರ ಸಂಭಾಷಣೆ. ಕಾವ್ಯದಲ್ಲಿ ವಿಮರ್ಶೆ ಸರಸವಾಗಿ ಮೈಗೂಡಿ ಕನ್ನಡಿಗರಿಗೆ ಒಂದು ಹೊಸ ಪರಿಯ ಚೆಲುವನ್ನು ತಂದಿದೆ. ನಲ್ಲನಲ್ಲೆಯರ ಚಲ್ಲಾಟದ ರಸಪ್ರಣಿಧಿ ಇದು ಎಂದು ತಿಳಿಸಿ ನಾನು ಈ ಪ್ರಬಂಧವನ್ನು ಮುಗಿಸುತ್ತೇನೆ.

---

ಕೃಪೆ : 'ಜಾಣ ಮುದ್ದಣ' ಗ್ರಂಥದಿಂದ (೧೯೭೦)

*****

# ಮುದ್ದಣ

## ಕ. ವೆಂ. ರಾಜಗೋಪಾಲ

ಹತ್ತೊಂಬತ್ತನೇ ಶತಮಾನದ ಕೊನೆಯ ಎರಡು ದಶಕಗಳಲ್ಲಿ ಕನ್ನಡ ಸಾಹಿತ್ಯವು ಒಂದು ಹೊಸ ತಿರುವಿನ ಮೊದಲ ಹಂತವನ್ನು ಸಾಧಿಸಿತು. ಇದಕ್ಕೆ ಆಂಗ್ಲ ಸಾಹಿತ್ಯದ ಪ್ರಭಾವವೇ ಮುಖ್ಯ. ಇದೇ ವೇಳೆಗೆ ಬಂಗಾಲಿ ಮತ್ತು ಮರಾಠಿ ಸಾಹಿತ್ಯ ರಂಗಗಳಲ್ಲಿ ಹೊಸ ತಿರುವು ಮೂಡಿದ್ದುದರಿಂದ, ಅಲ್ಲದೇ 'ಮೊದಲ ಸ್ವಾತಂತ್ರ್ಯ ಸಂಗ್ರಾಮ'ದ ನಂತರ ಆಂಗ್ಲರು ನಿಶ್ಚಿಂತರಾಗಿ ತಮ್ಮ ಆಳ್ವಿಕೆಯ ಮೂಲಕ ಕ್ರೈಸ್ತ ಮತದ ಪ್ರಸಾರಕ್ಕೆ ಸದವಕಾಶವನ್ನು ಕಲ್ಪಿಸಿಕೊಂಡು ನಮ್ಮ ಜನತೆಯ ವಿದ್ಯಾಭ್ಯಾಸದ ಕ್ರಮವನ್ನು ತಮಗೆ ಅನುಕೂಲವಾಗುವಂತೆ ಮಾಡಿಕೊಂಡು ಕ್ರೈಸ್ತ ಧರ್ಮದ ಸಾಹಿತ್ಯವನ್ನು ಬಳಕೆಗೆ ತರಲು ಹಲವಾರು ಬಗೆಯ ಪ್ರಯತ್ನಗಳನ್ನು ಮಾಡಿದಾಗ ಕನ್ನಡಿಗರೂ ಅದಕ್ಕೆಲ್ಲಾ ಮೈಗೊಟ್ಟರು. ಇಂತಹುದನ್ನೇ 'ನವೋದಯ' ಎನ್ನುತ್ತಿದ್ದೇವೆ. ಆ ಮೂಲಕ ಪಾಶ್ಚಾತ್ಯ ವಿದ್ವಾಂಸರ ನಾಟಕ, ಭಾವಗೀತೆ ಮತ್ತು ಕಾದಂಬರಿ ಪ್ರಕಾರಗಳನ್ನು ಕಂಡುಕೊಂಡರು. ಇವರಿಗೆಲ್ಲಾ ಆಂಗ್ಲ ವಿದ್ಯಾಭ್ಯಾಸವೂ ಅನುವಾದಿತ ಆಂಗ್ಲ ಕೃತಿಗಳೂ ಹೊಸದಾಗಿ ಮಾರ್ಗದರ್ಶಕವಾಗಿ (ದಾಸ್ಯದಲ್ಲಿದ್ದವರಿಗೆ ದೊರಕಿದ ಆದರ್ಶವಾಗಿ) ಕನ್ನಡದಲ್ಲಿ ಹೊಸಗನ್ನಡ ಸಾಹಿತ್ಯದ ಮೊದಲ ಪದರವಾದ 'ನವೋದಯ'ವು ಇಂದಿನದಕ್ಕೆಲ್ಲಾ ಆಧಾರವಾಯಿತು.

ಮೈಸೂರಿನ ದೊರೆ ಮುಮ್ಮಡಿ ಕೃಷ್ಣರಾಜ ಒಡೆಯರ ಕೃತಿಗಳು ಒಂದು ಬಗೆಯ ಹಳಗನ್ನಡ ಗದ್ಯವನ್ನೂ, ಅಂದಿನ ಆಸ್ಥಾನ ಕವಿಗಳಿಂದ 'ದಂಡಕ' ರೂಪದಲ್ಲಿ ಪೌರಾಣಿಕ ಛಾಯೆಯ (ರಚನೆಯಿಂದಾಗಿ ರಾಗವಾಗಿ ಓದಬಹುದಾದ ಗದ್ಯವನ್ನು) ವಸ್ತು ವಿಸ್ತರಣೆಯನ್ನೂ ಉತ್ತೇಜಿಸಿದಂತಾಗಿದ್ದಿತು. ಜೊತೆಗೆ ಕ್ರೈಸ್ತಪಾದ್ರಿಗಳ ಅನುವಾದಿತ ಗದ್ಯ ಪದ್ಯ ರಚನೆಗಳಲ್ಲಿ ಕ್ರೈಸ್ತ ಧರ್ಮವೇ ತುಂಬಿದ್ದರೂ ಮೇಲುಗೈಯಾಯಿತು. ಇದರ ಫಲವಾಗಿ ಬಂಗಾಲಿಯ ಬಂಕಿಮಚಂದ್ರರ ಕೃತಿಗಳೂ, ತೆಲುಗಿನ ವೀರೇಶಲಿಂಗಂ ಪಂತಲು ಅವರ ಕೃತಿಗಳೂ, ಮರಾಠಿಯ ಆಪ್ಟೆಯವರ ಕೃತಿಗಳೂ ಕನ್ನಡಕ್ಕೆ ಅನುವಾದ ರೂಪದಲ್ಲಿ ಬಂದುವು. ಇದೇ ವೇಳೆಗೆ ಬಸವಪ್ಪ ಶಾಸ್ತ್ರಿಗಳು, ಬೈಂದೂರು ಆನಂದರಾವ್, ಸೋಸಲೆ ಶಾಸ್ತ್ರಿಗಳು, ಎಂ. ಎಸ್. ಪುಟ್ಟಣ್ಣನವರು, ಬೆಳ್ಳಾವೆ ಸೋಮನಾಥಯ್ಯ, ಬೆನಗಲ್ ರಾಮರಾವ್, ಗಳಗನಾಥರು, ಎಸ್. ಜಿ. ಶಾಸ್ತ್ರಿಗಳು, ಶ್ರೀಕಂಠೇಶಗೌಡರು ಮೊದಲಾದವರ ಅನುವಾದಿತ ಅಥವಾ

ಸ್ವತಂತ್ರವಲ್ಲದ ಪ್ರೇರಿತ ಮತ್ತು ರೂಪಾಂತರಗಳೆನ್ನಬಹುದಾದ ಕೃತಿಗಳೂ, ಇನ್ನೂ ಹಲವಾರು ಇದೇ ಜಾತಿಯ ಸಮಕಾಲೀನ ರಚನೆಗಳೂ ಕನ್ನಡ ಸಾಹಿತ್ಯದ ನವೋದಯವನ್ನು ಸಾಧ್ಯವಾಗಿಸಿದುವೆನ್ನಬಹುದು. ಇವರಲ್ಲೆಲ್ಲಾ ಮುದ್ದಣನೇ ಪ್ರತಿಭಾವಂತನೆಂದು ಗಣನೆಗೆ ಬಂದಿದ್ದಾನೆ. ಈತನು ಕಾದಂಬರಿಯ ಪ್ರಕಾರಕ್ಕೆ ಹತ್ತಿರವಾದ ಕಥನ ಗದ್ಯ ರಚನೆಯನ್ನು ಸಾಧಿಸಿದ ಪ್ರಯತ್ನಗಳೇ ಈ ಗಣನೆಗೆ ಆಧಾರವಾಗಿದೆ.

"ಕಾಯೌ ಶ್ರೀಗೌರಿ । ಕರುಣಾಲಹರಿ । ತೋಯ್ಯಜಾಕ್ಷಿ । ಶಂಕರೀಶ್ವರೀ..." ಎಂಬ ಮೈಸೂರು ಗೀತೆಯನ್ನು ಬರೆಯಿಸಿಕೊಂಡ (ಬಸವಪ್ಪ ಶಾಸ್ತ್ರಿಗಳಿಂದ) ಮೈಸೂರಿನ ಮಹಾರಾಜರು ಮುದ್ದಣನ ಬಗ್ಗೆ ಒಂದು ಮಾತನ್ನಾದರೂ ಆಡಿದ ವಿಚಾರ ಬರುವುದಿಲ್ಲ. ಆದರೆ ಮುದ್ದಣನಿಗೆ ಮಾತ್ರ ಇಂಥ ಆಸೆಯೊಂದಿದ್ದು ಅದನ್ನು ಆತನು ತನ್ನ 'ರಾಮಾಶ್ವಮೇಧ ಕಾವ್ಯ'ದಲ್ಲಿ ಮೊದಲಿಗೆ ವ್ಯಕ್ತಪಡಿಸಿಕೊಂಡು ತನಗೆ ತಾನೇ ಸಮಾಧಾನವನ್ನು ತಾಳಿದಂತೆ ತೋರುತ್ತದೆ. ಇದಕ್ಕೆ ತೀರ ವಿರುದ್ಧವಾಗಿ ಬಸವಪ್ಪ ಶಾಸ್ತ್ರಿಗಳ ಪ್ರತಿಭೆಯು ರಾಜಸೇವೆಗೆ ಮೀಸಲಾಗಿ ನಿಂತು ಅವರ ಶೃಂಗಾರದ ವೈಭವಕ್ಕೆ ಬಲಿಯಾದಂತೆ ಕಂಡುಬರುತ್ತದೆ. ಶಾಕುಂತಲಂ, ವಿಕ್ರಮೋರ್ವಶೀಯಂ ಮತ್ತು ಮಾಲವಿಕಾಗ್ನಿ ಮಿತ್ರಂ – ಈ ನಾಟಕಗಳ ರಚನೆಯಿಂದ ಪಂಡಿತರಿಗೂ, ಮಹಾರಾಜರಿಗೂ ಆನಂದದ ಹೊಳೆ ಹರಿಯಿತೆಂಬುದನ್ನು ನೆನೆದರೆ 'ಮುದ್ದಣ'ನು ಅಜ್ಞಾತನಾಗಿ ಜೀವ ಬಿಟ್ಟುದೇ ಮೇಲೆಂದೂ ಅನ್ನಿಸಬಹುದು. ಈತನು ಹಳಗನ್ನಡ ಮತ್ತು ದಕ್ಷಿಣ ಕನ್ನಡದ ಜನಜೀವನದಿಂದ ಸಂಪಾದಿಸಿದ ಸ್ವಾನುಭವವನ್ನು ಕಾವ್ಯ ರೂಪಕ್ಕೆ ಬಳಸುವಲ್ಲಿ ಇಂಗ್ಲಿಷ್ ಭಾಷೆಯ ವಿರಾಮ ಚಿಹ್ನೆ (***) ಗಳನ್ನು ಬಳಸಿದುದು ತುಂಬ ಉಚಿತವಾದ ಪ್ರಯೋಗವೆಂದು ತೋರುತ್ತದೆ. ಈತನ ಕೃತಿಗಳು ಯಕ್ಷಗಾನದ ಪ್ರಗತಿಗೂ ಹೊಸಗನ್ನಡ ಗದ್ಯದ ಸರಳತೆಯನ್ನು ಒಳಗೊಂಡು (ಮೊದಲ ಹಂತದಲ್ಲಿ) ಕಾವ್ಯ ಸತ್ವದಿಂದ ತುಂಬಿಹೋದುದರಿಂದ ಹೊಸಗನ್ನಡ ಸಾಹಿತ್ಯಕ್ಕೂ ತಳಹದಿಯನ್ನು ಮೆಟ್ಟಿದಂತೆ ಆಯಿತು. ಈತನ ಜೋ ಜೋ ಪ್ರಬಂಧದ ಶೈಲಿಯನ್ನು ಗಮನಿಸಿದರೆ ಈತನ 'ಗೋದಾವರಿ' ಎಂಬ ಕಾದಂಬರಿಯ ಶೈಲಿಯನ್ನು ಊಹಿಸಲು ಅವಕಾಶವಾಗುತ್ತದೆ. ಅದು ಬಹುಶಃ ಗಳಗನಾಥರು ಮತ್ತು ವೆಂಕಟಾಚಾರ್ಯರ ಕೃತಿಗಳಿಗೆ ಸಮಾನವಾಗುತ್ತಿದ್ದ ಅವಕಾಶಗಳನ್ನು ಖಚಿತವಾಗಿ ಕಾಣಿಸುತ್ತದೆ. ಆಗಿನ ಪಂಜೆಯವರು, ಎಸ್. ಜಿ. ನರಸಿಂಹಾಚಾರ್ಯರು ಮತ್ತು ಗೋವಿಂದ ಪೈಗಳು ಮುದ್ದಣನ ಹಾದಿಯನ್ನು ಬೆಳೆಸಲು ಯತ್ನಿಸಿದವರೇ ಆಗಿದ್ದಾರೆ. ಒಟ್ಟಿನಲ್ಲಿ 'ಮುದ್ದಣ'ನನ್ನು ನವೋದಯದ ಮೊದಲಿಗೆ ಗುರುತಿಸಿ ಗೌರವಿಸಿರುವುದು ಸಾಧುವಾದ ವಿಚಾರವೇ ಆಗಿದೆ.

ಮುದ್ದಣನ ಸ್ವವಿಮರ್ಶೆಯಿಂದ ಹುಟ್ಟಿದ ಕೃತಿಗಳು ಯಕ್ಷಗಾನದ ಹೊಸ ರಚನೆಗಳಿಗೂ ಹೊಸಗನ್ನಡ ಗದ್ಯದ ಆವಿರ್ಭಾವಕ್ಕೂ ದಾರಿ ಮಾಡಿಕೊಟ್ಟಿವೆ. ಈತನು ಇನ್ನೂ ಮುಂದುವರಿದು ಒಂದು ಹೊಸ ಕಾದಂಬರಿಯನ್ನು

ರಚಿಸಬಲ್ಲವನಾಗಿದ್ದನೆಂಬುದಕ್ಕೆ ಈಗ ಕಳೆದುಹೋಗಿರುವ 'ಗೋದಾವರಿ' ಕೃತಿಯನ್ನು ನೆನೆಯಬಹುದು. ಇಂತಹ ರಚನೆಗೆ ತಕ್ಕ ಗದ್ಯ ರಚನೆಯು ಈತನಿಗೆ ಸಾಧ್ಯವಾಗಿದ್ದಿತೆನ್ನುವುದಕ್ಕೆ 'ಜೋ ಜೋ' ಎಂಬ ಪ್ರಬಂಧವು ಆಧಾರವಾಗುತ್ತದೆ. ಕಲ್ಪನಾ ಸಾಮರ್ಥ್ಯವನ್ನು ಶ್ರೀರಾಮಾಶ್ವಮೇಧದಲ್ಲಿ ಕಂಡುಬರುವ 'ಸುವರ್ಣದ ಚೌಕಟ್ಟು' ಸೂಚಿಸುತ್ತದೆ. ಈ ಕೃತಿಯಲ್ಲಿ ಹೊಸತನವು ಶೋಭಿಸುವುದನ್ನು ಪಂಡಿತರೆಲ್ಲರೂ ಗುರುತಿಸಿದ್ದಾರೆ. ಈ ಹೊಸತನಕ್ಕೆ ಹೆಗ್ಗುರುತಾಗಿ ಆಂಗ್ಲ ಸಾಹಿತ್ಯದ ಅನುವಾದಗಳಲ್ಲಿ ರೈಸ್ ಸಾಹೇಬರು ಮೊದಲಾದವರು ಬಳಸಿದ ವಿರಾಮ ಚಿಹ್ನೆಗಳನ್ನು ಮುದ್ದಣನೂ ಬಳಸಿದ್ದಾನೆಂಬುದು ಮುಖ್ಯ. ಇವುಗಳಿಂದಾಗಿ ವಾಕ್ಯ ರಚನೆಯು ಸರಳವಾಗಿ, ಸ್ಪಷ್ಟವಾಗಿ ರೂಪ ತಾಳಲು ಅವಕಾಶವಾಯಿತು. ಇದರ ಗುಟ್ಟನ್ನು ಅರಿತೇ ಮುದ್ದಣನು 'ಗದ್ಯಂ ಹೃದ್ಯಂ' ಎಂಬ ವಿಚಾರಕ್ಕೆ ಒಲಿದಿರಬೇಕು.

ಮುದ್ದಣನು ತನ್ನ ಆತ್ಮೀಯರೊಂದಿಗೆ (ಪಂಜೆಯವರು, ಬೆನಗಲ್ ರಾಮರಾಯರು, ಮಳಲಿ ಸುಬ್ಬರಾಯರು, ಹುರಳಿ ಭೀಮರಾಯರು) ಹೇಳಿಕೊಂಡಿರುವಂತೆ – ಇಂತಹ ಹಲವಾರು ಕೃತಿಗಳನ್ನು ತಾನು ಬರೆಯಬಲ್ಲನೆಂಬುದು ಗಮನಾರ್ಹವಾಗಿದೆ. ಅಂದಿನ ಬೇರೆಯ ಯಾವ ಬರಹಗಾರರಲ್ಲೂ ಇಷ್ಟು ಧೈರ್ಯ ಕಂಡುಬರುವುದಿಲ್ಲ. ಅಂಥವರಲ್ಲಿ ಅನುಕರಣೆಯಷ್ಟೇ ಮುಖ್ಯವಾಗಿ ಇದ್ದಬದ್ದ ಪ್ರತಿಭೆಯೆಲ್ಲಾ ವ್ಯಯವಾಗಿರುವುದನ್ನು ಕಾಣುತ್ತೇವೆ. ಸಂಧಿಕಾಲದಲ್ಲಿ ಬಸವಪ್ಪ ಶಾಸ್ತ್ರಿಗಳು ಬಾಳದಿದ್ದರೆ ಅವರ ಪ್ರತಿಭೆಯಿಂದ ಒಳ್ಳೆಯ ನಾಟಕಗಳು ಹುಟ್ಟುತ್ತಿದ್ದುವೆಂದು ಹೇಳಬಹುದಾಗಿದೆ. ಮುದ್ದಣನು ಇಂಥ ಅಪಾಯದಿಂದ ಪಾರಾಗಲು ಪ್ರಯತ್ನಿಸಿ ಸಾಕಷ್ಟು ಮುನ್ನಡೆದ ಪ್ರತಿಭಾವಂತ ಕವಿ ಎಂದರೆ ಸಾಕಾದೀತು. ಅಂಥ ವಿಮರ್ಶೆಯ ಪ್ರಜ್ಞೆಯು ಆತನಲ್ಲಿ ಜಾಗೃತವಾಗಿದ್ದಿತೆಂದು ಹೇಳಿದಂತಾಗುತ್ತದೆ.

ಮುದ್ದಣನ ಪ್ರತಿಭೆಯು ಎರಡು ಸ್ತರಗಳಲ್ಲಿ ಕೆಲಸ ಮಾಡುತ್ತದೆ : ಒಂದು, ಜಾನಪದ ಸ್ವರೂಪವನ್ನು ಬಳಸಿಕೊಳ್ಳುವುದು ಮತ್ತು ಎರಡು, ಗದ್ಯ ಮತ್ತು ಪದ್ಯಗಳನ್ನು ಬುದ್ಧಿಪೂರ್ವಕವಾಗಿ ಬೇರ್ಪಡಿಸಿದರೂ 'ಹೃದ್ಯಮಪ್ಪ ಗದ್ಯ'ವನ್ನು ಅಂದರೆ ಕಾವ್ಯ ಸತ್ವದ ಗದ್ಯವನ್ನು ರಚಿಸಿದುದು. ಇಂತಹ ಪ್ರಯತ್ನದಿಂದ 'ನವೋದಯ ಕಾವ್ಯ'ದ ತಳಹದಿಯನ್ನು ಮೆಟ್ಟಿದುದಾಗಿದೆ. ಆತನ ಸಮಕಾಲೀನರು ಇವುಗಳಲ್ಲಿ ಒಂದೊಂದನ್ನು ಮಾತ್ರ ಬಳಸಿಕೊಳ್ಳಲು ಪ್ರಯತ್ನಿಸಿದವರು. ಬಸವಪ್ಪ ಶಾಸ್ತ್ರಿಗಳು ಸಂಸ್ಕೃತ ನಾಟಕದ ಪರಂಪರೆಯನ್ನು 'ಇಂದ್ರಸಭಾ' ನಾಟಕದ ರಂಗಭೂಮಿಯ ಸಂಪ್ರದಾಯದಲ್ಲಿ ಬೆಳೆಸಿದವರು. ಷೇಕ್ಸ್‌ಪಿಯರನ 'ಒಥೆಲೊ' ನಾಟಕವನ್ನು 'ಶೂರಸೇನ ಚರಿತೆ' ಎಂದು ರೂಪಾಂತರಿಸಿದಾಗಲೂ ಅವರು ಸಂಸ್ಕೃತ ನಾಟಕ ಮತ್ತು ಇಂದ್ರಸಭಾ ರಂಗಭೂಮಿಯ – ಮಿಳಿತದ ಸಂಪ್ರದಾಯದಲ್ಲಿ ರಚಿಸಿದ್ದಾರೆ. ಅಲ್ಲದೆ ಗದ್ಯವು ಅವರಲ್ಲಿ ಪ್ರತ್ಯೇಕವಾದ ರೂಪವನ್ನು ತಾಳಿರುವುದಿಲ್ಲ. ಇದರಿಂದ ಅವರ ಪ್ರತಿಭೆಗೆ ಕೊರತೆಯಿಲ್ಲವಾದರೂ ನವೋದಯದಲ್ಲಿ ಹುಟ್ಟಿದ ಬಹುಮುಖ್ಯ ಪ್ರಕಾರವಾದ

'ಕಾದಂಬರಿ' ಅಥವಾ ಹೊಸಗನ್ನಡ ಗದ್ಯದ ರಚನೆಗೆ ಅವರು ಮನಸ್ಸು ಮಾಡಲಿಲ್ಲವೆಂಬುದೂ ಅದರ ಭವಿಷ್ಯವನ್ನು ಕಾಣಲಿಲ್ಲವೆಂಬುದೂ ಕೊರತೆಗಳಾಗುತ್ತವೆ. ಮುದ್ದಣನಾದರೆ ಇಂತಹ ಪ್ರಯತ್ನ ಮಾಡಿದವನೂ ಭವಿಷ್ಯವನ್ನು ಗುರುತಿಸಿದವನೂ ಆಗುತ್ತಾನೆ.

ಮುದ್ದಣನ ಪ್ರತಿಭೆಯ ಬಿಸಿಯನ್ನು ಯಕ್ಷಗಾನದ ರಚನೆಯಲ್ಲಿ ಕಾಣುವುದಕ್ಕಿಂತ ಹೆಚ್ಚಾಗಿ 'ಶ್ರೀರಾಮಾಶ್ವಮೇಧಂ' ಕೃತಿಯಲ್ಲಿರುವ ವಸ್ತುವಿನಲ್ಲಿ ಮತ್ತು ಚೌಕಟ್ಟಿನಲ್ಲಿ ಕಾಣುತ್ತೇವೆ. ಇದರಲ್ಲಿ ಯಕ್ಷಗಾನ ಮತ್ತು ಕಾದಂಬರಿ ಪ್ರಕಾರಗಳಲ್ಲಿ ಕಂಡುಬರುವಂಥ ಹಾಸ್ಯ ಪ್ರಸಂಗವೊಂದು ಕೃತಿಯ ಅವಿಭಾಜ್ಯ ಅಂಗವಾಗಿ ಕಂಡು ಬರುತ್ತದೆ. ವಿಮರ್ಶಕರು ಮುದ್ದಣ ಮನೋರಮೆಯರ ಸಂಭಾಷಣೆಯನ್ನು ಪ್ರತ್ಯೇಕಿಸಿ ನೋಡಿದರೂ ಅದು ಮುಖ್ಯ ಕಥಾನಕದಲ್ಲಿನ ಕಾವ್ಯ ಶೈಲಿಯ ನಿರ್ಧಾರ ಮತ್ತು ಸಂಭೋಗ ಶೃಂಗಾರದ ಒಂದು ಮುಖವನ್ನು ಒಳಗೊಳ್ಳುವುದನ್ನೂ ಮರೆಯುವಂತಿಲ್ಲ. ಅಲ್ಲದೆ ಮುಂದಿನ ಕಥಾಭಾಗದಲ್ಲಿ ಇದಕ್ಕೆ ಹೊಂದಿಕೆಯಾಗುವ ಮತ್ತು 'ವಿಪ್ರಲಂಭ'ವನ್ನು ಪ್ರಧಾನವಾಗಿ ಉಳ್ಳ ಅನುಭವವನ್ನು ಗುರುತಿಸಿದರೆ ಮುದ್ದಣನ ಕಾವ್ಯದ ಚೌಕಟ್ಟಿನ ಅರ್ಥವಾದೀತು. ಆಗ ಮುದ್ದಣನು ತನ್ನ ಕೃತಿಯನ್ನು ಒಂದು 'ವಿರಹ' ಪ್ರಧಾನವಾದ ಗದ್ಯ ಕಾವ್ಯವನ್ನಾಗಿ ಮಾಡಲು ಪ್ರಯತ್ನಿಸಿದ್ದಾನೆ; ಯಶಸ್ವಿಯೂ ಆಗಿದ್ದಾನೆ.

ಮುದ್ದಣ-ಮನೋರಮೆಯರ ಸಂಭಾಷಣೆಯನ್ನು ಕಾವ್ಯದಿಂದ ತೆಗೆದರೆ ಅದರ ಕಥಾನಕವು ಸಾಮಾನ್ಯ ವಸ್ತುವಾಗುತ್ತದೆಯೆಂಬುದನ್ನು ಎಸ್. ವಿ. ರಂಗಣ್ಣನವರು ಪ್ರತಿಪಾದಿಸಿದ್ದಾರೆ. ಇದರಿಂದ ಮುದ್ದಣನ ಮನೋಧರ್ಮವನ್ನು ಅರ್ಥ ಮಾಡಿಕೊಳ್ಳದ ಮತ್ತು ಕೃತಿಯ ಚೌಕಟ್ಟನ್ನು ಸರಿಯಾಗಿ ಗಮನಿಸದ ಪ್ರಯತ್ನವಾದಂತಾಗಿದೆ... ಕಥೆಯನ್ನು ಹೇಳುವ ಚಾತುರ್ಯವೇ ಮುದ್ದಣನ ಒಂದು ವಿಶೇಷ ಸಾಧನೆಯಾಗಿ ಕಂಡು ಬರುವುದನ್ನು ಮರೆಯಬಾರದು. ಇಂಥ ಸಾಮರ್ಥ್ಯವನ್ನು ಬಂಕಿಮಚಂದ್ರರ ಪ್ರಸಿದ್ಧ ಕೃತಿಗಳಲ್ಲಿ ಕಾಣುತ್ತೇವೆ. ಉದಾ. 'ವಿಷವೃಕ್ಷ' (೧೯೦೦ ಕನ್ನಡದಲ್ಲಿ) ಆದರೆ ಬಂಕಿಮಚಂದ್ರರಲ್ಲಿ ತುಂಬಿ ಕಾಣಿಸಿಕೊಳ್ಳುವ 'ರಮ್ಯತೆ'ಗೆ ಒಂದೇ ಪ್ರಧಾನ ಮುಖವಿದೆ. ಆದುದರಿಂದ ಮುದ್ದಣನೇ ಉತ್ತಮನಾಗಿ ಕಂಡು ಬರುತ್ತಾನೆ. ಈತನ 'ಗೋದಾವರಿ' ದೊರಕಿದ್ದರೆ ಈ ವಿಚಾರವನ್ನು ಸ್ಪಷ್ಟವಾಗಿ ಹೇಳಲು ಸಾಧ್ಯವಾಗುತ್ತಿತ್ತು ಮತ್ತು ಇಂಥ ವಿವರಣೆ ಬೇಕಾಗುತ್ತಿರಲಿಲ್ಲ. ಮುದ್ದಣನ ಉಳಿದ ಕೃತಿಗಳಲ್ಲಿಯೂ ಕಥನ ಚಾತುರ್ಯವು ಒಂದು ಮುಖ್ಯ ಲಕ್ಷಣವೇ ಆಗಿರುತ್ತದೆ. ಈತನು ಪದ್ಯ ರೂಪದಲ್ಲಿ ರಚಿಸಲಿ ಅಥವಾ ಗದ್ಯದಲ್ಲಿ ರಚಿಸಲಿ ಪ್ರಯೋಗಶೀಲನಾಗಿ ಕ್ರಮೇಣ ಪದ್ಯದಿಂದ ಗದ್ಯಕ್ಕೆ ಬೆಳೆದಿದ್ದಾನೆ. ಒಟ್ಟಿನಲ್ಲಿ ಮುದ್ದಣನ ಉದ್ದಿಶ್ಯವನ್ನು ಗಮನಿಸಲು ಮತ್ತು ಅರ್ಥ ಮಾಡಿಕೊಳ್ಳಲು ಸಾಧ್ಯ.

ಈತನ 'ರತ್ನಾವತೀ ಕಲ್ಯಾಣ', 'ಕುಮಾರವಿಜಯಂ' ಮತ್ತು 'ಶ್ರೀರಾಮ ಪಟ್ಟಾಭಿಷೇಕಂ' ಎಂಬುವು ಪದ್ಯ ಕಾವ್ಯಗಳು. ಇವುಗಳ ಅನುಭವದ ಮೂಲಕ

ಗದ್ಯ ರಚನೆಗೆ ತೊಡಗಿದ ಮುದ್ದಣನು 'ಅದ್ಭುತ ರಾಮಾಯಣಂ', 'ಶ್ರೀರಾಮಾಶ್ವಮೇಧಂ' ಮತ್ತು 'ಜೋ ಜೋ' ಎಂಬ ಪ್ರಬಂಧವನ್ನೂ ಪ್ರಕಟಿಸಿ 'ಗೋದಾವರಿ' ಎಂಬ ಕಾದಂಬರಿಯನ್ನು ಈತನೇ ರಚಿಸಿದ್ದಂತೆ ಕಂಡುಬರುತ್ತದೆ (ಆದರೆ ಈ 'ಗೋದಾವರಿ' ದೊರಕಿಲ್ಲ). ಇವುಗಳಲ್ಲಿ ಮೊದಲ ಎರಡು ಕೃತಿಗಳನ್ನು 'ಪದ್ಯ'ವೆಂದು ಕರೆಯಬಹುದಾದರೂ, 'ಪದ'ಗಳೆಂದು ನಿಖರವಾಗಿ ಹೇಳಬೇಕಾಗುತ್ತದೆ. ಒಂದು 'ರತ್ನಾವತೀ ಕಲ್ಯಾಣ' – ಯಕ್ಷಗಾನದ ಸಾಂಪ್ರದಾಯಿಕ ಮಟ್ಟುಗಳಿಂದಲೂ ಯಕ್ಷಗಾನ ಬಯಲಾಟದ ರೀತಿಯಲ್ಲಿಯೂ ರಚಿಸಲಾಗಿದೆ. ಶೃಂಗಾರ–ವೀರ ಪ್ರಧಾನವಾಗಿದೆಯಾಗಿ ದೃಶ್ಯ ರೂಪದಲ್ಲಿ ಇದರ ರಂಜನೆ ಹೆಚ್ಚಾಗುತ್ತದೆ. ಇದರ ರಚನೆಯಲ್ಲಿ ವೃತ್ತಗಳು, ವಾರ್ಧಕ ಮತ್ತು ಭಾಮಿನಿ ಷಟ್ಪದಿಗಳೂ, ಸಾಂಗತ್ಯ, ಅಲ್ಲದೆ ಯಕ್ಷಗಾನದ ಹಲವು ಮಟ್ಟುಗಳೂ ಸೇರಿವೆ. ಅಂದರೆ ರಾಗಗಳೂ ಇತರ ಕಾವ್ಯಗಳಲ್ಲಿ ಕಂಡುಬರುವ ಛಂದೋಬದ್ಧಗಳೂ ಇದರ ರಚನೆಗೆ ಬಳಕೆಯಾಗಿವೆ. 'ನವರಸ ಭರಿತ'ವಾಗಬೇಕೆಂಬ ಇಚ್ಛೆಯೂ ಸೇರಿ ಒಂದು ಬಯಲಾಟವು ಸುಂದರವಾಗಿ ರೂಪತಾಳಿದೆ. ಈ ಕೃತಿಯ ಪ್ರಯೋಗವು ಹಲವಾರು ಬಾರಿ ಯಕ್ಷಗಾನ ಬಯಲಾಟವಾಗಿರುವುದನ್ನು ಗಮನಿಸಿದರೆ ಇದರ ಜನಪ್ರಿಯತೆಯನ್ನು ಅಲ್ಲಗಳೆಯುವಂತಿಲ್ಲ.

ಇಲ್ಲಿಯ ಷಟ್ಪದಿಗಳನ್ನು ಗಮನಿಸಿದರೆ ಮುದ್ದಣನು ಕಥನಕ್ಕೆ ಪ್ರಧಾನತೆಯನ್ನು ಕೊಟ್ಟು ಬೇಕೆಂತಲೇ ಅಲಂಕಾರಗಳನ್ನು ಬಿಟ್ಟುಕೊಟ್ಟು ಸರಳತೆಯನ್ನು ಸಾಧಿಸಿದ್ದಾನೆ. ಅಲ್ಲದೆ ನಡುಗನ್ನಡದ ಭಾಷಾ ಶೈಲಿಯನ್ನು ಬಳಸುವುದರ ಮೂಲಕ ಹೊಸಗನ್ನಡದ ಮಾತಿನ ಸತ್ವವನ್ನು ಪಂಡಿತಪಾಮರರಿಬ್ಬರಿಗೂ ಒಪ್ಪಿಗೆಯಾಗುವಂತೆ ಪ್ರಯತ್ನಿಸಿದಂತಾಗಿದೆ. ಇದರಲ್ಲಿಯೂ ಯಕ್ಷಗಾನ ರಚನೆಯ ಸಂಪ್ರದಾಯವು ಬೆಳೆದಿದೆ. "ಅವನ ಚೊಚ್ಚಿಲ ಕೃತಿ 'ರತ್ನಾವತಿ ಕಲ್ಯಾಣ' ಮಾತ್ರ ಇತರ ಯಾವುದೇ ರೀತಿಯಲ್ಲಿ ಅಲ್ಲವಾದರೂ ಕಥೆಯ ಮಟ್ಟಿಗೆ ಹೊಸತನದಿಂದ ಕೂಡಿದೆ." ಇದರ ಕಥೆಯನ್ನು ಸಂಸ್ಕೃತ 'ರತ್ನಾವಲೀ' ನಾಟಕದ ಕಥೆಯೆಂದು ಅನೇಕರು ತಪ್ಪು ತಿಳಿದಿದ್ದಾರೆ. ಶ್ರೀ ಹರ್ಷನ 'ರತ್ನಾವಲೀ' ನಾಟಕಕ್ಕೂ ಈ 'ರತ್ನಾವತಿ ಕಲ್ಯಾಣ'ಕ್ಕೂ ಏನೇನೂ ಸಂಬಂಧವಿಲ್ಲ. ಇದರಲ್ಲಿ 'ನಾರದರೊಬ್ಬರ ಹೊರತು ಪುರಾಣಕ್ಕೆ ಸಂಬಂಧಿಸಿದ ಇತರ ಪಾತ್ರಗಳೇ ಇಲ್ಲ. ಇತರ ಪಾತ್ರಗಳೆಲ್ಲಾ ಮುದ್ದಣನ ಕಲ್ಪನೆಯ ಕುದುರೆಗಳು.' ಆದುದರಿಂದ ಇದು ಯಕ್ಷಗಾನದ ಕಲ್ಯಾಣಗಳ ಹಳೆಯ ಪರಂಪರೆಯನ್ನು ಅನುಸರಿಸಿಕೊಂಡು ಬಂದ ಹೊಸ ಕಾಲ್ಪನಿಕ ಕಥೆಯಾಗಿದೆ. ಇದನ್ನು ಒಂದು 'ಸುಂದರ ಪ್ರಸಂಗವೆನ್ನುವುದುಂಟು.'

ಮುದ್ದಣನ ಪ್ರತಿಭಾ ವಿಶೇಷ ಕಾಣುವುದು 'ಕುಮಾರ ವಿಜಯ'ದಲ್ಲಿ. ಅದು ಪುರಾಣದ ಕಥೆ. ಸ್ಕಾಂಧಪುರಾಣಾಂತರ್ಗತ ಎಂದು ಅನೇಕರು ಹೇಳಿದರೂ ಆ ಪುರಾಣದಲ್ಲಿ ಇಲ್ಲಿನ ಪೂರ್ಣಕಥೆ ಎಲ್ಲಿಯೂ ಕಾಣುವುದಿಲ್ಲ. 'ಶಂಕರೋಪಾಖ್ಯಾನವೆಂಬ ಷಟ್ಪದಿ ಕಾವ್ಯದಲ್ಲಿ ಕುಮಾರ ವಿಜಯದ ಕಥೆಯಿದೆ' –

(ಶ್ರೀ ಕೆ. ಜಿ. ಉಚ್ಚಿಲ್) ಹೀಗಿದ್ದರೂ ಯಕ್ಷಗಾನಕ್ಕೆ ಸಹಜವಾದ ಅನೇಕ ಸ್ವತಂತ್ರ ವೈಶಿಷ್ಟ್ಯಗಳಿಂದ ಕೂಡಿದ್ದು 'ಮುಂತಿಲ್ಲ ಪಿಂತಿಲ್ಲ' ಎಂಬ ಮೆಚ್ಚಿಗೆಯನ್ನು ಪಡೆದುಕೊಂಡಿದೆ. ಇಂಥ ಪಂಡಿತರ ಮೆಚ್ಚಿಗೆಗೆ ಒಳಗಾದ ಕೃತಿಯಾದರೂ ಇದರ ಪ್ರಯೋಗಗಳು ನಡೆದಂತಿಲ್ಲ. ಅಂದರೆ ಇದರ 'ಬಯಲಾಟ'ದ ಸೋಲು ಗಣನೀಯವಾದುದು. ಆದುದರಿಂದಲೇ ಮುದ್ದಣ ಈ ರೀತಿಯನ್ನೇ ಬಿಟ್ಟುಕೊಟ್ಟು ಕಾವ್ಯ ರಚನೆಗೆ ತೊಡಗುತ್ತಾನೆ.

ಮುದ್ದಣನು ಇನ್ನು ಮುಂದೆ ಶುದ್ಧ ಸಂಪ್ರದಾಯಕ್ಕೆ ಮಾರುಹೋಗಿ ಲಕ್ಷ್ಮೀಶನ ಪ್ರೌಢಿಮೆಯನ್ನು ಮಾತ್ರ ಅನುಮೋದಿಸಿದಂತೆ 'ಶ್ರೀರಾಮ ಪಟ್ಟಾಭಿಷೇಕಂ' ಕಾವ್ಯವು ಛಾಂದಸಿಕ ರಚನೆಯಿಂದ ಮುಖ್ಯವಾದರೂ ಲಕ್ಷ್ಮೀಶನ ಕಥನ ಚಾತುರ್ಯವಿಲ್ಲದೆ ಉಳಿದು ಬಿಡುತ್ತದೆ. ಇದನ್ನು ಓದುವವರು ತುಂಬ ಎಚ್ಚರಿಕೆಯಿಂದ ಪದ ಪುಂಜಗಳನ್ನು ಬಿಡಿಸಿ ನೋಡಿದಲ್ಲದೆ ಅರ್ಥಯಿಸುವುದಕ್ಕೂ ಆಗುವುದಿಲ್ಲ. ಇದರ ಜೊತೆಗೇ ರಚಿತವಾದ 'ಅದ್ಭುತ ರಾಮಾಯಣಂ' ಕೃತಿಯ ಸ್ವಾರಸ್ಯವು (ಗದ್ಯದಲ್ಲಿ) ಮುದ್ದಣನ ಮನವನ್ನೂ ಕಣ್ಣನ್ನೂ ತೆರೆಯಿಸಿರಬೇಕು. ಈ ವೇಳೆಗೆ ಬೇರೆಯವರ ವಿಮರ್ಶೆಗಿಂತಲೂ ಆತನದೇ ಅನುಭವಗಳು ಗದ್ಯದ ಸಾಧ್ಯತೆಯ ಕಡೆಗೆ ಸೆಳೆದಿರಬೇಕು. ಇದರಿಂದ 'ಶ್ರೀರಾಮಾಶ್ವಮೇಧಂ' ರಚಿತವಾಗಿದೆ. 'ಹೃದ್ಯಮಪ್ಪ ಗದ್ಯದೊಳ್' ಅನಕ್ಷರಸ್ಥಳಾದರೂ ಸುಸಂಸ್ಕೃತಳಾದ ಮನೋರಮೆಗೆ ಮೆಚ್ಚಿಗೆಯಾಗುವಂತೆ ರಚಿತವಾಗಿದೆ. ಇದನ್ನು ಬೇಕಾದರೆ 'ಕಾಂತಾಸಂಮಿತ'ವೆಂದು ಹೇಳಬಹುದು. ಅದು ಮುಖ್ಯವೇನಲ್ಲ. ಆದರೆ ಇದು ಮುದ್ದಣನ ಕಾವ್ಯ ಸಾಧನೆಯಲ್ಲಿ ಕಾವ್ಯರಚನಾವಿಕಾಸದ ಕ್ರಮವೆಂಬುದನ್ನು ಮರೆಯುವಂತಿಲ್ಲ. ಮತ್ತು ಮುದ್ದಣನು ಈ ಮಾರ್ಗದಲ್ಲಿ ಇನ್ನೂ ಮುಂದುವರಿದಿದ್ದನೆಂಬುದೂ ಹೊಸಗನ್ನಡದ ಸಾಹಿತ್ಯದ ನವೋದಯಕ್ಕೆ ಅವಶ್ಯವಾದುದು.

ಮೇಲಿನ ಕೃತಿಗಳೆಲ್ಲಾ ಪೌರಾಣಿಕತೆಯನ್ನು ಒಳಗೊಂಡಿವೆ. 'ಗೋದಾವರಿ'ಯಲ್ಲಾಗಿದ್ದರೆ ಅದು ಸಮಕಾಲೀನ ವಸ್ತುವಾಗಿದ್ದಿರಬೇಕು. ಇದನ್ನೇ ನವೋದಯದ ಹಂತವೆಂದು ಪರಿಗಣಿಸಬೇಕಾಗುತ್ತದೆ. ಈ ವೇಳೆಗಾಗಲೇ 'ಇಂದಿರಾಬಾಯಿ' ಮತ್ತು 'ಪ್ರಬುದ್ಧ ಪದ್ಮನಯನೆ' ಕಾದಂಬರಿಗಳು ಕನ್ನಡ ಗದ್ಯದಲ್ಲಿ ರಚಿತವಾಗಿದ್ದುವು. ತೆಲುಗಿನಿಂದ ವೀರೇಶಲಿಂಗಂ ಪಂತಲು ಅವರ 'ರಾಜಸಿಂಹ' ಮೊದಲಾದುವೂ ಬಂಕಿಮಚಂದ್ರರ 'ದುರ್ಗೇಶ ನಂದಿನಿ' ಮೊದಲಾದ ಬಂಗಾಲಿ ಕೃತಿಗಳೂ (ಇಂಗ್ಲಿಷ್‌ನಿಂದ ಪಿಲ್‌ಗ್ರಿಮ್ಸ್ ಪ್ರಾಗ್ರೆಸ್, ಹೋಲಿವಾರ್, ವಿಕಾರ್ ಆಫ್ ದಿ ವೇಕ್ ಫೀಲ್ಡ್, ಅಂಕಲ್ ಟಾಮ್ಸ್ ಕ್ಯಾಬಿನ್ ಮೊದಲಾದವೂ ಅನುವಾದ ಅಥವಾ ಸಂಗ್ರಹಾನುವಾದವಾಗಿದ್ದುವು) ಕನ್ನಡದಲ್ಲಿ ಪ್ರಸಿದ್ಧವಾಗಿದ್ದುವು. ಅವುಗಳೊಡನೆ ತನ್ನ ಕೃತಿಯು ಸ್ಪರ್ಧಿಸಬೇಕಾದೀತೆಂಬ ಅರಿವು ಮುದ್ದಣನಿಗೆ ಇದ್ದಿರುವುದು ಸಾಧ್ಯ. ಒಟ್ಟಿನಲ್ಲಿ ಮುದ್ದಣನ ಪ್ರಯತ್ನದಲ್ಲಿ 'ನವೋದಯದ ಪ್ರಾರಂಭವು' ಕಾಣಿಸಿಕೊಳ್ಳುತ್ತದೆ.

## ಕವಿಯ ನಾಮಧೇಯ

'ಮುದ್ದಣ' ಎಂಬ ವಿಮರ್ಶಾ ಗ್ರಂಥವು ೧೯೨೬ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟಣೆಯಾಗಿದೆ. ಇದು ಬಹುಶಃ ಕವಿಯ ಸ್ವರ್ಣ ಜನ್ಮೋತ್ಸವವನ್ನು ಸೂಚಿಸುತ್ತದೆ. ಇದರಲ್ಲಿ ಎರಡು ಅಂಶಗಳು ಮುಖ್ಯ. ಒಂದು – ಆರೇಳು ಕೃತಿಗಳ ಕರ್ತೃ ಒಬ್ಬನೇ. ಅವನು 'ಮುದ್ದಣ' ಎಂಬ ನಿರ್ಧಾರ. ಎರಡು – ಪಂಡಿತರು ಜಿಜ್ಞಾಸೆ ಮಾಡುವ ಇದೇ ಒಂದು ಸಮಸ್ಯೆ. ಆದರೆ ಈ ಎರಡನೆಯದು ಈ ವೇಳೆಗಂತೂ ಪರಿಹಾರವಾಗಿದೆ.

ಮುದ್ದಣನ ಸಮೀಪವರ್ತಿಗಳು ನೀಡಿರುವ ಹೇಳಿಕೆಗಳಿಂದ ಲಕ್ಷ್ಮೀನಾರಾಯಣಯ್ಯ ನಂ. ಲಕ್ಷ್ಮೀನಾರಾಯಣ ನಂ. ಲಕ್ಷ್ಮೀನಾರಾಯಣಪ್ಪ, ಮತ್ತು ಮುದ್ದಣ (ಅಥವಾ ಮುತ್ತಣ್ಣ) ಎಂಬ ನಾಲ್ಕೈದು ಬಗೆಗಳಿಗೂ ಪ್ರಾಮಾಣಿಕವಾಗಿ ಒಬ್ಬನೇ ಆಗಿದ್ದ ಕವಿ – ಎಂದು ನಿರ್ಣಯಿಸಲಾಗಿದೆ. ಅಲ್ಲದೆ ಇದರಿಂದ ಈತನು ತನ್ನ ಯುಕ್ತಕವಾದ ಭಯದಿಂದಾಗಿ 'ಅಜ್ಞಾತ ಕವಿ'ಯಾಗಿ ಉಳಿಯುವ ಪ್ರಯತ್ನವನ್ನು ಆಗಿನ ಪ್ರಕಟಣಾ ಸಂದರ್ಭದಲ್ಲಿ ಸಾಧಿಸಿದ್ದಾನೆ. ಬಹುಶಃ ಆಗಿನ ಕಾಲದಲ್ಲಿ ಕನ್ನಡ ಕೃತಿಗಳನ್ನು ಪ್ರಕಟಿಸುವ ಸಂಸ್ಥೆಗಳು ಕಡಿಮೆಯಾಗಿದ್ದು ಪ್ರಸಿದ್ಧ ವ್ಯಕ್ತಿ ಅಥವಾ ಹೊಗಳಿಕೆಯ ಪತ್ರಗಳಿಲ್ಲದೆ ಪ್ರಯತ್ನಿಸುತ್ತಿದ್ದಿರಲಾರವು. ಅದರಲ್ಲೂ ಮೈಸೂರಿನ ಅರಮನೆಯ ಪ್ರಕಟನಾ ಭಾಗವು ಗಮನಿಸುವುದೋ ಇಲ್ಲವೋ ಎಂಬ ಅನುಮಾನದಿಂದಲೇ ಮುದ್ದಣನು ತನ್ನ ಕೃತಿಗಳನ್ನು ಒಂದೊಂದಾಗಿ (ಅಲ್ಲಿಗೆ) ಕಳುಹಿಸಿದರೂ ಅಳುಕಿದುದು ಮಾತ್ರ ಸತ್ಯವಾಗಿದೆ. ಪ್ರಕಾಶಕರೊಡನೆ ವ್ಯವಹಾರ ಮಾಡಿದ್ದರೂ ಈತನು ನಾಚಿಕೆಯಿಂದಲೆಂಬಂತೆ ತನ್ನನ್ನು ಸಾರಿಕೊಳ್ಳುವ ಪ್ರಯತ್ನ ಮಾಡುವುದಿಲ್ಲ. ಈ ಒಂದು ಪಾಂಡಿತ್ಯದ ವಿಪರ್ಯಾಸವನ್ನು ಬಿಟ್ಟುಕೊಟ್ಟು ಮುದ್ದಣನೇ ಈ ಆರೇಳು ಕೃತಿಗಳ ಕರ್ತೃವೆಂದು ನಿರ್ಧರಿಸಬೇಕಾಯಿತು. ಇದು ಒಂದು ಚರ್ಚೆಯೇ ಆಗಿ ಇದರಲ್ಲಿ ದಿ. ಗೋವಿಂದ ಪೈ, ಪಂಜೆ ಮಂಗೇಶರಾಯರು, ಮಳಲಿ ಸುಬ್ಬರಾಯರು, ಬೆನಗಲ್ ರಾಮರಾಯರು ಮೊದಲಾಗಿ ಭಾಗವಹಿಸಿದ್ದಾರೆ. 'ಮುದ್ದಣ' ಗ್ರಂಥದಿಂದ ಈ ವಿಚಾರವು ಖಚಿತವಾಗುತ್ತದೆ.

೧) ರತ್ನಾವತೀ ಕಲ್ಯಾಣ ಕ್ರಿ. ಶ. ೧೮೯೦ (ಸುಮಾರಿಗೆ) ಕವಿಯ ಹೆಸರು ಹೇಳಿಲ್ಲ, ಆದರೆ

ವಿದುಧರನ ಸದ್ಭಕ್ತ ವಿದ್ಯಾ । ನಿಧಿಗಳೆನಿಸುವ ಸುಬ್ಬರಾಯರ ।
ಪದಸಹಾಯದಿ ಬರೆದೆ ಗುರುವೆಂ । ಬುದನು ಬಗೆದೂ ॥ ಎಂದಿದೆ.

೨) ಕುಮಾರ ವಿಜಯ ಕ್ರಿ. ಶ. ೧೮೯೨ ಕವಿಯ ಹೆಸರು ಹೇಳಿಲ್ಲ. ಆದರೆ

ಸರ್ಪಭೂಷನ ಭಕ್ತಕವಿತಾ । ದರ್ಪಣಾಬ್ಧಿ ಗಭೀರ ಗುರುವೆನಿ ।
ಸಿರ್ಪ ಮಳಲೀ ಸುಬ್ಬರಾಯರಿಗರ್ಪಿಸುವೆನಿದನು ॥ – ಎಂದಿದೆ.

೩) ಅದ್ಭುತ ರಾಮಾಯಣಂ ಕ್ರಿ. ಶ. ೧೮೯೪ (ಪ್ರಕಟಣೆ ೧೮೯೬ರಲ್ಲಿ) ನಂ. ಲಕ್ಷ್ಮೀನಾರಾಯಣ ಕವಿ.

೪) ಶ್ರೀರಾಮ ಪಟ್ಟಾಭಿಷೇಕಂ ಕ್ರಿ. ಶ. ೧೮೯೭ – ಮಹಾಲಕ್ಷ್ಮೀ ವಿರಚಿತಂ.

೫) ಶ್ರೀ ರಾಮಾಶ್ವಮೇಧಂ ಕ್ರಿ. ಶ. ೧೯೦೦ – ಮುದ್ದಣ.

೬) ಜೋಜೋ ('ಸುವಾಸಿನಿ'ಯಲ್ಲಿ) ಕ್ರಿ. ಶ. ೧೯೦೦ – 'ಚಕ್ರಧಾರಿ'

೭) ಗೋದಾವರಿ (ಅಪ್ರಕಟಿತ ಮತ್ತು ಸುವಾಸಿನಿ ಪತ್ರಿಕೆಯ ಸಂಪಾದಕರಿಗೆ ಮಾತು ಕೊಟ್ಟದ್ದ ವಿಚಾರವು ಆತನು ಮಡಿದ ಸಂದರ್ಭದಲ್ಲಿ ಪ್ರಕಟವಾಗಿದೆ)

ಮುದ್ದಣನು ತನ್ನ ಹೆಸರನ್ನು ಮರೆಮಾಚಿಕೊಂಡುದು ಆತನ ಸ್ವಭಾವಕ್ಕೆ ಸೇರುತ್ತದೆ. ಆದರೆ ಈ ಕೃತಿಗಳು, ಅದರಲ್ಲೂ 'ಶ್ರೀರಾಮಾಶ್ವಮೇಧಂ' ಕಾವ್ಯವು ಬಹು ಬೇಗನೆ ಪಂಡಿತರ ಮನ ಸೆಳೆದುದಲ್ಲದೆ, ಚರ್ಚಾಸ್ಪದವಾಗಿ ಕವಿಯನ್ನು ಹೆಸರುವಾಸಿಯನ್ನಾಗಿ ಮಾಡಿದಂತೆ ಕಂಡುಬರುತ್ತದೆ. ಅಂತಹ ಪ್ರಸಿದ್ಧಿಯನ್ನು ಕೂಡ ಕಾಣಲು ಕವಿಯು ಜೀವಂತನಾಗಿರಲಿಲ್ಲ. ಸುಮಾರು ೧೯೪೩ರ ವರೆಗೂ ಕವಿಯ ನಿಜವಾದ ಹೆಸರು ಒಂದು ಸಮಸ್ಯೆಯಾಗಿದ್ದಂತೆ ಕಂಡು ಬರುವುದಲ್ಲದೆ ಶ್ರೀ ತ. ಸು. ಶಾಮರಾಯರು ಬರೆದ 'ಮುದ್ದಣ' ಎಂಬ ಸಣ್ಣ ಕೃತಿಯು ಅದನ್ನು ಪರಿಹರಿಸುತ್ತದೆ. ಅಲ್ಲದೆ ಈ ಕೃತಿಯಲ್ಲಿ ಮುದ್ದಣನ ಕೃತಿಗಳ ಪರಿಶೀಲನೆಯ ಎರಡನೆಯ ಹಂತವು ಕಂಡು ಬರುತ್ತದೆ. ಇತ್ತೀಚೆಗೆ ೧೯೭೮ರಲ್ಲಿ ಐ. ಬಿ. ಎಚ್. ಪ್ರಕಾಶನದ ಕವಿ ಕಾವ್ಯ ಪರಂಪರೆಯಲ್ಲಿ 'ಮುದ್ದಣ' ಎಂಬ ಕೃತಿಯು ಇನ್ನೂ ಹೆಚ್ಚಿನ ವಿವರಗಳ ಆಧಾರದಿಂದ ಪರಿಶೀಲನೆಯನ್ನು ನೀಡುತ್ತದೆ. ಇದನ್ನು ಈತನ ಶತಮಾನ ಜನ್ಮದಿನಕ್ಕೆ ಹೊಂದಿಸಿದ ಪ್ರಯತ್ನವೆಂದು ಬೇಕಾದರೆ ಕರೆಯಬಹುದು. ಅಂತೂ ಈ ಕವಿ ಇಂದಿಗೂ ಹೊಸಗನ್ನಡ ಸಾಹಿತ್ಯದ ನವೋದಯ ವಿಚಾರಕ್ಕೆ ಅವಶ್ಯ ಗುರುತಾಗಿರುತ್ತಾನೆ.

## ಜೀವನ ವೃತ್ತಾಂತ

'ಮುದ್ದಣ' ಎಂಬುದು ಕಾವ್ಯನಾಮವಾದರೆ ಕವಿಯ ಹುಟ್ಟು ಹೆಸರು ನಂದಳಿಕೆ ಲಕ್ಷ್ಮೀನಾರಾಯಣಯ್ಯ, ಎಂದು. ಇವನು ನಂದಳಿಕೆಯಲ್ಲಿ ಕ್ರಿ. ಶ. ೧೮೭೦ರಲ್ಲಿ ಹುಟ್ಟಿದನು. ಈ ಊರು ಉಡುಪಿ (ದ. ಕ.) ಯ ಬಳಿಯಲ್ಲಿದೆ. ತಂದೆ ಪಾತಾಳಿ ತಿಮ್ಮಪ್ಪಯ್ಯ; ತಾಯಿ ಮಹಾಲಕ್ಷ್ಮಮ್ಮ. ಸ್ಮಾರ್ತ ಬ್ರಾಹ್ಮಣ ವಂಶದಲ್ಲಿ ಹುಟ್ಟಿದವನು. ಮನೆಯಲ್ಲಿ ಈತನನ್ನು 'ಮುತ್ತಣ್ಣ' ಎಂದು ಕೂಗುತ್ತಿದ್ದರಂತೆ. ಅದನ್ನೇ ಈತನು ತನ್ನ 'ಶ್ರೀ ರಾಮಾಶ್ವಮೇಧಂ' ಎಂಬ ಕಾವ್ಯದಲ್ಲಿ ಮಾತ್ರ 'ಮುದ್ದಣ' ಎಂದೂ 'ಕಬ್ಬಗರ ಬಲ್ಲಹಂ' ಎಂದೂ ಹೇಳಿಕೊಂಡಿದ್ದಾನೆ.

ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದ ನಾರಣಪ್ಪ (ಹೀಗೆ ಪರಿಚಿತರು ಕರೆಯುತ್ತಿದ್ದರಂತೆ) ನಿಗೆ ವಿದ್ಯಾಭ್ಯಾಸವು ಹೆಚ್ಚು ಸಾಗಲಿಲ್ಲ. ಪ್ರಾಥಮಿಕ

ವಿದ್ಯಾಭ್ಯಾಸವಾದ ಮೇಲೆ ಉಡುಪಿಯಲ್ಲಿ ಇಂಗ್ಲಿಷ್ ಕಲಿಯಲು ಹೋಗಿ ಬಿಟ್ಟುಬಿಡಬೇಕಾಯಿತು. ಆದುದರಿಂದ ಟ್ರೈನಿಂಗ್ ಸ್ಕೂಲಿಗೆ ಸೇರಿದಾಗ ಅಲ್ಲಿಯ ಹೆಡ್‌ಮಾಸ್ತರು ಈತನನ್ನು ದೈಹಿಕ ವ್ಯಾಯಾಮದ ಶಿಕ್ಷಣಕ್ಕೆ ಕಳುಹಿಸಿದರು. ಆದುದರಿಂದ ಈತನು ಶಾಲೆಗಳಿಗೆ ವ್ಯಾಯಾಮ ಶಿಕ್ಷಕನಾಗಲು ಅರ್ಹತೆ ಪಡೆದನು.

ಈತನ ಹದಿನೆಂಟು ವಯಸ್ಸಿನ ವೇಳೆಗೆ ಟ್ರೈನಿಂಗ್ ಸ್ಕೂಲಿನ ಪರೀಕ್ಷೆಯೂ ಪಾಸಾದುದರಿಂದ ಹೊಟ್ಟೆಯಪಾಡಿಗಾಗಿ ಉಡುಪಿಯ ಹೈಸ್ಕೂಲಿನಲ್ಲಿ ಕಸರತ್ ಕಲಿಸುವ ಉಪಾಧ್ಯಾಯನ ಕೆಲಸ ದೊರಕಿತು. ಅದು ಹೈಸ್ಕೂಲಾದುದರಿಂದ ಆಗಾಗ್ಗೆ ಕನ್ನಡ ಕಲಿಸುವ ಅಭ್ಯಾಸವೂ ಆಗಿದ್ದಿರಬೇಕು. ಸಂಬಳ ಮಾತ್ರ ತಿಂಗಳಿಗೆ ಹತ್ತು ರೂಪಾಯಿಗಳು.

ದೃಢಕಾಯನಾದ ಮುದ್ದಣನಿಗೆ ಇಪ್ಪತ್ತು ವಯಸ್ಸಾದಾಗ ಇವನ ವಿದ್ಯಾದಾಹವನ್ನು ಪೂರಯಿಸಬಲ್ಲ ಗುರುಗಳೊಬ್ಬರು ಗೆಳೆಯರಂತೆ ದೊರಕಿದರು; ಇವರೇ ಮಳಲಿ ಸುಬ್ಬರಾಯರು. ಸಂಸ್ಕೃತದಲ್ಲಿ ಪಾಂಡಿತ್ಯವಿದ್ದು ಮುದ್ದಣನ ಸಹೋದ್ಯೋಗಿಯೂ ಆಗಿದ್ದಂತೆ ತೋರುತ್ತದೆ. ಅಲ್ಲದೆ ಇವರು ಕೆಲವು ಯಕ್ಷಗಾನಗಳನ್ನು ರಚಿಸಿ ಮರಾಠಿಯಿಂದ ನಾಟಕಗಳನ್ನು ಅನುವಾದ ಮಾಡುತ್ತಿದ್ದವರೂ ಆಗಿದ್ದರು. ಇಂಥವರ ನೆರವಿನಿಂದ ಮುದ್ದಣನು ಎರಡು ಯಕ್ಷಗಾನ ಕೃತಿಗಳನ್ನು ಬರೆದಿದ್ದಾನೆ. ಈ ಕೃತಿಗಳನ್ನು ಮುಗಿಸುವಲ್ಲಿ ಅವನು ಗುರುಸ್ಮರಣೆ ಮಾಡಿದ್ದಾನೆ. ಪಂಡಿತರಿಂದ ಮೆಚ್ಚಿಕೆಯನ್ನು ಪಡೆದ ತನ್ನ 'ಕುಮಾರ ವಿಜಯ'ವನ್ನು ಈ ಗುರುವಿಗೆ ಅರ್ಪಿಸಿಯೂ ಇದ್ದಾನೆ. ಇವುಗಳ ಪ್ರಕಟಣೆಯನ್ನು ಮಾಡಿದರೂ ಪ್ರಯೋಜನವೇನೂ ಆದಂತಿಲ್ಲ.

ಮಳಲಿ ಸುಬ್ಬರಾಯರಿಗೆ ಕುಂದಾಪುರಕ್ಕೆ ವರ್ಗವಾದ ಕಾರಣ 'ಮುದ್ದಣ'ನೂ ಪ್ರಯತ್ನಪೂರ್ವಕವಾಗಿ ಅವರ ಬಳಿಗೆ ವರ್ಗ ಮಾಡಿಸಿಕೊಂಡನು. ಅವರ ನೆರವಿನಿಂದ 'ಅದ್ಭುತ ರಾಮಾಯಣಂ' ಎಂಬ ಗದ್ಯ ಗ್ರಂಥವನ್ನು ರಚಿಸಿದನು. ಸಂಸ್ಕೃತ ಮೂಲದ ಅರ್ಥವನ್ನು ಅವರು ವಿವರಿಸುತ್ತಾ ಹೋದಂತೆ ಮುದ್ದಣನು ಕನ್ನಡದಲ್ಲಿ ಅನುವಾದಿಸುತ್ತಾ ಮುಂದುವರಿದಂತೆ ತೋರುತ್ತದೆ. ಅಲ್ಲದೆ ಈ ವೇಳೆಗೆ ಅವನ ಮದುವೆಯೂ ಆಗಿರಬೇಕು. ಆದುದರಿಂದ ಈ ಕೃತಿಯಲ್ಲಿನ 'ಶ್ರೀಮತಿ ಪರಿಣಯ'ದ ಭಾಗವು ಈತನ ಅನುಭವದ ಬಿಸಿಯಿಂದ ರೂಪತಾಳಿದಂತೆ ತೋರುತ್ತದೆ. ಇಂಥ ರಚನೆಗೆ ತಕ್ಕ ಹಳಗನ್ನಡದ ಅಭ್ಯಾಸವೂ ಆಂಗ್ಲ ಭಾಷೆಯ ಅರಿವಿನಿಂದ ವಿರಾಮ ಚಿಹ್ನೆಗಳ ಅರಿವೂ ಈತನಿಗೆ ಚೆನ್ನಾಗಿರಬೇಕು. ಆದುದರಿಂದ ಈತನ ಗದ್ಯದಲ್ಲಿ ಅರ್ಧವಿರಾಮ ಪೂರ್ಣ ವಿರಾಮಗಳೂ ಜೊತೆಗೆ ಮಾತುಗಳನ್ನು ಗುರುತಿಸುವ ತಲಕೆಳಕು ವಿರಾಮಗಳೂ ಸರಿಯಾಗಿ ಬಳಕೆಯಾಗಿರುವುದನ್ನು ಕಾಣುತ್ತೇವೆ. ಈ ತಿಳಿವಳಿಕೆಯಿಲ್ಲದಿದ್ದರೆ ಸಂಸ್ಕೃತದ ಕರ್ಮಣೀ ಪ್ರಯೋಗಗಳು ಕನ್ನಡ ಗದ್ಯಕ್ಕೆ ಹೇರಳವಾಗಿ ಸೇರಬೇಕಾಗುತ್ತಿತ್ತು. ಈತನ ಗೆಳೆಯರೂ ಗುರುಗಳೂ

ವಿಶದಪಡಿಸಿರುವಂತೆ ಈ ವೇಳೆಗೆ ಷಡಕ್ಷರ ಕವಿಯ 'ರಾಜಶೇಖರ ವಿಳಾಸಂ' ಅಭ್ಯಾಸವೂ 'ಶಬ್ದಮಣಿ ದರ್ಪಣಂ' ಮತ್ತು ಕಿಟ್ಟಲ್ ಕೋಶಗಳ ಅರಿವೂ ಈತನಿಗೆ ಚೆನ್ನಾಗಿ ಆಗಿದ್ದಿರಬೇಕು. ಎಲ್ಲಕ್ಕಿಂತ ಮೊದಲು ಲಕ್ಷ್ಮೀಶ ಮತ್ತು ಕುಮಾರವ್ಯಾಸರ ಕೃತಿಗಳ ಪರಿಚಯವಾಗಿದ್ದು ಅದರ ಗುರುತಾಗಿ 'ಶ್ರೀರಾಮ ಪಟ್ಟಾಭಿಷೇಕಂ' ಎಂಬ ವಾರ್ಧಕ ಷಟ್ಪದಿಯ ಕೃತಿಯು ಜನ್ಮ ತಾಳಿದಂತಿದೆ. ಇಂಥ ಪ್ರಯತ್ನಗಳಿಂದ ಅಂದರೆ 'ಅದ್ಭುತ ರಾಮಾಯಣಂ' (ಗದ್ಯ) ಮತ್ತು 'ಶ್ರೀರಾಮ ಪಟ್ಟಾಭಿಷೇಕಂ' (ಪದ್ಯ) ರಚನೆಗಳಿಂದ ಗದ್ಯಪದ್ಯಗಳ ತಾರತಮ್ಯವನ್ನು ಈತನೇ ಅರಿತುಕೊಂಡು ಒಂದು ನಿರ್ಧಾರಕ್ಕೆ ಬರಲು ಸದವಕಾಶವಾಯಿತು. ಅಂತೂ ಆತನು ಗದ್ಯದ ಸರಳತೆಗೆ ಮನಸೋತು 'ಪದ್ಯಂ ಹೃದ್ಯಂ ಗದ್ಯಂ ವಧ್ಯಂ' ಎಂಬ ನಾಣ್ನುಡಿಯನ್ನು ತಿರುವುಮುರುವು ಮಾಡಿಕೊಂಡು ಪ್ರಯತ್ನಶೀಲನಾದನು. ಒಟ್ಟಿನಲ್ಲಿ 'ಅದ್ಭುತ ರಾಮಾಯಣಂ' ೧೮೯೫ಳರಲ್ಲಿ ಮುಗಿದು ಅದನ್ನು ಅರಮನೆಯ ಪ್ರಕಟನಾಲಯಕ್ಕೆ ರವಾನಿಸಿದುದೂ ಆಯಿತು.

'ಶ್ರೀರಾಮ ಪಟ್ಟಾಭಿಷೇಕಂ' ಕಾವ್ಯವನ್ನು ಮುದ್ದಣನು ಸ್ವತಂತ್ರವಾಗಿ ರಚಿಸಿರಬೇಕು. ಈ ಸಂದರ್ಭದಲ್ಲಿ ಪತ್ನಿಯಾದ ಕಮಲಾಬಾಯಿಯೊಡನೆ ಸುಂದರ ಬದುಕಿನ ಅನುಭವವೂ ಆಗಿದ್ದಿರಬೇಕು. ಈಕೆ ಶಿವಮೊಗ್ಗೆಯವಳು. ಹೀಗೆ ಕುಂದಾಪುರದಲ್ಲಿದ್ದಾಗಲೇ ಬಾಳಿನ ಸಹಜ ಅನುಭವಗಳು 'ಶ್ರೀರಾಮಾಶ್ವಮೇಧಂ' ಎಂಬ ಕಾವ್ಯ ರಚನೆಗೆ ಅವಕಾಶವಾಗಿದ್ದಿರಬೇಕು. ಇದನ್ನು ಕ್ರಿ. ಶ. ೧೮೯೮ ಎಂದು ಗುರುತಿಸುವುದಾದರೆ ಈತನಿಗೂ ತಂದೆಯಾಗುವ ಸೂಚನೆಗಳು ಕಂಡುಬಂದಿರಬೇಕು. ಆದುದರಿಂದ ಸಾಂಪ್ರದಾಯಿಕವಾಗಿ ಃ ತ್ನಿಯನ್ನು ತೌರಿಗೆ ಕಳುಹಿಸಿದುದಲ್ಲದೆ ಮತ್ತೆ ಉಡುಪಿಗೇ ಬಂದಂತೆ ತೋರುತ್ತದೆ. ಅಲ್ಲಿಯೇ ಕ್ಷಯರೋಗವು ಈತನನ್ನು ಮುಗಿಸಿರಬಹುದು. ಆದರೂ ಸುವಾಸಿನಿಗೆ 'ಜೋಜೋ' ಎಂಬ ಲೇಖನವನ್ನು ಕೊಟ್ಟು, 'ಗೋದಾವರಿ'ಯನ್ನು ಬರೆಯುವ ಸಿದ್ಧತೆಗಳನ್ನೂ ಮಾಡಿಕೊಂಡಿರುವುದಾಗಿ ಅದರ ಸಂಪಾದಕರಿಗೆ ಪತ್ರ ಬರೆದ ವಿಚಾರ ಬರುತ್ತದೆ.

ಕ್ರಿ. ಶ. ೧೯೦೧ರ ಫೆಬ್ರವರಿ ೧೬ರಂದು ಮುದ್ದಣನು 'ರಾಧಾಕೃಷ್ಣಯ್ಯ'ನೆಂಬ ಮಗನನ್ನೂ ಕಮಲಾಬಾಯಿ (ವಿಧವೆ) ಯನ್ನೂ ಬಿಟ್ಟು ತನ್ನ ಸೋದರಿಯ ಮನೆಯಲ್ಲಿ ಜೀವ ಬಿಟ್ಟಿರುವಂತೆ ತಿಳಿದುಬರುತ್ತದೆ. ಈತನ ಪತ್ನಿಯು ಕ್ರಿ. ಶ. ೧೯೫೧ರ ವರೆಗೂ ಬದುಕಿದ್ದು ಕವಿಯ ವಂಶ ಪರಂಪರೆಯು ಬೆಳೆಯುತ್ತಿದೆಯಷ್ಟೆ

## ಕೃತಿ ಪರಿಶೀಲನೆ

ಮುದ್ದಣನು ಮೊದಲು ಯಕ್ಷಗಾನದ ಕರ್ತೃ ಮತ್ತು ಕವಿ. ಮೊದಲ ಸಾಮರ್ಥ್ಯಕ್ಕೆ ಭಾಗವತನಂತೆ ಮನೋಧರ್ಮವಿರಬೇಕು. ಇಲ್ಲದಿದ್ದರೆ ಬಯಲಾಟದ ಸೂಕ್ಷ್ಮಗಳ ಅರಿವಿರುವುದಿಲ್ಲ. ಮುದ್ದಣನು ಒಳ್ಳೆಯ ಕಂಠದವನಾಗಿದ್ದಿರಲಾರ. ಆದರೂ ಕುಂದಾಪುರದಲ್ಲಿದ್ದಾಗ (?) ಪಿಟೀಲನ್ನು ಅಭ್ಯಾಸ ಮಾಡುತ್ತಿದ್ದಂತೆ

ತಿಳಿದು ಬರುತ್ತದೆ. ಈತನು ಮೊದಲಿಗೆ ಯಕ್ಷಗಾನ ಬಯಲಾಟದಲ್ಲಿ ಭಾಗವತನೂ, ವೇಷಧಾರಿಯೂ, ಹಾಸ್ಯಗಾರನೂ ಆಗಿದ್ದನೆಂಬ ಪ್ರತೀತಿಯನ್ನು ನಂಬಲು ಸಾಧ್ಯವಿದೆ. ಏಕೆಂದರೆ ಇಂಥ ಮನೋಧರ್ಮಕ್ಕೆ ಉದಾಹರಣೆಗಳನ್ನು ಅವನ ಕೃತಿಗಳಲ್ಲಿಯೇ ಕಾಣಬಹುದು. ಅದರಲ್ಲೂ 'ಶ್ರೀರಾಮಾಶ್ವಮೇಧ'ದ ಪೀಠಿಕೆಯ ಹಾಸ್ಯವು ಪ್ರಾದೇಶಿಕ ಮತ್ತು ಯಕ್ಷಗಾನ ಬಯಲಾಟಕ್ಕೆ ಅನುಗುಣವಾದ ಹಾಸ್ಯಗಾರನ ರೀತಿಯದೂ ಆಗಿ ಮುದ್ದಣನ ಸಾಹಿತ್ಯಿಕ ಉದ್ದಿಶ್ಯವನ್ನೂ ಒಳಗೊಂಡಿದೆ. ಹೀಗೆ ಈತನು ಪ್ರಾದೇಶಿಕವಾದ ಬಯಲಾಟದ ಅನುಭವವನ್ನು ಬಳಸಿಕೊಳ್ಳುವ ಸಾಮರ್ಥ್ಯವುಳ್ಳವನು. ಇದಕ್ಕಾಗಿ ಆತನು ಬಯಲಾಟದಲ್ಲಿ ಭಾಗವಹಿಸಬೇಕಾದುದಿಲ್ಲ ಎಂದರೂ ಒಪ್ಪಬಹುದು.

ಶ್ರೀ ರಾಮಚಂದ್ರ ಉಚ್ಚಿಲ್ ಅವರು ಹೇಳುವಂತೆ 'ಮುದ್ದಣ ಭಾಗವತನೆಂದೇ ಅವನ ಹಾಡುಗಳು ಸಹಜ ಸುಂದರವಾಗಿ ಮೂಡಿ ಬಂದಿವೆ' ಎನ್ನಬಹುದು. ಅವರು ಕೊಡುವ ಉದಾಹರಣೆ 'ಕುಮಾರ ವಿಜಯ'ದ ಒಂದು ಶೋಭಾನೆ ಪದ ರಚನೆಯಲ್ಲಿ ಸಹಜವಾದ ಕವಿ ಮನೋಧರ್ಮದ ಸುಂದರ ಸಾಂಪ್ರದಾಯಿಕ ಪದಗಳಿವೆ. ಹಾಡುವುದಕ್ಕೂ ಅನುಕೂಲವಾಗಿದೆ. ಮುದ್ದಣನಿಗೆ ಬಯಲಾಟದಲ್ಲಿ ಭಾಗವಹಿಸಲು ಏನಾದರೂ ಕೊರತೆಯಿದ್ದಿರಬಹುದು. ಅದೆಂದರೆ ಕಂಠ ಮಾಧುರ್ಯವಿಲ್ಲದಿರುವುದು ಎಂದು ಊಹಿಸಬೇಕಾಗುತ್ತದೆ. ಕಲ್ಪನಾ ಸಾಮರ್ಥ್ಯವಿದ್ದವನೆಂಬುದನ್ನು 'ರತ್ನಾವತೀ ಕಲ್ಯಾಣ'ದಲ್ಲಿಯೇ ಕಾಣಬಹುದು. ಶ್ರೀರಾಮಚಂದ್ರ ಉಚ್ಚಿಲ್‌ರು ಈ ಕಥೆಗೆ ಹರ್ಷನ 'ಪ್ರಿಯದರ್ಶಿಕಾ' ಆಧಾರವಿದೆಯೆಂದು ಹೇಳಿದ್ದಾರೆ. ಆದರೆ ಬೇರೆಯ ಆಧಾರಗಳಿಲ್ಲ. ಮಳಲಿ ಸುಬ್ಬರಾಯರು ಇದನ್ನು ಸ್ಪಷ್ಟಪಡಿಸಿದ್ದರೆ ಚೆನ್ನಾಗಿರುತ್ತಿತ್ತು. ಒಟ್ಟಿನಲ್ಲಿ ರತ್ನಾವತೀ ಕಲ್ಯಾಣವನ್ನು ಮುದ್ದಣನು ತನ್ನ ಸಂಸ್ಕೃತ ಜ್ಞಾನದಿಂದ ಮತ್ತು ಯಕ್ಷಗಾನ ಬಯಲಾಟದ ಅನುಕರಣೆಯಿಂದ ರಚಿಸಿದನೆನ್ನಬಹುದು. ಗುರುಗಳಾದ ಮಳಲಿ ಸುಬ್ಬರಾಯರ ನೆರವನ್ನು ಪಡೆದು 'ಪದ'ಗಳನ್ನು ತಿದ್ದಿರುವುದೂ ಸರಿಯೆ. ನಂತರ ಅವನು ಯಕ್ಷಗಾನದ ಪ್ರಸಿದ್ಧ ಕೃತಿಗಳನ್ನು ಅಭ್ಯಾಸ ಮಾಡಿಕೊಂಡು 'ಕುಮಾರ ವಿಜಯ'ವನ್ನು ರಚಿಸಿದ್ದಿರಬೇಕು. ಇಲ್ಲಿಯೂ ಗುರು ಸ್ಮರಣೆಯಿದ್ದು ಅವರಿಗೆ ಅರ್ಪಿತವಾಗಿದೆ.

ಆದರೂ ಮುದ್ದಣನು ಯಕ್ಷಗಾನ ಬಯಲಾಟಕ್ಕೇ ಮೀಸಲಾಗದೆ ಅದನ್ನು ಬಿಟ್ಟುಕೊಟ್ಟುದೇಕೆಂದು ಕೇಳಬೇಕಾಗುತ್ತದೆ. ಯಾವ ವಿಮರ್ಶಕರೂ ಇದನ್ನು ಸರಿಯಾಗಿ ವಿಚಾರ ಮಾಡಿದಂತಿಲ್ಲ. ಬಹುಶಃ ಆತನು ರಚಿಸಿದ 'ರತ್ನಾವತೀ ಕಲ್ಯಾಣ'ವು ಜನಪ್ರಿಯ ಬಯಲಾಟವಾಗದೇ ಹೋದುದೂ 'ಕುಮಾರ ವಿಜಯ'ವು ಪ್ರಯೋಗವಾಗದೇ ಹೋದುದೂ ಮುಖ್ಯ ಕಾರಣವಿರಬೇಕು. ತಾನೇ ಪ್ರಕಟಿಸಿದ ಕಾರಣ ಕೈ ಕಚ್ಚಿಸಿಕೊಂಡು ಅದನ್ನು ಬಿಟ್ಟುಕೊಟ್ಟನೆಂದು ಶ್ರೀ ತ. ಸು. ಶಾಮರಾಯರು ತಿಳಿಸುತ್ತಾರೆ. ಅದಕ್ಕೂ ಹೆಚ್ಚಿನ ಕಾರಣವಿದ್ದಿರಬೇಕಾಗುತ್ತದೆ. ಮುದ್ದಣನು ತನ್ನ ಕೀರ್ತಿ (ಕುದುರೆ)ಯ ಬೆನ್ನೇರಿದವನೆಂಬುದನ್ನು 'ರಾಮಾಶ್ವಮೇಧ' ಕೃತಿಯಲ್ಲಿಯೂ

ಕಾಣುತ್ತೇವೆ. ಜೊತೆಗೆ ಸ್ವವಿಮರ್ಶೆಯಿಂದ ಮೂಡಿದ್ದ ಅಭಿಮಾನವು ಅವನ ಪ್ರೇರಕ ಶಕ್ತಿಯಾಗಿದ್ದಿತೆಂದು ತೋರುತ್ತದೆ.

'ಕುಮಾರ ವಿಜಯ'ವನ್ನು ಪಂಜೆಯವರು ಮೊದಲಾಗಿ ಹೊಗಳಿದ್ದಾರೆನ್ನುವಾಗ ಅದು ವಾಸ್ತವವಾಗಿ ಪ್ರಯೋಗದ ಆಧಾರದಿಂದ ಆಗಿರಲಿಲ್ಲ; ಬರಿಯ ಓದಿಕೊಳ್ಳುವುದರಿಂದ ಮಾತ್ರ. ತಾಳಮದ್ದಳೆಯಲ್ಲಾದರೂ ಅದು 'ಕಳಿತ'ಲ್ಲದೇ ಪ್ರಾಯೋಗಿಕವಾಗುತ್ತಿರಲಾರದು. ಅವರ ರಚನಾ ಸೌಂದರ್ಯವು ಬಯಲಾಟದ ಪಟುಗಳಿಗೆ ವಗ್ಗುವುದೋ ಇಲ್ಲವೋ ಎಂಬ ಸಂಶಯವು ಇದ್ದ ಕಾರಣದಿಂದಲೇ ಅದರ ಪ್ರಯೋಗವಾದಂತೆ ಕಂಡು ಬರುವುದಿಲ್ಲ.

ವಾಸ್ತವವಾಗಿ ಯಕ್ಷಗಾನದ ನಿಜವಾದ ಪರೀಕ್ಷೆಯು 'ಬಯಲಾಟ'ದಲ್ಲಿ ಆಗುತ್ತದೆ. ಅಂತಹ ಅನುಕೂಲವಿಲ್ಲದಿದ್ದಾಗ ಅದರ ಜನಪ್ರಿಯತೆಯು ರೂಪತಾಳುವುದೇ ಇಲ್ಲ. ಇದನ್ನು ಅರಿತ ಮುದ್ದಣ ಯಕ್ಷಗಾನ ರಚನೆಯನ್ನು ಬಿಟ್ಟುಕೊಟ್ಟು ತನ್ನ ಕಲ್ಪನೆಗೆ ಒಗ್ಗುವ ಪ್ರಕಾರಗಳನ್ನು ಹುಡುಕಿಕೊಳ್ಳುತ್ತಾ ಮುಂದುವರಿಯುತ್ತಾನೆ. ಇಷ್ಟಾದರೂ ಒಂದೆರಡು ಬಾರಿ ಪ್ರಯೋಗಗೊಂಡ 'ರತ್ನಾವತೀ ಕಲ್ಯಾಣ'ವು ಇಂದಿಗೂ ಉಳಿದು ಬಂದಿರುವುದಲ್ಲದೆ ಆಗಾಗ್ಗೆ ಪ್ರಯೋಗವೂ ಆಗುತ್ತಿದೆ. ವೀರ ಮತ್ತು ಶೃಂಗಾರ ರಸಗಳಿಗೆ ಇದರಲ್ಲಿ ಒಳ್ಳೆಯ ಅವಕಾಶವೂ ಅದ್ಭುತದ ಆಧಾರವೂ ಇರುತ್ತದೆ. ಇದರ ಕಥೆಯು ಯಕ್ಷಗಾನ ಸಂಪ್ರದಾಯಕ್ಕೆ ಹೊಸದೆಂದೂ ಕೆಲವರು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಆದುದರಿಂದ ಜನರ ಕುತೂಹಲವನ್ನು ಕಾಪಾಡುವ ಶಕ್ತಿಯು ಈ ಕೃತಿಗೆ ಇದೆ. ಇಂತಹ ಅನುಕೂಲವಾದ ಹಿರಿಮೆಯು 'ಕುಮಾರವಿಜಯ'ಕ್ಕೆ ಇರಲಾರದು. ಆದುದರಿಂದ ಅದನ್ನು ಯಕ್ಷಗಾನ ಬಯಲಾಟದ ಸಂಪ್ರದಾಯವು ತಿರಸ್ಕರಿಸಿದೆ.

ಶ್ರೀ ರಾಮಚಂದ್ರ ಉಚ್ಚಿಲ್‌ರು 'ಕುಮಾರವಿಜಯ'ವನ್ನು ಕುರಿತು ದೀರ್ಘವಾದ ವಿಮರ್ಶೆಯನ್ನು ಮಾಡಿದ್ದಾರೆ. 'ಕುಮಾರ ವಿಜಯ'ದಲ್ಲಿ ಹಿಂದೆಲ್ಲಿಯೂ ಕಾಣದ ಕೆಲವು ಅಪೂರ್ವ ಪದ ಪ್ರಯೋಗಗಳಿವೆ. ಮುದ್ದಣ ಪ್ರಯೋಗಶೀಲ. ಮಾಳ್ಕೆ, ಕಾಗೆ, ಬಿರಕಣಿಗಿವಿಯ, ಮೂಗಾಲಬಲ್ಲಿದ, ತಾಮಸ, ಕುಂಬಿಕ್ಕು, ಅಣೆಗೆ, ಗರದಕೂರಸಿ, ಕೌಂತಿಕ, ಪುಷ್ಕಳ, ವಿದ್ರವ, ಕುಡುವಿಲ್ಲ, ರೋಪ, ಲಿಪ್ತ, ಲಪನ, ತುಂದಿಲ, ರಾಕೆ, ಬರೆ, ನೆಲಕಲ, ವೆಂಗಸು, ಕಾಲದಿಶಾಪಟ ಮುಂತಾದುವು ಅವನ ಪ್ರಯೋಗಶೀಲ ಪ್ರವೃತ್ತಿಯನ್ನು ಸೂಚಿಸುತ್ತವೆ. ಇವುಗಳಲ್ಲಿ ಅನೇಕ ಪದಗಳನ್ನು ಹಳಗನ್ನಡ ಕಾವ್ಯಗಳಲ್ಲಿ ಮಾತ್ರ ಕಂಡಿರಬಹುದು. ಆದರೆ ಯಕ್ಷಗಾನದಲ್ಲಿ ಇವು ಅಪೂರ್ವ ಪ್ರಯೋಗಗಳೇ ಸೈ. ಈ ಬಗೆಯ ಪ್ರಯೋಗಶೀಲ ಪ್ರವೃತ್ತಿಯೇ ಮುಂದುವರಿದು ಮುಂದೆ ರಾಮಾಶ್ವಮೇಧದಲ್ಲಿ ವಿಕಸಿಸಿತ್ತು ಎನ್ನುವದೇ ಅವನ ಯಕ್ಷಗಾನ ಕೃತಿಗಳ ಸಾರ್ಥಕ್ಯ ಎಂದಿದ್ದಾರೆ. ಇದರಲ್ಲಿ ನನ್ನ ಅಭಿಪ್ರಾಯದ ಸಮರ್ಥನೆಯೂ ಇದೆ. ಇಂಥ ವಿಶೇಷ ಪ್ರಯೋಗಗಳು ಬಯಲಾಟಕ್ಕೆ ಅನುಕೂಲವಾದುವಲ್ಲವೆಂಬುದನ್ನು ಮರೆಯುವಂತಿಲ್ಲ. ಏಕೆಂದರೆ ಇವುಗಳಿಂದ

ಜಾನಪದ ಸತ್ವಕ್ಕೆ ಆತಂಕವುಂಟಾಗಿ ಪ್ರೇಕ್ಷಕರೂ ಬೇಸರಪಡುತ್ತಾರೆ. ಯಕ್ಷಗಾನ ಬಯಲಾಟದಲ್ಲಂತೂ ಪ್ರೇಕ್ಷಕರಿಗಿಂತ ಮುಂಚಿತವಾಗಿ ನಟರಿಗೆ ಕೃತಿಯ ಭಾಷೆಯು ಮನವರಿಕೆಯಾಗಿರಬೇಕಾಗುತ್ತದೆ ಮತ್ತು ಅದರ ಸಮರ್ಥ ವ್ಯಾಖ್ಯಾನಕ್ಕೆ ಅವಕಾಶವಿರಲೇಬೇಕಾಗುತ್ತದೆ. ಈ ಲಕ್ಷಣವು ಕೊರತೆಯಾದಾಗ ಅಂಥ ಕೃತಿಯು ಜನಪ್ರಿಯವಾಗದೇ ಹಿಂದೆ ಬೀಳುತ್ತದೆ. ಮುದ್ದಣನಿಗೂ ಈ ಕೊರತೆಯ ಅರಿವಾಗಿದ್ದಿರಬೇಕು. ಆದುದರಿಂದಲೇ ಆತನು ಯಕ್ಷಗಾನದ ರಚನೆಯನ್ನು ಕೈಬಿಟ್ಟು ಬೇರೆಯ ಪ್ರಕಾರಕ್ಕೆ ಕೈ ಹಚ್ಚಿದಂತೆ ತೋರುತ್ತದೆ.

## ಶ್ರೀರಾಮ ಪಟ್ಟಾಭಿಷೇಕಂ

ಇದು ಷಟ್ಪದಿ ಕಾವ್ಯ; ವಾರ್ಧಕದಲ್ಲಿದೆ. 'ಪದ್ಯಂ ವದ್ಯಂ...' ಎಂಬ ಪಾಠವನ್ನು ಈ ಕೃತಿಯಿಂದ ತಾನೇ ಕಲಿತಂತೆ ತೋರುತ್ತದೆ. ಅಂದರೆ ನಿಯಮಾನುಸಾರವಾದ ಛಂದೋಗತಿಯಿಂದ ತನ್ನ ಕಾವ್ಯ ಸತ್ವವು ಬೆಳಗಿದಂತೆ ತೋರಿರಲಾರದು. ಆದರೂ ಇಂಥ ಪ್ರಯತ್ನವನ್ನು ಮನಃಪೂರ್ವಕವಾಗಿ ಮಾಡಿದಂತಿದೆ. ಶ್ರೀರಾಮಚಂದ್ರ ಉಚ್ಚಿಲ್ ಇದನ್ನು ಕುರಿತು ರಾಮಪಟ್ಟಾಭಿಷೇಕದಲ್ಲಿ ಪ್ರಾಸಾನುಪ್ರಾಸ, ಯಮಕ, ಛೇಕಾನುಪ್ರಾಸ, ಶ್ಲೇಷ, ಮುಕ್ತಪದ ಪ್ರಾಸಗಳು ಬೇಕಾದಷ್ಟು ಮಾತ್ರವಲ್ಲ, ಸಾಕಾಗುವಷ್ಟು ಇವೆ. ಇಂಥವುಗಳಿಗೆಲ್ಲ ಪೂರ್ವಸತ್ಕವಿಗಳೇ ದಾರಿ ತೋರಿದವರು. ಮೂಲವನ್ನು ಅಳಿಸದೆ, ವೃದ್ಧಿ ಮಾಡಿ ತನ್ನದಾಗಿಸಿಕೊಂಡ ವೈಶಿಷ್ಟ್ಯ ಮಾತ್ರ ಅವನದು. ಈ ಮೂಲದ್ರವ್ಯ ಎಲ್ಲೆಲ್ಲಿಂದ ಬಂದಿವೆಯೆಂದು ನೋಡುವ :

ಪಾರದೆ ಪರಾರ್ಥಮಂ ವರಯತಿಗೆ ಭಂಗಮಂ
ತಾರದೆ ನಿಜಾನ್ವಯ ಕ್ರಿಯೆಗಳ್ಗೆ ದೂಷಣಂ
ಬಾರದೆ ವಿಶೇಷ ಗುಣಗಣ ಕಲಾ ಗೌರವಂ ತೀರದೆ ದುರುತ್ತಿಗಳ್ಗೆ
ಸೇರದೆ ಸುಮಾರ್ಗದೊಳ್ ನಡೆವ ಸತ್ಪುರುಷನ ಗ
ಭೀರದೆಸೆಯಂ ಪೋಲ್ವ ಕಾವ್ಯ ಪ್ರಬಂಧಮಂ...

ಇದು ಲಕ್ಷ್ಮೀಶನ ಕವಿತೆ. ತನ್ನ ಕವಿತೆ ಸತ್ಪುರುಷನ ಗಭೀರದೆಸೆಯನ್ನು ಹೋಲುತ್ತದೆನ್ನುವ ಅವನ ಶ್ಲೇಷದ ಮೂಲ ದ್ರವ್ಯವನ್ನು ಮುದ್ದಣ ಹೇಗೆ ವೃದ್ಧಿ ಮಾಡಿದನೆಂಬುದನ್ನು ನೋಡಿ :

ಮೂಲವಳಿಸದೆ ವೃದ್ಧಿಯನೆ ಮಾಡಿ ಬಹುಪದಾ [ರ್ಥವನು]
ಕೂಲಮಂಗೆಯ್ದು ಋಣಶೇಷಗಳ ಭೇದಿಸುತೆ
ಕಾಲಕರ್ಮಗಳ ಬಿಡದನುಸರಿಸಿ ನಿತ್ಯಕರ್ತೃ ಕ್ರಿಯೆ ವಿಭಕ್ತಿಗಳೊಳು
ಮೇಲೆನಿಸಿ ಸತ್ಕೃತಿಯೆಸಗೆ ಮಾನ್ಯನಹನಂತೆ
ವೋಲೆಸೆಯೆ ಮೃದುವಚನಚಯದಿಂದೆ ಸಂತತಂ
ಮೇಲದರೊಳೇಕವಚನ ಕ್ರಮವಪಿಡಿದಿರಲ್ಕವನ ಮತಿ ವಿಸ್ತರಿಪುದು.

ಮುದ್ದಣನಿಗೆ ವ್ಯಾಪಾರಿಯೂ ಸತ್ಪುರುಷನೂ ಸಮಾನರೆಂದು ಕಂಡಿದ್ದಾರೆ. ಅತ ಮೂಲವನ್ನು ಇತರರಿಂದ ಪಡೆದು ಅವರಿಗೆ ಋಣಿಯಾಗಿದ್ದೇನೆಂದು ಸೂಕ್ಷ್ಮವಾಗಿ ತಿಳಿಸಿದ್ದಾನೆ. ಆದರೆ ಮೂಲವನ್ನು ಅಳಿಸಲಿಲ್ಲ; ವೃದ್ಧಿ ಮಾಡಿದ್ದಾನೆ. ಲಕ್ಷ್ಮೀಶ–ಮುದ್ದಣರ ಶ್ಲೇಷದಲ್ಲಿರುವ ಅಂತರ ಹೋಲಿಕೆಗಳದ್ದಲ್ಲದೆ ಬೇರೆ ಯಾವುದೂ ಅಲ್ಲ.

ಲಕ್ಷ್ಮೀಶನಂತೆಯೇ ಮುದ್ದಣನ ಪ್ರಯತ್ನವು ಅನುವಾದ ಕ್ರಮವಾಗಿದೆ. ರಾಮ ಪಟ್ಟಾಭಿಷೇಕವು ಸಂಸ್ಕೃತ ಪದ್ಮಪುರಾಣದ ಪಾತಾಳ ಖಂಡದಲ್ಲಿರುವ ಶೇಷ ರಾಮಾಯಣದ ಭಾಗವನ್ನು ಅನುವಾದಿಸಿದುದರ ಫಲವಾಗಿದೆ. ಈ ಅನುವಾದ ಕ್ರಮವನ್ನು ಲಕ್ಷ್ಮೀಶನಿಂದ ಕಲಿತಂತೆ ತೋರುತ್ತದೆ. ಆದರೆ ಮುದ್ದಣನು ಇಂಥ ಪ್ರಯತ್ನವನ್ನು ಕೇವಲ ಅಭ್ಯಾಸಕ್ಕಾಗಿ ಮಾಡಿರಬಹುದೇ ಎಂಬ ಅನುಮಾನವೂ ಮೂಡಬಹುದು.

ರಾಮಚಂದ್ರ ಉಚ್ಚಿಲ್‌ರವರು 'ಮುದ್ದಣ ಪ್ರಯೋಗಶೀಲ ಕವಿಯಷ್ಟೆ. ಅದರ ಹರವು ರಾಮ ಪಟ್ಟಾಭಿಷೇಕದಲ್ಲಿ ಎದ್ದು ಕಾಣುತ್ತದೆ : ಅದು ಕೇವಲ ಭಾಷೆಗೆ ಮಾತ್ರ ಸೀಮಿತವಾಗಿಲ್ಲ. ಹೊಸ ಉಪಮೆಗಳು ರೂಪಕಗಳು ಪೂರ್ವ ಕಥೆಗಳು ಎಂದು ಎಲ್ಲಿ ಅನುವು ದೊರೆಯಿತೋ ಅಲ್ಲಿ ಅವನ್ನು ತಂದು ಹೊಂದಿಸುವುದು ಅವನ ವೈಶಿಷ್ಟ್ಯ' ಎಂದೂ ರಾಮ ಪಟ್ಟಾಭಿಷೇಕ ಅನೇಕ ಕೌತುಕಗಳಿಂದ ಕೂಡಿದ ಕೃತಿ. ಈ ಕೌತುಕಗಳೇ ಅವನ ಕರ್ತೃತ್ವವನ್ನು ಪ್ರಶ್ನಿಸಲು, ವಿದ್ವತ್ತನ್ನು ಶಂಕಿಸಲು ಕಾರಣಗಳಾಯಿತೆಂದರೂ ಹೆಚ್ಚಾಗದು – ಎಂದೂ ನಿರ್ಧರಿಸಿದ್ದಾರೆ.

ತ. ಸು. ಶಾಮರಾಯರು ತಮ್ಮ 'ಮುದ್ದಣ' ಕೃತಿಯಲ್ಲಿ ಶ್ರೀರಾಮ ಪಟ್ಟಾಭಿಷೇಕವನ್ನು ಪರಿಶೀಲಿಸಿದ್ದಾರೆ.

ಪಗೆಯವಂ ದ್ರೋಹ ಚಿಂತಕನೆಂದೆಣಿಸದೆ ಮರೆ ।  
ಪೊಗಲೆನ್ನನಿರದೆ ಕಾದವನೆಂದು ರಾಮನಂ ।  
ಪೊಗಳಿ ಕಾಕಾಯೆಂದು ಬೇಡಿಕೊಂಡಪುದೆನಲ್ ಕಾಗೆ ಕೂಗಿದುವಾಗಳ್

ಈ ಬಗೆಯಾದ ಚಮತ್ಕಾರ–ಕೈಚಳಕ–ಕಾವ್ಯದ ಉದ್ದಕ್ಕೂ ಕಂಡುಬರುತ್ತದೆ. ಸಮುದ್ರ ಘೋಷ ತನ್ನಲ್ಲಿರುವ ಹಲವು ಹೆಸರುಗಳಿಂದ ಹೇಗೆ ಹಲವಾರು ಜನಗಳಿಗೆ ಆದರಣೀಯವಾಗಬಲ್ಲದೆಂಬುದನ್ನು ತೋರಿಸುವಂತೆ –

ಸುರರಿಗಮೃತಂ ಬೇಕೆ ? ಮನಮುಂಟೆ ಕಾಲಕಂ ।  
ಧರಗೆ ವಿಷದೊಳ್ ? ಬಾಲಚಂದ್ರಂಗೆ ಪಯಮಿಹುದೆ ? ।  
ತರಮುಂಟೆ ಪೀರರ್ಗೆ ? ಕೀಲಾಲಮಸುರರ್ಗೆ ದೊರೆತುದೇ ? ಲಾವಣ್ಯಮಂ ।  
ಸ್ಮರನಿಚ್ಛಿಪನೆ ? ಕುಶಮನರಸುವರೆಯಮಿಗಳ್ ಫ ।  
ನರಸಮುಂ ಕೊಂಡಗೆ ರಸಜ್ಞರ್ ? ಉಂಟೆನ್ನುಮಾ ।  
ದರದೆ ತಾನೀವೆನೆಂದೊರೆವಂತೆ ಮೊರೆವಂ ತೆರತೆರದಿಂದಬ್ಧಿರಾಜಂ ॥

...ಗೆಯೇ ಸಮುದ್ರ ವರ್ಣನೆಯ ಹಲವು ಪದ್ಯಗಳು ಕವಿಯ ಸರಸತೆಯನ್ನೂ ಸೂಕ್ಷ್ಮ ಬುದ್ಧಿಯನ್ನೂ ಹೊರದೋರುತ್ತವೆ. ಈ ಚಾತುರ್ಯದ ಜೊತೆಗೆ ಅನುಪ್ರಾಸ, ಯಮಕ, ವಿರೋಧಾಭಾಸಾದಿ ಅಲಂಕಾರಗಳು ಕಾವ್ಯದಲ್ಲಿ ಹುಲುಸಾಗಿಯೇ ಇವೆ.

ತಪದೊಳ್ ಕಲ್ಲರಳೆ, ಗಿರಿಯುರುಳೆ, ತಿರೆ ಪೊರಳೆ
ತೆಪಬಾನೊಳ್ ಪಾರೆ ಕಡಲಾರೆ ನಿಲಲಾರೆ
...ನೀಪೊಳ್ತಿಗೆಲೆ ಭರತ ನೆಲೆಯರಿತು ಸಲೆ ಸಂತಸದೆ ಪೋಪುದೆಂದು ॥

...ತ್ಯಾದಿ ಪದ್ಯಗಳಲ್ಲಿ ಕವಿಯ ಪ್ರತಿಭೆಗಿಂತಲೂ ಪಾಂಡಿತ್ಯಕ್ಕೆ ಪ್ರತಿಷ್ಠೆ ಹೆಚ್ಚು.

ಕವಿಯು ಜನ ಮೆಚ್ಚಿಗೆಗಾಗಿ ಪಾಂಡಿತ್ಯವನ್ನು ಪ್ರದರ್ಶನ ಮಾಡಿರುವನಾದರೂ ...ಳ್ಲಿ ಆತನ ಕವಿ ಹೃದಯದಿಂದ ಕಾವ್ಯಮಯವಾದ ಪದ್ಯಗಳು ಅರಳಿವೆ. ...ವಿಗೆ ಹೋಗಿರುವ ಸೀತೆಯ ಸ್ಥಿತಿಯನ್ನು ಚಿತ್ರಿಸಿಕೊಳ್ಳುತ್ತಾ ಭರತನು ಹೇಳಿಕೊಳ್ಳುತ್ತಾನೆ –

ತಂಪೆಲರ್ ಸೋಂಕೆ ಬಳ್ಕುವ ಲತಾಂಗಮದಿರಿಸಿ ।
...ಂ ಬೇರೆ ತಡೆದುದುಂಟೆ ? ಬಗ್ಗ ದೊವಲಂ ಕಂಡೊ ।
...ಂ ಬೆರ್ಚುವೆರಳೆಗಣ್ ಪರಿವ ಪೆರ್ಬುಲಿನೋಟಮಂ ಸಹಿಸಲುಂಟೆ ? ವನದಿ॥

ತುಂಬಿಯುಲಿಗಳ್ಕುವತಸೀಕುಸುಮಕರ್ಣಮೆಂ ।
ತಿಂಬಕ್ಕು ಸಿಂಹಗರ್ಜನೆಗೆ ? ಜಿನುಗಲ್ಕಿಲದೊ ।
ಳುಂ ಬಾಡುತಿರ್ಪ ತಳಿರಡಿ ...ಯೆ ಕಾಪಥದೊಳೆಂತಪ್ಪು ದವನಿಸುತೆಗೆ ? ॥

ಇಲ್ಲಿನ ಲತಾಂಗ, ... ಗಣ್, ಅತಸೀ ಕುಸುಮಕರ್ಣ, ತಳಿರಡಿ – ಈ ಉಪಮೆಗಳು ಸಾರ್ಥಕವಾ... . ಈ ವಿವರಣೆ ಗಮನಾರ್ಹವಾದುದಾಗಿದೆ.

ತ. ಸು. ಶಾಮರಾಯ... ರನ್ನನು ಸಿಂಹಾವಲೋಕನ ಕ್ರಮದಿಂದ ತನ್ನ 'ಗದಾಯುದ್ಧ' ರಚಿಸಿದಂತೆ ಮುದ್ದಣನೂ "ಇಲ್ಲಿ ಶ್ರೀರಾಮನು ಪುಷ್ಪಕ ವಿಮಾನದಲ್ಲಿ ಹಿಂದಿರುಗುತ್ತಾ ತಾವು ತಂಗಿದ್ದ ಸ್ಥಳಗಳನ್ನು ಸೀತೆಗೆ ತೋರಿಸುತ್ತಾ ಹಳೆಯ ಕಥೆಯನ್ನೆಲ್ಲಾ ನೆನಪಿಗೆ ತರುತ್ತಾನೆ. ಈ ಸುಂದರವಾದ ಸನ್ನಿವೇಶ ಸೃಷ್ಟಿ ಕವಿಯ ಸ್ವಂತ ಕಲ್ಪನೆ. ಆತನ ಪ್ರತಿಭೆಗೆ ಇದೊಂದು ಹಿರಿಯ ಸಾಕ್ಷಿ. ಕವಿಯ ಕಲಾಕೌಶಲ ಸ್ತೋತ್ರಾರ್ಹವಾಗಿದೆ" ಎಂದಿದ್ದಾರೆ. ವಾಸ್ತವವಾಗಿ ಈ ಇಬ್ಬರ ರೀತಿಯಲ್ಲೂ ಕಾಳಿದಾಸನ 'ರಘುವಂಶ' ಕಾವ್ಯದಲ್ಲಿ ರಾಮಾಯಣ ಕಥಾಭಾಗವು ಬಂದಂತೆ ಆಗಿದೆ. ಮುದ್ದಣನು ರಘುವಂಶವನ್ನು ಓದಿದ್ದಿರಲಾರನೆನ್ನುವುದಾದರೂ ಕೇಳಿರಬಹುದಾಗಿದೆ. ಅದು...ದ ವಿಶೇಷವಾಗುವುದಿಲ್ಲ.

ಮುದ್ದಣನು ತನ್ನ ಕಾವ್ಯಕ್ಕೆ ಬೇಕಾದ ವ್ಯುತ್ಪತ್ತಿ ಸಂಪತ್ತನ್ನೂ ಲಕ್ಷ್ಮೀಶನಿಂದ ಎರವಲು ತೆಗೆದುಕೊಂಡಂತೆ ಗೋಚರವಾಗುತ್ತದೆ. ಇದಕ್ಕೆ ಯಾವುದೇ ಭಾಗವನ್ನೂ

ಉದಾಹರಿಸಬಹುದು. ಹೀಗೆ 'ಶ್ರೀರಾಮ ಪಟ್ಟಾಭಿಷೇಕಂ' – ಕಾವ್ಯವು ಮುದ್ದಣನ ಕಾವ್ಯ ಪ್ರಯೋಗಾಭ್ಯಾಸವಾಗಿದೆಯೆಂದು ಹೇಳಬಹುದು. ಅದರ ಅರಿವು ಆತನಿಗೂ ಇದ್ದುದಕ್ಕೆ ಅವನ ಮುಂದಿನ ಪ್ರಯತ್ನವು ಸಾರಿ ಹೇಳುತ್ತದೆ.

## ಅದ್ಭುತ ರಾಮಾಯಣಂ

ಇದು ಮುದ್ದಣನ ಮೊದಲ ಕಾವ್ಯ ಪ್ರಯೋಗವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಪಂಜೆ ಮಂಗೇಶರಾಯರು "ಅದ್ಭುತ ರಾಮಾಯಣವು ಕವಿವರ್ಯ ನಂದಳಿಕೆ ಲಕ್ಷ್ಮೀನಾರಣಪ್ಪನವರ ಗ್ರಂಥಗಳೊಳಗೆ ಪ್ರಥಮ ಪ್ರಯತ್ನವೆಂಬುದರಲ್ಲಿ ಸಂಶಯವಿಲ್ಲ. ರಾಮಾಶ್ವಮೇಧದ ವಚನ ಮಾಧುರ್ಯವೂ ರಾಮ ಪಟ್ಟಾಭಿಷೇಕದ ಅರ್ಥ ಗಾಂಭೀರ್ಯವೂ ಇದರಲ್ಲಿ ಕಾಣದಾದರೂ ಪದ ಲಾಲಿತ್ಯದಲ್ಲಿಯೂ ಭಾಷಾ ಸರಳತೆಯಲ್ಲಿಯೂ ಇದು ಅದಕ್ಕೆ ಕಡಿಮೆಯಿಲ್ಲ. ರಾಮಾಶ್ವಮೇಧದಲ್ಲಿ ಪೌರಾಣಿಕವಾಗಿಯೂ ರಾಮ ಪಟ್ಟಾಭಿಷೇಕದಲ್ಲಿ ವರ್ಣಕ ಕವಿಯಾಗಿಯೂ ವಹಿಸಿದ ಸ್ವಾತಂತ್ರ್ಯವನ್ನು ಕೇವಲ ಅನುವಾದವಾದ ಅದ್ಭುತ ರಾಮಾಯಣದಲ್ಲಿ ಕವಿ ಕೈಕೊಳ್ಳಲಾರದೆ ಸಂಸ್ಕೃತ ಮೂಲ ಗ್ರಂಥವನ್ನು ಬಹಳವಾಗಿ ಅನುಸರಿಸಿವರೂ ಸಮಯೋಚಿತವಾದ ವರ್ಣನೆಗಳಿಂದ ಪುರಾಣದ ಛಾಂದಸಿಕೆಯನ್ನು ತೊಲಗಿಸಿ ಅದನ್ನು ಒಂದು ಶ್ರೇಷ್ಠವಾದ ವಚನ ಕಾವ್ಯವನ್ನಾಗಿ ಮಾಡಿರುವನು" ಎಂದಿದ್ದಾರೆ.

ತ. ಸು. ಶಾಮರಾಯರು ಇದನ್ನು "ಕವಿಯು ಕೊಟ್ಟಿರುವ ಪ್ರಥಮ ಫಲ. ಇದರ ಮೂಲ ಬರಿಯ ಪುರಾಣದ ಬದನೆಕಾಯಿ. ನೀತಿ ನಿರೂಪಣೆ ಅಲ್ಲಿನ ಹೆಗ್ಗುರಿ. ಕವಿ ಅದರಿಂದ ರಸನಿರ್ವಹಣೆಯನ್ನೂ, ಮನೋರಂಜನೆಯನ್ನೂ ಸಾಧಿಸಲು ಪ್ರಯತ್ನ ಪಟ್ಟಿದ್ದಾನೆ. ನೀರಸವಾದ ಕಂತೆಯ ಪುರಾಣವನ್ನೆಲ್ಲಾ ಬಿಟ್ಟು ಬಿಟ್ಟು ರಸವತ್ತಾಗಬಲ್ಲ ಸನ್ನಿವೇಶಗಳನ್ನು ಮಾತ್ರ ಆಯ್ದುಕೊಂಡಿದ್ದಾನೆ. ಈ ಕಾರ್ಯದಲ್ಲಿ ಒಳ್ಳೆಯ ಸಂಗ್ರಹಕಾರನ ಕುಶಲತೆಯನ್ನು ಮಾತ್ರ ಕವಿಯಲ್ಲಿ ಕಾಣಬಹುದು."

ಅದ್ಭುತ ರಾಮಾಯಣದ ಕಥೆ ಅದರ ಹೆಸರೆಂತಂತೆ ಅದ್ಭುತವಾದುದು. ಶ್ರೀಮತಿ ರಾಜಕುವರಿ, ಜಗದ್ವಿಖ್ಯಾತಳಾದ ಸುಂದರಿ. ಅವಳ ಸೌಂದರ್ಯಕ್ಕೆ ಮನಸೋತ ನಾರದ ಪರ್ವತರು ಆಕೆಯ ಪಾಣಿಗ್ರಹಣಕ್ಕಾಗಿ ಆಕಯ ತಂದೆಯಲ್ಲಿ ಪ್ರಾರ್ಥಿಸಿದರು. ಇಬ್ಬರೂ ಸತ್ಕುಲಪ್ರಸೂತರು; ಜಗದ್ವಿಖ್ಯಾತರಾದ ಮಹರ್ಷಿಗಳು. ಕನ್ಯಾ ಪಿತೃವಿಗೆ ಉಭಯ ಸಂಕಟ ಬಂದಿತು. ಮಗಳು ಒಪ್ಪಿದವರಿಗೆ ಆಕೆಯನ್ನು ಕೊಟ್ಟು ಲಗ್ನ ಮಾಡುವುದಾಗಿ ಹೇಳಿದ. ಇಬ್ಬರೂ ಶ್ರೀಹರಿಯನ್ನು ಕುರಿತು ತಪಸ್ಸು ಮಾಡಿ ಆತನ ಸುಸ್ವರೂಪವನ್ನು ತಮಗೆ ಅನುಗ್ರಹಿಸುವಂತೆ ಬೇಡಿದರು. ಅರಮನೆಯ ಸ್ಥಿತಿಗೆ ಈ ಹೆಗ್ಗಣಗಳು ಹೀಗೆ ಗುರುಗುಟ್ಟುತ್ತಿದ್ದರೆ ಶ್ರೀಮತಿ ಶ್ರೀಪತಿಯನ್ನಲ್ಲದೆ ಬೇರೊಬ್ಬರ ಕೈಹಿಡಿಯೆನೆಂದು ಮನದಲ್ಲಿ ನಿಶ್ಚಯ ಮಾಡಿಕೊಂಡಿದ್ದಾಳೆ. ಆಕೆಯ ಅನನ್ಯ ಸೇವೆಯನ್ನು ಕೈಕೊಳ್ಳಲು ಶ್ರೀಹರಿಯೂ ಕಾತರನಾಗಿದ್ದಾನೆ. ಹೀಗಾಗಿ ಶ್ರೀಮತಿಯ ಸ್ವಯಂವರವೇರ್ಪಟ್ಟಾಗ ಶ್ರೀಹರಿ ಉಪಾಯದಿಂದ ಋಷಿಗಳಿಬ್ಬರಿಗೂ

ಚಳ್ಳೆಹಣ್ಣು ತಿನ್ನಿಸಿ ತಾನು ಹೆಣ್ಣನ್ನು ವಶಪಡಿಸಿಕೊಳ್ಳುತ್ತಾನೆ. ಕುಪಿತರಾದ ಈ ಋಷಿಗಳು ಶ್ರೀಹರಿಯನ್ನು ಮಾನವನಾಗಿ ಹುಟ್ಟುವಂತೆಯೂ, ಶ್ರೀಮತಿಯನ್ನು ಮರುಜನ್ಮದಲ್ಲಿ ರಾಕ್ಷಸನು ಕದ್ದೊಯ್ಯುವಂತೆಯೂ ಶಪಿಸುತ್ತಾರೆ. ಬ್ರಹ್ಮವಾಕ್ಯ ಅಮೋಘವಾದುದು ತಾನೆ ! ಹರಿಯಾದರೇನು ಅವರಪ್ಪನಾದರೇನು ? ಆತನು ಮಾನವನಾದ ರಾಮನಾಗಿ ಹುಟ್ಟಲೇಬೇಕಾಯಿತು. ಶ್ರೀಮತಿ ರಾವಣನ ಮಗಳಾಗಿ ಹುಟ್ಟಿ ತನ್ನ ತಾಯಿಯಾದ ಮಂಡೋದರಿಯಿಂದ ಅಗಲಿ ದೂರವಾಗಿ, ಜನಕರಾಜನ ಯಜ್ಞ ಸಮಯದಲ್ಲಿ ಭೂಮಿಯಲ್ಲಿ ದೊರೆತಿದರಿಂದ ಭೂಮಿಜೆಯೆಂದು ವಿಖ್ಯಾತಳಾದಳು. ಸೀತಾ ಜನನ, ಸೀತಾ ಕಲ್ಯಾಣ, ಇತ್ಯಾದಿಗಳಿಂದ ಹಿಡಿದು ರಾವಣ ಮಥನ, ರಾಮ ಪಟ್ಟಾಭಿಷೇಕದವರೆಗೆ ಕಥೆ ಚುಟುಕಿಜಪುರದಲ್ಲಿ ಮುಗಿದು ಹೋಗುತ್ತದೆ. ಅನಂತರ ಅದ್ಭುತ ರಾಮಾಯಣ ಆರಂಭವಾಗುತ್ತದೆ. ರಾಮ ಪಟ್ಟಾಭಿಷೇಕಕ್ಕಾಗಿ ನೆರೆದಿದ್ದ ಋಷಿಗಳು ಮೃಷ್ಟಾನ್ನದಿಂದ ತಣಿದು, ಮುಕ್ತಕಂಠದಿಂದ ರಾಮನನ್ನು ಹೊಗಳುವರು. ರಾಮನ ಪರಾಕ್ರಮದ ವರ್ಣನೆ ಕೇಳಿ ಕೇಳಿ ಸೀತೆಗೆ ತಲೆ ಚಿಟ್ಟುಹಿಡಿದು ಹೋಗಿತ್ತೋ ಏನೋ ! ಸಹಸ್ರಕಂಠ ರಾವಣನನ್ನು ಜಯಿಸದ ಮೇಲೆ ಅವನೆಂತಹ ಪರಾಕ್ರಮಿ ? ಎಂದು ಹೀಯಾಳಿಸಿದಳು. ದಶಕಂಠ ವೈರಿಗೆ ರೋಷ ಹುಟ್ಟಿ ಆತನ ಮೇಲೆ ಯುದ್ಧಕ್ಕೆ ಹೊರಡುವನು. ಆದರೇನು ? ಹೊಟ್ಟೆಯಲ್ಲಿನ ಸಿಟ್ಟು ರಟ್ಟೆಯಲ್ಲಿಲ್ಲ; ಜೀವದೊಡನೆ ಹಿಂದಿರುಗುವುದೇ ಕಷ್ಟವಾಗುತ್ತದೆ ರಾಮನಿಗೆ. ಆಗ ಸೀತೆ ಕರಾಳ ರೂಪವನ್ನು ಧರಿಸಿ ರಕ್ಕಸನನ್ನು ಒಕ್ಕಲಿಕ್ಕಿ ರಾಮನನ್ನು ರಕ್ಷಿಸುತ್ತಾಳೆ. ರಾಮನೂ, ಸಮಸ್ತ ದೇವತೆಗಳೂ ಆಕೆಯನ್ನು ಹೊಗಳುತ್ತಾರೆ.

ಮೇಲಿನ ಕಥೆ ಶಕ್ತ್ಯಾರಾಧಕರ ಕಲ್ಪನೆ; ಪರಮ ಪುರುಷನಾದ ರಾಮನಿಗಿಂತಲೂ ಪ್ರಕೃತಿ ಸ್ವರೂಪಿಣಿಯಾದ ಸೀತೆ ಹೆಚ್ಚು ಮಹಿಮಾನ್ವಿತಳೆಂಬುದನ್ನು ತೋರುವುದಕ್ಕಾಗಿ ಸೃಷ್ಟಿಯಾದುದು. ಭಾವವೇ ನಮ್ಮ ಮನಸ್ಸಿಗೆ ಅಷ್ಟು ಹಿಡಿಸಲೊಲ್ಲದು. ವಾಲ್ಮೀಕಿ ರಾಮಾಯಣದ ಸೀತೆಯನ್ನೂ, ಅದ್ಭುತ ರಾಮಾಯಣದ ಸೀತೆಯನ್ನೂ ಜೊತೆ ಜೊತೆಯಾಗಿ ಚಿತ್ರಿಸಿ ಕವಿ ನಮ್ಮೆದುರು ಇಟ್ಟಿದ್ದಾನೆ... ತ. ಸು. ಶಾಮರಾಯರು ಇಲ್ಲಿಯ ಕರಾಳರೂಪಿಣಿ ಸೀತೆಯನ್ನು ಕಂಡು ಸ್ವಾಭಾವಿಕವಾಗಿ ಹೇವರಿಸುತ್ತಾರೆ. 'ನಮ್ಮ ಕವಿ ಈ ಕಥಾವಸ್ತುವನ್ನು ಆಯ್ದುಕೊಂಡುದಾದರೂ ಅಷ್ಟು ಉನ್ನತವಾದ ಅಭಿರುಚಿಯೆಂದು ಹೇಳಲಾರೆವು' ಎಂದಿದ್ದಾರೆ. ಇಲ್ಲಿಯ ಔದಾಸೀನ್ಯ ಅತಿರೇಕವೂ ಆಗಬಹುದು. ರಾಮಚಂದ್ರ ಉಚ್ಚಿಲ್ ಈ ಕೃತಿಯ ಬಗ್ಗೆ ಕೊಂಚ ಔದಾರ್ಯದಿಂದ ನುಡಿದಿದ್ದಾರೆ – 'ಮೂಲ ಅದ್ಭುತ ರಾಮಾಯಣ ಕಾವ್ಯವೆ ? ಪುರಾಣವೆ ? ನಮ್ಮ ವಿಮರ್ಶಕರು ಇದನ್ನು 'ಅಗ್ಗದ ಪುರಾಣ'ವೆಂದುದುಂಟು. ಈ ಮಾತಿನಲ್ಲಿ ಸತ್ಯಾಂಶವಿದೆ. ಆದರೆ ಮುದ್ದಣನ ಕೈಯಲ್ಲಿ ಅದು 'ಅಗ್ಗ'ದ ಮಟ್ಟದಿಂದ ಪಾರಾಗಿದೆ. ಆತ ಅನುವಾದ ಮಾಡುವಾಗ ಪೂರ್ಣ ಸ್ವಾತಂತ್ರ್ಯ ವಹಿಸಿ ಹನ್ನೊಂದು ಸರ್ಗಗಳನ್ನೂ ಕಿತ್ತು ಹಾಕಿದ. ಮತ್ತೆ ಕೆಲವೆಡೆ ಸಂಗ್ರಹಿಸಿದ, ಅಶ್ಲೀಲವೆಂದು ಕಂಡ

ವಾಕ್ಯಗಳನ್ನೂ ಪದಗಳನ್ನೂ ಕೈಬಿಟ್ಟ. ಮೂಲದ ನೀರಸ ಸಂವಾದಗಳಿಗೆ ಜೀವಕಳೆ ತುಂಬಿದ. ಇಲ್ಲಿದೆ ಒಂದು ಉದಾ :

'ಚೌಪಂತಮನೇರ್ದ ಮೆಯ್ಯುಗ್ಗಣ್ಣನಂ ಕಿಸುಗಣ್ಣೆಕಂಡಾ ರಾಯಂ ಅಮರ್ದುರ್ಗಿಂದರೊಡೆಯು ನಿನ್ನ ಕುರಿತಾಂತಪಮಾಚರಿಸಿದು ದುಮಿಲ್ಲಂ ಮೇಣ್ ನಿನ್ನತ್ತಣಿನಾವ ವರಮುಮಂ ಬಯಸಿದುದಿಲ್ಲಂ. ಎನ್ನೊಡೆಯ ನಲವೊರ್ಡೆಯನಲ್ಲದೆ ಬಿಡೌಜನಲ್ತು. ಇಂತೊರೆವೆನೆಂದು ಮುನಿಸುದಾಳದಿರ್ ಬಂದೆನ್ನ ತಪಸ್ಸಿಗೆ ಬನ್ನಮೆಸಗದೆ ಎಹುಗೆ ಬಂದ್ಯೆ ಅಹಗೆ ಪಿಂದಿರುಗ್ಯೆ.' ಮೂಲದಲ್ಲಿ 'ಇಂತೊರೆವೆನೆಂದು ಮುನಿಸು ದಾಳದಿರು' ಎಂಬ ಅಭಿಪ್ರಾಯವೇ ಇಲ್ಲ. ಅಲ್ಲಿ ಅಂಬರೀಷ ನಾಹಂ ತ್ವಾಮಭಿ ಸಂದಾಯ ತಪ ಆಸ್ಥಿತವಾನಿಹ, ತ್ವಯಾದ ತ್ರಂಚನೇಚ್ಛಾಮಿಗಚ್ಛ ಶಕ್ರಯಥಾಸುಖಂ' ಎಂದು ಸ್ವಲ್ಪ ಬಿರುಸಾಗಿಯೇ ಹೇಳುತ್ತಾನೆ."

ಹೀಗೆಯೇ ಮಂಡೋದರಿಯ ದುಃಖವನ್ನು ವಿವರಿಸುವಲ್ಲಿ ಮುದ್ದಣನ ಸ್ವಾತಂತ್ರ್ಯವನ್ನು ಕಾಣಬಹುದಾಗಿದೆ. "ಈ ರೀತಿ ಹೊಸತನಗಳನ್ನೂ ಅದ್ಭುತ ರಾಮಾಯಣದಿಂದ ಸಾಕಷ್ಟು ಹೆಕ್ಕಿ ತೆಗೆಯಬಹುದು. ಆದರೆ ಅತ್ಯಾವಶ್ಯಕವಾದ ಇನ್ನೂ ಒಂದೆರಡು ಬದಲಾವಣೆಗಳನ್ನು ಅಳವಡಿಸಿಕೊಳ್ಳಲು ಮುದ್ದಣ ಹಿಂಜರಿದ." ರಾಮನು ಸಹಸ್ರಕಂಠ ರಾವಣನನ್ನು ವಧೆ ಮಾಡಲು ಬರುವ ಸನ್ನಿವೇಶವು ಇಂತಹುದೊಂದು –

"ಕಥನ ಕಲೆಯಲ್ಲಿ ಮುದ್ದಣ ಕುಶಲಶಿಲ್ಪಿ. ಈ ದೆಸೆಯಲ್ಲಿ ಲಕ್ಷ್ಮೀಶನಿಂದ ಅವನು ಸ್ಫೂರ್ತಿ ಪಡೆದಿರಬಹುದಾದರೂ ಅದನ್ನು ತನ್ನದೇ ರೀತಿಯಲ್ಲಿ ಸಾಧಿಸಿಕೊಂಡು ಕೃತಜ್ಞನಾಗಿದ್ದಾನೆ. ಅದ್ಭುತ ರಾಮಾಯಣದ ಶ್ರೀಮತಿ ಪರಿಣಯ...ಸೀತಾಜನ್ಮ ಮೊದಲಾದವು ಮೂಲದ ಕತೆಗಳೇ ಆದರೂ ಕನ್ನಡದಲ್ಲಿ ಅವತರಿಸಿದಾಗ ಮುದ್ದಣನ ಸ್ವಂತಿಕೆಯ ಮುದ್ರೆ ಪಡೆದು ಬಂದಿವೆ. ಮೂಲದ ಮಣ್ಣಿನ ಮುದ್ದೆಗಳು ಇಲ್ಲಿ ಜೀವಕಳೆ ತುಂಬಿ ಬಂದಿವೆ. ಎರಡು ಯುಗಗಳಲ್ಲಿ ಸಂಗೀತ ವಿದ್ಯೆ ಕಲಿಯಲು ಪರದಾಡಿ ಅಪಹಾಸ್ಯಕ್ಕೆ ಈಡಾಗುವ ನಾರದನ ಕತೆ ಎಲ್ಲರ ಹೃದಯವನ್ನು ಸ್ಪಂದಿಸದಿದ್ದರೆ ಮುದ್ದಣನ ಕಥನ ಕೌಶಲವೇ ಕಾರಣವಲ್ಲದೆ ಬೇರೆಯಲ್ಲ. 'ಕುಂಠಿತವಾಗಿ, ಗೂಢವಾಗಿ, ಕೆಯ್ದಿರಿಪಿ ಕಿರುವಾಯ್ಗೆಯ್ದು, ಜೋಲ್ನಾಲಗೆ ತೋರ್ದು ತನ್ನ ಮೆಯ್ಯಂ ತಾನೆ ಕಂಡು. ಬಿರುದಿಟ್ಟಯಿಂ ನೋಡಿ. ತೋಳ್ಗಳಂ ಮೇಲೆತ್ತಿ ಆಗಸಮಂ ನೋಡಿ' ಹಾಡುವುದು ಗಾಯಕನಿಗೆ ಸಲ್ಲದು ತಾನೆ ! ಈ ಮೂಲಭೂತ ತತ್ವವನ್ನು ಆತ ಪಾಲಿಸಿದರೂ ಅವನಿಗೆ ಪಾಡು ಪಾಡಾಗಲಿಲ್ಲ ! ಅವನನ್ನು 'ನಗು, ಬೆದರ್ಕೆ ಪಸಿವು, ನಡುಕ, ದುಗುಡ, ನೀರಳ್ಕೆ' ಎಂಬ ಯಾವುದೂ ಬಾಧಿಸಲಿಲ್ಲ. ಅವನಿಗೆ ಬಾಧೆ ಕೊಟ್ಟುದು ತುಂಬುರನಿಗೆ ಸರಿಸಾಟಿಯಾಗಬೇಕೆಂಬ 'ಪೆರತೆಣಿಕೆ'. ಈ ಪೆರತೆಣಿಕೆಯ ಹಮ್ಮು ಇಳಿಯಬಾಕಾದರೆ ದ್ವಾರಕೆಯ ಪರಿಚಾರಕಿಯರು ಈತನ ರಾಗಾಲಾಪವನ್ನು ಕೇಳಿ 'ಇವಂಗಿನ್ನು ಸ್ವರಜ್ಞಾನಮೇ

ಪುಟ್ಟಿತಿಲ್ಲಂ' ಎಂದು ಮೂದಲಿಸಬೇಕಾಯಿತು... ಇತ್ಯಾದಿ... ರಾಮಚಂದ್ರ ಉಚ್ಚಿಲ್ ಇನ್ನೂ ಮುಂದುವರಿದು "ಮುದ್ದಣನ ಅನುವಾದದಲ್ಲಿ ಎಡೆಗೆಡೆಗೂ ನಾವು ಹೊಸ ರೀತಿಯ ಪ್ರಯೋಗಗಳನ್ನು ನಾಣ್ನುಡಿಗಳನ್ನು, ಕನ್ನಡೀಕರಣವನ್ನು ನೋಡುತ್ತೇವೆ. ಇದರಿಂದ ವ್ಯಕ್ತವಾಗುವ ಮುಖ್ಯ ಅಂಶ; ಮುದ್ದಣನ ಪ್ರಾಸಾನುಪ್ರಾಸ ಪ್ರೀತಿ ! ಪ್ರಾಯೋಗಿಕತೆ, ದೇಸಿಯ ಅಭಿಮಾನ. ಮುದ್ದಣನ ಅನುಪ್ರಾಸ ಎಳೆದು ತಂದುದಲ್ಲ; ಅವನಿಗೆ ಅದು ಇನ್ನೊಂದೆಡೆ ಅವನೇ ಹೇಳಿದಂತೆ 'ಪಾಸುಪೊಕ್ಕು' !" ಎಂದಿದ್ದಾರೆ. ಇಂಥ ಅಭಿಮಾನದ ಪರಿಶೀಲನೆ ನಿಜಕ್ಕೂ ಗಮನಾರ್ಹವಾಗಿದೆ. ಏಕೆಂದರೆ ಮುದ್ದಣನನ್ನು ಇಂದಿಗೂ ಯಾವ ನಿಕಷಕ್ಕೆ ಒಡ್ಡಬೇಕೆಂಬುದಕ್ಕೆ ಸರಿಯಾದ ಆಧಾರಗಳಿಲ್ಲ. ಆತನು ಆಗಿನ ಕಾಲದಲ್ಲಿ ಕನ್ನಡ ಗದ್ಯ ರಚನೆಯನ್ನು ಮನಸ್ಸಿಗೆ ಹಚ್ಚಿಕೊಂಡು ಹೆಣಗಾಡಿರುವುದಂತೂ ಅಂದಿನ ಅನೇಕರಿಗೆ ಮಾರ್ಗದರ್ಶನವಾಗಿದ್ದೀತು; ಅದರಲ್ಲೂ ಹೇಗೆ ಮುಂದುವರಿದರೆ ತಪ್ಪುಗಳು ಕಡಿಮೆಯಾದಾವು ? ಎಂಬ ವಿಷಯದಲ್ಲಿ ಬೆಳಕು ಬಿದ್ದಿರಬೇಕು.

ಮುದ್ದಣನಿಗೆ ಕಾವ್ಯದ ವಸ್ತುವಿಗಿಂತಲೂ ಅದರ ಮಾಧ್ಯಮದ ಸಮಸ್ಯೆಯೇ ಜಿಗಿಯಾಗಿದ್ದಿರಬೇಕು. ಕಾವ್ಯಕ್ಕೆ ತಕ್ಕ ಭಾಷೆ ಯಾವುದು ? ರೀತಿ ಯಾವುದು ? ಮತ್ತು ಏತಕ್ಕಾಗಿ ಕಾವ್ಯ ರಚನೆಗೆ ಆದ್ಯತೆ ಕೊಡಬೇಕು ?..... ಹೀಗೆ ಆತನನ್ನು ಪ್ರಶ್ನೆಗಳು ಕಾಡಿದ್ದಿರಬೇಕೆಂಬುದಕ್ಕೆ ಆತನ ಅದ್ಭುತ ರಾಮಾಯಣದ ಪ್ರಯೋಗವು ಆಧಾರವಾಗುತ್ತದೆ. ರಾಮಚಂದ್ರ ಉಚ್ಚಿಲ್‌ರಂತೆ "ವಿನೂತನ ಶೈಲಿಗೆ, ಭಾಷಾ ಪ್ರಯೋಗಕ್ಕೆ, ಕಥನ ಕ್ರಮಕ್ಕೆ, ಸಂಗ್ರಹಕ್ಕೆ, ಪ್ರಾಸಾನುಪ್ರಾಸಕ್ಕೆ, ಪದವಿನ್ಯಾಸಕ್ಕೆ, ಧ್ವನಿಶಕ್ತಿಗೆ – ಹೆಚ್ಚೇನು, 'ಅಚುಂಬಿತಾರ್ಥ ಸಂಪತ್ತಿಗೆ' 'ಅದ್ಭುತ ರಾಮಾಯಣ' ಪ್ರಯೋಗಶಾಲೆ."

## ಶ್ರೀರಾಮಾಶ್ವಮೇಧಂ

ಈ ಕೃತಿಯನ್ನು ಮುದ್ದಣನು ರಚಿಸದೇ ಹೋಗಿದ್ದರೆ ಆತನ ಹಿರಿಮೆಯೇನೂ ಉಳಿಯುತ್ತಿರಲಿಲ್ಲ. ಇದರಲ್ಲಿ ಗದ್ಯ ರಚನೆಯಲ್ಲದೆ ಕಥಾ ಸ್ವಾರಸ್ಯಕ್ಕೂ ಅದರಲ್ಲಿಯೂ ಮಾನವೀಯವಾದ ಧೋರಣೆಗೂ ಗಮನವಿಟ್ಟ ಕಾರಣ ಮುದ್ದಣನು ಹೊಸಗನ್ನಡ ಸಾಹಿತ್ಯದ ಉಗಮದ ಕಾಲದಲ್ಲಿ ಕಣ್ಮರೆಯಾದನೆಂಬ ನೋವು ನಮ್ಮ ಪಂಡಿತರೆಲ್ಲರನ್ನೂ ಬಾಧಿಸಿದಂತೆ ತೋರುತ್ತದೆ. ಅದರಲ್ಲೂ ಅವನ ಪರಿಚಿತರೆಲ್ಲರೂ ಮುಕ್ತಕಂಠದಿಂದ ಅವನನ್ನು ಹೊಗಳಿರುವುದಲ್ಲದೆ ತಮ್ಮ ಯೋಗ್ಯತೆಯನ್ನು ಆತನೊಡನೆ ಬಣ್ಣ ಹಚ್ಚಿ ನೋಡಿಕೊಂಡಿದ್ದಾರೆನ್ನಬಹುದು. ತ. ಸು. ಶಾಮರಾಯರು "ಕಡೆಯದಾದರೂ ಅಗ್ರಗಣ್ಯವಾದುದು, ಆತನ ಕಾವ್ಯಶಕ್ತಿ ಇಲ್ಲಿ ಪರಿಣತವಾಗಿದೆ. ಹಿಂದೆ ಎಂದೆಂದೂ ಪುರಾಣ ಕಥೆಗಳಲ್ಲಿ ಕಾಣಬರದ ನವೀನತೆ ಈತನ ಕಥಾ ನಿರೂಪಣೆಯಲ್ಲಿ ಕಂಡುಬರುತ್ತದೆ. ಕಥೆಯನ್ನು ಪ್ರಾರಂಭಿಸುವುದೇ ಒಂದು ಕಾದಂಬರಿಯು ಬೆಡಗುಗೊಳಿಸುವ ಸುಂದರ ಶೈಲಿಯಿಂದ... ವರ್ಷಾಗಾಲದ ವರ್ಣನೆ ರಮ್ಯವಾಗಿದೆ, ಚಮತ್ಕಾರಯುಕ್ತವಾಗಿದೆ; ನವೀನವಾಗಿದೆ" ಎಂದಿದ್ದಾರೆ.

ನಯಲೀಲ ಭಟ್ಟರು "ಅವನಿಗೆ ಮುದ್ದಣನೆಂಬ ಹೆಸರನ್ನು ಶಾಶ್ವತಗೊಳಿಸಿದ ಕೃತಿಯೇ ಇದು. ಇವರ ಮೂಲಕ ಮುದ್ದಣ ತನ್ನನ್ನು ಆಧುನಿಕ ಕಾಲಕ್ಕೆ ಒಂದು ವಿಶಿಷ್ಟ ರೀತಿಯಲ್ಲಿ ಸಂಬಂಧಿಸಿಕೊಂಡಿದ್ದಾನೆ. ತನ್ನ ಕೃತಿಗೆ ಆರಿಸಿಕೊಂಡ ವಸ್ತು, ಅದರ ವಿನ್ಯಾಸ ಬಳಸಿದ ಭಾಷೆ ಇವೆಲ್ಲದರಲ್ಲಿ ಅವನು ನಮ್ಮ ಹಳೆಯ ಕವಿಗಳಿಂದ ಯಾವ ರೀತಿಯಲ್ಲೂ ಭಿನ್ನನಾಗಿಲ್ಲವಾದರೂ ಹೊಸ ಸಾಹಿತ್ಯದ ಹೊಸಲಿಗೇ ಬಂದು ನಿಂತಿದ್ದಾನೆ. ಈ ಶತಮಾನವನ್ನು ಮುಟ್ಟಿ ಮುಗಿದ ಅವನ ಜೀವಿತಾವಧಿ ಒಂದು ಬಗೆಯಲ್ಲಿ ಈ ಮಾತಿಗೆ ಸಂಕೇತವೆಂಬಂತಿದೆ !" ಎಂದಿದ್ದಾರೆ.

ಕೆ. ಡಿ. ಕುರ್ತಕೋಟಿಯವರು ಕನ್ನಡ ಸಾಹಿತ್ಯದ 'ನಡೆದು ಬಂದ ದಾರಿ'ಯಲ್ಲಿ "ಮುದ್ದಣ ಆಧುನಿಕತೆಯಿಂದ ಬೆನ್ನು ತಿರುಗಿಸಿದ್ದು ಹೊಸ ಸಾಹಿತ್ಯಕ್ಕೆ ತಡೆಯನ್ನುಂಟು ಮಾಡುವುದಕ್ಕಾಗಿರದೆ ಪ್ರಾಚೀನ ಸಾಹಿತ್ಯಕ್ಕೆ ನಮ್ಮೆಲ್ಲರ ವತಿಯಿಂದ ಕೊನೆಯ ನಮಸ್ಕಾರ ಹೇಳುವುದಕ್ಕೆ" ಎಂದಿದ್ದಾರೆ.

ಈ ಹೇಳಿಕೆಗಳಿಗೆ ವಿರುದ್ಧವಾಗಿ ಎಸ್. ವಿ. ರಂಗಣ್ಣನವರ ವಿಚಾರವನ್ನು ಗಮನಿಸಬಹುದು. ಉಳಿದೆಲ್ಲ ವಿಮರ್ಶೆಯನ್ನೂ ಎಚ್ಚರಿಸುವ ರೀತಿ ಇವರದು – 'ರಾಮಾಶ್ವಮೇಧ'ವು ಅರ್ವಾಚೀನ ಕವಿಯೊಬ್ಬನಿಂದ ಲಿಖಿತವಾಗಿದ್ದರೂ ಪ್ರಾಚೀನ ಮಹಾಕಾವ್ಯದ ಮರಿ. ಸಾಂಪ್ರದಾಯಿಕವಾದ, ಕವಿಸಂಕೇತಭೂಯಿಷ್ಠವಾದ ವರ್ಣನೆಗಳೇ ಮೊದಲಿನಿಂದ ಕಡೆಯವರೆಗೂ ಆದರೂ... ಅಂದರೆ ಈ ತರಹದ ಮೃತ್ತಿಕಾ ವ್ಯವಸಾಯದಲ್ಲಿ ರಂಜನೆಯಿಲ್ಲವೇ ಇಲ್ಲವೆಂದು ನಾನು ಕಟ್ಟನ್ನು ವಿಧಿಸುವುದಿಲ್ಲ. ಅದನ್ನು ಈಕ್ಷಿಸಿ, ಭಾವಿಸಿ, ಮನನ ಮಾಡಿ ಸುಪ್ರೀತರಾಗುವವರು ಆಗಲಿ. ಮತ್ತು ನಾವು ಕೂಡ ಎರಡನೆಯ ತರಗತಿಯ ಕರಾಡವೆಂದು ಒಡಂಬಡೋಣ. ಆದರೆ 'ಷೇಕ್ಸ್‌ಪಿಯರನಿಗಿಂತ ಬಹಳ ಕಡಿಮೆಯಾದವನಲ್ಲ' "ಸಾಹಿತ್ಯ ಸಾಮ್ರಾಜ್ಯದ ಎಲ್ಲೆಯನ್ನು ಮುಟ್ಟಿರುವುದು" ಎಂಬ ಕೊಡುಗೈಯಿನ ಅಭಯಗಳಿಗೆ ಅರ್ಥವಿಲ್ಲವೆನ್ನುವುದಿಷ್ಟೆ ಬೆಟ್ಟದ ಮೇಲೆ ಬೆಳಗಿದುದೆಲ್ಲವನ್ನೂ ನಕ್ಷತ್ರವೆಂದು ಕೂಗಿದರೆ ಮೋಕ್ಷ ಬಂತೆ ? ಎಂದಿದ್ದಾರೆ. ಇವರ ಅಭಿಪ್ರಾಯಗಳನ್ನು ಇನ್ನಷ್ಟು ಗಮನಿಸಬಹುದು – ಕವಿಗೆ ಭಾಷೆಯಲ್ಲಿ, ಅದರಲ್ಲಿಯೂ ಹಳಗನ್ನಡದಲ್ಲಿ ಅಪರಿಮಿತವಾದ ಭಕ್ತಿ. ಶಬ್ದದೇವತೆಯ ಉಪಾಸಕನವನು ಎಂದು ಅಂದರೂ ಅನ್ನಬಹುದು... ಅದರಿಂದ ಕಾವ್ಯಕ್ಕೆ ಪ್ರಾಪ್ತಿಸಿರುವ ಕೆಲವು ಅನರ್ಥಗಳನ್ನು ನೋಡಿ ೧. ಅರ್ಥ ಸನ್ನಿವೇಶಗಳು ಅಪೇಕ್ಷಿಸದಿದ್ದರೂ ಅನುಚಿತವಾಗಿ ಹೆಸರುಗಳನ್ನು ಬದಲಾಯಿಸಿ ಹೇಳುವುದರಿಂದ ಪಾಂಡಿತ್ಯವನ್ನು ಮೆರೆದಂತಾಗಿದೆ. ಉದಾ : ಅಗಸ್ತ್ಯ, ಶತ್ರುಘ್ನ ಮುಂತಾದವರನ್ನು ಸಮಾನ ಪದಗಳೆಂದು ಹೆಸರಿಸುವ ರೀತಿ. ೨. ಕೆಲವೆಡೆಗಳಲ್ಲಿ ಪ್ರಸಕ್ತರಾಗದ ಭಾರಕ್ಕೆ ಸಾಲದೇ ಹೋಗಿ ವಾಕ್ಯಗಳು ಅಪಹಾಸ್ಯಕರವಾಗುವುದುಂಟು. ಉದಾ : "ಮೇಲಜಿಕೆಯ ಕೈದು ಕಾಜಿರ ಬೀರಂಪುಷ್ಕಲಂ" "ನೆಲನಗಲದಗಲದಚಲದ ಚಲದ ಬಲದ ಬಲದ ಗಂಡುಗಲಿ ಲಕ್ಷ್ಮೀನಿಧಿ" "ಸಿಂಗನೆರ್ದೆಯ ಸಂಗರ ರಂಗದ ಪ್ರತಾಪಾಗ್ರ್ಯಂ"...... ಇಲ್ಲಿ ಆ ವೀರರು ಪರಮ ತೇಜಸ್ವಿಗಳು ಶತ್ರುಗಳಿಗೆ ಕಾಲಾಂತಕ

ಸದೃಶರು ಎಂಬುದನ್ನು ಒತ್ತಿ ಹೇಳಬೇಕೆಂದು ಕವಿಯ ಬಯಕೆ. ಓದುವುದರಲ್ಲಿ ಆ ಮರ್ಯಾದೆ ಮೂಡಲಾರದು. ೩. ಮೊದಲೇ ಕ್ಲಿಷ್ಟವಾದ ಹಳಗನ್ನಡ, ಅದರ ಜೊತೆಗೆ ಸ್ವೇಚ್ಛೆಯಾದ ಪದಗಳ ಮಾರ್ಪಾಟು, ಇವುಗಳಿಂದ ಕಾವ್ಯವನ್ನು ಓದಿ ವಾಚ್ಯಾರ್ಥ ಮಾಡಿಕೊಳ್ಳುವುದು ದುರ್ಘಟವಾಗಿದೆ . "ಜವಹುರ, ವರ್ಷರಿಕೆ, ಕಾಲುರಿಚ ಮೂಗೂಂಕು ಮೂಗಿನ, ಜಬುಚು, ಜೆಪ್ಪಿನೊಪ್ಪಿ, ಬಿಂಗಗೂಕ್ಕೆಯ, ಜಂಕಣೆ, ತಜುಮಿಂಡಿ, ಜೊಬ್ಬೆ, ತುಬ್ಬಾದತ್ತು, ಖೊಪ್ಪರಿಸಿಯಂ, ಜಾವಳೆ, ಮುಯ್ಯೂರಡಿ, ಜೋಡೆಗ, ಮೀಡಾವಿ, ಜೆಕ್ಕಟ, ತೆಪ್ಪತ್ತನಾಗೆ, ದುಕ್ಕಂಡದ, ಪಿಂಡುಗಂ ಕಣಂ, ಸೂಳರ್ಗೆ, ಪಾಜ್ಪೋಕುಂ, ಪೆಜಿರಕೆಲಬಕ್ಕುಮೆ, ಎಡರ್ಗೇಡಿ"... ಉತ್ತಮ ಕಾವ್ಯದ ಅರ್ಥವನ್ನು ಪಡೆಯಲು ನಾವು ಮೈಕೈಯನ್ನು ಮನ್ನಿಸದೆ ದುಡಿಯಬೇಕೆಂಬುದೇನೋ ನಿಜ, ಪಂಪನ ಧ್ವನಿ ಪರಂಪರೆಯು ಕೈವಶವಾಗುವ ಮೊದಲು ಉಂಟಾಗುವ ಶಿರೋವೇದನೆಯು ಹತ್ತೆಂಟು ಉಪವಾಸಗಳಿಂದಲೂ ಆಗದು. ಆದರೆ ಶ್ರಮಪಟ್ಟರೂ ಸಾರ್ಥಕ. ಮೂರಕ್ಕೆ ನೂರ್ಮಡಿಪುರುಷಾರ್ಥ ಹಿಂದಿರುಗಿ ಬರುತ್ತದೆ. ಇಲ್ಲಿಯಾದರೋ ಕೇವಲ ಶಬ್ದಾರ್ಥಕ್ಕಾಗಿ ನಾವು ಕೂಲಿಯಾಳುಗಳು; ಅಂತ್ಯದಲ್ಲಿ ಕೂಲಿಯು ವೇತನವೇ ಹೊರತು ಅರಮನೆಯುಡುಗೊರೆಯಿಲ್ಲ... ೪. ರಸನೆಯ ಮಾಟಕ್ಕೆ ಕವಿಯು ಪಕ್ಕಾಗಿರುವುದರಿಂದ ಪ್ರಾಸದ ಹುಳಿ ಕೆಲವು ಸಾರಿ ಹವಣು ಮೀರಿ ಓದುಗರ ಹಲ್ಲು ಜುಳ್ಳೆನ್ನುತ್ತದೆ. "ದಟ್ಟಡಿ ಬಟ್ಟಮೊಗಂಪುಟ್ಟಗ್ಗೆ ನಿಟ್ಟಾಲಿ ನಟ್ಟನಡುವಣ ಸಾಭಿ ಕಟ್ಟಾಯದ ಮೆಯ್ಸಿರಿ; ಬಿಡು ಜಡೆಯ ಬಿಡುಮೊಗದ ಬಿರಿದೆಸೆಳ್ಗಣ್ಣ ಬಿಲ್ಲುರ್ಬಿನ ಬಿಂಗಗೆಕ್ಕೆಯ" "ಮತ್ತಮಲ್ಲಿರನ್ನಗಲ್ಲೆಡೆಯವುಲ್ಲನಲ್ವಾಸಿನೊಳ್ ಚೆಲ್ಲದಿಂನಲ್ಲಳ್ವೆರಸು ನಿಲ್ಲದೆ ಕುಳ್ಳಿರ್ದು ಮೆಲ್ಲಮೆಲ್ಲನೆಲಲ್ಲೆಗರೆವ..." ಹೀಗೆ ಮೂರುಕಾಸಿನ ನೆಪವಿಲ್ಲದಿದ್ದರೂ ಮೂವತ್ತೆರಡು 'ಲ್ಲ' ಕಾರವು ಒಟ್ಟಿಗೆ ಬರುತ್ತದೆ. ಇವನ್ನು ಪಠಿಸುವಾಗ ಮುದ್ದಣನು ಯಕ್ಷಗಾನಗಳನ್ನು ಬರೆದು ನುರಿತ ಕೈಯೆಂಬುದು ನೆನಪಾಗದಿರದು. ೫. ಕಾವ್ಯದ ಸವಿಜಲವನ್ನು ಮತ್ತಷ್ಟು ಕೊಳಚೆ ಮಾಡುವುದಕ್ಕೆ ಅದರಲ್ಲಿ ಒಂದೇ ಸಮನೆ ಬೀಳುವ ಅರ್ಥರಕಾರದ ಮಳೆಯೂ ಒಂದು ಕಾರಣ. "ಏತಕೆ ಸಿರ್ಕು, ಕರ್ಮ ಪುರುಷಂಗೆ ಸೊರ್ಕು, ಸಿರ್ಕು ಮೆಂದಿರ್ಕಣ್ಣಲ್ತೆ, ನೀರ್ಗುತ್ತಕ್ಕೆ ಮರ್ದನುಸಿರ್, ಏತರ್ಕೆಯೋ ನಿರ್ನೆರಂ ? ಎನ್ನನ್ನರ್ಗೆ ಸೊರ್ಕೆನುರ್ತಿಂ ಬೀಗಿರ್ಪರ್ಯ್, ಕರ್ನೆಲದೆ ಕೊರ್ವಿ ಬೆಳೆದ ಕರ್ವಿನ ತನಿರಸಕ್ಕೆ ಪೆರ್ಮರನ ಪಾಜುಗೊಂಬಿನೊಳ್, ಉರ್ಕುಂ ಗೊರ್ಕುಂ ಸೇರ್ದುಂ ಮುಂತಾದ ಅರ್ಥರಕಾರದ ಪ್ರಾಚುರ್ಯ ದುರ್ಕಿನಿಂದೆ ಓದುಗರ್ಗೆ ಮುರ್ಚು ಪರ್ಬಿ ಪೆರ್ಚದಿರ್ಕುಮೆ !" ಮುದ್ದಣನ ಶೈಲಿಯನ್ನು ಎಸ್. ವಿ. ರಂಗಣ್ಣನವರು ಆಧುನಿಕ ಗದ್ಯದ ರೀತಿಯ ಅಳತೆಯಿಂದ ನೋಡಿ ಟೀಕಿಸಿದ್ದಾರೆ. ವಾಸ್ತವವಾಗಿ ಹಳಗನ್ನಡದಲ್ಲಿ 'ವಡ್ಡಾರಾಧನೆ'ಯನ್ನು ಬಿಟ್ಟರೆ ಒಳ್ಳೆಯ ಗದ್ಯವೇ ಇಲ್ಲದಿರುವಾಗ ಅದರಲ್ಲಿ ಒಂದು ಗದ್ಯದ ಶೈಲಿಯನ್ನು ಸಾಧಿಸಲು ಮುದ್ದಣನು ಮಾಡಿದ ಪ್ರಯತ್ನವನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕಾದೀತು. ಈ ವಿಮರ್ಶಕರಿಗೆ ಈಚೆಗೆ ದೊರೆತ

ಕನ್ನಡ ಗದ್ಯವೂ ಇಂಗ್ಲಿಷ್‌ನಲ್ಲಿ ಕಂಡುಬರುವ ಗದ್ಯವೂ ಆಧಾರವಾಗಿ ಪರಿಣಮಿಸಿದ ಕಾರಣ ಮುದ್ದಣನನ್ನು ಟೀಕಿಸಲು ಅವಕಾಶವಾಯಿತೇ ಹೊರತು ಬೇರೆಯ ಸಹಜ ರೀತಿಯಿಂದಲ್ಲ. ಮುದ್ದಣನು ಬದುಕಿದ್ದರೆ ಹೊಸಗನ್ನಡ ಗದ್ಯಕ್ಕೂ ಪ್ರಯತ್ನಿಸುತ್ತಿದ್ದನೆಂಬುದರಲ್ಲಿ ಸಂಶಯವಿರಲಾರದು. ಈ ವಿಮರ್ಶಕರ ಪ್ರಯತ್ನವನ್ನು ನಾವು ಮುದ್ದಣನನ್ನು ಕುರಿತ ಒಂದು ಅತಿರೇಕವೆಂದೂ ಹೇಳಬೇಕಾದೀತು.

ಆದರೆ ಅವರೇ ಶ್ರೀರಾಮಾಶ್ವಮೇಧದ ಒಂದು ಭಾಗವನ್ನು ಅಂದರೆ ಅದರ ಪ್ರಸ್ತಾವನಾ ಭಾಗದ ಹಳಗನ್ನಡ ಗದ್ಯವನ್ನೂ ಮೆಚ್ಚಿಕೊಳ್ಳುತ್ತಾರೆ. ಮುದ್ದಣನ ಯಶಸ್ಸು ಹಬ್ಬಿ ಹರಡಿ ನಿಲ್ಲುವುದಕ್ಕೆ ಅವನ ಪಾತ್ರ, ಕಥೆ, ವರ್ಣನೆ ಯಾವುದೂ ಊರೆಗೋಲಲ್ಲ. ಅವನ ಗದ್ಯದ ಧಾಟಿ ಮತ್ತು ಮುದ್ದಣ–ಮನೋರಮಾ ಪ್ರಕರೀ. ಇವೆರಡೇ ಆ ಪರಾಕ್ರಮ ಪೌರುಷವನ್ನು ಹೊಂದಿದುವು. ಹಿಂದಿನ ಗದ್ಯವಾವುದರಲ್ಲಿಯೂ ಇಲ್ಲದ, ಆಶಾಜನಕವಾದ, ಮೋಹಕರವಾದ ಸರಣಿ ಅಥವಾ ವಿನ್ಯಾಸವು 'ರಾಮಾಶ್ವಮೇಧ'ದ ಒಂದು ಹೊಳಪು. ವಿಸ್ತಾರವಾಗಿ, ಸಂಕೋಚವಾಗಿ, ಏರಿ, ಇಳಿದು, ಬಾಲಕೇಳಿಯಾಡಿ, ವೃದ್ಧ ಗಾಂಭೀರ್ಯವನ್ನು ತೋರಿ, ನಾನಾ ಮಾರ್ಗಗಳನ್ನು ಹೊಕ್ಕು ಗದ್ಯಗತಿಯು ವೈವಿಧ್ಯದಿಂದ ಹೃದಯಂಗಮವಾಗಿದೆ... ಇತ್ಯಾದಿ ಹೊಗಳಿರುವುದೂ ಉಂಟು.

"ಇನ್ನು ಉಳಿದಿರುವ ಹೊರಕಟ್ಟನ್ನು ಪ್ರಸ್ತಾವಿಸೋಣ. ನಿಜವಾಗಿಯೂ ಅಮೂಲ್ಯವಾದ ಮುದ್ದಣ–ಮನೋರಮಾ ರೂಪದ ಹಂಚಿಕೆಯಲ್ಲಿ ಕಥೆಯನ್ನು ಹರಿಸಿಕೊಂಡು ಹೋಗುವ ಸಂವಾದ ಚಿತ್ತವು ಅವನಿಗೆ ಸರಸ್ವತಿಯ ವರದ ಹಸ್ತದಿಂದಲೇ ಒದಗಿರಬೇಕು." – ಹೀಗೆ ಹೊಗಳುವುದರಲ್ಲಿ 'ಶ್ರೀರಾಮಾಶ್ವಮೇಧ'ವನ್ನು ಎಸ್. ವಿ. ರಂಗಣ್ಣನವರು 'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು' ಎಂದು ಕರೆಯುತ್ತಾರೆ. ಇವರಿಗೆ 'ಪಂಜೆ' ಮೊದಲಾದವರು ಮುದ್ದಣನನ್ನು ಜಗತ್ತಿನ ಶ್ರೇಷ್ಠ ಸಾಹಿತಿಗಳ ಮಟ್ಟಕ್ಕೆ ಏರಿಸುವ ಇಚ್ಛೆಯಿಲ್ಲ. ಆದುದರಿಂದ ಅಷ್ಟನ್ನು ಖಂಡಿಸುವ ಪ್ರಯತ್ನವನ್ನಂತೂ ಮಾಡಿದ್ದಾರೆ. ಆದರೂ ಈ ಬರಹವು ಸರಿಯಾಗಿ ಅರ್ಥ ಮಾಡಿಕೊಳ್ಳಲು ಅನುಕೂಲವಾದ ವಿಮರ್ಶೆಯಾಗಿಲ್ಲ. (೧) ಮೊದಲಿಗೆ ಮುದ್ದಣನ ಶೈಲಿಯನ್ನು ಆತನ ಎಲ್ಲಾ ಕೃತಿಗಳಲ್ಲೂ ಒಂದೇ ರೀತಿಯೆಂದು ನಂಬಿಕೊಂಡಂತೆ ಅದರ ಶೈಲಿಯನ್ನು ಟೀಕಿಸುತ್ತಾರೆ. (೨) ಈ ಟೀಕೆಗೂ ಅವರ ಮನಸ್ಸಿನಲ್ಲಿ ಹಳಗನ್ನಡ ಗದ್ಯದ ಅಥವಾ ಇಲ್ಲವಾಗಿದ್ದ ಕನ್ನಡ ಗದ್ಯದ ಶೈಲಿಯ ಸಾಧ್ಯತೆಗಳನ್ನು ಪರಿಶೀಲಿಸುವ ಕ್ರಮದಂತೆ ಕಂಡುಬರುವುದಿಲ್ಲ. (೩) ಆತನಿನ್ನೂ ಪ್ರಯೋಗಗಳ ಮೂಲಕ ಹೊಸಗನ್ನಡ ಗದ್ಯಕ್ಕೆ ಅಥವಾ ಅದರ ಕಡೆಗೆ ವಿಕಾಸವಾಗುತ್ತಿದ್ದನೆಂಬುದನ್ನೂ ಸ್ಪಷ್ಟವಾಗಿ ಗುರುತಿಸಿದಂತಿಲ್ಲ. ಇಲ್ಲದಿದ್ದರೆ ಶ್ರೀರಾಮಾಶ್ವಮೇಧದ ಗದ್ಯವನ್ನು ಕುರಿತು ಹೊಗಳುವುದೂ ತೆಗಳುವುದೂ ಏಕಕಾಲದಲ್ಲಿ ಆದಂತೆ ಆಗುತ್ತದೆ. ಅವರು ನೀಡಿರುವ ಉದಾಹರಣೆಗಳೆಲ್ಲವೂ ಶ್ರೀರಾಮಾಶ್ವಮೇಧದಿಂದ ಆಯ್ದ ವಾಕ್ಯಗಳೆಂಬುದನ್ನು ಮರೆಯುವಂತಿಲ್ಲ. ಅವರು ಮೆಚ್ಚಿಕೊಳ್ಳುವುದೂ ಅದರ ಒಂದು ಭಾಗವನ್ನೇ. ಆದುದರಿಂದ ವಿರೋಧಾಭಾಸವಾಗುವುದನ್ನು ಮರೆಯುವಂತಿಲ್ಲ.

ಮುದ್ದಣನ ವೈಶಿಷ್ಟ್ಯವನ್ನು ತ. ಸು. ಶಾಮರಾಯರು "ಇತರರು ಹಾಕಿದ ಸಂಪ್ರದಾಯಕ್ಕೆ ಶರಣಾಗದೆ, ತನ್ನದೇ ಆದ ನೂತನ ಸಂಪ್ರದಾಯವೊಂದನ್ನು ಸೃಷ್ಟಿಸಬಲ್ಲ ಪ್ರತಿಭೆಯೇ. ಓರಿತನಕ್ಕೆ ಹೆಗ್ಗುರುತು" ಎಂದಿದ್ದಾರೆ. ಮತ್ತೆ "ಸುಮಾರು ಎರಡು ಶತಮಾನಗಳ ದೊಡ್ಡ ಮರಳು ಕಾಡೊಂದನ್ನು (ಕನ್ನಡ ಸಾಹಿತ್ಯ ಯಾತ್ರೆಯಲ್ಲಿ ೧೮ ಮತ್ತು ೧೯ನೇ ಶತಮಾನಗಳನ್ನೂ ಕುರಿತು) ದಾಟಬೇಕಾಗುತ್ತದೆ. ಆ ಮರಭೂಮಿಯ ಈಚೆಯ ಕೊನೆಯಲ್ಲಿ ಕಂಡುಬರುವ ನಂದನ ವನದ ಹೆಬ್ಬಾಗಿಲೇ ಮುದ್ದಣ ಕವಿ" ಎನ್ನುತ್ತಾರೆ. ಇದು ಐತಿಹಾಸಿಕವಾಗಿ ಮುದ್ದಣನನ್ನು ಪರಿಗಣಿಸಿದುದರ ಫಲವಾಗಿದೆ. ಆದುದರಿಂದ "ಆಧುನಿಕ ಕನ್ನಡಯುಗ ಆರಂಭವಾಗುವುದು ಮುದ್ದಣನಿಂದ. ಕನ್ನಡ ಯಾರಿಗೂ ಬೇಡದ ವಸ್ತುವಾಗಿದ್ದಾಗ ಅದಕ್ಕೆ ನೀರು ಹೊಯ್ದು ಬೆಳೆಸಿದ ಕೀರ್ತಿ ಮುದ್ದಣನದು. ಸಂಪ್ರದಾಯ ನೂತನ ಮಾರ್ಗಗಳೆರಡನ್ನೂ ಸಂಗಮಗೊಳಿಸಿ, ಇಬ್ಬಣದವರ ದೃಷ್ಟಿಯನ್ನೂ ಏಕಕಾಲದಲ್ಲಿ ಆಕರ್ಷಿಸಿದ ಪೌರುಷ ಆತನದು. ತಾನು ಬರೆದ ಕಥೆಗಳು 'ಉಳಿದೊಡಂ ಅಳಿದೊಡಂ ಬಟ್ಟೆದೋರಿಪ' ಪುರಾಣ ಕಥನಗಳು. ಆದರೆ ಅವುಗಳನ್ನು ಬರೆದ ರೀತಿ ನವೀನವಾದುದು." ಎಂಬುದು ಸ್ಪಷ್ಟವಾಗಿದೆ.

ಕವಿಕಾವ್ಯ ಪರಂಪರೆಯ 'ಮುದ್ದಣ' ಕೃತಿಯಲ್ಲಿ ಸಮೀಕ್ಷೆ ಮಾಡಿರುವ ವಿ. ಸೀತಾರಾಮಯ್ಯನವರು 'ಹಳತರಲ್ಲಿ ಹೊಸ ಜಾಣ್ಮೆಯನ್ನು ಪ್ರಚುರಗೊಳಿಸುವುದು ಒಂದು ಸ್ವಂತಿಕೆಯ ಲಕ್ಷಣವಾಗಬೇಕೆಂಬುದು ಬಹುಶಃ ಮೊದಲಿಂದಲೂ ಅವರ ಮನಸ್ಸಿನಲ್ಲಿ ಹುಟ್ಟಿ ಬೆಳೆದ ಕಾಮನವಾಗಿರಬೇಕು. ಆ ಎರಡೂ ಯಕ್ಷಗಾನಗಳೂ ಹೆಚ್ಚಾಗಿ ಜನಪ್ರಿಯವಾಗಲಿಲ್ಲವಾದರೂ ಅಲ್ಲಿನ ಕಾವ್ಯ ಗುಣವನ್ನು, ಕಲ್ಪನಾ ಸಾಮರ್ಥ್ಯವನ್ನು ಸಾಹಿತ್ಯಕವಾದ ಮೆಚ್ಚಿಕೆಯನ್ನೂ ಲಯ ಸೌಷ್ಠವವನ್ನೂ ಸಂಗೀತದ ರಾಗ, ಕುಣಿತದ ತಾಳ ವೈಶಿಷ್ಟ್ಯವನ್ನೂ ಆಗಿನ ಕಾಲದ ಮಾನ್ಯರೆಲ್ಲ ಗುರುತಿಸಿ ಒಂದು ಹೊಸ ಸಾಹಿತ್ಯ ನಿರ್ಮಾಣ ಶಕ್ತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣಬಂದಿದೆ, ಅದರಿಂದ ಮಹಾಫಲಗಳನ್ನು ನಿರೀಕ್ಷಿಸಬಹುದು ಎಂಬ ಭರವಸೆ ಇಟ್ಟುಕೊಂಡಿದ್ದರು' ಎಂದು ಆತನ ಪ್ರಭಾವಲಯದ ಆಶೋತ್ತರಗಳನ್ನು ಗುರುತಿಸಿ ಅಜ್ಞಾತವಾಗಿದ್ದ ಕವಿಯ ಹೆಸರು ಖಚಿತವಾದುದನ್ನು "ಇಂದು ಈ ಐದು ಕೃತಿಗಳ ಕರ್ತೃ ನಂದಳಿಕೆ ಲಕ್ಷ್ಮೀನಾರಣಪ್ಪನೇ – ಎಂದರೆ ಮುದ್ದಣನೇ – ಎಂಬ ವಿಶ್ವಾಸ ಸ್ಥಾಪನೆಯಾಗಿದೆ." ಎಂದು ಗುರುತಿಸುತ್ತಾರೆ.

ಕ್ಯಾಥೊಲಿಕ್ ಮಿಷನರಿಗಳ ಪ್ರಯತ್ನದಿಂದ ೧೯ನೇ ಶತಮಾನದಲ್ಲಿ ಬೆಳಕಿಗೆ ಬಂದ ಮತ್ತು ಅನುವಾದದ ಮೂಲಕ ಕಾಣಿಸಿಕೊಂಡ ಸಾಹಿತ್ಯ ಕೃತಿಗಳು – "ಇದೆಲ್ಲ ಹಿನ್ನೆಲೆ; ಆವರಣ. ಆದರೆ ಇದರಿಂದೆಲ್ಲ ನಂದಳಿಕೆಯವರು ಪ್ರಭಾವಿತರಾದ ಹಾಗೆ ಕಾಣೆ. ಹಾಗೆಯೇ, ಬಹುಶಃ ಮೈಸೂರಿನಲ್ಲಿ ಪ್ರಚಲಿತವಾಗಿದ್ದ ಕೃಷ್ಣರಾಜ ಒಡೆಯರ ಶಾಕುಂತಲದ ನವೀನ ಟೀಕೆ, ಭಾರತ, ಆ ಕಾಲದಲ್ಲಿ ಹೊರಗೆ ಬಂದ ರಾಜಾವಳಿ ಕಥೆ, ಕ್ರಿಶ್ಚಿಯನ್ ಪಾದ್ರಿಗಳವರು ಪ್ರಕಟಿಸಿದ ಮುದ್ರಾ ಮಂಜೂಷ

ಮುಂತಾದವುಗಳ ಗದ್ಯ ನಂದಳಿಕೆಯವರಿಗೆ ಅಷ್ಟೇ ತಟ್ಟಲಿಲ್ಲವೆನ್ನಿಸುತ್ತದೆ. ಎಸ್. ಜಿ. ನರಸಿಂಹಾಚಾರ್ಯರ ಅಥವಾ ಹಟ್ಟಿಯಂಗಡಿ ನಾರಾಯಣರಾಯರ ಕವಿತಾ ವಿಧಾನಗಳಾಗಲಿ, ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದ ಹಾಗೆ ಕಾಣೆ. ಕನ್ನಡದ ಮಹಾಕವಿ ಪಂಕ್ತಿಯಲ್ಲಿ ನಿಷ್ಠರಾಗಿ ತನ್ನ ಅಭಿರುಚಿಯನ್ನೂ ವಿಶ್ವಾಸವನ್ನೂ ಬಲಗೊಳಿಸಿಕೊಂಡವರು ಅವರು. ಕಾವ್ಯ ಸಂಪ್ರದಾಯ ಎಂಥದು, ಉತ್ತಮ ಕಾವ್ಯದಲ್ಲಿ ಯಾವ ಶಬ್ದಗುಣ, ಅರ್ಥಗುಣ, ಸಮಯ–ಸಂಕೇತ, ವರ್ಣನೆ ಇರಬೇಕು – ಗದ್ಯ ಕೃತಿಯಾಗಲಿ ಪದ್ಯ ಕೃತಿಯಾಗಲಿ ಹಿಂದಿನದನ್ನು ಮಾನ್ಯ ಮಾಡಿದರೆ ಅದಕ್ಕೆ ಮಹತ್ವವನ್ನು ಗೌರವವನ್ನೂ ಕೊಡುವದಾದರೆ ಆ ಎಲ್ಲವನ್ನೂ ಕರತಲಾಮಲಕ ಮಾಡಿಕೊಂಡಿದ್ದವರು ಅಖಂಡವಾದ ಒಂದು ಗದ್ಯ ಕಾವ್ಯವನ್ನು ಬರೆದು, ಅದರ ಸಾರವನ್ನು ಒಂದು ಒಟ್ಟು ಕತೆಗೆ ತಂದುಕೊಟ್ಟ ನಂದಳಿಕೆಯವರ ಗದ್ಯ ಶೈಲಿಯನ್ನು ಇಳಿಕೆಗೈಯುವುದು ಸರಿಯಾಗದು." ಎಂದು ಸ್ಪಷ್ಟಪಡಿಸಿದ್ದಾರೆ.

ಮುದ್ದಣ ಬರೆಯುತ್ತಿದ್ದಾಗ ಅಂದರೆ ೧೯ನೇ ಶತಮಾನದ ಕೊನೆಯ ದಶಕದಲ್ಲಿ ಪಂಪನ ಕೃತಿಗಳು ಅಚ್ಚಾಗಿರಲಿಲ್ಲ. ಆತನ ಆದಿ ಪುರಾಣಂ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ ಸೀರೀಸ್‌ನಲ್ಲಿ ಕನ್ನಡ ಸೆಕ್ಷನ್ ನಂ. ೧ ಕ್ರಿ. ಶ. ೧೯೦೦ರಲ್ಲಿ ಎಸ್. ಜಿ. ನರಸಿಂಹಾಚಾರ್ಯರಿಂದ ಸಂಪಾದಿತವಾಗಿ ಬಂದಿದೆ. ವಡ್ಡಾರಾಧನೆಯನ್ನಾಗಲಿ ಹರಿಹರನ ರಗಳೆಗಳನ್ನಾಗಲಿ ಮುದ್ದಣನು ಕಂಡಿರಲಾರನೆಂಬುದನ್ನು ವೀಸಿಯವರು ಸ್ಪಷ್ಟಪಡಿಸಿದ್ದಾರೆ "ಆದುದರಿಂದ ಷಟ್ಪದೀ ಕಾಲದಿಂದ ಈಚಿನ ಹಳಗನ್ನಡ ಗದ್ಯ ಶೈಲಿಯ ಮುಡಿಯಂತಿರುವ ಒಂದು ಗದ್ಯ ಶೈಲಿ ಮುದ್ದಣನದಾಗುತ್ತದೆ. ಇವನ್ನು ಪುರಸ್ಕರಿಸುವಾಗ ಮನಸ್ಸಿನಲ್ಲಿ ಯಾವ ಕಾರ್ಪಣ್ಯಗಳನ್ನೂ ಇಟ್ಟುಕೊಳ್ಳದಿದ್ದರೆ ಮೇಲು. ಇಂಗ್ಲಿಷ್‌ನ 'prose' ಎಂಬ ಗದ್ಯ ಸಾಹಿತ್ಯವನ್ನು ಕುರಿತು ಬರೆಯುವಾಗ The other Harmony ಎಂಬ ಲಯ ಮೇಳವನ್ನು ಒಪ್ಪುವುದುಂಟು. ಆ Harmonyಯನ್ನು ರಾಮಾಶ್ವಮೇಧದಲ್ಲಿ ಪುಷ್ಕಳವಾಗಿ ಕಾಣಬಹುದು" ಎಂದು ನಿರ್ಧರಿಸಿದ್ದಾರೆ.

ವೀಸೀಯವರಂತೆ ಮುದ್ದಣನ ರಾಮಾಶ್ವಮೇಧ ಕನ್ನಡಿಗರಿಗೆ ಪರಿಚಯವಾದದ್ದು ೧೯೨೦ರ ಈಚೆಗೆ. ಈ ಗ್ರಂಥವು ಮೊದಲು 'ಕರ್ಣಾಟಕ ಕಾವ್ಯಕಲಾನಿಧಿ' ಪತ್ರಿಕೆಯಲ್ಲಿ ೧೯೦೧ರಲ್ಲಿ ಪ್ರಕಟಿಸಿ ಪೂರ್ಣಗೊಳಿಸಲಾಯಿತು. (ಎಂ. ಎ. ರಾಮಾನುಜಯ್ಯಂಗಾರ್) ೧೯೨೦ರಲ್ಲಿ ಇದರ ಸಂಗ್ರಹವನ್ನು ಪಠ್ಯಪುಸ್ತಕವಾಗಿಸಲು ಮ. ಪ್ರ. ಪೂಜಾರರು ಸಿದ್ಧಪಡಿಸಿದರು. ಬಹುಶಃ ಇದರ ಸಂಪಾದಕರ ವಿಮರ್ಶೆಯೇ ಮೊದಲನೆಯದೆಂದು ತೋರುತ್ತದೆ. The Home Life of a Kannada Poet ಎಂದು ಶ್ರೀ ಮಾಸ್ತಿಯವರು ಮದರಾಸಿನಿಂದ ಹೊರಡುತ್ತಿದ್ದ 'ಇಂಡಿಯನ್ ರೆವ್ಯೂ' ಪತ್ರಿಕೆ (೧೯೧೫ ?) ರಲ್ಲಿ ಬರೆದ ಲೇಖನವನ್ನು ವೀಸಿಯವರು ನೆನಪಿಗೆ ತರುತ್ತಾರೆ. ಮುಂದೆ ಮುದ್ದಣನ ಗದ್ಯವನ್ನು ಕುರಿತು "ಇಲ್ಲಿನ ಗದ್ಯ (ಅದ್ಭುತ ರಾಮಾಯಣವೂ ಸೇರಿದಂತೆ) ತುಂಬಾ ಸಾರವತ್ತಾದ್ದು;

ಗದ್ಯ ರಚನಾ ವೈಖರಿಯಲ್ಲಿ ಶಬ್ದಾಲಂಕಾರ, ಜಾಣ್ನುಡಿಯ ಚಾತುರಿಗಳಿಂದ ಹೇಗೆ ತನ್ನ ವಾಕ್ಯ ವೃಂದಗಳನ್ನು ಕವಿ ಕಟ್ಟುತ್ತಾನೆ ಎಂಬುದು ಯಾವ ಗದ್ಯಕಾರನಿಗೂ ಕೀರ್ತಿ ತರುವಂಥದು. Balance and Antithesis ಎಂಬ ಜಾಣು ಇಲ್ಲಿ ಬಹು ಕಾರ್ಯಕಾರಿ. ಒಂದು ಮಾತಿನಿಂದ ಇನ್ನೊಂದಕ್ಕೆ ಕಿಡಿ ಹರಡಿ, ಕಡೆಗೆ ಕ್ರಿಯಾ ನಿಲುವನ್ನೂ ಭಾವಬಂಧವನ್ನೂ ಸಾಧಿಸುತ್ತದೆ. ವಾಕ್ಯಗಳು ಚಿಕ್ಕವು : 'ಕಿರಿದರಲಿ ಪಿರಿದರ್ಥವನಿಕ್ಕುವ ಪೆಂಪು' ಎಂಬ ಗುಣ ವಿಶಿಷ್ಟದ್ದು. ಕವಿಯ ತದ್ಭವ ಪ್ರೀತಿ ವಿಚಿತ್ರ ವಿಚಿತ್ರ ರೂಪಗಳಲ್ಲಿ ಕೆಲವು ವೇಳೆ ಬೇಸರವನ್ನು ಕೂಡ ತರಬಲ್ಲದ್ದಾಗುತ್ತದೆ. ಆದರೆ ಇಮ 'ನಿಶ್ಚಯ ತಿರುಳ್ಗನ್ನಡಿಗನಡಿದಾವರೆಯ ಬಂಡುಣಿಗಳವು ಕನ್ನಡಕಬ್ಬಿಗರ ಮನೆಯೂಳಿಗನೊರ್ವನ್ ಪೇಳ್ದ ಗ್ರಂಥ' ಎಂಬುದು ಪ್ರಮಾಣೀಕೃತವಾಗುತ್ತದೆ. ನಾರೀ ರೂಪ ಚೆಲುವಲ್ಲಿ, ಭೀಕರತೆಯಲ್ಲಿ, ನಯ ಸೌಮ್ಯತೆಗಳಲ್ಲಿ, ನಾಶಕಾಂತೆಯಲ್ಲಿ ಹೇಗೆ ಕಾರ್ಯ ಮಾಡಬಲ್ಲದು ಎಂಬಂಶ ಇಂಥಲ್ಲಿ ವಿಶದವಾಗುತ್ತದೆ ಎಂಬ ಮಾತು ಒಂದು ವಿದೃಶ ಅತ್ಯುಕ್ತಿಯನ್ನು ಕಾಣಿಸುವಂಥದು. ಎಂಥವಳನ್ನು ತಾನು ಮದುವೆಯಾದೆ ಎಂದು ರಾಮನಿಗೇ ತಳಮಳವುಂಟು ಮಾಡಿತಂತೆ ಒಂದು ಪ್ರಸಂಗ !"

"... ಅರಿತು ವಿಮರ್ಶಕರು ನಡೆದರೆ ಬರೆವವರು ಬದುಕಿಕೊಂಡಾರು. ಇದು ಹೇಗೇ ಆಗಲಿ, ಒಂದು ಶೈಲಿಯ ಪರಮಾವಧಿ ಶಕ್ತಿ ದೌರ್ಬಲ್ಯಗಳು ಹೊರಗಾಣುವಂತೆ ರಾಮಾಶ್ವಮೇಧ ಕಾವ್ಯ ನಮಗೆ ಪ್ರಾತಿನಿಧಿಕವಾಗಿ ನಿಲ್ಲುವ ಗ್ರಂಥ"..... ಎಂದಿದ್ದಾರೆ.

ಮುದ್ದಣನನ್ನು ಕುರಿತ ಇಷ್ಟು ವೈವಿಧ್ಯಪೂರ್ಣ ವಿಮರ್ಶೆ ಇಷ್ಟೊಂದು ಚರ್ಚಾಸ್ಪದವಾಗಿ ಕನ್ನಡದ ಬೇರೆ ಯಾವ ಕವಿಯ ಬಗ್ಗೆಯೂ ನಡೆದಂತೆ ತೋರುವುದಿಲ್ಲ ! ಮುದ್ದಣನು ತಾನು ಬದುಕಿದ್ದಾಗ ಸ್ವಾಭಿಮಾನಿಯಿದ್ದಂತೆಯೇ ಅಳುಕು ಸ್ವಭಾವದವನೂ ಆಗಿದ್ದನೆಂಬುದನ್ನು ಗಮನಿಸಬೇಕಾಗುತ್ತದೆ. ಈ ವಿರೋಧಾಭಾಸದಲ್ಲಿಯೇ ಆತನ ವ್ಯಕ್ತಿತ್ವವು ರೂಪ ತಾಳಿರಬೇಕು. ಬೇರೆಯವರ ಋಣವನ್ನು ಹೊತ್ತವನೆಂಬ ಭಾವದ ತೀಕ್ಷ್ಣತೆಯಿಂದಾಗಿ ಈತನು ತಾನು 'ಕನ್ನಡ ಕಬ್ಬಿಗರ ಮನೆಯೂಳಿಗದವ'ನೆಂದು ಹೇಳಿಕೊಳ್ಳುತ್ತಾನೆ. ತನ್ನ ಪ್ರತಿಭೆಯ ಒತ್ತಂಬದಿಂದ ಭಾಷೆಯನ್ನು ಅದರ creative venture ಗಾಗಿ ಐದಾರು ಕೃತಿಗಳನ್ನೂ ರಚಿಸಿದ್ದಲ್ಲದೆ ಭಗವದ್ಗೀತೆ, ಕನ್ನಡ ರಾಮಾಯಣ ಮತ್ತು ಕಾಮಶಾಸ್ತ್ರಗಳನ್ನೂ ರಚಿಸುವ (?) ಕಾರ್ಯಕ್ರಮವನ್ನು ಗೊತ್ತು ಮಾಡಿಕೊಂಡಿದ್ದರೂ ಆಶ್ಚರ್ಯವಿಲ್ಲ. ಏಕೆಂದರೆ ಶ್ರೀರಾಮಾಶ್ವಮೇಧದಲ್ಲಿನ ಭಾಷೆಯ ತೀವ್ರತೆಯಲ್ಲದೆ ವೈವಿಧ್ಯ ಸಾಧ್ಯತೆಗಳು ಈತನ ಸಾಮರ್ಥ್ಯವನ್ನು ಸಾರಿ ಹೇಳುತ್ತವೆ. ಸಾಂಪ್ರದಾಯಿಕ ಮನೆತನದಲ್ಲಿ ಹುಟ್ಟಿ ಅಂಥದೇ ವಾತಾವರಣದಲ್ಲಿ ಬೆಳೆದರೂ ಈತನು ಉತ್ತರ ರಾಮಾಯಣದ ಕಥಾ ಭಾಗವನ್ನು ಹೇಳಹೊರಟದ್ದೇ ಒಂದು ಬಂಡಾಯದ ಗುರುತಾಗುತ್ತದೆ. (ಸಂಪ್ರದಾಯದಂತೆ ಉತ್ತರ ರಾಮಾಯಣವನ್ನು ಓದುವುದೂ ಕೇಳುವುದೂ ನಿಷಿದ್ಧ) ಮತ್ತೊಂದು

ವಿಷಯವೆಂದರೆ ಈತನು ಆಗತಾನೆ ಪ್ರಸಿದ್ಧಿಗೆ ಬಂದಿದ್ದ ಕಾದಂಬರಿಯ ಪ್ರಕಾರವನ್ನು ಮನಸ್ಸಿಗೆ ತಂದುಕೊಂಡು 'ಗೋದಾವರಿ' ಎಂಬ ಗ್ರಂಥ ರಚನೆಗೆ ಬೇಕಾಗಿದ್ದ ಪೂರ್ವ ಸಿದ್ಧತೆಗಳನ್ನು (with an out line) ಮಾಡಿಕೊಂಡಿದ್ದನೆಂಬುದಕ್ಕೆ 'ಸುವಾಸಿನಿ' ಪತ್ರಿಕೆಯು ಆಧಾರ ಸ್ಪಷ್ಟವಾಗಿದೆ. ಒಟ್ಟಿನಲ್ಲಿ ಮುದ್ದಣನು ಪ್ರತಿಭಾವಂತನೆಂಬುದು ಸುಸ್ಪಷ್ಟ. ತನ್ನ ಹೆಸರನ್ನು ಮರೆಮಾಚಿಕೊಂಡ ಕಾರಣದಿಂದ ತನಗೆ ತಿಳಿಯದಂಥ ಒಂದು ಗೊಂದಲದ ಸಂದರ್ಭವನ್ನು ಉಂಟು ಮಾಡಿದ ಕವಿ ಯಾವುದನ್ನೂ ಅರಿಯದೇ ಕ್ಷಯ ರೋಗದಿಂದ ಕಣ್ಣುಮುಚ್ಚಿದ.

ಮುದ್ದಣನಿಗೆ ನಮ್ಮ ಸಮಾಜದಲ್ಲಿ ಈ ದೇಶದಲ್ಲಿ ಸ್ತ್ರೀಯ ಪರಿಸ್ಥಿತಿ ಆಕೆಯ ಹುಟ್ಟು, ಬಾಲ್ಯ, ದಾಂಪತ್ಯ ಜೀವನ, ತಾಯಿತನ... ಸಯುವವರೆಗೂ ಯಾವುದೇ ಹಂತದಲ್ಲಾಗಲಿ ಸಮಸ್ಯಾತ್ಮಕವಾಗಿ ಕಂಡಿರಬೇಕು. ಮನೋರಮೆಯ ಮಾತಿನ ಒಂದು ಸಿಲುಖಿನಲ್ಲಿ 'ಅಂ ಪರಾಧೀನೆ ಗಡ !' ಎನ್ನುವ ಮಾತನ್ನು ಗಮನಿಸಬಹುದು. ಒಟ್ಟಿನಲ್ಲಿ ಮುದ್ದಣನು ರಾಮಾಯಣವನ್ನು ಹೆಚ್ಚಾಗಿ ಹಚ್ಚಿಕೊಂಡಿರುವುದರಲ್ಲಿಯೂ ಸ್ತ್ರೀಯ ಪರಿಸ್ಥಿತಿಯನ್ನು ಚೆನ್ನಾಗಿ ಗಮನಿಸಿದಂತೆ ತೋರುತ್ತಾನೆ. ಹಲವು ಪಂಡಿತರು 'ಅಶ್ಲೀಲ'ವೆಂದು ಮೂಗು ಮುರಿಯುವಷ್ಟು ಮಟ್ಟಿನ ಪದ ಪ್ರಯೋಗಗಳನ್ನು ಸಾಧಿಸಿದ್ದಾನೆ. ವಾಸ್ತವವಾಗಿ ಈ ಬಗೆಯ ಪ್ರತಿಭಾ ಸ್ವಾತಂತ್ರ್ಯವು ಮಡಿವಂತಿಕೆಯನ್ನು ಹರಿದುಕೊಂಡು ಸ್ವಾತಂತ್ರ್ಯ ನಂತರ ಕನ್ನಡದಲ್ಲಿ ಕಟ್ಟೆಯೊಡೆದ ಪ್ರವಾಹದಂತೆ ಹರಿದಿರುವುದನ್ನು ನೆನಪಿಗೆ ತರುತ್ತದೆ. ಆದರೂ ನವ್ಯರಲ್ಲಿ ಕೂಡ ಮುದ್ದಣ-ಮನೋರಮೆಯರ ಏಕಾಂತದ ಪ್ರಾಮಾಣಿಕತೆಯನ್ನು ಪುನರ್ರಚಿಸಲೂ ಸಾಧ್ಯವಾಗಿಲ್ಲವೆಂದು ತೋರುತ್ತದೆ. ಅಲ್ಲದೆ ಮುದ್ದಣನಲ್ಲಿ ದಾಂಪತ್ಯದ ದಾರುಣವಾದ ವಾಸ್ತವತೆಯಲ್ಲದೆ ನವ್ಯರ ಅಶ್ಲೀಲತೆಯಿರುವುದಿಲ್ಲವೆಂಬುದೂ ಮುಖ್ಯ. ಈ ವಿಚಾರದಿಂದ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಮಡಿವಂತಿಕೆಯನ್ನು ಮೊದಲು ಮುರಿದವನೇ ಮುದ್ದಣನೆಂದರೆ ತಪ್ಪಾಗುವುದಿಲ್ಲ. ಈ ಹಿಂದೆ ಕನ್ನಡ ಸಾಹಿತ್ಯದಲ್ಲಿ ಶೃಂಗಾರ ಪೂರ್ಣ ವರ್ಣನೆಗಳು ಹೇರಳವಾಗಿದ್ದರೂ ಅವುಗಳಲ್ಲಿ ಕಾಮಶಾಸ್ತ್ರದ ಪ್ರಭಾವವೇ ಹೊರತು ನಮ್ಮ ಜನಜೀವನದ ವಾಸ್ತವತೆಯಿಂದ ರೂಪ ತಾಳಿದ ದಾಂಪತ್ಯದ ಸಂದರ್ಭವಿರಲಿಲ್ಲ... ಈ ಪ್ರಾಮಾಣಿಕವಾದ ಮುದ್ರೆಯು ದೆಸೆಯಿಂದಾಗಿಯೇ ಎಸ್. ವಿ. ರಂಗಣ್ಣನಂಥವರೂ ಮುದ್ದಣನಿಗೆ ಮನಸೋಲುವಂತೆ ತೋರುತ್ತದೆ. ನಿಜಕ್ಕೂ ಹೊಸಗನ್ನಡ ಸಾಹಿತ್ಯಕ್ಕೆ ನ್ಯಾಯವಾದ ತಳಪಾಯವು ಶ್ರೀರಾಮಾಶ್ವಮೇಧದ ಪೀಠಿಕೆಯಿಂದ ಆಗಿದೆಯೆಂದು ಹೇಳಬಹುದು.

ಇಂತಹ ಕವಿ ಕಳೆದ ೮೦ ವರ್ಷಗಳಲ್ಲಿ ಇನ್ನೂ ಚರ್ಚಾಸ್ಪದನಾಗಿರುವುದು ಒಂದು ಮಹತ್ವದ ಸಂಗತಿಯೇ ಆಗಿದೆ.

**ಪರಾಮರ್ಶನ ಸಾಮಗ್ರಿ :**

೧. ರತ್ನಾವತೀ ಕಲ್ಯಾಣ (ಯಕ್ಷಗಾನ ಕೃತಿ)

೨. ಕುಮಾರ ವಿಜಯ (ಅದೇ)
೩. ಶ್ರೀರಾಮ ಪಟ್ಟಾಭಿಷೇಕಂ (ಷಟ್ಪದಿ ಕಾವ್ಯ)
೪. ಅದ್ಭುತ ರಾಮಾಯಣಂ (ಗದ್ಯ ಕಾವ್ಯ)
೫. ಜೋ ಜೋ (ಒಂದು ಪ್ರಬಂಧ)
೬. ಶ್ರೀ ರಾಮಾಶ್ವಮೇಧಂ (ಗದ್ಯ ಕಾವ್ಯ)
೭. ಮ. ಪ್ರ. ಪೂಜಾರ (ಸಂ) : ಶ್ರೀರಾಮಾಶ್ವಮೇಧ ಸಾರಸಂಗ್ರಹ (೧೯೨೦)
೮. ಎಂ. ಎ. ರಾಮಾನುಜಯ್ಯಂಗಾರ್ : ಮೂಲಕೃತಿ, ಕರ್ನಾಟಕ ಕಾವ್ಯ ಕಲಾನಿಧಿ (೧೯೦೧)
೯. ಎಸ್. ವಿ. ಪರಮೇಶ್ವರ ಭಟ್ಟ : (ಮೂಲಕೃತಿ) ಕಾವ್ಯಾಲಯ ಪ್ರಕಾಶನ (೧೯೫೫)
೧೦. ಎನ್. ಅನಂತರಂಗಾಚಾರ್ : ಶ್ರೀರಾಮಾಶ್ವಮೇಧ ಸಂಗ್ರಹಂ
೧೧. ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ : ಶ್ರೀರಾಮಾಶ್ವಮೇಧಂ, ಗೌರಿಶಂಕರ ಬುಕ್ ಡಿಪೋ (೧೯೭೨)
೧೨. ಎಂ. ಎ. ರಾಮಾನುಜಯ್ಯಂಗಾರ್ : ಶ್ರೀರಾಮ ಪಟ್ಟಾಭಿಷೇಕಂ, ಕರ್ನಾಟಕ ಕಾವ್ಯಮಂಜರಿ (೧೯೨೪)
೧೩. ಎಂ. ಎ. ರಾಮಾನುಜಯ್ಯಂಗಾರ್ : ಅದ್ಭುತ ರಾಮಾಯಣಂ, ಕರ್ನಾಟಕ ಕಾವ್ಯ ಕಲಾನಿಧಿ (೧೯೨೩)
೧೪. ಮುದ್ದಣ : ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘ, ಬೆಂಗಳೂರು (೧೯೨೬)
೧೫. ತ. ಸು. ಶ್ಯಾಮರಾಯ : ಮುದ್ದಣ, ಮೈಸೂರು ವಿಶ್ವವಿದ್ಯಾಲಯ (೧೯೪೩)
೧೬. ಮುದ್ದಣ : ಸಂ. ಪೀಸಿ : ಐ. ಬಿ. ಹೆಚ್. ಪ್ರಕಾಶನ (೧೯೭೮)
೧೭. ಯಕ್ಷಗಾನ ವಿವೇಚನೆ, ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ (೧೯೬೯)
೧೮. ಯಕ್ಷಗಾನ ಚರಿತ್ರೆ ಮತ್ತು ಮುದ್ದಣ ಮಹಾಕವಿ, ಮುದ್ದಣ ಶತಮಾನೋತ್ಸವ ಸಮಿತಿ, ಮುಂಬಯಿ (೧೯೭೦)
೧೯. ಎಸ್. ವಿ. ರಂಗಣ್ಣ : ಹೊನ್ನಶೂಲ, ಶಾರದಾಮಂದಿರ, ಮೈಸೂರು (೧೯೫೯)
೨೦. ಕರ್ಮವೀರ ವಿಶೇಷ ಸಂ. ೪೨, ಸಂ. ೩೫ (೧೮-೦೧-೧೯೯೦)

---

ಕೃಪೆ : ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ೬ (೧೯೯೧)

*****

# 'ಅದ್ಭುತ ರಾಮಾಯಣಂ'ದ ಪ್ರಸ್ತಾವನೆ

ಎಸ್.ವಿ. ಪರಮೇಶ್ವರ ಭಟ್ಟ

## ಮುದ್ದಣ ಕವಿಯ ಜೀವನ ವೃತ್ತಾಂತ

೧

ತುಳುನಾಡಿನ ಕಾವ್ಯಾಕಾಶದಲ್ಲಿ ಉದಯಿಸುತ್ತಿದ್ದ ತರುಣ ಭಾಸ್ಕರನೆಂದೂ ಹೊಸಗನ್ನಡದ ಕಾವ್ಯಾರಾಮದಲ್ಲಿ ಮೊದಲು ಕೂಗಿದ ಕೋಗಿಲೆಯೆಂದೂ ಕರ್ಣಾಟ ಕವಿ ಚೂತವನವನ್ನು ದಾಟಿ ಷಡಕ್ಷರಿಯ ಗಿರಿದುರ್ಗವನ್ನು ಮುಟ್ಟಿದ ಪಂಡಿತ ಮಹನೀಯನೆಂದೂ ಕನ್ನಡ ದೇವಿಯ ದೇವಸ್ಥಾನದ ಹೊರ ಸುತ್ತಿನಲ್ಲಿಯೇ ನಿಂತು ಯಕ್ಷಗಾನ ಸೇವೆಯನ್ನು ಮಾಡುವ ಭಾಗವತನಾಗಿರದೆ ಆ ಸರಸ್ವತಿಯ ಸಾನ್ನಿಧ್ಯವನ್ನು ಸೇರಿದ ಶುದ್ಧೋಪಾಸಕನೆಂದೂ ಪುರಾತನ ನೂತನ ಮಾರ್ಗದ್ವಯ ಸಮನ್ವಯಾಚಾರ್ಯನೆಂದೂ ರಾಮಾಶ್ವಮೇಧದ ಸಾಮಾನ್ಯ ಕಥಾಚಿತ್ರಕ್ಕೆ ಮುದ್ದಣ ಮನೋರಮೆಯರ ಸರಸ ಸಂವಾದದ ಸುವರ್ಣದ ಚೌಕಟ್ಟನ್ನು ನಿರ್ಮಿಸಿದ ರಸಿಕ ಶಿಖಾಮಣಿಯೆಂದೂ ನಿರ್ದುಷ್ಟವಾದ ಹಾಸ್ಯರಸದ ಪ್ರವಾಹವನ್ನು ತೆರೆ ತೆರೆಯಾಗಿ ಉಕ್ಕೇರಿಸಿದ ನಗೆಗಾರನೆಂದೂ ಪ್ರಕೃತಿ ಸೌಂದರ್ಯ ವರ್ಣನೆಯಲ್ಲಿ ಕಾಳಿದಾಸ, ಷೇಕ್ಸ್ಪಿಯರರಿಗಿಂತ ಬಹಳ ಕಡಮೆಯಾದವನಲ್ಲವೆಂದೂ ವಿಶ್ವಸಾಹಿತ್ಯ ಸಮ್ಮೇಳನದಲ್ಲಿ ತುಳುನಾಡಿನ ಪ್ರಾತಿನಿಧ್ಯಕ್ಕೆ ರತ್ನಾಕರ ಸಿದ್ಧನ ಜತೆಗೆ ನಿಲ್ಲುವ ಕವಿವರೇಣ್ಯನೆಂದೂ ಬಗೆಬಗೆಯಾಗಿ ಪ್ರಶಂಸಿತನಾಗಿರುವ ನಂದಳಿಕೆಯ ಲಕ್ಷ್ಮೀನಾರಾಯಣ ಕವಿ 'ಅದ್ಭುತರಾಮಾಯಣ'ದ ಕರ್ತೃ ಎನ್ನುವುದು ಎಂತಹ ಅಭಿಮಾನದ ಸಂಗತಿ ! ತನ್ನ ನಿಜವಾದ ಹೆಸರಿನಲ್ಲಿ 'ರತ್ನಾವತೀ ಕಲ್ಯಾಣ', 'ಕುಮಾರ ವಿಜಯ' ಎಂಬ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ ಈ ಕವಿಯೇ 'ತಿರುಳ್ಗನ್ನಡಿಗನಡಿ ದಾವರೆಯಃ ಬಂಡುಣಿಗಳಪ್ಪ ಕನ್ನಡಗಬ್ಬಿಗರ ಮನೆಯೊಳಿಗದವನೊರ್ವಂ ಕನ್ನಡಿಗಂ', 'ಚಾವಡಿ ರಂಗಭಟ್ಟನಾತ್ಮಜೆ ಮಹಾಲಕ್ಷ್ಮಿ', 'ಕಬ್ಬಿಗರ ಬಲ್ಲಹಂ ಮುದ್ದಣಂ' ಎಂಬ ಬೇರೆ ಬೇರೆಯ ಮರೆ ಹೆಸರಿನಿಂದ 'ಅದ್ಭುತ ರಾಮಾಯಣ', 'ರಾಮಪಟ್ಟಾಭಿಷೇಕ', 'ರಾಮಾಶ್ವಮೇಧ' ಎಂಬ ಕೃತಿಗಳನ್ನು ರಚಿಸಿ ಅನ್ಯಕರ್ತೃಕತ್ವದ ಸೋಗಿನಿಂದ ರಸಿಕ ವಿದ್ವಜ್ಜನರನ್ನು ಹೇಗೆ ಬೆರಗುಗೊಳಿಸಿದನೆಂಬುದನ್ನು ನೆನೆದಾಗ ನಮ್ಮ ಈ ಅಭಿಮಾನ ಇಮ್ಮಡಿಯಾಗುತ್ತದೆ. ಜತೆಗೆ ಈ ಕವಿಯ ನಿರಾಡಂಬರವಾದ ಜೀವನವನ್ನೂ ಉನ್ನತವಾದ ಆದರ್ಶವನ್ನೂ

ನಿರಪೇಕ್ಷವಾದ ಭಾಷಾಭಿಮಾನವನ್ನೂ ನಿರ್ದುಷ್ಟವಾದ ರಸಿಕತೆಯನ್ನೂ ಕಷ್ಟಮಯವಾದ ಬಡತನದಲ್ಲಿಯೂ ಸರಸ್ವತಿಯ ಉಪಾಸಕನಾಗಿ ಪಾಂಡಿತ್ಯ ಕವಿತ್ವಗಳನ್ನು ಸಂಪಾದಿಸಿದ ಇವನ ಸಂತ್ಸಂಕಲ್ಪ ದೃಢನಿಶ್ಚಯಾದಿ ಗುಣಗಳನ್ನೂ ನೆನೆದಾಗ ಈ ಕವಿಯ ವಿಷಯಕವಾದ ನಮ್ಮ ಅಭಿಮಾನ ಇನ್ನಷ್ಟು ಉಕ್ಕೇರುತ್ತದೆ.

೨

ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿನಲ್ಲಿ ನಂದಳಿಕೆ ಎನ್ನುವುದು ಒಂದು ಗ್ರಾಮ. ಅಲ್ಲಲ್ಲಿ ಹಚ್ಚನೆಯ ಹಸಿರು ಹೊದ್ದು ಮಲಗಿದ ಭತ್ತದ ಹೊಲ ಗದ್ದೆಗಳಿಂದಲೂ ನಡುನಡುವೆ ಮಿಂಚಿನ ಝರಿಯಂತೆ ನೀರು ತುಂಬಿ ಹರಿಯುವ ತೊರೆತೋಡುಗಳಿಂದಲೂ ಅವುಗಳ ಪಕ್ಕದಲ್ಲಿ ಗರಿಗೊಡೆಗಳನ್ನು ಹಿಡಿದು ನಿಂತ ಧೀರವಾದ ತೆಂಗಿನ ಮರದ ಸಾಲುಗಳಿಂದಲೂ ಇವುಗಳ ಎಡೆಯಲ್ಲಿ ಪ್ರಕೃತಿಮಾತೆಯ ಮಡಿಲಿನಲ್ಲಿ ವಿಶ್ರಮಿಸಿಕೊಳ್ಳುತ್ತಿರುವಂತೆ ತೋರುವ ತೆಂಗಿನ ಮಡಿಲುಗಳಿಂದ ಮಾಡು ಹೊದಿಸಿದ ಮನೆಗಳಿಂದಲೂ ಈ ಗ್ರಾಮ ಮನೋಹರವಾಗಿದೆ. ನಿಸರ್ಗ ಸಿದ್ಧವಾದ ಈ ಮನೋಹರತೆಗೆ ಕಳಶವಿಟ್ಟಂತೆ ಊರಿನ ಕಾವಲು ದೈವವಿರುವ ಗ್ರಾಮದೇವಸ್ಥಾವವೊಂದು ಕಂಗೊಳಿಸುತ್ತಿದೆ. ಈ ದೇವಸ್ಥಾನಕ್ಕೆ ಪಶ್ಚಿಮದಲ್ಲಿ ಈಗ ಪಾಳುಬಿದ್ದಿರುವ ಒಂದು ನೆಲಗಟ್ಟಿನಲ್ಲಿಯೇ ಎಂಬತ್ತು ವರ್ಷಗಳ ಹಿಂದೆ ಈ ಕವಿಯ ತಂದೆತಾಯಿಯರು ಮನೆ ಕಟ್ಟಿಕೊಂಡು ವಾಸವಾಗಿದ್ದರೆಂದು ತಿಳಿದವರು ಹೇಳುತ್ತಾರೆ. ಪಾತಾಳಿ ತಿಮ್ಮಪ್ಪಯ್ಯ ಎನ್ನುವವರೇ ಕವಿಯ ತಂದೆಯೆಂದೂ ಮಹಾಲಕ್ಷ್ಮಮ್ಮ ಎನ್ನುವವರೇ ತಾಯಿಯೆಂದೂ ತಿಳಿದು ಬಂದಿದೆ. ಈ ತಿಮ್ಮಪ್ಪಯ್ಯನವರು ಊರ ದೇವಸ್ಥಾನದಲ್ಲಿ ಕಟ್ಟಿಗೆ ಕೋಲು ಹಿಡಿಯುವ ಕೆಲಸವುಳ್ಳ ಪಾತಾಳಿಯಾಗಿದ್ದರಂತೆ. ಇವರು ದೇವಸ್ಥಾನದಲ್ಲಿ ಹೂ ಕಟ್ಟಿಕೊಡುವ ಕೆಲಸವನ್ನೂ ಕೈಗೊಂಡಿದ್ದರೆಂದೂ ತೋರುತ್ತದೆ. ಕೋಲು ಹಿಡಿಯುವ ಪಾತಾಳಿಯ ಕೆಲಸವಾಗಲೀ ಹೂವು ಕಟ್ಟುವ ಮಾಲೆಯ ಕೆಲಸವಾಗಲೀ ಇವರ ಮನೆತನಕ್ಕೆ ಮೊದಲಿನಿಂದ ಬಂದ ವೃತ್ತಿ. ಈ ವೃತ್ತಿಯಲ್ಲಿರುತ್ತ ದೇವರು ಕೊಟ್ಟಿದ್ದರಲ್ಲಿ ತೃಪ್ತರಾಗಿ ಈ ಬಡಬ್ರಾಹ್ಮಣ ಕುಟುಂಬ ಸಂತೋಷದಿಂದ ಸಂಸಾರವನ್ನು ಸಾಗಿಸಿಕೊಂಡು ಹೋಗುತ್ತಿದ್ದಿತು. ತಿಮ್ಮಪ್ಪಯ್ಯನವರಿಗೆ ಮೂವತ್ತು ವರ್ಷವೂ ಮಹಾಲಕ್ಷ್ಮಮ್ಮನವರಿಗೆ ಹದಿನೈದು ವರ್ಷವೂ ವಯಸ್ಸಾಗಿದ್ದಾಗ ಈ ದಂಪತಿಗಳ ಹಿರಿಯ ಮಗನಾಗಿ ಲಕ್ಷ್ಮೀನಾರಾಯಣ ಕವಿ ಸಾವಿರದೆಂಟನೂರ ಎಪ್ಪತ್ತನೆಯ ಇಸವಿ ಜನವರಿ ಇಪ್ಪತ್ತು ನಾಲ್ಕನೆಯ ತಾರೀಖು, ಶುಕ್ಲ ಸಂವತ್ಸರದ ಪುಷ್ಯ ಬಹುಳ ಅಷ್ಟಮಿ ಸೋಮವಾರ ಹುಟ್ಟಿದನೆಂದು ಶ್ರೀ ಗೋವಿಂದ ಪೈಗಳು ಬರೆಯುತ್ತಾರೆ. ಮೊದಲು ಹುಟ್ಟಿದ ಮಗು ಗಂಡಾದುದರಿಂದಲೂ ಅದು ಶೈಶವಸಹಜವಾದ ಆಟಪಾಟಗಳಿಂದ ಮನಸೆಳೆಯುವಂತಿದ್ದುದರಿಂದಲೂ ತಂದೆತಾಯಿಯರು ಮಗುವನ್ನು ವಿಶೇಷವಾದ ಅಕ್ಕರೆ ಆಸ್ಥೆಗಳಿಂದ ಪಾಲಿಸುತ್ತ ಬಂದರು. ತಾಯಿಯಂತೂ ಈ ಮುದ್ದುಮುದ್ದಾದ ಮಗುವನ್ನು 'ಮುದ್ದಣ' ಎಂದು ಕರೆದಳು.

೩

ಓರಗೆಯವರೊಡನೆ ಶಾಲೆಗೆ ಹೋಗಿ ಓದಿ ಬರೆಯುವ ವಯಸ್ಸಾದಾಗ ಲಕ್ಷ್ಮೀನಾರಾಯಣನನ್ನು ತಂದೆ, ನಂದಳಿಕೆಯಲ್ಲಿ ಮೂರೂರು ಚರಡಪ್ಪಯ್ಯನವರು ಸ್ಥಾಪಿಸಿದ ಪಾಠಶಾಲೆಗೆ ಸೇರಿಸಿದರು. ನಂದಳಿಕೆಯ ದೇವರಾಯ, ಸಿದ್ದುಸೆಟ್ಟಿ, ಬಾಬು, ಕೆ.ರಾಮಚಂದ್ರಯ್ಯ, ತೇಜಪ್ಪಸೆಟ್ಟಿ, ಕುಪ್ಪಣ್ಣಭಟ್ಟ ಮೊದಲಾದ ಸಹಪಾಠಿಗಳೊಡನೆ ಲಕ್ಷ್ಮೀನಾರಾಯಣನಿಗೆ ಓನಾಮದ ಅಭ್ಯಾಸವಾಯಿತು. ನಂದಳಿಕೆಯ ಶಾಲೆಯಲ್ಲಿ ಕಳೆದ ನಾಲ್ಕೈದು ವರ್ಷಗಳಲ್ಲಿ ಲಕ್ಷ್ಮೀನಾರಾಯಣ, ಓದುವುದನ್ನೂ ಬರೆಯುವುದನ್ನೂ ಚೆನ್ನಾಗಿ ಅಭ್ಯಾಸ ಮಾಡಿದನು.

ಕವಿಯಾದ ಮುದ್ದಣನಲ್ಲಿ ಮುಂದೆ ನಾವು ಕಾಣುವ ರಸಿಕತೆ, ಭಾವೋನ್ನತಿ, ಆರ್ದ್ರ ಹೃದಯ ಮುಂತಾದ ಗುಣವಿಶೇಷಗಳ ಪ್ರಾದುರ್ಭಾವಕ್ಕೆ ತಕ್ಕ ಸಂಸ್ಕಾರದ ಹಿನ್ನೆಲೆಯೊಂದು, ಈ ವೇಳೆಗೆ ಬಾಲಕನಾದ ಲಕ್ಷ್ಮೀನಾರಾಯಣನ ಮನಸ್ಸಿನಲ್ಲಿ ಸಿದ್ಧಗೊಳ್ಳುತ್ತಿದ್ದಿತೆಂದು ಊಹಿಸಬಹುದು. ಶಾಲೆಯ ಒಳ ಆವರಣದಲ್ಲಿ ಗುರುಮುಖದಿಂದ ಕಲಿತ ಅಕ್ಷರಾಭ್ಯಾಸದ ಶಿಕ್ಷಣದ ಜೊತೆಗೆ ಶಾಲೆಯ ಹೊರ ಆವರಣದಲ್ಲಿ ಪ್ರಕೃತಿಯ ಮುಖದಿಂದ ಸೃಷ್ಟಿನಿರೀಕ್ಷಣದ ಸೌಂದರ್ಯದ ಪಾಠವೊಂದನ್ನು ಈ ಬಾಲಕ ಕಲಿತನೆಂದು ತೋರುತ್ತದೆ. ಇದರ ಜೊತೆಗೆ ಹುಟ್ಟಿದ ಹಳ್ಳಿಯ ಸುಸಂಸ್ಕೃತವಾದ ಜನಜೀವನದ ಆವರಣವೂ ಈತನ ಮನಸ್ಸನ್ನು ತಿದ್ದುವುದರಲ್ಲಿ ಪಾಲು ಪಡೆದಿದ್ದಿರಬೇಕು. ಒಂದು ಕಡೆ ದೇವಸ್ಥಾನಗಳಲ್ಲಿ, ಛತ್ರಗಳಲ್ಲಿ, ಊರ ಹಿರಿಯರ ಚಾವಡಿಗಳಲ್ಲಿ ಕಾಲಕಾಲಕ್ಕೆ ನಡೆಯುವ ಪುರಾಣ ಪುಣ್ಯಕತೆಗಳ ಶ್ರವಣ, ಇನ್ನೊಂದು ಕಡೆ ಈ ಪುರಾಣಪುರುಷರ ಕಥಾನಕಗಳನ್ನು ಆಡಿ ತೋರಿಸುವ ಭಾಗವತರ ದಶಾವತಾರದ ಆಟ, ಮಗುದೊಂದು ಕಡೆ ವರುಷದ ಮುನ್ನೂರರವತ್ತೈದು ದಿನವೂ ಬರುವ ಹಬ್ಬಹರಿದಿನದ ವಿಶೇಷ ಗಟ್ಟಳೆಯ ಪೂಜೆ, ಆ ಪೂಜೆಗಾಗಿ ನಡೆಯುವ ಫಲ ಪತ್ರ ಪುಷ್ಪಸಂಚಯ, ಮಂಟಪದ ರಚನೆ, ಬಿಂಬನಿರ್ಮಾಣ, ನವರಾತ್ರಿ ದೀಪಾವಳಿ ಯುಗಾದಿ ಮೊದಲಾದ ದೊಡ್ಡ ದೊಡ್ಡ ಹಬ್ಬಗಳಲ್ಲಿ ಸಾಮೂಹಿಕವಾಗಿ ನಡೆಯುವ ಕುಣಿತ, ಕೋಲಾಟ, ದೀಪೋತ್ಸವ ಮುಂತಾದ ಹಳ್ಳಿಯ ವಿನೋದ, ಊರಿನ ತೇರು, ಪರಿಸೆ, ಪರ್ಯಾಯಾದಿ ಜನಜಂಗುಳಿಯ ಬಗೆಬಗೆಯ ಭಕ್ತ್ಯುತ್ಸಾಹದ ಕೋಲಾಹಲ – ಮುಂತಾದುವುಗಳಲ್ಲಿ ಕಾಣಬರುವ ಆರ್ಯ ಸಂಸ್ಕೃತಿಯ ಪ್ರಭಾವಮುದ್ರೆ ಬಾಲ ಲಕ್ಷ್ಮೀನಾರಾಯಣನ ಹೃದಯದ ಮೇಲೆ ವಿಶೇಷ ರೀತಿಯ ಪರಿಣಾಮವನ್ನುಂಟುಮಾಡಿದ್ದಿರಬೇಕು. ಈ ವಿಧವಾದ ಶಾಲೆಯ, ಸೃಷ್ಟಿಯ, ಸಂಸ್ಕೃತಿಯ ತ್ರಿಕೂಟಾಚಲದ ಮೇಲೇರಿ ಬಂದ ಜ್ಞಾನಭಾಸ್ಕರನ ಸುಪ್ತ ಉದಯೋನ್ಮುಖ ಕಿರಣಗಳಿಂದ ತಾನೆ ಬಾಲ ಲಕ್ಷ್ಮೀನಾರಾಯಣನ ಸುಪ್ತ ಕವಿಹೃತ್ಪದ್ಮ ದಳ ದಳ ದಳ ದಳ ವಿಕಸಿಸುವುದಕ್ಕೆ ಆರಂಭಿಸಿರಬೇಕು !

೪

ನಂದಳಿಕೆಯಲ್ಲಿ ಮೂಲಶಿಕ್ಷಣವನ್ನು ಮುಗಿಸಿದ ಲಕ್ಷ್ಮೀನಾರಾಯಣ ಮುಂದಿನ ವಿದ್ಯಾಭ್ಯಾಸಕ್ಕಾಗಿ ಉಡುಪಿಗೆ ಹೋದಂತೆ ತಿಳಿದುಬರುತ್ತದೆ. ಅಲ್ಲಿ ಇಂಗ್ಲಿಷ್ ಶಾಲೆಗೆ ಸೇರಿ ಒಂದೆರಡು ವರ್ಷ ಕಳೆಯುವ ವೇಳೆಗೆ ಆ ವಿದ್ಯಾಭ್ಯಾಸವನ್ನು ಮುಂದುವರಿಸುವುದು ತನ್ನಂತಹ ಬಡವನಿಗೆ ಅಸಾಧ್ಯವಾದ ಮಾತೆಂದು ಈತ ಮನಗಂಡಿರಬೇಕು. ಆದ್ದರಿಂದ ಇಂಗ್ಲಿಷ್ ಶಾಲೆಯನ್ನು ಬಿಟ್ಟು 'ಬಡವರ ಬಂಧು'ವಾದ ಕನ್ನಡ ಟ್ರೈನಿಂಗ್ ಸ್ಕೂಲಿಗೆ ಈತ ಸೇರಿಕೊಂಡನು. ಜೊತೆಗೆ ವ್ಯವಹಾರಕ್ಕೆ ಬೇಕಾಗುವಷ್ಟು ಇಂಗ್ಲಿಷ್ ಭಾಷಾಜ್ಞಾನವನ್ನು ಮನೆಯಲ್ಲಿಯೇ ಸ್ವಪ್ರಯತ್ನದಿಂದ ಕಲಿಯತೊಡಗಿದನು. ಸ್ನೇಹಶೀಲನೂ, ವಾಕ್ಚತುರನೂ ಆದ ಲಕ್ಷ್ಮೀನಾರಾಯಣನಿಗೆ ಕನ್ನಡ ಕಲಿಯುವುದಕ್ಕಾಗಲೀ ಇಂಗ್ಲಿಷ್ ಕಲಿಯುವುದಕ್ಕಾಗಲೀ ವಿದ್ಯಾವಂತರಾದ ಪಂಡಿತರ ಸಹಾಯದ ಕೊರತೆಯಾಗಲಿಲ್ಲ. ಕುಶಾಗ್ರಮತಿಯಾಗಿದ್ದ ಈತನಿಗೆ ಅತ್ತ ಶಾಲೆಯಲ್ಲಿ ಕನ್ನಡವನ್ನೂ ಇತ್ತ ಮನೆಯಲ್ಲಿ ಇಂಗ್ಲಿಷನ್ನೂ ಅಭ್ಯಾಸ ಮಾಡುವುದು ಕಷ್ಟವಾಗಿಯೂ ತೋರಲಿಲ್ಲ.

ದಕ್ಷಿಣ ಕನ್ನಡ ಜಿಲ್ಲೆ ಯಕ್ಷಗಾನಗಳಿಗೆ ಪ್ರಸಿದ್ಧವಾದದ್ದು. ಲಕ್ಷ್ಮೀನಾರಾಯಣನಿಗೆ ನಂದಳಿಕೆಯಲ್ಲಿದ್ದಾಗಲೇ ಇದರ ಹುಚ್ಚು ಬಹಳ. ಈಗಂತೂ ಉಡುಪಿಯಂತಹ ಪಟ್ಟಣಗಳಲ್ಲಿ ಕಣ್ಣು ಕಿವಿಗಳಿಗೆ ದಣಿವಾಗುವವರೆಗೆ ಪ್ರಸಂಗಗಳನ್ನು ನೋಡುವ ಕೇಳುವ ಸುಯೋಗ ಈತನಿಗೆ ಒದಗಿತು. ಕನ್ನಡ ಪದ್ಯವಾಚನದ ಕಡೆಗೆ ಮನವೊಲಿದಿದ್ದ ಈತ ಕ್ರಮಕ್ರಮವಾಗಿ ಸಂಗೀತದ ಕಡೆಗೆ ಹೆಚ್ಚಿನ ಆಸಕ್ತಿಯನ್ನು ತೋರಲು ಪ್ರಾರಂಭಿಸಿದನು. ಸಾಧ್ಯವಾದರೆ ಶಾಸ್ತ್ರೀಯವಾದ ರೀತಿಯಲ್ಲಿ ಸಂಗೀತವನ್ನು ಅಭ್ಯಾಸ ಮಾಡಬೇಕೆಂದು ಅಪೇಕ್ಷಿಸಿದನು. ಆದರೆ ಇಂಗ್ಲಿಷ್ ವಿದ್ಯಾಭ್ಯಾಸದ ಸಂದರ್ಭದಲ್ಲಿ ಹೇಗೋ ಹಾಗೆ ಈ ಸಂದರ್ಭದಲ್ಲಿಯೂ ಈತನ ಬಡತನ ಅಡ್ಡಿಯಾಗಿತ್ತು. ಶಾಸ್ತ್ರೀಯವಾದ ಸಂಗೀತ ದೊರೆಯದೆ ಹೋದರೆ ಏನು, ಯಕ್ಷಗಾನದ ವಿವಿಧ ಮಟ್ಟುಗಳಲ್ಲಿ ಹಾಡುವ ಬಗೆಬಗೆಯ ಪ್ರಸಂಗಗಳನ್ನು ಕೇಳುವುದಕ್ಕೆ ಯಾವ ಅಡ್ಡಿಯೂ ಇರಲಿಲ್ಲ. 'ಯಕ್ಷಗಾನ'ದ ಸಾಹಿತ್ಯವೂ ಸಂಗೀತವೂ ಕುಣಿತವೂ ಏಕಕಾಲದಲ್ಲಿ ಲಕ್ಷ್ಮೀನಾರಾಯಣನ ಮನಸ್ಸನ್ನು ಸೂರೆಗೊಂಡವು. ಇದರ ಪರಿಣಾಮವನ್ನು ಎರಡು ಮೂರು ರೀತಿಯಲ್ಲಿ ನಾವು ನೋಡಬಹುದು. ಯಕ್ಷಗಾನದ ಮಟ್ಟುಗಳ ರೀತಿಯಲ್ಲಿ ಈ ಬಾಲಕ ಕನ್ನಡದಲ್ಲಿಯೋ ತುಳುವಿನಲ್ಲಿಯೋ ಪದ್ಯಗಳನ್ನು ಸ್ವತಃ ಹೆಣೆಯುವುದಕ್ಕೆ ಪ್ರಾರಂಭಿಸಿದನು. ಮುಖ್ಯವಾಗಿ, ಆ ಹಾಡುಗಳ ಬಗೆಬಗೆಯ ಪ್ರಾಸದ, ಶಬ್ದ ವೈಚಿತ್ರ್ಯದ ಗೆಜ್ಜೆಯ ಕುಣಿತ ಈ ಬಾಲಕನ ಕಿವಿಯನ್ನು ಮರುಳುಗೊಳಿಸಿತು. ಯಕ್ಷಗಾನದ 'ಅತಳ ವಿತಳ ರಸಾತಳ'ಗಳ ರೀತಿಯ ಶಬ್ದಾಲಂಕಾರದ ಹಾಡುಗಳಲ್ಲಿ ಈತ ಅತಿಯಾದ ಮಮತೆಯನ್ನು ವ್ಯಕ್ತಪಡಿಸಿದಂತೆ ಕಾಣುತ್ತದೆ. ಇಂತಹ ಶಬ್ದಾಲಂಕಾರದ ಅತಿಪ್ರಯೋಗದ ಪ್ರಭಾವ ಈತನ ಶೈಲಿಯ ಒಂದು ಪ್ರಮುಖ ಲಕ್ಷಣವಾಗಿ ಮುಂದೆ ಕಾಣಿಸಿಕೊಳ್ಳುತ್ತದೆ. ಯಕ್ಷಗಾನದ ಇನ್ನೊಂದು ಪರಿಣಾಮ,

ಈತನೇ ಸ್ವತಃ ವೇಷಧಾರಿಯಾಗಿ ಪಾತ್ರವಹಿಸುವುದರಲ್ಲಿ ಕಾಣಬರುತ್ತದೆ. ಬಹುಶಃ ವಿದೂಷಕನಾಗಿ ರಂಗಸ್ಥಲ ತೆರವು ಬಿದ್ದಾಗಲೆಲ್ಲ ಈತ ಕಾಣಿಸಿಕೊಂಡು ತನ್ನ ಬಗೆಬಗೆಯ ಪ್ರಾಸಬದ್ಧವಾದ ಬೆರಗಿನ ನಗೆನುಡಿಗಳಿಂದ ಜನರನ್ನು ವಿನೋದಗೊಳಿಸುತ್ತಿದ್ದನೆಂದು ತೋರುತ್ತದೆ. ತನ್ನ ನಟನೆಯಿಂದಲೂ ಮಾತಿನಿಂದಲೂ ಜನರು ಸಂತೋಷಪಟ್ಟುದರಿಂದ ಈತ ಈ ವಿಧವಾದ ವಿನೋದಗೊಳಿಸುವ ಹಾಸ್ಯದ ಮಾತುಗಾರಿಕೆಯ ಜಾಣ್ಮೆಯೊಂದನ್ನು ಸಾಧಿಸಿಕೊಳ್ಳಲು ಪ್ರಯತ್ನಿಸಿರಬೇಕು. ಮುಂದೆ ಈತನ ಕಾವ್ಯಗಳಲ್ಲಿ ಕಾಣಬರುವ ವಿನೋದಮಯವಾದ ಸರಸ ಸನ್ನಿವೇಶಗಳಲ್ಲಿ ತೋರುವ ಮುದ್ದಣನ ಸಬ್ಬವಕಾರತನ ಇಲ್ಲಿ ಮೊಳಕೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಹೀಗೆ ಟ್ರೈನಿಂಗ್ ಸ್ಕೂಲಿನ ವಿದ್ಯಾಭ್ಯಾಸ ಮುಗಿದು ತೇರ್ಗಡೆಯಾಗುವ ವೇಳೆಗೆ ಯಕ್ಷಗಾನಾನುರಾಗಿಯಾದ ಲಕ್ಷ್ಮೀನಾರಾಯಣನನ್ನು ನಾವು ಪರಿಚಯ ಮಾಡಿಕೊಳ್ಳುತ್ತೇವೆ. ಸುಮಾರು ಹದಿನೆಂಟು ವರ್ಷ ವಯಸ್ಸಾಗುವ ವೇಳೆಗೆ ಈತ ಟ್ರೈನಿಂಗ್ ಸ್ಕೂಲಿನಲ್ಲಿ ಉತ್ತೀರ್ಣನಾಗುತ್ತಾನೆ; ಅಲ್ಲಿಗೆ ಇವನ ಶಾಲೆಯ ವಿದ್ಯಾರ್ಥಿ ಜೀವನ ಮುಗಿಯುತ್ತದೆ.

ಒಂದರ ಮುಗಿವು ಇನ್ನೊಂದರ ಮೊದಲು. ಬಾಲಕನು ಯುವಕನಾಗಿ, ಕನ್ನಡ ಕಲಿಸುವ ಅರ್ಹತೆಯನ್ನು ಪಡೆದವನಾಗಿ, ತನ್ನ ಕಾಲಮೇಲೆ ತಾನು ನಿಂತ ವೇಳೆ, ತನ್ನ ಮತ್ತು ತನ್ನ ಮನೆಯವರ ಹೊಟ್ಟೆ ಬಟ್ಟೆಯ ಅವಶ್ಯಕತೆಯನ್ನು ಪೂರೈಸುವ ಚಿಂತೆ ಪ್ರಾರಂಭವಾಗುತ್ತದೆ. ಕನ್ನಡವನ್ನು ಕಲಿತ ಈತನಿಗೆ ಉದ್ಯೋಗ ದೊರೆಯುವುದು ಕಷ್ಟವಾಗುತ್ತದೆ. ಪುಣ್ಯಕ್ಕೆ ದೇವರು ಕೊಟ್ಟ ಗಟ್ಟಿಮುಟ್ಟಾದ ದೇಹವೊಂದಿದ್ದುದರಿಂದ ಈತನ ಶರೀರದಾರ್ಢ್ಯವನ್ನು ನೋಡಿ ಟ್ರೈನಿಂಗ್ ಸ್ಕೂಲಿನ ಮುಖ್ಯೋಪಾಧ್ಯಾಯರು ಇವನನ್ನು ಅಂಗಸಾಧನೆಯ ಶಿಕ್ಷಣದಲ್ಲಿ ವಿಶೇಷ ರೀತಿಯ ಅಭ್ಯಾಸಕ್ಕಾಗಿ ಮದರಾಸಿಗೆ ಕಳುಹಿಸಿಕೊಟ್ಟರು. ಈ ವಿದ್ಯಾಭ್ಯಾಸಕ್ಕೆ ಸರ್ಕಾರದವರೇ ಹಣವನ್ನು ಒದಗಿಸುತ್ತಿದ್ದರು. ಮದರಾಸಿನಲ್ಲಿ ಕೂಡ ಈತ ಕೇವಲ ಅಂಗಸಾಧನೆಯೊಂದರಲ್ಲಿಯೇ ನಿರತನಾಗಿರದೆ ಸಾಹಿತ್ಯ ವಿಷಯಕವಾದ ತನ್ನ ಚಟುವಟಿಕೆಗಳನ್ನು ಮುಂದುವರಿಸಿದನೆಂದು ತೋರುತ್ತದೆ. ಹೆಚ್ಚಿನ ಇಂಗ್ಲಿಷ್ ಭಾಷಾಜ್ಞಾನವಿಲ್ಲದಿದ್ದುದರಿಂದ ವ್ಯವಹಾರ ಸೌಕರ್ಯಕ್ಕಾಗಿ ತಮಿಳು, ಮಲೆಯಾಳಿ ಭಾಷೆಗಳನ್ನು ಕಲಿತಂತೆ ಊಹಿಸಬಹುದು. ಕನ್ನಡ, ತುಳು ಭಾಷೆಗಳನ್ನು ಬಲ್ಲ ಕುಶಾಗ್ರ ಬುದ್ಧಿಯ ಈ ತರುಣನಿಗೆ ದ್ರಾವಿಡವರ್ಗಕ್ಕೆ ಸೇರಿದ ಇತರ ಭಾಷೆಗಳನ್ನು ಕಲಿಯುವುದು ಕಷ್ಟವಾಗಿರಲಿಲ್ಲ. ಈ ಸಂದರ್ಭದಲ್ಲಿಯೂ ಪಂಡಿತರ ನೆರವು ಈತನಿಗೆ ಇದ್ದೇ ಇತ್ತು. ಶ್ರೀ ಎಚ್. ನಾರಾಯಣರಾಯರು ಶ್ರೀ ಬೆನಗಲ್ ರಾಮರಾಯರು ಮುಂತಾದವರ ಸಹಾಯದಿಂದ ದ್ರಾವಿಡ ವರ್ಗದ ಬೇರೆಬೇರೆ ಭಾಷೆಗಳ ಶಬ್ದರೂಪಗಳನ್ನು ಕುರಿತು ಅನೇಕ ಅಮೂಲ್ಯವಾದ ಟಿಪ್ಪಣಿಗಳನ್ನು ಸಂಗ್ರಹಿಸಿದ್ದನೆಂದು ಹೇಳುತ್ತಾರೆ. ಈತ ಮುಂದೆ ಬರೆದ "ಜೋ ಜೋ' ಎಂಬ ಒಂದೇ ಒಂದು ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರಾತ್ಮಕ ಪ್ರಬಂಧದಲ್ಲಿ ಈತನ

ಪಂಚ ದ್ರಾವಿಡ ಭಾಷೆಗಳ ಜ್ಞಾನ ಎಷ್ಟರಮಟ್ಟಿನದು ಎಂಬುದನ್ನು ಸ್ವಲ್ಪಮಟ್ಟಿಗೆ ನಾವು ಅರಿತುಕೊಳ್ಳಬಹುದು. ಮದರಾಸಿಗೆ ಹೋಗಿ ಅಲ್ಲಿ ಅಭ್ಯಾಸವನ್ನು ಮುಗಿಸಿಕೊಂಡು ಬಂದ ಬಳಿಕ ಲಕ್ಷ್ಮೀನಾರಾಯಣನಿಗೆ ಉಡುಪಿಯ ಹೈಸ್ಕೂಲಿನಲ್ಲಿ ವ್ಯಾಯಾಮಶಿಕ್ಷಕನ ಕೆಲಸ ದೊರೆಯಿತು. ಸಂಬಳ, ತಿಂಗಳ ಮೂವತ್ತು ದಿನಗಳೂ ದುಡಿದರೆ ಕೇವಲ ಹತ್ತೇ ರೂಪಾಯಿ !

೫

ಲಕ್ಷ್ಮೀನಾರಾಯಣನು ಉಡುಪಿಯಲ್ಲಿ ಅಂಗಸಾಧನೆಯ ಶಿಕ್ಷಕನಾಗಿ ನಿಂತದ್ದು ೧೮೮೯ನೆಯ ಇಸವಿ ಮೇ ತಿಂಗಳಿನಲ್ಲಿ ಎಂದು ಶ್ರೀ ಗೋವಿಂದ ಪೈಗಳು ಹೇಳುತ್ತಾರೆ. ಈ ಶಿಕ್ಷಕವೃತ್ತಿಯಲ್ಲಿ ಸುಮಾರು ಮೂರು ವರ್ಷಗಳ ಕಾಲ ಈತ ಉಡುಪಿಯಲ್ಲಿ ನೆಲೆಸಿದ್ದನೆಂದು ಊಹಿಸಬಹುದು. ಈ ಅವಧಿಯಲ್ಲಿ ಈತ ಪ್ರಸಂಗಕಾರನಾಗಿ ಯಕ್ಷಗಾನಗಳ ಕೃತಿರಚನೆಗೆ ತೊಡಗುವುದನ್ನು ನಾವು ಕಾಣುತ್ತೇವೆ. ಈ ಕೃತಿರಚನೆಯಲ್ಲಿ ಈತನಿಗೆ ಶ್ರೀ ಮಳಲಿ ಸುಬ್ಬರಾಯರು[೧] ಎನ್ನುವ ಅದೇ ಶಾಲೆಯ ಉಪಾಧ್ಯಾಯರೊಬ್ಬರು ಗುರುವಾಗಿ ದೊರೆತದ್ದು ಈತನ ಸುದೈವ. ಮಳಲಿ ಸುಬ್ಬರಾಯರು ಕೆಲವು ಯಕ್ಷಗಾನ ಪ್ರಸಂಗಗಳನ್ನೂ ಮರಾಠಿ ನಾಟಕಗಳನ್ನೂ ಬರೆದು ಪೆಸರಾದವರು. ಲಕ್ಷ್ಮೀನಾರಾಯಣ ಈ ಮೊದಲೆ ಕರ್ಣಾಕರ್ಣಿಕೆಯಾಗಿ ಸುಬ್ಬರಾಯರು ನಾಟಕ ಕರ್ತೃಗಳೆಂದು ಕೇಳಿದ್ದನು. ಈಗ ತಾನು ಸೇರಿದ ಶಾಲೆಯಲ್ಲಿಯೇ ಸುಬ್ಬರಾಯರೂ ಇರುವುದನ್ನು ನೋಡಿ ಅವರ ಪ್ರೀತ್ಯಾದರಗಳಿಗೆ ಪಾತ್ರನಾಗುವ ಅವಕಾಶವನ್ನು ಕಳೆದುಕೊಳ್ಳಬಾರದೆಂದಾಲೋಚಿಸಿ ಅವರನ್ನಾಶ್ರಯಿಸಿದನು. ಅವರಾದರೂ ಈತನ ರಸಿಕತೆಯನ್ನೂ ಯಕ್ಷಗಾನ ಪ್ರೀತಿಯನ್ನೂ ನೋಡಿ ಸಂತೋಷಪಟ್ಟರು. ತಾವು ಸ್ವತಃ ರಚಿಸಿದ ಪುಸ್ತಕಗಳನ್ನೂ ತಮ್ಮ ಭಂಡಾರದಲ್ಲಿರುವ ಇತರ ಪುಸ್ತಕಗಳನ್ನೂ ತೆಗೆದುಕೊಂಡು ಓದಲು ಅನುಮತಿಯಿತ್ತರು. ಲಕ್ಷ್ಮೀನಾರಾಯಣನು 'ವೀರಮಣಿಕಾಳಗ', 'ಕಚೋಪಾಖ್ಯಾನ', 'ದೇವಯಾನಿ ಸ್ವಯಂವರ', 'ಶಕುಂತಲಾ ಸ್ವಯಂವರ' ಮೊದಲಾದ ನೂತನ ಪ್ರಸಂಗಗಳನ್ನು ಈ ಸಂದರ್ಭದಲ್ಲಿ ಓದಿದನು. ತನಗೂ ಯಕ್ಷಗಾನ ಕೃತಿಗಳನ್ನು ರಚಿಸುವ ಕುತೂಹಲವಿರುವುದಾಗಿಯೂ, ಪ್ರಚಾರದಲ್ಲಿಲ್ಲದ ಹೊಸ ಕಥಾನಕಗಳಿದ್ದರೆ ತಿಳಿಸಬೇಕೆಂಬುದಾಗಿಯೂ ಸುಬ್ಬರಾಯರನ್ನು ಕೇಳಿಕೊಂಡನು. ಈ ಕವಿ ಶಿಷ್ಯನ ಅತ್ಯುತ್ಸಾಹಪೂರ್ಣವಾದ ಅಪೇಕ್ಷೆಯನ್ನು ಗೌರವಿಸಿ ಗುರುಗಳಾದ ಸುಬ್ಬರಾಯರು ಸಂಸ್ಕೃತ ರತ್ನಾವಳೀ ನಾಟಕದ ಕಥಾನಕವನ್ನು ಹೇಳಿ ಬರೆಯಿಸಿದರು. ಈ ಕತೆಯನ್ನು ಗುರುಮುಖದಿಂದ ಕೇಳಿದ ಲಕ್ಷ್ಮೀನಾರಾಯಣ 'ರತ್ನಾವತೀ ಕಲ್ಯಾಣ' ಎಂಬ

---

೧. ಈ ಮಳಲಿ ಸುಬ್ಬರಾಯರು ಶಿವರಾಮ ಕಾರಂತರಿಗೂ ಗುರುಗಳಾಗಿದ್ದರಂತೆ. ಈ ಸಂಗತಿಯನ್ನು ಕಾರಂತರು ತಮ್ಮ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಎಂಬ ಪುಸ್ತಕದಲ್ಲಿ ಹೇಳಿದ್ದಾರೆ.

ಪ್ರಸಂಗವನ್ನು ರಚಿಸತೊಡಗಿದನು. ಇತರ ಪ್ರಸಂಗಗಳ ರಾಗ, ತಾಳ, ಧಾಟಿಗಳನ್ನನುಸರಿಸಿ ಮಟ್ಟುಗಳನ್ನು ಬರೆದನು. ನಾಂದೀಶ್ಲೋಕವನ್ನು ಗುರುಗಳೇ ರಚಿಸಿಕೊಟ್ಟರು. ನಡುನಡುವೆ ಗುರುಗಳ ಸಲಹೆ ಸಹಕಾರಗಳನ್ನು ಪಡೆದು ಕೃತಿಯನ್ನು ಕೊನೆಮುಟ್ಟಿಸಿದನು. ಹೀಗೆ ಮಳಲಿಯವರಿಂದ ದೀಕ್ಷೆಯನ್ನು ಪಡೆದ ಲಕ್ಷ್ಮೀನಾರಾಯಣ ತನ್ನ ಮೊದಲ ಕೃತಿಯನ್ನು ರಚಿಸಿ ಕವಿಯಾದನು.

೬

ಒಂದು ಗ್ರಂಥವನ್ನು ಬರೆದ ಉತ್ಸಾಹ ಆರುವಷ್ಟರಲ್ಲಿಯೆ ಕವಿ ಇನ್ನೊಂದನ್ನಾರಂಭಿಸಿದನು. 'ಸ್ಕಾಂದ ಪುರಾಣ'ದೊಳಗಿನ ಷಣ್ಮುಖ ಚರಿತ್ರೆಯನ್ನು 'ಕುಮಾರ ವಿಜಯ' ಎಂಬ ಹೆಸರಿನ ಪ್ರಸಂಗವನ್ನಾಗಿ ಬರೆಯಲು ತೊಡಗಿದನು. ಈ ವೇಳೆಗೆ ಈ ತರುಣ ಕವಿಯ ಕೈ ಕುದುರತೊಡಗಿತು. ಹತ್ತಾರು ಇತರ ಗ್ರಂಥಗಳನ್ನು ಓದುವ ಅಭ್ಯಾಸವನ್ನಿಟ್ಟುಕೊಂಡಿದ್ದರಿಂದ ಬುದ್ಧಿಯೂ ಕುದುರಿತು. ಶಾಲೆಯ ಮೇಲಿನ ತರಗತಿಗಳಲ್ಲಿ ಕಲಿಸುತ್ತಿದ್ದ 'ಮೆಟ್ರಿಕ್ಯುಲೇಶನ್' ಪಠ್ಯಪುಸ್ತಕಗಳನ್ನೂ, ಇತರ ಕತೆ ಕಾದಂಬರಿಗಳನ್ನೂ ವಿರಾಮ ಕಾಲದಲ್ಲಿ ಓದುತ್ತಿದ್ದುದರಿಂದ ಕವಿಯ ಶಾಬ್ದಿಕ ಜ್ಞಾನ ಹೆಚ್ಚಿತು. ಕನ್ನಡ ನಾಟಕಗಳಲ್ಲಿ ಬರುವ ಹಾಡುಗಳನ್ನೂ ದಕ್ಷಿಣಾದಿ ಪದ್ಯಗಳ ಹೊಸಧಾಟಿಗಳನ್ನೂ ಅಭ್ಯಾಸ ಮಾಡಿಕೊಳ್ಳುತ್ತಿದ್ದುದರಿಂದ ಕವಿಯ ಸಂಗೀತ ಜ್ಞಾನವೂ ವೃದ್ಧಿಯಾಯಿತು. ಕವಿ ಉಡುಪಿಯಲ್ಲಿದ್ದ ಈ ಅವಧಿಯಲ್ಲಿ ಪಿಟೀಲು ನುಡಿಸುವುದನ್ನು ಅಭ್ಯಾಸ ಮಾಡುತ್ತಿದ್ದನೆಂಬುದನ್ನೂ ಇಲ್ಲಿ ನೆನೆಯಬೇಕು. ಹೀಗೆ ಸಾರಸ್ವತಾಮೃತದ ಯಮಳ ನದಿಗಳಾದ ಸಂಗೀತ ಸಾಹಿತ್ಯಗಳೆರಡರಲ್ಲೂ ಮಿಂದು ಬಂದ ಕವಿ ರಚಿಸಿದ ಈ ಎರಡನೆಯ ಕೃತಿ ಆ ಚೊಚ್ಚಲ ಕೃತಿಗಿಂತ ಎಷ್ಟೋ ಮೇಲಾಯಿತು. ತನ್ನ ಮೊದಲನೆಯ ಕೃತಿಯನ್ನು ತಾನು ಓದಿದ ಶಾಲೆಯ ಸಂಸ್ಥಾಪಕರಾದ ಮುರೂರು ಚರಡಪ್ಪಯ್ಯನವರಿಗೆ ಅರ್ಪಿಸಿದನು. ಈ ದ್ವಿತೀಯ ಕೃತಿಯನ್ನು ಗುರುಗಳಾದ ಮಳಲಿ ಸುಬ್ಬರಾಯರಿಗೆ ಅರ್ಪಿಸಿದನು.

'ಸರ್ಪಭೂಷಣ ಭಕ್ತ ಕವಿತಾ
ದರ್ಪಣಾಬ್ಧಿ ಗಭೀರ ಗುರುವಡನಿ
ಸಿರ್ಪ ಮಳಲೀ ಸುಬ್ಬರಾಯರಿಗರ್ಪಿಸಿದೆನು'

ಎಂದು 'ಕುಮಾರ ವಿಜಯ'ದಲ್ಲಿ ಹೇಳಿಕೊಂಡಿದ್ದಾನೆ.

ಪಂಡಿತ ಜನಪ್ರಿಯವಾದ ಶಬ್ದಾಲಂಕಾರ, ಪ್ರಾಸಚಮತ್ಕಾರ, ಕಾವ್ಯಮಯವಾದ ಪ್ರೌಢ ಶೈಲಿ ಮುಂತಾದವುಗಳಿಂದಲೂ ಹಳಗನ್ನಡದ ವ್ಯಾಕರಣ ಮರ್ಯಾದೆಯನ್ನೊಳಗೊಂಡ ಶುದ್ಧವಾದ ಪ್ರಯೋಗಗಳಿಂದಲೂ ಪ್ರಾಕ್ಕಾವ್ಯ ಸಮುದಾಯದಲ್ಲಿ ಮಾತ್ರ ದೊರೆಯಬಹುದಾದ ಅಪೂರ್ವವಾದ ಶಬ್ದಪುಂಜಗಳಿಂದಲೂ ಹೊಸಹೊಸದಾಗಿ ಜೋಡಿಸಿದ ಬಗೆಬಗೆಯ ಮಟ್ಟುಗಳಿಂದಲೂ 'ಕುಮಾರ ವಿಜಯ' ಉತ್ತಮವಾದ ಯಕ್ಷಗಾನ ಗ್ರಂಥವಾಗಿ

ರಚಿತವಾಯಿತು. ಉಡುಪಿಯ ಹಿಂದೂ ಮುದ್ರಣಾಲಯದ ಚಾಲಕರು ಈ ಎರಡು ಕೃತಿಗಳನ್ನೂ ಅಚ್ಚುಮಾಡಿದರು. 'ಕುಮಾರವಿಜಯ' ಪ್ರಕಟವಾದ ತರುಣದಲ್ಲಿ ಪೂಜ್ಯ ಪಂಜೆ ಮಂಗೇಶರಾಯರು ಅದನ್ನು ಓದಿ ಬೆರಗಾಗಿ ಹೋದರಂತೆ ! 'ಕುಮಾರ ವಿಜಯ ಬಿಟ್ಟರೆ ಪ್ರಸಂಗವಿಲ್ಲ, ನಂದಳಿಕೆಯವರನ್ನು ಬಿಟ್ಟರೆ ಕವಿಯಿಲ್ಲ' ಎಂಬ ಅಭಿಪ್ರಾಯ ಅವರಲ್ಲಿ ಆ ಕಾಲಕ್ಕೆ ಒಡನೆಯೆ ಮೂಡಿತಂತೆ ! ೧೮೯೫ ರಲ್ಲಿ ನೆರೆದ ಒಂದು ಸಭೆಯಲ್ಲಿ ಬಹಿರಂಗವಾಗಿ ಪಂಜೆಯವರು ಅದನ್ನು ಪ್ರಶಂಸಿಸಿದ್ದೂ ಆಯಿತು. ಆದರೇನು ? 'ರತ್ನಾವತೀ ಕಲ್ಯಾಣ'ಕ್ಕೆ ಒಂದೆರಡು ಸಲವಾದರೂ ರಂಗದ ಮುಖ ಕಾಣುವ ಸುಯೋಗ ದೊರೆತಿದ್ದರೆ 'ಕುಮಾರ ವಿಜಯ'ಕ್ಕೆ ಅದೂ ಲಭಿಸದೆ ಹೋಯಿತು.

೭

ಈ ನಡುವೆ ಮಳಲಿ ಸುಬ್ಬರಾಯರಿಗೆ ಕುಂದಾಪುರದ ಬೋರ್ಡ್ ಹೈಸ್ಕೂಲಿಗೆ ವರ್ಗವಾಯಿತು. ಲಕ್ಷ್ಮೀನಾರಾಯಣನ ಸಾಹಿತ್ಯ ಸೃಷ್ಟಿಗೆ ತಾತ್ಕಾಲಿಕವಾಗಿ ವಿಘ್ನ ಬಂದಂತಾಯಿತು. ಗುರುಶಿಷ್ಯರಿಬ್ಬರಿಗೂ ಈ ವಿಯೋಗ ದುಃಖ ದುರ್ಭರವಾಯಿತೆನ್ನುವುದರಲ್ಲಿ ಸಂದೇಹವಿಲ್ಲ. ಇಲ್ಲಿಂದ ಮುಂದೆ ಪತ್ರ ಮುಖೇನ ಪರಸ್ಪರ ವ್ಯವಹಾರ ನಡೆಯುತ್ತಿದ್ದರೂ ಅಷ್ಟರಿಂದ ತೃಪ್ತಿಯಾಗದೆ ಲಕ್ಷ್ಮೀನಾರಾಯಣನೂ ಕಷ್ಟಪಟ್ಟು ಕುಂದಾಪುರದ ಹೈಸ್ಕೂಲಿಗೆ ವರ್ಗಮಾಡಿಸಿಕೊಂಡನು. ೧೮೯೨ ನೆಯ ಮಾರ್ಚ್‌ನಲ್ಲಿ ಈತ ಅಂಗಸಾಧನೆಯ ಶಿಕ್ಷಕನಾಗಿ ಕುಂದಾಪುರದ ಹೈಸ್ಕೂಲಿಗೆ ಹೋದನೆಂದು ಶ್ರೀ ಗೋವಿಂದ ಪೈಗಳು ಹೇಳುತ್ತಾರೆ. ಹೀಗೆ ಗುರುಶಿಷ್ಯರಿಬ್ಬರ ಪರಸ್ಪರ ಮಿಲನ ಮತ್ತೆ ಪ್ರಾರಂಭವಾದಂದಿನಿಂದ ಲಕ್ಷ್ಮೀನಾರಾಯಣನ ಸಾಹಿತ್ಯ ಸಮಾಲೋಚನೆಗೆ ಕಳೆಯೇರಿತು. ಈ ಹೊತ್ತಿಗೆ ಯಕ್ಷಗಾವರಚನೆಯಿಂದ ತೃಪ್ತನಾಗದ ಈತ ಸಹಜವಾಗಿ ಹೊಸ ರೀತಿಯ ಕಾವ್ಯರಚನೆಗೆ ಕೈ ಹಾಕಲು ಬಯಸಿದನು. ಸಂಸ್ಕೃತದಲ್ಲಿರುವ 'ಅದ್ಭುತರಾಮಾಯಣ'ವನ್ನು ಗುರುಮುಖದಿಂದ ಕಲಿತು ಅದರ ಕಥಾಭಾಗವನ್ನು ಹಳಗನ್ನಡೊ ಗದ್ಯದಲ್ಲಿ ಬರೆಯತೊಡಗಿದನು. ಅದಕ್ಕೆ ಬೇಕಾದ ವಾಕ್ಸಂಪತ್ತನ್ನು ಗಳಿಸುವ ಸಲುವಾಗಿ ಮತ್ತೊಮ್ಮೆ ಸಾರಸ್ವತ ತಪಸ್ಸನ್ನು ಕೈಕೊಂಡನು. ಈ ತಪಸ್ಸಿನ ವರ್ಣನೆಯನ್ನು ಗುರುಗಳ ಮಾತಿನಲ್ಲಿಯೆ ಇಲ್ಲಿ ಕೊಡಬಹುದು :

"ಈ ಸಂದರ್ಭದಲ್ಲಿ ನನ್ನಲ್ಲಿದ್ದ ಪುಸ್ತಕ ಸಂಗ್ರಹವನ್ನು ನೋಡಬೇಕೆಂದು ಇವರು ಆತುರಪಟ್ಟು ಅಪೇಕ್ಷಿಸಿ ಎರಡು ಮೂರು ವರ್ಷದಿಂದ ಮೈಸೂರಿನಲ್ಲಿ ಪ್ರಕಟಿಸುತ್ತಿದ್ದ 'ಕಾವ್ಯಮಂಜರಿ' ಆಫೀಸಿನ ಮಾಸಿಕ ಪತ್ರಿಕೆಗಳಿಗೆ ಚಂದಾದಾರನಾಗಿದ್ದು ತರಿಸಿದ್ದ ಮಾಸಿಕ ಸಂಚಿಕೆಗಳು – ಕನ್ನಡ ಕಾದಂಬರಿಗಳು – ನಾಟಕ ಪುಸ್ತಕಗಳು – ಅಪೂರ್ವ ಸಂಸ್ಕೃತ ಗ್ರಂಥಗಳು – 'ಶಬ್ದಮಣಿದರ್ಪಣ' ಮುಂತಾದ ಹಳಗನ್ನಡ ವ್ಯಾಕರಣಗಳು – ಹಲಧರ ಮುಂತಾದ ನಿಘಂಟುಗಳು ಇವೇ ಮೊದಲಾದ

ವಿವಿಧ ಪುಸ್ತಕಗಳ ಸಂಗ್ರಹವನ್ನು ನೋಡಿ ಸಂತೋಷಪಟ್ಟು ಕನ್ನಡ ಪುಸ್ತಕಗಳನ್ನೊಂದೊಂದಾಗಿ ತೆಗೆದುಕೊಂಡು ಶಾಲೆಯಲ್ಲಿ ದೊರೆತ ಅವಕಾಶ ಸಮಯದಲ್ಲಿ ಕಿಟ್ಟೆಲ್ ಡಿಕ್ಷನರಿ ಎಂಬ ನಿಘಂಟಿನ ಸಹಾಯದಿಂದ ಅಭ್ಯಾಸ ಮಾಡತೊಡಗಿದರು. ಇವರಿಗೆ ಹಳಗನ್ನಡದಲ್ಲಿ ಅತಿಶಯ ಪ್ರೀತಿ ಇದ್ದುದರಿಂದ ಶಬ್ದಮಣಿದರ್ಪಣ – ಕಬ್ಬಿಗರ ಕೈಪಿಡಿ – ಹಳಗನ್ನಡ ವ್ಯಾಕರಣ ಸೂತ್ರಗಳು – ಮುಂತಾದುವುಗಳನ್ನು ಓದುತ್ತ ಹಳಗನ್ನಡ ಅಪಭ್ರಂಶಪದಗಳನ್ನು ಕೂಡಿಹಾಕಿ ಗುರುತುಮಾಡಿಕೊಳ್ಳುವುದು ಇವರ ನಿತ್ಯನಿಯಮವು; 'ಶಬ್ದಮಣಿದರ್ಪಣ' ಮುಂತಾದ ವ್ಯಾಕರಣಗಳು ನಿತ್ಯದ ಪಾರಾಯಣ ಪುಸ್ತಕಗಳು; ನಿರಂತರವಾದ ಅಭ್ಯಾಸವು ಔಪಾಸನೆಯು; ಹಳಗನ್ನಡ ಭಾಷಾವಾಗ್ದೇವಿಯೇ ಇಷ್ಟದೇವತೆ, ಇವುಗಳಲ್ಲಿ ಅತ್ಯಾಸಕ್ತಿ ದೃಢಭಕ್ತಿ. ಇವರ ಇಂತಹ ಏಕಾಗ್ರವಾದ ತಪಸ್ಸಾಧನೆಗೆ ಸಂತುಷ್ಟಳಾದ ಈ ದೇವತೆಯು ಪ್ರಸನ್ನಚಿತ್ತಳಾಗಿ ಹಳಗನ್ನಡದ ನೂತನ ಭಾಷಾಶೈಲಿಯನ್ನು ವರಪ್ರದಾನವಾಗಿತ್ತಳೋ ಎಂಬಂತೆ ಇವರ ನೂತನ ಕವಿತಾಪಾಂಡಿತ್ಯವು ಅಭಿವೃದ್ಧಿಗೊಂಡಿತು."

ಮೂಲ 'ಅದ್ಭುತರಾಮಾಯಣ'ವನ್ನು ಮಳಲಿ ಸುಬ್ಬರಾಯರು ಲಕ್ಷ್ಮೀನಾರಾಯಣನಿಗೆ ಓದಿ ಹೇಳುತ್ತಿದ್ದರು. ದಿನದಿನವೂ ಅವರು ಹೇಳಿದಷ್ಟು ಭಾಗವನ್ನು ಗುರುತು ಹಾಕಿಕೊಂಡು ಹೋಗಿ, ಮನೆಯಲ್ಲಿ ಬರೆದು, ಮರುದಿನ ತಂದು ಒಪ್ಪಿಸುತ್ತಿದ್ದನು. ಮಳಲಿಯವರು ಇದನ್ನು ನೋಡಿ ಅಲ್ಲಲ್ಲಿ ವಿಮರ್ಶೆಯನ್ನು ಸೂಚಿಸುತ್ತಿದ್ದರು. ಕೊನೆಕೊನೆಗೆ ತಮ್ಮ ವಿಮರ್ಶೆ ಅನವಶ್ಯಕವಾಗುವಷ್ಟರಮಟ್ಟಿಗೆ ಕವಿಯ ಕೃತಿರಚನೆ ಉತ್ಕೃಷ್ಟವಾಗುತ್ತ ಬಂದದ್ದನ್ನು ನೋಡಿ ಬೆರಗಾದರು. ಬೇಗನೆ ಕೃತಿಯನ್ನು ಮುಗಿಸಲು ಸೂಚಿಸಿದರು. ಈ ಸೂಚನೆಯಿಂದ ಇಮ್ಮಡಿ ಮುಮ್ಮಡಿ ವೃದ್ಧಿಂಗತವಾದ ಸ್ಫೂರ್ತಿಯ ಪರಿಣಾಮವಾಗಿ ಲಕ್ಷ್ಮೀನಾರಾಯಣ ಕೃತಿಯನ್ನು ಮುಗಿಸಿ ತಂದನು. ಗುರುಗಳು ಮತ್ತೊಮ್ಮೆ ಓದಿನೋಡಿ 'ಬಹಳ ಚಲೋದಿದೆ. ಛಾಪೆಯದಾದರೆ ಯೂನಿವರ್ಸಿಟಿ ಪರೀಕ್ಷೆಗಳಿಗೆ ಪಠ್ಯಪುಸ್ತಕವಾಗತಕ್ಕುದಾಗಿದೆ' ಎಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ಕೃಪಾಪೂರ್ಣವಾದ ಆಶೀರ್ವಾದವಾಣಿ ಎಂದಾದರೂ ಸಟೆಯಾಗುವುದುಂಟೆ ? ಕಾವ್ಯ ಎಷ್ಟೇ ಚೆನ್ನಾಗಿದ್ದರೂ ಅದನ್ನು ಪ್ರಕಾಶ ಪಡಿಸಲು ಬೇಕಾದ ಧನಸಂಪತ್ತಿಯಿಲ್ಲದೆ ಕವಿ ಹಿಂಜರಿಯುತ್ತಿದ್ದ ಸಮಯದಲ್ಲಿ ಅದನ್ನು ಅನ್ಯಕರ್ತೃಕವೆಂದೂ ಹಳೆಯ ಓಲೆಯ ಗರಿಯೊಂದರಿಂದ ನಕಲುಮಾಡಿಕೊಂಡ ಪ್ರತಿಯೆಂದೂ ಮೈಸೂರಿನ 'ಕಾವ್ಯಮಂಜರಿ'ಯವರಿಗೆ ಕಳುಹಿಸಿಕೊಟ್ಟರೆ ಅವರಾದರೂ ಅಚ್ಚುಹಾಕಿಸಿಯಾರೆಂದು ಗುರುಗಳು ಸೂಚಿಸಿದರು. ಶಿಷ್ಯನು ಅದಕ್ಕೆ ಒಪ್ಪಿದನು. ಒಪ್ಪಿ, ೧೮೯೫ ನೆಯ ಇಸವಿ ಜನವರಿ ತಾರೀಖು ೧ ರಲ್ಲಿ ಮೈಸೂರಿನ 'ಕಾವ್ಯಮಂಜರಿ' ಸಂಪಾದಕರಿಗೆ 'ಕನ್ನಡ ಗದ್ಯರೂಪದಲ್ಲಿ ಅದ್ಭುತ ರಾಮಾಯಣವೆಂಬ ಪುಸ್ತಕವು ಇಲ್ಲಿ ಸಿಕ್ಕಿರುತ್ತದೆ. ಅದು ಸರಸವಾಗಿದೆ. ಆವಶ್ಯಕವಾದರೆ ಕಳುಹಿಸುತ್ತೇನೆ' ಎಂದು ಕಾಗದವೊಂದನ್ನು ಲಕ್ಷ್ಮೀನಾರಾಯಣ ಬರೆದನು. ಕಾವ್ಯಮಂಜರಿಯವರು. ಕಳುಹಿಸಿಕೊಡಬೇಕೆಂದೂ

ಯೋಗ್ಯವಾಗಿ ಕಂಡರೆ ಮುದ್ರಿಸುತ್ತೇವೆಂದೂ ತಿಳಿಸಿದ ಮೇಲೆ ೧-೩-೧೮೯೫ ರಲ್ಲಿ ಅದ್ಭುತರಾಮಾಯಣದ ಹಸ್ತಪ್ರತಿಯನ್ನು ಈ ಕವಿ ಮೈಸೂರಿಗೆ ಕಳುಹಿಸಿಕೊಟ್ಟನು. ೧೮೯೫ ನೆಯ ಇಸವಿ ಜುಲೈ ೪೦ ನೆಯ ಸಂಚಿಕೆಯಲ್ಲಿ ಅದ್ಭುತರಾಮಾಯಣ ಮೊಟ್ಟಮೊದಲು ಮುದ್ರಿತವಾಗಲು ಆರಂಭವಾಗಿ ೧೮೯೫ ನೆಯ ಅಕ್ಟೋಬರ್ ತಿಂಗಳಿನ ೪೩ನೆಯ ಸಂಚಿಕೆಯಲ್ಲಿ ಪೂರ್ತಿಯಾಗಿ ಮುದ್ರಣಗೊಂಡು ಪ್ರಕಟವಾಯಿತು. ಈ ನಡುವೆ ಕಾವ್ಯ ಮಂಜರಿಯವರು ಕವಿಯ ಕಾಲ ಮುಂತಾದ ವಿಷಯಗಳನ್ನೂ ಕಾವ್ಯದಲ್ಲಿ ಬರುವ ಹೊಸಗನ್ನಡ ಪ್ರಯೋಗಗಳನ್ನೂ ಕವಿ ಕಲ್ಪಿತ ತದ್ಭವಗಳನ್ನೂ ಗರವಟ ಮುಂತಾದ ಪದಗಳ ಅರ್ಥವನ್ನೂ ತಿಳಿಸಬೇಕೆಂದು ಲಕ್ಷ್ಮೀನಾರಾಯಣನಿಗೆ ಕಾಗದ ಬರೆದ ಹಾಗೂ ಅದಕ್ಕೆ ಉತ್ತರವಾಗಿ ಈತ 'ಮೂಲಪ್ರತಿಯಲ್ಲಿದ್ದಂತೆ ಪ್ರತಿಮಾಡಿ ಕಳುಹಿಸಿದ್ದೇನೆ. ಆ ಪದಗಳಿಗೆ ನನಗೂ ಅರ್ಥ ತಿಳಿಯದು. ಕವಿಯ ಕಾಲ ಮುಂತಾದುವು ಗೊತ್ತಾಗುವಂತಿಲ್ಲ. ಆ ಮೂಲ ಪ್ರತಿ ಕೊಟ್ಟವರು ಈಗ ಊರಲ್ಲಿಲ್ಲ' ಎಂದು ಬರೆದ ಹಾಗೂ ತಿಳಿಯಬರುತ್ತದೆ. ಅದ್ಭುತರಾಮಾಯಣವನ್ನು ಮುದ್ರಿಸಿದಂದಿನಿಂದ ಎಂದರೆ ೪೦ ನೆಯ ಸಂಚಿಕೆಯಿಂದ ಲಕ್ಷ್ಮೀನಾರಾಯಣನನ್ನು ಕಾವ್ಯಮಂಜರಿಯವರು ತಮ್ಮ ವರ್ಗಣಿದಾರರಲ್ಲಿ ಸೇರಿಸಿಕೊಂಡು ಈತನಿಗೆ ಉಚಿತವಾಗಿ ಮಾಸಪತ್ರಿಕೆಯ ಒಂದೊಂದು ಪ್ರತಿಯನ್ನು ಕಳುಹಿಸುತ್ತ ಬಂದರಂತೆ.

೮

ಈ ಸಂದರ್ಭದಲ್ಲಿ ಲಕ್ಷ್ಮೀನಾರಾಯಣನ ಸಾಹಿತ್ಯ ಜೀವನವನ್ನು ಪ್ರವೇಶಿಸಿದ ಇನ್ನೊಬ್ಬ ದೊಡ್ಡ ವ್ಯಕ್ತಿಯನ್ನು ಕುರಿತು ಇಲ್ಲಿ ಬರೆಯಬೇಕು. ಗ್ರಂಥರಚನೌತ್ಸುಕ್ಯ, ನಿರಂತರಾಭ್ಯಾಸ, ದೃಢೈಕನಿಷ್ಠೆ, ಏಕಾಗ್ರಬುದ್ಧಿ, ಚಿತ್ತಸ್ಥೈರ್ಯ, ಶೀಘ್ರ ಗ್ರಹಣಧಾರಣ ಶಕ್ತಿ, ಗುರುಪ್ರೇರಣೆ, ಪೂರ್ವವಾಸನೋದ್ದೀಪ್ತ ಅಭಿನವಕಲ್ಪನಾಸಾಮರ್ಥ್ಯ, ಈ ಮೊದಲಾದ ತೊರೆ, ನದಿ, ಹಳ್ಳ, ಕಾಲುವೆ, ಝರಿ, ಪ್ರಪಾತಗಳಿಂದ ಪರಿಪೂರ್ಣವಾಗುತ್ತಿದ್ದ ಮುದ್ದಣ ಕವಿಯ ಕಾವ್ಯರಸಾಮೃತವಾರ್ಧಿಯನ್ನು ಉಕ್ಕೇರಿಸಲು ಬಂದ ಚಂದ್ರಮನಂತೆ, ಈ ವ್ಯಕ್ತಿಯ ಪರಿಚಯ ಲಕ್ಷ್ಮೀನಾರಾಯಣನಿಗೆ ಆಯಿತು. ಇವರೇ ಬವುಲಾಡಿ ವೆಂಕಟರಮಣ ಹೆಬ್ಬಾರರು. ಲಕ್ಷ್ಮೀನಾರಾಯಣನು ಕುಂದಾಪುರದಲ್ಲಿದ್ದಾಗ ಒಂದು ಹೋಟೆಲಿನಲ್ಲಿ ವಾಸಮಾಡಿಕೊಂಡಿದ್ದನು. ಈ ಹೆಬ್ಬಾರರು ಆಗಾಗ ಬಂದು ಅದೇ ಹೋಟಲಿನಲ್ಲಿ ಇಳಿದುಕೊಳ್ಳುತ್ತಿದ್ದರು. ಆ ಕಾಲಕ್ಕೆ (೧೮೯೦ ನೇ ಇಸವಿ) ಹೆಬ್ಬಾರರು ೧೭-೧೮ ವರ್ಷದ ಎಳೆಯ ಪ್ರಾಯದವರಾಗಿದ್ದರೂ ಹಳಗನ್ನಡ ಗ್ರಂಥಗಳಲ್ಲಿ ವಿಶೇಷವಾದ ಪರಿಶ್ರಮವನ್ನು ಪಡೆದ ವಿದ್ವಾಂಸರಾಗಿದ್ದರು. 'ಜೈಮಿನಿ ಭಾರತ'ದಂತಹ ಉತ್ಕೃಷ್ಟವಾದ ಕಾವ್ಯದ ಶೈಲಿಗೆ ಸರಿಗಟ್ಟುವ ರೀತಿಯಲ್ಲಿ ಕವಿತ್ವಮಾಡುವ ಪ್ರತಿಭಾ ಸಂಪನ್ನರಾಗಿದ್ದರು. ಧರ್ಮಕರ್ಮ ಸಂಯೋಗದಿಂದ ಲಕ್ಷ್ಮೀನಾರಾಯಣ ಮತ್ತು ಹೆಬ್ಬಾರರ ಪರಸ್ಪರ ಪರಿಚಯವಾದ ಮೇಲೆ, ಲಕ್ಷ್ಮೀನಾರಾಯಣನು ಕನ್ನಡ ಜೈಮಿನಿಭಾರತದ

ಮಾದರಿಯಲ್ಲಿ ಬರೆಯಲು ತೊಡಗಿದ್ದ 'ರಾಮಾಶ್ವಮೇಧ' ಎಂಬ ದೊಡ್ಡ ಗ್ರಂಥದ ಮೊದಮೊದಲಿನ ಕೆಲವು ಪದ್ಯಗಳನ್ನು ಓದಿ ಹೇಳಿದನು ಹೆಬ್ಬಾರರು ಪದ್ಯಬಂಧನದಲ್ಲಿ ಕಾಣಬರುವ ರಸಹೀನತೆಯನ್ನು ತೋರಿಸಿಕೊಟ್ಟು ಪ್ರಾಚೀನ ಗ್ರಂಥಗಳಲ್ಲಿ ದೊರೆಯದ ಶಬ್ದರೂಪಗಳ ಆಧಾರಗಳನ್ನು ಕೇಳುತ್ತ ಬಂದರು. ಲಕ್ಷ್ಮೀನಾರಾಯಣನಿಗೆ ಈ ಕಟು ವಿಮರ್ಶೆಯಿಂದ ಮನಸ್ಸು ನೊಂದಿತೋ ಏನೋ. ಆದರೂ ಅವರಂತಹ ಪರಿಣತರ ವಿಮರ್ಶೆ ಗ್ರಾಹ್ಯವೆಂಬುದನ್ನು ಮನಗಂಡನು.

ಮೂರು ನಾಲ್ಕು ವರ್ಷಗಳಾದ ಮೇಲೆ ಮತ್ತೊಮ್ಮೆ ತನ್ನ 'ರಾಮಾಶ್ವಮೇಧ'ದ ವಾರ್ಧಕ ಷಟ್ಪದಿಗಳನ್ನು ಹೆಬ್ಬಾರರ ಮುಂದೆ ಓದಿದನು. ಹೆಬ್ಬಾರರು ಖಡಾಖಡಿಯಾಗಿ 'ನೀವು ಹೀಗೆ ಬರೆಯುವುದಕ್ಕಿಂತ ಛಂದಸ್ಸಿನ ಗೊಡವೆ ಬಿಟ್ಟು ವಚನರೂಪದಲ್ಲಿಯೇ ಏಕೆ ಬರೆಯಬಾರದು ?' ಎಂದು ಕೇಳಿದರು.

ಮತ್ತೆ ಮೂರು ವರ್ಷಗಳು ಕಳೆದ ಮೇಲೆ 'ಅದ್ಭುತರಾಮಾಯಣ'ದ ಅಚ್ಚಾದ ಪ್ರತಿಯೊಂದನ್ನು ಈ ಕವಿ ಹೆಬ್ಬಾರರಿಗೆ ಓದಲು ಕೊಟ್ಟನು. ಅದನ್ನು ನೋಡಿ ಹೆಬ್ಬಾರರು ಒಳ್ಳೆಯ ಅಭಿಪ್ರಾಯವನ್ನು ಸೂಚಿಸಿದರು.

ಮತ್ತೆ ಮೂರು ವರ್ಷಗಳು ಸಂದಮೇಲೆ 'ರಾಮಾಶ್ವಮೇಧ'ದಲ್ಲಿ 'ರಾಮ ಪಟ್ಟಾಭಿಷೇಕ'ದ ವರೆಗಿನ ಕಥಾಭಾಗ ಮುಗಿಯಿತೆಂದೂ ಅದರ ಮುಂದಿನ ಕತೆಯನ್ನು ಗದ್ಯದಲ್ಲಿ ಬರೆಯುವ ಅಪೇಕ್ಷೆಯಿದೆಯೆಂದೂ ಲಕ್ಷ್ಮೀನಾರಾಯಣ, ಹೆಬ್ಬಾರರಿಗೆ ತಿಳಿಸಿದನು. ಅಲ್ಲದೆ ಪಟ್ಟಾಭಿಷೇಕ ಕಾಲದಲ್ಲಿ ರಾಮನ ಸ್ತುತಿಪರವಾದ ಕೆಲವು ಪದ್ಯಗಳನ್ನು ಹೆಬ್ಬಾರರೇ ಮಾಡಿಕೊಡಬೇಕೆಂದೂ ಈತ ಕೇಳಿಕೊಂಡನು. ಹೆಬ್ಬಾರರು ಒಪ್ಪಿ ರಾಮಸ್ತುತಿಪರವಾದ ಮೂವತ್ತು ಮೂರು ಪದ್ಯಗಳನ್ನು ಬರೆದುಕೊಟ್ಟರು. 'ಭೂರಮೆ ಭುಜಾಗ್ರದೋಳ್ ಭುಜಮಧ್ಯದೋಳ್' ಎಂಬ ಪದ್ಯವನ್ನಾರಂಭಿಸಿ, 'ಇಂತುಚಿತ ಮೃದು ಮಧುರ ವಚನ ರಚನೆಗಳಿಂ' ಎಂಬ ಪದ್ಯದವರೆಗೆ ನಡುವಿನ ೩೩ ಪದ್ಯಗಳನ್ನು ಹೆಬ್ಬಾರರೇ ಮಾಡಿಕೊಟ್ಟರು. ಅಲ್ಲದೆ ಕಾವ್ಯದಲ್ಲಿ ಇತರ ಎಡೆಗಳಲ್ಲಿಯೂ ಅಲ್ಲಲ್ಲಿ ತಮ್ಮ ಕೈವಾಡವನ್ನು ಕಾಣಿಸಿದರು. ಹೀಗೆ ಹೆಬ್ಬಾರರ ಸಹಾಯದಿಂದ ಲಕ್ಷ್ಮೀನಾರಾಯಣನ 'ಶ್ರೀರಾಮಪಟ್ಟಾಭಿಷೇಕ' ಕಾವ್ಯ ಸಿದ್ಧವಾಯಿತು. ಬಳಿಕ ೨೫-೯-೧೮೯೫ ರಲ್ಲಿ 'ಮಹಾಲಕ್ಷ್ಮಿಯೆಂಬಾಕೆಯಿಂದ ರಚಿತವಾದ ರಾಮಪಟ್ಟಾಭಿಷೇಕವೆಂಬ ಷಟ್ಪದೀ ಗ್ರಂಥವು ಸಿಕ್ಕಿದೆ. ಅದರಲ್ಲಿ ಪದ್ಯಗಳು ೨೫೦ ರೊಳಗಿವೆ. ಗ್ರಂಥವು ಬಹಳ ಚೆನ್ನಾಗಿದೆ. ಮುದ್ರಿಸಲು ಯೋಗ್ಯವೆಂದು ಭಾವಿಸುತ್ತೇನೆ. ಅವಶ್ಯವಾಗಿದ್ದರೆ ಅಪ್ಪಣೆ ಕೊಡಿಸಿ' ಎಂದು ಈತ ಕಾವ್ಯ ಮಂಜರಿಯವರಿಗೆ ಮತ್ತೆ ಬರೆದನು. ಕಳುಹಿಸಿಕೊಡುವಂತೆ ಕಾವ್ಯಮಂಜರಿಯವರಿಂದ ಉತ್ತರ ಬಂದಮೇಲೆ ೧೮೯೫ ನೆಯ ಸೆಪ್ಟಂಬರಿನಲ್ಲಿ ಅದ್ಭುತ ರಾಮಾಯಣದ ಮುದ್ರಣ ಮುಗಿಯುವುದಕ್ಕೆ ಮುಂಚೆಯೇ ರಾಮಪಟ್ಟಾಭಿಷೇಕದ ಕಾಗದದ ಹಸ್ತಪ್ರತಿಯನ್ನು ಈತ ಕಳುಹಿಸಿದನು. ಈ ಕರ್ತೃವಿನ ವಿಷಯವಾಗಿಯೂ ಸಂಪಾದಕರು ಪ್ರಶ್ನಿಸಿದಾಗ 'ಮೂಲಮಾತೃಕೆಯನ್ನು ಹಿಂದಕ್ಕೆ ಕೊಟ್ಟುಬಿಟ್ಟೆನು. ಯಥಾವತ್ತಾಗಿ ಪ್ರತಿಮಾಡಿದ್ದೇನೆ'

ಎಂದು ಮಾತ್ರ ಉತ್ತರ ಬರೆದನು. ಕಾವ್ಯಮಂಜರಿಯವರು ಅದ್ಭುತ ರಾಮಾಯಣವನ್ನು ಮುಗಿಸಿದ ಮರುಸಂಚಿಕೆಯಲ್ಲಿಯೇ ಎಂದರೆ ೧೮೯೫ ನೆಯ ನವೆಂಬರ್ ೪೪ ನೆಯ ಸಂಚಿಕೆಯಲ್ಲಿಯೇ ರಾಮಪಟ್ಟಾಭಿಷೇಕವನ್ನು ಆರಂಭಮಾಡಿ ೯೬ ನೆಯ ಜನವರಿ ೪೬ ನೆಯ ಸಂಚಿಕೆಯಲ್ಲಿ ಮುಗಿಸಿದರು. ಅದೇ ಜನವರಿ ೪೬ ನೆಯ ಸಂಚಿಕೆಯಲ್ಲಿ ಅದ್ಭುತರಾಮಾಯಣಕ್ಕೆ ಟಿಪ್ಪಣಿಯನ್ನೂ ಪೀಠಿಕೆಯನ್ನೂ ಮುಖಪತ್ರವನ್ನೂ ಮುದ್ರಿಸಿದರು. ೧೬-೬-೧೮೯೬ ರಲ್ಲಿ ಲಕ್ಷ್ಮೀನಾರಾಯಣನಿಗೆ ಅದ್ಭುತ ರಾಮಾಯಣದ ಹತ್ತು ಮುದ್ರಿತ ಪುಸ್ತಕಗಳನ್ನು ಬಹುಮಾನವಾಗಿ ಕಾವ್ಯಮಂಜರಿಯವರು ಕಳುಹಿಸಿಕೊಟ್ಟರಂತೆ. ಈ ಹತ್ತರಲ್ಲಿ ಒಂದನ್ನು ಮೇಲೆ ತಿಳಿಸಿದಂತೆ ಈತ ಹೆಬ್ಬಾರರಿಗೆ ಕೊಟ್ಟನೆಂದು ತೋರುತ್ತದೆ.

'ರಾಮಪಟ್ಟಾಭಿಷೇಕ' ಕಾವ್ಯದಲ್ಲಿ ನಾಂದೀ ಸಂಧಿಯಲ್ಲಿ ಬರುವ ಪ್ರತಿಪದ್ಯದ ಮೊದಲನೆಯ ಅಕ್ಷರವನ್ನು ಕ್ರಮವಾಗಿ ಜೋಡಿಸುತ್ತ ಹೋದರೆ 'ಶ್ರೀರಾಮಚಂದ್ರಾಯ ನಮಾಮಿ' ಎಂದಾಗುತ್ತದೆ. ಈ ಗೂಢರಚನೆಯ ಸ್ವಾರಸ್ಯವನ್ನು ಈತನೇ ಹೆಬ್ಬಾರರಿಗೆ ತೋರಿಸಿಕೊಟ್ಟಿದ್ದನಂತೆ. 'ಮಹಾಲಕ್ಷ್ಮಿ' ಕಾವ್ಯಕರ್ತೃವೆಂದು ಬರೆದದ್ದನ್ನು ನೋಡಿ ಹೆಬ್ಬಾರರು 'ನನ್ನ ತಾಯ ಹೆಸರೂ ಮಹಾಲಕ್ಷ್ಮಿ, ಅದನ್ನೇ ಹಾಕಿದ್ದೀರಾ ?' ಎಂದು ಪರಿಹಾಸ್ಯ ಮಾಡಿದ್ದರಂತೆ. 'ರಾಮಾಶ್ವಮೇಧ' ಎಂದು ಪ್ರಾರಂಭವಾದ ಕೃತಿ 'ರಾಮಪಟ್ಟಾಭಿಷೇಕ'ವಾಗಿ ಹೀಗೆ ಪ್ರತ್ಯೇಕ ಕಾವ್ಯವಾಗಿ ರೂಪುಗೊಂಡಾಗ ಅದಕ್ಕೆ ಅನುಗುಣವಾಗಿ ಅಲ್ಲಲ್ಲಿ ಪದಗಳ ಬದಲಾವಣೆಯನ್ನು ಮಾಡಬೇಕಾಗಿ ಬಂದಿತು. 'ಶ್ರೀಕಾಂತನಧ್ವರದ ಚಾರಿತ್ರ್ಯಮಂ' ಎನ್ನುವ ಕಡೆ ಬದಲಾವಣೆಯಾಗದಿದ್ದುದನ್ನು ಹೆಬ್ಬಾರರು ತೋರಿಸಿಕೊಟ್ಟು 'ಅಭ್ಯುದಯ ಚಾರಿತ್ರಮಂ' ಎಂದು ತಿದ್ದಿದರು. ಈ ತಿದ್ದುಪಡಿಯನ್ನು ಮುದ್ದಣ ಒಪ್ಪಿಕೊಂಡನು. 'ಅದ್ಭುತ ರಾಮಾಯಣ'ದ ಅಂತ್ಯಭಾಗದ ಸಮಾಪ್ತಿ ರೂಪಕವಾದ ಗದ್ಯಭಾಗದಲ್ಲಿ ಬರುವ 'ಕಣ್ ನಡಿಗ' ಎಂಬ ಪದಕ್ಕೆ ಈಶ್ವರ ಎಂಬ ಅರ್ಥವನ್ನು ಕವಿಯೇ ಹೆಬ್ಬಾರರಿಗೆ ಹೇಳಿದ್ದನಂತೆ. ಈ ಕವಿ ಕನ್ನಡ ಮತ್ತು ತುಳು ಭಾಷೆಗಳ ಗ್ರಾಮ್ಯ ಶಬ್ದಗಳಿಗೆ ಹಳಗನ್ನಡದ ಸಂಸ್ಕಾರವನ್ನು ಕೊಟ್ಟು ಕಾವ್ಯಗಳಲ್ಲಿ ಬಳಸಿದ್ದಾನೆ ಎಂದು ಹೆಬ್ಬಾರರು ಹೇಳುತ್ತಾರೆ.

ಮುಂದೆ ಹೆಬ್ಬಾರರ ಲಕ್ಷ್ಮೀನಾರಾಯಣರ ಸಂದರ್ಶನ ಬರುಬರುತ್ತಾ ಕಡಮೆಯಾಗಿ ಕೊನೆಗೊಮ್ಮೆ ಕಡಿದು ಹೋಯಿತು. ಇದಕ್ಕೆ ಕಾರಣ ಆತನು ಆಗಾಗ ರಜೆಯನ್ನು ಪಡೆದು ಉಡುಪಿಗೆ ಹೋಗುತ್ತಿದ್ದುದೂ ಕೊನೆಗೊಮ್ಮೆ ಆತನಿಗೆ ಉಡುಪಿಗೆ ವರ್ಗವಾದುದೂ ಎಂದು ತೋರುತ್ತದೆ.

೯

'ಪದ್ಯಂ ಬಧ್ಯಂ ಗದ್ಯಂ ಹೃದ್ಯಂ ಹೃದ್ಯಮಪ್ಪ ಗದ್ಯದೊಳೇ ಪೇಳ್ವುದು' ಎನ್ನುವುದು ಈಗ ಕವಿಯ ನಿರ್ಧಾರ. ಈ ನಿರ್ಧಾರಕ್ಕೆ ಶ್ರೀ ಹೆಬ್ಬಾರರು ಹೇಗೆ ಕಾರಣರಾದರೆಂಬುದನ್ನು ಹಿಂದೆ ನೋಡಿದ್ದಾಗಿದೆ. ಅವರ ಅಮೂಲ್ಯವಾದ

ಸಲಹೆಯನ್ನು ಲಕ್ಷ್ಮೀನಾರಾಯಣ ಅಂಗೀಕರಿಸಿದನು. ರಾಮಪಟ್ಟಾಭಿಷೇಕವನ್ನು ಮುಗಿಸಿದಮೇಲೆ ಮುಂದಿನ ರಾಮಾಶ್ವಮೇಧದ ಕಥೆಯನ್ನು ಹಳಗನ್ನಡ ಗದ್ಯದಲ್ಲಿ ಬರೆಯಲು ತೊಡಗಿದನು. ಅದಕ್ಕೆ ಬೇಕಾದ ಪೂರ್ವ ಸಿದ್ಧತೆಯ ದಿನಗಳಲ್ಲಿ ಎಂದಿನಂತೆ ಸಂಸ್ಕೃತದ ಪದ್ಮಪುರಾಣದಲ್ಲಿ ಕಂಡುಬರುವ ರಾಮಾಶ್ವಮೇಧದ ಮೂಲ ಕಥಾಭಾಗವನ್ನು ಗುರುಗಳಲ್ಲಿ ಓದಿ ತಿಳಿದುಕೊಂಡದ್ದಾಯಿತು. ಇತ್ತ ಮುಖೋದ್ಗತವಾಗಿದ್ದ ಲಕ್ಷ್ಮೀಶ ಕವಿಯ ಜೈಮಿನಿ ಭಾರತದ ಷಟ್ಪದಿಗಳ ಝೇಂಕಾರ ಇನ್ನೊಮ್ಮೆ ಕಿವಿಯಲ್ಲಿ ಮೊರೆಯಿತು. ಆ ಸೀತಾಪರಿತ್ಯಾಗದ ಹೃದ್ಯವಾದ ಕಥಾಭಾಗವಂತೂ ರಮ್ಯೋಜ್ವಲ ಚಿತ್ರವಾಗಿ ಚಿತ್ತ ಫಲಕದಲ್ಲಿ ನಿಂತಿತು. ಆ ಕಥೆಯನ್ನು ಸುಂದರತರವಾಗಿ ಹೇಳಿ ಮುಂದುವರಿಸಬೇಕೆಂದು ಕವಿ ಆಶಿಸಿದನು.

ಆ ವೇಳೆಗೆ ವೆಂಕಟಾಚಾರ್ಯರು ಕನ್ನಡ ನುಡಿಯ ನೆಲದಲ್ಲಿ ವಂಗ ಕಾದಂಬರಿಯ ಕಾವ್ಯರಸದ ಮಕರಂದವನ್ನು ಸುರಿಯಿಸುವ ಮಧುಮಂಜರಿಯ ಮಂಜುಳತರ ರಸಾಲತರುರಾಜಿಯನ್ನು ನಟ್ಟು ಬೆಳಸಿಬಿಟ್ಟಿದ್ದರು. ಆ ಗದ್ಯ ಕಾದಂಬರಿಯ ಸೌಂದರ್ಯಲಕ್ಷ್ಮಿಯ ವಿಹಾರೋಪವವನ ವೀಧಿಯಲ್ಲಿ ಪಾಠಕ ಭ್ರಮರಾಳಿ ಆಮೋದದಿಂದ ಸುಳಿದಾಡುತ್ತಿತ್ತು. ರಸಿಕಕಳಕಂಠಗಳವೆಷ್ಟೋ ಪಂಚಮ ಸ್ವರದಲ್ಲಿ ಗಾನಗೈಯಲು ತೊಡಗಿದ್ದವು. ಲಕ್ಷ್ಮೀನಾರಾಯಣನು ದಕ್ಷಿಣ ಕನ್ನಡ ಜಿಲ್ಲೆಯತ್ತ ನುಸುಳಿಬಂದ ಹಲಕೆಲವು ಕಾದಂಬರಿಗಳನ್ನು ತಂದು ಓದಿದನು. ಆ ಕಾದಂಬರಿಯ ಚೂತ ಕಾಂತಾರದಲ್ಲಿ ಮಕರಂದಗ್ರಾಹಿಯಾಗಿ, ವಿನೋದಾನುಭವಿಯಾಗಿ ಚಲಿಸಿದನು. ವಿಷವೃಕ್ಷದ ಕಮಲಮುಖಿಯ ಮತ್ತು ಅವಳ ಪ್ರಿಯವ ಸರಸ ಸಂಭಾಷಣೆಯನ್ನು ಓದಿದುದರ ಪರಿಣಾಮವಾಗಿ ತಾನು ತನ್ನ 'ರಾಮಾಶ್ವಮೇಧ'ದಲ್ಲಿ ಪ್ರಿಯ ಪ್ರೇಯಸಿಯರ ಸರಸ ಸಂಭಾಷಣೆಯೊಂದನ್ನು ತರಬೇಕೆಂದುಕೊಂಡನು. ತನ್ನ ಕತೆಯ ರೀತಿಯಾದರೂ ಕಾದಂಬರಿಯ ರೀತಿಯಲ್ಲಿಯೇ ಆರಂಭ' ಬೆಳವಣಿಗೆ ಮುಕ್ತಾಯಗಳಲ್ಲಿ ಕುತೂಹಲಾಂಶಗಳನ್ನೊಳಗೊಂಡು ವಾಚನಾಭಿರುಚಿಯನ್ನು ಕೆರಳಿಸುವಂಥದಾಗಿರಬೇಕೆಂದುಕೊಂಡನು. ಪುರಾಣದ ಕತೆಯನ್ನು 'ಮುದ್ರಾಮಂಜೂಷ'ದ ಹೊಸಗನ್ನಡದಲ್ಲಿ ಹೇಳಿದರೆ ಪಂಡಿತರಿಗೆ ಪ್ರಿಯವಾಗುವುದೋ ಇಲ್ಲವೋ ಎನ್ನುವ ಅನುಮಾನ, 'ದುರ್ಗೇಶನಂದಿನಿ'ಯಂತಹ ಹೊಸ ಕತೆಯನ್ನು ಹಳಗನ್ನಡದಲ್ಲಿ ಬರೆಯುವುದಾದರೆ ಅದಕ್ಕೆ ಬೇಕಾದ ಪ್ರತಿಭಾಶಕ್ತಿ ತನ್ನಲ್ಲಿ ಇದೆಯೋ ಇಲ್ಲವೋ ಎಂಬ ಅಪನಂಬಿಕೆ; ಈ ಎರಡರ ನಡುವೆ ಸುವರ್ಣಮಧ್ಯಮದ ಒಂದು ಹೊಸ ರೀತಿಯಲ್ಲಿ ಇನ್ನು ಮುಂದೆ ತನ್ನ ಕಾವ್ಯವನ್ನು ರಚಿಸಬೇಕು – ಎಂದೆಲ್ಲ ಯೋಚಿಸಿ ಹಳೆಯ ಕಥೆಯನ್ನು ಹೊಸ ಆಯದಲ್ಲಿ ಕಟ್ಟುವ ಹವಣಿಕೆಯನ್ನು ಹುಡುಕಿದನು. 'ಚಿಕದೇವರಾಜ ವಂಶಾವಳಿ'ಯಷ್ಟು ಬಿಗಿಯಾದ ಹಳಗನ್ನಡ ಶೈಲಿಯನ್ನೂ ತ್ಯಜಿಸಿ, ವಾಣೀವಿಲಾಸ ಗ್ರಂಥಗಳಷ್ಟು ಸರಳವಾದ ಹೊಸಗನ್ನಡ ಶೈಲಿಯನ್ನೂ ತ್ಯಜಿಸಿ ಇಲ್ಲಿಯೂ ಒಂದು ಸುವರ್ಣ ಮಾರ್ಗವನ್ನು ಮುದ್ದಣನು

ಹುಡುಕಿದನು. ಒಂದರ ಕಾಠಿಣ್ಯ ಮತ್ತೊಂದರ ಶೈಥಿಲ್ಯ ತೋರದ ರೀತಿಯಲ್ಲಿ ಎರಡನ್ನೂ ಹೊಸೆದು 'ತುಳು ನುಡಿಗಳನ್ನೂ, ಕನ್ನಡ ಮಾತುಗಳನ್ನೂ ಸಂದರ್ಭಕ್ಕನುಸಾರವಾಗಿ ಹಳಗನ್ನಡದಿಂದ ತಿರುಪಿ ಎಷ್ಟು ಅರ್ಥಭಾರವನ್ನು ಹಾಕಿದರೂ ಕಡಿದುಹೋಗದಂತೆ ಹಳೆಯ ವ್ಯಾಕರಣ ಸೂತ್ರಗಳಿಂದ ಗಂಟಿಕ್ಕಿ ತನ್ನದೇ ಆದ ಒಂದು ಅಪೂರ್ವ ಭಾಷಾ ಸರಣಿಯನ್ನು ನಿರ್ಮಿಸಿಕೊಂಡನು.' ಶೈಲಿಯ ವಿಷಯದಲ್ಲಿಯೂ ತನ್ನದೇ ಆದ ಒಂದು ಸಿದ್ಧಾಂತವನ್ನು ಏರ್ಪಡಿಸಿಕೊಂಡನು. 'ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ, ರಸಮೊಸರೆ ಲಕ್ಕಣಂ ಮಿಕ್ಕಿರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆರೆಯೆ, ತಿರುಳ್ಗನ್ನಡದೊಳೆ ಕಥೆಯನುಸಿರ್ವೆಂ.' ಹೀಗೆ ಎಲ್ಲ ರೀತಿಯಲ್ಲಿಯೂ ನೂತನ ಮಾರ್ಗಾನ್ವೇಷಿಯಾಗಿ ನಿಜವಾಗಿಯೂ ಅತ್ಯಪೂರ್ವವಾದ ಕೃತಿಯೊಂದನ್ನು ನಿರ್ಮಿಸಲು ತೊಡಗಿದನು.

'ರಾಮಾಶ್ವಮೇಧ'ದಲ್ಲಿ ಬರುವ ಮುದ್ದಣ ಮನೋರಮೆಯರ ಪಾತ್ರ ಸೃಷ್ಟಿ ಅಪೂರ್ವವಾದದ್ದು. ಇವರ ಕಾಮದೇವ, ರತಿದೇವಿಯರ ಸಲ್ಲಾಪದ, "ಭವತಿ ಭಿಕ್ಷಾಂ ದೇಹಿ' ಪ್ರಕರಣದ ಸಲ್ಲಾಪದ, ಭಾಗಗಳಂತೂ ರಸದ ಮಡುಗಳಾಗಿ ಕಂಗೊಳಿಸುತ್ತವೆ.

"ಕಿರಿಯಾಳದ ನಗೆನೀರಿನ ಮೇಲೆ
ತಿರುಗುತ ಬಹುವೇಳೆ
ಕಣ್ಣೀರಿನ ಕಡಲಿನ ಪಾಲು
ಹಾಸ್ಯದ ಹರಿಗೋಲು"

ಎನ್ನುವ ಹೃದಯಾಂತರಾಳದ ಉದ್ಗಾರಕ್ಕೆ 'ಭವತಿ ಭಿಕ್ಷಾಂದೇಹಿ' ಮಂತ್ರೋಪದೇಶಕ್ಕಿಂತ ಬೇರೆ ನಿದರ್ಶನ ಬೇಕೆ ? ತನ್ನಂತಹ ಕಬ್ಬಿಗರು ಕೂಡ ಈ 'ಭವತಿ ಭಿಕ್ಷಾಂದೇಹಿ' ಎಂಬ ಸಪ್ತಾಕ್ಷರಿ ಮಂತ್ರದಿಂದ ಸಿದ್ಧಿಗಾಣುವರೆಂದು ಮುಗುಳುನಗೆ ನಗುತ್ತ (ಮನೋರಮೆಗೆ) ಹೇಳುವುದನ್ನು ಓದಿದರೆ ಇದನ್ನು ಬರೆದ ನಂದಳಿಕೆಯ ೧೦-೧೫-೨೦ ರೂಪಾಯಿ ಸಂಬಳದ ಕತೆ ತಿಳಿದ ಯಾರ ಕಣ್ಣು ತೇವವಾಗಲಿಕ್ಕಿಲ್ಲ ? ಯಾವ ಕವಿ ಮೊದಲು 'ಕನ್ನಡ ಕಬ್ಬಿಗರ ಮನೆಯೂರಿಗದವನೋರ್ವಂ ಕನ್ನಡಿಗಂ ಪೇಳ್ದಂ' ಎಂದು ದೈನ್ಯಭಾವವನ್ನು ಪ್ರದರ್ಶಿಸಿದನೊ 'ಕನ್ನಡಿತಿಯೊರೆದ ನುಡಿಯೆಂದಿದಂ ಭಾವಿಸದೆ ಕನ್ನಡಿಗನೊರೆದ ನುಡಿಯೆಂದು ಸಂಭಾವಿಪುದು' ಎಂದು ಸ್ತ್ರೀ ಕರ್ತೃಕತ್ವದ ಆಶ್ರಯದಲ್ಲಿ ಕನ್ನಡಿಗರ ಬೆಂಬಲವನ್ನು ಬೇಡಿದನೋ, ಆ ಕವಿ ಈ "ರಾಮಾಶ್ವಮೇಧ'ವನ್ನು ರಚಿಸುವ ಕಾಲಕ್ಕೆ 'ಅರಮನೆಯಿಂ ಪೊರಮಡುವ ಕಬ್ಬಿಗರ ಬಲ್ಲಹ ಮುದ್ದಣ'ನಾದನು. 'ಇಂತಪ್ಪ ನಲ್ಗತೆಯಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಗಡಗಮಂ,

ಪೊನ್ನಕಂತಿಕೆಯಂ ಮೆಚ್ಚನೀವರ್ ನೀನೀವುದೇಂ ?' ಎಂದು ಕೇಳುವಷ್ಟರಮಟ್ಟಿನ ಆತ್ಮವಿಶ್ವಾಸವನ್ನು ಮೆರೆದನು.

'ರಾಮಾಶ್ವಮೇಧ' ನಿಜವಾಗಿಯೂ 'ಈ ಬಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲಮೆಂತಾಯ್ತು'; 'ಬಲ್ಸೊಗಸು' 'ಬಲ್ಸೊಗಸು' ಎಂದು ಪ್ರಶಂಸಿಸುವಂತಾಯ್ತು; ಒಪ್ಪಿಪ್ಪರಿಗಲ್ಲ, 'ನಾಡೊಳೆಲ್ಲರ್ಗಂ' ಆದರವಾಗುವಷ್ಟು ಸೊಗಸಾಯ್ತು. ಈ ಕೃತಿಯನ್ನೂ ಲಕ್ಷ್ಮೀನಾರಾಯಣ 'ಮುದ್ದಣ'ನ ಹೆಸರಿನಲ್ಲಿಯೇ ಮೊದಲಿನವುಗಳಂತೆಯೇ ಪ್ರಕಟಣೆಗಾಗಿ ಮೈಸೂರಿಗೆ ಕಳುಹಿಸಿಕೊಟ್ಟನು.

೧೮೯೭ ನೆಯ ಸೆಪ್ಟೆಂಬರ್ ತಿಂಗಳಿನಲ್ಲಿ ಮತ್ತೆ ಕಾವ್ಯಮಂಜರಿಯವರಿಗೆ ಲಕ್ಷ್ಮೀನಾರಾಯಣನು 'ಮುದ್ದಣಕೃತವಾದ ರಾಮಾಶ್ವಮೇಧವೆಂಬ ಗದ್ಯ ಗ್ರಂಥವು ಸಿಕ್ಕಿದೆ. ಅದು ನಿಮ್ಮ ಸಂಚಿಕೆಯಲ್ಲಿ ಮುದ್ರಿತವಾಗಲು ಯೋಗ್ಯವಾಗಿದೆಯೆಂದು ತೋರುತ್ತದೆ. ಅಪ್ಪಣೆಯಾದರೆ ಕಳುಹಿಸಿಕೊಡುತ್ತೇನೆ' ಎಂದು ಪತ್ರವನ್ನು ಬರೆದನು. ಕಾವ್ಯಮಂಜರಿಯವರ ಬೇಡಿಕೆಯಂತೆ ಸ್ವಹಸ್ತಾಕ್ಷರದಲ್ಲಿ ಬರೆದ ಅದರ ಪ್ರತಿಯನ್ನು ಈತ ಅಕ್ಟೋಬರ್ ತಿಂಗಳಿನಲ್ಲಿ ಸಂಪಾದಕರಿಗೆ ಕಳುಹಿಸಿಕೊಟ್ಟನು. ಕಾರಣಾಂತರದಿಂದ ಕೆಲಕಾಲ 'ಕಾವ್ಯಮಂಜರಿ' ನಡೆಯಲಿಲ್ಲ. ಮತ್ತೆ ೧೮೯೯ ರಲ್ಲಿ ಅದರ ಸ್ಥಾನದಲ್ಲಿ ಶ್ರೀ ಮಂ. ಆ. ರಾಮಾನುಜಯ್ಯಂಗಾರ್ಯರೂ ಶ್ರೀ ಎಸ್. ಜಿ. ನರಸಿಂಹಾಚಾರ್ಯರೂ "ಕರ್ಣಾಟಕ ಕಾವ್ಯಕಲಾನಿಧಿ" ಎಂಬ ಹೊಸ ಮಾಸ ಪತ್ರಿಕೆಯನ್ನು ಹೊರಡಿಸಿದರು. ಹಳೆಯದು ನಿಂತು ಹೊಸದು ಹೊರಡುವ ವೇಳೆಗೆ ಸುಮಾರು ಒಂದು ವರುಷ ಮೂರು ತಿಂಗಳ ಕಾಲ ಹಿಡಿಯಿತು. ಈ ನಡುವೆ ಲಕ್ಷ್ಮೀನಾರಾಯಣ 'ನಿಮ್ಮ ಮಾಸಪತ್ರಿಕೆಯು ನಿಂತ ಹಾಗಿದೆ. ರಾಮಾಶ್ವಮೇಧಕ್ಕೆ ಅಚ್ಚಾಗುವ ಸಂದರ್ಭವು ದೊರಕದಿದ್ದರೆ ನನ್ನ ಪ್ರತಿಯನ್ನು ವಾಪಸ್ಸು ಕಳುಹಿಸಿಕೊಡಿ' ಎಂದು ಬರೆದನು. ಕಲಾನಿಧಿಯವರು ಹೊಸ ಮಾಸಪತ್ರಿಕೆಯನ್ನು ಅಚ್ಚು ಹಾಕಿಸುವುದಾಗಿ ತಿಳಿಸಿ ಕಾವ್ಯಕಲಾನಿಧಿಯಲ್ಲಿ ೧ ನೆಯ ಸಂಚಿಕೆಯಿಂದ ೮ ರವರೆಗೆ ರಾಮಾಶ್ವಮೇಧವನ್ನು ಮುದ್ರಿಸಿ ಕ್ರಮವಾಗಿ ಕೊಡುತ್ತಾ ಬಂದರು. ಹೀಗೆ ೧೧೨ ಪುಟಗಳು ಅಚ್ಚಾದವು. ಮುಂದೆ ೧೯೦೧ ನೆಯ ಜೂನ್ ೨೭ ರಲ್ಲಿ ಪ್ರಚುರಪಡಿಸಿದ ೧೪, ೧೫, ೧೬ ನೆಯ ಸಂಚಿಕೆಗಳಲ್ಲಿ ಪುನಃ ರಾಮಾಶ್ವಮೇಧವನ್ನು ಮುಂದುವರಿಸಿ ೧೫-೮-೧೯೦೧ ರಲ್ಲಿ ಹೊರಟ ೧೭-೧೮ ನೆಯ ಸಂಚಿಕೆಯಲ್ಲಿ ಮುಗಿಸಿದರು. ೧೯೦೦ ಜೂನ್ ತಿಂಗಳಲ್ಲಿ ಕಲಾನಿಧಿಯವರು ಮುದ್ದಣ ಕವಿಯ ವಿಷಯವನ್ನಾದರೂ ತಿಳಿಸಿ ರೆಂದು ಕಾಗದ ಬರೆದರಂತೆ ... 'ಯಾರೋ ಆಧುನಿಕರು ಇದನ್ನು ಬರೆದಿರಬೇಕು. ಅವರು ನಿಮ್ಮ ಸ್ನೇಹಿತರಾಗಿದ್ದರೂ ಬಾಧಕವಿಲ್ಲ. ಅವರ ಹೆಸರನ್ನು ಪ್ರಚಾರಗೊಳಿಸಲು ಸಿದ್ಧರಾಗಿದ್ದೇವೆ. ಖಂಡಿತವಾಗಿ ತಿಳಿಸುವುದು' ಎಂದು ಕೇಳಿದಾಗ ಲಕ್ಷ್ಮೀನಾರಾಯಣನು ಕರ್ತೃ ತಾನಲ್ಲವೆಂದೂ ತನಗೆ ಸಿಕ್ಕಿದ ಮಾತೃಕೆಯಂತೆಯೇ ಹಸ್ತಪ್ರತಿಯನ್ನು ತಾನು ಬರೆದುದಾಗಿಯೂ ತಿಳಿಸಿದನಂತೆ. ಮುಂದೆ ೧೯೦೦ ನೆಯ ಡಿಸೆಂಬರಿನಲ್ಲಿ ಶ್ರೀ ಬೆನಗಲ್ ರಾಮರಾಯರು ಶ್ರೀ ನರಸಿಂಹಾಚಾರ್ಯರನ್ನು

ಸಂದರ್ಶಿಸಿ ನಂದಳಿಕೆಯವರೇ ಪ್ರಕೃತ ಗ್ರಂಥಗಳ ಕರ್ತೃಗಳೆಂದು ಹೇಳಿದರಂತೆ. ಆ ಬಳಿಕ ಮತ್ತೆ ಕಲಾನಿಧಿಯವರು ಲಕ್ಷ್ಮೀನಾರಾಯಣನಿಗೆ ಕಾಗದ ಬರೆದರು. ಆದರೆ ಆ ಕಾಗದ ತಲುಪುವ ವೇಳೆಗೆ ಈ ಕವಿ ಇಹಲೋಕ ವ್ಯಾಪಾರವನ್ನು ಮುಗಿಸಿಬಿಟ್ಟಿದ್ದನು.

"ಗ್ರಂಥಕರ್ತರಿಗೆ ತಮ್ಮ ಹೆಸರನ್ನು ಗ್ರಂಥದಲ್ಲಿ ಕೊಟ್ಟರೆ ಹಳೆಯ ಕವಿಗಳದ್ದಲ್ಲವೆಂದು ಎಲ್ಲಿ ಹಿಂದಟ್ಟುವರೋ ಎಂಬ ಭೀತಿಯೊಂದು ಕಡೆ, ಬುದ್ಧಿ ಬಲದಿಂದ ರಚಿತವಾದುದಾಗಿರಲಾಗಿ ಅನೇಕವಾಗಿ ಅಪಭ್ರಂಶಗಳು ಬಿದ್ದಿವೆಯೋ ಎಂಬ ಶಂಕೆಯೊಂದು ಕಡೆ, 'ಆಪರಿತೋಷಾದ್ವಿದುಷಾಂ ನ ಸಾಧು ಮನ್ಯೇ ಪ್ರಯೋಗವಿಜ್ಞಾನಂ' ಎಂಬ ರೀತಿಯಲ್ಲಿ ಈ ಗ್ರಂಥದ ಮೂಲಕ ತಮ್ಮ ಕವಿತಾ ಶಕ್ತಿಯನ್ನು ನಿಕಷದಲ್ಲಿಟ್ಟು ತಿಳಿದುಕೊಳ್ಳೋಣವೆಂಬ ಆಶಯವೊಂದು ಕಡೆ. ಈ ಕಾರಣದಿಂದ ಅವರು ತಮ್ಮ ಹೆಸರನ್ನು ಕೊಡಲಿಲ್ಲವೆಂದು ಊಹಿಸುತ್ತೇನೆ" ಎಂದು ಶ್ರೀ ರಾಮಾನುಜ ಅಯ್ಯಂಗಾರ್ಯರೂ "ಕವಿಗೆ ಸ್ವತಂತ್ರವಾದ ಅಚ್ಚಿಗೆ ಬೇಕಾದ ಧನ ಬಲವಿರಲಿಲ್ಲ. ಹೆಸರನ್ನು ಕೊಟ್ಟರೆ 'ಹಳೆಯ ಕವಿಗಳದ್ದಲ್ಲ'ವೆಂದು ಎಲ್ಲಿ ಹಿಂದಿರುಗುವುದೋ ಮೂಲೆಗೆ ಬೀಳುವುದೋ ಎಂಬ ಭೀತಿಯೊಂದು ಕಡೆ, ಹೊಸ ಕವಿಯಾದುದರಿಂದ ತಪ್ಪೊಪ್ಪುಗಳೆಷ್ಟಿವೆಯೋ ಎಂಬ ಚಿತ್ತಚಾಂಚಲ್ಯವೊಂದು ಕಡೆ – ಈ ಮುಖ್ಯ ಕಾರಣಗಳಿಂದಲೇ ಕವಿ ತನ್ನ ಕಾವ್ಯಗಳಿಗೆ ನಿಜವಾದ ಹೆಸರನ್ನು ಕೊಟ್ಟಿಲ್ಲವೆಂದು ನಾನು ತಿಳಿಯುತ್ತೇನೆ" ಎಂದು ಶ್ರೀ ಹುರುಳಿ ಭೀಮರಾಯರೂ ಹೇಳುತ್ತಾರೆ. ಲಕ್ಷ್ಮೀನಾರಾಯಣ ಕವಿ ಧರಿಸಿದ ಅನ್ಯಕರ್ತೃಕತ್ವದ ಸೋಗಿಗೆ ಇವಕ್ಕೂ ಹೆಚ್ಚಿನ ಕಾರಣಗಳು ಬೇರೆ ಬೇಕೆ ? ಈ ಸಂದರ್ಭದಲ್ಲಿ ಅವನ ಮನೋಧರ್ಮ ಎಂತಹದಾಗಿದ್ದಿತೆಂಬುದನ್ನು ಲಕ್ಷ್ಮೀನಾರಾಯಣನಿಗೂ ರಾಮರಾಯರಿಗೂ ನಡೆದ ಸಂಭಾಷಣೆಯಿಂದ ತಿಳಿದುಕೊಳ್ಳಬಹುದು.

೧೯೦೧ ರಲ್ಲಿ 'ರಾಮಾಶ್ವಮೇಧ' ಮೊಟ್ಟ ಮೊದಲು ಅಚ್ಚಾಗಿ ಪ್ರಕಟವಾಯಿತು. ಈ ಕೃತಿಯನ್ನು ಹಸ್ತಪ್ರತಿಯಲ್ಲಿ ಓದಿದವರೂ ಅಚ್ಚಾದ ತರುಣದಲ್ಲಿ ಪುಸ್ತಕವನ್ನೋದಿದ ಇತರರೂ ಮುದ್ದಣನನ್ನು ಬಗೆಬಗೆಯಾಗಿ ಶ್ಲಾಘಿಸಿದರು. ಮುದ್ದಣ ಮನೋರಮೆಯರ ಸಂಭಾಷಣಾ ವಾಕ್ಯಗಳೇ ಎಲ್ಲರ ಬಾಯಿಯಲ್ಲಿಯೂ ! ರಾಮಾಶ್ವಮೇಧದ ಪ್ರಶಂಸಾಪರಲೇಖನಗಳೇ ಎಲ್ಲ ಪತ್ರಿಕೆಗಳಲ್ಲಿಯೂ ! ಕೆಲವು ಇಂಗ್ಲಿಷ್ ಪತ್ರಿಕೆಗಳೂ ಈತನ ಕೃತಿಯನ್ನು ಕೊಂಡಾಡಿದುವು. ತನ್ನ ಕೃತಿಗಳ ಈ ಬಗೆಯ ಜನಪ್ರಿಯತೆಯನ್ನು ಕಂಡು ಕೇಳಿದ ಕವಿ ನಿಜವಾಗಿಯೂ ಧನ್ಯ !

## ೧೦

ಸಾಹಿತ್ಯ ಜೀವನದಲ್ಲಿ ಶಿಖರಾರೋಹಿಯಾದ ಮುದ್ದಣ ಕವಿಯ ವೈಭವಪೂರ್ಣವಾದ ವಿವರಗಳನ್ನು ನೋಡಿದ ಮೇಲೆ ಸಾಂಸಾರಿಕ ಜೀವನದಲ್ಲಿ ಆತನಿಗೆ ಸಂಬಂಧಿಸಿದ ಕೆಲವು ವಿವರಗಳನ್ನು ಇಲ್ಲಿ ನೆನೆಯಬಹುದು.

ಲಕ್ಷ್ಮೀನಾರಾಯಣನು ೧೮೯೪ ನವಂಬರ್‌ನಿಂದ ೧೮೯೯ ರ ಫೆಬ್ರುವರಿಯ ವರೆಗೆ 'ಅಂದಂದು ರಜೆ ಪಡೆದುಕೊಂಡು ನಡುವೆ ಉಡುಪಿಯ ಕ್ರಿಶ್ಚಿಯನ್ ಹಾಯ್‌ಸ್ಕೂಲಿನಲ್ಲಿ ಪಾಠ ಹೇಳುತ್ತಿದ್ದು ಕೊನೆಗೆ ತಿಂಗಳೊಂದರ ೨೦ ರೂಪಾಯಿ ಸಂಬಳದಲ್ಲಿ ಅಲ್ಲಿ ಕನ್ನಡ ಪಂಡಿತನಾದನು.' ೧೮೯೩ ರಲ್ಲಿ ಆತನ ಇಪ್ಪತ್ತೈದನೆಯ ವಯಸ್ಸಿನಲ್ಲಿ ಲಕ್ಷ್ಮೀನಾರಾಯಣನಿಗೆ ಮದುವೆಯಾಯಿತೆಂದು ಕವಿಚರಿತೆಕಾರರು ಹೇಳುತ್ತಾರೆ. 'ಈತನ ಹೆಂಡತಿ ಕಮಲಾಬಾಯಿ ಎಂಬಾಕೆಯು ಮೈಸೂರು ಸೀಮೆಯವಳು – ಶಿವಮೊಗ್ಗ ಡಿಸ್ಟ್ರಿಕ್ಟ್ ಕೂಡಲಕೆರೆ ಮಾಗಣಿ, ಕಾಗೇಕೋಡಮಗ್ಗಿ ಗ್ರಾಮದ ನಾರ್ಣಪ್ಪಯ್ಯನ ಮಗಳು' ಎಂದು ಕವಿಚರಿತೆಕಾರರು ಬರೆಯುತ್ತಾರೆ. ಎಂದ ಮೇಲೆ 'ಅದ್ಭುತರಾಮಾಯಣ', 'ರಾಮಪಟ್ಟಾಭಿಷೇಕ', 'ರಾಮಾಶ್ವಮೇಧ'ದ ಮುದ್ದಣ ಮನೋರಮೆಯರ ಸಂವಾದವನ್ನು ಓದಿದ ಯಾರು ತಾನೆ ಇದನ್ನು ಸುಳ್ಳು ಎಂದು ಹೇಳಬಹುದು ? ಎಷ್ಟೇ ಬಡತನವಿದ್ದರೂ ಲಕ್ಷ್ಮೀನಾರಾಯಣ ರಸಿಕನಾದುದರಿಂದ ಹೊಸದಾಗಿ ಮನೆಗೆ ಬಂದ ಹೆಂಡತಿಯೊಡನೆ ಸುಖಸಂಕಥಾ ವಿನೋದಗಳಲ್ಲಿ ಕಾಲಕಳೆಯುತ್ತಾ ದಾಂಪತ್ಯ ಜೀವನದ ಸುಖ ಸರ್ವಸ್ವವನ್ನು ಅನುಭವಿಸುತ್ತ ಸಂತೋಷದಿಂದ ಬಾಳುತ್ತಿದ್ದನೆಂದು ತೋರುತ್ತದೆ. ಅವನ ಹೆಂಡತಿ ಸ್ವಲ್ಪ ಕಪ್ಪಗಿದ್ದುದರಿಂದ, ಆಕೆಯನ್ನು ವಿನೋದವಾಗಿ 'ಮನೋರಮೆ' ಎಂದು ಕರೆದಿರಬೇಕೆಂದು ಶ್ರೀ ಐರೋಡಿ ಶಿವರಾಮಯ್ಯನವರು ಹೇಳುತ್ತಾರೆ. "ಸಂಸಾರ ಚಿತ್ರದಲ್ಲಿ ನಿಜವಾದ 'ಮುದ್ದಣ ಮನೋರಮೆ' ಯಾರೆಂದರೆ ಆ ಗಂಡ ಹೆಂಡಿರೇ – ಕವಿ ಮತ್ತು ಆತನ ಹೆಂಡತಿ. ಮನೆಗೆ ಬಂದ ಹೊಸದರಲ್ಲಿ, ಮುಗ್ಧೆಯಾದ ಆ ಚಿಕ್ಕವಳನ್ನು ಈ ಕವಿ ಬೇಕುಬೇಕೆಂದೇ ಕೆಣಕಿ, ರೇಗಿಸಿ, ಅಳಿಸಿ, ನಗಿಸಿದುದನ್ನು ನಾನು ಕಂಡಿದ್ದೇನೆ. ಬಳಿಕ ಕೊಂಚಕಾಲ ಕಳೆದಮೇಲೆ ಆಕೆಯೇ 'ಮನೋರಮೆ'ಯಂತೆ, ಈ 'ಮುದ್ದಣ'ನಿಗೆ ಉತ್ತರ ಕೊಡುವುದನ್ನೂ ಕೇಳಿದ್ದೇನೆ" ಹೀಗೆಂದು ಶ್ರೀ ಹುರುಳಿ ಭೀಮರಾಯರು ಬರೆಯುತ್ತಾರೆ. ಲಕ್ಷ್ಮೀನಾರಾಯಣನಿಗೆ ಮೂವತ್ತು ವರ್ಷದ ವಯಸ್ಸಿನಲ್ಲಿ (೧೮೯೮ ರಲ್ಲಿ) ಒಬ್ಬ ಮಗನು ಹುಟ್ಟಿದನು. ಈತನಿಗೆ 'ರಾಧಾಕೃಷ್ಣ'ನೆಂದು ಹೆಸರು. ಸಂಸಾರ ಸುಖದ ಸಾರಸರ್ವಸ್ವದ ಫಲರೂಪವಾದ ಈ ಕಂದನನ್ನು ಪಡೆದದ್ದು ಮುದ್ದಣನ ಸಾಂಸಾರಿಕ ಜೀವನದ ಶಿಖರಾರೋಹಣದ ಒಂದು ಕೊನೆ. ಇಲ್ಲಿಂದ ಮುಂದೆ, ಈ ವೇಳೆಗಾಗಲೇ ಬಡತನದ ಬಹುವಿಧವಾದ ಕಷ್ಟಕಾರ್ಪಣ್ಯಗಳಿಗೆ ಸಿಲುಕಿ ಹಣ್ಣಾದ ಲಕ್ಷ್ಮೀನಾರಾಯಣನನ್ನು ನಾವು ಕಾಣುತ್ತೇವೆ.

೧೧

ಲಕ್ಷ್ಮೀನಾರಾಯಣನ ಜೀವನ ಪರಿಚಯದ ಈ ಘಟ್ಟದಲ್ಲಿ ಅವನ ಸಮಕಾಲೀನರಾಗಿ ಬಾಳಿ ಅವನೊಡನೆ ಸ್ನೇಹ ಸಂಬಂಧವನ್ನು ಬೆಳಸಿದ ಕೆಲವರನ್ನು ನೆನೆಯಬೇದು. ಪೂಜ್ಯ ಪಂಜೆ ಮಂಗೇಶರಾಯರು ನಂದಳಿಕೆಯವರ ಯಕ್ಷಗಾನ ಪ್ರಸಂಗಗಳನ್ನು ನೋಡಿಯೇ ಈತನನ್ನು ಮೆಚ್ಚಿಕೊಂಡ ಮಹನೀಯರಲ್ಲಿ ಒಬ್ಬರು. ೧೮೯೫ ನೆಯ ಜುಲೈ ತಿಂಗಳಿನಲ್ಲಿ ಮಂಗಳೂರು ಗವರ್ನಮೆಂಟ್ ಕಾಲೇಜಿನಲ್ಲಿ

ಕನ್ನಡಕ್ಕಾಗಿ ತಿಂಗಳಿಗೆ ೨೦ ರೂಪಾಯಿ ಸಂಬಳದ ಕನ್ನಡ ಪಂಡಿತರ ಕೆಲಸಕ್ಕೆ ಒಂದು ಏರ್ಪಾಡಾಯಿತಂತೆ. ಯಾರಿಗೂ ಬೇಡವಾದ ಈ ಉದ್ಯೋಗಕ್ಕೆ ಪಂಜೆಯವರು, ನಂದಳಿಕೆಯವರು ಇಬ್ಬರೇ ಅರ್ಜಿದಾರರಾಗಿದ್ದರಂತೆ. ಕನ್ನಡ ಅರಿಯದ ಇಂಗ್ಲಿಷ್ ಹೆಡ್ಮಾಸ್ಟರು ಕನ್ನಡ ಮಾತ್ರ ಬಲ್ಲ ನಂದಳಿಕೆಯವರನ್ನು ಬಿಟ್ಟು ಇಂಗ್ಲಿಷ್ ಬರುತ್ತದೆಂಬ ಕಾರಣದಿಂದ ಪಂಜೆಯವರಿಗೆ ಆ ಕೆಲಸವನ್ನು ಕೊಟ್ಟರಂತೆ. ಈ ಸಂದರ್ಭದಲ್ಲಿ ಲಕ್ಷ್ಮೀನಾರಾಯಣ ಪಂಜೆಯವರನ್ನು ಅಭಿನಂದಿಸಿ ಪತ್ರವನ್ನು ಬರೆದನಂತೆ. ಪ್ರತ್ಯುತ್ತರವಾಗಿ 'ಭತ್ತದ ಸಿಪ್ಪೆಯನ್ನು ಕುಟ್ಟತಕ್ಕ ಒನಕೆಯನ್ನು ಕನ್ನಡ ಬರಹವನ್ನು ಬರೆಸುವುದಕ್ಕೆ ತಂದರು, ಚಿತ್ರ ಬಿಡಿಸುವ ಬಣ್ಣದ ಗರಿಯನ್ನು ಕಿವಿಯ ತುರಿಕೆಗೆ ಕುಗ್ಗೆಕಡ್ಡಿಯನ್ನಾಗಿ ಮಾಡಿದರು' ಎಂದು ಪಂಜೆಯವರು ಉತ್ತರವಿತ್ತರಂತೆ.

ಮದರಾಸ್ ವಿಶ್ವವಿದ್ಯಾನಿಲಯದವರು F.A. ಪರೀಕ್ಷೆಗೆ ೧೮೯೮ ರಲ್ಲಿ 'ಶ್ರೀರಾಮಪಟ್ಟಾಭಿಷೇಕ'ವನ್ನೂ 'ಅದ್ಭುತರಾಮಾಯಣ'ವನ್ನೂ ಪಠ್ಯ ಪುಸ್ತಕಗಳನ್ನಾಗಿ ಗೊತ್ತುಮಾಡಿದರು. ಇದನ್ನು ಕಲಿಸುವ ಭಾರ ಪಂಜೆಯವರದಾಯಿತು. ಈ ಸಂದರ್ಭದಲ್ಲಿ ಈ ಗ್ರಂಥಗಳಲ್ಲಿ ತಮಗೆ ಅನುಮಾನ ಬಂದ ಕೆಲವು ಪದಗಳ ಅರ್ಥ ಮುಂತಾದುವುವನ್ನು ಕುರಿತು ಲಕ್ಷ್ಮೀನಾರಾಯಣನನ್ನು ಪಂಜೆಯವರು ಕೇಳಿದರಂತೆ. ಹೀಗೆ ಇವರಿವರ ಪತ್ರವ್ಯವಹಾರ ಪ್ರಾರಂಭವಾಯಿತು.

ಒಮ್ಮೆ ಲಕ್ಷ್ಮೀನಾರಾಯಣ ಪಂಜೆಯವರ ಅವಗಾಹನೆಗಾಗಿ 'ಮತ್ತೊಂದು ಪುಸ್ತಕವನ್ನು ಕಳುಹಿಸಿರುತ್ತೇನೆ. ಗ್ರಂಥವು ಯೋಗ್ಯವೆಂದಿದ್ದರೆ ಅದನ್ನು ಮುದ್ರಿಸುವುದಕ್ಕೆ ಸಾಧ್ಯವಿದೆಯೇ ?' ಎಂದು ಬರೆದು ಅದರೊಂದಿಗೆ ೧೮೯೮ ನೇ ಸೆಪ್ಟಂಬರ್ ತಿಂಗಳಲ್ಲಿ ತನ್ನ 'ರಾಮಾಶ್ವಮೇಧ'ದ ಹಸ್ತಪ್ರತಿಯನ್ನು ಕಳುಹಿಸಿಕೊಟ್ಟನಂತೆ. ಹಸ್ತಪ್ರತಿ ಮುತ್ತಿನಂತೆ ದುಂಡಗೆ ಬರೆದ, ಮೋಡಿಯಿಲ್ಲದ ಅಕ್ಷರಗಳಲ್ಲಿ ಸುಮಾರು ಐನೂರು ಪುಟಗಳಷ್ಟು ಇತ್ತಂತೆ. ಪಂಜೆಯವರು ಅತ್ಯುತ್ಸಾಹದಿಂದ ಓದಿ, ಅಮಿತವಾದ ಸಂತೋಷವನ್ನನುಭವಿಸಿ, ಬಗೆಬಗೆಯಾಗಿ ಕೊಂಡಾಡಿ ಪ್ರತ್ಯುತ್ತರವನ್ನು ಬರೆದರಂತೆ. ಅಚ್ಚು ಹಾಕಿಸಿದರೆ "ಗಾಜನ್ನು ಮೆಚ್ಚುವ ಕಾಲದಲ್ಲಿ ವಜ್ರವು ಬಿಕರಿಯಾಗುವುದು ದುರ್ಲಭವಾದ್ದರಿಂದ. ಅಚ್ಚು ಹಾಕಿಸಿದಲ್ಲಿ 'ಕೈಟಿತ್ತಿನ ಕಾಸಲಾಪೋಂಡ – ಮೈಟಿತ್ತಿನ ಮಾಸಲಾ ಪೋಂಡಾ' ಎಂಬ ತುಳುಗಾದೆಯಂತೆ ಆಗುವ ಸಂಭವವಿದೆ" ಎಂದು ಎಚ್ಚರಿಸಿದರಂತೆ.

೧೯೦೦ ನೆಯ ಏಪ್ರಿಲ್ ತಿಂಗಳಿನ ಒಂದು ದಿನ ಸಾಯಂಕಾಲ ಪಂಜೆಯವರಿಗೆ ಲಕ್ಷ್ಮೀನಾರಾಯಣನ ಸಂದರ್ಶನವಾಯಿತು. ಪರಸ್ಪರವಾಗಿ ನಡೆದ ಸಂಭಾಷಣೆಯಲ್ಲಿ ಕನ್ನಡ ಪ್ರಸ್ತಾಪ ಬಂದಾಗ ಲಕ್ಷ್ಮೀನಾರಾಯಣನು ಗದಾಯುದ್ಧದಿಂದ ಸುಮಾರು ೨೫ ಪದ್ಯಗಳನ್ನು ಹಾಡಿದನಂತೆ. ಮುಂದೆ ಗ್ರಂಥತ್ರಯದ ಕರ್ತೃತ್ವವನ್ನು ಪ್ರಶ್ನಿಸಿದಾಗ 'ಯದ್ಭಾವಂ ತದ್ಭವತಿ' ಎಂದನಂತೆ.

೧೨

ಪಂಜೆ ಮಂಗೇಶರಾಯರಂತೆಯೇ ಮುದ್ದಣನ ಸ್ನೇಹಲಾಭವನ್ನು ಪಡೆದ ಮತ್ತೊಬ್ಬ ಪೂಜ್ಯವ್ಯಕ್ತಿ ಬೆನಗಲ್ ರಾಮರಾಯರು. ಅವರು ತೆಲುಗಿನ 'ವೀರೇಶಲಿಂಗಂ ಪಂತುಲು' ಅವರ 'ಕಲಹಪ್ರಿಯಾಪ್ರಹಸನ' ಎಂಬ ಗ್ರಂಥವನ್ನು ಕನ್ನಡಿಸಿ ಅದರ ಅಚ್ಚಿನ ಪ್ರತಿಯೊಂದನ್ನು ಅಭಿಪ್ರಾಯಕ್ಕಾಗಿ ಲಕ್ಷ್ಮೀನಾರಾಯಣನಿಗೆ ಕಳುಹಿಸಿಕೊಟ್ಟರಂತೆ. ೧೮೯೯ ನೇ ಜುಲೈ ೯ ನೇ ತಾ. "ಪುಸ್ತಕಕ್ಕೆ ಭಾಷಾಂತರದ ಮಟ್ಟಿಗೆ ಮೆಚ್ಚುತ್ತೇನೆ. ವಸ್ತು (Plot) ಪ್ರಶಸ್ತವಾದದ್ದೆಂದು ಹೊಗಳುವುದಕ್ಕಾಗುವುದಿಲ್ಲ" ಎಂದು ತಮ್ಮ ಅಭಿಪ್ರಾಯವನ್ನು ಬರೆದನಂತೆ. ಜೊತೆಗೆ ಬೆನಗಲ್‌ರವರ 'ಏಕನಾಥಚರಿತ್ರ' ಎಂಬ ಪುಸ್ತಕದ ಹಸ್ತಪ್ರತಿಯಲ್ಲಿರುವ ವ್ಯಾಕರಣ ದೋಷಗಳನ್ನು ತಿದ್ದಿ ಕಳುಹಿಸಿಕೊಟ್ಟನಂತೆ. 'ಈ ಪ್ರಸಂಗಗಳಿಂದ ನಂದಳಿಕೆಯವರ ರಸಿಕತೆಯನ್ನೂ ನೈತಿಕ ಧೈರ್ಯವನ್ನೂ, ವ್ಯಾಕರಣ ಮರ್ಯಾದೆಯನ್ನು ಮೀರದೆ, ಶುದ್ಧವಾದ ಶೈಲಿಯಲ್ಲಿ ಬರೆದಿರುವ ವಿಷಯದಲ್ಲಿ ಆದರವನ್ನೂ ಕನ್ನಡ ಲೇಖಕರ ವಿಷಯದಲ್ಲಿ ಇವರಿಗಿದ್ದ ವಾತ್ಸಲ್ಯವನ್ನೂ' ಕಂಡುಕೊಳ್ಳಬಹುದೆಂದು ರಾಮರಾಯರು ಬರೆದಿದ್ದಾರೆ. ಮುಂದೆ ರಾಮರಾಯರೊಡನೆ ಮುದ್ದಣ, ದ್ರಾವಿಡವರ್ಗದ ಬೇರೆಬೇರೆ ಭಾಷೆಗಳ ಶಬ್ದಗಳನ್ನೂ ಶಬ್ದರೂಪಗಳನ್ನೂ ಸಾಹಿತ್ಯ ವ್ಯಾಕರಣ ಕುರಿತ ಸಮಾಲೋಚನೆಗಳನ್ನೂ ವಿನಿಮಯ ಮಾಡಿಕೊಳ್ಳುತ್ತಿದ್ದನಂತೆ. ಉಡುಪಿಯ ಮಿಷನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತನಾಗಿದ್ದ ಲಕ್ಷ್ಮೀನಾರಾಯಣನ ಕೈಕೆಳಗೆ ಓದಿದ ವಿದ್ಯಾರ್ಥಿಗಳು ಅವನ ರಸಿಕತೆ, ಕವಿತಾಶಕ್ತಿ, ಕುಶಲತೆಗಳನ್ನು ಕುರಿತ ಎಷ್ಟೋ ಸಮಾಚಾರಗಳನ್ನು ಕಾಲೇಜಿನಲ್ಲಿ ಕನ್ನಡ ಪಂಡಿತರಾದ ರಾಮರಾಯರಿಗೆ ತಿಳಿಸುತ್ತಿದ್ದರಂತೆ. ರಾಮರಾಯರು ಎಂ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದ ಸುದ್ದಿಯನ್ನು ಕೇಳಿ ಲಕ್ಷ್ಮೀನಾರಾಯಣನು ೨೭-೨-೧೯೦೦ ರಲ್ಲಿ ಅಭಿನಂದನಾ ಪತ್ರವೊಂದನ್ನು ಬರೆದನಂತೆ. ಮುಂದೆ ರಾಮರಾಯರು ಮೈಸೂರಿನಲ್ಲಿ ಉದ್ಯೋಗವನ್ನು ಬಯಸಿ ಹೊರಡುವ ವೇಳೆ ತಮ್ಮ ಸ್ಥಳಕ್ಕೆ ಕವಿ ಶ್ರೇಷ್ಠನೂ, ಆಪ್ತಮಿತ್ರನೂ, ಸ್ವಪ್ರಾಂತೀಯನೂ ಆದ ಲಕ್ಷ್ಮೀನಾರಾಯಣನನ್ನು ತರಬೇಕೆಂದು ಬಯಸಿದರು. ಈ ವಿಷಯವನ್ನು ಕುರಿತು ಅವರು ನಂದಳಿಕೆಯವರ ಅಭಿಪ್ರಾಯವನ್ನು ಕೇಳಿದ್ದರಂತೆ.

೧೯೦೦ ನೆಯ ಇಸವಿ ಏಪ್ರಿಲ್ ೨೦ ನೆಯ ಶುಕ್ರವಾರ ಬೆನಗಲ್ ರಾಮರಾಯರು ಲಕ್ಷ್ಮೀನಾರಾಯಣನನ್ನು ಉಡುಪಿಯಲ್ಲಿ ಸಂದರ್ಶಿಸಿದರು. ಈ ಸಂದರ್ಶನದಲ್ಲಿ ಉಭಯತ್ರರಲ್ಲಿ ನಡೆದ ಸಂಭಾಷಣೆಯನ್ನು ಓದಿದರೆ ಯಾರ ಕಣ್ಣಿನಲ್ಲಿಯೂ ನೀರು ಬರದೆ ಇರದು. ಇಲ್ಲಿಯೂ ರಾಯರು ಗ್ರಂಥತ್ರಯದ ಅನ್ಯಕರ್ತೃಕತ್ವವನ್ನು ಕುರಿತು ಪ್ರಶ್ನಿಸಿದಾಗ ಕವಿ 'ಬರೆದವನು ನಾನೆಂಬುದು ನಿಜ' ಎಂದು ಉತ್ತರಕೊಟ್ಟನಂತೆ. ಖಾಸಗಿಯಾಗಿ ಕೇಳಿದಾಗಲೂ ಬರಹದಲ್ಲಿ ಹಾಗೆಂದು ಒಪ್ಪಿಕೊಳ್ಳದೆ ಹೋದದ್ದೇಕೆ ಎಂದು ಪ್ರಶ್ನಿಸಿದಾಗ, 'ಒಂದು ಬಾರಿಗೆ, ಯಾವ ಕಾರಣದಿಂದಲೇ ಆಗಲಿ, ನನ್ನವಲ್ಲವೆಂದೂ ಪ್ರಾಚೀನ ಗ್ರಂಥಗಳೆಂದೂ ನಂಬಿಸಿ,

ಅವನ್ನು ಪ್ರಚುರಗೊಳಿಸುವಂತೆ ಮಾಡಿದ ತರುವಾಯ, ಒಡನೆಯೇ ಅವು ನನ್ನವೆಂದು ಖಾಸಗಿ ಕಾಗದದಲ್ಲಿಯಾದರೂ ಹೇಗೆ ಬರೆಯಲಿ ? ನನ್ನ ಮರ್ಯಾದೆ ಏನು ಉಳಿದಂತಾಯಿತು ? ನಾನಲ್ಲವಾದರೆ ನಮ್ಮ ಜಿಲ್ಲೆಯವರಾದರೂ ಬರೆದರೆಂಬ ಕೀರ್ತಿ ನನಗೆ ಬಂತಲ್ಲವೆ ?' ಎಂದು ಹೇಳಿದನಂತೆ. 'ನಮ್ಮ ಪ್ರಾಂತದಲ್ಲಿ ಕನ್ನಡವನ್ನು ಕೇಳುವವರು ಯಾರಿದ್ದಾರೆ ? ಈ ಗ್ರಂಥಗಳು ಪ್ರಕಾಶವಾಗಲು ಯಾವ ಬೇರೆ ಉಪಾಯವಿದ್ದಿತು ?' ಎಂದೂ, 'ಏನೋ ಆದುದು ಆಗಿಹೋಯಿತು. ಅದಕ್ಕಾಗಿ ನಾನು ಚಿಂತಿಸುವುದಿಲ್ಲ. ಮುಂದೆ ಒಂದಲ್ಲ ಒಂದು ದಿನ ಅದರ ನಿಜಾಂಶ ಪ್ರಕಟವಾಗಿಯೇ ಆಗುವುದು. ಒಂದು ವೇಳೆ ಆಗದಿದ್ದರೂ ಅದೇನು ದೊಡ್ಡ ಮಾತು ? ಅಂತಹ ನೂರಾರು ಗ್ರಂಥಗಳನ್ನು ಬರೆಯಬಲ್ಲೆನು' ಎಂದೂ ಸಂಭಾಷಣೆಯಲ್ಲಿ ಸಂದರ್ಭಕ್ಕನುಸಾರವಾಗಿ ಲಕ್ಷ್ಮೀನಾರಾಯಣ ಉತ್ತರ ಕೊಟ್ಟನಂತೆ.

ಮುಂದೆ ರಾಮರಾಯರು ಮದರಾಸಿಗೆ ಹೋದ ಮೇಲೆ ೧೯೦೦ ನೆಯ ಸೆಪ್ಟಂಬರ್ ೮, ೧೦, ಅಕ್ಟೋಬರ್ ೨, ೧೯೦೧ ನೆಯ ಜನವರಿ ೧, ಈ ತೇದಿಗಳಲ್ಲಿ ಅವರಿಗೆ ಲಕ್ಷ್ಮೀನಾರಾಯಣನು ಕಾಗದ ಬರೆದನಂತೆ. 'ಪುನಃ ಜ್ವರಕ್ಕಾರಂಭವಾಗಿದೆ.' 'ಮೊನ್ನಿನ ಪತ್ರದಲ್ಲಿ ಬರೆದಂತೆ ಜ್ವರ ಬರುತ್ತಿದೆ, ರಜಾ ತೆಗೆದುಕೊಂಡು ಮನೆಯಲ್ಲಿಯೇ ಇದ್ದೇನೆ.' 'ನಾನು ಮದರಾಸಿಗೆ ಹೋಗುವ ಆಲೋಚನೆಯನ್ನು ಇಂದಿನಿಂದ ಬಿಟ್ಟೆ.' 'ಅಸ್ವಸ್ಥ, ಏನೇನೋ ಗುಣಾಂಶವಿಲ್ಲ. ಪುನಃ ಒಂದು ತಿಂಗಳ ರಜೆ ಬರೆದುಕೊಂಡಿದ್ದೇನೆ. ಜ್ವರ ಬಿಡುವುದೇ ಇಲ್ಲ. ನೋಡಿದವರು ಕ್ಷಯವೆಂದು ಹೇಳುತ್ತಾರೆ.' 'ದೇಹದಲ್ಲಿ ಕ್ಷೇಮವಿಲ್ಲ, ಎದ್ದು ಕುಳಿತುಕೊಳ್ಳಲು ತ್ರಾಣವಿಲ್ಲ. ಒಮ್ಮೆ ತಮ್ಮ ದರ್ಶನವನ್ನು ಕೊಟ್ಟರೆ ಉಪಕಾರವಾಗುತ್ತಿತ್ತು. ಹೆಚ್ಚಿಗೆ ಬರೆಯಲು ಶಕ್ತನಲ್ಲ.' ಹೀಗೆ ಮೇಲಿಂದ ಮೇಲೆ ತನ್ನ ರೋಗಾದ್ಯುಪದ್ರವಗಳನ್ನು ಕುರಿತ ಮನೋವೇದನೆಯನ್ನು ಮಾರ್ಮಿಕವಾಗಿ ಲಕ್ಷ್ಮೀನಾರಾಯಣ ತನ್ನ ಸ್ನೇಹಿತರಾದ ರಾಮರಾಯರಿಗೆ ತಿಳಿಸುತ್ತ ಬಂದನು. ಎಷ್ಟು ಪ್ರಯತ್ನಪಟ್ಟರೂ ರಾಮರಾಯರಿಗಾದರೂ ಮತ್ತೆ ಲಕ್ಷ್ಮೀನಾರಾಯಣನನ್ನು ಸಂದರ್ಶಿಸಲು ಆಗದೆ ಹೋಯಿತು.

ಅವಿಶ್ರಾಂತವಾದ ಮಾನಸಿಕ ಪರಿಶ್ರಮದಿಂದ ಬಳಲಿ ಬೆಂಡಾಗಿ, ದಟ್ಟ ದಾರಿದ್ರ್ಯದ ಕಷ್ಟಕೋಟಲೆಗಳಲ್ಲಿ ಕಂದಿ ಕುಂದಿ, ದೇಹವನ್ನು ಕ್ಷಯರೋಗಕ್ಕೆ ಈಡುಮಾಡಿಕೊಂಡು, ರೋಗಗ್ರಸ್ತನಾಗಿ ಕೆಲಕಾಲ ಹಾಸಿಗೆ ಹಿಡಿದಿದ್ದು, ಕೊನೆಗೆ ೧೯೦೧ ನೆಯ ಫೆಬ್ರವರಿ ೧೫ ನೆಯ ಶಾರ್ವರಿ ಸಂ. ದ ಮಾಘ ಬಹುಳ ೧೨ ಶುಕ್ರವಾರ ತನ್ನ ವಯಸ್ಸಿನ ೩೧ ನೆಯ ವರ್ಷ ಕಳೆದ ಕೆಲವೇ ದಿನಗಳಲ್ಲಿ ಅಕಾಲಮೃತ್ಯುವಿಗೆ ತುತ್ತಾಗಿ ಕವಿ ಪರಂಧಾಮವನ್ನೈದಿದನು. 'ಹೀಗೆ ತುಳು ನಾಡಿನ ಕಾವ್ಯಾಕಾಶದಲ್ಲಿ ಎದ್ದು ಬರುತ್ತಿದ್ದ ತರುಣಭಾಸ್ಕರನು ಹೊತ್ತು ನೆತ್ತಿಗೆ ಬರುವಷ್ಟರಲ್ಲೇ ರಾಹುಗ್ರಸ್ತನಾದನು. ನಭಸ್ಥಲದ ಭಾಸ್ಕರನಿಗಾದರೆ ಮೋಕ್ಷಾನಂತರ ಪುನರ್ದರ್ಶನವಿದೆ,

ನಮ್ಮ ಭಾಸ್ಕರನಿಗಾದರೋ ಇಲ್ಲಿ ಗ್ರಾಸಾನಂತರ ಮೋಕ್ಷದಲ್ಲಿಯೇ ಹೊರತು ಸರ್ವಥಾ ಇಲ್ಲಿ ಇನ್ನು ಪುನರ್ದರ್ಶನವಿಲ್ಲ !'

೧೩

ಲಕ್ಷ್ಮೀನಾರಾಯಣನು 'ರಾಮಾಶ್ವಮೇಧ'ವನ್ನು ಮುಗಿಸಿದ ಒಡನೆಯೇ ಭಟ್ಟಾಕಳಂಕನ 'ಕರ್ಣಾಟಕ ಶಬ್ದಾನುಶಾಸನ'ದ ಮಾದರಿಯಲ್ಲಿ, ಆದರೆ ಕನ್ನಡದಲ್ಲಿಯೇ ಚಿಕ್ಕಸೂತ್ರಗಳನ್ನು ಕಲ್ಪಿಸಿ ಅವುಗಳಿಗೆ ವಿಸ್ತಾರವಾದ ವೃತ್ತಿಯನ್ನು ಕೂಡಿಸಿ ಹಳಗನ್ನಡದ ಒಂದು ಸೂತ್ರಾತ್ಮಕವಾದ ವ್ಯಾಕರಣವನ್ನು ಬರೆಯಬೇಕೆಂದು ಬಯಸಿದ್ದನು. ಆ ವ್ಯಾಕರಣದಲ್ಲಿ ಅಕ್ಷರಖಂಡದತನಕ ಬರೆದು ಮುಗಿಸಿದ್ದನು. ಅದರಲ್ಲಿ ತತ್ಸಮ ತದ್ಭವಗಳ ಉದ್ದವಾದ ಪಟ್ಟಿಯೊಂದನ್ನು ಕೊಡಬೇಕೆಂದು ನಿಶ್ಚಯಿಸಿದ್ದನು. ಹಾಗೆಯೇ ಇಂಗ್ಲಿಷಿನಲ್ಲಿರುವ 'Cyclopaedia'ಗಳ ಮಾದರಿಯಲ್ಲಿ ಕನ್ನಡ ಬೃಹತ್ ಕೋಶವೊಂದನ್ನು ನಿರ್ಮಿಸಬೇಕೆಂದು ಅಪೇಕ್ಷಿಸಿದ್ದನು. ಇವಲ್ಲದೆ 'ಗೋದಾವರಿ' ಎಂಬ ಸಾಮಾಜಿಕ ಕಾದಂಬರಿಯೊಂದನ್ನು ಬರೆಯಲು ತೊಡಗಿ, ಅದರಲ್ಲಿ ಕೆಲವು ಪರಿಚ್ಛೇದಗಳೂ ಮುಗಿದಿದ್ದುವು. ಜೋಗುಳ ಶಬ್ದದ ವ್ಯುತ್ಪತ್ತಿಯನ್ನು ಕುರಿತು 'ಚಕ್ರಧಾರಿ' ಎಂಬ ಗುಪ್ತನಾಮದಿಂದ ಸಂಶೋಧನಾತ್ಮಕ ಲೇಖನವೊಂದನ್ನು ಬರೆದು ಮುಗಿಸಿದ್ದನು. ಇದು ಮಾತ್ರ ಮಂಗಳೂರಿನ 'ಸುವಾಸಿನಿ' ಮಾಸಪತ್ರಿಕೆಯ ೧೯೦೦ ನೆಯ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿತ್ತು. 'ಕುಶವಿಜಯ' ಎಂಬ ಗ್ರಂಥವೊಂದನ್ನು ಬರೆಯಬೇಕೆಂಬ ಉದ್ದೇಶ ಈತನಿಗೆ ಇತ್ತು. ಭಗವದ್ಗೀತೆಯನ್ನು ಭಾಮಿನೀ ಷಟ್ಪದಿಯಲ್ಲಿಯೂ 'ಕರ್ಣಾಟಕ ರಾಮಾಯಣ'ವನ್ನು ವಾರ್ಧಕ ಷಟ್ಪದಿಯಲ್ಲಿಯೂ ಬರೆದಿದ್ದನಂತೆ. ಕಾಮಶಾಸ್ತ್ರವೆಂಬ ಮತ್ತೊಂದು ಗ್ರಂಥವನ್ನು ಈತ ಬರೆದುದಾಗಿ ತಿಳಿಯಬರುತ್ತದೆ. ತಾಂಡವಮುನಿಯ ಕಥೆ ಎಂಬ ತೊರವೆಯ ರಾಮಾಯಣದೊಳಗಿನ ಕೆಲವು ಪದ್ಯಗಳಿಗೆ ಟಿಪ್ಪಣಿ ಬರೆದಿದ್ದನೆಂದೂ ಹೇಳುತ್ತಾರೆ. ಹೀಗೆ ಕ್ಷಯರೋಗ ಪೀಡಿತನಾಗಿದ್ದ ಸಮಯದಲ್ಲಿಯೇ ವ್ಯಾಕರಣ, ನಿಘಂಟು, ವಿಶ್ವಕೋಶ ಮುಂತಾದ ಬೃಹತ್ ಕೃತಿಗಳ ನಿರ್ಮಾಣದಲ್ಲಿಯೂ, ಇತರ ಸಾಹಿತ್ಯ ಕೃತಿಗಳಲ್ಲಿಯೂ ಆಸಕ್ತನಾಗಿದ್ದ ಲಕ್ಷ್ಮೀನಾರಾಯಣನು ವಿಧಿವಶನಾದದ್ದು ಕನ್ನಡಿಗರ ದುರ್ದೈವ. ನಿರ್ಘೃಣನಾದ ಕಾಲಪುರುಷನನ್ನು ಕುರಿತು 'ಓವೋ ! ಕಾಲಪುರುಷಂಗೆ ಗುಣಮಣಮಿಲ್ಲಂ ಗಡ !' ಎಂದು ಉದ್ಗಾರದ ಬಿಸಿಯುಸಿರು ಬಿಡುವುದಲ್ಲದೆ ಕನ್ನಡಿಗರಿಗೆ ಈಗ ಮತ್ತೇನುಳಿದಿದೆ ?

ಲಕ್ಷ್ಮೀನಾರಾಯಣ ಕವಿಯ 'ನಿಲುವು ಸುಮಾರು ಐದು ಅಡಿ ನಾಲ್ಕು ಅಂಗುಲ; ರೂಪ ಸುಂದರ; ಮುದ್ರೆ ಗಂಭೀರ; ಕಣ್ಣು ಬಹಳ ಚಂಚಲ; ಮೂಗು ಸ್ವಲ್ಪ ಉದ್ದ; ನಡಿಗೆ ಸ್ವಲ್ಪ ದಿಟ್ಟ; ಮಾತುಗಾರಿಕೆ ಬೇಕಾದಷ್ಟೆ; ಭಾಷೆ ಬಲು ಶುದ್ಧ; ಬುದ್ಧಿ ಶಾನೆ ಚುರುಕು' ಎಂದು ಶ್ರೀ ಗೋವಿಂದ ಪೈಗಳು ಬರೆದಿದ್ದಾರೆ. 'ಕವಿಯ ಬಣ್ಣ ಎಣ್ಣೆಗೆಂಪು; ಮಾತುಕತೆಗಳಲ್ಲಿ ಬಲು ರಸಿಕನು ಮತ್ತು ಮಿತಭಾಷಿಯೂ

ಅಹುದು' ಎಂದು ಹುರುಳಿ ಭೀಮರಾಯರು ಬರೆದಿದ್ದಾರೆ. 'ಸುಮಾರು ಐದೂವರೆ ಅಡಿ ಎತ್ತರದ ಎಣ್ಣೆ ಕಪ್ಪು ಬಣ್ಣದ, ತಕ್ಕಷ್ಟು ಅಗಲದ ಹಣೆಯ, ಕಳೆಗುಂದಿದ ಮೋರೆಯ ಹರೆಯದ ಕುರುಹುಗಳಿಲ್ಲದೆ ಶಾಂತವಾಗಿರುವ ಮುಖಮುದ್ರೆಯ ಲಕ್ಷ್ಮೀನಾರಣಪ್ಪನವರನ್ನು ಕಣ್ಣಾರೆ ಕಂಡೆನು' ಎಂದು ಪಂಜೆಯವರು ಬರೆಯುತ್ತಾರೆ.

ಈತನ ಬುದ್ಧಿಸೂಕ್ಷ್ಮತೆಯನ್ನು ಕುರಿತು ಹೇಳುವಾಗ ಈತನು ಏಕಪಾಠಿ ಎಂದೂ ತಾರಾಯಂತ್ರದ ಸಂಕೇತಗಳನ್ನು ಓದಿಕೊಂಡ ಬಲದಿಂದಲೇ ಅಂಚೆ ಮನೆಯ ಹೊರಗೆ ನಿಂತು ಒಳಗಡೆಯ ಬಡಿತಗಳನ್ನು ಅರ್ಥವಿಸಿ ಹೇಳುತ್ತಿದ್ದನೆಂದೂ ಶ್ರೀ ಪೈಗಳವರು ಬರೆಯುತ್ತಾರೆ. ಇವನ ದೇಹದಾರ್ಢ್ಯವನ್ನು ಕುರಿತು ಬರೆಯುವಾಗ ಎರಡು ಕೈಗಳಿಂದ ಎರಡು ಮುಡಿ ಅಕ್ಕಿಯನ್ನು ಎತ್ತಿಬಿಡುತ್ತಿದ್ದನೆಂದು ತಿಳಿಸುತ್ತಾರೆ.

ಈತನ ಕೈಬರಹ ಬಹಳ ಮುದ್ದಾಗಿತ್ತು. ದುಂಡಾಗಿ ಮುತ್ತಿನಂತೆ ಅಕ್ಷರಗಳನ್ನು ಬರೆಯುತ್ತಿದ್ದನು. ಬರಹ ಸ್ಫುಟವಾಗಿರುತ್ತಿತ್ತು.

ಒಂದು ಕ್ಷಣವನ್ನಾದರೂ ಈತ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ. ಯಾವಾಗಲೂ ಓದು ಬರಹಗಳಲ್ಲಿ ಆಸಕ್ತನಾಗಿರುತ್ತಿದ್ದನು. ಅದಿಲ್ಲದಿದ್ದರೆ ಸಂಗೀತಾಭ್ಯಾಸದಲ್ಲಿ ಹೊತ್ತು ಕಳೆಯುತ್ತಿದ್ದನು. ಸಾಹಿತ್ಯ ಸಂಗೀತಗಳ ಜೊತೆಗೆ ಯಕ್ಷಗಾನಗಳಲ್ಲಿ ಹಿಂದೆ ನಟಿಸುತ್ತಿದ್ದನೆಂಬುದನ್ನು ಜ್ಞಾಪಿಸಿಕೊಂಡರೆ ನೃತ್ಯಕಲೆಯಲ್ಲಿಯೂ ಈತನಿಗೆ ಅಭಿರುಚಿಯಿದ್ದಿತೆಂದು ವ್ಯಕ್ತವಾಗುತ್ತದೆ. ಕವಿಗೆ ಚಿತ್ರಗಳ ಮೇಲೆಯೂ ತುಂಬ ಪ್ರೀತಿ. ಆದರೆ ಎಲ್ಲರಂತೆ ರವಿವರ್ಮನ ವರ್ಣರಂಜಿತವಾದ ಚಿತ್ರಗಳನ್ನು ಈತ ಅಪೇಕ್ಷಿಸುತ್ತಿರಲಿಲ್ಲವಂತೆ. ಹೆಚ್ಚು ಬೆಲೆ ಕೊಟ್ಟು ವರ್ಣರಂಜಿತವಲ್ಲದ ಬರಿಯ ಕಪ್ಪು ಬಣ್ಣದ ಚಿತ್ರಗಳನ್ನೇ ತರಿಸಿಕೊಳ್ಳುತ್ತಿದ್ದನಂತೆ.

ಈತನು ಸಣ್ಣದೊಂದು ಗ್ರಂಥ ಭಂಡಾರವನ್ನೂ ಇಟ್ಟುಕೊಂಡಿದ್ದನು. ತನಗೆ ಪ್ರಿಯವಾದ ಅಚ್ಚಿನ ಪುಸ್ತಕಗಳನ್ನು ಶೇಖರಿಸುವುದು ಮಾತ್ರವಲ್ಲದೆ ತಾಳೆಗರಿಯ ಪ್ರಾಚೀನ ಗ್ರಂಥಗಳನ್ನು ಶೇಖರಿಸುತ್ತಿದ್ದುದೂ ಈತನ ಗ್ರಂಥಸಂಪಾದನಾಶೀಲವನ್ನು ವ್ಯಕ್ತಗೊಳಿಸುತ್ತದೆ. ಈತನು ಕಾವ್ಯ ಕಲಾನಿಧಿಯವರಿಗೆ ಕಳುಹಿಸಿಕೊಟ್ಟ ರಾಘವಾಂಕನ 'ಹರಿಶ್ಚಂದ್ರಕಾವ್ಯ' ದ ಕಾಗದದ ಪ್ರತಿ ಮೇಲ್ತರದ್ದೆಂದು ಕಾವ್ಯಕಳಾನಿಧಿಯವರು ಅಭಿಪ್ರಾಯಪಟ್ಟರಂತೆ.

ಮೇಲೆ ಕಾಣಿಸಿದ ಲಕ್ಷ್ಮೀನಾರಾಯಣಕವಿಯ ಮುಖ್ಯ ಮುಖ್ಯವಾದ ಜೀವನ ವಿವರಗಳಿಂದ ಈತ ಎಂತಹ ಅಭ್ಯಾಸನಿರತನಾದ, ಸಂಪ್ರದಾಯ ಶರಣನಾದ ಪಂಡಿತನೆಂಬುದೂ, ನೂತನ ಮಾರ್ಗಾನ್ವೇಷಿಯಾದ ರಸಿಕವರೇಣ್ಯನಾದ ಕವಿಯೆಂಬುದೂ ವ್ಯಕ್ತವಾಗುತ್ತದೆ. ಕವಿಸಹಜವಾದ ಹೃದಯವನ್ನೂ ಶಿಕ್ಷಕಸಹಜವಾದ ಬುದ್ಧಿಯನ್ನೂ ಮೇಳವಿಸಿಕೊಂಡಿರುವುದರಲ್ಲಿ ಈತನ ವ್ಯಕ್ತಿತ್ವದ ವೈಶಿಷ್ಟ್ಯ ಕಂಡುಬರುತ್ತದೆ. ಈತನ ಮನೋಧರ್ಮ ಕವಿಮನೋಧರ್ಮ; ಈತನ ಒಳಗೆ

ನಡೆದದ್ದು ಸಾಹಿತ್ಯವಿಕಸನ. ಹೊರಗೆ ಕಲಿತು ತೇರ್ಗಡೆಯಾದದ್ದು ಕನ್ನಡ ಟ್ರೈನಿಂಗ್ ಶಾಲೆಯ ಪರೀಕ್ಷೆ; ಆದರೆ ಹೊಟ್ಟೆ ಬಟ್ಟೆಯ ಪೂರೈಕೆಗಾಗಿ ಹಿಡಿದದ್ದು ಅಂಗಸಾಧನೆಯನ್ನು ಕಲಿಸುವ ಮೂರನೆಯ ದಾರಿಯನ್ನು. ಈ ದಾರಿಯಲ್ಲಿ ನಡೆದು ತಿಂಗಳಿಗೆ ೧೦-೧೫-೨೦ ರ ಸಂಬಳ ಪಡೆದು ಕನ್ನಡಸಾಹಿತ್ಯಕ್ಕೆ ರಾಜಾಶ್ರಯವೂ ಜನಬೆಂಬಲವೂ ಎಳ್ಳಷ್ಟೂ ಇಲ್ಲದಿದ್ದ ಒಂದು ಕಾಲದಲ್ಲಿ ಕನ್ನಡದ ಮೂಲೆಗುಂಪಾದ ಹಳ್ಳಿಯೊಂದರಲ್ಲಿ ಹುಟ್ಟಿ ಬಡವನಾಗಿ ಬೆಳೆದು, ಬಡವನಾಗಿ ಉಳಿದು ಬಡತನದಲ್ಲಿಯೇ ಅಳಿದವನು ಲಕ್ಷ್ಮೀನಾರಾಯಣ. "ಕನ್ನಡ ಗ್ರಂಥಗಳ ಗಂಧ ಗಾಳಿ ಸೋಂಕದ, ಕನ್ನಡ ವಿದ್ವಾಂಸರ ಸುಳಿವು ಕಾಣದ, ಕನ್ನಡ ಪ್ರಾಂತದಿಂದ ಬಹುದೂರವಾದ ತುಳುನಾಡಿನ ಬಂಜರು ನೆಲದಲ್ಲಿ ತನ್ನಷ್ಟಕ್ಕೆ ಚಿಗುರಿದ ಗಂಧದ ಸಸಿಯಂತೆ ಇದ್ದು ಬಲಿತು ಬೆಳೆಯುವ ಮೊದಲೆ ಬಿದ್ದು ಹೋದವನು ಲಕ್ಷ್ಮೀನಾರಾಯಣ." ಈ ಲಕ್ಷ್ಮೀನಾರಾಯಣನೇ 'ಅದ್ಭುತರಾಮಾಯಣ', 'ರಾಮಾಶ್ವಮೇಧ', 'ರಾಮಪಟ್ಟಾಭಿಷೇಕ'ಗಳನ್ನು ವಿರಚಿಸಿ 'ಕಬ್ಬಿಗರ ಬಲ್ಲಹ'ನಾಗಿ ಮೆರೆದದ್ದನ್ನು ಯೋಚಿಸಿದರೆ, 'ಅದು ಆರನೆಯ ಆಶ್ಚರ್ಯವೋ ವಿಧಿಯ ಬಿಡುಗಡೆಯೋ ಅಥವಾ ಪ್ರಕೃತಿಯ ವಿಕೃತಿಯೋ ಎಂದೇ ತೋರುತ್ತದೆಯಲ್ಲವೆ ?'

## ಅದ್ಭುತ ರಾಮಾಯಣದ ವಿಮರ್ಶೆ

೧

ಲಕ್ಷ್ಮೀನಾರಾಯಣ ಕವಿ 'ಅದ್ಭುತ ರಾಮಾಯಣ'ವನ್ನು ಬರೆಯುವಾಗ ಯಾವ ಮೂಲಗ್ರಂಥವನ್ನು ತನ್ನ ಗುರುಗಳಲ್ಲಿ ಅಭ್ಯಾಸ ಮಾಡುತ್ತಿದ್ದನೋ ಆ ಮೂಲಗ್ರಂಥ ಸಂಸ್ಕೃತ ಭಾಷೆಯಲ್ಲಿದೆ. ಸ್ವಲ್ಪ ಹೆಚ್ಚು ಕಡಮೆ ಒಂದು ಸಾವಿರ ಶ್ಲೋಕಗಳನ್ನೊಳಗೊಂಡ ಇಪ್ಪತ್ತೇಳು ಸರ್ಗಗಳಿರುವ ಈ ಸಂಸ್ಕೃತ 'ಅದ್ಭುತ ರಾಮಾಯಣ' ಪುರಾಣರೂಪವಾಗಿರುವ ಒಂದು ಗ್ರಂಥ. ಇದರಲ್ಲಿ ಕಥಾಭಾಗ ಕಡಿಮೆ, ವೇದಾಂತಭಾಗ ಹೆಚ್ಚು. ಪರಮಾತ್ಮನಾದ ರಾಮನಿಗಿಂತಲೂ ಮೂಲ ಪ್ರಕೃತಿಯಾದ ಸೀತೆ ಬಲಿಷ್ಠಳು ಎಂಬ ಅಂಶ ಈ ಗ್ರಂಥದಲ್ಲಿ ಪ್ರಕಟವಾಗಿದೆ. ದಶಕಂಠ ರಾವಣನನ್ನು ಜಯಿಸಿದ ಶ್ರೀರಾಮಚಂದ್ರನು ಸಹಸ್ರಕಂಠ ರಾವಣನೊಡನೆ ಯುದ್ಧಮಾಡಿ ಅವನನ್ನು ಜಯಿಸಲಾರದೆ ಹೋದಾಗ ಸೀತೆ ಅದ್ಭುತ ರೂಪವನ್ನು ತಾಳಿ ಮಹಾಕಾಳಿಯಾಗಿ ಅವತರಿಸಿ ಆ ಅಸುರನನ್ನು ಕೊಂದು ಲೋಕಕ್ಕೆ ಕಲ್ಯಾಣವನ್ನು ಉಂಟುಮಾಡಿದಳೆಂಬ ಒಂದಾನೊಂದು ಅದ್ಭುತ ವೃತ್ತಾಂತವನ್ನು ಇಲ್ಲಿ ಹೇಳಿದೆ. ಜೊತೆಗೆ ಸೀತಾದೇವಿಯ ಮಹಿಮೆಯ ಆಧಿಕ್ಯವನ್ನೇ ಗ್ರಂಥಕರ್ತೃ ಪ್ರಕಟಪಡಿಸಿ ಆದಿಮಾಯೆಯೇ ಸೀತೆ, ಸೀತೆಯೇ ಕಾಳಿ, ಕಾಳಿಯೇ ಲಕ್ಷ್ಮಿ ಎಂಬ ಅಭೇದ ತತ್ತ್ವವನ್ನು ಇಲ್ಲಿ ಉಪದೇಶಗೈದಿದ್ದಾನೆ. ಈ ಕಾರಣಗಳಿಂದ ಸಂಸ್ಕೃತದ ಈ ಗ್ರಂಥ ಸೀತೆಯ ಅದ್ಭುತಗಳನ್ನು ಕೊಂಡಾಡುವ ವೇದಾಂತ ತತ್ವಪ್ರಧಾನವಾದ ಒಂದು ಶಾಕ್ತ ಪುರಾಣವಾಗಿ ಪರಿಣಮಿಸಿದೆ.

ಈ ಗ್ರಂಥದ ಇಪ್ಪತ್ತೇಳು ಸರ್ಗಗಳ ವಿಷಯಾನುಕ್ರಮಣಿಕೆಯನ್ನು ನೋಡಿದರೆ ಕಥೆ ಇಲ್ಲಿ ಪಸರಿಸಿಕೊಂಡಿರುವ ರೀತಿ ಯಾವುದೆಂಬುದರ ಸ್ಥೂಲ ಕಲ್ಪನೆ ನಮಗೆ ಆಗುತ್ತದೆ. ವಾಲ್ಮೀಕಿ ಋಷಿಯನ್ನು ಕುರಿತು ಪ್ರಿಯ ಶಿಷ್ಯನಾದ ಭಾರದ್ವಾಜನು ದೇವಲೋಕದಲ್ಲಿರುವ ಆ ಶತಕೋಟಿ ರಾಮಾಯಣದಲ್ಲಿ ಏನು ಹೇಳಿದೆ ತಿಳಿಸಬೇಕು ಎಂದು ಕೇಳುತ್ತಾನೆ. ಆಗ ವಾಲ್ಮೀಕಿ ಮಹರ್ಷಿ 'ಎಲೈ ಭಾರದ್ವಾಜನೆ, ಶ್ರೀರಾಮನ ಚರಿತ್ರೆಯನ್ನು ಹೇಳುತ್ತೇನೆ. ಮೂಲಭೂತಳೂ ಪ್ರಕೃತಿಭೂತಳೂ ಆದ ಸೀತೆಯ ಮಹತ್ವವನ್ನು ಕೇಳು ಇದು ಅತ್ಯಾಶ್ಚರ್ಯಕರವಾದದ್ದು. ಈ ಸೀತೆಯ ಚರಿತ್ರೆಯನ್ನು ಬ್ರಹ್ಮನ ಮನೆಯಲ್ಲಿ ಗುಟ್ಟಾಗಿಟ್ಟಿದ್ದಾರೆ. ನಿನಗೆ ಇದನ್ನು ಹೇಳುತ್ತೇನೆ' ಎಂದು ಪ್ರಾರಂಭಿಸಿ ಸೀತಾರಾಮರ ಮಹಿಮೆಗಳನ್ನು ವರ್ಣಿಸಿ, 'ಭೂಲೋಕದಲ್ಲಿ ಅವರು ಅವತಾರವೆತ್ತಿದ ಕಾರಣವನ್ನು ಇನ್ನು ತಿಳಿಸುತ್ತೇನೆ' ಎನ್ನುತ್ತಾರೆ. ಇಲ್ಲಿಗೆ ಮೊದಲನೆಯ ಸರ್ಗ ಮುಗಿಯುತ್ತದೆ. ಬಳಿಕ ಅಂಬರೀಷ ವರಪ್ರದಾನ, ನಾರದ ಪರ್ವತರ ಸಭಾಪ್ರವೇಶ, ಶ್ರೀರಾಮ ಜನ್ಮೋಪಕ್ರಮ, ಕೌಶಿಕಾದಿಗಳ ವೈಕುಂಠ ಗಮನ, ಹರಿಮಿತ್ರೋಪಾಖ್ಯಾನ ನಾರದ ಗಾನ ಪ್ರಾಪ್ತಿ, ಸೀತೋತ್ಪತ್ತಿ, ಜಾಮದಗ್ನಿಗೆ ವಿಶ್ವರೂಪದರ್ಶನ, ಹನುಮಂತನಿಗೆ ಶ್ರೀರಾಮನ ಚತುರ್ಭುಜ ರೂಪದರ್ಶನ, ಸಾಂಖ್ಯಯೋಗ, ಉಪನಿಷತ್ಕಥನ, ಭಕ್ತಿಯೋಗ, ಭಗವಂತ ಹನುಮಂತರ ಸಂವಾದ, ಹನುಮಂತನು ಸ್ತುತಿಸಿದ ಸ್ತವರಾಜ, ರಾಮ ರಾಜ್ಯೋಪಲಂಬನ, ಸೀತಾಭಾಷಣ, ರಾವಣ ಸೈನ್ಯ ನಿರ್ಯಾಣ, ರಾವಣ ಪುತ್ರ ನಿರ್ಯಾಣ, ಸಂಕುಲಯುದ್ಧ, ಸೈನ್ಯ ವಿಕ್ಷೇಪಣ, ರಾಮಸ್ವಪ್ನಾಯಿತಂ ಸಹಸ್ರ ವದನ ರಾವಣವಧೆ, ರಾಮಾಶ್ವಾಸನ, ಸೀತಾ ಸಹಸ್ರನಾಮಸ್ತೋತ್ರ ಕಥನ, ಶ್ರೀರಾಮವಿಜಯ, ಶ್ರೀಸೀತಾರಾಮರ ಅಯೋಧ್ಯಾಗಮನ ಎಂಬ ಇಪ್ಪತ್ತಾರು ಸರ್ಗಗಳ ಕಥೆಯನ್ನು ಕ್ರಮವಾಗಿ ವಾಲ್ಮೀಕಿ ಮಹರ್ಷಿಗಳು ಭಾರದ್ವಾಜನಿಗೆ ಹೇಳುತ್ತಾರೆ.

ಪುರಾಣದ ಮುಖ್ಯ ಗುರಿ ನೀತಿ ನಿರೂಪಣೆ. ನೀತಿಯನ್ನು ಹೇಳುತ್ತ ತತ್ವವನ್ನು ಉಪದೇಶ ಮಾಡುತ್ತ ಶ್ರೋತೃಗಳ ಹೃದಯದಲ್ಲಿ ಮತಾಭಿಮಾನವೂ ದೈವಭಕ್ತಿಯೂ ಜಾಗೃತವಾಗುವಂತೆ ನೋಡಿಕೊಳ್ಳುವುದೇ ಪುರಾಣದ ಉದ್ದೇಶ. ಕಾವ್ಯದ ಮುಖ್ಯ ಗುರಿಯಾದರೋ ರಸನಿರೂಪಣೆ. ಕಥೆಯನ್ನು ಹೇಳುತ್ತ ಪಾತ್ರಗಳನ್ನು ಚಿತ್ರಿಸುತ್ತ, ಪ್ರಕೃತಿಯನ್ನು ವರ್ಣಿಸುತ್ತ ಕೇಳುವವರ ಹೃದಯದಲ್ಲಿ ರಸತರಂಗಗಳನ್ನು ಉಕ್ಕೇರಿಸಿ ಅವರನ್ನು ಭಾವಪರವಶರನ್ನಾಗಿ ಮಾಡಿ ನಿರ್ದುಷ್ಟವೂ ಅಹೇತುಕವೂ ಆದ ಆನಂದದಲ್ಲಿ ಮುಳುಗಿಸಿಬಿಡುವುದೇ ಕಾವ್ಯದ ಉದ್ದೇಶ. ಪುರಾಣದ ವಸ್ತುವನ್ನು ಕವಿ ಆರಿಸಿಕೊಳ್ಳುವಾಗ ತನ್ನ ಉದ್ದೇಶಕ್ಕೆ ಅನುಕೂಲವಾಗುವಂತೆ ಅದನ್ನು ಮಾರ್ಪಡಿಸಿಕೊಳ್ಳಬೇಕಾಗುತ್ತದೆ. ಅದು ಸಾಧ್ಯವಾಗದೆ ಹೋದರೆ ಅದರಲ್ಲಿರುವ ನೀರಸವಾದ ಭಾಗಗಳನ್ನೂ ಮತಧರ್ಮ ತತ್ವಗಳನ್ನು ಕುರಿತ ಸುದೀರ್ಘವಾದ ಉಪದೇಶಗಳನ್ನೂ ಅಡ್ಡ ದಾರಿಯ ಕವಲು ಕಥೆಗಳನ್ನೂ ಚರ್ವಿತ ಚರ್ವಣವಾಗಿ ತೋರುವ ಭಾಗಗಳನ್ನೂ ಬಿಡಬೇಕಾಗುತ್ತದೆ. ಮುಖ್ಯ ಕಥೆಯೊಂದನ್ನೇ ಗ್ರಹಿಸಿ

ಅದನ್ನು ಸಂಗ್ರಹಿಸಬೇಕಾಗುತ್ತದೆ. ಮುದ್ದಣ ತನ್ನ 'ಅದ್ಭುತ ರಾಮಾಯಣ'ದಲ್ಲಿ ಈ ಎರಡನೆಯ ಮಾರ್ಗವನ್ನು ಅನುಸರಿಸಿ ಒಳ್ಳೆಯ ಸಂಗ್ರಹಕಾರನ ಕುಶಲತೆಯನ್ನು ತೋರಿಸಿದ್ದಾನೆ.

ಮೇಲೆ ಕಾಣಿಸಿದ ಇಪ್ಪತ್ತೇಳು ಸರ್ಗಗಳ ಕಥೆಯನ್ನು ಮುದ್ದಣ ಹದಿನಾರು ಆಶ್ವಾಸಗಳಿಗೆ ಇಳಿಸಿಕೊಂಡಿದ್ದಾನೆ. ಈ ಹದಿನಾರು ಆಶ್ವಾಸಗಳ ವಿಷಯಾನುಕ್ರಮಣಿಕೆಯನ್ನು ನೋಡಿದರೆ ಬಿಟ್ಟ ಭಾಗ ಯಾವುದು ಎನ್ನುವುದು ತಾನಾಗಿಯೇ ಕಾಣುತ್ತದೆ. ಭಾರದ್ವಾಜನು ಕೇಳಿದನೆಂದು ವಾಲ್ಮೀಕಿ ಮಹರ್ಷಿ ಅದ್ಭುತ ರಾಮಾಯಣ ಕಥೆಯನ್ನು ಹೇಳಲುಪಕ್ರಮಿಸುವುದು, ಅಂಬರೀಷ ವರಪ್ರದಾನ, ನಾರದ ಪರ್ವತರ ರಾಜಸಭಾ ಪ್ರವೇಶ ಮತ್ತು ವೈಕುಂಠಗಮನ, ರಾಮಜನ್ಮೋಪಕ್ರಮ, ಕೌಶಿಕಾದಿಗಳ ವೈಕುಂಠಲೋಕ ಪ್ರಾಪ್ತಿ, ಹರಿಮಿತ್ರೋಪಾಖ್ಯಾನ, ನಾರದ ಗಾಯನ ಪ್ರಾಪ್ತಿ, ಶ್ರೀ ಸೀತಾಜನ್ಮಕಥನ, ಜಾಮದಗ್ನಿ ವಿಶ್ವರೂಪ ದರ್ಶನ, ಹನುಮದ್ವಿಶ್ವರೂಪದರ್ಶನ, ರಾಮರಾಜ್ಯಾವಲಂಬನ, ಸೀತಾಭಾಷಣ, ಪುಷ್ಕರದ್ವೀಪಗಮನ, ಸಂಕುಲಯುದ್ಧ, ರಾಮ ಮೂರ್ಛಾಪ್ರಾಪ್ತಿ, ಶ್ರೀ ಸೀತಾರಾಮರ ಅಯೋಧ್ಯಾಗಮನ – ಇವು ಕ್ರಮವಾಗಿ ಹದಿನಾರು ಆಶ್ವಾಸಗಳಲ್ಲಿ ಬರುವ ವಿಷಯಗಳಾಗಿವೆ.

೨

ಮೂಲ ಅದ್ಭುತ ರಾಮಾಯಣದಲ್ಲಿ ಬರುವ ಪುರಾಣ ಯೋಗ್ಯವಾದ ಸಾಂಖ್ಯಯೋಗ (ಸರ್ಗ ೧೧), ಉಪನಿಷತ್ಕಥನ (ಸರ್ಗ ೧೨) ಭಕ್ತಿಯೋಗ (ಸರ್ಗ ೧೩), ಭಗವದ್ಧನುಮತ್ ಸಂವಾದ (ಸರ್ಗ ೧೪), ಹನುಮತ್ ಕೃತಸ್ತವರಾಜ (ಸರ್ಗ ೧೫), ಎಂಬ ಐದು ಸರ್ಗಗಳ ವೇದಾಂತದ ತತ್ವೋಪದೇಶವನ್ನೊಳಗೊಂಡ ವೃತ್ತಾಂತವನ್ನು ಮುದ್ದಣ ಸಂಪೂರ್ಣವಾಗಿ ಕೈಬಿಟ್ಟಿದ್ದಾನೆ. ಶ್ರೀರಾಮನು ಹನುಮಂತನಿಗೆ ವಿಶ್ವರೂಪವನ್ನು ತೋರಿ ತತ್ವೋಪದೇಶವನ್ನು ಮಾಡಿದನೆಂಬುದೂ ಈ ಐದು ಸರ್ಗಗಳಲ್ಲಿ ಬರುವ ನೂರತೊಂಬತ್ತು ಶ್ಲೋಕಗಳ ವಿಷಯ. 'ತನಗೆ ಕಾಣಿಸಿದ ಬ್ರಹ್ಮಾಂಡ ನಾಯಕನಂ ಬಲ್ವಗೆಯೊಳ್ ಪೊಗಟ್ದು ಆನಂದಾಬ್ಧಿಯೊಳ್ ಮುಳುಂಗಿ ವಿಶ್ವಮೂರ್ತಿಯಿಂ ತತ್ವೋಪದೇಶಮಂ ಕೊಂಡು ನಲಿದಾಡುತಿರ್ದಂ' ಎಂಬ ಒಂದೇ ಒಂದು ವಾಕ್ಯದಲ್ಲಿ ಮುದ್ದಣ ಮೇಲಣ ಐದು ಸರ್ಗಗಳ ವಿಷಯವನ್ನು ಮುಗಿಸಿಬಿಟ್ಟಿದ್ದಾನೆ.

ಮೂಲ ರಾಮಾಯಣದ ಹದಿನೆಂಟನೆಯ ಸರ್ಗದಲ್ಲಿ ಸಹಸ್ರಕಂಠ ರಾವಣನ ಸೇನಾಪತಿಗಳ ಹೆಸರುಗಳನ್ನು ಹೇಳಿದೆ. ಒಟ್ಟು ಸುಮಾರು ನೂರೆಪ್ಪತ್ತಾರು ಜನ ಸೇನಾನಾಯಕರ ಹೆಸರಿನ ಒಂದು ದೊಡ್ಡ ಪಟ್ಟಿ ಅಲ್ಲಿದೆ. ಮುದ್ದಣ ಅವರಲ್ಲಿ ನಾಲ್ವರ ಹೆಸರುಗಳನ್ನು ಮಾತ್ರ ಹೇಳಿದ್ದಾನೆ. ಹತ್ತೊಂಬತ್ತನೆಯ ಸರ್ಗದಲ್ಲಿ ಐವತ್ತೆರಡು ಜನ ರಾವಣ ಪುತ್ರರ ಹೆಸರಿನ ಒಂದು ಪಟ್ಟಿ ಬಂದಿದೆ. ಮುದ್ದಣ ಇವರಲ್ಲಿ ಐವರ

ಹೆಸರನ್ನು ಮಾತ್ರ ಹೇಳಿದ್ದಾನೆ. ಇದೇ ಸರ್ಗದಲ್ಲಿ ಸುಮಾರು ಮೂವತ್ತೆಂಟು ಶ್ಲೋಕಗಳಲ್ಲಿ ಯುದ್ಧಕ್ಕೆ ಬಂದ ರಾವಣನ ಕಡೆಯ ಸೈನಿಕರ ವಿಕಾರವಾದ ಆಕಾರವನ್ನು ವರ್ಣಿಸಿದೆ. ಮುದ್ದಣ ಹತ್ತು ಪಂಕ್ತಿಯಲ್ಲಿ ಈ ವರ್ಣನೆಯ ಸೊಗಸಾದ ಒಂದು ಚಿತ್ರವನ್ನು ಕೊಟ್ಟಿದ್ದಾನೆ.

ಮೂಲ ರಾಮಾಯಣದ ಇಪ್ಪತ್ತು ಮೂರನೆಯ ಸರ್ಗದಲ್ಲಿ ಮಹಾಕಾಳಿಯಾಗಿ ಸಹಸ್ರಕಂಠ ರಾವಣನನ್ನು ಕೊಂದ ಸೀತೆಯೊಡನೆ ನೆತ್ತರಿನ ಓಕಳಿ ಆಟವಾಡಲು ನೆರೆವ ಮಾತೃಕೆಯರ ಹೆಸರಿನ ಮತ್ತೊಂದು ಪಟ್ಟಿ ಬರುತ್ತದೆ. ಸುಮಾರು ಇನ್ನೂರಕ್ಕೂ ಮಿಕ್ಕ ಈ ಮಾತೃಕೆಯರ ಹೆಸರುಗಳಲ್ಲಿ ಒಂದನ್ನೂ ಹೇಳದೆ 'ಆಗವಳ ಪಡಿವರಿಜಿನ ಮಾತೃಕೆಯರ್ ಕೋಟಿ ಲೆಕ್ಕದೊಳ್ ನೆರೆದು' ಎಂದು ಮುದ್ದಣ ಮುಂದುವರಿದಿದ್ದಾನೆ.

ಮೂಲದ ಇಪ್ಪತ್ತುನಾಲ್ಕನೆಯ ಸರ್ಗದಲ್ಲಿ ಮಹಾಕಾಳಿಯಾದ ಸೀತೆಯನ್ನು ಬ್ರಹ್ಮಾದಿಗಳು ಸ್ತೋತ್ರಗೈದರೆಂಬ ಸಂದರ್ಭದಲ್ಲಿ ಇಪ್ಪತ್ತೊಂದು ಶ್ಲೋಕಗಳ ತುಂಬ ಸೀತಾ ಮಾಹಾತ್ಮ್ಯವನ್ನು ಕುರಿತ ವರ್ಣನೆ ಬರುತ್ತದೆ. ಮುದ್ದಣ ಕೇವಲ ಆರು ಪಂಕ್ತಿಗಳಲ್ಲಿ ಈ ವರ್ಣನೆಯ ಸಾರವನ್ನು ಸಂಗ್ರಹಿಸಿದ್ದಾನೆ.

ಮೂಲದ ಇಪ್ಪತ್ತೈದನೆಯ ಸರ್ಗದಲ್ಲಿ ಶ್ರೀರಾಮನು ಸೀತಾದೇವಿಯನ್ನು ಸಹಸ್ರನಾಮಗಳಿಂದ ಸ್ತೋತ್ರ ಮಾಡಿದ ವೃತ್ತಾಂತ ಬರುತ್ತದೆ. ನೂರೈವತ್ತೊಂಬತ್ತು ಶ್ಲೋಕಗಳನ್ನೊಳಗೊಂಡ ಈ ಭಾಗದ ಕಥೆಯನ್ನು 'ಮಾದೇವಿಯ ಮೈಮೆಯಂ ಕಂಡು ಭಯದಿಂ ಸಾಸಿರದೆಂಟು ಪೆಸರಿಂ ತುತಿಸಿ' ಎಂದು ಮುಗಿಸಿದ್ದಾನೆ.

ಹೀಗೆ ಮೂಲವನ್ನು ಅನುಸರಿಸಿದಾಗ ಕಥೆಯ ಓಟಕ್ಕೆ ತಡೆಯಾಗಬಲ್ಲ ಎಲ್ಲ ವೃತ್ತಾಂತವನ್ನೂ ಮುದ್ದಣ ಕೈ ಬಿಟ್ಟಿದ್ದಾನೆ, ಇಲ್ಲವೆ ಒಂದು ಮಾತಿನಲ್ಲಿ ಹೇಳಿ ಮುಗಿಸಿದ್ದಾನೆ. ಮೂಲ ರಾಮಾಯಣವನ್ನು ಅನುಸರಿಸುವ ಕಡೆಗಳಲ್ಲಿ ಮಾತ್ರ ಯಥಾವತ್ತಾಗಿ ಅನುವಾದ ಮಾಡುವುದು ಮುದ್ದಣನ ಪದ್ಧತಿ. ಅನುವಾದ ಎಷ್ಟರಮಟ್ಟಿಗೆ ಯಥಾರ್ಥವಾಗಿರುವುದೆಂಬುದನ್ನು ತೋರಿಸುವ ಸಲುವಾಗಿ ಈ ಕೆಳಗೆ ಬೇರೆ ಬೇರೆ ಸಂದರ್ಭಗಳಲ್ಲಿ ಬರುವ ಮೂಲ ಅದ್ಭುತ ರಾಮಾಯಣದ ಮೂರು ಭಾಗಗಳನ್ನೂ ಅವುಗಳ ಕನ್ನಡ ಅನುವಾದವನ್ನೂ ಕೊಟ್ಟಿದೆ

### **ಸಂಸ್ಕೃತ ಮೂಲ** (೧ನೆಯ ಸರ್ಗ)

ಜಾನಕೀ ಪ್ರಕೃತಿಃ ಸೃಷ್ಟೇರಾದಿಭೂತಾ ಮಹಾಗುಣಾ
ತಪಸ್ಸಿದ್ಧಿಃ ಸ್ವರ್ಗಸಿದ್ಧಿಃ ಭೂತಿರ್ಭೂತಿಮತಾಂ ಸತೀ ೧೭

ವಿದ್ಯಾವಿದ್ಯಾ ಚ ಮಹತೀ ಗೀಯತೇ ಬ್ರಹ್ಮವಾದಿಭಿಃ
ಋದ್ಧಿಃ ಸಿದ್ಧಿರ್ಗುಣಮಯೀ ಗುಣಾತೀತಾ ಗುಣಾತ್ಮಿಕಾ ೧೮

ಬ್ರಹ್ಮಬ್ರಹ್ಮಾಂಡ ಸಂಭೂತಾ ಸರ್ವಕಾರಣ ಕಾರಣಂ
ಪ್ರಕೃತಿರ್ವಿಕೃತಿರ್ದೇವೀ ಚಿನ್ಮಯೀ ಚಿದ್ವಿಲಾಸಿನೀ ೧೯

ಮಹಾಕುಂಡಲಿನೀ ಸರ್ವಾನುಸ್ಯೂತಾ ಬ್ರಹ್ಮಸಂಜ್ಞಿತಾ
ತಸ್ಯಾ ವಿಲಸಿತಂ ಸರ್ವಂ ಜಗದೇತಚ್ಚರಾಚರಂ ೨೦

ಯಾಮಾಧಾಯ ಹೃದಿ ಬ್ರಹ್ಮನ್ ಯೋಗಿನಃ ತತ್ವದರ್ಶಿನಃ
ವಿಘಟ್ಟಯಂತಿ ಹೃದ್ಗ್ರಂಥಿಂ ಭವಂತಿ ಸುಖಮೂರ್ತಿಕಾಃ ೨೧

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಸುವ್ರತ
ಅಭ್ಯುತ್ಥಾನಮಧರ್ಮಸ್ಯ ತದಾ ಪ್ರಕೃತಿ ಸಂಭವಃ ೨೨

ರಾಮಃಸಾಕ್ಷಾತ್ ಪರಂಜ್ಯೋತಿಃ ಪರಂಧಾಮ ಪರಃಪುಮಾನ್
ಅಕೃತೌ ಪರಮೋ ಭೇದೋ ನ ಸೀತಾರಾಮಯೋರ್ಯತಃ ೨೩

ರಾಮಃ ಸೀತಾ ಜಾನಕೀ ರಾಮಭದ್ರೋ
ನಾಣುರ್ಭೇದೋ ನೈತಯೋರಸ್ತಿ ಕಶ್ಚಿತ್ ।
ಸಂತೋ ಬಧ್ವಾ ತತ್ವಮೇ ತದ್ವಿಬುದ್ಧಾಃ
ಪಾರಂ ಯಾತಾಃ ಸಂಸೃತೇಃ ಮೃತ್ಯುವಕ್ತ್ರಾತ್ ೨೪

ರಾಮೋ ಚಿಂತ್ಯೋ ನಿತ್ಯಚಿತ್ ಸರ್ವಸಾಕ್ಷೀ
ಸರ್ವಾತಸ್ಥಃಸರ್ವಲೋಕೈಕ ಕರ್ತಾ ।
ಭರ್ತಾ ಹರ್ತಾನಂದ ಮೂರ್ತಿರ್ವಿಭೂಮಾ
ಸೀತಾ ಯೋಗಾಚ್ಚಿಂತ್ಯತೇ ಯೋಗಿಭಿಸ್ಸಃ ೨೫

ಅಪಾಣಿಪಾದೋ ಜವನೋ ಗೃಹೀತಾ ಪಶ್ಯಚಕ್ಷುಃ ಸ ಶೃಣೋತ್ಯಕರ್ಣಃ
ಸ ವೇತ್ತಿ ವಿಶ್ವಂ ನ ಹಿ ತಸ್ಯ ವೇತ್ತಾ ತಮಾಹುರಗ್ರ್ಯಂ ಪುರುಷ ಪುರಾಣಂ ೨೬

ತಯೋಃ ಪರಂ ಜನ್ಮ ಉದಾಹರಿಷ್ಯೇ
ಯಯೋರ್ಯಥಾ ಕಾರಣ ದೇಹಧಾರಿಣೋಃ ।
ಅರೂಪಿಣೋರೂಪ ವಿಧಾರಣಂ ಪುನಃ
ನೃಣಾಂ ಮಹಾನುಗ್ರಹ ಏವ ಕೇವಲಂ ೨೭

**ಕನ್ನಡ ಅನುವಾದ :**

ಜಾನಕೀದೇವಿ ತಾಂ ಸೃಷ್ಟಿಯ ಆದಿಭೂತ ಮಹಾಗುಣೆಯುಂ ಪ್ರಕೃತಿಯುಂ, ಸ್ವರ್ಗಸಿದ್ಧಿಯುಂ, ತಪಸ್ಸಿದ್ಧಿಯುಂ, ಐಶ್ವರ್ಯರೂಪಿಣಿಯುಂ, ಮೂರ್ತಿಮಂತೆಯುಂ ಬ್ರಹ್ಮಾಂಡ ನಾಯಿಕೆಯುಂ, ಕಾರಣಕಾರಣಿಕೆಯಮಪ್ಪಳ್. ಅವಳಂ ಬ್ರಹ್ಮವೇದಿಗಳ್ ವಿದ್ಯೆಯೆಂದುಂ ಅವಿದ್ಯೆಯೆಂದುಂ, ಸುಗುಣೆಯೆಂದುಂ, ನಿರ್ಗುಣೆಯೆಂದುಂ, ಪ್ರಕೃತಿಯೆಂದುಂ, ವಿಕೃತಿಯೆಂದುಂ, ದೇವಿಯೆಂದುಂ, ಚಿನ್ಮಯಿಯೆಂದುಂ, ಚಿದ್ವಿಲಾಸಿನಿಯೆಂದು, ಮಹಾಕುಂಡಲಿನಿಯೆಂದು ಪೇಳ್ವರ್. ಅವಳಿಂದಮೆ ಈ ವಿಶ್ವಂ ಶೋಭಿತಮಾಗಿರ್ಕುಂ ಮತ್ತಮವಳಂ ತತ್ವದರ್ಶಿಗಳ್ ಹೃದಯದೊಳ್ ಬಯ್ತಿಟ್ಟು ಹೃಗ್ಗ್ರಂಥಿಯಂ ವಿಘಟ್ಟಿಸಂಗೈದು ತಾಂ ಸುಖಮೂರ್ತಿಯಪ್ಪರ್. ಎಲ್ಲೈ

ಸುವ್ರತ. ಏಗಳ್ ಧರ್ಮ ಗ್ಲಾನಿಯುತ್ಪನ್ನಮಪ್ಪುದೋ, ಮೇಣೇಗಳಧರ್ಮದಭ್ಯುದಯಮಪ್ಪುದೋ, ಆಗಳ್ ಶಕ್ತಿ ಪುಟ್ಟಲೆಡೆಯಪ್ಪುದು : ಇಂತಿವಳ್ಗಂ ಸಾಕ್ಷಾತ್ಪರಮಾತ್ಮಂ ಪರಮೇಶ್ವರನಪ್ಪ ರಾಮಂಗುಂ ಆಕಾರದೊಳೆನಸುಂ ಭೇದಮಿರದು. ಇದನಱಿಯುತೆಯೆ ಸಂತರ್ ಸ್ವಾಂತಸಂತುಷ್ಟಿಯಿಂದ ಮುಕ್ತಿಸೀಮನ್ತಿನಿಯಂ ನಿಟ್ಟಿಪರ್; ಸಂಸಾರಿಗಳ್ ಮಿಟ್ಟುವಿನ ಬಾಯಿಂ ತಪ್ಪಿದಪರ್. ಶ್ರೀ ರಾಮನಾದೊಡೆ ಅಚಿಂತ್ಯಂನಿತ್ಯಂ ಸರ್ವಸಾಕ್ಷಿ ಸರ್ವಾನ್ತರ್ಯಾಮಿ, ಸರ್ವಲೋಕೈಕಕರ್ತಾರಂ, ಆನಂದಮೂರ್ತಿಯೆನಿಪ್ಪಂ; ಕಾಲ್ಗಳಿಲ್ಲದೆಯುಂ ಪರಿದಪಂ; ಕೈಗಳಿಲ್ಲದೆಯುಂ ಪಿಡಿದಪಂ; ಕಣ್ಗಳಿಲ್ಲದೆ ಕಣ್ಡಪಂ; ಕಿವಿಗಳಿಲ್ಲದೆ ಕೇಳ್ದಪಂ. ಅಂತಾತಂ ವಿಶ್ವಮೆಲ್ಲಮಂ ತಿಳಿದೊಡಂ ವಿಶ್ವಮೆಂತುಮವನನಱಿಯದು. ಇದರ್ಕೆಯೆ ಈತಂಗೆ ಪುರಾಣಪುರುಷನೆಂಬರ್. ಇಂತಪ್ಪ ಪುರಾಣಪುರುಷನ ಮತ್ತಂ ಪರ ಪ್ರಕೃತಿಯ ಜನ್ಮಕಾರಣಮೆಂತಂತೆಯೇ ಬಣ್ಣಿಪೆಂ. ಅರೂಪಮಿರ್ದು ಸರೂಪಮೆಂತಾಯ್ತು? ಇದಂ ವಿಚಾರಿಸಲ್ ಮರ್ತ್ಯರನನುಗ್ರಹಿಸಲೆಂಬುದೆ ಮುಖ್ಯ ಕಾರಣಮಲ್ತೆ.

## ಸಂಸ್ಕೃತ ಮೂಲ (೭ನೆಯ ಸರ್ಗ)

ಸ್ತ್ರೀ ಸಂಗಮೇ ತಥಾ ಗೀತೇ ಕ್ಷುತೇನ್ವಾಖ್ಯಾನ ಸಂಗಮೇ
ವ್ಯವಹಾರೇ ಚ ಧಾನ್ಯಾನಾಮರ್ಥಾನಾಂ ಚ ತಥೈವ ಚ ॥

ಆಯವ್ಯಯೇ ತಥಾ ನಿತ್ಯಂ ತ್ಯಕ್ತ ಲಜ್ಜಸ್ತು ವೈ ಭವೇತ್
ನ ಕುಂಠಿತೇನ ಗೂಢೇನ ನಿತ್ಯಂ ಪ್ರಾವರಣಾದಿಭಿಃ ॥

ಹಸ್ತವಿಕ್ಷೇಪ ಭಾವೇನ ವ್ಯಾದಿತಾಸ್ಯೇನ ಚೈವ ಹಿ
ನಿರ್ಯಾತ ಜಿಹ್ವಾಯೋಗೇನ ಗೇಯಂ ಚ ಕಥಂಚನ ॥

ಸ್ವಾಂಗಂ ನಿರೀಕ್ಷಮಾಣೇನ ಪರಪ್ರೇಕ್ಷಕತಾ ತಥಾ
ನ ಗಾಯೇದೂರ್ಧ್ವಬಾಹುಶ್ಚ ನೋರ್ಧ್ವದೃಷ್ಟಿಃ ಕಥಂ ಚ ನ ॥

ಹಾಸೋ ಭಯಂ ಕ್ಷುಧಾ ಕಂಪಃ ಶೋಕೋನ್ಯಸ್ಯ ಸ್ಮೃತಿಸ್ತೃಷಾ
ನೈತಾನಿ ಸಪ್ತರೂಪಾಣಿ ಗಾನಯೋಗೇ ಮಹಾಮುನೇ ॥

ನೈಕ ಹಸ್ತೇನ ಶಸ್ಯೇತ ತಾಳಸಂಘಟ್ಟನಂ ಮುನೇ
ಕ್ಷುಧಾರ್ತೇನ ಭಯಾರ್ತೇನ ತೃಷಾರ್ತೇನ ತಥೈವ ಚ ॥

ಗಾನಯೋಗೋ ನ ಕರ್ತವ್ಯಃ ನಾಂಧಕಾರೇ ಕಥಂ ಚ ನ
ಏವಮಾದೀನಿ ಯೋಗಾನಿ ಕರ್ತವ್ಯಾನಿ ಮಹಾಮುನೇ ॥

### ಕನ್ನಡ ಅನುವಾದ :

"ದೇವರ್ಷಿಯೇ! ಗೀತದೊಳುಂ ಆಹಾರದೊಳುಂ, ಧನಧಾನ್ಯವ್ಯವಹಾರದೊಳುಂ, ಆಯವ್ಯಯದೊಳುಂ ನಾಣ್ಚಿಕೆಯಾಗದೆಂಬರದು ಕಾರಣದಿನೀ

ಬಿಜ್ಜೆಗೆ ಲಜ್ಜೆ ಸಲ್ಲದೈ. ಮತ್ತಂ ಕುಂಠಿತಮಾಗಿಯುಂ, ಗೂಢಮಾಯುಂ, ಪಾಡುವುದಾಗದು. ಕೆಮ್ಮಿರಿಪಿ, ಕಿಱುವಾಯ್ಗೆಯ್ದು, ಜೋಲ್ವಾಲಗೆದೋರ್ದು ಪಾಡುವುದುವೊಳ್ಳಿತಲ್ತು. ತನ್ನ ಮೈಯ್ಯುಂ ತಾಂ ಕಾಣ್ಬುದುಂ, ಬಿಱುದಿಟ್ಟಯಿಂ ನೋೞ್ಪುದುಂ, ತೋಳ್ಗಳಂ ಮೇಲೆತ್ತುವುದುಂ, ಆಗಸಮಂ ನೋೞ್ಪುದುಂ ಗಾಯನಕ್ಕೆ ಸಲ್ಲದು. ನಗೆ, ಬೆವರ್ಕೆ, ಪಸಿವು, ನಡುಕಂ, ದುಗುಡಂ, ಪೆಱತೆಣಿಕೆ, ನೀರಟ್ಕೆ ಇಂತೀಬ್ಗೆಗೆ ಪಾಡು ಪಾಡಾಗದು. ಒರ್ಕೆಯ್ಕಿಂ ತಾಳಂದೋರ್ಪುದುಂ ಕಟ್ಟಿಲೆಯೊಳ್ ಪಾಡುವುದುಂ ದೋಷಂ. ಇಂತು ದೋಷಂಗಳಂ ನಿರ್ಣಯಿಸಿ ಪಾಡಲ್ವೇಕ್ಕುದು."

## ಸಂಸ್ಕೃತ ಮೂಲ (೨ನೆಯ ಸರ್ಗ)

ಪಿತರ್ಯುಪರತೇ ಶ್ರೀಮಾನಭಿಷಿಕ್ತೋ ಮಹಾತ್ಮಭಿಃ
ಮಂತ್ರಿಷ್ವಾಧಾಯ ರಾಜ್ಯಂ ಚ ತಪ ಉಗ್ರಂ ಚಕಾರ ಸಃ ೧೯

ಸಂವತ್ಸರ ಸಹಸ್ರಂ ವೈ ಜಪನ್ನಾರಾಯಣಂ ಪ್ರಭುಂ
ಹೃತ್ಪುಂಡರೀಕ ಮಧ್ಯಸ್ಥಂ ಸೂರ್ಯಮಂಡಲ ಮಧ್ಯಗಂ ೨೦

ಶಂಖಚಕ್ರಗದಾಪದ್ಮಂ ಧಾರಯಂತಂ ಚತುರ್ಭುಜಂ
ಶುದ್ಧ ಜಾಂಬೂನದನಿಭಂ ಬ್ರಹ್ಮವಿಷ್ಣು ಶಿವಾತ್ಮಕಂ ೨೧

ಸರ್ವಾಭರಣ ಸಂಯುಕ್ತಂ ಪೀತಾಂಬರಧರಂ ಪ್ರಭುಂ
ಶ್ರೀವತ್ಸ ವಕ್ಷಸಂ ದೇವಂ ಪುರುಷಂ ಪುರುಷೋತ್ತಮಂ ೨೨

ತತೋ ಗರುಡಮಾರುಹ್ಯ ಸರ್ವದೇವೈರಭಿಷ್ಟುತಃ
ಆಜಗಾಮ ಸ ವಿಶ್ವಾತ್ಮಾ ಸರ್ವಲೋಕ ನಮಸ್ಕೃತಃ ೨೩

ಐರಾವತಮಿವಾಚಿಂತ್ಯಂ ಕೃತ್ವಾ ವೈ ಗರುಡಂ ಹರಿಃ
ಸ್ವಯಂ ಶಕ್ರ ಇವಾಸೀನಸ್ತಮಾಹ ನೃಪಸತ್ತಮಂ ೨೪

ಇಂದ್ರೋಹಮಸ್ಮಿ ಭದ್ರಂ ತೇ ಕಿಂ ದದಾಮಿ ತವಾದ್ಯ ವೈ
ಸರ್ವಲೋಕೇಶ್ವರೋಹಂ ತ್ವಾಂ ರಕ್ಷಿತುಂ ಸಮುಪಾಗತಃ ೨೫

ಅಂಬರೀಷಸ್ತು ತಂ ದೃಷ್ಟ್ವಾ ಶಕ್ರಮೈರಾವತಸ್ಥಿತಂ
ಉವಾಚ ವಚನಂ ಧೀಮಾನ್ ವಿಷ್ಣುಭಕ್ತಿಪರಾಯಣಃ ೨೬

ನಾಹಂ ತ್ವಾಮಭಿಸಂಧಾಯ ತಪ ಆಸ್ಥಿತವಾನಿಹ
ತ್ವಯಾ ದತ್ತಂ ಚ ನೇಚ್ಛಾಮಿ ಗಚ್ಛ ಶಕ್ರ ಯಥಾ ಸುಖಂ ೨೭

**ಕನ್ನಡ ಅನುವಾದ :**

ಇತ್ತಲಾದಿಗಂತ ವಿಶ್ರಾಂತಕೀರ್ತಿಯಪ್ಪ ಅಂಬರೀಷ ಮಹಾರಾಜಂ ರಾಜ್ಯ ಪದಮಂ ಮಂತ್ರಿಯೊಳ್ ನಿಲಿಸಿ, ತಾಂ ಭಗವದನುಗ್ರಹಮಂ ಪಡೆದಪೆನೆನುತೆ

ಘೋರ ಕಾನನಮಂ ಸೇರ್ದು, ಭಕ್ತಹೃತ್ಪುಂಡರೀಕಮಧ್ಯಸ್ಥನುಂ, ಬ್ರಹ್ಮವಿಷ್ಣು ಶಿವಾತ್ಮಕನುಂ, ಚತುರ್ಭುಜನುಂ, ಶಂಖಚಕ್ರಗದಾಪದ್ಮ ಶೋಭಿತನುಂ, ಶುದ್ಧ ಜಾಂಬೂನದ ವರ್ಣನುಂ ಸರ್ವಾಭರಣಸಂಯುಕ್ತನುಂ, ಪೀತಾಂಬರ ಧಾರಿಯುಂ, ಪುರುಷೋತ್ತಮನುಮಪ್ಪ ನಾರಾಯಣನಂ ಕುಱಿತು ಸಾಸಿರ ಗಾಲಂಬರೆಗಂ ತಪಸನೆಸಗುತಿರ್ದಂ.

ಬೞಿಯಿಂ ಗರುಡಾರೂಢನಪ್ಪ ಪರಮಾತ್ಮಂ ಭಕ್ತನಂ ಪರಿಕಿಸಲೆಂದು ವೈನತೇಯನಸ್ಯೈರಾವತಮಪ್ಪಂತೆ ಮಾರ್ಪಡಿಸುತೆ ತಾನಿಂದ್ರನಾಗುತೆ ಅಂಬರೀಷಂಗೆ ಕಾಣಿಸಿಕೊಂಡಿಂತೆಂದಂ :– 'ಎಲೆ ಅಂಬರೀಷ, ಗೆಲವಕ್ಕೆ ಆನಿಂದ್ರಂ; ನಿನ್ನನುದ್ಧರಿಸಲೆಂದು ಬಂದೆಂ. ಏಂ ವರಮನಿಚ್ಛಿಪ್ಪೈ ? ಕರುಣಿಪೆಂ.' ಇಂತು ಸಿರೆ ಚೌದಂತಮನೇರ್ದ ಮೆಯ್ಗಣ್ಣನಂ ಕಿಷುಗಣ್ಣಿಕಂಡಾರಾಯಂ 'ಅಮರ್ದುಂಡರೊಡೆಯ, ನಿನ್ನಂ ಕುಱಿತಾಂ ತಪಮಾಚರಿಸಿದುದುಮಿಲ್ಲಂ. ಮೇಣ್ ನಿನ್ನತ್ತಣಿನಾವ ವರಮುಮಂ ಬಯಸುವುದುಮಿಲ್ಲಂ. ಎನ್ನೊಡೆಯನಲರ್ವೊಡೆಯನಲ್ಲದೆ ಬಿಡೌಜನಲ್ತು. ಇಂತೂರೆವೆನೆಂದು ಮುನಿಸುದಾಳದಿರ್ ಬೞಿದೆನ್ನ ತಪಸಿಗೆ ಬನ್ನ ಮೆಸಗದೆ ಎಹಗೆ ಬಂದ್ಯೆ ಅಹಗೆ ಪಿಂದಿರುಗ್ಯೆ."

೪

ಮುದ್ದಣನು ತನ್ನ ಅನುವಾದದಲ್ಲಿ ಮೂಲದಿಂದ ಕೆಲವು ಭಾಗಗಳನ್ನು ಬಿಟ್ಟು ಕೆಲವನ್ನು ಸಂಗ್ರಹಿಸಿ ಕೆಲವನ್ನು ಗ್ರಹಿಸಿ ಸುಂದರವಾದ ಒಂದು ವಚನ ಕಾವ್ಯವನ್ನು ಬರೆದಿಟ್ಟಿದ್ದಾನೆ ಎನ್ನುವುದನ್ನು ಮೇಲಿನ ಕೆಲವು ವಿವರಣೆಗಳಿಂದ ಅರಿತೆವಷ್ಟೆ. ಈ ವಚನಕಾವ್ಯ ಉತ್ತಮವಾದ ಕೆಲವು ಕಥೆಗಳನ್ನು ಒಳಗೊಂಡಿರುವುದರಿಂದ ಓದುವುದಕ್ಕೆ ತುಂಬ ಸೊಗಸಾಗಿದೆ. ಈ ಅಂಶವನ್ನು ಸ್ವಲ್ಪ ವಿವರವಾಗಿ ಇಲ್ಲಿ ಪರಿಶೀಲಿಸಬಹುದು. ಮುದ್ದಣನ ಅದ್ಭುತರಾಮಾಯಣವನ್ನು ಓದುತ್ತಿದ್ದರೆ ಆಧುನಿಕ ಸಣ್ಣ ಕಥೆಗಳನ್ನು ಓದುತ್ತಿರುವಂತೆ ನಮಗೆ ಭಾಸವಾಗುತ್ತದೆ. ಶ್ರೀಮತಿ ಪರಿಣಯದ ಕಥೆ, ಸಹಸ್ರ ವದನ ರಾವಣನ ವಧೆಯ ಕಥೆ ಇವು ಎರಡೂ ಇಲ್ಲಿ ತುಂಬ ಹೃದ್ಯವಾಗಿ ಬಂದಿವೆ. ಶ್ರೀಮತಿಯ ಕಥೆಯನ್ನು ಮೊದಲು ಪರಿಶೀಲಿಸೋಣ. ತ್ರಿಶಂಕು ಪದ್ಮಾವತಿಯರನ್ನು ಕುರಿತ ಒಂದೆರಡು ವಿವರವೂ ಅವರ ಮಗನಾಗಿ ಹುಟ್ಟಿದ ಅಂಬರೀಷ ಮಹಾರಾಜನ ವೃತ್ತಾಂತವೂ ಶ್ರೀಮತಿಯ ಪರಿಣಯವನ್ನು ಕುರಿತ ಕಥೆಗೆ ಹಿನ್ನೆಲೆಯಾಗಿ ಬರುತ್ತವೆ. ನಾರದ ಪರ್ವತರು ಶ್ರೀಮತಿಯನ್ನು ಮೋಹಿಸಿ ಒಬ್ಬರನ್ನೊಬ್ಬರು ಮೋಸಗೊಳಿಸಿ ಆಕೆಯನ್ನು ಪಡೆಯಬೇಕೆಂದು ಬಯಸಿ ಭಂಗಪಟ್ಟುದೂ ಶ್ರೀಮನ್ನಾರಾಯಣನು ಶ್ರೀಮತಿಯನ್ನು ವರಿಸಿದುದೂ ಮುಂದೆ ಸ್ವಾರಸ್ಯವಾಗಿ ಚಿತ್ರಿತವಾಗಿದೆ. ಇಲ್ಲಿ ಉದ್ದಕ್ಕೂ ಒಂದು ಹಾಸ್ಯದ ತೆಳ್ಳನೆಯ ತೆರೆ ಕಥೆಯ ಸುತ್ತ ಮೋಹಕಾರಕವಾಗಿ ಬಳಸಿಕೊಂಡು ಬರುವುದಂತೂ ಅತ್ಯಂತ ರಮಣೀಯವಾಗಿದೆ.

ಹೀಗೆಯೆ, ಲಕ್ಷ್ಮಿ ನಾರದರಿಂದ ಶಪ್ತಳಾಗಿ ಮಂಡೋದರಿಯ ಮಗಳಾಗಿ ಹುಟ್ಟುವ ಕಥೆ ಕೂಡ ಸೊಗಸಾಗಿ ಬರುತ್ತದೆ. ವಿಷ್ಣುಭಕ್ತರಾದ ಕೌಶಿಕ ಪದ್ಮಾಕ್ಷಮಾಲತಿಯರ ವೈಕುಂಠಗಮನ ವೃತ್ತಾಂತವೂ ಕೌಶಿಕನ ಸಂತೋಷಾರ್ಥವಾಗಿ ವೈಕುಂಠದಲ್ಲಿ ನಡೆದ ತುಂಬರನ ಸಂಗೀತ ಕಛೇರಿಯ ವೃತ್ತಾಂತವೂ ಆ ಕಛೇರಿಗೆ ಪ್ರವೇಶ ದೊರೆಯದೆ ಹೊರಬಾಗಿಲಿನಲ್ಲಿಯೇ ನಿಲ್ಲಬೇಕಾಗಿ ಬಂದ ನಾರದನ ಪ್ರಸಂಗವೂ ಪರಿಣಾಮವಾಗಿ ಲಕ್ಷ್ಮಿಗೆ ನಾರದನು ಶಾಪವಿತ್ತದ್ದೂ ರಾವಣನು, ಗೃತ್ಸಮದ ಋಷಿಯ ಹೊಂಗಳಸದಲ್ಲಿ ಋಷಿಗಳ ರಕ್ತವನ್ನು ಶೇಖರಿಸಿ ತಂದಿಟ್ಟದ್ದನ್ನು ಮಂಡೋದರಿ ಕುಡಿದದ್ದೂ ಅದರಿಂದಾಗಿ ಅವಳ ಬಸುರಿನಲ್ಲಿ ಲಕ್ಷ್ಮಿ ಸೀತೆಯಾಗಿ ಒಗೆದದ್ದೂ ಬಹಳ ಸ್ವಾರಸ್ಯವಾಗಿ ಚಿತ್ರಿತವಾಗಿದೆ.

ಈ ನಡುವೆ ಗಾನಬಂಧುವಾದ ಉಲೂಕರಾಯನಲ್ಲಿ ನಾರದನು ಸಂಗೀತ ವಿದ್ಯೆಯನ್ನು ಕಲಿಯುವುದೂ ಉಲೂಕರಾಯನು ತನ್ನ ಪೂರ್ವ ವೃತ್ತಾಂತವನ್ನು ಹೇಳುವುದೂ ನಾರದನು ಗಾನವಿದ್ಯಾಪಾರಂಗತನಾದೆನೆಂದು ವಿಜೃಂಭಿಸುವುದೂ ಅವನಿಗೆ ಆಗಾಗ ಅಹಂಕಾರದ ಖಂಡನವಾಗುವುದೂ ಕೊನೆಗೆ ಮಹಾವಿಷ್ಣು ಕೃಷ್ಣಾವತಾರವನ್ನೆತ್ತಿದಾಗ ಆತನ ಪತ್ನಿಯರಾದ ಜಾಂಬವತಿ ಸತ್ಯಭಾಮೆ ರುಕ್ಮಿಣಿಯರಿಂದ ಸಂಗೀತವನ್ನು ಕಲಿತರೂ ವಿದ್ಯೆ ಕರಗತವಾಗದೆ ಹೋಗುವುದೂ ಸ್ವಯಂ ಕೃಷ್ಣನೇ ಆಚಾರ್ಯನಾಗಿ ಬೋಧಿಸಿದಾಗ ಮಾತ್ರ ಗಾನಯೋಗ ನಾರದನಿಗೆ ಸಿದ್ಧಿಸಿ ಆನಂದಾಬ್ಧಿಯಲ್ಲಿ ಆತನು ಅದ್ದುವುದೂ ಎಂತಹ ಹೃದ್ಯವಾದ ಕತೆ ! ಹೀಗೆ, ಮೊದಲಿನ ಎಂಟು ಆಶ್ವಾಸಗಳಲ್ಲಿ 'ಅದ್ಭುತ ರಾಮಾಯಣ'ಕ್ಕೆ ಹಿನ್ನೆಲೆಯಾಗಿ ಸೀತಾರಾಮರ ಜನನದ ವೃತ್ತಾಂತವನ್ನೂ ಆ ಕಾರಣವನ್ನೂ ಕುರಿತ ಕಥೆಗಳು ಬಂದಿವೆ. ಕೊನೆಯ ಎಂಟು ಆಶ್ವಾಸಗಳಲ್ಲಿ 'ಅದ್ಭುತರಾಮಾಯಣ'ಕ್ಕೆ ಸಂಬಂಧಿಸಿದ ಕಥೆ ಬರುತ್ತದೆ. ಅಲ್ಲಿ ಒಂಬತ್ತನೆಯ ಆಶ್ವಾಸದಲ್ಲಿ ಭಾರ್ಗವರಾಮನ ಗರ್ವಭಂಗದ ಕಥೆಯೂ ಹತ್ತರಲ್ಲಿ ಸೀತಾರಾಮಲಕ್ಷ್ಮಣರ ವನವಾಸದ ಚಿತ್ರ, ರಾವಣನಿಂದ ಸೀತಾಪಹರಣ, ರಾಮಲಕ್ಷ್ಮಣರ ದುಃಖ, ರಾಮಾಂಜನೇಯರ ಸಂದರ್ಶನ, ರಾಮನು ಹನುಮಂತನಿಗೆ ತೋರಿಸಿದ ವಿಶ್ವರೂಪ ಮುಂತಾದವುಗಳನ್ನು ಕುರಿತ ಕಥೆಗಳೂ ಇವೆ. ಹನ್ನೊಂದರಲ್ಲಿ ದಶಕಂಠ ರಾವಣನನ್ನು ಕೊಂದು ಸೀತೆಯೊಡನೆ ರಾಮನು ಅಯೋಧ್ಯೆಗೆ ಹಿಂದಿರುಗಿದ ಕಥೆ ಬರುತ್ತದೆ. ಇನ್ನು ಮುಂದಿನ ವೃತ್ತಾಂತವೇ ಸೀತಾಮಾಹಾತ್ಮ್ಯವನ್ನು ಸಾರುವ ಅದ್ಭುತರಾಮಾಯಣ ! ಸಹಸ್ರವದನನಾದ ರಾವಣನ ವಧೆಯ ಕಟ್ಟಚ್ಚರಿಯ ಕಥೆ ! ಇಲ್ಲಿ ಸೀತೆ ಚಿಕ್ಕಂದಿನಲ್ಲಿ ತಂದೆಯ ಮನೆಯಲ್ಲಿ ಅತಿಥಿಯಾಗಿ ಬಂದ ಒಬ್ಬ ಬ್ರಾಹ್ಮಣನಿಂದ ಕೇಳಿದ ಸಹಸ್ರಕಂಠ ರಾವಣ ವೃತ್ತಾಂತವನ್ನು ಋಷಿವರೇಣ್ಯರಿಂದ ಕೂಡಿದ ರಾಮಸಭೆಯಲ್ಲಿ ವಿವರಿಸುತ್ತಾಳೆ. ಅಂತಹ ರಾವಣನನ್ನು ಸಂಹರಿಸುವುದಕ್ಕಾಗಿ ರಾಮನು ಸಪರಿವಾರನಾಗಿ ಸೇನಾಸಮೇತ ಮಾನಸೋತ್ತರ ಪರ್ವತದ ಸಮೀಪಕ್ಕೆ ಹೊರಡುತ್ತಾನೆ ರಾಮಸೇನೆಗೂ ರಾವಣಸೇನೆಗೂ ಯುದ್ಧ

ನಡೆಯುತ್ತದೆ. ಕೊನೆಗೆ ರಾಮನ ಕಡೆಯ ಕಪಿಸೈನ್ಯದಿಂದ ರಾವಣನ ರಾಕ್ಷಸ ಸೈನ್ಯ ಹತವಾಗುತ್ತದೆ. ಸಹಸ್ರಕಂಠ ರಾವಣನೇ ವೀರಾವೇಶದಿಂದ ಯುದ್ಧಕ್ಕೆ ಬರುತ್ತಾನೆ. ವಾಯುವ್ಯಾಸ್ತ್ರವನ್ನು ಪ್ರಯೋಗಿಸಿ ಆತ ಕಪಿಸೈನ್ಯವನ್ನೂ ಭರತ ಶತ್ರುಘ್ನ ಲಕ್ಷ್ಮಣಾದಿಗಳನ್ನೂ ಅವರವರ ಊರುಗಳಿಗೆ ಸೇರಿಸಿಬಿಡುತ್ತಾನೆ. ಯುದ್ಧಭೂಮಿಯಲ್ಲಿ ಸೀತಾರಾಮರಿಬ್ಬರೇ ಉಳಿದುಕೊಳ್ಳುತ್ತಾರೆ. ರಾಮನು ಅಗಸ್ತ್ಯನು ಕೊಟ್ಟ ಒಂದು ಬಾಣವನ್ನು ತೆಗೆದು ರಾವಣನಿಗೆ ಹೊಡೆಯುತ್ತಾನೆ. ರಾವಣನು ಆ ಬಾಣವನ್ನು ಮುರಿದು, ಮರುಗಣೆಯಿಂದ ರಾಮನನ್ನು ಮೂರ್ಛೆಗೊಳಿಸುತ್ತಾನೆ. ಆಕಾಶದಲ್ಲಿ ನೆರೆದ ಮುನಿಗಳೂ ದೇವತೆಗಳೂ ಸೀತೆಯನ್ನು ಪ್ರಾರ್ಥಿಸುತ್ತಾರೆ. ಆಗ ಆಕೆ ಕಾಳಿಯ ಅವತಾರವನ್ನು ತಾಳಿ ರಾವಣನನ್ನು ಸಂಹರಿಸುತ್ತಾಳೆ. ಬ್ರಹ್ಮನು ರಾಮನನ್ನು ಮೂರ್ಛೆಯಿಂದೆಬ್ಬಿಸುತ್ತಾನೆ. ರಾಮನು ಸೀತೆಯುತ್ತ ದಿವ್ಯದೃಷ್ಟಿಯಿಂದ ಬ್ರಹ್ಮಾಂಡವನ್ನಾವರಿಸಿರುವ ಆ ಮಹಾದೇವಿಯ ಮಹಿಮೆಯನ್ನು ಕಂಡು ಭಕ್ತಿಯಿಂದ ಸ್ತೋತ್ರ ಮಾಡುತ್ತಾನೆ. ಬಳಿಕ ಸೀತೆ ಹಿಂದಿನ ಲೋಕೋತ್ತರ ಸೌಂದರ್ಯವನ್ನು ತಾಳಿದ ಮೇಲೆ ಶ್ರೀರಾಮನು ಅವಳೊಡನೆ ಅಯೋಧ್ಯೆಗೆ ಹಿಂದಿರುಗುತ್ತಾನೆ. ಹೀಗೆ ಕೊನೆಯ ನಾಲ್ಕು ಆಶ್ವಾಸಗಳಲ್ಲಿ 'ಅದ್ಭುತ ರಾಮಾಯಣ'ದ ಕಥೆ ಬೆಳೆದಿದೆ. ಇದರ ವಿವರಗಳನ್ನು ನೆನೆವಾಗ ಮುದ್ದಣನ ಕಥಾ ಸಂವಿಧಾನದ ಕೌಶಲವನ್ನು ನೋಡಿ ಆಶ್ಚರ್ಯವಾಗುತ್ತದೆ. ಆಧುನಿಕ ಸಣ್ಣ ಕಥೆಗಳಲ್ಲಿರುವ ಸಂವಿಧಾನದ ಅಚ್ಚುಕಟ್ಟೂ ಸಂಭಾಷಣೆಯ ಸ್ವಾರಸ್ಯವೂ ವರ್ಣನೆಯ ಔಚಿತ್ಯವರಿತ ಮಿತಿಯೂ ತಿಳಿಯಾಗಿಯೂ ಶಿಷ್ಟ ಜನಸಮ್ಮತವಾಗಿಯೂ ಬರುವ ಹಾಸ್ಯವೂ 'ಅದ್ಭುತ ರಾಮಾಯಣ'ದಲ್ಲಿ ಕಾಣಬರುತ್ತವೆ. ಈ ಕಾರಣದಿಂದಲೇ ಅದ್ಭುತ ರಾಮಾಯಣವನ್ನು ಓದುತ್ತಿದ್ದರೆ ಆಧುನಿಕ ಸಣ್ಣ ಕಥೆಯನ್ನು ಓದಿದಂತೆ ಭಾಸವಾಗುತ್ತದೆ ಎಂದು ಮೇಲೆ ಹೇಳಿರುವುದು.

'ಅದ್ಭುತರಾಮಾಯಣ'ದ ಹದಿನಾರು ಆಶ್ವಾಸಗಳಲ್ಲಿ ಮೊದಲಿನ ಎಂಟು ಆಶ್ವಾಸಗಳು ಸೀತಾರಾಮರ ಜನ್ಮ ವೃತ್ತಾಂತವನ್ನು ತಿಳಿಸತಕ್ಕವುಗಳಾಗಿವೆ. ಕೊನೆಯ ಎಂಟು ಅದ್ಭುತರಾಮಾಯಣಕ್ಕೆ ಸಂಬಂಧಪಟ್ಟವುಗಳಾಗಿವೆ. ಮೊದಲಿನ ಎಂಟರಲ್ಲಿಯೂ ಎರಡು, ಮೂರು, ನಾಲ್ಕನೆಯ ಆಶ್ವಾಸಗಳು ಶ್ರೀಮತಿ ಪರಿಣಯದ ಕಥೆಗೆ ಸಂಬಂಧಪಟ್ಟವಾಗಿವೆ. ಕೌಶಿಕ ಪದ್ಮಾಕ್ಷ ಮಾಲನ-ಮಾಲತಿಯರ ಕಥೆ ಐದನೆಯ ಆಶ್ವಾಸದಲ್ಲಿ ಬಂದಿದೆ. ಕೌಶಿಕನ ಸನ್ಮಾನ, ತುಂಬುರನ ಗಾನ, ಲಕ್ಷ್ಮಿಯ ಪಡಿಯರತಿಯರಿಂದ ನಾರದನಿಗೆ ಆದ ಅವಮಾನ, ನಾರದ ಲಕ್ಷ್ಮಿಯನ್ನು ಶಪಿಸಿದ್ದು, ಉಲೂಕರಾಯನ ಪೂರ್ವ ವೃತ್ತಾಂತ, ಹರಿಮಿತ್ರೋಪಾಖ್ಯಾನ ಇವು ಆರನೆಯ ಆಶ್ವಾಸದ ವಿಷಯ. ಏಳನೆಯ ಆಶ್ವಾಸದಲ್ಲಿ ನಾರದನ ಗಾನಯೋಗ ಪ್ರಾಪ್ತಿಯ ಕಥೆ ಬರುತ್ತದೆ. ಒಂದು ದೃಷ್ಟಿಯಿಂದ ಈ ವೃತ್ತಾಂತ ಅಡ್ಡ ಕಥೆಯಾಗುತ್ತದೆ. ಸುಮಾರು ಒಂದೂವರೆ ಆಶ್ವಾಸ ಮೂಲ ಕಥೆಯ ಓಟಕ್ಕೆ ಎಂದರೆ ಸೀತಾರಾಮರ ಜನ್ಮವೃತ್ತಾಂತದ ನೇರವಾದ ನಿರೂಪಣಕ್ಕೆ ಅಡ್ಡಗಾಲು ಕೊಡುತ್ತದೆ. ರಾಮಲೀಲಾ

ವಿನೋದದ ದೃಷ್ಟಿಯಿಂದಲೂ ಹಳೆಯ ಕೂರ್ಮೆಗಡಲು ಒಡೆದು ಒರ್ಮೆಯೆ ಮೇಲ್ವಾಯ್ದರೆ ಸರ್ವವೂ ಸಮನಿಸುತ್ತದೆ ಎನ್ನುವ ತತ್ವದ ದೃಷ್ಟಿಯಿಂದಲೂ ಈ ಭಾಗಗಳ ಔಚಿತ್ಯವನ್ನು ಸ್ವಲ್ಪ ಮಟ್ಟಿಗೆ ಸಾಧಿಸಬಹುದು.

ನಾರದನ ಶಾಪದಿಂದ ಮಹಾಲಕ್ಷ್ಮಿ ಮುನಿಗಳ ರಕ್ತವನ್ನು ಕುಡಿದ ಮಂಡೋದರಿಯ ಬಸುರಿನಲ್ಲಿ ಪೆಣ್ಗೂಸಾಗಿ ಜನಿಸಿದ ವೃತ್ತಾಂತವೂ ಆ ಕೂಸನ್ನು ಆಕೆ ಪೆಟ್ಟಿಗೆಯಲ್ಲಿಟ್ಟು ಕುರುಕ್ಷೇತ್ರದ ನೆಲದಲ್ಲಿ ಬೈತಿಟ್ಟ ವೃತ್ತಾಂತವೂ ಮುಂದೆ ಜನಕಮಹಾರಾಜನಿಗೆ ಆ ಕೂಸು ದೊರೆತ ವೃತ್ತಾಂತವೂ ಎಂಟನೆಯ ಆಶ್ವಾಸದಲ್ಲಿ ಬಂದಿವೆ. ಸೀತಾದೇವಿ ಮಹಾಕಾಳಿಯಾಗಿ ರಾಮನಿಂದಲೂ ಕೊಲ್ಲಲಾಗದ ಸಹಸ್ರಕಂಠ ರಾವಣನನ್ನು ಕೊಂದ ವೃತ್ತಾಂತ ಎಷ್ಟರ ಮಟ್ಟಿಗೆ ಅದ್ಭುತವಾಗಿದೆಯೋ ಸೀತಾರಾಮರ್ಕಳ ಜನ್ಮ ವೃತ್ತಾಂತವೂ ಅಷ್ಟರಮಟ್ಟಿಗೆ ಅದ್ಭುತವಾಗಿದೆ ಎಂದು ಹೇಳುವುದೇ ಕವಿಯ ಉದ್ದೇಶ. ಈ ಉದ್ದೇಶವನ್ನು ನೆನೆದಾಗ, ಕಥೆಯನ್ನು ಎಂಟೆಂಟು ಆಶ್ವಾಸಗಳ ಎರಡು ಭಾಗಗಳಾಗಿ ಒಡೆದುಕೊಂಡಿರುವುದರಲ್ಲಿ ಕಾಣಬರುವ ಕವಿಯ ಸಂವಿಧಾನ ಚಾತುರ್ಯವು ಎಷ್ಟು ಸೊಗಸಾದುದು ಎಂಬುದು ನಮಗೆ ಮನವರಿಕೆಯಾಗದಿರದು.

೫

ಆಶ್ವಾಸ ಆಶ್ವಾಸದಲ್ಲಿಯೂ ಬರುವ ಕಥೆಯ ವಿವರವನ್ನು ನೆನೆದು ಬಳಿಕ ಈ ಕಥೆಯ ಮೈಯಲ್ಲಿ ಆಭರಣದಂತೆ ತೊಳಗುವ ಕಾವ್ಯ ಯೋಗ್ಯವಾದ ವರ್ಣನೆಯ ಅಂಶಗಳನ್ನು ಕುರಿತು ಕೆಲವು ವಿಷಯಗಳನ್ನು ಇಲ್ಲಿ ಸೂಚಿಸಬಹುದು.

ಕಾವ್ಯದ ಪ್ರಾರಂಭದಲ್ಲಿಯೇ ಬರುವ ತಮಸಾ ನದೀ ತೀರದ ವಾಲ್ಮೀಕಿ ಮಹರ್ಷಿಗಳ ಪುಣ್ಯಾಶ್ರಮದ ವರ್ಣನೆ ಮನೋಜ್ಞವಾಗಿದೆ. ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಬರುವ ಅತಿಶಯೋಕ್ತಿ ಉತ್ಪ್ರೇಕ್ಷೆ ಮುಂತಾದ ಅಲಂಕಾರಗಳಿಂದ ಋಷ್ಯಾಶ್ರಮವನ್ನು ವರ್ಣಿಸದೆ ಆಶ್ರಮದ ಶಾಂತವೂ ರಮಣೀಯವೂ ಪಾವನವೂ ಆದ ಒಂದು ಚಿತ್ರವನ್ನು ಮುದ್ದಣ ಇಲ್ಲಿ ಕೊಟ್ಟಿದ್ದಾನೆ. ಮೂಲ ರಾಮಾಯಣದಲ್ಲಿ ಈ ಆಶ್ರಮದ ವರ್ಣನೆ ಇಲ್ಲ. ಮುದ್ದಣ ಪುರಾಣವನ್ನು ಕಾವ್ಯವಾಗಿ ತಿರುಗಿಸಿಕೊಂಡಿರುವುದರಿಂದ ತನ್ನ ಕಲ್ಪನಾ ಸಾಮರ್ಥ್ಯದಿಂದ ಈ ಆಶ್ರಮದ ವಾಸ್ತವ ಚಿತ್ರವೊಂದನ್ನು ಕಥೆಯ ಮೊದಲಲ್ಲಿ ಕೊಟ್ಟಿದ್ದಾನೆ. ಚಿತ್ರ ವಾಸ್ತವವಾಗಿರುವುದರ ಜೊತೆಗೆ ಮಿತವಾಗಿಯೂ ಹಿತವಾಗಿಯೂ ಬಂದಿರುವುದರಿಂದ, ಅದರ ಸೊಗಸು ಇಮ್ಮಡಿಯಾಗಿದೆ. ಈಗಿನ ಸಣ್ಣಕಥೆಗಾರರ ಬರವಣಿಗೆಯಲ್ಲಿ ಪ್ರಕೃತಿ ವರ್ಣನೆ ಹೇಗೆ ಸಂದರ್ಭಕ್ಕೆ ತಕ್ಕಂತೆ ಸ್ವಾರಸ್ಯವಾಗಿಯೂ ಸಂಗ್ರಹವಾಗಿಯೂ ಬರುತ್ತದೆಯೋ ಹಾಗೆ ಮುದ್ದಣನಲ್ಲಿ ಈ ವರ್ಣನೆ ಬರುತ್ತದೆ. ಮೊದಲನೆಯ ವಾಕ್ಯವೃಂದದಲ್ಲಿ ಆಶ್ರಮದ ಪ್ರಕೃತಿ ಸೌಂದರ್ಯದ ಚಿತ್ರವನ್ನು ಕೊಟ್ಟು ಎರಡನೆಯದರಲ್ಲಿ ಜನಿವಾರವನ್ನು

ಹೊಸೆಯುವುದು, ವೇದವಾಕ್ಯಗಳ ಅರ್ಥವನ್ನು ಚರ್ಚಿಸುವುದು, ಫಲಸಮಿತ್ಕುಶಗಳನ್ನು ಕೊಯ್ಯುವುದು, ನಾರುಮಡಿಯನ್ನು ನೀರಿನಲ್ಲಿ ಒಗೆಯುವುದು, ಜಪಸರವನ್ನು ಓಡಿದು ರಾಮನಾಮವನ್ನು ಎಣ್ಣುವುದು, ಪತಿವ್ರತೆಯರ ಪುಣ್ಯ ಕಥೆಗಳನ್ನು ಕೇಳುವುದು, ಹೂಪಿನಗಿಡಗಳ ಪಾತಿಗಳಿಗೆ ನೀರೆರೆಯುವುದು ಮುಂತಾದ ಆಶ್ರಮ ಜೀವನದ ದಿನನಿತ್ಯದ ಕಾರ್ಯಕಲಾಪಗಳಲ್ಲಿ ಭಾಗಿಯಾದ ಆಶ್ರಮ ವಾಸಿಗಳ ಜೀವನ ಚಿತ್ರವನ್ನು ಕೊಟ್ಟಿದ್ದಾನೆ.

ಮುಂದೆ ಅಂಬರೀಷರಾಯನ ಮಗಳಾದ ಶ್ರೀಮತಿಯ ಸೌಂದರ್ಯವನ್ನು ಕುರಿತ ಒಂದು ವರ್ಣನೆಯನ್ನು ಮುದ್ದಣ ಮೂರನೆಯ ಆಶ್ವಾಸದಲ್ಲಿ ಕೊಡುತ್ತಾನೆ. ನಾರದ ಪರ್ವತರಂತಹ ಋಷಿವರೇಣ್ಯರ ಮೋಹಕ್ಕೆ ಕಾರಣಳಾದ ಶ್ರೀಮತಿಯನ್ನು ಮುದ್ದಣ ಇಲ್ಲಿ ವರ್ಣಿಸಿದ್ದಾನೆ. ಮೂಲ ರಾಮಾಯಣದಲ್ಲಿ ಕಮಲಲೋಚನೆ ಸರ್ವಲಕ್ಷಣಶೋಭಿತೆ, ಸುರಸುತೋಪಮೆ ಎಂಬ ಇವಿಷ್ಟೇ ವಿಶೇಷಣಗಳಿಂದ ಶ್ರೀಮತಿಯ ವರ್ಣನೆ ಬಂದಿದ್ದರೆ ಮುದ್ದಣ ತನ್ನ ಕಾವ್ಯದಲ್ಲಿ ಸ್ತ್ರೀಸೌಂದರ್ಯದ ಸಮಗ್ರ ಚಿತ್ರವೊಂದನ್ನು ಕೊಟ್ಟಿದ್ದಾನೆ. ಆಧುನಿಕರ ದೃಷ್ಟಿಯಿಂದ ಈ ವರ್ಣನೆ ಅಷ್ಟೊಂದು ಕಲಾಪೂರ್ಣವಾಗಿ ತೋರದಿದ್ದರೂ ಸಂಪ್ರದಾಯ ಬುದ್ಧಿಯ ಲಾಕ್ಷಣಿಕರ ದೃಷ್ಟಿಯಲ್ಲಿ ಈ ವರ್ಣನೆಗೆ ಬೆಲೆಯಿದೆ. ಮುಖ್ಯವಾಗಿ ಪ್ರಥಮ ದರ್ಶನಾವಸರದಲ್ಲಿಯೇ ನಾರದ ಪರ್ವತರಂತಹ ಮಹಾಮಹಿಮರ ಮನಸ್ಸನ್ನು ಕೂಡ ಕಲಕಿ ಸೂರೆಗೊಳ್ಳುವ ಸೌಂದರ್ಯಾತಿಶಯ ಶ್ರೀಮತಿಯಲ್ಲಿತ್ತೆಂದು ಹೇಳುವುದೇ ಈ ಕವಿಯ ಆಶಯ. ಆ ರೂಪರಾಶಿಯನ್ನು ನೋಡಿ ಆ ಋಷಿವರೇಣ್ಯರು ಹೇಗೆ ಬೆರಗಾದರೆಂಬುದನ್ನು ಸೂಚಿಸುವುದೇ ಕವಿಯ ಉದ್ದೇಶ. ಈ ಉದ್ದೇಶ ಆಶಯಗಳಿಗೆ ಇಂತಹ ವರ್ಣನೆ ಪುಷ್ಟಿಯನ್ನು ಕೊಡುತ್ತದೆ. ಶ್ರೀಮತಿಯ ಮುಂಗುರುಳು, ಜಡೆ, ಮುಖ, ಹುಬ್ಬು, ಕಣ್ಣು, ಮೂಗು, ತುಟಿ, ಹಲ್ಲು, ಕೆನ್ನೆ, ನಗೆ, ಕೊರಲು, ತೋಳು, ಮುಂಗೈ, ಉಗುರು, ನಡು, ನಿತಂಬ, ಅಡಿ – ಇವು ಒಂದರಮೇಲೊಂದು ಆಶ್ಚರ್ಯವನ್ನು ಹುಟ್ಟಿಸುತ್ತವೆ ಎಂದು ನಾರದ ಪರ್ವತರಿಬ್ಬರೂ ಶ್ರೀಮತಿಯನ್ನು ನೋಡಿದೊಡನೆಯೇ ತಮ್ಮತಮ್ಮಲ್ಲಿಯೇ ಆಲೋಚಿಸಿದಂತೆ ! ಹೀಗೆ ಈ ಋಷಿಗಳ ಮನಸ್ಸಿನ ಮೇಲೆ ಆ ಸೌಂದರ್ಯವು ಮೂಡಿಸಿದ ಪರಿಣಾಮವನ್ನು ಹೇಳುವ ವೇಳೆಯಲ್ಲಿ ಮುದ್ದಣ ಶ್ರೀಮತಿಯ ರೂಪವನ್ನು ಮುಡಿಯಿಂದ ಅಡಿಯವರೆಗೆ ವರ್ಣಿಸಿರುವುದರಲ್ಲಿ ಒಂದು ರೀತಿಯ ಔಚಿತ್ಯವನ್ನು ಸಾಧಿಸಿರಬಹುದು.

ಮುಂದೆ ಸೀತಾ ರಾಮ ಲಕ್ಷ್ಮಣರ ವನವಾಸದ ಸಂದರ್ಭದಲ್ಲಿ ಬರುವ ಚಿತ್ರವೂ ಕಾವ್ಯಯೋಗ್ಯವಾದ ವರ್ಣನೆಗಳಿಂದ ರಮಣೀಯವಾಗಿದೆ. ಈ ಭಾಗವೂ ಕೂಡ ಮೂಲ ರಾಮಾಯಣದಲ್ಲಿ ಕಾಣಬರುವುದಿಲ್ಲ. ಗೋದಾವರೀ ತೀರದಲ್ಲಿ ಪರ್ಣಕುಟಿಯನ್ನು ಕಟ್ಟಿಕೊಂಡು ಕಾಡನ್ನೇ ನಾಡನ್ನಾಗಿಯೂ ಎಲೆ ಮನೆಯನ್ನೇ ಅರಮನೆಯನ್ನಾಗಿಯೂ ಭಾವಿಸಿಕೊಂಡು ರಾಮನು ಸಂತೋಷದಿಂದ ಇದ್ದನಂತೆ, ಲಕ್ಷ್ಮಣನು ಅಣ್ಣನನ್ನು ಅಯ್ಯನಂತೆ, ಸೀತೆಯನ್ನು ಮಾತೆಯಂತೆ ಭಾವಿಸಿ

ಸೇವಿಸುತ್ತಿದ್ದನಂತೆ. ಸೀತೆಯೂ ಪತಿಯೇ ಗತಿಯೆಂದು ರಾಮನನ್ನು ಪೂಜಿಸುತ್ತಿದ್ದಳಂತೆ. ಮುಂದಿನ ಮಾತುಗಳನ್ನು ಕವಿಯು ಹೇಳಿದ ಹಾಗೆ ಹೇಳಿದರೇ ಸೊಗಸು.

'ಇಹಗಿಹಗೆ ರಾಘವಂಗೆ ಸೀತೆಯೊಳ್ ಪ್ರೀತಿಯುಂ ಲಕ್ಷ್ಮಣನೊಳ್ ಕಾರುಣ್ಯಮುಂ, ಸೀತೆಗೆ ಪತಿಯೊಳ್ ಭಕ್ತಿಯುಂ ಮೈದುನನೊಳ್ ದಯೆಯುಂ ಲಕ್ಷ್ಮಣಂಗೆ ಅಣ್ಣನೊಳ್ ವಿಶ್ವಾಸಮುಂ ಅತ್ತಿಗೆಯೊಳ್ ವಿನಯಮುಂ ಅನ್ಯೋನ್ಯಮಾಗಿರ್ದುವು. ರಾಘವನೋರೊರ್ಮೆ ಮಡದಿಗೆ ವನದಿರವಂ ಬಿತ್ತರಿಪಂ; ಕಣ್ಣೆದಿರೊಳ್ ಬರ್ಪ ಬಗೆಬಗೆಯ ಮಿಗಗಳಂ ಬಣ್ಣಿಪಂ ; ಪಲವಣ್ಣದ ಪಕ್ಕಿಗಳಂ ತೋಜೆಪಂ; ಪೂವಳ್ಳಿಗಳ ಪೆಸರನೊರೆವಂ, ಸೀತೆ ಪತಿ ಬೇಂಟೆಯಾಡಿ ಬರೆ ಕೆಯ್ಯ ಬಿಲ್ಲಂ ಕೊಂಡಿಟ್ಟು, ಅಸನಮನಿತ್ತುಪಚರಿಸುವಳ್; ಮೇಣ್ ಲಕ್ಷ್ಮಣಂ ಪಣ್ಗಳಂ ತಿಜೆತಂದು, ಇರ್ವರ್ಗುಮರ್ಪಿಸಿ, ತಾನಿರುಳೊಳವರ್ಗೆ ಕಾವಲಾಗಿರ್ಪಂ.'

ಪುಟ್ಟ ಪುಟ್ಟ ವಾಕ್ಯಗಳಲ್ಲಿ ಭಾವಪೂರ್ಣವಾದ ಸನ್ನಿವೇಶಗಳನ್ನು ಮುದ್ದಣ ಹೇಗೆ ಚಿತ್ರಿಸಬಲ್ಲನೆಂಬುದಕ್ಕೆ ಮೇಲಿನ ವರ್ಣನೆ ಒಂದು ನಿದರ್ಶನ. ಕಾಡಿನಲ್ಲಿದ್ದಾಗ ಸೀತೆ ರಾಮ ಲಕ್ಷ್ಮಣ ಇವರುಗಳ ಮನಸ್ಸು ಹೇಗಿತ್ತೆಂಬುದನ್ನು ಮೊದಲು ಹೇಳುತ್ತಾನೆ. ಆ ಬಳಿಕ ಅವರ ದಿನಚರಿಯ ಕಾರ್ಯಗಳನ್ನು ತಿಳಿಸುತ್ತಾನೆ. ರಾಮ ಬೇಟೆಯಾಡಿ ಬರುತ್ತಾನೆ. ಸೀತೆ ಅವನ ಕೈಯ ಬಿಲ್ಲನ್ನು ತೆಗೆದುಕೊಂಡಿರಿಸಿ ಅವನಿಗೆ ಆಸನವನ್ನು ಕೊಟ್ಟು ಉಪಚರಿಸುತ್ತಾಳೆ. ಲಕ್ಷ್ಮಣನು ಹಣ್ಣುಗಳನ್ನು ತಂದು ಇಬ್ಬರಿಗೂ ಕೊಡುತ್ತಾನೆ, ರಾತ್ರಿ ಹೊತ್ತು ಇಬ್ಬರಿಗೂ ಕಾವಲಾಗಿರುತ್ತಾನೆ. ಚಲನಚಿತ್ರವನ್ನು ನೋಡುವಾಗ ಎದುರಿಗೆ ಸುಳಿಯುವ ಚಿತ್ರದಂತೆ, ಈ ವಾಕ್ಯ ಸೀತಾರಾಮರನ್ನು ನಮ್ಮ ಕಣ್ಣಮುಂದೆ ಸುಳಿಸುತ್ತದೆ.

ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದಮೇಲೆ ರಾಮನ ದುಃಖಾತಿಶಯವನ್ನು ಕವಿ ಹೀಗೆಯೇ ಸ್ವಾರಸ್ಯವಾಗಿ ವರ್ಣಿಸಿದ್ದಾನೆ. ವನವೆಲ್ಲವನ್ನೂ ಸೀತೆಯೆಂದೇ ಭಾವಿಸಿ ಹೂಗೊಂಚಲನ್ನೂ, ಬಳ್ಳಿಯನ್ನೂ, ಹಣ್ಣನ್ನೂ ಎಣ್ಣದೆ ಹಿಡಿಯುತ್ತಾನೆ ಅಪ್ಪುತ್ತಾನೆ ಮುದ್ದಿಸುತ್ತಾನೆ. ಈ ತನ್ನ ಮರುಳೂ ತನಗೆ ಗೋಚರವಾದಾಗ ನಾಚಿಕೊಳ್ಳುತ್ತಾನೆ. ಯಾವ ರೀತಿಯಲ್ಲಿಯೂ ಸೀತೆಯ ಸುಳಿವು ಕಾಣದಿದ್ದಾಗ ಎದೆಗುಂದಿ ಹೆಣ್ಣನ್ನೂ ಹೆಣ್ಣಿನ ಗುಣವನ್ನೂ ನೆನೆನೆನೆದು ಬಾಯ್ಬಿಟ್ಟು ಅಳುತ್ತಾನೆ. ಇದು ಮುದ್ದಣನ ರಾಮ ತನ್ನ ಸೀತೆಯನ್ನು ರಾವಣನು ಕದ್ದುಕೊಂಡು ಹೋದಾಗ ನೊಂದುಕೊಳ್ಳುವ ಎದೆಗುದಿಯ ಚಿತ್ರ.

ಇದೇ ರೀತಿಯಲ್ಲಿ ಮುಂದಿನ ಕಥೆಯಲ್ಲಿ ಸಹಸ್ರಕಂಠ ರಾವಣನ ಪರಾಕ್ರಮವನ್ನು ವರ್ಣಿಸುವಲ್ಲಿಯೂ ಮೂಲದಲ್ಲಿ ಕಾಣದ ಸೊಗಸು ಕಾಣಬರುತ್ತದೆ. ಸಹಸ್ರ ಕಂಧರನ ಕಥೆಯನ್ನು ಕೇಳಿದ ರಾಮನು ಕೋಪಾರೂಢನಾಗಿ ಸಿಂಹನಾದವನ್ನು ಮಾಡುವ ಸಂದರ್ಭದಲ್ಲಿ ಆ ವೀರ ರಘುಪುಂಗವನ

ಮುಖಚರ್ಯೆಯನ್ನು ಮೂಲದಲ್ಲಿ ಇಲ್ಲದ ಒಂದು ಸೊಗಸಿನಿಂದ ವರ್ಣಿಸಿದ್ದಾನೆ. ಯುದ್ಧ ವರ್ಣನೆಯಲ್ಲಿ ಅಲ್ಲಲ್ಲಿ ಬರುವ ಒಂದೊಂದು ವಾಕ್ಯವೂ ನಮಗೆ ಚಿತ್ರವನ್ನು ಕಣ್ಣಿಗೆ ಕಟ್ಟುತ್ತದೆ. ಉದಾಹರಣೆಗೆ, 'ತಮ್ಮ ರಕ್ಕಸವಡೆ ಪಿಂಜರಿದುದೆಂಬ ಕಿನಿಸಿಂ ಪೆದೆಯಂ ಬಿಲ್ಗೊಪ್ಪಿಗೇಜಿಸುತೇಜಿಸುತೆ ದೊಣೆಯಿಂ ಕಣೆಯಂ ತೆಗೆದು ಜೋಡಿಸುತೆ ಜೋಡಿಸುತೆ ಮುಂ ತೆರಳ್ದರ್.' 'ಅದ್ಭುತರಾಮಾಯಣ'ದಲ್ಲಿ ಸೀತಾದೇವಿಗೆ ತಾನೆ ಪ್ರಾಧಾನ್ಯ! ಅವಳು ತಾನೆ, ಸಹಸ್ರಕಂಠ ರಾವಣನನ್ನು ಕೊಲ್ಲುವುದು; ಆದ್ದರಿಂದ ಆ ಸೀತೆಯೆ ಕಾಳಿಯಾಗಿ, ಕರಾಳಮುಖಿಯಾಗಿ ಸಹಸ್ರಕಂಠನ ಸಂಹಾರಕ್ಕೆ ಧುಮ್ಮಿಕ್ಕುವ ಸಂದರ್ಭದಲ್ಲಿ ಕವಿ ಆಕೆಯನ್ನು ವರ್ಣಿಸುವುದರಲ್ಲಿ ಒಂದು ಸೊಗಸಿದೆ. ಲೋಕೋತ್ತರ ಸುಂದರಿಯಾದ ಸೀತೆ ಮಹಾಕಾಳಿಯಾಗಿ ಅದ್ಭುತ ರೂಪದಿಂದ ಭೂಮಿಗೆ ಧುಮ್ಮಿಕ್ಕಿದ್ದು ಹೀಗೆ : ತಿದ್ದಿದ ಕೂದಲು ನಿಗುರಿ ಕೆದರಿತು. ಚಂದ್ರನಂತಹ ಹಣೆ ವಿಶಾಲವಾಯಿತು. ಎಸಳಿನಂತಹ ಕಣ್ಣು ಗುಳಿ ಬಿದ್ದಿತು. ನಗುವ ಮುಖ ಉರಿವ ಮುಖವಾಯಿತು. ಸುಲಿಪಲ್ಲು ನಿಡಿದಾಯಿತು. ತಳಿರಿನಂತಹ ನಾಲಗೆ ಜೋಲ್ನಾಲಗೆಯಾಯಿತು. ಕರ್ಕಶವಾದ ನಾಲ್ಕು ತೋಳು, ಕಲ್ಲೆದೆ, ಬಲ್ದೊಡೆಗಳೂ ಮುಖಕ್ಕೆ ತಕ್ಕಂತೆ ಆದುವು. ಕೊರಳಿನಲ್ಲಿ ರುಂಡಮಾಲೆ, ಕೈಯಲ್ಲಿ ಎಲುಬಿನ ಆಭರಣ ನೋಡುವುದಕ್ಕೆ ಭಯಂಕರವಾಯ್ತು. ಕೋರೆ ಹಲ್ಲುಗಳು ಮಿನುಗಲು, ತುಟಿ ಅಲುಗಲು, ನಾಳಗೆ ಚಾಚಲು, ಕಣ್ಣಾಪೆ ಜಾಟಳದಂತೆ ಸುತ್ತಲು, ಶೂಲ, ಖಡ್ಗ ತಲೆಯೋಡುಗಳನ್ನು ಹಿಡಿದು ಸಹಸ್ರಕಂಧರನೆದುರು ಧಾವಿಸುತ್ತಾಳೆ. ಈ ವರ್ಣನೆ ಕೂಡ ಮುದ್ದಣನ ಅದ್ಭುತ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ.

ಮೇಲೆ ಹೇಳಿರುವುದು ದೊಡ್ಡ ದೊಡ್ಡ ಸಂದರ್ಭಗಳಲ್ಲಿ ಬರುವ ವರ್ಣನಾ ಭಾಗಗಳನ್ನು ಕುರಿತು. ಕಥೆಯಲ್ಲಿ ಉದ್ದಕ್ಕೂ ಮುದ್ದಣ ಸಾಧ್ಯವಿದ್ದೆಡೆಗಳಲ್ಲೆಲ್ಲ ಮೂಲದಲ್ಲಿ ಕಾಣದ ಒಂದು ಹೊಸ ಸೊಗಸನ್ನು ತಂದು ತೋರಿಸುತ್ತಾನೆ. ಮೂಲ 'ಅದ್ಭುತರಾಮಾಯಣ'ವನ್ನೂ ಮುದ್ದಣನ ಅನುವಾದವನ್ನೂ ಅಕ್ಕಪಕ್ಕದಲ್ಲಿಟ್ಟುಕೊಂಡು ನೋಡಿದರೆ ಮಾತ್ರ ಮೂಲದಿಂದ ಬೇರೆಯಾಗಿ ಸಾಧಿಸಿರುವ ಮುದ್ದಣನ ಕಥಾಲಾಪಕೌಶಲದ ಸೂಕ್ಷ್ಮ ಅಂಶಗಳನ್ನು ನಾವು ಗುರುತಿಸಬಹುದು.

೬

ಕಥೆ, ವರ್ಣನೆಗಳ ಮಾತನ್ನು ಮುಗಿಸಿದ ಬಳಿಕ ಮುದ್ದಣನ ಗದ್ಯಶೈಲಿಯ ಪ್ರಮುಖ ಲಕ್ಷಣಗಳಲ್ಲಿ ಕೆಲವನ್ನು ಇಲ್ಲಿ ಪರಿಶೀಲಿಸಬಹುದು.

ಮುದ್ದಣ ಹಳಗನ್ನಡದ ಗದ್ಯದಲ್ಲಿ ಬರೆದಿರುವನಾದರೂ ಆ ಗದ್ಯದಲ್ಲಿ ಆಧುನಿಕರ ಹೊಸಗನ್ನಡದ ವಾಕ್ಯವಿನ್ಯಾಸದ ಬಗೆಬಗೆಯ ವಿಲಾಸಗಳನ್ನು ನಾವು ಕಾಣುತ್ತೇವೆ. ಪುಟ್ಟ ಪುಟ್ಟ ವಾಕ್ಯಗಳನ್ನು ಹೆಣೆದಿರುವುದು ಈತನ ಗದ್ಯಶೈಲಿಯಲ್ಲಿ ಕಾಣುವ ಒಂದು ಮುಖ್ಯ ಲಕ್ಷಣ. ಈ ಕೆಳಗಣ ವಾಕ್ಯಗಳನ್ನು ಗಮನಿಸಿ : 'ಮುನಿದೊಡೊರ್ಮೆಯೆ ಕಡಲಂ ಕುಡಿವೆಂ, ಲೋಕಮಂ ನುಂಗುವೆಂ. ಜವನ

ಬಲ್ಲಿಂ ಜವಂಗಿಡಿಪುವೆಂ;' 'ಛೀ, ಮುಂದಿಂತಿರಲಾಗದು. ಅಂತಪ್ಪ ಮಂಗಮುಸುಡಂ ಕಂಡು ಕನ್ನೆ ನಾರದಂಗೊಲಿವಳೇ, ಉಹು. ಎಂದುಂ ಮೆಚ್ಚಳ್, ಒಳ್ಳಿತಾದುದ;, 'ದೇವ, ನೀಂ ಪಿರಿಯಂ ಆರ್ಗೇನೆಣಿಕೆ ಯಿರ್ಪುದು ಅದನೀಯಲ್ ತಕ್ಕವಂ;' 'ಗೆಲ್‌ಗೆಲ್ ಪೆಣ್ಣೊಂದೆನ್ನ ಕಂಕುಳೋಳ್ ಸಿಲ್ಕಿದುದು;' 'ಅಹಾ ! ಇವರೆಮಗೆ ಸಾಟಿಯಾಗಿ ಬಂದವರ್ಗಡ. ಇವರೆಮ್ಮಂ ಗೆಲ್ವವರ್ ಗಡ. ಅಲ್ಲದೊಡೆ ಪುೞುವಾನಸರ್ ಇನ್ನೆಗಂ ರಕ್ಕಸರೊಳ್ ಪೊಣರ್ದು ಗೆಲ್ಲಂಗೊಂಡುದುಂಟೆ. ಇದಂತಿರ್ಕೆ, ಕಂಡುದುಂಟೆ? ಇದೇನ್ ಕೇಡುಗಾಲಮೋ. ಎನಿತಾದೊಡಂ ನರಗುಱಿಗಳೊಳ್ ಬಿರುದುಳ್ಳರಗಂಡಂ ಸಾಸಿರದಲೆಯಂ, ಮುಪ್ಪೊೞಲೊಡೆಯಂ ರಾವಣಂ ಕಾದಿದನೆಂದೊಡೆ, ಎನಗೆನಿತ್ತವಮಾನಂ ? ಎನಗೊಲ್ದ ಮಾದೇವಂಗೆನಿತ್ತವಮಾನಂ ? ಇರ್ಕೆ, ಎನ್ನ ಬಳಗಮೆನ್ನಂ ದೂಱಿದೆ? ಇವರ ನುಡಿಯುಮಂತೆ ಪೋಕೆ! ಅಜ್ಞೆಯೇನೆಂಬಳ್ ? ಪುಸಿಯಲ್ಲಮೆನ್ನ ತೋಳ್ವಲಕಿದೊಂದು ಕುಂದು; ಜಸಕೆ ಕಸಂ. ಏವೆನೀಗಳ್. ಮುಯ್ಯಾಂತು ಕೈದುಡುಕಲ್ ಲೋಕಂ ಜಱಿಗುಂ; ಉಸಿಕನಿರ್ದು ಪಿಮ್ಮೆಟ್ಟಲ್ ಪಱಿಗುಂ ಎನುತಿನಿಸಂ ಜಾನಿಸುತೆ, ಎಂತುಮಿವರಂ ನೋಯಿಸಿದೊಡೆಮಗಪ್ಪ ಐಸಿರಿಯೇಂ? ಅಂತಲ್ತು. ಹಿಃ ! ಪೋಕೆ ಇದರ್ಕೆ ತಕ್ಕುದಂ ಮರ್ದನಱಿವೆಂ' ಎಂದು ನಿಷಂಗದಿಂ ವಾಯವ್ಯಾಸ್ತ್ರಮನೊಂದಂ ತೆಗೆದು ಶರಾಸನದೊಳ್ ಸಂಧಾನಂಗೆಯ್ದಂ.' 'ಪಿರಿಯನಿಂ ಪಿರಿದು. ಎಂತಿವರ ಪುಟ್ಟೊ, ಪುಟ್ಟಗೆಂತೆಂತು ಪೆಸರೊ, ಪೆಸರ್ಗೆಂತೆಂತು ಮೊಗಂಗಳೊ, ಮೊಗಂಗಳ್ಗೆಂತೆಂತು ಮೆಯ್ಯೊ, ಮೆಯ್ದೆಂತೆಂತು ಬಲವೊ, ಬಲಕ್ಕೆಂತೆಂತು, ಬೀರವೊ, ಮೇಣಾಬೀರಕಿನ್ನೆಂತೆಂತು ಪೆಂಪೊ ಕಾಣೆಂ; ಕೇಳೆಂ. ಶಿವಶಿವಾ !' ಎನುತೆ, ಕಟ್ಟಚ್ಚರಿಯಪ್ಪೀಕಥೆಯಂ ಎನಗೆ ತಾಂ ತಿಳಿಪಿ, ಗಡು ದಾಂಟಿ ಯಾತ್ರೆಗಾಗಿ ಪೋದಂ;' 'ಚಿಃ ! ಉಡು, ಪೆಣ್ಣೀಬಾೞ್ಕೆಯಂ. ಆಂ ಕೈದಾರೆಯ ಪೆಂಡತಿಯಿರಲ್, ಓಪಂ ಪರನಾರಿಯರೊಳೇಗಳುಂ ಮೆರೆಯುತಿರ್ಪುದೆನೆ ತಾನಿದುಂ ಪಾಡೇ ! ಲೋಗರ ನಿಂದೆಗೆಡೆಯಾಗೆನೆ ! ಬೞಿಗುಮೊಂದು ಕುಂದಲ್ತೇ ! ಇರ್ಕೆ ಮುಂತೆ ಗತಿಗಾರುಂ ಜೇಡವೇ ! ಪೆಱವೆಣ್ಗಳಣುಗರ್ಗೆಯೆ ಪಟ್ಟಂಗಟ್ಟುವನೇ! ಅಕ್ಕಟಾ ! ಇನಿತೆಲ್ಲಮಂ ಬರ್ದುಂಕಿದಾನೆಂತು ಕಂಡು ಸೈರಿಪೆಂ ! ಅಕ್ಕೆ. ಇದರ್ಕೆ ಮರ್ದಱಿವೆನೆನುತೆ, ಮುನ್ನಂ ರಾವಣಂ ತಂದಿತ್ತ ರುಧಿರಮಂ ನಂಜು ನೆತ್ತರೆನುತೆಯೆ ಬಗೆದು, ಕುಡಿದಳ್;' – ಇತ್ಯಾದಿ. 'ವಿಸ್ತಾರವಾಗಿ, ಸಂಕೋಚವಾಗಿ, ಏರಿ, ಇಳಿದು, ಬಾಲಕೇಳಿಯಾಡಿ, ವೃದ್ಧಗಾಂಭೀರ್ಯವನ್ನು ತೋರಿ, ನಾನಾ ಮಾರ್ಗಗಳನ್ನು ಹೊಕ್ಕು ಗದ್ಯಗತಿಯು ವೈವಿಧ್ಯದಿಂದ ಹೃದಯಂಗಮವಾಗಿದೆ. ಕೆಲವು ವೇಳೆ ಪರ್ವತದಲ್ಲಿ ಉದ್ಭವಿಸಿ ಬಂಡೆಯಿಂದ ಬಂಡೆಗೆ ಲಂಘಿಸಿ, ಭೋರ್ಗರೆವ ಝರಿಯಂತೆ ಧುಮ್ಮಿಕ್ಕಿ ಧುಮ್ಮಿಕ್ಕಿ ಹೋಗುವ ಆಟೋಪ : ಆಗಾಗ ಸಮಭೂಮಿಯನ್ನು ಸುಭಿಕ್ಷಗೈಯುವ ಉಪನದಿಯಂತೆ ಶಾಂತಮಧುರ ಕಲಕಲರವದಿಂದ ಮೆಲ್ಲಗೆ ಹರಿಯುವ ಚೆಲುವು ಅಲ್ಲಲ್ಲಿ ಅಗಲ ಆಳಗಳನ್ನು ಅಧಿಕ ಮಾಡಿಕೊಂಡು ಶುಭ್ರನೀಲದಿಂದಾವ್ರತವಾಗಿ

ಅಗಾಧವಾಗುವ ಸರೋವರ ಸೌಂದರ್ಯ : ಒಂದೇ ಸ್ಥಳದಲ್ಲಿ ಗಮನ ಭೇದಗಳ ಪುಟ್ಟ ಮೆರವಣಿಗೆಯೂ ಉಂಟು. ಒಂದೊಂದು ಸಂದರ್ಭದಲ್ಲಿ ನಡೆದು, ನಡೆವುದು ಸಾಕಾಗಿ ಓಡಿ, ಓಡುವುದು ಸಾಕಾಗಿ ಹಾರಿ, ಅಡಿಗಡಿಗಾ ಹುರುಪು ಹೆಚ್ಚುವ ಸಚೇತನ ಶಬ್ದ ಗುಂಫನವು ಕಡು ರಮಣೀಯವಾಗಿದೆ. ಇನ್ನೊಂದು ಅನುಪಮವಾದ ಅಭ್ಯಾಸವೂ ಮುದ್ದಣನ ಛಂದೋಬೊಕ್ಕಸದಲ್ಲಿದೆ. ಪ್ರಕರಣವೊಂದನ್ನು ಮುಗಿಯಿಸುವಾಗ ಎರಡು ಸಣ್ಣ ಪದ್ಯಗಳನ್ನು ಕೊನೆಯಲ್ಲಿ ನಿಲ್ಲಿಸಿ, ಪ್ರಾಸ ಪುರೋಹಿತನಿಂದ ಅವೆರಡಕ್ಕೂ ಪಾಣಿಗ್ರಹಣ ಮಾಡಿಸಿ, 'ಇನ್ನು ಮಂಗಳವನ್ನು ಪಾಡಿಯಾಯ್ತು, ಕೈಕೊಂಡ ಕಾರ್ಯ ಸಮಾಪ್ತವಾಯ್ತು. ಒಳಿತಾಯ್ತು, ಎಂಬ ಸಂತೃಪ್ತ ಭಾವನೆಯನ್ನು ನಮಗೆ ನೀಡುತ್ತಾನೆ' ಎಂದು ಪ್ರೊ. ಎಸ್. ವಿ. ರಂಗಣ್ಣನವರು 'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು'ಎಂಬ ತಮ್ಮ ಲೇಖನದಲ್ಲಿ ಮುದ್ದಣನ 'ರಾಮಶ್ವಮೇಧ'ದ ಗದ್ಯಧಾಟಿಯ ಸೊಗಸನ್ನು ಅನಾದೃಶ್ಯವಾದ ರೀತಿಯಲ್ಲಿ ವರ್ಣಿಸಿದ್ದಾರೆ. ರಾಮಾಶ್ವಮೇಧ'ದಲ್ಲಿ ಕಂಡು ಬರುವ ಗದ್ಯ ರೀತಿಯ ಸೊಗಸು ಒಂದು ರೀತಿಯಲ್ಲಿ 'ಅದ್ಭುತ ರಾಮಾಯಣ'ದಲ್ಲೂ ಕಾಣಬರುತ್ತದೆ. 'ರಾಮಾಶ್ವಮೇಧ'ದಲ್ಲಿ ಯಾವುದು ಪರಿಪೂರ್ಣಾವಸ್ಥೆಯಲ್ಲಿ ವ್ಯಕ್ತವಾಗಿದೆಯೋ ಅದು ಇಲ್ಲ, ಆ ಪರಿಪೂರ್ಣತೆಯ ಸಾಧನ ಪಥದಲ್ಲಿ ಮುಂದುವರಿಯುತ್ತಿರುವುದನ್ನು ಕಾಣುತ್ತೇವೆ. ಇಲ್ಲಿ ಮೇಲೆ ಒಕ್ಕಣಿಸಿದ ವಿಮರ್ಶೆಯ ಒಂದೊಂದು ಮಾತಿಗೂ ಮುದ್ದಣನ ಅದ್ಭುತ ರಾಮಾಯಣದಿಂದ ಒಂದೊಂದು ಸಂದರ್ಭವನ್ನು ಉದಾಹರಣೆಯಾಗಿ ಕೊಡಬಹುದು.

– "ಎಲೆ ಮರುಳೆ ! ನಿರ್ನೆರಮೆನ್ನೊಳ್ ಕಾದಲೆಂದು ಬಂದ್ಯೆ. ಈ ದೀವಿಯಂ ಲಂಕೆಯೆಂದುಂ, ಎನ್ನಂ ದಶಕಂಠನೆಂದುಂ ಬಗೆಯದಿರ್. ಒಳ್ನುಡಿ ಯೊರೆವೆಂ. ಮರಳ್ದುಮು. ಅಲ್ಲದೊಡೀ ಸುರಗಿಯಿಂ ತಲೆಯಂ ದಿಂಡನುರುಳ್ಚ ವಂತುರುಳ್ಚುವೆಂ. ಅಲ್ಲದೊಡಾನೆ ಕಪಿತ್ಥ ಮನೊಡೆವಂತೆ ಆನ ಗದೆಯಿಂ ಮೋದುವೆಂ" ಎಂದಂ. ಇದರ್ಕೆ ರಾಘವಂ ಪಡಿನಡಿಯೊಳ್– "ಅಟೆ ರಕ್ಕಸ ! ಬಾಯ್ಕೊಬ್ಬು ಎಮ್ಮೊಳಲ್ತು; ನಿಮ್ಮವರ 'ಪೌರುಷಮನೆಲ್ಲಮಂ ಬಲ್ಲೆಂ. ಕಡುಗಲಿಯಾದೊಡೆ ಎಮ್ಮೊಳ್ ಕೆಯ್ಪುಳಕಮಂ ತೋಱು";

"ವೇದವಾಕ್ಯಂಗಳಂ ವಿಚಾರಿಸುತಿರ್ಪರ್; ವಟುಗಳೊಳರೆಬರ್ ಪೆಱ ತೊಂದೆಡೆಯೊಳ್ ಫಲಸಮಿತ್ಕುಶಂಗಳಂ ಕೊಯ್ಯುತಿರ್ಪರ್; ಅರೆಬರ್ ನಾರುಡೆಯಂ ನೀರೊಳೊಗೆಯುತಿರ್ಪರ್; ರಿಸಿವೆಣ್ಗಳೊಳ್ ಕೆಲರ್ ಮತ್ತಮೊಂದೆಡೆ ಯೊಳ್ಪಪಸರಮಂ ಪಿಡಿದು ರಾಮನಾಮಮನೆಣಿಸುತಿರ್ಪರ್; ಕೆಲರ್ ಹದಿಬದೆಯರ ನೆಗಟ್ತೆಯಂ, ಕೆಲರ್ ಪುಣ್ಯಕಥಾವಿಶೇಷಂಗಳಂ ಬೆಸಗೊಳುತಿರ್ಪರ್; ಪೂಗಿಡುಗಳ ಪಾತೆಗಳ್ಗೆ ನೀರೆಱೆಯುತುಮಿರ್ಪರ್ ಕೆಲರ್;

"ಈಗಳ್ ರಕ್ಕಸನ ನಿಷಂಗದಿಂ ದಿವ್ಯಶರಂಗಳ್ ಪೊಱಮಟ್ಟು ತಮ್ಮಾ ಸನಂಗಳನೇರ್ದುವು. ಅವುಗಳೊಳೊಂದಱ ಪೆಸರೆಂತೊ ತಾಸಜೆಯೆಂ.

ನಂಜುಜಾಲೆಯುಂ ಸೂಸುತೆ ಪಗೆಯ ನೆತ್ತರಂ ಸವಿವೆನೆಂಬೋಲ್ ನಾಲಗೆಗಳಂ ನೀಡುತೆ ಆ ಗದ್ದುಗೆಯಿಂ ರೊಯ್ಯನೆ ಅರಿಯ ಇದಿರ್ಗೆ ಪಾಱೆ ಬಂದುದು. ಸಾಮಿಯ ಮೈ ಮೈ ಪಿರಿದು. ಅನಿತಱ'ೊಳೆಱಕೆವೀಸುತೆ ಉದ್ದ ಮೂಗಿನ ಪಕ್ಕಿಯೊಂದು ತನ್ನ ಪಗೆಯಂ ಕಾಲೊಳೆ ಪಿಡಿದು ಅಂಬರದತ್ತಲಡರ್ದುದು;

"ತಿರ್ದಿದ ಕೂಂದಲ್ ನಿಗುರ್ದು ಕೆದರ್ದಿರೆ; ಪೆಱ'ನೊಸಲ್ ಪೆರ್ನೊಸಲಾಗೆ; ಎಸಟ್ಗಿಣ್ ಗುಟೆಗಣ್ಣಾಗೆ; ನಗೆಮೊಗಂ ಉರಿಮೊಗಮಾಗೆ; ಸುಲಿಪಲ್ ನಿಡುವಲ್ಲಾಗೆ ತಳಿರ್ನಾಲಗೆ ಜೋಲ್ನಾಲಗೆಯಾಗೆ; ಸೀತೆ ಕರಾಳ ಮುಖಿಯಾದಳ್.

"ಭಾರದ್ವಾಜ! ಆಲಿಸ. ಮಡದಿಯದೆಂತು ಸಹಸ್ರಕಂಥರನ ಬಲ್ಪಂ ಪೊಗಟ್ದಳಂತಂತು ಕೋಪಂ ಪೆರ್ಚಿದುದು; ಕಣ್ಗಳ್ ಕೆಂಪಾದುವು; ಮೆಯ್ನವಿರ್ ನಿಮಿರ್ದತ್ತು; ಕುಡಿಮೀಸೆ ಕುಣಿದುದು; ಪಲ್ಗಳೊಂದನೊಂದು ಕಡಿಗೊಂಡುವು; ಮೆಯ್ಯುರ್ಬಿದುದು; ಭುಜಂಗಳಲುಗಿದುವು; ವನಮನೆಲ್ಲಮಂ ಸೀತೆ ಗೆತ್ತು ಪೂಗೊಂಚಲಂ ಬಳ್ಳಿಯಂ ಪಣ್ಣಂ ಎಣ್ಣದೆ ಪಿಡಿವಂ; ಅಪ್ಪುವಂ, ಮುದ್ದಿಪಂ

"ಕೆಲರ್ಗೆಮನಂ ಮುಂಬರಿಯದು; ಕೆಲರ್ಗೆ ಮನಂ ಮುಂಬರಿದೊಡಂ ಕಾಲ್ ಪರಿಯದು; ಕೆಲರ್ಗೆ ಮನದೊಳಗೆ ಪಜ್ಜೆಯುಂ ಪಜ್ಜೆಗೆಟ್ಟುದು; ಕೆಲರ್ ಬರುತೆ ಬರುತೆ ಕೆಯ್ಮುಗಿದರ್; ಕೆಲರ್ ಬೆಂಗೊಟ್ಟರ್; ಕೆಲರ್ ಕಾಲ್ಗೆ ಬುದ್ಧಿಯೊರೆದರ್. ಇಂತಾದೊಡಂ ಕೆಲರ್ ದಿಟಮನಂ ಗೆಯ್ದು ಪಗೆಗಳಂ ಪೊಯ್ಯಲ್ ಪೋದರ್."

ಮುದ್ದಣನ ಒಂದೊಂದು ಪುಟ್ಟ ವಾಕ್ಯವೂ ಒಂದೊಂದು ಶಬ್ದಾಲಂಕಾರದ ತೊಡವಿನಿಂದ ಮೆರೆಯುತ್ತದೆ. ಈ ಕುರಿತು ಹೇಳಬಹುದಾದ ಎರಡು ಮಾತು ಮುಂದೆ ಬಂದಿದೆ.

೭

ಮುದ್ದಣನಿಗೆ ಶಬ್ದಾಲಂಕಾರದಲ್ಲಿ ವಿಶೇಷವಾದ ಆಸಕ್ತಿ. ಈ ಶಬ್ದಾಲಂಕಾರಗಳ ಪ್ರಯೋಗ ಈತನ ಶೈಲಿಯ ಇನ್ನೊಂದು ಲಕ್ಷಣ. ಈ ಕೆಳಗಣ ಉದಾಹರಣೆಗಳನ್ನು ಗಮನಿಸಿ : ದಿಟ್ಟಿಸಿ ಮುಟ್ಟುವರಘಂಗಳಂ ಸುಟ್ಟುರಿಪ. ನಿಜವಿಷಯ ವಿಷಯಂಗಳಂ ಪಿಚಾರಿಸಿ ವಿಭವೋಪೇತಂ ವಿಪ್ರರ್ಗೆ ವಿವಿಧ ದಾನಧರ್ಮಂಗಳೊಳ್ ವಿತ್ತಮಂ ವಿಶೇಷಂ ವಿನಿಯೋಗಂ ಗೆಯ್ದು, ಅಚ್ಯುತನ ಅಚ್ಚರಿಯೆನಿಪೀ ಪೆಂಪನಿಚ್ಚೆಗೊಂಡು ನಚ್ಚಿ ನಿಚ್ಚ ಸಚ್ಚಿದಾನಂದನಪ್ಪ, ಭಾವಕಿಯ ಭಕ್ತಿಗೊಲ್ದು ಭಗವಂತನ್, ಪದ್ಮಾವತಿ ತಾಂ ಪದ್ಮನಾಭಂ ಕರುಣಿಸಿದ ಪಣ್ಣಂ ಪತಿಗೆ ತೋರ್ದು ಕನಸಿನ ಪರಿಯೆಲ್ಲಮಂ ತಿಳಿಪಿದಳ್, ಸೌಂದರ್ಯ ಸೌಶೀಲ್ಯ ಸೌಭಾಗ್ಯವತಿಯಪ್ಪ, ಚಕ್ರಶಾಯಿಯಪ್ಪ ಚಕ್ರಿಯನು ಗ್ರಹದಿಂ ಸಹಿತಮಾ ಚಕ್ರಮುಂ ಚಕ್ರವರ್ತಿ ಕೈಕೊಂಡು ಕಡ್ಗುಳೆ ಕಡೆಗಳಪ್ಪ ಪೊಡವಿಯೊಡೆತನಮಂ ಜಿಡದೆ ನಡೆಯಿಸುತಿರ್ದಂ, ಪರ್ವತನುಂ ಪದ್ಮನಾಭನ

ಪವದೊಲ್ಮೆಯಂ ಪಡೆದು ಪವಣಱಿತು ಪೆಣ್ಣಂ ಪಿಡಿದಪೆನೆನುತೆ ಪಾಲ್ಗಡಲೆಡೆಗೆ ಪಱಿತಂದಂ, ಏಂ ಮಗಳೆ, ಮನಂ ಬಂದಂಗೆ ಮಾಲೆಯಿಕ್ಕೆನೆ ಮಾಣ್ದ್, ಬಱಿಯಂ ಬಾಲೆಯ ಭಾಷಣಮಮಂ ಭಾವಿಸಿ, ಭಗವದ್‌ಭಕ್ತರಿಗೆ ಬವಣೆಬರ್ಪುದೆ, ಪುಣ್ಯಾತ್ಮಂ ಪುಣ್ಯಲೋಕಮಂ ಪೊರ್ದಿದಂ, ಕಾಲ್ಗೆಱಗಿದ ನಿಬರಂ ಕಟಾಕ್ಷಿಸಿ ಕರುಣಾಳು ಕುಳ್ಳಿರಿಸಿ ಕಡೆಯೊಳ್, ನಾರದಂ ನಾರಾಯಣನಾಜ್ಞೆಯಂ, ತಿರೆಯ ತಿಣ್ಣಮಂ ತಪಿಸೆ, ಸೊರ್ಕು ಸಿರ್ಕುಗೊಂಡುದು, ಕೈಕಸಿಯಣುಗಂ ಕಣ್ಣೆತ್ತಿ ಕಮಲಾಸನಂಗೆ ಕಾಲ್ಗೆಱಗಿ ಕೈಜೋಡಿಸಿ ಕಡೆಗೆಂದಂ, ಪಾಲೆಱ್ದು ಪೂಜಿಪ ಪೊಂಗಳಸದೊಳ್, ಅಡಪಿಯೆಲ್ಲಮನಱಿಸಿದೊಡಂ ಅರಸಿ ಮಱಿಸಿ ಪೋಗೆ, ಆರಾದೊಡಮವರಸಾರೆಂದಾರ್ಯೆದು ಬರ್ಪಿರೆ, ದುಟ್ಟಂ ದಿಟ್ಟಗೊಟ್ಟಿದನಿಲ್ಲಂ, ನುಡಿಯು ಕಡೆಗೊತ್ತಿದಂ ಕಡಲೊಡೆಯಂ, ಕೈಕಸಿಯಣುಗಂ ಕಕ್ಕಸನಾದೊಡಂ ರಕ್ಕಸರೊಳ್ ಪೆರ್ಕಳನಲ್ತು, ಬಾಲೆ ಬಾಗಿ ಬಾಮದಿಂ ಬಲ್ಲಿದರ್ಗೆಂದಳ್, ಎಡಬಲಗಡೆಗಳೊಳ್ ಆಳ್ವಡೆ ಕೋತಿವಡೆಗಳ ನಿಟ್ಟು ವಿಭೀಷಣನ ರಕ್ಕಸವಡೆಯೊಂದು ಪಗವಡೆಯ ಮುಂಗಡೆಯೊಳ್ ತಾಂಗೆ, ಬೆಟ್ಟಂಗಳ್ ಒಟ್ಟೈರ್ಪುದಂ ದಿಟ್ಟಿಸಿದೊಡೆ ಕಟ್ಟಚ್ಚರಿ ಪುಟ್ಟುವುದು, ಬಾಯ್ದೆಱೆದ ಬಗ್ಗದ ಬಾಯೊಳ್ ಬೀೞಲ್ಬರ್ಪ ನೊಱಜುವುೞುಗಳಂತೆ ಬಂದರಲಾ, ಪರಬಲದೊಳ್ ಅರಿಗಳ ಹರಿನಾದಂ ಪಿರಿದಾದುದು, ದಿಟ್ಟತನದ ಕಟ್ಟುಡುಗಿ ಮರಗಟ್ಟಿಪೋಗೆ, ಕಂಡಕಂಡಡೆಯೊಳ್ ಕಂಡಕಂಡವರಂ ಬೆಸಗೊಂಡಡಂ – ಇತ್ಯಾದಿ. ಸಣ್ಣ ಸಣ್ಣ ಪದಗಳನ್ನುಪಯೋಗಿಸುವಾಗ ಕೂಡ ಶಬ್ದಾಲಂಕಾರ ಮುದ್ದಣನನ್ನು ಬಿಡುವುದಿಲ್ಲ. ಪಾೞ್ನೆಲಂ ಕೀೞ್ನೆಲಂ ಸಾಗರ್ ಸಾಗುವರ್, ಬೀರರುಂ ತೋಱಿರ್, ಐಸಿರಿಗೆ ಸರಿಯಿಲ್ಲಂ ಬಿದಿಯನುಮಂ ಬಿದುವನುಮಂ, ಜಸಕೆ ಕಸಂ, ಬಿಡುಗಣ್ಣರ ಬಡಗಿ, ಜನಕನಪ್ಪ ಜನಕ, ಆರೆಂದಾರಯ್ಯೆ, ವಿಧಿ ವಿಧಿಯಿಂ ಪೂಜಿಸುವತಿರ್ದಂ, ನೀನೆ ಮಾದೇವಂ ನೀನೆ ಮಾಧವಂ, ಅಚ್ಚರಿಯೆನುತಚ್ಚರ್, ಬಿಜ್ಜಂಯೊಳ್ ಪಜ್ಜೆಯಿಡುತಿರ್ದರಂ ಇತ್ಯಾದಿ.

೮

ಮುದ್ದಣನು ತದ್ಭವಪ್ರಿಯ. ತದ್ಭವಪ್ರಯೋಗಗಳ ಬಾಹುಳ್ಯವೂ ಆತನ ಗದ್ಯಶೈಲಿಯ ಲಕ್ಷಣಗಳಲ್ಲಿ ಒಂದಾಗಿದೆ. ಚಾಗ, ಅನ್ನೆಯ, ಜವ, ಸೊಣಗ, ಸಾಸ್ತ್ರ, ಜತನ, ತಿಣ್ಣ, ಸಾಸ, ಮಚ್ಚರ, ದೀವಿ, ಬೀರ, ನಿಚ್ಚ, ಪುತ್ತಱೆ, ಕೋಯಂಡ, ಮೋನ, ಕಕ್ಕಸ, ಬಾಮ, ಬಗ್ಗ, ಬೂಸಣ, ಅಚ್ಚಯ, ಅಮರ್ದು, ಜಂಪತಿ, ಹದಿಬದೆ, ಸಡ್ಡೆ, ಸೆಜ್ಜೆ, ಕಜ್ಜ, ಉಜ್ಜುಗ, ಬೇದ, ಬಿಜ್ಜೆ, ಸಾಜ, ಬವಣೆ, ಸೊನ್ನೆ, ಬಜ್ಜರ, ಬಿನದ, ಅಂಚೆ, ಸಂಕ, ಬಕುತಿ, ಸಗ್ಗ, ಅಗ್ಗಿ, ಮೊಗ, ರಿಸಿ, ಮಿಗ, ಪಕ್ಕಿ, ತಿರೆ, ಬೊಮ್ಮ, ಪೊಡವಿ – ಹೀಗೆ ತದ್ಭವ ಪದಗಳನ್ನು ಹೇರಳವಾಗಿ ಬಳಸುವುದು ಮುದ್ದಣನಿಗೆ ಪ್ರಿಯವಾದದ್ದು. ಕೇವಲ ವ್ಯಾಕರಣಸೂತ್ರಗಳ ಬಲದಂದಿಲೇ ಕೆಲವು ಹೊಸ ಹೊಸ ತದ್ಭವಗಳನ್ನೂ ಈತ ಸೃಷ್ಟಿಸಿರುವುದನ್ನು ನಾವು ಕಾಣುತ್ತೇವೆ. ಈ

ತದ್ಭವಗಳನ್ನು ನಾವು ಒಪ್ಪಿಕೊಳ್ಳಬಹುದಾದರೂ ಹನುಮಂತನನ್ನು 'ಅಣುವ' ಎನ್ನುವುದೂ ಶತ್ರುಘ್ನನನ್ನು 'ಸತ್ರುಗಣ' ಎನ್ನುವುದೂ ಲಕ್ಷ್ಮಣನನ್ನು 'ಲಚ್ಚುಮಣ' ಎನ್ನುವುದೂ ಸುಷೇಣನನ್ನು 'ಸುಸೇಣ' ಎನ್ನುವುದೂ, ವಿಭೀಷಣನನ್ನು 'ಬಿಬೀಚಣ' ಎನ್ನುವುದೂ, ಮಂಡೋದರಿಯನ್ನು 'ಮಂದೋದರಿ' ಎನ್ನುವುದೂ ಸರಿಯಾಗಿ ತೋರುವುದಿಲ್ಲ. ಇಂತಹ ಕಡೆಗಳಲ್ಲಿ ಮುದ್ದಣನ ತದ್ಭವಗಳ ಅತಿ ಮಮತೆ ವಾಚಕರಿಗೆ ಅಸಹನೆಯಾಗುತ್ತದೆ.

೯

ಸಂಸ್ಕೃತ ಸಮಾಸ ಪದಗಳಿಗೆ ಸಮಾನಾರ್ಥಕಗಳಾದ ಕನ್ನಡ ಪದಗಳನ್ನು ಮೊದಲೇ ರೂಢಿಯಲ್ಲಿಲ್ಲದಿದ್ದರೆ ಸೃಷ್ಟಿಸಿಯಾದರೂ ಹೇಳುವುದು ಮುದ್ದಣನ ಶೈಲಿಯ ಇನ್ನೊಂದು ಲಕ್ಷಣ. ಈ ಕೆಳಗಿನ ಉದಾಹರಣೆಗಳನ್ನು ಗಮನಿಸಿ : ಮಂದಮಾರುತ – ಕಿಱುವೆಲರ್, ಯಜ್ಞಸೂತ್ರ – ಜನ್ನದಾರ, ಮಂದಸ್ಮಿತ – ಕಿಱುನಗೆ, ಆಕಾಶಗಂಗೆ, ಆಕಾಶಗಂಗೆ–ಬಾಂಬೊಚ್ಚ, ಸೂರ್ಯವಂಶ– ನೇಸರ್ಬಳಿ, ಪ್ರತಿವಚನ– ಮಾರ್ನುಡಿ, ಪಕ್ಷಿರಥ–ಪಕ್ಕಿದೇರ, ಸಂತೋಷ ಸಮುದ್ರ–ಸಂತಸ ಮುನ್ನೀರ್, ಚಕ್ರಾಯುಧ–ಪಾಱುಂಬಳೆ, ಶಯ್ಯಾಗೃಹ–ಸೆಜ್ಜೆವನೆ, ರದಚ್ಛದ–ಬಾಯ್ದೆಱೆ, ಕ್ಷೀರಸಮುದ್ರ– ಇಂಗಡಲ್, ಪುಣ್ಯಕಾರ್ಯ–ಸೈಪಿನೆಸಕ, ವಿಮಾನ–ಗಾಳಿದೇರು, ಗಾನವಿದ್ಯಾ–ಗಾಣಬಿಜ್ಜೆ, ವೀಣಾವೈಜ್ಞಾನಿಕ–ಬೀಣೆಬಿನ್ನಣಿಗ, ಅರಿಷಡ್ವರ್ಗ–ಅಱುವಗೆ ದಶಮುಖ–ಈರೈಮೊಗಂ, ಜರಾಮೃತ್ಯು – ಮುದಿವಟೆವು, ಅಧೋಭುವನ– ಕೀೞೆಳೆ, ವಿಷರಕ್ತ– ನಂಜುನೆತ್ತರ್, ಆಕಾಶವಾಣಿ– ಬಾನ್ನುಡಿ, ಶ್ರೀವತ್ಸಲಾಂಛನ– ಸಿರಿವಚ್ಚಲಚ್ಚಣ, ಪುಷ್ಪವೃಷ್ಟಿ– ಅರಲ್ಮೞೆ, ಪುಷ್ಪಕವಿಮಾನ– ಪೂದೇರ್, ಅದೃಶ್ಯವಾಕ್– ಮಱೆನುಡಿ, ವ್ಯರ್ಥಾಲಾಪ– ಬಯಲ್ನುಡಿ, ಶ್ಮಶಾನಮಾರ್ಗ– ಮಸಣವಟ್ಟೆ – ಇತ್ಯಾದಿ.

೧೦

ಒಂದೇ ಅಂಕಿತನಾಮಕ್ಕೆ ಬೇರೆ ಬೇರೆ ಅಂಕಿತ ಪದಗಳನ್ನು ಉಪಯೋಗಿಸುವುದು ಈತನ ಶೈಲಿಯ ಇನ್ನೊಂದು ಕುರುಹು. ಬ್ರಹ್ಮನನ್ನು ಬೊಮ್ಮ, ದ್ರುಹಿಣ, ವಿಧಿ, ಬೇದಬಿಜ್ಜೆಗ, ಹಿರಣ್ಯಗರ್ಭ, ಪೊಂಬಸಿಱಿ, ಅಲರಿಚ, ಅಂಚೆದೇರ, ನಾಲ್ಮೊಗ, ಕಮಲಾಸನ ಎಂದೂ ಇಂದ್ರನನ್ನು ಮುಗಿಲ್ದೇರ, ಸಗ್ಗಿಗರ ಪಿರಿಯ, ಅಮರ್ದುಂಡರೊಡೆಯ, ಬಿಡೌಜ ಎಂದೂ ಈಶ್ವರನನ್ನು ಐಗಳ, ಮುಪ್ಪೊಬಿಲುರಿಕ ಎಂದೂ ನಾರದನನ್ನು ನಾಲ್ಮೊಗನಣುಗ, ಕಲಹಾಶನ, ಅಂಚೆದೇರನಣುಗ ಎಂದೂ ಯಮನನ್ನು ಜವ, ಧರ್ಮರೂಪ, ದಂಡಧರ ಎಂದೂ ದಶರಥನನ್ನು ಪಂತಿದೇರ, ಬಂತಿದೇರ ಎಂದೂ ರಾವಣನನ್ನು ಕೈಕಸಿಯಣುಗ, ದಶಮುಖ, ಈರೈಮೊಗ, ಪೌಲಸ್ತ್ಯ, ದಶಾಸ್ಯ, ಎಂದೂ ಪರಶುರಾಮನನ್ನು ಅರ್ಚೀಕನಣುಗ, ಭಾರ್ಗವ, ರೇಣುಕಾತ್ಮಜ, ಭೃಗುರಾಮ ಎಂದೂ ರಾಮನನ್ನು ದಶರಥರಾಮ, ರಘುರಾಮ,

ರಾಘವ, ರಘುಪುಂಗವ ಎಂದೂ ವಿಷ್ಣುವನ್ನು ಹೃಷಿಕೇಶ, ನಾರಾಯಣ, ಹರಿಜನಾರ್ದನ, ಕೃಷ್ಣ ಅಚ್ಯುತ, ಮಾಧವ, ಅಲರ್ಪೊಡೆಯನ್, ವನಜಾಕ್ಷ, ಪಕ್ಕಿದೇರ, ಕಮಲಾಕ್ಷ, ಸಿರಿಯರಸ ಎಂದೂ ದೇವತೆಗಳನ್ನು ಅಗ್ಗಿಮೊಗರ್, ಬರ್ದಿಲರ್, ಬಿಡುಗಣ್ಣರ್, ಅಮರ್ದುಣಿಗಳ್, ಸಗ್ಗಿಗರ್ ಎಂದೂ ಬಗೆಬಗೆಯಾಗಿ ಬೇರೆ ಬೇರೆ ಹೆಸರುಗಳಿಂದ ಕರೆದಿದ್ದಾನೆ. ಈ ಬೇರೆ ಬೇರೆ ರೂಪಗಳಲ್ಲಿ ಬಹುಪಾಲು ಯಾವುದೋ ಒಂದು ಶಬ್ದಾಲಂಕಾರವನ್ನು ಸಾಧಿಸುವುದಕ್ಕಾಗಿ ಬಂದವುಗಳಾಗಿರುವುವೇ ಹೊರತು, ಸಂದರ್ಭಕ್ಕನುಗುಣವಾಗಿ ಪ್ರಯೋಗವಾದವುಗಳಲ್ಲ. ಅನೇಕ ಕಡೆ ಈ ನಾಮಾಂತರಗಳಿಂದ ಅರ್ಥಪುಷ್ಟಿ ಒದಗಿಬರುವುದಿಲ್ಲ.

ಮುದ್ದಣನು ತದ್ಭವಪ್ರೇಮಿಯಾದರೂ ಸಂಸ್ಕೃತ ಪದಗಳನ್ನು ಮಿತವಾದ ಪ್ರಮಾಣದಲ್ಲಿ ಉಪಯೋಗಿಸುವುದನ್ನು ಕಾಣುತ್ತೇವೆ. ಕರಿಮಣಿಯ ಸರದಲ್ಲಿ ಕೆಂಪು ಹವಳವನ್ನು ಕೋದ ಹಾಗೆ ರಸಪೊಸರಲು, ಲಕ್ಷಣ ಮಿಕ್ಕಿರಲು, ಎಡೆ ಎಡೆಯಲ್ಲಿ ಸಂಸ್ಕೃತದ ನಲ್ನುಡಿಗಳನ್ನು ತಂದು ಅಚ್ಚಗನ್ನಡದಲ್ಲಿ ಕಾವ್ಯವನ್ನು ಹೇಳುತ್ತೇನೆಂದು 'ರಾಮಶ್ವಮೇಧ'ದಲ್ಲಿ ಹೇಳಿದ್ದಾನಷ್ಟೆ. ಆ ಅಭಿಪ್ರಾಯ 'ಅದ್ಭುತರಾಮಾಯಣ' ಗ್ರಥಿತವಾಗುವ ಕಾಲಕ್ಕಾಗಲೇ ರೂಪುಗೊಳ್ಳುತ್ತಿತ್ತೆಂದು ತೋರುತ್ತದೆ. ಈ ಪ್ರಯೋಗಗಳನ್ನು ಗಮನಿಸಿ : ವಳಕ್ಷಪಕ್ಷ, ಏಕಪಾಠಿ, ದಿಗಂತವಿಶ್ರಾಂತಕೀರ್ತಿ, ಜಾಂಬೂನದ, ಚೌದಂತ, ವೈನತೇಯ, ಬಿಡೌಜ, ಪುಷ್ಪವಂತರ್, ಪ್ರಭಂಜನ, ಯಜ್ಞಹವನದೇವ, ತುಂಗೋರಸ್ಥಲ, ಕುಂದಕುಟ್ಮಲ, ಕಾರ್ಮುಕ, ಸಾಯಕ, ಇಂದ್ರಜಾಲ, ತಮೋಜ್ಞ, ರಥಾಂಗ, ದ್ವಿತೀಯೆ, ವಿಪಂಚೀಗುಣ ತತ್ವಜ್ಞರ್, ಉಲೂಕ, ಮಾಂಸಾಶಿ, ಧ್ವಾಂಕ್ಷಶತ್ರು, ಹೇತು, ಹೃದ್ಗ್ರಂಥಿ, ಹರಿನಾದ, ಸೂಸಕ, ಸ್ವರ್ಧುನೀಜಲ, ಸಂಸರ್ಗ, ಸಂದಿಗ್ಧ, ವ್ಯಾಜಾಂತರ, ವಿಯದ್ಗಂಗಾ, ವಾಜಪೇಯ, ರಾಜನ್ಯ, ರತ್ನಗರ್ಭೆ, ಮಹಾರ್ಣವ, ಭೂಭೃದ್ವರ, ಜೃಂಹಿತ, ಬಾಲಾತಾಪ, ಪಾರ್ಥಿವಾಗ್ರಣಿ, ಪರಿವೇಷ್ಠಿತ, ಪೀಯೂಷಕಣಂಗಳ್, ಪಂಚವಿಂಶತಿಸಹಸ್ರ, ನಿರ್ವ್ಯಾಜ, ನಿಷಂಗ, ನೀಲಲೋಹಿತ, ದುಃಖಾಕುಲರ್, ಜಿಹ್ವಾಗ್ರ, ಚತುಷ್ಷಷ್ಟಿ, ಚಕ್ರಶಾಯಿ, ಚಿದಂಬರ, ಕ್ಷುದ್ಬಾಧೆ, ಕಾಲಧರ್ಮ – ಇತ್ಯಾದಿ.

## ೧೨

ಲೋಕೋಕ್ತಿಗಳನ್ನೂ ನಾಡಗಾದೆಗಳನ್ನೂ ಬಳಸುವುದು ಮುದ್ದಣನಲ್ಲಿ ವಿಶೇಷವಾಗಿ ಕಾಣುವುದಿಲ್ಲವಾದರೂ ಅವು ಆರೇಳು ಕಡೆ ಅಲ್ಲಲ್ಲಿ ಬಂದು ಬರವಣಿಗೆಗೆ ಒಂದು ಮೆರುಗು ಕೊಡುವುದನ್ನು ಇಲ್ಲಿ ನೆನೆಯಬಹುದು. ಬಾವಟಿದು ಬಲ್ಲುವಣ್ಣಾದುದು, ದೇವರಿಚ್ಚೆಯುನಾರ್ ಮೀಱಲಾರ್ಪರ್, ಏನಾದೊಡ ಮಾರಾರೇವರ್, ಆಸೆಯನುಟಿಯೆ ಲೇಸಕ್ಕುಂ, ಸುಕೃತಮೆ ತಾಂ ಸೌಖ್ಯ ಮೂಲಮಿಹಕುಂ ಪರಕುಂ, ನಂಬಿದವರ್ಗಿಂಬೀವಂ, ಸರ್ವಂ ವಿತ್ತಾಪ್ತ ಲಾಭಂ

ಸತಿತನುಜಸುಖಂ ಪೂರ್ವಕರ್ಮಾನುಸಾರಂ, ದೈವಸಂಕಲ್ಪವನಾರ್ ಮೀಱುವರ್, ವಿಶ್ವಾಸಘಾತುಕಮನಾರ್ಗುಂ ಎಸಗಲಾಗದು, ಕಪಟಮಾರ್ಗುಂ ಸಲ್ಲದೈ, ಎಂತಾದೊಡಂ ಭಗವದ್ಭಕ್ತರ್ಗೆ ಬವಣೆ ಬರ್ಪುದೆ, ತಿರೆಯೊಳ್ ಕಾಲ್ಗೆಡೆ ಬಿಟ್ಟೊಡಂ ತಿರೆಯನೇ ಆಧಾರವಂ ಗೆಯ್ವುವೋಲ್, ಸಡ್ಡೆಯಿಂ ಪಾಡೆ ಪಾಡು ಪ್ಯೆಮಗೆ ಪಾಸಟಯಿಲ್ಲಂ, ಕೆಂಡಗಿರ್ಚನಿಡೆ ಮನೆ ಸುಡುಗುವೆಂದು ಖಂಡ ಮಾಣಿಕ್ಯಮನಿಡೆ ಸುಡುಗುಮೋ, ಪಂದೆಗಳ ಬಾಯ್ತೊಗ್ಬು ಪಿಂದೆ ನಾರಿಯರಡೆಯೊಳ್, ಪುಲಿಯಂ ಕಂಡವರ್ ಬೆಕ್ಕಿಗಳ್ಕುವರೆ, ರೋಗಿಗೆ ಮರ್ದೂಡಂ ಬಡದಂತೆ – ಇತ್ಯಾದಿ.

೧೩

ಭಾಷಾದೃಷ್ಟಿಯಿಂದ ವಿಚಾರ ಮಾಡಿದಾಗ 'ಅದ್ಭುತರಾಮಾಯಣ' ಹಳಗನ್ನಡವನ್ನು ಅಭ್ಯಾಸ ಮಾಡುವವರಿಗೆ ಬಾಲಬೋಧೆಯಂತೆ ಇದೆ ಎನ್ನಬಹುದು. ಹಳಗನ್ನಡದ ಪರಿಚಯವಿಲ್ಲದವರು ಕೂಡ ಬಹಳ ಸುಲಭವಾಗಿ 'ಅದ್ಭುತರಾಮಾಯಣ'ವನ್ನು ಓದಿ, ಹಳಗನ್ನಡದ ಕಾವ್ಯವ್ಯಾಸಂಗಕ್ಕೆ ಬೇಕಾದ ಶಿಕ್ಷಣವನ್ನು ಪಡೆದುಕೊಳ್ಳಬಹುದು. ಪುಟ್ಟ ಪುಟ್ಟ ವಾಕ್ಯಗಳನ್ನು ಮಾತನಾಡಿದಂತೆ ತೋರುವ ಸಹಜ ಶೈಲಿಯಲ್ಲಿ ಬರೆದಿರುವುದರಿಂದ ಈ ಪುಸ್ತಕ ಹಳಗನ್ನಡಕ್ಕೆ ಒಂದು ಪ್ರವೇಶಕದಂತೆ ಇದೆ. ಭಾಷೆ ಸುಲಭವಾಗಿರುವುದರ ಜೊತೆಗೆ ಕಥೆಯ ತ್ವರಿತಗತಿಯಿಂದಲೂ ಶೈಲಿಯ ಸರಳತೆಯಿಂದಲೂ ವರ್ಣನೆಯ ಸಹಜತೆಯಿಂದಲೂ ಮಾತಿನ ರಸಿಕತೆಯಿಂದಲೂ, 'ಅದ್ಭುತ ರಾಮಾಯಣ' ಒಂದು ಸುಂದರವಾದ ವಚನಕಾವ್ಯವಾಗಿ ರೂಪುಗೊಂಡಿದೆ. ಮಹಾಕಾವ್ಯಕ್ಕೆ ಯೋಗ್ಯವಾದ ವಸ್ತುವೊಂದನ್ನು ಆರಿಸಿಕೊಂಡು, ಉದಾತ್ತವಾದ ಪಾತ್ರ ಸೃಷ್ಟಿಯ ಮೂಲಕ ವಿಶ್ವ ರಹಸ್ಯದ ತತ್ವಗಳನ್ನು ಕುರಿತು ಬೋಧಿಸುತ್ತ, ಹೊಸದೊಂದು ಕಲಾಪ್ರಪಂಚವನ್ನೇ ನಿರ್ಮಾಣ ಮಾಡುವ ಮಹತ್ತು ಮುದ್ದಣ ಕವಿಯಲ್ಲಿಲ್ಲ. ಎಲ್ಲರಿಗೂ ಪರಿಚಿತವಾಗಿರುವ ಪುರಾಣದ ಕಥೆಯೊಂದನ್ನು ಆರಿಸಿಕೊಂಡು, ಇಂಪಾದ ಮಾತುಗಳಿಂದ, ಸ್ವಾರಸ್ಯವಾದ ಸನ್ನಿವೇಶಗಳನ್ನು ನಿರ್ಮಾಣ ಮಾಡಿ, ಚಿತ್ರಕತೆಯನ್ನು ಕಟ್ಟಿ ಹೇಳುವ ಸಾಮರ್ಥ್ಯ ಮಾತ್ರ ಮುದ್ದಣನಲ್ಲಿದೆ. 'ಅದ್ಭುತ ರಾಮಾಯಣ' ಇಂತಹ ಸಾಮರ್ಥ್ಯಕ್ಕೆ ಒಂದು ನಿದರ್ಶನವೆಂಬಂತೆ ರಚಿತವಾಗಿದೆ. ತತ್ವ ಪ್ರಧಾನವಾದ, ವೇದಾಂತದ ವಿಷಯಗಳನ್ನೊಳಗೊಂಡ ಮೂಲ 'ಅದ್ಭುತರಾಮಾಯಣ'ದಲ್ಲಿ ಸ್ವಾರಸ್ಯವಾಗಿ ಕಾಣಬರುವ ಶ್ರೀಮತಿ ಪರಿಣಯದ ಕಥೆ, ನಾರದನ ಸಂಗೀತಾಭ್ಯಾಸದ ಕಥೆ, ಸಹಸ್ರಕಂಠ ರಾವಣನ ವಧೆಯ ಕಥೆ – ಇವುಗಳನ್ನು ಪಂಡಿತ ಪಾಮರರಿಬ್ಬರಿಗೂ ರಂಜನೆಯುಂಟಾಗುವಂತೆ ಸರಸವಾಗಿಯೂ ಸರಳವಾಗಿಯೂ ಹೇಳುವುದೇ ಕವಿಯ ಉದ್ದೇಶ. ಈ ಉದ್ದೇಶ ಚೆನ್ನಾಗಿ ನೆರವೇರಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಇದಕ್ಕಿಂತ ಹೆಚ್ಚಿನದನ್ನು ಅದ್ಭುತರಾಮಾಯಣದಲ್ಲಿ ನಿರೀಕ್ಷಿಸುವುದು ಅಸಹಜವಾಗುತ್ತದೆ. ಪಾತ್ರ ರಸ ಆವರಣಾದಿಗಳನ್ನು ವಿವರ ವಿವರವಾಗಿ ಚಿತ್ರಿಸುವುದು ಮುದ್ದಣನ ಉದ್ದೇಶವಲ್ಲ.

೧೪

ಮುದ್ದಣನ ಕಾವ್ಯಪಠನದಿಂದ ನಾವು ಕಲಿಯಬಹುದಾದ ಜೀವನ ತತ್ವದ ಸಂದೇಶವನ್ನು ಕುರಿತು ಇಲ್ಲಿ ಎರಡು ಮಾತು ಹೇಳಬಹುದು. ಮನುಷ್ಯನಾಗಿ ಹುಟ್ಟಿದವನಿಗೆ ನಾನಾ ವಿಧವಾದ ದುಃಖ ಪರಂಪರೆಗಳು ಒಂದರ ಮೇಲೆ ಒಂದರಂತೆ ಬಂದು ಅವನ ಬಾಳನ್ನು ಹದಗೆಡಿಸುವುದು ಸಹಜ. ಅಂತಹ ಪ್ರಸಂಗಗಳಲ್ಲಿ ಮನುಷ್ಯನು ರಸಿಕತೆಯನ್ನು ಮರೆದು, ಸಾಹಿತ್ಯ ಸಂಗೀತ ಚಿತ್ರ ನರ್ತನ ಮುಂತಾದ ಲಲಿತಕಲಾ ಪ್ರಪಂಚದಲ್ಲಿ ಪ್ರವೇಶಿಸಿ, ಆ ಮೂಲಕ ತನ್ನ ಜೀವನಕ್ಕೆ ಬೇಕಾದ ಸುಖಶಾಂತಿಗಳನ್ನು ತಂದು ತುಂಬಿಕೊಳ್ಳಬೇಕು. ಜೀವನದ ನಾನಾ ವಿಧವಾದ ಸಂಕಷ್ಟಗಳ ನಡುವೆ ಅವುಗಳಿಂದ ಕ್ಷಣಕಾಲವಾದರೂ ಬಿಡುಗಡೆಯನ್ನು ಪಡೆದು ನೆಮ್ಮದಿಯಿಂದ ಉಸಿರಾಡಬೇಕಾದರೆ ಸಾಹಿತ್ಯ ಸಂಗೀತಾದಿ ಲಲಿತ ಕಲೆಗಳನ್ನೇ ಆಶ್ರಯಿಸಬೇಕಾಗುತ್ತದೆ. ಬಡತನವೊ ಖಚೆಯೋ ಋಣಬಾಧೆಯೊ ಯಾವುದಿದ್ದರೂ ದಿವಸದಲ್ಲಿ ಒಂದೆರಡು ತಾಸುಗಳ ವೇಳೆಯಾದರೂ ಮಹಾಕವಿಗಳ ಕಾವ್ಯಾರಾಮದಲ್ಲಿ ವಿಹರಿಸಿದರೆ ಮನಸ್ಸು ನಿರ್ದುಷ್ಟವಾದ ಆನಂದವನ್ನನುಭವಿಸಿ ಪ್ರಸನ್ನವಾಗುತ್ತದೆ. ಇಂತಹ ಪ್ರಸನ್ನತೆಯ ಒಂದೆರಡು ರಸನಿಮಿಷಗಳಿಂದಲೆ ನಮ್ಮ ಈ ದೀರ್ಘವೂ ದುಃಖಮಯವೂ ಆದ ಜೀವನ ನಮಗೆ ಸಹ್ಯವಾಗುತ್ತದೆ. ಮುದ್ದಣನು ತನ್ನ ಕಾವ್ಯಗಳಲ್ಲಿ ಈ ತತ್ವವನ್ನು ಸಾರಿದ್ದಾನೆ. ಎಂದು ತೋರುತ್ತದೆ. ಮುದ್ದಣ ಮನೋರಮೆಯರ ಸಂವಾದ ಭಾಗದಲ್ಲಿ ಬರುವ ಸತ್ಕಥಾಕಾಲಕ್ಷೇಪದ ಸರಸವೃತ್ತಾಂತ ಪರ್ಯಾಯವಾಗಿ ಈ ತತ್ವವನ್ನು ಸಮರ್ಥಿಸುತ್ತದೆ. ಕಬ್ಬಿಗರ ಬಲ್ಲಹನಾದ ಮುದ್ದಣನು ಎಂದಿನಂತೆ ಒಂದು ದಿನ ವರ್ಷಾಕಾಲದ ಬೈಗು ಹೊತ್ತಿನಲ್ಲಿ ಅರಮನೆಯಿಂದ ಹೊರಟು, ಬೀದಿಯುದ್ದಕ್ಕೂ ನಡೆದು ತನ್ನ ಮನೆಗೆ ಬರುತ್ತಾನೆ. ಆತನು ಬರುವುದನ್ನು ದೂರದಿಂದಲೇ ನೋಡಿದ ಆತನ ಹೆಂಡತಿ ಮನೋರಮೆ ಎದ್ದು ಎದುರಿಗೆ ಬಂದು ಕಾಲು ತೊಳೆಯಲು ನೀರು ಕೊಡುತ್ತಾಳೆ. ಅವನ ಕೈಹಿಡಿದು ಒಳಚೌಕಿಗೆ ಕರೆದುಕೊಂಡು ಹೋಗುತ್ತಾಳೆ. ಕುಳಿತುಕೊಳ್ಳಲು ಮಣೆ ಕೊಟ್ಟು, ತಿನ್ನಲು ಗಳಿತ ಹಣ್ಣುಗಳನ್ನು ಕೊಟ್ಟು, ಕುಡಿಯಲು ಕೆನೆಗಟ್ಟಿದ ಹಾಲನ್ನು ಕೊಟ್ಟು ಉಪಚರಿಸುತ್ತಾಳೆ. ಈ ಉಪಚಾರದಿಂದ ಆತನ ಹಸಿವು ಬಳಲಿಕೆಯೂ ತೀರುತ್ತದೆ. ಬಳಿಕ ಕೆಳದಿ ನರುದಂಬುಲವನ್ನು ಮಡಿಸಿಕೊಡುತ್ತ, ಪರಸ್ಪರ ಸುಖಸಲ್ಲಾಪದಲ್ಲಿರುತ್ತ ಹಗಲೂ ಇರುಳೂ ಸುರಿಯುವ ಸೋನೆ ಮಳೆಯ ಜಿನುಗಿನಿಂದ ತನಗೆ ಬೇಸರವಾಗಿಬಯೆಂದೂ ಯಾವುದಾದರೂ ಒಂದು ಕಥೆಯನ್ನು ಹೇಳಬೇಕೆಂದೂ ಕೇಳಿಕೊಳ್ಳುತ್ತಾಳೆ. ಅವಳ ಬೇಸರ ಪರಿಹಾರಕ್ಕಾಗಿ ಮುದ್ದಣ ರಾಮಾಶ್ವಮೇಧದ ಕಥೆಯನ್ನು ಪ್ರಾರಂಭಿಸುತ್ತಾನೆ.

ಬಾಯೊಳಗೆ ಬೆಳ್ಳಿಯ ಚಮಚವನ್ನಿಟ್ಟುಕೊಂಡು ಹುಟ್ಟುವ ಆಗರ್ಭ ಶ್ರೀಮಂತರಾದ ಮಕ್ಕಳು ಸಾವಿರಕ್ಕೊಬ್ಬರೊ ಲಕ್ಷಕ್ಕೊಬ್ಬರೊ ! ಸಂಸಾರದ ಒಲವು ನಲಿವುಗಳಾಗಲಿ, ಜೀವನ ಸುಖಶಾಂತಿಗಳಾಗಲಿ ಶ್ರೀಮಂತಿಕೆಯನ್ನು

ಆಶ್ರಯಿಸಿರುವುದಿಲ್ಲ. ಅವು ಮನುಷ್ಯನ ರಸಿಕತೆಯನ್ನು ಆಶ್ರಯಿಸಿರುತ್ತವೆ. ಆದ್ದರಿಂದ ಮುದ್ದಣ ಮನೋರಮೆಯಂತೆ ಸತ್ಕಥಾವಿನೋದದಲ್ಲಿ ಬಾಳುವುದೇ ಸುಖ ಸಾಧನೆಯ ಮಾರ್ಗವೆಂದು ಕವಿ ಸೂಚಿಸುತ್ತಾನೆ ಎನ್ನಬಹುದು.

ರಾಮಾಶ್ವಮೇಧದಲ್ಲಿ ಶ್ರೀರಾಮಚಂದ್ರನಿಂದ ಪರಿತ್ಯಕ್ತಳಾದ ಸೀತಾದೇವಿ ಲಕ್ಷ್ಮಣನೊಡನೆ ತನ್ನ ಪತಿಗೆ ಹೇಳಿಕಳುಹಿಸುವ ಸಂದೇಶವಾಗಿ, ಕವಿ, 'ನಿನ್ನಾಣತಿಗೆ ಅಬಲೆ ಮಱುಗಿದಳಿಲ್ಲ, ಮಾರ್ನುಡಿದಳಿಲ್ಲ, ಮುನಿಸಾಂತಳಿಲ್ಲ, ಬೆರ್ಚಿದಳಿಲ್ಲ, ಕೊಟ್ಟುದಿಗೊಂಡಳಿಲ್ಲ, ದೂಱಿದಳಿಲ್ಲ, ನೀನೆ ಗತಿಯೆಂದು ನಿನ್ನಡಿಯಂ ನೆನೆಯುತೆ ಕಡವೊಟ್ಟಂ ಪಾರುತಿರ್ಪಳ್' ಎಂದು ಬರೆದು ಸೀತಾ ಮಾತೆಯ ಅನುಪಮವಾದ ಸಹನಶೀಲವೊಂದನ್ನು ವರ್ಣಿಸಿದ್ದಾನೆ. ಆರ್ಯರಮಣಿಯೂ ಸಾಧ್ವಿಶಿರೋಮಣಿಯೂ ಆದ ಸೀತಾದೇವಿ ಎಂತಹ ಕ್ಷಮಾಮೂರ್ತಿ ಎಂಬುದನ್ನು ಕವಿ ಇಲ್ಲಿ ಚಿತ್ರಿಸಿದ್ದಾನೆ. ಪ್ರಸಂಗ ಬಂದರೆ ಇದೇ ಸೀತಾಮಾತೆ ಮಹಾಕಾಳಿಯಾಗಿ ಕರಾಳರೂಪವನ್ನು ಧರಿಸಿ ಮಹಾಭಯಂಕರನಾದ ಸಹಸ್ರ ಕಂಠ ರಾವಣನನ್ನು ನಿಮಿಷಾರ್ಧದಲ್ಲಿ ಸಂಹರಿಸುತ್ತಾಳೆ ಎಂಬುದನ್ನು ಅದ್ಭುತರಾಮಾಯಣದಲ್ಲಿ ಚಿತ್ರಿಸಿದ್ದಾನೆ. ಒಬ್ಬಳೇ ಆದಿಶಕ್ತಿಯ, ಜಗಜ್ಜನನಿಯ, ಒಂದು ಮುಖವನ್ನು ಅದ್ಭುತರಾಮಾಯಣದಲ್ಲಿಯೂ ಇನ್ನೊಂದು ಮುಖವನ್ನು ರಾಮಾಶ್ವಮೇಧದಲ್ಲಿಯೂ ಕವಿ ಚಿತ್ರಿಸಿದ್ದಾನೆ. ರಾಮಪತ್ನಿಯಾದ ಸೀತಾದೇವಿಯೇ ದುಷ್ಟ ಶಿಕ್ಷಣದ ಸಂದರ್ಭದಲ್ಲಿ ಆದಿಶಕ್ತಿಯಾಗಿಯೂ ಮಹೇಶ್ವರಿಯಾಗಿಯೂ ಪರಮಪ್ರಕಾಶಿಕೆಯಾಗಿಯೂ ಕಲ್ಯಾಣಿಯಾಗಿಯೂ ಅವತಾರ ತಾಳಿ ಸಂಹಾರ ಕಾರ್ಯದಲ್ಲಿ ತೊಡಗುತ್ತಾಳೆ. ಹೆಣ್ಣು ಜಗಜ್ಜನನಿಯ ಸ್ವರೂಪ. ಅವಳಲ್ಲಿ ಪ್ರೀತಿ, ಸರಸ, ಆನಂದ, ಸೌಂದರ್ಯ ಮುಂತಾದುವುಗಳು ಕಾಣಬರುವಂತೆ ಕೋಪ, ರೌದ್ರ, ಬೀಭತ್ಸಾದಿ ಗುಣಗಳೂ ಕಾಣಬರುತ್ತವೆ. ಜಗತ್ತಿನ ಸಂರಕ್ಷಣೆ ಸಂಹಾರಗಳೆರಡರ ಭಾರವನ್ನೂ ಆಕೆ ಹೊತ್ತಿದ್ದಾಳೆ. ಇದನ್ನರಿತು ಹೆಣ್ಣಿನೊಡನೆ ಒಲಿದ ಒಗೆತನದಿಂದ ಸಂಸಾರವನ್ನು ಸುಖಮಯವನ್ನಾಗಿ ನಾವು ಮಾಡಿಕೊಳ್ಳಬೇಕು. ಈ ಜೀವನತತ್ವವನ್ನು ಮುದ್ದಣನು ತನ್ನ ಕಾವ್ಯದಲ್ಲಿ ಪರ್ಯಾಯವಾಗಿ ಸೂಚಿಸಿದ್ದಾನೆ.

೧೫

ಇಂದಿನ ಪ್ರಪಂಚದ ವಿದ್ಯಮಾನವನ್ನು ನೋಡಿದರೆ ಪುರಾಣದ ಸಹಸ್ರಕಂಠ ರಾವಣ ಉಪಟಳಕ್ಕೆ ಐವಡಿಯಾದ ಉಪಟಳವೀಯುತ್ತ ಕೋಟಿಕಂಠ ರಾವಣನು ತನ್ನ ಅಸುರೀವಿದ್ಯೆಯ ಕರಾಳಲೀಲೆಯಿಂದ ಜಗತ್ತನ್ನು ತುತ್ತುಗೊಳ್ಳುತ್ತಿರುವನೆಂದು ಭಾಸವಾಗುತ್ತಿದೆ. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ದಿಕ್ಕುಗಳಿಂದ ಋಷಿಕಲ್ಪರಾದ ಸಜ್ಜನವರೇಣ್ಯರು ಅಸತ್ಯ, ದೌರ್ಜನ್ಯ, ಅಸೌಜನ್ಯ, ಸ್ವಾರ್ಥ, ಲೋಭ, ಮೋಹ, ಮದ, ಮಾತ್ಸರ್ಯ, ಸ್ವಪ್ರತಿಷ್ಠೆ, ಲಘುಚೇತನ ಮುಂತಾದ ಶಿರಗಳಿಂದ ಉದ್ಧತನಾಗಿ ಮೆರೆಯುವ ಈ ರಾವಣಾಸುರನ ಸಂಹಾರಕ್ಕಾಗಿ ಪರಮಪುರಾಣ ಪುರುಷನನ್ನು

ಪರಮ ಪ್ರಕೃತಿಯನ್ನೂ ಮರೆ ಹೊಕ್ಕಿರುವಂತೆ ತೋರುತ್ತಿದೆ. 'ಈಗ ಧರ್ಮಗ್ಲಾನಿಯಾಗಿದೆ, ಈಗ ಅಧರ್ಮದ ಅಭ್ಯುದಯವಾಗಿದೆ. ಈಗ ಶಕ್ತಿ ಅವತಾರ ತಾಳಬೇಕು' ಎಂದು ಜನತೆ ಪ್ರಾರ್ಥಿಸುತ್ತಿದೆಯಲ್ಲವೆ ? 'ತಾಯಿ, ಜಗನ್ಮಾತೆ, ಚಿನ್ಮಯೀಭಗವತೀ, ಇಳಿದು ಬಾ ತಾಯಿ, ಲೋಕದ ದುಷ್ಟ ಶಕ್ತಿಗಳನ್ನು ತುಳಿದು ಸಂಹಾರ ಮಾಡಿ ಸತ್ಯ ಧರ್ಮ ಅಹಿಂಸೆಗಳನ್ನು ಮತ್ತೊಮ್ಮೆ ಲೋಕದಲ್ಲಿ ಮೂಡಿಸು ತಾಯಿ' ಎಂದು ದೇಶಕ್ಕೆ ದೇಶವೇ ಪ್ರಾರ್ಥಿಸುವಂತೆ ಕಾಣುತ್ತಿದೆಯಲ್ಲವೆ ?

ಇಂತಹ ಸಂದರ್ಭದಲ್ಲಿ ಸೀತಾಮಾಹಾತ್ಮ್ಯ ಮಾಧುರ್ಯದಿಂದ ಪರಿಪೂರ್ಣವಾದ ಮುದ್ದಣನ ಅದ್ಭುತರಾಮಾಯಣ ಜನತೆಯನ್ನು ಆಸುರೀ ಶಕ್ತಿಗಳಿಂದ ಬಿಡಿಸಿ ದೈವೀಶಕ್ತಿಗಳ ಕಡೆಗೆ ಕರೆದೊಯ್ಯುವ ಕೈದೀಪವಾಗಿ ಬೆಳಗಲೆಂದು ಹಾರೈಸೋಣ.

*****

# ಶ್ರೀರಾಮ ಪಟ್ಟಾಭಿಷೇಕದ ಹೊರಗೊಳಗು

## ತೆಕ್ಕುಂಜ ಗೋಪಾಲಕೃಷ್ಣ ಭಟ್ಟ

ಮೊದಮೊದಲು ದೂರದ ಕನ್ನಡಿಗರಿಗೆ ತನ್ನ ಸುಳಿವನ್ನು ಒಂದಿಷ್ಟೂ ಸುಳಿಯಗೊಡದೆ ಕ್ರಮೇಣ 'ಕನ್ನಡಗಬ್ಬಿಗರ ಮನೆಯೊಳಗಿದವನೊರ್ವಂ ಕನ್ನಡಿಗಂ' ರಚಿಸಿದ 'ಅದ್ಭುತ ರಾಮಾಯಣ'ವೆಂಬ ಗದ್ಯ ಗ್ರಂಥವೂ, 'ಚಾವಡಿ ರಂಗಭಟ್ಟನಾತ್ಮಜೆ ಮಹಾಲಕ್ಷ್ಮಿ ಕನ್ನಡಿತಿ' ಬರೆದ 'ಶ್ರೀರಾಮ ಪಟ್ಟಾಭಿಷೇಕ'ವೆಂಬ ಪದ್ಯ ಕಾವ್ಯವೂ 'ಮುದ್ದಣ'ನೆಂಬ ಹೆಸರಿನಿಂದ ಬರೆದ 'ಶ್ರೀರಾಮಾಶ್ವಮೇಧ'ವೆಂಬ ಗದ್ಯ ಕೃತಿಯೂ ಒಬ್ಬನಿಂದಲೇ ರಚಿಸಲ್ಪಟ್ಟವುಗಳೆಂದೂ ಅವನೇ ನಂದಳಿಕೆ ಲಕ್ಷ್ಮೀನಾರಾಯಣಪ್ಪನೆಂದೂ ಗೊತ್ತಾಗುವಂತೆ ಮಾಡಿದ ಕವಿಯ ಕೃತಿಗಳ ಕುರಿತು ಹಲವು ಲೇಖನಗಳೂ ಭಾಷಣಗಳೂ ಈ ಮೊದಲೇ ಪ್ರಕಟವಾಗಿವೆ. ಅವುಗಳಲ್ಲಿ ಅದ್ಭುತ ರಾಮಾಯಣವನ್ನೂ ಶ್ರೀರಾಮಾಶ್ವಮೇಧವನ್ನೂ ಒಬ್ಬನೇ ಬರೆದಿರಬಹುದೆಂದೂ ಅವನು ದಕ್ಷಿಣ ಕನ್ನಡ ಜಿಲ್ಲೆಯ ನಂದಳಿಕೆ ಲಕ್ಷ್ಮೀನಾರಾಯಣಪ್ಪನಾಗಿರಬಹುದೆಂದೂ ಶ್ರೀರಾಮ ಪಟ್ಟಾಭಿಷೇಕವನ್ನು ಮಾತ್ರ ಅವನೇ ಗ್ರಥಿಸಿದುದೆಂದು ಒಪ್ಪಿಕೊಳ್ಳಲು ಸರ್ವಥಾ ಸಾಧ್ಯವಿಲ್ಲವೆಂದೂ ಬರೆದ ಲೇಖನಕ್ಕುತ್ತರವೋ ಎಂಬಂತೆ ರಾಷ್ಟ್ರಕವಿ ಗೋವಿಂದ ಪೈಗಳು ಬರೆದ ಲೇಖನವೂ ಇತರರ ಲೇಖನಗಳೂ ಈ ಮೊದಲೇ ಪ್ರಕಟವಾಗಿವೆ ಎಂದ ಮೇಲೆ ಆ ವಿಷಯದಲ್ಲಿ "ಹಸ್ತ ಮುಟ್ಟು"ವ ಕೆಲಸವನ್ನು ಮಾತ್ರ ಮಾಡಿದರೆ ಸಾಕೆನ್ನಿಸುತ್ತದೆ. ಅದನ್ನೇ ಮೊದಲು ಪೂರೈಸಿ ಅನಂತರ ಇತರ ವಿಷಯಗಳ ಕಡೆಗೆ ಗಮನ ಹರಿಸಬಹುದು.

ಶ್ರೀರಾಮ ಪಟ್ಟಾಭಿಷೇಕದ ಮೂರನೆಯ ಸಂಧಿಯ ಸೂಚನೆಯಲ್ಲಿ,

> "ಶೇಷಮಿಲ್ಲೆನೆ ರಾಮಚಂದ್ರಮನ ಪಟ್ಟದ ವಿ
> ಶೇಷದಿತಿಹಾಸಮಂ ವಾತ್ಸ್ಯಾಯನಂಗಾದಿ
> ಶೇಷನಷ್ಟಾಹಿಕುಲಪೋಷನಪರಿಮಿತ ಸಂತೋಷದಿಂದೊರೆದನಂದು"

ಎಂದಿದೆ. ಮುಂದೆಯೂ ವಾತ್ಸ್ಯಾಯನನು ಮಹಾಶೇಷನ ಬಳಿಸಾರಿ "ರಘುವರನ ಮೂರ್ಧಾಭಿಷೇಚನ ಸಮಸ್ತ ಚಾರಿತ್ರಮಂ ಪೇಳ್ದು ತನ್ನ ಪೊರೆಯಬೇಕೆಂದು" ಕೇಳಿಕೊಂಡಂತೆಯೂ ಮಹಾಶೇಷನು "ನಿನಗನುಭವಂ ತನಗೆ ತೋಷಮಹುದು" ಎಂದು ಕಥೆಯನ್ನುಪಕ್ರಮಿಸಿದಂತೆಯೂ ಇದೆ. ಇದರಿಂದ ಈ ಶ್ರೀರಾಮ ಪಟ್ಟಾಭಿಷೇಕಕ್ಕೆ ಶೇಷ ರಾಮಾಯಣವು ಆಕರವಾಗಿದೆಯೆಂದು ಸೂಚಿತವಾಗುತ್ತದೆ.

ಶ್ರೀರಾಮಾಶ್ವಮೇಧದ ಪ್ರಥಮಾಶ್ವಾಸದ ಮುದ್ದಣ-ಮನೋರಮೆಯರ ಸಂವಾದದಲ್ಲಿ ಈ ಮಾತು ಬರುತ್ತದೆ :

"ಮನೋರಮೆ :- ಶ್ರೀರಾಮಂ ಅಶ್ವಮೇಧಮಂ ಕಯ್ಕೊಂಡನೆಂಬರಲ್ತೆ; ಆ ಕತೆಯೆ ಅಕ್ಕುಂ.

ಮುದ್ದಣಂ :- ಈಗಳರಿತೆಂ; ಶೇಷರಾಮಾಯಣಮಮಂ ಪೇಳ್ವುದೆಂಬೆಯೆ ?

ಮನೋರಮೆ :- ಅಪ್ಪುದಪ್ಪುದು. ಆದೊಡೆ ಮುನ್ನಮಾರಾರ್ಗಿದನೊರೆದರ್ ?

ಮುದ್ದಣಂ :- ಮುನ್ನಂ ಶೇಷಂ ವಾತ್ಸ್ಯಾಯನಂಗೆ ಪೇಳ್ದನದನೆ ನಿನಗೆ ಬಿತ್ತರಿಪೆಂ"

ಹೀಗೆ ಶ್ರೀರಾಮ ಪಟ್ಟಾಭಿಷೇಕಕ್ಕೂ ಶ್ರೀರಾಮಾಶ್ವಮೇಧಕ್ಕೂ ಶೇಷರಾಮಾಯಣವೇ ಮೂಲವೆಂದು ಸ್ಪಷ್ಟವಾಗುತ್ತದೆ. (ಶೇಷ ರಾಮಾಯಣವೆಂದರೆ ಪದ್ಮಪುರಾಣದ ಪಾತಾಳ ಖಂಡದಲ್ಲಿ ಬರುವ ರಾಮಾಯಣ). ಒಂದೇ ಮೂಲವನ್ನವಲಂಬಿಸಿ ಬೇರೆ ಬೇರೆ ಕವಿಗಳು ಬೇರೆ ಬೇರೆ ಕಾವ್ಯಗಳನ್ನು ರಚಿಸಬಹುದೆಂಬ ವಾದವನ್ನು ಹೂಡಬಹುದಾದರೂ 'ಶ್ರೀರಾಮ ಪಟ್ಟಾಭಿಷೇಕ' ಮತ್ತು 'ಶ್ರೀರಾಮಾಶ್ವಮೇಧ'ಗಳಲ್ಲಿ ಒಂದೇ ಬಗೆಯ ಮಾತುಗಳೂ ಅಭಿಪ್ರಾಯಗಳೂ ಇತರತ್ರವೂ ಬರುವುದರಿಂದ ಎರಡನ್ನೂ ಒಬ್ಬನೇ ಬರೆದನೆಂದು ಸಿದ್ಧಾಂತ ಮಾಡಬಹುದು. ಶ್ರೀರಾಮ ಪಟ್ಟಾಭಿಷೇಕದಲ್ಲಿ 'ಶ್ರೀಲೋಲನಭ್ಯುದಯ ಚಾರಿತ್ರಮಂ ವರ್ಣಿಸಲ್ ಸಾಲದೀ ನಾಲಗೆಗಳೆಂಬುದೊಂದೇ ಚಂಚಲಂ' ಎಂದು ಶೇಷನು ಹೇಳಿದಂತೆ ರಚಿತವಾದ ಮಾತು ಶ್ರೀರಾಮಾಶ್ವಮೇಧದಲ್ಲಿ ಅಗಸ್ತ್ಯನ ಬಾಯಿಯಿಂದ ಹೇಗೆ ಬರುವುದೆಂಬುದನ್ನು ನೋಡಬಹುದು. 'ಇರ್ಚ್ಛಾಸಿರ ನಾಲಗೆಯಿರ್ದುಮೀ ರಾಮರಾಜ್ಯಮಂ ಸೇಸಂ ಬಣ್ಣಿಸಲಾರ್ತ ನಿಲ್ಲಂ' ಎರಡು ಸಾವಿರ ನಾಲಗೆಯಿದ್ದೂ ಮಹಾಶೇಷನಿಗೆ ವರ್ಣಿಸಲು ಸಾಧ್ಯವಾಗಿಲ್ಲವೆಂದು ಭೂತಕಾಲದ ಪ್ರಯೋಗವಿರುವುದರಿಂದಲೇ ಶ್ರೀರಾಮಪಟ್ಟಾಭಿಷೇಕವನ್ನು ಬರೆದ ಬಳಿಕ ಅದೇ ಕವಿ ಶ್ರೀರಾಮಾಶ್ವಮೇಧವನ್ನು ಬರೆದನೆಂದು ಗ್ರಹಿಸಿಕೊಳ್ಳಬಹುದು. ಶ್ರೀರಾಮನು ರಾವಣ ಕುಂಭಕರ್ಣಾದಿಗಳ ಜನ್ಮಾದಿ ವೃತ್ತಾಂತವನ್ನು ಹೇಳಬೇಕೆಂದು ಕೇಳಿದಾಗ ಅಗಸ್ತ್ಯನು ಆಡುವ ಮಾತಿನಲ್ಲಿ 'ಎನಗರಿವು, ನಿನಗೆ ಬಿನದಂ' ಎಂಬ ಸೊಲ್ಲಿಗೂ ವಾತ್ಸ್ಯಾಯನನೊಡನೆ ಶೇಷನು ಕಥೆ ಹೇಳಲುಪಕ್ರಮಿಸುವಾಗ 'ನಿನಗನುಭವಂ ತನಗೆ ತೋಷಮೆ'ಂಬ ಸೊಲ್ಲಿಗೂ ಹೋಲಿಕೆ ತೋರುವುದರಿಂದಲೂ ಎರಡು ಕೃತಿಗಳೂ ಏಕಕರ್ತೃಕವೆಂದು ಹೇಳಲಡ್ಡಿಯಿಲ್ಲ. ಉಳಿದ ಆಂತರಿಕ ಸಮಾನತೆಗಳನ್ನು ಪರಿಶೀಲಿಸಿದುದನ್ನು ಇನ್ನಷ್ಟು ದೃಢಪಡಿಸಬಹುದಾದರೂ ಪ್ರಕೃತ ಈ ವಿಷಯವನ್ನು ಇಲ್ಲಿಗೇ ಕೊನೆಗೊಳಿಸಿ ಬೇರೆ ವಿಷಯಗಳನ್ನು ಪರಿಶೀಲಿಸಬಹುದು.

ಶ್ರೀರಾಮಾಶ್ವಮೇಧದಲ್ಲಿ ಕಥಾಮುಖವೆಂಬ ಹೆಸರಿನ ಪ್ರಥಮಾಶ್ವಾಸದಲ್ಲಿ ಮುದ್ದಣನು "ಶ್ರೀರಾಮಂ ಅಶ್ವಮೇಧಮಂ ಕಯ್ಕೊಂಡನೆಂಬ" ಕತೆಯನ್ನು "ಆವ

ಧಾಟಿಯೊಳ್ ಪೇಳ್ವೆಂ; ಪದ್ಯದೊಳ್ ಪೇಳ್ವೆನೋ ಗದ್ಯದೊಳ್ ಪೇಳ್ವೆನೋ ?" ಎಂದು ಮನೋರಮೆಯೊಡನೆ ಪ್ರಶ್ನಿಸಿದಾಗ ಅವಳು "ಪದ್ಯಂ ವದ್ಯಂ; ಗದ್ಯಂ ಹೃದ್ಯಂ. ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು" ಎನ್ನುತ್ತಾಳಷ್ಟೆ. ಇದರಿಂದ ಮುದ್ದಣನು ಪದ್ಯವನ್ನು ವಧ್ಯವೆಂದು ಧಿಕ್ಕರಿಸಿದ್ದಾನೆಂದೂ ಹೃದ್ಯವಾದ ಗದ್ಯವನ್ನೇ ಶ್ರೀರಾಮಾಶ್ವಮೇಧಕ್ಕೆ ಅಳವಡಿಸಿಕೊಂಡಿದ್ದಾನೆಂದೂ ಒಂದು ಪಕ್ಷದವರ ವಾದವಾದರೆ, ಇನ್ನೊಂದು ಪಕ್ಷದವರು ಮನೋರಮೆಗೆ ಗದ್ಯವು ವಧ್ಯವಾಗಿ ಕಂಡಿತೆಂದೂ ಮುದ್ದಣನಿಗೆ ಹಾಗಲ್ಲವೆಂದೂ ಹೇಳಿ ಶ್ರೀರಾಮಾಶ್ವಮೇಧದಲ್ಲಿ ಅಲ್ಲಲ್ಲಿ ಪೂರ್ಣ ಪದ್ಯಗಳನ್ನೋ ಪದ್ಯ ಖಂಡಗಳನ್ನೋ ಕಾಣಬಹುದೆಂದು ತೋರಿಸಿಕೊಡುತ್ತಾರೆ. ಮಾತ್ರವಲ್ಲ, ಗದ್ಯದಲ್ಲೇ ಬರೆಯಬೇಕೆಂದು ಆತನ ಗುರುಗಳೇ ಹೇಳಿದರೆಂದೂ ಬರೆದುದಿದೆ. ಈ ವಾದಗಳ ಸಾಧುತ್ವಾಸಾಧುತ್ವವನ್ನು ಶ್ರೀರಾಮಪಟ್ಟಾಭಿಷೇಕದ ಗಾಢವಾದ ಅಧ್ಯಯನದಿಂದ ಮುಂದೆ ವಿವೇಚಿಸಲಾಗುವುದು.

ಈಗ, ಮೊತ್ತಮೊದಲಾಗಿ ಶ್ರೀರಾಮ ಪಟ್ಟಾಭಿಷೇಕದ ನಾಂದೀ ಸಂಧಿಯ ಒಂಬತ್ತು ವಾರ್ಧಕ ಷಟ್ಪದಿಗಳ ಆದಿಯಲ್ಲಿ "ಶ್ರೀರಾಮಚಂದ್ರಾಯ ನಮಾಮಿ" ಎಂಬಕ್ಷರಗಳಿರುವಂತೆ ಗ್ರಂಥಿತವಾಗಿದೆಯಷ್ಟೆ. ಈ ಸಂಸ್ಕೃತ ವಾಕ್ಯವು ಸಂಸ್ಕೃತವೈಯಾಕರಣರ ದೃಷ್ಟಿಯಿಂದ ಶುದ್ಧವಾಗಿಲ್ಲ. ಏಕೆಂದರೆ ಅವರ ಪಾಂಡಿತ್ಯದ ನಿಕಷದಲ್ಲಿ "ಶ್ರೀರಾಮಚಂದ್ರಾಯ ನಮಃ" ಎಂದಾಗಲಿ "ಶ್ರೀರಾಮಚಂದ್ರಂ ನಮಾಮಿ" ಎಂದಾಗಲಿ ಇರಬೇಕು. ಕೆಲವರು, ಅನ್ಯತ್ರ "ನಮಾಮಿ" ಎಂಬ ಕ್ರಿಯಾಪದವಿರುವಲ್ಲಿ ಚತುರ್ಥೀ ವಿಭಕ್ತಿಯು ಬರುತ್ತದೆ; ಆದುದರಿಂದ "ಶ್ರೀ ರಾಮಚಂದ್ರಾಯ ನಮಾಮಿ" ಎಂಬ ಪ್ರಯೋಗವೂ ಸರಿ ಎನ್ನುವುದಿದೆ. ಆದರೆ ವ್ಯಾಕರಣ ದೃಷ್ಟಿಯಿಂದ ಇಂತಹ ಪ್ರಯೋಗವು ಸಾಧುವೆಂದು ಹೇಳುವಂತಿಲ್ಲ. ಕೆಲವರ ಅಲ್ಪಜ್ಞಾನ ಅಥವಾ ಅಜ್ಞಾನ ಅಥವಾ ಪ್ರಮಾದದಿಂದಾಗಿ ಇಂತಹ ಅಪಪ್ರಯೋಗ ಪ್ರವೇಶಿಸಿಕೊಂಡಿದ್ದರೂ ಇರಬಹುದು; ಇಲ್ಲವೆ ಛಂದಸ್ಸಿಗಾಗಿ "ಅಪಿ ಮಾಷಂ ಮಷಂ ಕುರ್ಯಾತ್" ಎಂಬಂತೆ ಪ್ರಯೋಗವು ತಪ್ಪೆಂದು ತಿಳಿದಿದ್ದರೂ ರೀತಿ ಬಳಸಿರಬಹುದು. ಎಂದಮೇಲೆ ಮುದ್ದಣನು ಸಂಸ್ಕೃತ ಪ್ರಯೋಗವನ್ನು ಶುದ್ಧವಾಗಿಯೇ ಬಳಸಿದ್ದಾನೆಂದು ಹೇಳಿದರೆ ಬರಿಯ ಅಭಿಮಾನದ ಮಾತಿರಬಹುದು. ಆದರೆ ಆ ರೀತಿಯ ಚಮತ್ಕಾರವನ್ನಾದರೂ ತರುವ ಪ್ರಯತ್ನ ಶ್ಲಾಘ್ಯವಾಗಿಯೇ ಇದೆ ಎಂದು ಹೇಳಿದರೆ ಮುದ್ದಣನ ಪದ್ಯದ ಕುರಿತು ಯಥಾರ್ಥವನ್ನೇ ಆಡಿದಂತಾಗುತ್ತದೆ.

ಪೀಠಿಕಾ ಸಂಧಿಯಲ್ಲಿ ಕವಿ ಮತ್ತು ವ್ಯಾಪಾರಿ ಹೇಗಿರಬೇಕೆಂದು ಹೇಳುವ – ಇನ್ನೊಂದು ಮಾತಿನಲ್ಲಿ ಹೇಳುವುದಿದ್ದರೆ ಕವಿಯನ್ನು ವ್ಯಾಪಾರಿಯೊಡನೆ ಸಮೀಕರಿಸುವ – ಪದ್ಯವು ಸಾಮಾನ್ಯವಾಗಿ ಇತರರಾರೂ ಬಳಸದ ವಿಷಯವೆಂದೇ ತೋರುತ್ತದೆ. ಆ ಪದ್ಯವು ಹೀಗಿದೆ :

ಮೂಲವಳಿಸದೆ ವೃದ್ಧಿಯನೆ ಬಹುಪದಾರ್ಥಕನು
ಕೂಲಮಂ ಗೆಯ್ದು ಗುಣಶೇಷಗಳ ಭೇದಿಸುತೆ

ಕಾಲಕರ್ಮಗಳ ಬಿಡದನುಸರಿಸಿ ನಿತ್ಯಕರ್ತೃಕ್ರಿಯೆ ವಿಭಕ್ತಿಗಳೊಳು
ಮೇಲೆನಿಸಿ ಸತ್ಕೃತಿಯೆಸಗೆ ಮಾನ್ಯನಹನಂತೆವೋಲೆಸೆಯೆ ಮೃದುವಚನ ಚಯದಿಂದೆ
ಸಂತತಂ
ಮೇಲದಜೊಳೇಕವಚನಕ್ರಮವ ಪಿಡಿದಿರಲ್ಕವನ ಮತಿ ವಿಸ್ತರಿಪುದು

ವ್ಯಾಪಾರಿ ಮೂಲ ಧನವನ್ನು ಅಳಿಸಬಾರದು ಹೇಗೋ ಹಾಗೆ ಕವಿ ಮೂಲ ಕಥೆಯನ್ನು ಅಳಿಸಬಾರದು. ವ್ಯಾಪಾರಿ ವೃದ್ಧಿಯನ್ನು – ಮೂಲ ಧನಕ್ಕೆ ತಕ್ಕಷ್ಟು ಬಡ್ಡಿಯನ್ನು – ಬಯಸುವಂತೆ ಕವಿಯೂ ಕಥಾ ವೃದ್ಧಿಯನ್ನು ಬಯಸಬೇಕಾಗಿದೆ. ವರ್ತಕನು ನಾನಾ ಪದಾರ್ಥ – ಬಗೆ ಬಗೆಯ ವಸ್ತು ಸಮೂಹಗಳಿಗೆ ಅನುಕೂಲತೆಯನ್ನೊದಗಿಸಬೇಕಾದವನಾದರೆ, ಕವಿ ಪದಗಳಿಗೆ ಅನೇಕಾರ್ಥಗಳನ್ನು ಒದಗಿಸಿಕೊಳ್ಳಬೇಕು. ಇತರರಿಂದ ಸಾಲ ಪಡೆದುದನ್ನು ಇಲ್ಲದಂತೆ ಮಾಡುವ – ತೀರಿಸುವ – ವರ್ತಕನಂತೆ ಕವಿ ಅನ್ಯ ಕವಿಗಳಿಂದ ವಸ್ತು ಭಾವ ಮುಂತಾದವುಗಳನ್ನು ಪಡೆದಿದ್ದರೂ ಅವುಗಳನ್ನು ಸ್ವತಂತ್ರ ಮಾರ್ಗಾವಲಂಬಿಯಾಗಿ ಎರವಲು ಪಡೆದವುಗಳನ್ನಾಗಿ ಮಾಡದೆ ಇರಬೇಕು. ವಣಿಜನಿಗೆ ವಸ್ತು ಶೇಖರಣ, ಸಾಲ ಪಡೆಯುವಿಕೆ, ಇತ್ಯಾದಿಗಳನ್ನು ಕಾಲಕ್ಕೆ ತಕ್ಕಂತೆ ಮಾಡುವ ಅವಶ್ಯಕತೆಯಿರುತ್ತದೆ; ಕವಿಗೆ ಕೃತಿಯಲ್ಲಿ ಕಾಲಾನುಗುಣವಾದ, ಎಂದರೆ ಮೊದಲು ನಡೆದ ಘಟನೆಯನ್ನು ಮೊದಲು, ಮತ್ತೆ ನಡೆದ ಘಟನೆಯನ್ನು ಮತ್ತೆ ಎನ್ನುವ ರೀತಿಯ ರಚನೆಯನ್ನು ಮಾಡಬೇಕಾಗುತ್ತದೆ. ವ್ಯಾಪಾರಿಗೆ ಕರ್ತೃತ್ವದ ಕ್ರಿಯೆಯಲ್ಲಿ ಒಡೆಯ ಆಳು ಇತ್ಯಾದಿ ಸ್ಥಾನಗಳನ್ನು ತನ್ನಲ್ಲಿಯೇ ವಿಭಜಿಸಿಕೊಂಡು ಮುನ್ನಡೆಯನ್ನು ಸಾಧಿಸಬೇಕಾದರೆ ಕವಿ ಯಾವಾಗಲೂ ಕರ್ತೃ – ಕರ್ಮ – ವಿಭಕ್ತಿಗಳನ್ನು ಸರಿಯಾಗಿ ಪ್ರಯೋಗಿಸ–ಬೇಕಾಗುವುದು. ಒಳ್ಳೆಯ ಕಾರ್ಯವನ್ನು ಮಾಡಿದರೆ ವ್ಯಾಪಾರಿ ಮಾನ್ಯನಾಗುವಂತೆ, ಕವಿಯೂ ಸತ್ಕೃತಿಯನ್ನು – ಉತ್ತಮ ಕಾವ್ಯವನ್ನು – ರಚಿಸಿದರೆ ಮನ್ನಣೆಗೆ ಅರ್ಹನಾಗುತ್ತಾನೆ. ಹಿತಮಿತವಾದ ಮಾತು ವ್ಯಾಪಾರಿಗೂ ಬೇಕು, ಕವಿಗೂ ಅವಶ್ಯ. ನಾಲಗೆ ಎರಡಾಗದಂತೆ ಮಾತಾಡುವ ವ್ಯಾಪಾರಿ ಮೇಲ್ಮೆವಡೆವಂತೆ, ಕವಿ ಒಂದೇ ಶೈಲಿಯ ವಚನವಿರಚನೆ ಮಾಡಿದರೆ ಮೇಲ್ಮೆವಡೆಯುತ್ತಾನೆ. – ಇದು ಮೇಲಿನ ಪದ್ಯದ ಸಾಮಾನ್ಯವಾದ ಅರ್ಥ. ಕನ್ನಡದಲ್ಲಿ 'ಸೆಟ್ಟಿ ಬಿಟ್ಟಲ್ಲೇ ಪಟ್ಟಣ' ಎಂಬೊಂದು ನಾಣ್ನುಡಿಯಿದೆಯಷ್ಟೆ ವ್ಯಾಪಾರಿ ಬೀಡು ಬಿಟ್ಟ ಕಡೆಯಲ್ಲಿ, ಅಲ್ಲಿಗೆ ತಮ್ಮ ಅವಶ್ಯಕತೆಗಳನ್ನು ಪಡೆದುಕೊಳ್ಳಲು ಬಂದು ಹೋಗುವವರು ಕ್ರಮವಾಗಿ ಹೆಚ್ಚಾಗುತ್ತಾ ಬಂದು ಕೊನೆಗೆ ಒಂದು ಪಟ್ಟಣವೇ ನಿರ್ಮಾಣವಾದಂತಾಗುತ್ತದೆ. ಅದರಂತೆ ಸತ್ಕವಿ ತನ್ನ ಸುತ್ತಲೂ, ತನ್ನ ಸುಂದರ ಕಾವ್ಯ ರಚನೆಯಿಂದ, ಜನರ ಹೃದಯಾಲ್ಹಾದಕರವಾಗುವುದರಿಂದ, ಅನೇಕರು ನೆರೆಯುವಂತೆ ಮಾಡಬಲ್ಲನೆಂದು ಇದರಿಂದ ಸೂಚ್ಯವಾಗುತ್ತದೆ. ಅಂತೂ, ಕವಿಯನ್ನು ವೈಶ್ಯನಿಗೆ ಹೋಲಿಸಿದುದು ಅಪೂರ್ವವಾಗಿದ್ದು ಕವಿಯ ಕಲ್ಪನೆಯ ಹೊಳಹನ್ನು ಕಾಣಿಸುತ್ತದೆನ್ನಬಹುದು.

ಕವಿಯ ಬುದ್ಧಿ ಚಮತ್ಕಾರವು ಇನ್ನೊಂದು ರೀತಿಯಲ್ಲಿಯೂ ಇದರಲ್ಲಿ ಕಂಡು ಬರುತ್ತದೆ :– ಆರಂಭದಲ್ಲಿ ನಾಂದೀ ಸಂಧಿ, ಅನಂತರ ಪೀಠಿಕಾ ಸಂಧಿ ಎಂದು ವಿಂಗಡಿಸಿದ್ದು ಅವೆರಡೂ ಭಿನ್ನ ಸಂಧಿಗಳೇ ಅಥವಾ ಒಂದೇ ಸಂಧಿಯೊಳಗಣ ಸಂಧಿ ಖಂಡವೇ ಎಂಬುದು ಸ್ಫುಟವಾಗಿ ಗೊತ್ತಾಗುವುದಿಲ್ಲ. ಇವೆರಡೂ ಭಿನ್ನ ಸಂಧಿಗಳೆಂದು ಕಾಣುವಂತೆ ಮುಂದಣ ಸಂಧಿಯನ್ನು ಮೂರನೆಯ ಸಂಧಿಯೆನ್ನುವಂತೆ ತೋರಿಸಲಾಗಿದೆ. ಹಾಗಿಲ್ಲದಿರುತ್ತಿದ್ದರೆ ನಾಂದೀ ಸಂಧಿಯನ್ನೂ ಪೀಠಿಕಾ ಸಂಧಿಯನ್ನೂ ಒಂದೇ ಸಂಧಿಯೆನ್ನಬೇಕಾಗುತ್ತಿತ್ತು. ಮೂರನೆಯ ಸಂಧಿಯಲ್ಲಿ "ಐದು ಪದ್ಯಗಳು ಪಾತವಾಗಿ ಹೋಗಿವೆ" ಎಂಬ ಭ್ರಮೆಯನ್ನು ಹುಟ್ಟಿಸುವಂತೆ ಆರನೆಯ ಪದ್ಯದಿಂದ ಕೃತಿಯನ್ನು ಆರಂಭಿಸಲಾಗಿದೆ. ಇದರಿಂದ ಮುದ್ದಣನು ಇತರ ಕೃತಿಗಳ ವಿಷಯದಲ್ಲಿ ತನ್ನ ಕರ್ತೃತ್ವವನ್ನು ಮರೆಮಾಡಲು ಪ್ರಯತ್ನಿಸಿದ ಪದ್ಧತಿಯನ್ನು ಇಲ್ಲಿಯೂ ಬಿಡಲಿಲ್ಲ ಎಂದು ಊಹಿಸಬಹುದು.

'ಶ್ರೀರಾಮ ಪಟ್ಟಾಭಿಷೇಕ'ದ ವಸ್ತು ಬಹಳ ಕಿರಿದು. ಮೂಲದಲ್ಲಿ ಐದು ಅಧ್ಯಾಯಗಳಲ್ಲಿ ಸುಮಾರು ಇನ್ನೂರು ಶ್ಲೋಕಗಳಲ್ಲಿ ಪೂರೈಸುವ ಕಥಾವಸ್ತುವನ್ನು ರಾಮಾನುಜೈಯಂಗಾರರು ಪೀಠಿಕೆಯಲ್ಲಿ ಹೀಗೆ ಕೊಟ್ಟಿದ್ದಾರೆ :– "ಶ್ರೀರಾಮನು ವಿಭೀಷಣನಿಗೆ ಲಂಕೆಯಲ್ಲಿ ಪಟ್ಟವನ್ನು ಕಟ್ಟಿ, ಪುಷ್ಪಕವಿಮಾನದಲ್ಲಿ ಪರಿವಾರದೊಡನೆ ಹೊರಟು, ನಂದಿ ಗ್ರಾಮದಲ್ಲಿ ಭರತನನ್ನು ಕಂಡು, ಆತನೊಡನೆ ಅಯೋಧ್ಯೆಗೆ ಬಂದು, ಪಟ್ಟಾಭಿಷಿಕ್ತನಾದನು." ಇದೇ ವಸ್ತು ಈ ಕನ್ನಡ ಕಾವ್ಯದಲ್ಲಿ ಐದು ಸಂಧಿಗಳಲ್ಲಿ ಪೂರ್ಣತೆಯನ್ನು ಪಡೆದಿದೆಯೆನ್ನಬಹುದು. ನಾಂದೀ ಸಂಧಿಯ ಒಂಬತ್ತು ಪದ್ಯ ಮತ್ತು ಪೀಠಿಕಾ ಸಂಧಿಯ ಹನ್ನೊಂದು ಪದ್ಯಗಳನ್ನು ಬಿಟ್ಟರೆ, ಒಟ್ಟು ಇರುವ ಪದ್ಯ ಸಂಖ್ಯೆ ಇನ್ನೂರ ಇಪ್ಪತ್ತೆರಡು. ಒಂದು ರೀತಿಯಲ್ಲಿ ತುಲನೆ ಮಾಡಿದರೆ ಮೂಲದಲ್ಲಿ ಆ ಐದು ಅಧ್ಯಾಯಗಳಿರುವ ಶ್ಲೋಕಗಳು ಇನ್ನೂರು ಇಪ್ಪತ್ತೆರಡು (ಐದನೆಯ ಅಧ್ಯಾಯದಲ್ಲಿ ರಾಮರಾಜ್ಯದ ವರ್ಣನೆಯೂ ಇದೆ. ಇದನ್ನು ನಾವು 'ಶ್ರೀರಾಮಾಶ್ವಮೇಧ'ದಲ್ಲಿ ಕಾಣಬಹುದು. ಆದುದರಿಂದ ಒಟ್ಟು ಪದ್ಯಗಳ ಸಂಖ್ಯೆ ಕಡಿಮೆಯೆಂದೂ ಹೇಳಬಹುದು) ಆದರೆ ಅನುಷ್ಟುಪ್ ಛಂದಸ್ಸಿನ ಶ್ಲೋಕಗಳು ಸುಮಾರು ಅಷ್ಟೆ ಸಂಖ್ಯೆಯ ವಾರ್ಧಕ ಷಟ್ಪದಿಗಳಾಗುವುದೆಂದರೆ ಅಸಾಧ್ಯವೇ ಸರಿ. ಮೂಲದಲ್ಲಿಲ್ಲದ ಸಮುದ್ರ ವರ್ಣನೆ ಇತ್ಯಾದಿಗಳು ಇದರಲ್ಲಿ ಬಂದಿರುವುದರಿಂದಲೇ ಈ ಕೃತಿ ಈ ರೀತಿಯಾಗಿದೆ. ಇದು ಕವಿಯ ಪ್ರತಿಭೆ, ಕಲ್ಪನಾ ಶಕ್ತಿಗಳ ದ್ಯೋತಕ ಚಿಹ್ನೆ ಎನ್ನಬಹುದು.

'ಶ್ರೀರಾಮಪಟ್ಟಾಭಿಷೇಕ'ದಲ್ಲಿ ಮುದ್ದಣನಿಗಿರುವ ಶಬ್ದಪ್ರಿಯತೆ ಪ್ರಾಸಾನುಪ್ರಾಸಯಮಕಾದಿ ಶಬ್ದಾಲಂಕಾರ ಪ್ರೀತಿ ಅಲ್ಲಲ್ಲಿ ಎದ್ದು ತೋರುತ್ತದೆ. ಹೆಚ್ಚಿನ ಕವಿಗಳಲ್ಲಿ ಈ ಗುಣ (ದೋಷ) ಇದ್ದೇ ಇದೆಯಾದರೂ ಮುದ್ದಣನ ಮನಸ್ಸು ಆ ಕಡೆ ಒಲೆದುದು ಇತರರಿಗಿಂತ ಹೆಚ್ಚು ಎಂದೇ ತೋರುತ್ತದೆ. ಈ ಒಂದು ಪದ್ಯವನ್ನು ನೋಡಬಹುದು :–

ತೊಟ್ಟಿಲೊಳ್ ಪುಟ್ಟಮಗು ಪಟ್ಟಿರಲ್ ಮುಟ್ಟಿ ಮೈ
ನಿಟ್ಟಿಸುತಮೊಟ್ಟರೆಂದೊಟ್ಟಿಗವನಿಟ್ಟವನ
ಬಿಟ್ಟು ಪಣೆಗಿಟ್ಟು ಪೊಂಬೊಟ್ಟನೆದೆಗಟ್ಟಿಯಾದಿಟ್ಟೆ ಬಿಣ್ಪಟ್ಟಮೊಲೆಗೆ
ತೊಟ್ಟುಡುಗೆ ಪಟ್ಟೆ ನೆರೆದುಟ್ಟು ಕೊಂಡೊಟ್ಟಜದ
ಪಟ್ಟಣಿಗರಿಟ್ಟೆಡೆಯ ಬಟ್ಟೆಯಂ ಮೆಟ್ಟಿ ಬರೆ
ದಿಟ್ಟಿಗೆಡೆಗೊಟ್ಟು ಪಿಂದಟ್ಟೊರ್ವಳಟ್ಟಸದಿ ಕೊಟ್ಟಿ ಪೊರಮಟ್ಟಳಾಗ
(ಸಂ ೪ – ಪ ೯)

ಅನುಪ್ರಾಸಕ್ಕೆ ಅನೇಕರು ಆಯ್ದುಕೊಳ್ಳುವ ಪದ್ಯವಿದು. ಇದರಲ್ಲಿ ಬರುವ ಅನುಪ್ರಾಸವೇನೋ ಕರ್ಣರಂಜಕವಾಗಿದೆ; ಇದು ಒಂದು ಅಲಂಕಾರವೂ ಹೌದು. ಶ್ರೀರಾಮನನ್ನು ಕಾಣುವ ತವಕವು ಗೃಹಿಣಿಯಲ್ಲೆಷ್ಟರ ಮಟ್ಟಿಗಿದೆಯೆಂಬ ಭಾವವನ್ನು ಇದರಲ್ಲಿ ಪ್ರಕಟಿಸಲಾಗಿದೆಯೆಂದೂ ಸಾಧಿಸಬಹುದು. ಆದರೆ ಪ್ರಾಸಾನುಪ್ರಾಸಗಳ ಈ ನಿಬಿಡಾರಣ್ಯದಲ್ಲಿ ಅರ್ಥವನ್ನು ಗ್ರಹಿಸಿ ರಸಾಸ್ವಾದನ ಮಾಡುವುದು ಅಷ್ಟೇನೂ ಸುಲಭ ಸಾಧ್ಯವಲ್ಲ. ಬರಿಯ ಶಬ್ದ ಮಾಧುರ್ಯದಿಂದ ಅರ್ಥ ಮಾಧುರ್ಯವುಂಟಾಗುವುದೂ ಇಲ್ಲ. ಎಂದ ಮೇಲೆ ಇದನ್ನು ಚಿತ್ರಕವಿತೆಗೆ ಉದಾಹರಣೆಯಾಗಿ ಕೊಡಬಹುದಾಗಿದೆ. ಇದೇ ರೀತಿ ಶ್ರೀರಾಮಾಶ್ವಮೇಧದಲ್ಲಿಯೂ ಕವಿ ಶಬ್ದಾಡಂಬರಕ್ಕೆ ಮೋಹಗೊಂಡು ಅರ್ಥ ಕ್ಲಿಷ್ಟತೆಯನ್ನು ತಂದೊಡ್ಡುತ್ತಾನೆಂಬುದನ್ನು ಈ ಕೆಳಗಣ ಉದ್ಧರಣದಿಂದ ಮನಗಾಣಬಹುದು.

"ಮತ್ತಮಲ್ಲಿ ರನ್ನಗಲ್ಲೆಡೆಯ ಮಲ್ಲ ನಲ್ವಾಸಿನೊಳ್ ಚೆಲ್ಲದಿಂ ನಲ್ಲಳ್ವೆರಸು ನಿಲ್ಲದೆ ಕುಳ್ಳಿರ್ದು ಮೆಲ್ಲಮೆಲ್ಲನೆ ಲಲ್ಲೆಗರೆವ ಬಲ್ಲತನದ ಸೊಲ್ಲಸೊಗದ ಬುಲ್ಲಣೆಯ ಕೊಲ್ಲಣದೊಳೆಸೆದುಮಲ್ಲಿಗಲ್ಲಿಗೆ ಮಲ್ಲಟೆದಿರಿವ ಪಲ್ಲ ಬಲ್ಲುಲಿಗೆ ಕಲ್ಲದಾಡುವ ತೆಲ್ಲಯಿಸಿದ ಮಲ್ಲಗಿಳಿಯ ಸವಿನುಡಿಗೆ ಪಲ್ಲಟದ ಫಲ್ಲಣೆಯಲ್ಲಣೆಯ ಗಂಡು ಗೋಗಿಲೆಯಿಂಚರಕ್ಕೆ ಪಲ್ಲಣಿಯ ಬೆಲ್ಲಂಗೋಲ್ವಿಲ್ಲನ ಮಲ್ಲಿಗೆ ಸರಲ ಜಲ್ಲಣೆಗೆ ತಲ್ಲಣಂಗೊಂಡು........." (ಆಶ್ವಾಸ ೧೦)

ಇಲ್ಲಿ ಬರುವ ಎಷ್ಟೋ ಪದಗಳಿಗೆ ಕೋಶದ ನೆರವಿನಿಂದಲೂ ಅರ್ಥ ಮಾಡುವುದು ದುಸ್ಸಾಧ್ಯವೆನ್ನಿಸುತ್ತದೆ. ಈ ದುರವಗಾಹತೆಗೆ ವಾಚಕರ ಪಾಂಡಿತ್ಯದ ಕೊರತೆಯೇ ಕಾರಣವೆಂದು ಹೇಳಬಹುದಾದರೂ ಸ್ವಾರಸ್ಯವನ್ನು ಸವಿಯುವಲ್ಲಿ ಭಂಗವಿಲ್ಲದಿಲ್ಲವೆಂಬುದನ್ನು ರಸಿಕರೆಲ್ಲರೂ ಬಲ್ಲರು. ರಸಗ್ರಹಣಕ್ಕೆ ಪೋಷಕವಾಗುವಂತಹ ಅಲಂಕಾರಗಳಿದ್ದರೆ ಅವೆಲ್ಲವೂ ಪರಿಗ್ರಾಹ್ಯಗಳಾಗುತ್ತವೆಯೆಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಮೂರನೆಯ ಸಂಧಿಯ ನಲ್ವತ್ತಾರನೆಯ ಪದ್ಯವು ಶಬ್ದಾಲಂಕಾರಯುಕ್ತವಾಗಿದ್ದೂ ಸುಂದರವಾಗಿದೆಯೆಂಬುದನ್ನು ಅಂಗೀಕರಿಸಬಹುದು. ಆ ಪದ್ಯವು ಹೀಗಿದೆ :–

ತಪ್ಪಲೊಳ್ ಕಲ್ಲುರಳೆ ಗಿರಿಯುರುಳೆ ತಿರೆ ಪೊರಳೆ
ತೆಪ್ಪ ಬಾನೊಳ್ ಪಾರೆ ಕಡಲಾರೆ ನಿಲಲಾರೆ
ಒಪ್ಪನೀ ಪೊಳ್ತಿಗೆಲೆ ಭರತ ನೆಲೆಯರಿತು ಸಲೆ ಸಂತಸದೆ ಪೋಪುದೆಂದು
ಒಪ್ಪುವಂತೆನ್ನ ಕೈದಟ್ಟ ಪುರಕಟ್ಟ ತೆರ
ಳಿಪ್ಪ ರಾಮಂ ಬಾರದಿಹ ಕಾರಣಂ ತೋರ
ದಿಪ್ಪುದಿನ್ನುಂ ಕಾಣೆ ತನ್ನಾಣೆಗಿನ್ನೂಣೆಯಂ ತರ್ಪನೆಂತೊ ತಿಳಿಯೆಂ.

ಶ್ರೀರಾಮನ ಸತ್ಯ ಪ್ರತಿಜ್ಞೆ, ಭರತನ ತವಕ ಮುಂತಾದವುಗಳನ್ನು ಚಿತ್ರಿಸುವಲ್ಲಿ ಈ ಪದ್ಯವು ಸಾರ್ಥಕವಾಗಿದೆ. ಇದಕ್ಕೆ ಈ ಪದ್ಯದಲ್ಲಿ ಬರುವ ಶಬ್ದಾಲಂಕಾರಗಳ ಜೊತೆಗೆ ಲಲಿತವಾದ ಪದ ಪ್ರಯೋಗವೂ ಕಾರಣವಾಗಿದೆ. ಹೀಗೆ, ಸಹಜವಾಗಿ ಬರುವ ಯಮಕಾಲಂಕಾರಯುಕ್ತ ಪದ್ಯಗಳಲ್ಲಿ ಮಾಧುರ್ಯವು ಸ್ಫುಟವಾಗಿದ್ದರೂ ಕೆಲವೆಡೆ ಬಹು ಪ್ರಯಾಸದಿಂದ ಅರ್ಥಸಿದ್ಧಿಯನ್ನು ಮಾಡಿಕೊಳ್ಳಬೇಕಾದ ಪ್ರಸಂಗವೂ ಇದೆ. ಕವಿಗೆ ಪಾಂಡಿತ್ಯ ಪ್ರದರ್ಶನದ ಅಭಿಲಾಷೆಯಿರುವಂತೆ ಅಲ್ಲಲ್ಲಿ ಕಂಡುಬರುತ್ತದೆ ಎಂಬುದು ವಾಸ್ತವಾಂಶ. ಇವುಗಳಿಗೆಲ್ಲ ದೃಷ್ಟಾಂತಗಳನ್ನು ಕೊಡಹೋಗುವುದಕ್ಕಿಂತ ವಾಚಕರಿಗೇ ಅವುಗಳನ್ನು ಬಿಟ್ಟುಬಿಡುವುದು ಲೇಸು.

ಮೂಲದಲ್ಲಿ ಕೌಸಲ್ಯಾ ದೇವಿಯ ಕುತೂಹಲ, ತವಕ ಮುಂತಾದ ಭಾವನೆಗಳಿಗೆ ಹೆಚ್ಚಿನ ಸ್ಥಾನ ದೊರೆತಿದ್ದರೆ ಶ್ರೀರಾಮ ಪಟ್ಟಾಭಿಷೇಕದಲ್ಲಿ ಭರತನ ಭಕ್ತಿ ಕುತೂಹಲ ತವಕ ಮುಂತಾದ ಭಾವಗಳಿಗೆ ಹೆಚ್ಚಿನ ಸ್ಥಾನವನ್ನು ಕೊಡಲಾಗಿದೆ. ಈ ಮೊದಲೇ ಉದ್ಧರಿಸಿದ ಪದ್ಯವಲ್ಲದೆ ಬೇರೆ ಪದ್ಯಗಳಲ್ಲಿಯೂ ವಿವಿಧ ಭಾಗಗಳ ಸಮ್ಮಿಶ್ರಣವು ಕೃತಿಗೆ ಹೊಸ ಸೌಂದರ್ಯವನ್ನು ಕೊಡುತ್ತದೆ. ಆಂಜನೇಯನು ಭರತನಿಗೆ ಶ್ರೀರಾಮ ವೃತ್ತಾಂತವನ್ನು ತಿಳಿಸಿದ ಸಂದರ್ಭದ ಪದ್ಯವು ಹೀಗಿದೆ :–

ಪುಟ್ಟಿದುದು ಭಯಮೊರ್ಮೆಯಚ್ಚರಿಯದೊರ್ಮೆ ಮನ
ಗುಟ್ಟೊರ್ಮೆ ನಗೆಯೊರ್ಮೆ ಕಡುಪೊರ್ಮೆ ಹನುಮನಂ
ದಿಟ್ಟಿಸಲ್ ಸಟೆಯೊರ್ಮೆ ದಿಟಮೊರ್ಮೆ ಮುದಮೊರ್ಮೆ ಭರತಂಗೆ ನುಡಿಗೇಟೊಡ
ಜಿಟ್ಟೆಂತುಮಿರದೆ ಚಂಚಲಮನಿಂತೆಂದನೆಲೆ
ಕಟ್ಟಿದಿರೊಳ್ಕೈತಂದು ಮರಣೋನ್ಮುಖಂಗೆ ಸೊದೆ
ಗೊಟ್ಟು ಕಾವಂತೆ ನುಡಿ ಸೊದೆಯೊಳೆನ್ನಂ ಪೊರೆಯಲುಜ್ಜುಗಿಪೆ ನೀನಾವನೈ

(ಸಂ. ೪ – ಪ ೨)

ಭರತನಿಗೆ ಹನೂಮದ್ವಚನದಿಂದ ಭೀತಿ, ಆಶ್ಚರ್ಯ, ಮನೋವೇದನೆ, ವಿನೋದ, ಸ್ಥೈರ್ಯ ಮುಂತಾದ ಭಾವಗಳು ಏಕಕಾಲದಲ್ಲಿ ಮೊಳೆತು ಮಾಯವಾದುವೆನ್ನುವುದು ಎಷ್ಟು ಹೃದ್ಯವಾಗಿದೆಯೋ ಅಷ್ಟೆ ಸುಂದರವಾಗಿ ಭರತನ ಕಾತರದ ಚಿತ್ರವು ಮುಂದಣ ಪದ್ಯದಲ್ಲಿ ಬಂದಿದೆ :–

ದಿಟವೆ ನಂಬಲ್ಬಹುದೆ ರಾಘವನ ವಾರ್ತೆಯುಂ
ಕಟಕಿಯೇ ಮೇಣ್ಬರಿದೆ ಬಳಲಿಸದಿರಿಂತೆನಗ
ಕಟ ಕಂಡುದೆಲ್ಲಿ ನೀನವನೊಳನುಬಂಧಮೆಂತಾದುದೇನೆಸಗುತಿಹರು
ಅಟವಿಯಂ ಪೊರಟಿಹರೆ ಬಹರೆ ದಾರಿಯೊಳೇಂ ಪೊ
ರಟುದಿಲ್ಲವೇ ರಾಮನೊಳ್ಳಿತಾಗಿಹನೆ ಪ
ರ್ಯಟನದಿಂ ಬಾಡಿಹರೆ ಬರುತುಮಿರ್ಪರೆ ಬಹರೆ ಬಂದರೇ ಪೇಳೆಂದನು

(ಸಂ. ೪ – ಪ. ೩)

ಭರತನ ಭಕ್ತಿಭಾವವನ್ನು ಮುಂದೆ ಉದ್ಧರಿಸಿದ ಒಂದೇ ಒಂದು ಪದ್ಯದಿಂದಲೂ ಗ್ರಹಿಸಿಕೊಳ್ಳಬಹುದು :–

ಆಡಿದಂತಯ್ಯನಡವಿಗೆ ಪೋದುದರಿದಲ್ಲ
ಕಾಡೊಳ್ ತೊಳಲ್ದುದತಿಶಯಮಲ್ಲ ರಕ್ಕಸರ
ಕೂಡೆ ಕೈಗೈದುದಚ್ಚರಿಯಲ್ಲ ದೇವರ್ಕಳಂ ಪೊರೆಯೆ ದೊಡ್ಡಿತಲ್ಲ
ಖೋಡಿ ಪಾತಕಿ ಪಿಶುನನತಿಕೋಪಿ ಪಾಪಿ ಕುಲ
ಗೇಡಿ ಭ್ರಾತೃದ್ರೋಹಿ ತನ್ನೊಳೊರೆದಂತೆ ಕಾ
ಪಾಡಲಿಂತೈತಂದುದಿದುವೆ ಪಿರಿದೆಂದು ಕಾಲ್ಗೆರಗಿದಂ ರಘುರಾಮಗೆ

(ಸಂ. ೪ – ಪ. ೩೦)

ಶ್ರೀರಾಮನ ಪಿತೃವಾಕ್ಯ ಪರಿಪಾಲನ, ವನಸಂಚರಣ, ರಾಕ್ಷಸಹರಣ, ದೇವತಾ ಸಂರಕ್ಷಣ ಮುಂತಾದುವುಗಳೆಲ್ಲ ಅಷ್ಟು ಮಹತ್ವದವುಗಳೇ ಅಲ್ಲ; ಖೋಡಿ ಪಾತಕಿ ಪಿಶುನನತಿ ಕೋಪಿ ಪಾಪಿ ಕುಲಗೇಡಿ ಭ್ರಾತೃದ್ರೋಹಿ ಎನ್ನಿಸಿದ ತನ್ನಂತಹ ಅತ್ಯಲ್ಪನನ್ನು ಕಾಪಾಡಲು ಬಂದ ಶ್ರೀರಾಮನ ಭಕ್ತೋದ್ಧರಣ ಕಾರ್ಯವೆ ಅತಿ ಘನವಾದುದೆನ್ನುವುದು ಭರತನ ಪ್ರಪತ್ತಿಯನ್ನು ಯಥಾವತ್ತಾಗಿ ಚಿತ್ರಿಸುತ್ತದೆ. ಒಂದು ದೃಷ್ಟಿಯಿಂದ ಮುದ್ದಣನು ಭರತನಲ್ಲಿ ಆತ್ಮೌಪಮ್ಯವನ್ನು ಕಂಡನೆಂದರೂ ತಪ್ಪಾಗದು. ಏಕೆಂದರೆ ಶ್ರೀರಾಮಾಶ್ವಮೇಧದಲ್ಲಿ ಮುದ್ದಣ ಮನೋರಮೆಯರ ಸಂವಾದದಲ್ಲಿ, ಕವಿಗೆ ಶ್ರೀರಾಮನ ಮೇಲಿನ ಭಕ್ತಿ ಎಷ್ಟಿದೆಯೆಂದು ಸ್ಫುಟವಾಗುತ್ತದೆ :–

ಮನೋರಮೆ "ಉಳಿದೊಡಮಳಿದೊಡಂ ಬಟ್ಟೆದೋರಿಪ ರಸಭರಿತಂ ಚರಿತಂ" ತನಗೆ ಅಪೇಕ್ಷಿತ ಕಥಾವಸ್ತುವೆಂದು ಹೇಳಿದಾಗ ಮುದ್ದಣನು "ನಿನಗಾವ ರಸದೊಳಿಷ್ಟಂ ? ಶೃಂಗಾರರಸದೊಳೆ ? ವೀರರಸದೊಳೆ ? ಹಾಸ್ಯರಸದೊಳೆ ?" ಎಂದು ಕೇಳುತ್ತಾನೆ.

ಮನೋರಮೆ : ಆವ ರಸದೊಳೆಂದೊಡೇಂ ? ನವರಸದೊಳಂ

ಮುದ್ದಣಂ : ಅಂತಿರೆ ಮತ್ತಮಾ ಕತೆಯಾವುದು ?

ಮನೋರಮೆ : ರಾಮಾಯಣದೊಳೇನಾನುಮೊಂದು.

ಈ ಸಂವಾದದಲ್ಲಿ ರಾಮಾಯಣವು ಉಳಿದೊಡಂ ಅಳಿದೊಡಂ ಒಟ್ಟೈದೋರಿಪ (ನವ) ರಸಭರಿತವಾದ ಚರಿತವೆಂಬ ಖಚಿತಾಭಿಪ್ರಾಯವು ಕಂಡು ಬರುತ್ತದೆ. ಇದೂ ಅಲ್ಲದೆ ಕಥಾಂತ್ಯದಲ್ಲಿ ಬರುವ ಸಂವಾದವನ್ನು ಗಮನಿಸಬಹುದು :–

ಮನೋರಮೆ : ಅಂತಪ್ಪೊಡೆ ನೀ ಪೇಳ್ವ ನಲ್ಗತೆ ಮುಗಿಯೆವಂದುದು

ಮುದ್ದಣಂ : ಉಂ ! ಎಂತೆಂತೋ ರಗಳೆಯ ಪಾಳ್ಗತೆ ಕಡೆಗಂಡುದು

ಮನೋರಮೆ : ಚೀಃ ! ಶ್ರೀರಾಮ ಪುಣ್ಯಚರಿತಮಂ ಪಾಳ್ಗತೆಯೆಂದು ಇಳಿಕೆಯ್ದು ತೆಗಳ್ವ !

ಮುದ್ದಣಂ : ಶ್ರೀರಾಮ ಚರಿತಮನಿಳಿಸಿ ಕುಳಿಸಿ ನುಡಿದೆನಿಲಂ..

ಇಲ್ಲಿಯೂ ಶ್ರೀರಾಮಚರಿತವು ಪುಣ್ಯಚರಿತವೆಂದು ಮನೋರಮೆಯ ಬಾಯಿಯಿಂದ ಹೇಳಿಸಿ ತಾನೂ ಶ್ರೀರಾಮಚರಿತವನ್ನು ಇಳಿಸಿಲ್ಲವೆಂದು ಹೇಳುತ್ತಾನೆ. ಅವನು ಬರೆದುದಂತೂ ಮೂರೂ ರಾಮಾಯಣದ ಕಥೆಗಳನ್ನೇ ! ಅವನಿಗೆ ಶ್ರೀರಾಮನ ಮೇಲೆ ಅನನ್ಯ ಭಕ್ತಿಯೆಂಬುದು ಇದರಿಂದ ತಿಳಿಯುವುದು ಮಾತ್ರವಲ್ಲದೆ, ಶ್ರೀರಾಮಾಶ್ವಮೇಧದ ಸಪ್ತಮಾಶ್ವಾಸದ ಆರಂಭದಲ್ಲಿ ಅವನು – "ಶ್ರೀರಾಮಂ ಕಲ್ಲೆರ್ದೆಯನೆ ?....... ತಾಂ ಯಶೋಧನನಪ್ಪಿನಂ ಲೋಕಾಪವಾದ ಭೀತಿಗಡವಿಗಟ್ಟಿದನಲ್ಲದರಸಿಯೊಳೇಂ ಪಗೆಯೇ ?......... ಇಂತಿದನೆ ನೆನೆನೆನೆದಟಬುಂಬಂ ಪಲುಂಬಿದಂ" ಇತ್ಯಾದಿಯಾಗಿ ಹೇಳುವಲ್ಲಿ ತನ್ನ ಮನೋಭಾವಕ್ಕೆ ಕನ್ನಡಿ ಹಿಡಿದಿದ್ದಾನೆ. ಅದೇ ಭಕ್ತಿಭಾವವು ಶ್ರೀರಾಮ ಪಟ್ಟಾಭಿಷೇಕದ ಭರತನ ಚಿತ್ರಣದಲ್ಲಿಯೂ ಪ್ರತಿಬಿಂಬಿಸಿದೆ.

ಮೂಲ ಕಥೆಯಲ್ಲಿ ಕೌಸಲ್ಯೆಯ ಸ್ಥಿತಿ–ಗತಿ–ಮತಿಗಳನ್ನು ಚಿತ್ರಿಸಿದಂತೆ ಶ್ರೀರಾಮ ಪಟ್ಟಾಭಿಷೇಕದಲ್ಲಿ ಚಿತ್ರಿಸಿಲ್ಲ. ಎಂದರೆ ಅಲ್ಲಿ ಕೌಸಲ್ಯೆಗಿತ್ತ ಪ್ರಾಧಾನ್ಯವನ್ನು ಈ ಕೃತಿಯಲ್ಲಿ ಕುಗ್ಗಿಸಲಾಗಿದೆ. ಉಳಿದ ಜಾನಕಿ, ಸುಮಿತ್ರೆ, ಕೈಕೇಯಿ ಮುಂತಾದವರ ಪಾತ್ರ ಚಿತ್ರಣದಲ್ಲಿ ಕವಿ ಮೂಲದ ಭಾವವನ್ನು ಗ್ರಹಿಸಿ ಸಾಕಷ್ಟು ಶಾಂತವಾಗಿರುವಂತೆ ಕೈವಾಡವನ್ನು ತೋರಿಸಿದ್ದಾನೆ. ಭರತನ ವ್ಯಕ್ತಿತ್ವದ ಮುಂದೆ ಅವರೆಲ್ಲರ ಪಾತ್ರಗಳೂ ಸಾಕಷ್ಟು ರಮಣೀಯವಾಗಿ ಬಂದಿಲ್ಲವೆಂದೇ ಹೇಳಬಹುದು; ಶ್ರೀರಾಮನ ಪಾತ್ರವೂ ಅಲ್ಲಿ ಅತ್ಯುಜ್ವಲವಾದಂತಿಲ್ಲ. ಹಾಗೆಂದು ಆ ಭಾಗಗಳೆಲ್ಲ ನೀರಸವೆಂದು ತೆಗೆದು ಹಾಕುವಂತಿಲ್ಲ. ಶ್ರೀರಾಮನು ಕೈಕೇಯಿಯನ್ನು ಕಂಡ ಸನ್ನಿವೇಶ, ಕೌಸಲ್ಯೆಯನ್ನು ಕಂಡಾಗ ಶ್ರೀರಾಮನ ಗಾಂಭೀರ್ಯ–ಸ್ಥೈರ್ಯ ಇತ್ಯಾದಿಗಳು ಮನೋಜ್ಞವಾಗಿಯೇ ಇವೆಯೆಂಬುದನ್ನು ಕಂಡುಕೊಳ್ಳಬಹುದು.

ಶ್ರೀರಾಮ ಪಟ್ಟಾಭಿಷೇಕದಲ್ಲಿ ಮುದ್ದಣನು ಅಳವಡಿಸಿಕೊಂಡ ಛಂದಸ್ಸು, ಭಾಷೆ, ಶೈಲಿಗಳೆಲ್ಲ ಪೂರ್ವ ಪರಂಪರೆಯ ಪಥವಿಡಿದು ಸಾಗಿವೆ. ಸಮುದ್ರ

ವರ್ಣನೆ ಪೂರ್ವ ಪದ್ಧತಿಯಲ್ಲೇ ಇದ್ದರೂ ಕಡಲನ್ನು ಕಾಣದ ಕವಿಯ ವರ್ಣನೆಯಂತಿರದೆ ಅದನ್ನು ಸರಿಯಾಗಿ ಕಂಡು ಅದರ ವಿವಿಧ ಗುಣಸ್ವಭಾವಗಳನ್ನು ಮನೋಭೂಮಿಕೆಯಲ್ಲಿ ಮುದ್ರಿಸಿಕೊಂಡವನ ಸ್ಫೂರ್ತಕವಿತ್ವದಂತಿದೆ. ಅಲ್ಲಿ ಬರುವ ವಿವಿಧಾಲಂಕಾರಗಳು ಕಡಲನ್ನು ಪ್ರತ್ಯಕ್ಷೀಕರಿಸಲು ನೆರವಾಗುತ್ತವೆ. ಆದರೆ ಉಳಿದ ಕಡೆಯ ಕೆಲವು ಪದ್ಯಗಳಲ್ಲಿ ಸಂಸ್ಕೃತ ಪದಗಳೇ ತುಂಬಿ ಕಾವ್ಯ ಸರಸ್ವತಿಗೆ ಭಾರದ ತೊಡವಿನಂತೆ ತೋರುವುದೂ ಇದೆ. ಇದಕ್ಕೂ ಪೂರ್ವಾಚಾರ್ಯರ ಪಂಥಾನುಸರಣವೇ ಕಾರಣವೆನ್ನಬಹುದು. ಶ್ಲೇಷಾಲಂಕಾರವನ್ನು ಬಳಸುವಲ್ಲಿ ಸಂಸ್ಕೃತ ಪದಗಳು ನೆರವಾದಂತೆ ಕನ್ನಡ ಪದಗಳು ಆಗಲಾರವೆಂದು ಭಾವಿಸಿ ಕವಿ ಅಂತಹ ಸಂಸ್ಕೃತ ಪದಭೂಯಿಷ್ಠವಾದ ರಚನೆಯನ್ನು ಮಾಡಿದಂತಿದೆ. ಇದನ್ನು ದೋಷವೆಂದು ಧಿಕ್ಕರಿಸುವುದಲ್ಲವಾದರೂ ಗುಣವೆಂದು ಕೈಕೊಳ್ಳುವುದು ಕಷ್ಟವಾಗುತ್ತದೆ. ಶ್ರೀರಾಮಾಶ್ವಮೇಧದಲ್ಲಿಯೂ ಇದೇ ಬಗೆಯ ಪ್ರಯೋಗಗಳನ್ನು ಕಂಡು ಕವಿಯ ಪಾಂಡಿತ್ಯಕ್ಕೆ ತಲೆದೂಗಬಹುದು. ಏಕೆಂದರೆ ಸಾಮಾನ್ಯ ಜನತೆಗೂ ಅರ್ಥ ಕ್ಲಿಷ್ಟವಾದ ಪದ್ಯ ರಚನೆಯನ್ನು ಮಾಡುವ ಕವಿಯ ವಿಷಯದಲ್ಲಿ ಗೌರವ ಭಾವವಿದ್ದ ಕಾಲವೂ ಇತ್ತಷ್ಟೆ. ಇದನ್ನೇ ನಂಬಿಯೋ ಎಂಬಂತೆ ಮುದ್ದಣನು ತನ್ನ ಯಕ್ಷಗಾನ ಕೃತಿಯಾದ "ಕುಮಾರ ವಿಜಯ"ದಲ್ಲಿಯೂ ಇಂತಹ ಪ್ರಯೋಗಗಳನ್ನು ಮಾಡಿದ್ದಾನೆ; ಜನರನ್ನು ದಂಗುಬಡಿಸಿದ್ದಾನೆ ! ಸರಳವಾಗಿ, ಸಹಜವಾಗಿ ಬರುವ ಪದ್ಯಗಳು ಸುಂದರವಾಗಿ ಸಹೃದಯ ಹೃದಯಾಹ್ಲಾದಕಾರಿಗಳಾಗುತ್ತವೆಯೆಂಬುದಕ್ಕೆ ಕೂಡ ಶ್ರೀರಾಮ ಪಟ್ಟಾಭಿಷೇಕದಲ್ಲಿ ಉದಾಹರಣೆಗಳಿಲ್ಲದಿಲ್ಲ :

ತಾತಗಳಿವಂ ತಂದೆನಗ್ರಜನ ಪೊರಡಿಸಿದೆ
ಮಾತೆಯರ ಮುಳಿಸಿಗೆಡೆಯಾದೆ ಮೇಣ್ ಬಂಧುಗಳ
ಮಾತಿಗೊಳಗಾದೆ ಪರಿಜನಕೆ ಕೀಟಾದೆ ಪುರಜನರ ಬಿರುನುಡಿಗೆ ತಡೆದೆ
ಜಾತಿರಾಜರ ಪಳಿವನೊಳಕೊಂಡೆ ನಾನೀ ಧ
ರಾತಳವನಖ್ಯಾತಿಯಿಂ ಮಲಿನಗೆಯ್ದೆನೀ
ಪಾತಕಂ ಪೋಪುದೆಂತೆಂತಗ್ರಭವನ ಪದಕಮಲದರ್ಶನಮಪ್ಪುದೋ

ಇಂತಹ ಸರಳ ಸುಂದರ ಪದ್ಯಗಳು ಕಾವ್ಯದ ಆಸ್ವಾದ್ಯತ್ವವನ್ನು ಸುಟ್ಟಿ ತೋರಿಸುತ್ತವೆ; ಮೆಚ್ಚಿಸುತ್ತವೆ.

ಇಷ್ಟಾದರೂ ಮುದ್ದಣನು ಶ್ರೀರಾಮಾಶ್ವಮೇಧದಲ್ಲಿ ಮನೋರಮೆಯ ಮುಖದಿಂದ "ಪದ್ಯಂ ವದ್ಯಂ; ಗದ್ಯಂ ಹೃದ್ಯಂ" ಎಂದು ಹೇಳಿಸಿದ್ದಾನಷ್ಟೆ. ಇದರಿಂದ ಮುದ್ದಣನಿಗೆ ಆ ಕಾಲದ ಜನರ ಮನೋಭಾವದ, ಒಲವಿನ ಅರಿವಾಗಿತ್ತೆಂದೂ, ಅಂದಿನ ಜನತೆ ಪದ್ಯಕ್ಕಿಂತ ಹೆಚ್ಚಾಗಿ ಗದ್ಯವನ್ನೇ ಮೆಚ್ಚುತ್ತಿದ್ದರೆಂದೂ ತರ್ಕಿಸಲೆಡೆಯಿದೆ. ಇದೇ ಕಾರಣದಿಂದ ಅವನು ಗದ್ಯ ಕಾವ್ಯವನ್ನೇ ರಚಿಸಿದನೆಂದೂ ಹೇಳಬಹುದು. ಆದರೆ ಇದು ಎಷ್ಟರ ಮಟ್ಟಿಗೆ ಸಾಧು ಎಂಬುದನ್ನು ಪರಿಶೀಲಿಸಬೇಕು.

ಮುದ್ದಣನು "ಆವ ಧಾಟಿಯೊಳ್ ಪೇಳ್ವೆಂ ? ಪದ್ಯದೊಳ್ ಪೇಳ್ವೆನೋ, ಗದ್ಯದೊಳ್ ಪೇಳ್ವೆನೋ ?" ಎಂದು ಕೇಳುತ್ತಾನೆ. ಇದಕ್ಕೆ ಮನೋರಮೆ "ಪದ್ಯಂ ವಧ್ಯಂ; ಗದ್ಯಂ ಹೃದ್ಯಂ..." ಎನ್ನುತ್ತಾಳೆ. ಇಲ್ಲಿ ಬರುವ ಮಾತುಗಳಿಂದ ಮುದ್ದಣನಿಗೆ ಪದ್ಯವೇ ಮೊತ್ತಮೊದಲಿನ ಆಯ್ಕೆಯೆಂದು ಹೇಳುವಂತಿದೆ. ಏಕೆಂದರೆ ಮೊದಲು ಪದ್ಯವಲ್ಲಿ ಹೇಳಲೇ ಎಂದು ಕೇಳುತ್ತಾನೆ. ಮನೋರಮೆಗೆ ಪದ್ಯ ರುಚಿಸಲಿಲ್ಲ. ಇದೇಕೆ ? ಸ್ವಲ್ಪ ವಿಚಾರ ಮಾಡಿದರೆ ಇದಕ್ಕೆ ಈ ರೀತಿ ಸಮಾಧಾನ ಹೇಳಬಹುದು : ಮುದ್ದಣನು ಮಹಾಲಕ್ಷ್ಮಿಯಾಗಿ ಶ್ರೀರಾಮ ಪಟ್ಟಾಭಿಷೇಕವನ್ನು ಬರೆದನು; (ಮುದ್ದಣನು ತನ್ನ ತಾಯಿಯನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದನೋ ಏನೋ ? ಅಥವಾ ಕೆಲವರು ಊಹಿಸುವಂತೆ ಈತನು ಉಡುಪಿಯಲ್ಲಿ ಊಟ ಮಾಡುತ್ತಿದ್ದ ಹೊಟೆಲು ಮಾಲಿಕನ ಮಗಳು 'ಲಕ್ಷ್ಮಿ' ಕಣ್ಣ ಮುಂದೆ ಕುಣಿದಾಡುತ್ತಿದ್ದಳೋ ಏನೋ ! ಎಂದು ಹೇಳುವುದು ಸಹೃದಯತೆಯ ಲಕ್ಷಣವಾಗದು. ಅವನ ಹೆಸರಿನಲ್ಲಿಂಯೇ ಸೇರಿದ 'ಲಕ್ಷ್ಮಿ'ಗೆ ಮಹತ್ವವನ್ನು ಕೊಟ್ಟ "ಮಹಾಲಕ್ಷ್ಮಿ"ಯಾದಳೆನ್ನುವುದು ಯುಕ್ತಿಯುಕ್ತವಾಗಿದೆ). ಮನೋರಮೆಯಾಗಿ ಅದನ್ನು ನಿರಾಕರಿಸಿದನು. ಮಹಾಲಕ್ಷ್ಮಿ ಬೇರೆ ಅಲ್ಲ; ಮನೋರಮೆ ಬೇರೆ ಅಲ್ಲ. ಮಹಾಲಕ್ಷ್ಮಿಯಾಗಿ ಶಬ್ದ ಸಂಪತ್ತನ್ನು ಉಣಬಡಿಸಿದರೆ ಮನಸ್ಸು ರಮಿಸಿದ ಮನೋರಮೆ ಅಂತಹ ಐಶ್ವರ್ಯವನ್ನು ಕಾಲ ಕಸವಾಗಿ ಕಂಡಳು. ಎಂದರೆ ಸಂಪತ್ತು ಎಷ್ಟಿದ್ದರೂ ಮನೋರಂಜನೆಯಿಲ್ಲದಿದ್ದರೆ ಅದಕ್ಕೆ ಸ್ಥಾನವಿಲ್ಲ, ಮಾನವಿಲ್ಲ. ಆದಕಾರಣವೇ ಮನೋರಮೆ ಪದ್ಯವನ್ನು ವಧ್ಯವೆನ್ನುತ್ತಾಳೆ. ಗದ್ಯದಲ್ಲಿ ಆ ಶಬ್ದ ಸಂಪತ್ತು ಹೇಗಿರಬೇಕೆಂಬುದನ್ನೂ ಸೂಚಿಸುವವಳು ಮನೋರಮೆಯೇ. ಅದು "ನೀರಿಳಿಯದ ಗಂಟಲೊಳ್ ಕಡುಂಬಂ ತುರುಕಿದಂತೆ" ಇರಬಾರದು. "ತಿರುಳ್ಗನ್ನಡದ ಬೆಳ್ನುಡಿಯೊಳ್ ಪುರುಳೊಂದೆ" ಇರಬೇಕು. ಮುದ್ದಣನೂ ಅದಕ್ಕೆ ಸಮ್ಮತಿಯಿತ್ತು "ಕರ್ಮಣಿಸರದೊಳ್ ಚೆಂಬಳಮಂ ಕೋದಂತಿರೆ, ರಸಮೊಸರೆ, ಲಕ್ಕಣಂ ಮಿಕ್ಕಿರೆ ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆರೆಯೆ ತಿರುಳ್ಗನ್ನಡ"ದಲ್ಲಿ ಕತೆ ಹೇಳುತ್ತಾನೆ. ಈ ಮಾತುಗಳಿಂದ ಇಷ್ಟನ್ನು ಗ್ರಹಿಸಿಕೊಳ್ಳಬಹುದು : ಮುದ್ದಣನಿಗೆ ಪದ್ಯವು ಇಷ್ಟವೇ ಆದರೂ ಸಂಸ್ಕೃತ ಪದಭೂಯಿಷ್ಠವಾಗಿ ರಸವಿಹೀನವಾಗಿ ಕಾವ್ಯವಿರಬಾರದು. ಮಹಾಲಕ್ಷ್ಮಿಯಾಗಿ ರಚಿಸಿದ ಪದ್ಯ ಕಾವ್ಯದಲ್ಲಿ ಅವನು ಕಂಡ ಕೊರತೆಯೇ ಅದು. ಪದ್ಯವು ನಿರರ್ಗಳವಾಗಿ ಹರಿದರೆ ಆ ಕವಿತಾವಾಹಿನಿ ತನುಮನಗಳನ್ನಪ್ಪುಕಯ್ಯುತ್ತದೆ. ಬಲಾತ್ಕಾರದಿಂದ ಬರೆಯ ಹೊರಟರೆ ಬರಡಾಗಿ ಹೋಗುತ್ತದೆ. ಹಾಗಾಗಬಾರದು. ಹೃದ್ಯವಾಗಿ ಹರಿಯುವುದಿದ್ದರೆ ಪದ್ಯವೂ ಗ್ರಾಹ್ಯವೇ ಎಂಬುದಕ್ಕೆ ಶ್ರೀರಾಮಾಶ್ವಮೇಧದ ವಿವಿಧ ಭಾಗಗಳಲ್ಲಿ ಬರುವ ಪದ್ಯ ಖಂಡಗಳೋ ಪೂರ್ಣ ಪದ್ಯಗಳೋ ಸಾಕ್ಷ್ಯಗಳಾಗಿವೆ. ಅವನ ಕೈ ಕಂದ ಪದ್ಯಗಳನ್ನು ರಚಿಸುವುದರಲ್ಲಿ ಅತ್ಯಂತ ಪರಿಣತವಾಗಿದ್ದಂತೆ ತೋರುತ್ತದೆ :–

ಶ್ರೀರಾಮನು ಸೀತಾದೇವಿಯ ದೋಹದದ ದುಃಖಾರ್ತ ಸ್ಥಿತಿಯನ್ನು ಕಂಡು ಮರುಗಿ ಒಳಗರಿಯದೆ ಆಕೆಯೊಡನೆ ದುಃಖ ಕಾರಣವನ್ನು ಕೇಳುವಲ್ಲಿ "ಮೆಯ್ಯೊಳ್ ಸಲ್ಲದ ಬೇನೆಯದಾಗಿರೆ ತನ್ನಿಂ ತಾನೇ ಮನಕ್ಕೆ ಬೇವಸಮಾಯ್ತೆ ? ಅತ್ತೆವಿರೇಂ ಬಯ್ದರೆ ? ಎನ್ನೊತ್ತಿನ ಸಹಜಾತರಂತುಟಣಕಿಸೆ ನಿನಗಾದತ್ತೆ ವಿಷಾದಂ ? ದೂಸರಿದೆತ್ತಣಿನಾಯ್ತರಿಸಿ ನಿನಗೆ ಸರಸಿರುಹಾಕ್ಷೀ" ಎನ್ನುವಾಗ

ಮೆಯ್ಯೊಳ್ ಸಲ್ಲದ ಬೇನೆಯದಾಗಿರೆ

ಎಂದು ಚತುರ್ಮಾತ್ರಾಗಣದ ಪದಗಳನ್ನೇ ಪ್ರಯೋಗಿಸಿ ಶರಷಟ್ಪದಿಯ ಪಾದದ್ವಯದ ಅಡಿಗಟ್ಟನ್ನು ಹಾಕಿ, ಮುಂದಣ

ತನ್ನಿಂ ತಾನೇ ಮನಕ್ಕೆ ಬೇವಸಮಾಯ್ತೇ

ಎಂಬಲ್ಲಿಯೂ ನಾಲ್ಕು ಮಾತ್ರೆಯ ಗಣಗಳನ್ನೇ ಬಳಸಿ ಕಂದ ಪದ್ಯದ ದ್ವಿತೀಯ ಪಾದದ ಸ್ವರೂಪದರ್ಶನ ಮಾಡಿಸಿ ಮುಂದೆ

ಅತ್ತೆವಿರೇಂ ಬಯ್ದರೆ ಎ
ನ್ನೊತ್ತಿನ ಸಹಜಾತರಂತುಟಣಕಿಸೆ ನಿನಗಾ
ದತ್ತೆ ವಿಷಾದಂ ದೂಸರಿ
ದೆತ್ತಣಿನಾಯ್ತರಸಿ ನಿನಗೆ ಸರಸಿರುಹಾಕ್ಷೀ

ಎಂಬಲ್ಲಿ ಪ್ರಾಸಯುಕ್ತವಾದ ಪೂರ್ಣ ಕಂದ ಪದ್ಯವನ್ನೇ ರಚಿಸಿದ್ದಾನೆ. ಮನೋರಮೆ ಈ ಸಂದರ್ಭದಲ್ಲಿ "ಪದ್ಯಂ ವಧ್ಯಂ" ಎನ್ನುವುದಿಲ್ಲ. ಪ್ರಕೃತ ಭಾಗವು ಪದ್ಯವಲ್ಲವೆಂದೇ ಗ್ರಹಿಸುವ "ಮೋಡೆ"ಯಲ್ಲ ಮನೋರಮೆ. ಮುದ್ದಣನಿಗಾಗಲಿ ಮನೋರಮೆಗಾಗಲಿ ಸಹಜ ಸುಂದರವಾಗಿ ಮೂಡಿ ಬರುವ ಪದ್ಯವು ಪರಿಗ್ರಾಹ್ಯವೇ ಆಗಿದೆಯೆಂದು ಇಷ್ಟರಿಂದಲೇ ತಿಳಿದುಕೊಳ್ಳಬಹುದು. ಇದರಂತೆ ಇನ್ನಿತರ ಭಾಗಗಳಲ್ಲಿಯೂ ಪದ್ಯಗಳು ತಮ್ಮಿಂತಾವೇ ಧುಮುಕಿ ಬರುವುದನ್ನು ಕಾಣುತ್ತೇವೆ. ಅಲ್ಲಿಯೂ ಮನೋರಮೆಯ ಆಕ್ಷೇಪ ವಾಕ್ಯಗಳಿಲ್ಲ. ಹೀಗಿದ್ದೂ ಕಾವ್ಯಾರಂಭದಲ್ಲಿ ಪದ್ಯಂ ವಧ್ಯಂ ಎಂದುದಕ್ಕೆ ಏನಾದರೂ ವಿಶಿಷ್ಟ ಕಾರಣವಿದ್ದಿರಲೇಬೇಕೆಂದು ಊಹಿಸುವುದು ತಪ್ಪಲ್ಲ. ಈ ಶಂಕೆಯ ಪರಿಹಾರಕ್ಕೆ ಶ್ರೀರಾಮ ಪಟ್ಟಾಭಿಷೇಕದ ಆಮೂಲಾಗ್ರ ಪರಿಶೀಲನವೇ ಸೂಕ್ತವಾಗುತ್ತದೆ.

ಶ್ರೀರಾಮ ಪಟ್ಟಾಭಿಷೇಕದ ನಾಂದೀ ಸಂಧಿಯ ಪದ್ಯವೊಂದು ಇದು :

ಯತಿಗಣಾಶ್ರಯಮೆನಿಸಿ ಶಬ್ದಾರ್ಥಭಾವದಿಂ
ದತಿರಸಾಲಂಕಾರಮೊಪ್ಪೆ ಜೀವಾಕ್ಷರ ಸು
ಗತಿಗಿರ್ಕೆಯಾಗಿ ನವಪದಪುಂಜರಂಜಿತಮನೋಜ್ಞಮೆನೆ ಕೈವಲ್ಯದ
ನುತಸುಕೃತ ಪದ್ಯಾವಳಿಯೆ ಇದೆನಿಸುತ್ತೆ ವಸು

ಮತಿಗೆ ವಿಬುಧರ್ಕಳಿಂ ಸಂಭಾವ್ಯಮಾಗೆ ಭಾ
ರತಿಯೊಲಿದಜಸ್ರಮೆನಗಿಷ್ಟಾರ್ಥಮಿತ್ತು ತಾನಿರ್ಕೆ ಮಜ್ಜಿಹ್ವಾಗ್ರದಿ ॥

ಈ ಪದ್ಯದಲ್ಲಿ ಕಾವ್ಯವನ್ನೂ ವಾಗ್ದೇವತೆಯನ್ನೂ ಶ್ಲೇಷೆಯಿಂದ ಸ್ತುತಿಸಲಾಗಿದೆ ನಿಜ. ಕಾವ್ಯದ ಕುರಿತಾಗಿ ಹೇಳಿದ ಮೊತ್ತಮೊದಲಿನ "ಯತಿಗಣಾಶ್ರಯ"ವೆಂಬುದು ಪೂರ್ವ ಪದ್ಧತಿಯಂತೆ ಇಲ್ಲಿ ಸೇರಿಕೊಂಡಿದೆ ಎನ್ನಬಹುದು. ಉಳಿದವುಗಳಲ್ಲಿ ಶಬ್ದ–ಅರ್ಥ–ಭಾವಗಳು ಕಾವ್ಯಕ್ಕೆ ಒಪ್ಪುವಂತಿವೆಯಾದರೆ ರಸವು ಪರಿಪೂರ್ಣತೆಯನ್ನು ಪಡೆದಿದೆಯೆಂದು ಎಲ್ಲ ಸಂದರ್ಭಗಳಲ್ಲಿಯೂ ಹೇಳುವಂತಿಲ್ಲ. ಅಲಂಕಾರಗಳೇನೋ ತುಂಬಿವೆ; ಪ್ರಾಸಾನುಪ್ರಾಸಯಮಕಗಳು ತುಂಬಿವೆ; ಶ್ಲೇಷೋಪಮಾದ್ಯಲಂಕಾರಗಳೂ ತುಂಬಿವೆ. ಹೊಸ ಹೊಸ ಪದಗಳನ್ನೂ ಬಳಸಿದ್ದಾಗಿದೆ. ಹೊಸ ಪದಗಳನ್ನು ಬಳಸಿದುದಕ್ಕೆ ಒಂದೇ ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿಯೇ ಕೊಟ್ಟು ಮುಗಿಸಿಬಿಡಬಹುದು; ಪೀಠಿಕಾಸಂಧಿಯ ಆರನೆಯ ಪದ್ಯದಲ್ಲಿ "ಗುಮ್ಮ" ಎಂಬುದನ್ನು ಪ್ರಯೋಗಿಸಲಾಗಿದೆ :–

ನಿಂದಿಸುವ ಜನರ ದುರ್ವಾಕ್ತಮಂ ಕೇಳ್ದು ಮನ
ಗುಂದಿ ಮಾಣ್ಬನೆ ಕಾವ್ಯರಚನೆಯಂ ಕವಿ ಗುಮ್ಮ

ನಂದುದಿಪ ನೇಸಱಿಂ ಕಂಡು ದನಿಗುಡಲರ್ಕನೇಂ ಕಿರಣಮಡಗಿಸುವನೇ ಎಂಬಲ್ಲಿ ಬರುವ ಗುಮ್ಮ ಎಂಬುದಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ತುಳುವಿನಲ್ಲಿ ಮತ್ತು ಇತರ ತಾಯ್ನುಡಿಗಳಲ್ಲಿ ರೂಢಿಯಲ್ಲಿರುವ "ಗೂಗೆ" ಎಂಬುದೇ ಅರ್ಥ. ಹಿಂದಣ ಕವಿಗಳು ಇದಕ್ಕೆ ಈ ಅರ್ಥವನ್ನಿಟ್ಟು ಪ್ರಯೋಗಿಸಿದಂತೆ ಕಂಡುಬರುವುದಿಲ್ಲ. ಅಲ್ಲೆಲ್ಲ ಹೆಚ್ಚಾಗಿ "ಭೀಕರಾಕೃತಿ, ಭೂತಂ" ಇತ್ಯಾದ್ಯರ್ಥದಲ್ಲಿ ಪ್ರಯೋಗಗೊಂಡಂತೆ ಕಂಡುಬರುತ್ತದೆ. ದಾಸರ ಪದ್ಯಗಳಲ್ಲೊಂದರಲ್ಲಿ "ಗುಮ್ಮನ ಕರೆಯದಿರೇ" ಎಂಬಲ್ಲಿ ಕೂಡ ಇದೇ ರೀತಿಯಿದೆ. ಶ್ರೀರಾಮ ಪಟ್ಟಾಭಿಷೇಕಕ್ಕೆ ಟೀಕೆಯನ್ನು ಬರೆದ ರಾಮಾನುಜೈಯಂಗಾರರು ಗುಮ್ಮ ಎಂಬುದಕ್ಕೆ ಕಾಡುಕೋಳಿ ಎಂಬರ್ಥವನ್ನು ಬರೆದಿದ್ದಾರೆ. ಅಂತೂ ಇದೊಂದು "ನವಪದ". ಇಂತಹ "ನವಪದಪುಂಜ"ವು ಈ ಪದ್ಯ ಕೃತಿಯಲ್ಲಿ ಅಲ್ಲಲ್ಲಿದ್ದು ಅದು ಮುದ್ದಣನ ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತದೆ.

ಪ್ರಕೃತ, ಪ್ರಮುಖ ವಿಷಯವೆಂದರೆ ಮುದ್ದಣನು "ಯತಿಗಣಾಶ್ರಯ"ವೆನಿಸಿ ಪದ್ಯಗಳನ್ನು ರಚಿಸಿದ್ದಾನೆಯೇ ಎನ್ನುವುದು. ಇಡೀ ಕಾವ್ಯದಲ್ಲಿ ಕಂಡುಬರುವ ಇನ್ನೂರನಲ್ವತ್ತೆರಡು ವಾರ್ಧಕ ಷಟ್ಪದಿಗಳಲ್ಲಿ (ಸೂಚನೆಯ ಪದ್ಯಾರ್ಥಗಳನ್ನು ಬಿಟ್ಟು) ಯತಿಭಂಗವೆಂಬುದು ಎಷ್ಟರಲ್ಲಿದೆ ಎಂಬುದನ್ನು "ಶ್ರುತಿಸುಭಗ"ರು ಪರಿಶೀಲಿಸಬೇಕು. ಅದಕ್ಕಿಂತ ಪೂರ್ವಭಾವಿಯಾಗಿ ಯತಿಭಂಗ ವೆಂದರೇನೆಂಬುದನ್ನು ಖಚಿತವಾಗಿ ತಿಳಿದಿರಬೇಕು. ಕನ್ನಡ ಕೈಪಿಡಿಯಲ್ಲಿ ಯತಿಭಂಗವೆಂದರೇನೆಂಬುದನ್ನು ಹೇಗೆ ವಿವರಿಸಲಾಗಿದೆ ಎಂಬಂಶಗಳನ್ನು ಮೊದಲು ವಿವೇಚಿಸಿಕೊಳ್ಳಬೇಕು.

"ಯತಿಯೆಂದರೆ ಪದ್ಯಗಳನ್ನು ಓದುವಾಗ ಅರ್ಥಸ್ಫೂರ್ತಿ ಕೆಡದಂತೆ ಪದ್ಯಪಾದದ ನಿಯತವಾದ ಒಂದೊಂದೆಡೆಯಲ್ಲಿ ನಿಲ್ಲಿಸುವುದು. ಹಾಗೆ ನಿಲ್ಲಿಸುವುದು ಪದದ ಮಧ್ಯದಲ್ಲಿಯಾದರೆ ಅರ್ಥಸ್ಫೂರ್ತಿ ಕೆಡುವುದರಿಂದ ಪದದ ಕೊನೆಯಲ್ಲಿಯೇ ನಿಲ್ಲಿಸಬೇಕು."

ಇದರ ಪ್ರಕಾರ ಯತಿಯೆಂದರೆ ಪದ್ಯಪಾದಗಳಲ್ಲಿ ನಿಯತ ಸ್ಥಾನದಲ್ಲಿ ನಿಲ್ಲಿಸಬೇಕಾದಲ್ಲಿ ಯಾವುದಾದರೊಂದು ಪದಕ್ಕೆ ವಿಚ್ಛಿತ್ತಿಯುಂಟಾಗಬಾರದೆಂದು ಹೇಳಿದಂತಾಗುತ್ತದೆ. ಅದರಂತೆಯೇ ಕೆಲವು ಉದಾಹರಣಗಳನ್ನು ಕೊಟ್ಟು ಯತಿಭಂಗವಾದ ಸ್ಥಾನವನ್ನು ನಕ್ಷತ್ರ ಚಿಹ್ನೆಯಿಂದ ನಿರ್ದೇಶಿಸಲಾಗಿದೆ. ಅವುಗಳಲ್ಲಿ ಒಂದನ್ನು ನೋಡಬಹುದು :

ಅಮಲಕನಕದುದ್ಯ * ದ್ವೇಸುತ್ತಿರ್ಪುದೊಪ್ಪು *
ತ್ತಮೆ ರಜತಚತುರ್ದ್ವಾ * ರಂಗಳಿಂ ಮಂಗಳಾದ್ಯು
ತ್ತಮ ತವನಿಧಿ.........

ಈ ಮಾಲಿನೀ ವೃತ್ತದಲ್ಲಿ ಗುರುತು ಹಾಕಿದಲ್ಲೆಲ್ಲ ಯತಿಭಂಗವಿದೆಯೆನ್ನಲಾಗಿದೆ. ಆದರೆ ಇಲ್ಲಿ ಯಥಾರ್ಥವಾಗಿಯೂ ಯತಿಭಂಗವಿದೆಯೆ ? ಯತಿಭಂಗದ ಲಕ್ಷಣವು ಇದೇ ಎಂದಾದರೆ ಸಂಸ್ಕೃತದಲ್ಲಿಯೂ ಅಲ್ಲಲ್ಲಿ ಯತಿಭಂಗವಾದುದನ್ನು ತೋರಿಸುವುದು ಅಷ್ಟೇನೂ ಕಷ್ಟವಾಗದು. ಆದುದರಿಂದ ಯತಿಭಂಗರೇನೆಂಬುದನ್ನು ಸರಿಯಾಗಿ ತಿಳಿದುಕೊಳ್ಳಲು ಇತರ ವಿದ್ವಾಂಸರ ಅಭಿಪ್ರಾಯವನ್ನು ಅವಗಾಹಿಸಿಕೊಳ್ಳಬೇಕಾಗಿದೆ.

ಎಷ್ಟೋ ವರ್ಷಗಳ ಹಿಂದೆ, ೧೯೩೦ನೆಯ ದಶಂಬರದಲ್ಲಿ, ಮಡಿಕೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಸೇಡಿಯಾಪು ಕೃಷ್ಣಭಟ್ಟರು ಓದಿದ "ಕನ್ನಡ ಛಂದಸ್ಸು" ಎಂಬುದು ಅನಂತರ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಗಿತ್ತಷ್ಟೆ ಅದರಲ್ಲಿ "ಯತಿ" ಎಂಬುದರ ವಿವೇಚನೆಯನ್ನು ಕೂಲಂಕಷವಾಗಿ ಮಾಡಲಾಗಿದೆ. ಅದರಿಂದ ಕೆಲವೇ ವಾಕ್ಯಗಳನ್ನು ಉದ್ಧರಿಸಿಕೊಂಡರೂ ಪ್ರಕೃತ ಸಂದರ್ಭಕ್ಕೆ ಸಾಕಾಗುತ್ತದೆ :–

"ಯತಿಯೆಂದರೆ ಗಣಗಳಲ್ಲಿ ನಿಯತವಾಗಿ ಪ್ರತೀತವಾಗುವ ವಿರಾಮ ಸ್ಥಳ. ಅದನ್ನು ಉಲ್ಲಂಘಿಸಬಾರದು......ಯತಿಭಂಗವೆಂದರೆ, ಗಣವು ಸರಿಯಾಗಿದ್ದು, ಓದುವಾಗ ಅರ್ಥವು ಕೆಡುವ ರೀತಿಯಲ್ಲಿ ವಿರಾಮ ತೆಗೆದುಕೊಳ್ಳಬೇಕಾದ ಸಂದರ್ಭ......ಯತಿಯೆಂಬುದು ಹಾಡುವಾಗ ಅರ್ಥಕ್ಕೆ ಹೊಂದಿಕೆಯಾಗುವಂತೆ ನಿಲ್ಲಿಸಲು ಎಡೆಯಿರಬೇಕೆಂಬುದಕ್ಕಾಗಿ ನಿಯಮಿತವಾಗಿದೆ......ವಿಶ್ರಮಸ್ಥಾನಾನಂತರ ಬರುವ ಪದದ ಸ್ವರೂಪವು ಕೆಡದಿದ್ದರೆ ಯತಿಭಂಗವಾಗುವುದಿಲ್ಲ......ಹಿಂದೆ ಮುಂದೆ ಲಘುವಿದ್ದಲ್ಲಿ ಯತಿಭಂಗವಾದರೆ ಪ್ರತೀತವಾಗುವಂತೆ, ಗುರುವಿದ್ದರೆ ಆಗುವುದಿಲ್ಲ."

ಮೇಲಿನ ಉದ್ಧರಣದಲ್ಲಿ ಕೊನೆಯ ವಾಕ್ಯವೊಂದನ್ನೇ ಗಮನದಲ್ಲಿಟ್ಟುಕೊಂಡರೂ ಸಾಕಾಗಬಹುದು. ಎಂದರೆ ಗಣದಲ್ಲಿ, ಅದರಲ್ಲೂ ಮಾತ್ರಾಗಣದಲ್ಲಿ, ಗಣದ ಅಂತ್ಯದಲ್ಲಿ ಯತಿ ಇದ್ದೇ ಇರುತ್ತದೆಯಾದುದರಿಂದ ಒಂದು ಗಣವು ಕೊನೆಗೊಂಡು ಇನ್ನೊಂದು ಗಣವು ಆರಂಭವಾಗುವ ಸ್ಥಾನದ ಹಿಂದೆ ಅಥವಾ ಮುಂದೆ, ಇಲ್ಲವೆ ಹಿಂದೂ ಮುಂದೂ ಗುರುವಿದ್ದರೆ ಸಾಮಾನ್ಯವಾಗಿ ಯತಿಭಂಗವಾಗುವುದಿಲ್ಲ. ಇಕ್ಕಡೆಯಲ್ಲೂ ಲಘುವಿದ್ದು ಪದ ಮಧ್ಯದಲ್ಲಿ ವಿಶ್ರಮಿಸಬೇಕಾದ ಪ್ರಸಂಗವಿದ್ದಲ್ಲಿ ಯತಿಭಂಗವಾಗುತ್ತದೆ. ಈ ದೃಷ್ಟಿಯಿಂದ ಕನ್ನಡ ಕೈಪಿಡಿಯಿಂದ ಉದ್ಧರಿಸಿದ ಪದ್ಯದಲ್ಲಿ ಗುರುತು ಹಾಕಿದ ಕಡೆ ಯತಿಭಂಗವಾಗುವುದಿಲ್ಲ. ಕನ್ನಡ ಛಂದಸ್ಸು ಎಂಬುದರಲ್ಲಿ ಯತಿಭಂಗಕ್ಕೆ ಕೊಟ್ಟ ಕನ್ನಡದ ಉದಾಹರಣೆ ಈ ಕೆಳಗಿನ ಭಾಗ :

ದೇವಪುರ ಲಕ್ಷ್ಮೀರಮಣನಾಸ್ಯಚಂದ್ರನಾನಂದಮಂ ನಮಗೀಯಲಿ.

ಇಲ್ಲಿ ಐದೈದು ಮಾತ್ರೆಗಳಿಗೆ ಒಂದು ಗಣವಾಗುತ್ತದೆ. ಆಗ ಎರಡನೆಯ ಗಣವಾದ "ಲಕ್ಷ್ಮೀರ" ಎಂದಾದ ಮೇಲೆ "ಮಣನಾಸ್ಯ" ಎಂಬ ಪಂಚಮಾತ್ರಾ ಗಣವು ಬರುತ್ತದೆ. ಆಗ ಪೂರ್ವಗಣಾಂತ್ಯದ ರಕಾರವು ಹ್ರಸ್ವವೂ ಆದುದರಿಂದ ಲಘುವೂ ಆಗಿದ್ದು ಉತ್ತರಗಣದ ಆದಿಯ ಮಕಾರವು ಹ್ರಸ್ವವೂ ಲಘುವೂ ಆಗಿರುವುದರಿಂದ ಮಾತ್ರವಲ್ಲ ಉತ್ತರ ಗಣವು "ಮಣನಾಸ್ಯ" ಎಂದಾಗುವುದರಿಂದ ಇಲ್ಲಿ ಯತಿಭಂಗವಿದೆ ಎಂದು ತೋರಿಸಿಕೊಡಲಾಗಿದೆ.

ಈ ಲಕ್ಷಣೋದಾಹರಣಗಳನ್ನು ಮುಂದಿಟ್ಟುಕೊಂಡು ಶ್ರೀರಾಮ ಪಟ್ಟಾಭಿಷೇಕದ ಪದ್ಯಗಳನ್ನು ಪರಿಶೀಲಿಸಬೇಕು. ಇದರಲ್ಲಿ ಉದ್ದಿಷ್ಟಾರ್ಥಕ್ಕಾಗಿ ಕೆಲವು ವಿಶಿಷ್ಟ ಪದಗಳನ್ನು ಪ್ರಯೋಗಿಸಬೇಕಾಗಿ ಬಂದಾಗ ಹಲವು ಪದ್ಯಗಳಲ್ಲಿ ಇಂತಹ ಯತಿಭಂಗವಾದುದನ್ನು ಕಂಡುಕೊಳ್ಳಬಹುದು. ವರ್ತಕನಿಗೂ ಕವಿಗೂ ಸಮಾನ ಧರ್ಮಗಳನ್ನು ಹೇಳಿದ ಪದ್ಯವನ್ನೇ ಮೊದಲು ನೋಡೋಣ : ಇದರ ನಾಲ್ಕನೆಯ ಪಾದದಲ್ಲಿ "ಸತ್ಕೃತಿಯೆಸಗೆ" ಎಂಬಲ್ಲಿ "ಸತ್ಕೃತಿಯೆ" ಎಂಬಲ್ಲಿಗೆ ಒಂದು ಗಣವು ಕೊನೆಯಾಗಿ "ಸಗೆ" ಎಂಬ ಅರ್ಥ ಶೂನ್ಯ ಪದವೊಂದು ಮುಂದಣ ಗಣಾರಂಭದಲ್ಲಿ ಕಾಣುತ್ತದೆ. ಇಲ್ಲಿ ಯತಿಭಂಗವುಂಟಾಗಿದೆ. ಇದೇ ರೀತಿ ಇನ್ನೂ ಕೆಲವು ಪದ್ಯಗಳಲ್ಲಿ ಯತಿವಿಲಂಘನವಾದುದನ್ನು ಕಾಣಬಹುದು :

೧) ವಿಧುಪುರದ ಲಕ್ಷ್ಮೀಮನೋಹರಂ ಕಬ್ಬಿಗರ ಕುಲಮಂ ಪೊ *ರೆಗೆ ಸಂತತಂ

(ಪೀಠಿಕಾ ಸಂಧಿ, ಪ. ೧೧)

೨) ಶಶಿಧರಾನನೆಯನಂಗೀಕರಿಸುತೊಡನೆ ಕುಲಿ *
ಶಶರೀರಸಂ ಮುಂತೆ ಪುರಕಟ್ಟೆ ವಾನರೇ
ಶ ಶತಬಲಿ ನೀಲನಳಜಾಂಬವ ಸುಷೇಣ ಮುಖ್ಯರ್ ಕೂಡಿ ಪಾಲ್ಗೊಂಡಿರೆ
ದಶರಥಾತ್ಮಜನರಸಿಯೊಡನೆ ಪುಷ್ಪಕಮಂ ತ್ರಿ *

ದಶರ ನುತಿಗೊಂಡೇರೆ ಮಣಿರಥದ ಮೌಕ್ತಿಕಮ *
ದಶನಿಯೊಳ * ಶನಿಗೋಪದೊಳ್ ಮಸಗೆ ರಂಜಿಸಿತು ನಾಯಕರ ಮಕುಟಂಗಳ

(ಸಂ. ೩, ಪ. ೧೨)

೩) ಪತ್ರನೇತ್ರಂ ಮನೆಯ * ಳಿಯ ನೋಡೆ ಮುಮ್ಮಕ್ಕಳೆನಗೆ ರತಿಕಾಮರ್ರೈಸೆ

(ಸಂ. ೩, ಪ. ೨೧)

ಇಡೀ ಕಾವ್ಯದಿಂದ ಇನ್ನೂ ಎಷ್ಟೋ ಪದ್ಯಗಳನ್ನೂ ಪದ್ಯಪಾದಗಳನ್ನೂ ಯತಿಭಂಗಕ್ಕೆ ಉದಾಹರಣೆಯನ್ನಾಗಿ ಕೊಡಬಹುದು. ಮುದ್ದಣನಿಗೆ ಈ ವಿಷಯ ತಿಳಿಯದುದಲ್ಲ. ಆದುದರಿಂದಲೇ ಅವನು ಪದ್ಯ ರಚನೆಯಲ್ಲಿದ್ದ ತೊಡಕನ್ನು ಕಂಡುಕೊಂಡನೆಂದು ಊಹಿಸಬೇಕಾಗಿದೆ. ಯತಿಭಂಗವಾಗದಂತೆ ಪದ್ಯ ರಚನೆ ಸಾಧ್ಯವಾಗುವುದಾದರೆ ಅಂತಹ ಪದ್ಯವು ವಧ್ಯವೆಂದು ಅವನೆಂದೂ ಪರಿಗಣಿಸಿರಲಾರನೆಂಬುದು ಶ್ರೀರಾಮಾಶ್ವಮೇಧದ ಪದ್ಯಗಂಧಿ ಗದ್ಯಶೈಲಿಯಿಂದ ನಿರ್ಧರಿಸಬಹುದಾಗಿದೆ.

ಇಲ್ಲಿ ಇನ್ನೊಂದು ಹೇಳಿಕೆಯನ್ನು ಪರಿಶೀಲಿಸಬಹುದು :– ಶ್ರೀರಾಮ ಪಟ್ಟಾಭಿಷೇಕದ ಐದನೆಯ ಸಂಧಿಯ "ಭೂರಮೆ ಭುಜಾಗ್ರದೊಳ್" ಎಂದು ಆರಂಭಗೊಳ್ಳುವ ಅರುವತ್ತನೆಯ ಪದ್ಯದಿಂದ ತೊಡಗಿ ಮೂವತ್ತಮೂರು ಪದ್ಯಗಳನ್ನು ಬವುಳಾಡಿ ವೆಂಕಟರಮಣ ಹೆಬ್ಬಾರರೆಂಬವರು ಬರೆದುಕೊಟ್ಟರಂತೆ. ಹಾಗಿದ್ದರೆ, ಮುದ್ದಣನಿಗೆ ಅವರು ತನಗಿಂತಲೂ ಮೇಲುಮಟ್ಟದ ಕವಿಯೆಂಬ ಗಾಢ ವಿಶ್ವಾಸವಿದ್ದಿರಬೇಕು; ಅವರು ಬರೆದುಕೊಟ್ಟ ಪದ್ಯಗಳನ್ನು ತನ್ನ ಕೃತಿಯಲ್ಲಿ ಸೇರಿಸಿಕೊಳ್ಳಬೇಕಾದರೆ ಅದರಲ್ಲಿ ತನ್ನ ಪದ್ಯಗಳಲ್ಲಿ ಕೆಲವಲ್ಲಿ ಕಂಡುಬಂದ ಯತಿಭಂಗದ ದೋಷವನ್ನು ಕಾಣದಿದ್ದಿರಬೇಕು. ಎಂದರೆ ವೆಂಕಟರಮಣ ಹೆಬ್ಬಾರರು ಮುದ್ದಣನಿಗಿಂತ ಮೇಲುಮಟ್ಟದ ಕವಿಯಾಗಿದ್ದರೆ ಅವರ ರಚನೆಯಲ್ಲಿ ಯತಿಭಂಗವಿಲ್ಲದಿರಬೇಕಾಗಿತ್ತು. ಈ ನಿಕಷದಲ್ಲಿ, ಸೇರಿಸಲ್ಪಟ್ಟವುಗಳೆಂಬ ಆ ಪದ್ಯಗಳ ಬಣ್ಣವೆಷ್ಟೆಂದು ಒರೆದು ನೋಡಿದರೆ ಆ ಮಾತಿನ ಯಥಾರ್ಥತೆಯನ್ನು ನಂಬಬಹುದಾಗಿದೆ. ಅನ್ಯಥಾ ಹಾಗೆಂದು ಅಂಗೀಕರಿಸುವುದು ಯುಕ್ತಿಯುಕ್ತವಾಗದು. ಬವುಳಾಡಿ ವೆಂಕಟರಮಣ ಹೆಬ್ಬಾರರು ರಚಿಸಿ ಕೊಟ್ಟುದೆಂದು ಹೇಳಲಾದ ಈ ಪದ್ಯ ಭಾಗವನ್ನು ಪರೀಕ್ಷಿಸೋಣ :

ಸಲೆ ನೋಡಲ್ಕೆದೆ ತಲೆಯೊಳ್ ನವಿರ್ಗಳಾಗಸಂ
ಚಲಿತಮಧುಪದ್ಯುತಿಯನಾಳ್ದಮರೆ ಕಂಬುಗಳ
ಹೊಳರ ಮೆಯ್ಯಿಂಗಳನಯನಮೆಸೆವ ಫಾಲ ಧೃತಪುನ್ನಾಗಶೋಭೆ ನಿಮಿರೆ

(ಸಂ. ೫, ಪ. ೬೨)

ಈ ಭಾಗದ ಮೂರನೆಯ ಪಾದದಲ್ಲಿ "ಇಂಗಳನ" ಎಂದು ಗಣ ವಿಭಾಗವಾದ ಬಳಿಕ "ಯನಮೆಸೆವ" ಎಂಬ ಗಣವು ಬರುವುದು ಸುಸ್ಪಷ್ಟ. ಪೂರ್ವಗಣಾಂತ್ಯದ "ನ" ಎಂಬ ಲಘುವೂ ಉತ್ತರ ಗಣದ "ಯ" ಎಂಬ ಲಘುವೂ "ನಯನ"ವೆಂಬ ಒಂದೇ ಶಬ್ದದ ಅಂಶಗಳಾಗಿರುವುದರಿಂದ ಇಲ್ಲಿ ಯತಿಭಂಗವಾಗಿದೆ. ಅರ್ಥಗ್ರಹಣಕ್ಕೆ ಇಲ್ಲಿರುವ ಪದಗಳೆಲ್ಲ ಎಷ್ಟು ತೊಡಕನ್ನುಂಟುಮಾಡುತ್ತವೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಯೇ ಇಲ್ಲ. ಪ್ರಯೋಗದಲ್ಲಿಯೂ ನಿರ್ದುಷ್ಟವಾಗಿದೆಯೆಂದು ಸಾಧಿಸುವಂತಿಲ್ಲ. ಬವುಳಾಡಿ ವೆಂಕಟರಮಣ ಹೆಬ್ಬಾರರು ಈ ಪದ್ಯವನ್ನು ಗ್ರಥಿಸಿ ಕೊಟ್ಟಿದ್ದಾರೆಂದು ಹೇಳಿದರೆ, ಅವರಿಗೆ ಮುದ್ದಣನಷ್ಟೂ ಕಾವ್ಯರಚನಾ ಸಾಮರ್ಥ್ಯವಿಲ್ಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಅವರ ಬೇರೆ ಕೃತಿಗಳೂ ಉಪಲಬ್ಧವಾದಂತಿಲ್ಲ. ಹೀಗಿರುತ್ತಾ ಇಲ್ಲಿ ಬರುವ ಇಂತಹ ಪದ್ಯಗಳನ್ನು ಮುದ್ದಣನು ತನ್ನ ಕಾವ್ಯದಲ್ಲಿ ಅಳವಡಿಸಿಕೊಂಡನೆಂದರೆ ಅದು ಅವರಿಬ್ಬರಿಗೂ ಯಶಸ್ಕರವಾಗದು.

ಯತಿಭಂಗವಿರುವ ಇನ್ನೂ ಎರಡು–ಮೂರು ಪದ್ಯ ಭಾಗಗಳನ್ನು ನೋಡೋಣ :

೧) ..................................................
ವಾರಸಾಗರದೊಡನಿದಿರ್ಚಿ ಜೀವಂಗೊಳಲ
ಪಾರಸಾಗರನಲ್ತೆ ನಿನ್ನುರುಮಹಿಮೆ ದಯಾ
ಸಾರಸಾಗರ ಸಗರಕುಲಸಾಗರೇಂದು ಶರಣೆಂದಿರಾವರವಲ್ಲಭಾ

(ಸಂ. ೫, ಪ. ೮೦)

೨) ಸುರಮುನಿಗಲಳೋದುವ ಪುರಾಣ ಘೋಷಶ್ರವಣ
ದಿರವೆತ್ತ ರಕ್ಕಸರ ಕರ್ಕಶರವದ ಭಯಂ
ಕರಕೆ ಪಡಲಿಟ್ಟ ದುಸ್ಥಿತಿಯೆತ್ತಲಮರ್ದುಮನಮರ್ದಿಂಟಿ ನಲ್ಮೆಯಿಂದ
..................................................

(ಸಂ. ೫, ಪ. ೮೫)

೩) ಪೆಂಡಿರನುಳಿದು ಗುರುಹಿರಿಯ ಬಂಧುಬಾಂಧವರ
ತಂಡಮನಗಲ್ದೆಣೆಯುರಂ ತೊರೆದು ದೆಸೆದೆಸೆಯ
ನಂಡಲೆದಳವುಗುಂದಿ ಪಸಿವಿಂ ಪಿಪಾಸೆಯಿಂ ಸ್ಥಾನವಿಭ್ರಷ್ಟರೆನಿಸಿ
..................................................

(ಸಂ. ೫, ಪ. ೮೬)

ಮೊದಲನೆಯ ಉದ್ಧರಣದಲ್ಲಿ "ನಿನ್ನುರುಮ" ಎಂದು ಒಂದು ಗಣವಾದ ಮೇಲೆ "ಹಿಮೆ ದಯಾ" ಎಂಬ ಗಣ ಬರುತ್ತದೆ. ಎರಡನೆಯದರಲ್ಲಿ "ಕರ್ಕಶರ" ಎಂದ ಬಳಿಕ "ವದ ಭಯಂ" ಎಂದೂ ಮೂರನೆಯದರಲ್ಲಿ "ಪೆಂಡಿರನು"

ಎಂದಾದ ಕೂಡಲೆ "ಳಿದು ಗುರುಹಿ" ಎಂದೂ, ಇದಾದ ಕೂಡಲೆ "ರಿಯ ಬಂಧು" ಎಂದೂ ಮತ್ತು "ನಂಡಲೆದ" ಎಂದಾದ ಅನಂತರ "ಳವುಗುಂದಿ" ಎಂದೂ ಬರುವುದು ಯತಿಭಂಗಕ್ಕೆ ಉದಾಹರಣೆಗಳಾಗಿವೆ. ಇಷ್ಟೂ ಯತಿಭಂಗವುಳ್ಳ ಪದ್ಯಗಳನ್ನು ಅನ್ಯರು ಬರೆದರೆಂದು ಹೇಳಿದರೆ ಅವರಿಗೆ ಛಂದಸ್ಸಿನ ಪೂರ್ಣ ಪರಿಜ್ಞಾನವಿಲ್ಲವೆಂದೇ ಹೇಳಬೇಕು. ಅವುಗಳನ್ನು ಮುದ್ದಣನು ತನ್ನ ಕಾವ್ಯದಲ್ಲಿ ಸೇರಿಸಿಕೊಂಡನೆನ್ನುವುದರಲ್ಲಿಯೂ ಔಚಿತ್ಯವಿರಲಾರದು. ಈ ಮಾತಿನಿಂದ ಮುದ್ದಣನು ಅಷ್ಟೂ ಕವಿತಾ ಸಾಮರ್ಥ್ಯವಿಲ್ಲದವನೇ ಎಂಬ ಶಂಕೆಗೂ ಎಡೆಯಾಗುತ್ತದೆಯೆನ್ನಬಹುದು. ಒಂದು ದೃಷ್ಟಿಯಿಂದ ಹೌದು ಎಂದೇ ಹೇಳಬೇಕು. ಈ ಹಿಂದೆಯೇ ತಿಳಿಸಿದಂತೆ ಉದ್ದಿಷ್ಟಾರ್ಥವನ್ನು ಸಾಧಿಸುವುದಕ್ಕಾಗಿ ವಿಶಿಷ್ಟ ಪದಗಳನ್ನೇ ಪ್ರಯೋಗಿಸಬೇಕೆಂಬ ಅಪೇಕ್ಷೆಯಿಂದ ಪದ್ಯ ರಚನೆ ಮಾಡುತ್ತಿದ್ದಾಗ ಮುದ್ದಣನಿಗೆ ಯತಿಭಂಗವಾದರೂ ದೋಷವಿಲ್ಲವೆಂದು ಕಂಡಿರಲೂಬಹುದು. ಅಥವಾ ಯತಿಭಂಗವೆಂದರೇನೆಂದು ಖಚಿತವಾಗಿ ಅವನು ಗ್ರಹಿಸದೇ ಇದ್ದಿರಲೂಬಹುದು. ಒಂದು ಬಗೆಯಿಂದ ಇದು ತಪ್ಪೇನೂ ಅಲ್ಲ. ಕನ್ನಡ ಕೈಪಿಡಿಯಲ್ಲಿ ಯತಿಭಂಗವಿದೆಯೆಂದು ತೋರಿಸಿಕೊಟ್ಟ ಯಾವ ಪದ್ಯದಲ್ಲಿಯೂ ಯತಿಭಂಗವಿಲ್ಲದಿರುವಾಗ ಆ ಭಾಗವನ್ನು ಬರೆದವರು ಯತಿಯ ವಿಷಯವನ್ನು ಸರಿಯಾಗಿ ತಿಳಿದುಕೊಂಡಂತಿಲ್ಲವೆಂದು ಹೇಳಿದರೆ ತಪ್ಪಾಗುವುದಿಲ್ಲ. ಅವರಿಗೆ ಇತರ ವಿಷಯದ ಪಾಂಡಿತ್ಯವು ಚೆನ್ನಾಗಿ ಇದ್ದಿರಲೂಬಹುದು. "ನ ಹಿ ಸರ್ವಃ ಸರ್ವಂ ವಿಜಾನಾತಿ" (ಎಲ್ಲರೂ ಎಲ್ಲವನ್ನೂ ತಿಳಿದಿರುವುದಿಲ್ಲ) ಎಂಬ ಮಾತು ಅವರಿಗೂ ಅನ್ವಯಿಸುತ್ತದೆ; ಮುದ್ದಣನಿಗೂ ಅನ್ವಯಿಸುತ್ತದೆ.

ಹೆಬ್ಬಾರರು, ತಾತ್ವಿಕ ವಿಷಯಗಳನ್ನು ಸರಿಯಾಗಿ ಗ್ರಹಿಸಿಕೊಂಡಿರದ ಮುದ್ದಣನಿಗೆ ಆ ವಿಷಯಗಳನ್ನೊಳಗೊಂಡ ಪದ್ಯಗಳನ್ನು ರಚಿಸಿಕೊಟ್ಟನೆನ್ನೋಣವೆ? ಹೆಚ್ಚಿನವರೆಲ್ಲ ತಿಳಿದಂತೆ ಮುದ್ದಣನು ಸಂಸ್ಕೃತ ಮೂಲಗಳಿಂದ ಕಥಾ ವಸ್ತುಗಳನ್ನು ಓದಿಸಿ, ಕೇಳಿ ಅವುಗಳನ್ನು ಕನ್ನಡ ಕಾವ್ಯಗಳನ್ನಾಗಿ ರಚಿಸಿದ್ದಾನೆ. ಅದೇ ರೀತಿಯಲ್ಲಿ ಅವನಿಗೆ ತಾತ್ವಿಕ ವಿಷಯಗಳನ್ನು ಇತರರಿಂದ ಕೇಳಿಯಾದರೂ ತಿಳಿವ ಬುದ್ಧಿಶಕ್ತಿಯಿತ್ತೆಂದು ನಂಬಬಹುದು. ಹಾಗಿದ್ದ ಮೇಲೆ ಈ ಕೆಲವು ಪದ್ಯಗಳನ್ನು, ಅವುಗಳಲ್ಲಿ ತಾತ್ವಿಕ ವಿಷಯಗಳಿವೆಯೆಂದ ಮಾತ್ರಕ್ಕೆ, ಮುದ್ದಣನು ರಚಿಸಿಲ್ಲವೆಂದು ಹೇಳಬೇಕಾಗಿಲ್ಲ. ನಾಂದೀಸಂಧಿ ಮತ್ತು ಪೀಠಿಕಾ ಸಂಧಿ ಹಾಗೂ ಸಮುದ್ರ ವರ್ಣನೆ ಇತ್ಯಾದಿಗಳನ್ನು ಮುದ್ದಣನೇ ಬರೆಯಬಲ್ಲನೆಂದಾದರೆ, ಈ ಪದ್ಯಗಳನ್ನೂ ಅವನೇ ರಚಿಸಿರಬಹುದು. ಆದಕಾರಣವೇ ಯತಿಭಂಗವೂ ಅರ್ಥ ಕ್ಲಿಷ್ಟತೆಯೂ ಅಲ್ಲಿರುವಂತೆ ಈ ಭಾಗದಲ್ಲಿಯೂ ಕಂಡುಬರುತ್ತವೆ.

ಮುದ್ದಣನು "ಶ್ರುತಿಸುಭಗ"ನಾಗಿದ್ದಿರಬೇಕು. ಯಕ್ಷಗಾನ ಪ್ರಬಂಧಗಳನ್ನು ರಚಿಸಬಲ್ಲವನಿಗೆ ಯಕ್ಷಗಾನದ ಪದ್ಯಗಳನ್ನು ಹಾಡಬಲ್ಲವನಿಗೆ – ಯಕ್ಷಗಾನದ ಹಾಡುಗಳನ್ನು ಕೇಳಬಲ್ಲವನಿಗೆ – "ಶ್ರುತಿಸುಭಗತ್ವ"ವು ಸಹಜವೇ ಆಗಿದೆ. ಅಂಥ

ಮುದ್ದಣನಿಗೆ ತನ್ನ ಪದ್ಯ ಕಾವ್ಯದಲ್ಲಿ ಅಲ್ಲಲ್ಲಿ ಯತಿಭಂಗವಾದುದು ಖಂಡಿತವಾಗಿಯೂ ಗೊತ್ತಾಗಿದ್ದಿಬರಹುದು. ಆದರೆ ಯತಿಯ ವಿಷಯವನ್ನು ಒಳಹೊಕ್ಕು ಅದರ ಆಳವನ್ನೂ ವಿಸ್ತಾರವನ್ನೂ ಗುರುತಿಸದಿದ್ದಿರಬಹುದು. ಹಾಗಾಗಿಯೇ ಅವನ ಪದ್ಯಗಳಲ್ಲಿ ಯತಿಭಂಗವು ತಲೆಯಿಕ್ಕಿರಬಹುದು. ಇಂತಹ ಪದ್ಯರಚನೆ ದೂಷ್ಯವೆಂದೂ ಅವನು ಮನಗಂಡಿರಬಹುದು. ಆದ ಕಾರಣವೇ ಅವನು "ಪದ್ಯಂ ವಧ್ಯಂ" ಎಂದು ಹೇಳಿಸಿರಬಹುದು. ಯತಿವಿಲಂಘನಕ್ಕೆಡೆಗೊಡದೆ ಕವಿತ್ವವು ಸಹಜ ಸುಂದರವಾಗಿ ಹುಟ್ಟಿಬರುವುದಿದ್ದರೆ ಅದು ತ್ಯಾಜ್ಯವಲ್ಲ; ಉಪಾದೇಯ. ಹಾಗಾಗಿಯೇ ತನ್ನಿಂದ ತಾನಾಗಿಯೇ ಹುಟ್ಟಿಬಂದ ಪದ್ಯಗಳನ್ನೂ ಪದ್ಯ ಭಾಗಗಳನ್ನೂ ಶ್ರೀರಾಮಾಶ್ವಮೇಧದಿಂದ ಉಚ್ಚಾಟನೆ ಮಾಡಿಲ್ಲ; ಮನೋರಮೆಯ ಮುಖಾಂತರ ಉಚ್ಚಾಟನೆ ಮಾಡಿಸಲೂ ಇಲ್ಲ. ಅದೇ ಅವನು ಕವಿಗಳೆನ್ನಿಸುವವರಿಗೆ ತೋರಿಸಿದ ದಾರಿ, ಹೆದ್ದಾರಿ.

---

ಕೃಪೆ : ಜಾಣ ಮುದ್ದಣ ೧೯೭೦

*****

# ‘ಶ್ರೀರಾಮಾಶ್ವಮೇಧ ಸಂಗ್ರಹ’ದ ಪೀಠಿಕೆ

## ಎಸ್. ಅನಂತರಂಗಾಚಾರ್

ಮುದ್ದಣನೆಂದು ಪ್ರಸಿದ್ಧನಾಗಿರುವ ನಂದಳಿಕೆ ಲಕ್ಷ್ಮೀನಾರಾಯಣನೇ ರಾಮಾಶ್ವಮೇಧವನ್ನು ರಚಿಸಿದ ಕವಿ. ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿಗೆ ಸೇರಿದ ನಂದಳಿಕೆಯೆಂಬ ಗ್ರಾಮ ಈತನ ಜನ್ಮಸ್ಥಳ. ಈ ಗ್ರಾಮದಲ್ಲಿ ಕ್ರಿ.ಶ. ೧೮೭೦ನೆಯ ಜನವರಿ ೨೪ರ ದಿನ ಕವಿ ಜನ್ಮತಾಳಿದನೆಂದು ಹೇಳುತ್ತಾರೆ. ಆ ಊರಿನ ದೇವಸ್ಥಾನದಲ್ಲಿ ಕಟ್ಟಿಗೆ ಕೋಲು ಹಿಡಿಯುವ ಕೆಲಸದಲ್ಲಿದ್ದ ಪಾಠಾಳಿ ತಿಮ್ಮಪ್ಪಯ್ಯ ಈತನ ತಂದೆ. ತಾಯಿ ಮಹಾಲಕ್ಷ್ಮಿ; ತಂದೆಗೆ ೩೦ ವರ್ಷವೂ ತಾಯಿಗೆ ೧೫ ವರ್ಷವೂ ಆಗಿದ್ದಾಗ ಕವಿಯು ಹುಟ್ಟಿದನು. ತಂದೆ ತಾಯಿಗಳು ಮಗುವಿನ ಬಾಲಲೀಲೆಯನ್ನು ನೋಡಿ ಅಕ್ಕರೆಯಿಂದ ಮುದ್ದಣನೆಂದು ಕರೆದರು. ಅದನ್ನೇ ಕವಿಯು ಮುಂದೆ ತನ್ನ ಕಾವ್ಯಕ್ಕೆ ಸಂಕೇತ ನಾಮವನ್ನಾಗಿ ಉಪಯೋಗಿಸಿಕೊಂಡಿದ್ದಾನೆ.

ಲಕ್ಷ್ಮೀನಾರಾಯಣನು ಬಡವರ ಮನೆಯಲ್ಲಿ ಹುಟ್ಟಿದರೂ ಅವನ ಬುದ್ಧಿಗೆ ಬಡತನವಿರಲಿಲ್ಲ. ಬಾಲ್ಯದಿಂದಲೂ ಬಹು ಮೇಧಾವಿಯೆಂಬುದನ್ನು ತೋರ್ಪಡಿಸಿಕೊಂಡನು. ನಂದಳಿಕೆಯಲ್ಲಿ ಮುರೂರು ಚೌಡಪ್ಪಯ್ಯನವರು ಸ್ಥಾಪಿಸಿದ್ದ ಪಾಠಶಾಲೆಯಲ್ಲಿ ಆತನ ಬಾಲ್ಯಪಾಠವು ಆರಂಭವಾಯಿತು. ನಾಲ್ಕೈದು ವರ್ಷಗಳಲ್ಲಿ ಅಲ್ಲಿಯ ಪಾಠ ಪ್ರವಚನಗಳನ್ನು ಮುಗಿಸಿಕೊಂಡು ಮುಂದಿನ ವಿದ್ಯಾಭ್ಯಾಸಕ್ಕೆ ಉಡುಪಿಗೆ ಹೋದನು. ಅಲ್ಲಿಯ ಇಂಗ್ಲಿಷ್ ಶಾಲೆಯಲ್ಲಿ ಒಂದೆರಡು ವರ್ಷ ವ್ಯಾಸಂಗ ಮಾಡಿ ಆರ್ಥಿಕ ಅಸೌಕರ್ಯಗಳಿಂದ ಆ ಶಾಲೆಯನ್ನು ಬಿಟ್ಟು ಟ್ರೈನಿಂಗ್ ಶಾಲೆಗೆ ಸೇರಿ ಅಲ್ಲಿಯ ವಿದ್ಯಾಭ್ಯಾಸವನ್ನು ಯಶಸ್ವಿಯಾಗಿ ಮುಗಿಸಿದನು.

ಲಕ್ಷ್ಮೀನಾರಾಯಣನಿಗೆ ಸಂಗೀತ, ಕುಣಿತ, ಯಕ್ಷಗಾನಗಳೆಂದರೆ ವಿಶೇಷ ಆಸಕ್ತಿ. ಆತನು ಉಡುಪಿಯಲ್ಲಿದ್ದಾಗ ಅಲ್ಲಿ ನಡೆಯುತ್ತಿದ್ದ ಯಕ್ಷಗಾನಗಳಿಗೆಲ್ಲಾ ತಪ್ಪದೆ ಹೋಗಿ ನೋಡಿ ಅವುಗಳಿಂದ ಆಕರ್ಷಿತನಾದನು. ಕೆಲವನ್ನು ಬಾಯಿಪಾಠ ಮಾಡಿದನು. ಕೆಲವಲ್ಲಿ ತಾನೂ ಭಾಗವಹಿಸಿ ಅಭಿನಯಿಸಿದನು. ಇದರಿಂದ ಇಂತಹ ಯಕ್ಷಗಾನಗಳನೇಕವನ್ನು ತಾನೂ ರಚಿಸಬೇಕೆಂಬ ಕುತೂಹಲವುಂಟಾಯಿತು. ಸಂಗೀತವನ್ನೂ ಶಾಸ್ತ್ರೀಯವಾಗಿ ಕಲಿಯಲು ಪ್ರಯತ್ನಪಟ್ಟನು.

ಲಕ್ಷ್ಮೀನಾರಾಯಣನ ಮೈಕಟ್ಟು ಯಾರನ್ನಾದರೂ ಮುಗ್ಧಗೊಳಿಸುವಂತಿತ್ತು. ಟ್ರೈನಿಂಗ್ ಶಾಲೆಯ ಶಿಕ್ಷಣ ಮುಗಿದ ಮೇಲೆ ಆ ಶಾಲೆಯ ಮುಖ್ಯೋಪಾಧ್ಯಾಯರು ಅವನನ್ನು ವ್ಯಾಯಾಮದಲ್ಲಿ ಹೆಚ್ಚಿನ ಪರಿಶ್ರಮವನ್ನು ಪಡೆಯುವುದಕ್ಕಾಗಿ ಮದರಾಸಿಗೆ ಕಳುಹಿಸಿಕೊಟ್ಟರು. ಅಲ್ಲಿ ಆತನಿಗೆ ಶ್ರೀ ಹೆಚ್. ನಾರಾಯಣರಾವ್ ಶ್ರೀ ಬೆನಗಲ್ ರಾಮರಾವ್ ಮುಂತಾದವರ ಪರಿಚಯವಾದುದಲ್ಲದೆ ಮಲಯಾಳಿ ತಮಿಳು ಭಾಷೆಗಳ ಸಾಮಾನ್ಯ ವ್ಯಾಸಂಗಕ್ಕೂ ಅನುಕೂಲವಾಯಿತು. ವ್ಯಾಯಾಮ ಶಿಕ್ಷಣವನ್ನು ಮುಗಿಸಿಕೊಂಡು ಲಕ್ಷ್ಮೀನಾರಾಯಣನು ಹಿಂತಿರುಗಿ ೧೮೮೯ನೆಯ ಮೇ ತಿಂಗಳಲ್ಲಿ ಉಡುಪಿಯ ಹೈಸ್ಕೂಲಿನಲ್ಲಿ ತಿಂಗಳಿಗೆ ಹತ್ತು ರೂಪಾಯಿ ಸಂಬಳದ ಮೇಲೆ ವ್ಯಾಯಾಮ ಶಿಕ್ಷಕನಾಗಿ ನೇಮಕವಾದನು.

ಈತನು ಉಡುಪಿಯಲ್ಲಿದ್ದುದು ಮೂರು ವರ್ಷಗಳ ಕಾಲ. ಅಲ್ಲಿ ಆ ಕಾಲದಲ್ಲಿ ಮಳಲಿ ಸುಬ್ಬರಾಯರೆಂಬ ಮತ್ತೊಬ್ಬ ಉಪಾಧ್ಯಾಯರಿದ್ದರು. ಅವರು ಪಂಡಿತರು. ಅನೇಕ ಮರಾಠಿ ನಾಟಕಗಳನ್ನೂ ಯಕ್ಷಗಾನಗಳನ್ನೂ ರಚಿಸಿ ಪ್ರಸಿದ್ಧರಾಗಿದ್ದರು. ಅವರಲ್ಲಿ ಒಂದು ಉತ್ತಮ ಗ್ರಂಥ ಭಂಡಾರವಿದ್ದಿತು. ಲಕ್ಷ್ಮೀನಾರಾಯಣನು ಅವರನ್ನು ಆಶ್ರಯಿಸಿ ಗುರುವನ್ನಾಗಿ ಸ್ವೀಕರಿಸಿದನು. ಅವರಲ್ಲಿದ್ದ ಪುಸ್ತಕಗಳನ್ನು ಒಂದೊಂದಾಗಿ ಎರವಲಾಗಿ ತೆಗೆದುಕೊಂಡು ಓದಲಾರಂಭಿಸಿದನು. ಯಕ್ಷಗಾನಗಳನ್ನು ಬರೆಯಬೇಕೆಂಬ ಹಿಂದಿನಿಂದ ಇದ್ದ ಆಸೆಯನ್ನೂ ಅವರಿಗೆ ತಿಳಿಸಿ ಅವರ ನೇತೃತ್ವದಲ್ಲಿ ಸಂಸ್ಕೃತ ರತ್ನಾವಳೀ ನಾಟಕದ ಕಥಾನಕವನ್ನು "ರತ್ನಾವಳೀ ಕಲ್ಯಾಣ"ವೆಂಬ ಪ್ರಸಂಗವನ್ನಾಗಿ ರಚಿಸಿದನು. ಈ ಗ್ರಂಥ ರಚನೆಯಲ್ಲಿ ಮಳಲಿಯವರ ಸಹಾಯ ವಿಶೇಷವಾಗಿದ್ದರೂ ಅವನ ಕವಿ ಜೀವನಕ್ಕೆ ಇದು ನಾಂದಿಯಾಗಿ ಪರಿಣಮಿಸಿತು. ಈ ಗ್ರಂಥವನ್ನು ತನ್ನ ಮೊದಲನೆಯ ಗುರುವಾದ ಮುರೂರು ಚೌಡಪ್ಪಯ್ಯನವರಿಗೆ ಅರ್ಪಿಸಿದನು.

ಈ ಗ್ರಂಥ ರಚನೆ ಲಕ್ಷ್ಮೀನಾರಾಯಣನಿಗೆ ಹೆಚ್ಚಿನ ಉತ್ಸಾಹವನ್ನೂ ಆತ್ಮಾಭಿಮಾನವನ್ನೂ ಉಂಟುಮಾಡಿತು. ಆತನ ವ್ಯಾಸಂಗ ದೃಢೀಕೃತವಾಯಿತು. ಆತನು ಇನ್ನೂ ಅನೇಕ ಪ್ರಾಚೀನ ಕನ್ನಡ ಸಂಸ್ಕೃತ ಲಕ್ಷ್ಯ ಲಕ್ಷಣ ಗ್ರಂಥಗಳನ್ನೂ ಆಧುನಿಕ ಕತೆ ಕಾದಂಬರಿಗಳನ್ನೂ ಓದತೊಡಗಿದನು. ಸಂಗೀತ ಜ್ಞಾನವನ್ನೂ ಹೆಚ್ಚಿಸಿಕೊಂಡನು. ಇವುಗಳ ಫಲವಾಗಿ ಸ್ಕಾಂದಪುರಾಣದೊಳಗಿನ ಷಣ್ಮುಖ ಚರಿತ್ರೆಯ "ಕುಮಾರ ವಿಜಯ"ವೆಂಬ ಹೆಸರಿನಿಂದ ಈತನ ಲೇಖನಿಯ ಮೂಲಕ ಹೊರಬಿದ್ದಿತು. ಈ ಕೃತಿಯು ಮೊದಲ ಕೃತಿಗಿಂತಲೂ ಅನೇಕ ವಿಧದಲ್ಲಿ ಉತ್ತಮವಾಗಿ ಅನೇಕರ ಮೆಚ್ಚುಗೆಯನ್ನು ಪಡೆಯಿತು. ಇದನ್ನು ಕವಿಯು ತನ್ನ ದ್ವಿತೀಯ ಗುರುಗಳಾದ ಮಳಲಿ ಸುಬ್ಬರಾಯರಿಗೆ ಅಂಕಿತ ಮಾಡಿದನು. ಉಡುಪಿಯ ಹಿಂದೂ ಮುದ್ರಣಾಲಯದಲ್ಲಿ ಕವಿಯ ಎರಡು ಕೃತಿಗಳೂ ಅಚ್ಚಾದವು. ಪಂಡಿತವರ್ಯರಾದ ಪಂಜೆ ಮಂಗೇಶರಾಯರೇ ಮೊದಲಾದವರು ಆ ತರುಣದಲ್ಲಿ ಅದನ್ನು ಓದಿ

ಬೆರಗಾದರಂತೆ. 'ಕುಮಾರ ವಿಜಯ'ವನ್ನು ಬಿಟ್ಟರೆ ಪ್ರಸಂಗವಿಲ್ಲ ನಂದಳಿಕೆಯವರನ್ನು ಬಿಟ್ಟರೆ ಕವಿಗಳಿಲ್ಲ ಎಂಬ ಪ್ರಶಸ್ತಿ ಎಲ್ಲೆಲ್ಲಿಯೂ ತಲೆದೋರಿತಂತೆ.

ಈ ಮಧ್ಯೆ ಮಳಲಿ ಸುಬ್ಬರಾಯರಿಗೆ ಕುಂದಾಪುರದ ಬೋರ್ಡ್ ಹೈಸ್ಕೂಲಿಗೆ ವರ್ಗವಾಯಿತು. ಇದರಿಂದ ಲಕ್ಷ್ಮೀನಾರಾಯಣನ ವ್ಯಾಸಂಗಕ್ಕೆ ಸ್ವಲ್ಪ ವಿಘ್ನವೊದಗಿದಂತಾಯಿತು. ಇದನ್ನು ಗುರು ಶಿಷ್ಯರಿಬ್ಬರೂ ಸಹಿಸದಾದರು. ಬಹುಶಃ ಇಬ್ಬರ ಪ್ರಯತ್ನದಿಂದ ೧೮೮೨ನೆಯ ಮಾರ್ಚಿನಲ್ಲಿ ಲಕ್ಷ್ಮೀನಾರಾಯಣನೂ ಕುಂದಾಪುರದ ಹೈಸ್ಕೂಲಿಗೆ ಅಂಗಸಾಧನೆಯ ಶಿಕ್ಷಕನಾಗಿ ವರ್ಗಾಯಿಸಲ್ಪಟ್ಟನು. ಈಗ ಆತನ ಸಾಹಿತ್ಯ ವ್ಯವಸಾಯ ಬಹು ಭರದಿಂದ ಸಾಗಿತು. ಸುಬ್ಬರಾಯರಲ್ಲಿದ್ದ 'ಕಾವ್ಯಮಂಜರಿ' ಪತ್ರಿಕೆಯ ಸಂಚಿಕೆಗಳನ್ನೂ 'ಶಬ್ದಮಣಿದರ್ಪಣ'ವೇ ಮೊದಲಾದ ಹಳಗನ್ನಡ ವ್ಯಾಕರಣಗಳನ್ನೂ ಹಲಧರಾದಿ ನಿಘಂಟುಗಳನ್ನೂ ಇತರ ಉದ್ಗ್ರಂಥಗಳನ್ನೂ ಒಂದೊಂದಾಗಿ ತೆಗೆದುಕೊಂಡು ಹೋಗಿ ಕಿಟೆಲ್ ನಿಘಂಟಿನ ಸಹಾಯದಿಂದ ಅಭ್ಯಾಸ ಮಾಡಿದನು. ಆತನ ಸಾಹಿತ್ಯ ಜ್ಞಾನವೂ ಶಬ್ದ ಪ್ರಪಂಚವೂ ವಿಸ್ತಾರವಾದವು.

ಈಗ ಆತನಿಗೆ ಕಾವ್ಯ ರಚನೆಯನ್ನು ಮಾಡಬೇಕೆಂಬ ಬಯಕೆಯು ಹೆಚ್ಚಿತು. ಸಂಸ್ಕೃತದಲ್ಲಿದ್ದ 'ಅದ್ಭುತ ರಾಮಾಯಣ'ವನ್ನು ಸುಬ್ಬರಾಯರ ಮುಖೇನ ಪ್ರತಿದಿನವೂ ಅಭ್ಯಾಸ ಮಾಡಿ ಕನ್ನಡದಲ್ಲಿ ಬರೆಯತೊಡಗಿದನು. ಮೊದಮೊದಲು ಕೆಲವು ನ್ಯೂನಾತಿರಿಕ್ತಗಳು ಕಂಡುಬಂದರೂ ಸಂಪೂರ್ಣವಾಗುವ ವೇಳೆಗೆ ಯೋಗ್ಯವಾದ ಉದ್ಗ್ರಂಥವಾಗಿಯೇ ಪರಿಣಮಿಸಿತು. ಅದನ್ನು ಪ್ರಕಟಿಸಲು ಆರ್ಥಿಕ ಸೌಕರ್ಯವಿಲ್ಲದುದರಿಂದ ಬಹುಶಃ ಗುರುವಿನ ಸೂಚನೆಯ ಮೇಲೆ ಅದೊಂದು ಪ್ರಾಚೀನ ಗ್ರಂಥವೆಂಬ ಸೋಗಿನಿಂದ ಅದನ್ನು ಸೂಕ್ತವಾದರೆ ಪ್ರಕಾಶ ಮಾಡಬಹುದೆಂದು ಮೈಸೂರು 'ಕಾವ್ಯಮಂಜರಿ' ಸಂಪಾದಕರಿಗೆ ಕಳುಹಿಸಿಕೊಟ್ಟನು. ಕಾವ್ಯದ ಶಬ್ದ ವೈಖರಿಯನ್ನೂ ಪ್ರಾಚೀನ ಶೈಲಿಯನ್ನೂ ನೋಡಿ ಸಂಪಾದಕರು ಅದನ್ನು ಪ್ರಾಚೀನ ಗ್ರಂಥವೆಂದು ಭ್ರಮಿಸಿ ತಮ್ಮ ೧೮೯೫ನೆಯ ಇಸವಿ ಜುಲೈ ತಿಂಗಳ ೪೦ನೆಯ ಸಂಚಿಕೆಯಲ್ಲಿ ಪ್ರಾರಂಭಿಸಿ ಅಕ್ಟೋಬರ್ ತಿಂಗಳಿನ ೪೩ನೆಯ ಸಂಚಿಕೆಯಲ್ಲಿ ಪೂರ್ಣವಾಗಿ ಪ್ರಕಟಗೊಳಿಸಿದರು. ಅದನ್ನು ಓದಿದ ಪಂಡಿತರನೇಕರು ಗ್ರಂಥದ ವಿಷಯದಲ್ಲಿ ತಮ್ಮ ಪೂರ್ಣ ಮೆಚ್ಚಿಗೆಯನ್ನು ಶ್ರುತಪಡಿಸಿದರು. ಕವಿಯು ಮಾತ್ರ ಗ್ರಂಥವು ಸ್ವಕರ್ತೃಕವೆಂಬ ವಿಷಯವನ್ನು ಯಾರಿಗೂ ತಿಳಿಯಪಡಿಸಲಿಲ್ಲ.

ಇದೇ ಸಮಯದಲ್ಲಿ ಲಕ್ಷ್ಮೀನಾರಾಯಣನಿಗೆ ಬಯಲಾಡಿ ವೆಂಕಟರಮಣ ಹೆಬ್ಬಾರ್ ಎಂಬ ಪಂಡಿತರ ಸ್ನೇಹವಾಯಿತು. ಹೆಬ್ಬಾರರು ಪಂಡಿತರು ಮಾತ್ರವಲ್ಲದೆ ರಸಿಕರೂ ಕವಿಗಳೂ ಆಗಿದ್ದರು. ಹಳಗನ್ನಡ ಗ್ರಂಥಗಳಲ್ಲಿ ವಿಶೇಷ ಪರಿಶ್ರಮವನ್ನು ಪಡೆದಿದ್ದರು. ಲಕ್ಷ್ಮೀನಾರಾಯಣನು ಕುಂದಾಪುರದಲ್ಲಿದ್ದಾಗ ವಾಸಮಾಡುತ್ತಿದ್ದ ಹೋಟೆಲಿಗೆ ಅವರೂ ಆಗಾಗ ಬಂದು ಇಳಿದುಕೊಳ್ಳುತ್ತಿದ್ದುದರಿಂದ ಇವರ ಸ್ನೇಹವು

ಗಾಢವಾಯಿತು. ತಾನು ಜೈಮಿನಿಭಾರತದ ಮಾದರಿಯಲ್ಲಿ ಸಂಸ್ಕೃತ ರಾಮಾಶ್ವಮೇಧದ ಆಧಾರದ ಮೇಲೆ ಬರೆಯುತ್ತಿದ್ದ ವಾರ್ಧಕ ಷಟ್ಪದಿಯ ಗ್ರಂಥವನ್ನು ಲಕ್ಷ್ಮೀನಾರಾಯಣನು ಹೆಬ್ಬಾರರಿಗೆ ತೋರಿಸಿದನು. ಹೆಬ್ಬಾರರು ಲಕ್ಷ್ಮೀನಾರಾಯಣನಿಗೆ ಪದ್ಯಕ್ಕಿಂತ ಗದ್ಯ ರಚನೆಯಲ್ಲಿ ಹೆಚ್ಚು ಕೌಶಲ್ಯವಿದೆಯೆಂದೂ ಆ ರೀತಿಯಲ್ಲಿ ಮುಂದುವರಿಯುವುದೇ ಶ್ರೇಯಸ್ಕರವೆಂದೂ ತಿಳಿಸಿದರು. ಕವಿಯು ಆದಿಭಾಗವನ್ನು ಪದ್ಯದಲ್ಲಿಯೇ ಬರೆದು ಮುಗಿಸಿದ್ದುದರಿಂದ ಆ ಭಾಗವನ್ನು "ಶ್ರೀರಾಮ ಪಟ್ಟಾಭಿಷೇಕ" ಎಂಬ ಪ್ರತ್ಯೇಕ ಗ್ರಂಥವಾಗಿಯೇ ಸಿದ್ಧಪಡಿಸಿದನು. ಅದಕ್ಕೆ ಅವಶ್ಯವಾಗಿದ್ದ ಕೆಲವು ಸ್ತೋತ್ರ ಭಾಗಗಳನ್ನು ರಚಿಸಿ ಕೊಟ್ಟಿದ್ದಲ್ಲದೆ ಹೆಬ್ಬಾರರು ಗ್ರಂಥವನ್ನು ಪೂರ್ಣವಾಗಿ ಪರಿಷ್ಕರಿಸಿ ಕೊಟ್ಟರು. ಅದನ್ನು ಮಹಾಲಕ್ಷ್ಮಿಯೆಂಬ ಪ್ರಾಚೀನ ಕವಯಿತ್ರಿಯಿಂದ ರಚಿತವಾದ ಗ್ರಂಥವೆಂದು ಕಾವ್ಯಮಂಜರಿಯ ಸಂಪಾದಕರಿಗೆ ಕಳುಹಿಸಿಕೊಟ್ಟನು. ಗ್ರಂಥ ಕರ್ತೃವಿನ ವಿಷಯವಾಗಿ ಸಂಪಾದಕರು ಪ್ರಶ್ನೆ ಮಾಡಿದಾಗ ಕವಿಯು ಸರಿಯಾದ ಉತ್ತರ ಕೊಡದೆ ಪ್ರಾಚೀನ ಗ್ರಂಥವೆಂಬ ಭಾವನೆಯನ್ನು ಮಾತ್ರ ಖಚಿತಪಡಿಸಿದನು. 'ರಾಮ ಪಟ್ಟಾಭಿಷೇಕ'ವು ಕಾವ್ಯಮಂಜರಿಯ ೪೪ನೆಯ ಸಂಚಿಕೆಯಲ್ಲಿ ಪ್ರಾರಂಭವಾಗಿ ೪೬ನೆಯ ಸಂಚಿಕೆಯಲ್ಲಿ ಪೂರ್ಣವಾಗಿ ಪ್ರಕಟವಾಯಿತು.

ತನಗೆ ಗದ್ಯ ರಚನೆಯಲ್ಲಿ ವಿಶೇಷ ಕೌಶಲವಿದೆಯೆಂದು ಹೆಬ್ಬಾರರು ಕೊಟ್ಟ ಸಲಹೆ ಲಕ್ಷ್ಮೀನಾರಾಯಣನ ಮೇಲೆ ವಿಶೇಷ ಪರಿಣಾಮಕಾರಿಯಾಯಿತು. ಮುಂದಿನ ಭಾಗವನ್ನು ಗದ್ಯದಲ್ಲಿಯೇ ಬರೆಯಬೇಕೆಂದು ಸಂಕಲ್ಪಿಸಿದನು. ಸಂಸ್ಕೃತದ ಪದ್ಮಪುರಾಣಾಂತರ್ಗತವಾದ ಶೇಷವಾತ್ಸ್ಯಾಯನ ಸಂಭಾಷಣಾ ರೂಪದಲ್ಲಿದ್ದ ಮೂಲ ರಾಮಾಶ್ವಮೇಧವನ್ನು ಪೂರ್ಣವಾಗಿ ಹೃದ್ಗತಮಾಡಿಕೊಂಡಾಗಿದ್ದಿತು. ಆಗತಾನೆ ಬಿ. ವೆಂಕಟಾಚಾರ್ಯರಿಂದ ಭಾಷಾಂತರಿತವಾದ ಬಂಗಾಳಿ ಕಾದಂಬರಿಗಳ ಸಂಭಾಷಣಾಮಯವಾದ ಗದ್ಯ ಶೈಲಿಯು ಕವಿಯನ್ನು ಆಕರ್ಷಿಸಿತ್ತು. ಜನ್ಮತಃ ರಕ್ತಗತವಾದ ಹಾಸ್ಯ ಪ್ರವೃತ್ತಿ ಸಹಜವಾಗಿಯೇ ಇತ್ತು. ಈ ತ್ರಿವೇಣೀ ಸಂಗಮದಿಂದ ಒಂದು ಹೊಸ ಗದ್ಯ ಶೈಲಿಯನ್ನು ರಚಿಸುತ್ತೇನೆಂದು ಹೊರಟು "ಪದ್ಯಂ ವಧ್ಯಂ ಗದ್ಯಂ ಹೃದ್ಯಂ, ಹೃದ್ಯಮಪ್ಪ ಗದ್ಯದೊಳ್ ಪೇೞ್ವುದು" ಎಂಬ ಸಿದ್ಧಾಂತಕ್ಕೆ ಬಂದು ಪ್ರಾಚೀನ ಗದ್ಯ ಗ್ರಂಥಗಳ ಪೆಡಸಾಗಲಿ ಆಧುನಿಕ ಗದ್ಯ ಗ್ರಂಥಗಳ ಸಡಿಲತೆಯಾಗಲಿ ಇಲ್ಲದ ಕನ್ನಡ ಸಂಸ್ಕೃತ ಶಬ್ದಗಳ ಜೋಡಣೆಯಲ್ಲಿ ಯಾವ ವೀರಪಕ್ಷವನ್ನೂ ಅವಲಂಬಿಸದೆ ಮಧ್ಯಮಾರ್ಗಿಯಾಗಿ 'ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ, ರಸಮೊಸರೆ, ಲಕ್ಕಣಂಮಿಕ್ಕಿರೆ, ಎಡೆ ಎಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ'. ಎಂದು 'ರಾಮಾಶ್ವಮೇಧ' ಗ್ರಂಥವನ್ನು ರಚಿಸಲು ಪ್ರಾರಂಭಿಸಿದನು. ಕವಿಯ ಪ್ರತಿಭೆ, ಪಾಂಡಿತ್ಯೋತ್ಸಾಹಗಳಿಂದ ಮುಪ್ಪುರಿಗೊಂಡು ರಾಮಾಶ್ವಮೇಧವು "ಈ ಬಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲ, ನಾಡೊಳೆಲ್ಲರ್ಗಂ ಬಲ್ಸೊಗಸು, ಬಲ್ಸೊಗಸು" ಎನ್ನುವಂತಾಯ್ತು. ಈ ಗ್ರಂಥವನ್ನೂ ಲಕ್ಷ್ಮೀನಾರಾಯಣನು ಮುದ್ದಣನೆಂಬ ಪ್ರಾಚೀನ ಕವಿಯೊಬ್ಬನಿಂದ

ರಚಿತವಾದುದೆಂದು ಪ್ರಕಟಣೆಗಾಗಿ 'ಕಾವ್ಯಮಂಜರಿ'ಯ ಸಂಪಾದಕರಿಗೆ ಕಳುಹಿಸಿಕೊಟ್ಟನು. ಕೆಲಕಾಲ ಕಾರಣಾಂತರದಿಂದ ಕಾವ್ಯಮಂಜರಿ ಪತ್ರಿಕೆಯು ನಿಂತು ಹೋದುದರಿಂದ ಅದರ ಪ್ರಕಟಣೆಯು ಸ್ವಲ್ಪ ತಡವಾಯಿತು. ಆದರೆ ಪುನಃ "ಕಾವ್ಯಕಲಾನಿಧಿ"ಯೆಂಬ ಹೆಸರಿನಿಂದ ಅದೇ ಸಂಪಾದಕರಿಂದ ಪ್ರಾರಂಭವಾದ ಪತ್ರಿಕೆಯಲ್ಲಿ ರಾಮಾಶ್ವಮೇಧವು ಕ್ರಮವಾಗಿ ಪ್ರಕಟವಾಗಿ ೧೫-೦೮-೧೯೦೧ರಲ್ಲಿ ಹೊರಟ ೧೭-೧೮ನೆಯ ಸಂಚಿಕೆಗಳಲ್ಲಿ ಪೂರ್ಣವಾಯಿತು. ಈ ಮಧ್ಯೆ ಪತ್ರಿಕೆಯ ಸಂಪಾದಕರು ಕರ್ತೃವಿನ ನಿಜಾಂಶವನ್ನು ಎಷ್ಟು ಕೇಳಿದರೂ ಲಕ್ಷ್ಮೀನಾರಾಯಣನು ಸ್ವಲ್ಪವೂ ಗುಟ್ಟನ್ನು ಬಿಟ್ಟು ಕೊಡಲಿಲ್ಲ. ಗ್ರಂಥಕರ್ತನ ಹೆಸರನ್ನು ತಿಳಿಸಿದರೆ ಹೊಸದೆಂದು ಎಲ್ಲಿ ಗ್ರಂಥವು ಪ್ರಕಟವಾಗದೇ ಹೋಗುತ್ತದೆಯೋ ಎಂಬ ಭಯವೋ, ತಪ್ಪುಗಳೇನಾದರೂ ಇದ್ದರೆ ತನ್ನ ಗೌರವಕ್ಕೆ ಎಲ್ಲಿ ಕುಂದು ಬರುತ್ತದೆಯೋ ಎಂಬ ಶಂಕೆಯೋ, ಎಲ್ಲರ ಮೆಚ್ಚಿಗೆಯನ್ನು ಪಡೆಯುವುದಾದರೆ ಆಗ ತನ್ನ ಕರ್ತೃತ್ವವನ್ನು ಹೊರಗೆಡಹೋಣವೆಂಬ ನಿರೀಕ್ಷೆಯೋ ಈ ರೀತಿಯ ಮರೆಮಾಚುವುದಕ್ಕೆ ಕಾರಣವಿರಬೇಕು. ಹೇಗಾದರೂ ಗ್ರಂಥ ಪ್ರಚಾರವಾದ ತಕ್ಷಣವೇ ಪಂಡಿತಪಾಮರರಿಂದ ಗ್ರಂಥ ವಿಷಯವಾಗಿ ಮೆಚ್ಚಿಗೆಯ ಸುರಿಮಳೆಯೇ ಆಯ್ತು.

ಇದರಿಂದ ಕವಿಯ ಉತ್ಸಾಹ ಮತ್ತೂ ಗರಿಗಟ್ಟಿತು. ಅವನ ಆಶಾಪಕ್ಷಿ ಗರಿಗೆದರಿ ಸಾಹಿತ್ಯಾಕಾಶದಲ್ಲಿ ಬಹುಮುಖವಾಗಿ ವಿಹರಿಸಲು ತೊಡಗಿತು. ಲಕ್ಷ್ಮೀನಾರಾಯಣನು ಭಟ್ಟಾಕಳಂಕನ ಶಬ್ದಾನುಶಾಸನದ ಮಾದರಿಯಲ್ಲಿ ಸೂತ್ರವೃತ್ತಿ ವ್ಯಾಖ್ಯಾನಗಳಿಂದ ಕೂಡಿದ ವ್ಯಾಕರಣವನ್ನು ರಚಿಸಬೇಕೆಂದು ಹೊರಟು ಅಕ್ಷರಖಂಡದವರೆಗೆ ಮುಗಿಸಿದನು. "ಗೋದಾವರಿ" ಎಂಬ ಕಾದಂಬರಿಯನ್ನು ಪ್ರಾರಂಭಿಸಿ ಕೆಲವು ಪರಿಚ್ಛೇದಗಳನ್ನು ಬರೆದನು. ಕನ್ನಡ ವಿಶ್ವಕೋಶವೊಂದನ್ನು ನಿರ್ಮಿಸಬೇಕೆಂದು ಸಂಕಲ್ಪಿಸಿದ್ದನು. ಜೋ ಜೋ ಶಬ್ದದ ವ್ಯುತ್ಪತ್ತಿಯನ್ನು ಕುರಿತು ವಿಮರ್ಶಾತ್ಮಕ ಲೇಖನವೊಂದನ್ನು ರಚಿಸಿದ್ದನು. ಇದು "ಸುವಾಸಿನಿ" ಪತ್ರಿಕೆಯ ೧೯೦೦ನೆಯ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾಗಿದೆ. ಭಗವದ್ಗೀತೆಯನ್ನು ಭಾಮಿನಿ ಷಟ್ಪದಿಯಲ್ಲಿಯೂ "ಕರ್ಣಾಟಕ ರಾಮಾಯಣ"ವನ್ನು ವಾರ್ಧಕ ಷಟ್ಪದಿಯಲ್ಲಿಯೂ ರಚಿಸಿದ್ದನಂತೆ. ಒಂದು 'ಕಾಮಶಾಸ್ತ್ರವನ್ನೂ' 'ತಾಂಡವಮುನಿಯ ಕತೆ'ಯನ್ನೂ ಬರೆದಿರುವ ಹಾಗೆ ಪ್ರತೀತಿ. ಇವು ಯಾವವೂ ಉಪಲಬ್ಧವಲ್ಲ. ಇವನು ಆರಂಭಿಸಿದ ಸರ್ವತೋಮುಖವಾದ ಗ್ರಂಥರಾಶಿಯು ಪೂರ್ಣತೆಯನ್ನು ಪಡೆಯುವುದಕ್ಕೆ ಮೊದಲೇ ಕರಾಳನಾದ ಕಾಲಪುರುಷನ ಕೈಗೆ ಸಿಕ್ಕಿ ೧೯೦೧ನೆಯ ಫೆಬ್ರವರಿ ೧೫ನೆಯ ಶಾರ್ವರಿ ಮಾಘ ಬಹುಳ ೧೨ ಶುಕ್ರವಾರ ತನ್ನ ೩೧ನೆಯ ವರ್ಷ ಕಳೆದ ಕೆಲವೇ ದಿನಗಳಲ್ಲಿ ಅಕಾಲ ಮೃತ್ಯುವಿಗೆ ಈಡಾದನು.

ಮುದ್ದಣ ವಿರಚಿತ "ರಾಮಾಶ್ವಮೇಧ"ದ ಪರಿಚಯಕ್ಕೆ ಹೊರಡುವ ಮೊದಲು ಅದಕ್ಕೆ ಹಿನ್ನೆಲೆಯಾಗಿರುವ ಮತ್ತು ಅದರ ಪರಿಚಯಕ್ಕೆ ಬಹುಮಟ್ಟಿಗೆ ಪ್ರಯೋಜನವಾಗಬಹುದಾದ ಕವಿಯ ವೈಯಕ್ತಿಕ ಜೀವನದ ಪರಿಚಯ

ಅಪ್ರಸಕ್ತವಾಗಲಾರದು. ಕವಿ ಲಕ್ಷ್ಮೀನಾರಾಯಣನು ಅಷ್ಟೇನೂ ಉದ್ದಾಮ ಪಂಡಿತರಲ್ಲದ ಸಾಮಾನ್ಯ ಬಡಸಂಸಾರದಲ್ಲಿ ಹುಟ್ಟಿದರೂ ತನ್ನ ಸ್ವಂತ ಕೃಷಿಯಿಂದ ಉನ್ನತ ಪಂಡಿತ ಮನೆತನದವರಿಗೂ ಲಭಿಸದ ಸಾಹಿತ್ಯ ಕ್ಷೇತ್ರವನ್ನು ಕಲ್ಪಿಸಿಕೊಂಡನು. ಹುಟ್ಟುವಾಗಲೇ ಆಗರ್ಭ ಶ್ರೀಮಂತರಾಗಿಯಾಗಲಿ ಅರೋಗ ದೃಢಕಾಯರಾಗಲಿ ಇರುವುದು ಕೆಲವೇ ಅದೃಷ್ಟಶಾಲಿಗಳಿಗೆ ಸಾಧ್ಯ. ಉಳಿದವರು ತಮಗೆ ಲಭ್ಯವಾದುದರಲ್ಲಿ ತೃಪ್ತರಾಗಿ ಪಾಲಿಗೆ ಬಂದುದು ಪಂಚಾಮೃತವೆಂಬ ಮನೋಭಾವವನ್ನು ಹೊಂದಿದರೆ ಸುಖವಾಗಿರಲು ಸಾಧ್ಯ. ಲಕ್ಷ್ಮೀನಾರಾಯಣ ಈ ಜಾತಿಗೆ ಸೇರಿದವನು. ಆಕಾರದಲ್ಲಿ ಬಹು ಸುಂದರಾಂಗನೇನೂ ಅಲ್ಲ. ಔನ್ನತ್ಯದಲ್ಲಿಯೂ ಹಾಗೆಯೆ. ಲಕ್ಷ್ಮೀನಾರಾಯಣನ "ನಿಲುವು ಸುಮಾರು ಐದು ಅಡಿ ನಾಲ್ಕು ಅಂಗುಲ, ರೂಪ ಸುಂದರ, ಮುದ್ರೆ ಗಂಭೀರ, ಕಣ್ಣು ಬಹುಚಂಚಲ, ಮೂಗು ಸ್ವಲ್ಪ ಉದ್ದ, ನಡೆಗೆ ಸ್ವಲ್ಪ ದಿಟ್ಟ, ಮಾತುಗಾರಿಕೆ ಬೇಕಾದಷ್ಟೆ, ಭಾಷೆ ಶುದ್ಧ, ಬುದ್ಧಿ ಶಾನೆ ಚುರುಕು" ಎಂದು ಶ್ರೀ ಗೋವಿಂದ ಪೈಗಳು ಬರೆದಿದ್ದಾರೆ. ಅವನು ಅರೋಗ ದೃಢಕಾಯನಾಗಿದ್ದನೆಂಬುದು ಅವನ ವೃತ್ತಿಯಿಂದಲೇ ಶ್ರುತಪಡುತ್ತದೆ. ವರಮಾನ ತಿಂಗಳಿಗೆ ೧೦ ರೂಪಾಯಿಂದ ಪ್ರಾರಂಭವಾಗಿ ೨೦ಕ್ಕೆ ಏರಿ ಮದ್ರಾಸಿನಲ್ಲಿ ೪೦ ಸಿಕ್ಕಬಹುದೇನೋ ಎಂಬ ಕನಸಿನಲ್ಲಿಯೇ ತೀರಿಕೊಂಡವನು. ಆದರೂ ಅವನು ಇದ್ದುದರಲ್ಲಿ ತನ್ನ ಗ್ರಾರ್ಹಸ್ಥ್ಯ ಜೀವನವನ್ನು ಸುಖಮಯವನ್ನಾಗಿ ಮಾಡಿಕೊಂಡಿರಬೇಕು. ಆತನಿಗೆ ೨೫ನೆಯ ವಯಸ್ಸಿನಲ್ಲಿ ಅಂದರೆ ೧೮೯೩ರಲ್ಲಿ ಮದುವೆಯಾಯಿತು. ಶಿವಮೊಗ್ಗ ಡಿಸ್ಟ್ರಿಕ್ಟ್ ಕಾಗೇಕೋಡಮಗ್ಗಿ ಗ್ರಾಮದ ನಾರಣಪ್ಪಯ್ಯನ ಮಗಳು ಕಮಲಾಬಾಯಿ ಎಂಬುವಳು ಈತನ ಹೆಂಡತಿ, 'ಅದ್ಭುತ ರಾಮಾಯಣ'ವೇ ಮೊದಲಾದ ಗ್ರಂಥಗಳನ್ನು ರಚಿಸುವ ವೇಳೆಗೆ ಕವಿ ಗೃಹಸ್ಥಾಶ್ರಮದಲ್ಲಿ ಕಾಲಿಟ್ಟಿದ್ದನು. ಸ್ವತಃ ರಸಿಕನಾದ ಕವಿಯು ಹೊಸ ಗೃಹಿಣಿಯೊಡನೆ ಅನುಕೂಲ ದಾಂಪತ್ಯ ರಸವನ್ನು ಸೂರೆಗೊಳ್ಳುತ್ತಿದ್ದನೆಂದು ನಿಸ್ಸಂಶಯವಾಗಿ ಹೇಳಬಹುದು. ಹುರುಳಿ ಭೀಮರಾಯರ ಮಾತಿನಂತೆ ಇವನ ಪತ್ನಿಯೂ ಇವನಿಗೆ ಅನುಗುಣಳಾದ ರಸಿಕಳೇ ಆಗಿದ್ದಳು. ಕವಿಯು ತನ್ನ ತಾರುಣ್ಯದ ಉತ್ಸಾಹದಲ್ಲಿ ಆಕೆಯನ್ನು ವಿಧವಿಧವಾಗಿ ಸಂಬೋಧಿಸಿ ಕೆಣಕಿ ರೇಗಿಸಿದಾಗ ಆಕೆಯೂ ಸರಿಸಮನಾದ ನಿಲುವಿನಿಂದ ಮೂದಲಿಸಿಯೂ ಇರಬೇಕು. ರಾಮಾಶ್ವಮೇಧದಲ್ಲಿ ಸೀತೆಯು ಮಕ್ಕಳಾಗದಿದ್ದುದಕ್ಕಾಗಿ ವ್ಯಥೆಪಡುವುದು ಈ ಪತಿಪತ್ನಿಯರ ಆದಿಕಾಲದ ಹಂಬಲದ ಪ್ರತಿಬಿಂಬವೆಂದು ಹೇಳುವುದರಲ್ಲಿ ಸಂದೇಹವಿಲ್ಲ. ಅಲ್ಲಿ ಬರುವ ಮುದ್ದಣ–ಮನೋರಮೆಯರ ಸಂಭಾಷಣೆಯು ಈ ಗಂಡಹೆಂಡಿರ ದಿನಚರಿಯ ವ್ಯವಹಾರದ ಪ್ರತಿಧ್ವನಿಯೆಂದು ನಿಸ್ಸಂಶಯವಾಗಿ ಹೇಳಬಹುದು. ಲಕ್ಷ್ಮೀನಾರಾಯಣನಿಗೆ ತನ್ನ ೩೦ನೆಯ ವಯಸ್ಸಿನಲ್ಲಿ ದಾಂಪತ್ಯ ಜೀವನದ ಸಾರಸರ್ವಸ್ವರೂಪವಾದ ರಾಧಾಕೃಷ್ಣನೆಂಬ ಮಗನು ಹುಟ್ಟಿದನು. ಆದರೆ ಆ ಸೌಖ್ಯವನ್ನು ಬಹುಕಾಲ ಅನುಭವಿಸಲು ಆತನು ಕೇಳಿ ಬಂದಿರಲಿಲ್ಲ. ಮಗುವಿಗೆ ಒಂದು ವರ್ಷವಾಗುವುದರೊಳಗೇ ತಂದೆ ತೀರಿಕೊಂಡನು. ಇದ್ದಷ್ಟು

ಕಾಲ ಇದ್ದುದರಲ್ಲಿ ತೃಪ್ತಿಹೊಂದಿ ಬಾಳನ್ನು ಬೆಳುದಿಂಗಳಾಗಿಸಿ ಸ್ವಂತ ಕೃಷಿಯಿಂದಲೇ ಉದ್ದಾಮ ಸಾರಸ್ವತ ಸಂಪತ್ತನ್ನು ಪಡೆದು ಹಿರಿಯ ಹೆಸರಾಗಿ ಬಾಳಿ ಮಡಿದವನು ಲಕ್ಷ್ಮೀನಾರಾಯಣ. ಆತನ ಜೀವಂತ ಕಾಲದಲ್ಲಿ ಆತನ ಜೀವನದ ಮೇಲೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಪ್ರಭಾವವನ್ನು ಬೀರಿದ ಮಳಲಿ ಸುಬ್ಬರಾಯರು, ಹುರಳಿ ಭೀಮರಾಯರು, ಪಂಜೆ ಮಂಗೇಶರಾಯರು, ಗೋವಿಂದ ಪೈಗಳು ಮತ್ತು ಬೆನಗಲ್ ರಾಮರಾಯರು ಮುಂತಾದವರು ಅವನ ಅನ್ಯಾದೃಶವಾದ ಶಕ್ತಿಯನ್ನೂ ವಿನೀತ ಸ್ವಭಾವವನ್ನೂ ವಿಶೇಷವಾಗಿ ಹೊಗಳಿ ಮೇಲೆ ಸೂಚಿಸಿರುವ 'ಅದ್ಭುತ ರಾಮಾಯಣ', 'ರಾಮ ಪಟ್ಟಾಭಿಷೇಕ' ಮತ್ತು 'ರಾಮಾಶ್ವಮೇಧ'ಗಳು ಅವನಿಂದಲೇ ರಚಿತವಾದುವೆಂದು ತಮ್ಮ ಸ್ವಂತ ಸಾಕ್ಷ್ಯದಿಂದ ದೃಢೀಕರಿಸಿದ್ದಾರೆ.

'ರಾಮಾಶ್ವಮೇಧ'ವೂ ಜೈಮಿನಿಭಾರತದಂತೆಯೇ ಒಂದು ಮಾಹಾತ್ಮ್ಯ ಗ್ರಂಥ. ಅದು 'ಕೃಷ್ಣಚರಿತಾಮೃತ'ವಾದರೆ ಇದು 'ರಾಮಚರಿತಾಮೃತ'. ಇಲ್ಲಿ ವಸ್ತುವಿಗೆ ಪ್ರಾಶಸ್ತ್ಯವಿಲ್ಲ. ಯಜ್ಞಾಶ್ವಗಮನವ್ಯಾಜದಲ್ಲಿ ಅನೇಕ ಭಕ್ತರ ಚರಿತ್ರೆಗಳನ್ನು ಉಲ್ಲೇಖಿಸಿ ಉದ್ದಿಷ್ಟ ದೇವತಾ ಮಾಹಾತ್ಮ್ಯವನ್ನು ಸ್ಥಿರೀಕರಿಸುವುದು ಈ ಗ್ರಂಥಗಳ ಧ್ಯೇಯ. ಆದುದರಿಂದ ಗ್ರಂಥದಲ್ಲಿ ವಸ್ತುವಿನ ಅನುಸ್ಯೂತವಾದ ಬೆಳವಣಿಗೆಯನ್ನು ಕಾಣಲು ಸಾಧ್ಯವಿಲ್ಲ. ಬಿಡಿಬಿಡಿಯಾದ ಅನೇಕ ಕತೆಗಳು ಜೈತ್ರಯಾತ್ರೆಯೆಂಬ ತಂತುವಿನಿಂದ ಬಂಧಿತವಾಗಿರುತ್ತವೆ. ಆದುದರಿಂದ ಇಂತಹ ಕಾವ್ಯಗಳ ಆಕರ್ಷಣೀಯತ್ವವು ಗ್ರಂಥಕಾರನ ಕಥನ ವರ್ಣನಾದಿ ಕೌಶಲವನ್ನವಲಂಬಿಸಿರುತ್ತದೆ.

ಮುದ್ದಣನ ರಾಮಾಶ್ವಮೇಧಕ್ಕೆ ಪದ್ಮಪುರಾಣಾಂತರ್ಗತವಾದ ಶೇಷವಾತ್ಸ್ಯಾಯನ ಸಂವಾದ ರೂಪವಾದ ಸಂಸ್ಕೃತ ರಾಮಾಶ್ವಮೇಧವೇ ಮೂಲ. ಇದರಲ್ಲಿ ೬೮ ಅಧ್ಯಾಯಗಳಿವೆ. ಮೊದಲನೆಯ ಐದು ಅಧ್ಯಾಯಗಳಲ್ಲಿ ರಾವಣ ವಧೆಯಿಂದ ಹಿಡಿದು ರಾಮ ಪಟ್ಟಾಭಿಷೇಕದವರೆಗಿನ ಕತೆ ಉಕ್ತವಾಗಿದೆ. ಇದರ ಆಧಾರದ ಮೇಲೆಯೆ ಕವಿಯು ತನ್ನ "ರಾಮ ಪಟ್ಟಾಭಿಷೇಕ"ವೆಂಬ ಗ್ರಂಥವನ್ನು ರಚಿಸಿರುವುದು. ಆರನೆಯ ಅಧ್ಯಾಯದಿಂದ ಅರವತ್ತೆಂಟನೆಯ ಅಧ್ಯಾಯದವರೆಗಿನ ಕತೆಯನ್ನು ಬಹು ನಿಕಟವಾಗಿ ಅನುಸರಿಸಿ ಪ್ರಸಕ್ತ ಗ್ರಂಥವನ್ನು ರಚಿಸಿದ್ದಾನೆ. ವಸ್ತುವಿನಲ್ಲಿ ಯಾವ ಮಾರ್ಪಾಟನ್ನೂ ಮಾಡಿಕೊಂಡಿಲ್ಲ. ಪುರಾಣ ಗ್ರಂಥವಾದ ಮೂಲದಲ್ಲಿ ವರ್ಣಿತವಾಗಿರುವ ವಿಷಯಗಳಲ್ಲಿ ಅತಿಯೆಂದು ತೋರಿದುದನ್ನು ಸಂಗ್ರಹಿಸಿ ಅನವಶ್ಯಕವೆಂದು ತೋರಿಬಂದ ಕೆಲವು ವಿಷಯಗಳನ್ನು ಬಿಟ್ಟಿದ್ದಾನೆ. ತೀರ್ಥಯಾತ್ರಾ ಪ್ರಶಂಸಾ, ತೀರ್ಥನಾಮ ಕಥನಂ, ಪುರುಷೋತ್ತಮ ಕ್ಷೇತ್ರವಿಧಿ, ಗೋಸೇವಾನಿರೂಪಣಮ್, ನರಕ ವರ್ಣನಮ್ ಮೊದಲಾದ ಭಾಗಗಳು ಸಂಗ್ರಹಿತವಾಗಿವೆ. ವರ್ಣಾಶ್ರಮ ಧರ್ಮನಿರೂಪಣಮ್, ಕನ್ಯಾವಿಕ್ರಯಾದಿದೋಷ ಪ್ರತಿಷೇಧ ಕಥನಮ್, ಗೋಹತ್ಯಾ ಪ್ರಾಯಶ್ಚಿತ್ತಂ, ಜಾನಕೀಹರಣಾದಿ ತಿಥಿ ನಿಷ್ಕರ್ಷಾ, ಕರ್ಮಗತಿನಿರೂಪಣಮ್, ಕರ್ಮವಿಚಾರವರ್ಣನಮ್, ಸೀತಾಯಾಃ ಶುಕಶಾಪ ನಿರೂಪಣಮ್, ಬ್ರಾಹ್ಮಣಭೋಜನ ವರ್ಣನಮ್, ಅಶ್ವಸ್ಯ ದಿವ್ಯರೂಪ ಪ್ರಾಪ್ತಿಃ

ಎಂಬ ಭಾಗಗಳು ಸಂಪೂರ್ಣವಾಗಿ ಬಿಡಲ್ಪಟ್ಟಿವೆ. ಮೂಲವು ಮಹಾತ್ಮ್ಯ ಗ್ರಂಥವಾಗಿರುವುದರಿಂದ ಕಾವ್ಯಾಂಗಗಳಾದ ಅಷ್ಟಾದಶ ವರ್ಣನೆಗಳಿಗೆ ಅಲ್ಲಿ ಸ್ಥಾನವಿಲ್ಲ. ತಡಿಕೆಯ ರೂಪದಲ್ಲಿರುವ ಕಥಾಭಾಗವನ್ನು ತೆಗೆದುಕೊಂಡು ಮುದ್ದಣನು ತನ್ನ ಪ್ರತಿಭಾ ಪ್ರಖರತೆಯಿಂದಲೂ ಬುದ್ಧಿ ಚಾತುರ್ಯದಿಂದಲೂ ವರ್ಣನಾ ವೈಖರಿಯಿಂದಲೂ ಸಂಭಾಷಣಾ ಕೌಶಲದಿಂದಲೂ ಶೈಲಿಯ ಇಂದ್ರಜಾಲದಿಂದಲೂ ಹಾಸ್ಯ ಪ್ರವೃತ್ತಿಯಿಂದಲೂ ಅದನ್ನು ಒಂದು ಉತ್ತಮ ಕಾವ್ಯವನ್ನಾಗಿ ಮಾರ್ಪಡಿಸಿ ಸರ್ವಾದರಣೀಯವನ್ನಾಗಿ ಮಾಡಿದ್ದಾನೆ.

ರಾಮಾಶ್ವಮೇಧವು ಒಂದು ಕಥಾಗುಚ್ಛವಾಗಿರುವುದು ಅದು ಎಲ್ಲರ ಮೆಚ್ಚಿಗೆಗೆ ಪಾತ್ರವಾಗಿರುವುದಕ್ಕೆ ಮೂಲಕಾರಣ. ಕತೆಯನ್ನು ಕೇಳುವುದು ಆಬಾಲವೃದ್ಧರಿಗೂ ಹಿತವಾದ ವಿಷಯ. ಆರಂಭದಿಂದ ಸುಮದ, ಕಾಮಾಕ್ಷಿ, ಚ್ಯವನ, ರತ್ನಗ್ರೀವ, ಕರ್ವೇಡ, ದಮನ, ಸುಬಾಹು, ಋತಂಭರ, ಅರಣ್ಯಕ, ವಿದ್ಯುನ್ಮಾಲಿ, ವೀರಮಣಿ, ಸುರಥ, ಲವಕುಶ ಮೊದಲಾದವರ ಕತೆಗಳು ಮೇಲೆ ಮೇಲೆ ಬರುತ್ತಿರುವುದರಿಂದ ಅದು ಎಲ್ಲರಿಗೂ ಆಕರ್ಷಕವಾಗಿದೆ.

ಅಲ್ಲದೆ ಮುದ್ದಣನು ಕತೆ ಹೇಳುವುದರಲ್ಲಿ ಬಹು ನಿಪುಣ. ಅದರ ಇತಿಮಿತಿಗಳನ್ನು ಚೆನ್ನಾಗಿ ಅರಿತವನು. ಎಲ್ಲಿ ಹೇಗೆ ಶ್ರೋತೃಗಳ ಉತ್ಸಾಹವನ್ನು ಕೆರಳಿಸಬೇಕೆಂದು ಅವನಿಗೆ ಗೊತ್ತು : ಅದಕ್ಕಾಗಿಯೇ ಅವನು ತನ್ನ ಕಲ್ಪನಾವಿಲಾಸದಿಂದ ಮನೋರಮೆಯ ಪಾತ್ರವನ್ನು ಸೃಷ್ಟಿಸಿಕೊಂಡಿದ್ದಾನೆ. ವಾಸ್ತವವಾಗಿ ಕಾವ್ಯದ ಸುಗಮವಾದ ಬೆಳವಣಿಗೆಗೆ ಅವಳೇ ಜೀವಧಾರೆ. ಮುದ್ದಣ ಮನೋರಮೆಯರ ಲಘುತರವೂ ಹಾಸ್ಯಪೂರಿತವೂ ಆದ ಸಂಭಾಷಣೆಯೇ ವಾಚಕ ಶ್ರೋತೃವೃಂದಗಳ ಉತ್ಸಾಹ ಸಸ್ಯಕ್ಕೆ ಜೀವದಾತೃವಾದ ಅಮೃತವರ್ಷ. ಮನೋರಮೆಯ ಕವಿಯ ಪ್ರೇಯಸಿಯೂ ಅಹುದು; ಶ್ರೋತೃವೂ ಅಹುದು; ವಿಮರ್ಶಕಳೂ ಅಹುದು. ಮನೋಜ್ಞವಾದ ವರ್ಷಾಕಾಲದೊಂದು ದಿನದಲ್ಲಿ ಅರಮನೆಯಿಂದ ಬರುತ್ತಿದ್ದ ಮುದ್ದಣನನ್ನು ಮಡದಿ ಮನೋರಮೆಯು 'ದೂರದೆ ಕಂಡೆಟ್ಟು ಇದಿರ್ವಂದು ಕಾಲ್ಗೆ ನೀರಂ ನೀಡಿ, ಕೈವಿಡಿದೊಂದು ಚೌಕಿಗೆಯ್ದು ಮಣೆಯಿತ್ತು ಕುಳ್ಳಿರಿಸಿ ಒಡನೆಯೆ ತನಿವಣ್ಣಂ ತಿನಲಿತ್ತು ಕೆನೆವಾಲಂ ಕುಡಿವೊಡಿತ್ತು ನಱುದಂಬುಲಮಂ ಸವಿಯಲ್ಕೀಯುತ್ತ' ಬೇಸಱು ಕಳೆಯಲು ಒಂದು ನಲ್ಗತೆಯನ್ನು ಹೇಳುವಂತೆ ಕೇಳುತ್ತಾಳೆ. ಕತೆಗಳಲ್ಲಿ ರಾಮಾಯಣವೇ 'ಉಱಿದೊಡಮಱಿದೊಡಂ ಬಟ್ಟೆದೋಱಿಪ ರಸಭರಿತಚರಿತ'ಮೆಂದು ಸೂಚಿಸುತ್ತಾಳೆ. ಕವಿಯು ಸಾಂಪ್ರದಾಯಿಕ ಸಂಸ್ಕೃತ ಶೈಲಿಯಲ್ಲಿ ಕತೆಯನ್ನು ಪ್ರಾರಂಭಿಸಲು 'ಲೇಸು ಲೇಸು, ನೀರಿಱಿಯದ ಗಂಟಲೊಳ್ ಕಡುಬಂ ತುಱುಕಿದಂತಾಯ್ತು. ಕನ್ನಡದ ಸೊಗಸನಱಿಯಲಾರ್ತೆನಿಲ್ಲೆನೆಗೆ ಸಕ್ಕದದ ಸೊಗಸಂ ಪೇೞ್ವುದು ಗಡ; ತಿರುಳ್ಗನ್ನಡದ ಬೆಳ್ನುಡಿಯೊಳ್ ಪುರುಳೊಂದೆ ಪೇೞ್ವುದು. ಕನ್ನಡಂ ಕತ್ತುರಿಯಲ್ತೆ' ಎಂದು ಎಚ್ಚರಿಸಿ, ಕರ್ಮಣಿ ಸರದೊಳ್ ಚೆಂಬವಳಮಂ ಕೋದಂತಿರೆ, ರಸಮೊಸರೆ, ಲಕ್ಕಣಂ ಮಿಕ್ಕಿರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ,

ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ' ಎಂಬ ಕವಿಯ ಕಥನ ರೀತಿಯನ್ನು ಪ್ರಕಟಪಡಿಸುತ್ತಾಳೆ. ಕತೆಯನ್ನು ಪ್ರಾರಂಭಿಸಿ ದೀರ್ಘವಾದ ಅಯೋಧ್ಯಾ ವರ್ಣನೆಯಲ್ಲಿ ಪತಿಯನ್ನು 'ಇದೇಂ ರಮಣ. ನೋಬ್ಬುದು ನೋಬ್ಬುದೆಂದು ಪೊಱೆಯಂ ಜೆಳೆಯನಾವುದಂ ಬಣ್ಣಿಸಲ್ ಪೋಪಯ್, ಮೇಣುಂ ತೋಱೆದಪುದಿತ್ತಣನಿದುಂ, ಕನಸೋ ನನಸೋ ? ಎನಗೊರ್ಮೆನೆಲನಂ ಮತ್ತೊರ್ಮೆ ಪೊಲನಂ ತೋಱೆ ಬಣ್ಣಿಪುದೇಂ ? ಮುಂತೇಂ' ಎಂದು ಪ್ರಶ್ನಿಸಿ ಕತೆಗೆ ನೇರವಾಗಿ ಪ್ರವೇಶಿಸುವಂತೆ ಸೂಚಿಸುತ್ತಾಳೆ. ಮುಂದೆ ಕವಿಯು ಬಹುಶಃ ಮೂಲಗ್ರಂಥವನ್ನನುಸರಿಸಿ ಸೀತಾತ್ಯಾಗದ ಕತೆಯನ್ನೇ ಹೇಳದೆ ರಾಮನು ಪೊನ್ನ ಸೀತೆಯೊಡನೆ ಯಜ್ಞಾರಂಭ ಮಾಡಿದನೆಂದು ಹೇಳುವನು. ಶ್ರೋತೃಗಳ ಸಹಜ ಕುತೂಹಲಕ್ಕನುಗುಣವಾಗಿ ಮನೋರಮೆಯು 'ರಮಣ, ಇಂತಿದೇಂ, ಪೊನ್ನ ಸೀತೆಯೇಂ. ರನ್ನಸೀತೆಯೆತ್ತ ಪೋದಳ್, ಜನಕಂ ಜನಕಂ ಕರೆದುಯ್ದಿರ್ದನೋ ? ಅಂತಿರೆಯುಂ ಮಗುಬ್ಬುಂ ಕರೆಸಿಕೊಳ್ವುದಲ್ತೆ ನೋಂಪಿಗೆ' ಎಂದು ಪ್ರಶ್ನೆ ಮಾಡಿ ಸೂಕ್ತ ಸ್ಥಳದಲ್ಲಿ ಆ ಕತೆಯನ್ನು ಹೇಳಿ ಮುಂದೆ ಹೋಗುವಂತೆ ಮಾಡುತ್ತಾಳೆ. ಕವಿಯು ಮುಂದೆ ಲಕ್ಷ್ಮಣನು ಅಣ್ಣನಾಜ್ಞೆಯಂತೆ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಹೋದನೆಂದು ಒಂದೇ ವಾಕ್ಯದಲ್ಲಿ ಮುಗಿಸಿ ಮುಂದಿನ ಯಜ್ಞ ವರ್ಣನೆಗೆ ತೊಡಗುತ್ತಾನೆ. ಸೀತಾಪರಿತ್ಯಾಗವನ್ನು ಕೇಳಿದ ಯಾರಿಗಾದರೂ ಕರುಳು ಹಿಂಡಿದಂತಾಗುತ್ತದೆ. ಗರ್ಭಿಣಿಯೂ ಅನಾಥೆಯೂ ಆದ ಸೀತೆ ಏನಾದಳೆಂಬುದನ್ನು ತಿಳಿಯುವುದಕ್ಕೆ ಮುಂಚೆ ಮತ್ತೇನೂ ಬೇಕಾಗುವುದಿಲ್ಲ. ಇದನ್ನು ಸೂಚಿಸುವುದಕ್ಕಾಗಿಯೇ ಮನೋರಮೆಯು ಕಂಬನಿಗಱೆದು 'ಆಃ ಎನ್ನೊಡೆಯ ನೀನುಮೆಂತು ಕಲ್ಮನನಾದಯ್ ? ಒರ್ತಡವೆಯೆ ದೇವಿಯಂ ಕಾರಡವಿಯೊಳುಟಿದು ಲಕ್ಷ್ಮಣಂ ಪೋದನೆಂಬೈ, ಮೈದುನಂಗಮಾದೊಡಮೆಂತು ಮನಮಾದುದೋ ? ಮೇಣೆಂತು ದೇವಿಯರ್ಗೆ ಕಾವಲಿರದೆ ಪೋದನೋ ! ತೊಱೆದು ಪೋಪನ್ನಂ ಸೀತೆಯೇನೆಂದು ಮಱುಗಿದಳೊ ? ಸೀತೆ ಏನಾದಳ್ ಪೇೞ.' ಎಂದು ಕೇಳಿ ಸೀತಾ ಲಕ್ಷ್ಮಣರ ದಾರುಣ ಸ್ಥಿತಿಯ ವರ್ಣನೆಗೂ ವಾಲ್ಮೀಕಿ ಸಂದರ್ಶನಕ್ಕೂ ಅವಕಾಶವನ್ನು ಕಲ್ಪಿಸುವಳು. ಕತೆಯನ್ನು ಹೇಳುತ್ತಾ ಕವಿಯು ಕತೆಯ ಬೇಸರಿಕೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಕಥಾಸರಣಿಯನ್ನು ಬಿಟ್ಟು ಅಡ್ಡಲಾಗಿ ತನ್ನ ಪ್ರಿಯೆಯಾದ ಮನೋರಮೆಯನ್ನು ರತಿಯೆಂದು ಭಾವಿಸಿಕೊಂಡು ಅವಳನ್ನು ಪ್ರಾಚೀನ ಸಂಪ್ರದಾಯ ಮಾರ್ಗದಲ್ಲಿ ಕವಿಸಮಯಗಳನ್ನು ಉಪಯೋಗಿಸಿಕೊಂಡು 'ಪೂಗಣ್ಣ ಪೆಣ್, ಸಸಿಮೊಗದ ಕಿಸುವಾಯ ಪುಸಿ ನಡುವಿನರಸಿ... ಪಿಡಿನಡೆಯ ಅಸಿದೊಡಲ ಬಿಡುಜಡೆಯ ನೀಱೆ' ಎಂದು ವರ್ಣಿಸುತ್ತಾನೆ. ಅದರಲ್ಲಿ ಯಾವ ಚಿತ್ರವೂ ಇಲ್ಲ, ಬರಿಯ ಸಾಂಪ್ರದಾಯಿಕ ವರ್ಣನೆ. ಅದರಲ್ಲಿ ಅವಳಿಗೆ ತೃಪ್ತಿಯಿಲ್ಲ. 'ಒಡಲಸಿದೇಂ, ಮೊಗದೊಳೇತಱ ಸಸಿ, ಕಣ್ಣೊಳೇತಱ ಪೂ ನಡುವಿನೊಳೇಂ ಪುಸಿ. ಜಡೆಯಂ ಬಿದಿರ್ಚಲೆ ವೆವ್ವಮಾಳ್ಪುದೆ' ಎಂದು ಬಾಯಂ ಕಿಸಿಯುವಳು. ಆ ಸಂದರ್ಭದಲ್ಲಿ ಸರಿಯಾದ ವರ್ಣನಾಶಕ್ತಿಯನ್ನು ಪಡೆಯುವುದಕ್ಕಾಗಿ ಮುದ್ದಣನು

ಬೆನಕನನ್ನು ಪ್ರಾರ್ಥನೆ ಮಾಡುವುದಾಗಿ ಹೇಳಿ ಮುಂದೆ ಬೆನಕನಿಗೆ ನಿವೇದನ ಮಾಡುವ ಭಕ್ಷ್ಯಗಳಲ್ಲಿ ಚಕ್ಕುಲಿ ಗಾರಿಗೆಗಳನ್ನು ಕಾಮದೇವನಿಗೂ ಅವಳು ಪುರಿಗಡಲೆಯನ್ನು ಮುದ್ದಣನಿಗೂ ಕಬ್ಬು ಕಬ್ಬಿಗನಿಗೂ ತೇಂಗಾಯ್ ತನಗೂ ಕೊಟ್ಟು ಕಜ್ಜಿನ ಸಿವುರೂ ಮುಗ್ಗಿದ ಗಾರಿಗೆಪುಡಿಯೂ ಮನೋರಮೆಗಿರಲೆಂದು ಕೀಟಲೆ ಮಾಡಲು ಮನೋರಮೆಯು 'ಹಾಗೋ, ಆಗಲಿ ಮನಸ್ಸಿನಲ್ಲೇ ಮಂಡಿಗೆಯನ್ನುಂಡಂತಾಯ್ತು' ಎಂದು ಹೇಳಿ ಮುಂದುವರಿಯುವಳು. ಮತ್ತೊಮ್ಮೆ ಕತೆಯಲ್ಲಿ ಯುದ್ಧ ವರ್ಣನೆ ಬಹು ಹೆಚ್ಚಾಗಿ ಹೋಗುವುದು. ಆಗ ಮನೋರಮೆಗೆ ತೂಕಡಿಕೆ ಬರುವುದು. ಅವಳನ್ನು ಕುರಿತು ಮುದ್ದಣನು 'ನಲ್ಗತೆಯಂ ಪೇಟ್ವರ ಕಟ್ಟಿದಿರೊಳ್ ಪುರುಳಱಿಯದ ಗಾಂಪಿನ ಕಾಡವರಂತಿರೆ ನಿದ್ದೆಯ ಬಿಣ್ಪಿಂ ತೂಂಕಡಿಪ ನಿನತೊಂದು ಗುಣಹೀನಂ' ಎಂದು ಹಾಸ್ಯ ಮಾಡುವನು. ಮನೋರಮೆಯು ನಿರ್ದಾಕ್ಷಿಣ್ಯವಾಗಿ 'ತೂಂಕಡಿಸಿದೇವೆನೋ ? ಕಿವಿಗಳ್ಗೆ ಪುರುಳಮರದ ಗುರ್ದಿನಾಟದ ಬಱುರಗಳೆಯ ನಿಡುಗತೆಗೆ ? ಎರ್ದೆವುಗುವ ಪೊಚ್ಚ ಪೊಸನಲ್ಗತೆಗಳನೆ ಮೆಚ್ಚುವೆಂ' ಎನ್ನುವಳು. ಇನ್ನೊಂದು ಸಲ ಪುಸಿ ಮುನಿಸಿನಿಂದ 'ಬಱಿದೆ ಬಣ್ಣಿಸಿ ಕರೆಕರೆದು ಕರಕರಿಸದಿರ್; ಎನಗೆ ತಲೆ ನೋವುದು ಅಡಿಮುಡಿಯಿಲ್ಲದ ನಿನ್ನ ಕತೆಗೆ; ಎಂತೆಂತೋ ತೊಡಂಕಿ ಬೆದಂಕಿ ಪೇೞ್ದೊಡಾಯ್ತೆ ? ನಿಡುಗತೆಯ ನಿಱಿಗೆಯ ಕೂಟಂ ಕೇಳ್ವರ್ಗೆ ಮನಕೆ ಬಾರದೊಡಕ್ಕುಮೆ...' ಬಣ್ಣನೆಯ ಧರಣೀಮಂಡಲಂಗಳೇಕೆ ? ಒಂದುಱಿಯದಂತು ತಿರುಳನೆ ಕೂಡಿ ಪೇೞ್' ಎಂದು ಶುದ್ಧ ಕಥನ ರೀತಿಯ ಮಾರ್ಗದರ್ಶಕಳಾಗುತ್ತಾಳೆ. ಕತೆಯ ಮಧ್ಯೆ ಕವಿಗೆ ತಮ್ಮಂತಹವರ ದುರವಸ್ಥೆಯನ್ನು ವ್ಯಂಗ್ಯವಾಗಿ ತೋರ್ಪಡಿಸಿಕೊಳ್ಳಬೇಕೆಂದರಿವಾದ ಹಾಗೆ ಕಾಣುತ್ತದೆ. ಕಥಾ ಸರಣಿಯನ್ನು ಬಿಟ್ಟು ಮುನಿಗಳ ಹಾಗೆ ತನಗೂ ಅವರಿಗೂ ಮೀರಿದ ಸಪ್ತಾಕ್ಷರೀ ಮಂತ್ರದ ಬಲವುಂಟೆಂದು ಹೇಳುತ್ತಾನೆ. ಪತ್ನಿಯೂ ಶ್ರೋತೃವೂ ಆದ ಮನೋರಮೆಗೆ ಆ ಮಂತ್ರವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ ಹೆಚ್ಚಿ ಅದನ್ನು ತನಗೆ ತಿಳಿಯಪಡಿಸಬೇಕೆಂದು ಕೇಳುತ್ತಾಳೆ. ಅವಳನ್ನು ಬಹಳ ಹೊತ್ತು ಕಾಡಿಸಿ ಬಹಳ ರಹಸ್ಯವಾಗಿಟ್ಟುಕೊಳ್ಳಬೇಕೆಂದು ಭಾಷೆ ತೆಗೆದುಕೊಂಡು 'ಭವತಿ ಭಿಕ್ಷಾಂ ದೇಹಿ' ಎಂದು ಕಿವಿಯಲ್ಲಿ ಉಸುರುವನು. ಮನೋರಮೆಯು ಅರೆಮುನಿಸಿನಿಂದ 'ಪೋ ! ಮಾಣೆಲೆ ರಮಣ; ನಿನ್ನ ನುಡಿಯಂ ಸಾಜಂ, ನಿಕ್ಕುವಮೆಂದೇ ಬಗೆದೆಂ; ಈ ತೆಱನ ಮಾಟದಿ ಕವಡುನುಡಿಯಂ ಕೊಂಕೆಂಬುದನಱಿಯದಾದೆಂ; ನೀಂ ಕಬ್ಬಿಗನೋ ಸಬ್ಬವಕಾಱನೊ ? ನಿನ್ನೀ ಕಬ್ಬದ ಸೊಗಸನೆಮ್ಮನ್ನರಪ್ಪ ಜಾಣೆಲಿವೆಣ್ಗಳೇ ಕೊಂಡಾಡುವರಲ್ಲದೆ ಬಲ್ಲರೇನೊಲ್ವರೇ ?' ಎಂದು ಗೊಣಗುವಳು. ಈ ಸನ್ನಿವೇಶ ಕವಿಗಿರುವ ಉತ್ತಮ ಹಾಸ್ಯ ಮನೋಭಾವವನ್ನು ಪ್ರಕಟಿಸಲು ಸಹಾಯವಾಗಿದೆ. ಮನೋರಮೆ ಬಹು ಸರಸಗಾರ್ತಿ. ತನಗೆ ಬಹು ಉತ್ಸಾಹವುಂಟಾದಾಗ 'ಕೇಳ್ವೊಂದು ತವಕದಿಂದೆ ಎನುಸುಂ ಸರಿಸಕ್ಕೈತಂದು ನಲ್ಮೆಮಿಗೆ ನಲ್ಲನಂ ಗಲ್ಲಮನಲುಗಿ ತಳ್ತಮರ್ದಪ್ಪಿ' ತನಗೆ ತೋರಿದ ಶಂಕೆಗಳನ್ನು ಪರಿಹರಿಸಿಕೊಳ್ಳುವುದೂ ಉಂಟು. ನಿಜವಾಗಿಯೂ ತೃಪ್ತಿಯಾದಾಗ 'ಮುನ್ನೀರ ನೀರ ಸವಿವೊಂದು ಬಗೆಯೊಳ್

ಕೊಡನ ಕುವರನಂತಿರೆ ಬಲ್ಗಡಲನೆ ಕುಡಿವೊಡುಕ್ಕುಮೆ ? ಒರ್ವನಿ ಸಾಲದೆ ? ಅಜಿತನಜಿತೆಂ, ನಿನ್ನ ಪೆಸರೆಂತಂತು ನಿನ್ನ ಕಬ್ಬಮುಂ ಮುದ್ದು ಮುದ್ದಾಯ್ತು ಜಗಕೆ; ಗುಣದೊಳ್ ಪುರುಡುಂಟೆ ? ಸಾಜಂ ನಿನ್ನೀ ಜಾಣ್ಮೆಯ ಬಣ್ಣನೆಯ ನಲ್ಗತೆ ಕೇಳ್ವರನೆಂತಪ್ಪರುಮಂ ಬಗೆಯನಿರ್ಕುಳಿಗೊಳ್ಗುಂ, - ಕಮ್ಮಲರ್ ಮಗ ಮಗಿಸದೇಂ ಪೋಕುಂ ? ಈವಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲಮೆಂದಾಯ್ತು; ಜಿನ್ನಣದ ಬಣ್ಣನೆಯ ನುಡಿಯಲ್ತು, ಬಲ್ಲೊಗಸು ಬಲ್ಲೊಗಸು' ಎಂದು ಬಾಯಿತುಂಬ ಹೊಗಳಿ ತನಗೇ ಪ್ರತ್ಯೇಕವಾದ ಮೆಚ್ಚನಿತ್ತು ಕತೆಗಾರನನ್ನು ತೃಪ್ತಿಪಡಿಸುವಳು. ಮೇಲ್ನೋಟಕ್ಕೆ ಮನೋರಮೆಯು ಮುದ್ದಣನ ಕಾಲ್ಪನಿಕ ವ್ಯಕ್ತಿಯೆಂಬುದಾಗಿ ತೋರಿಬರುತ್ತಿದ್ದರೂ ಸ್ವಲ್ಪ ಆಳವಾಗಿ ಯೋಚನೆ ಮಾಡಿ ನೋಡುವುದಾದರೆ ಕವಿಯ ದಾಂಪತ್ಯ ಜೀವನದ ಆಸೆ ಆತಂಕಗಳನ್ನು ಚಿತ್ರಿಸುವುದಕ್ಕೆ ಸಹಾಯಕವಾದ ಸಜೀವ ವ್ಯಕ್ತಿಯೆಂದೇ ಭಾಸವಾಗುತ್ತಾಳೆ.

ವಸ್ತುಕವಾಗಿದ್ದ ಮೂಲ ಕತೆಯನ್ನು ಮುದ್ದಣನು ವರ್ಣಕವಾಗಿ ಮಾರ್ಪಡಿಸಿರುವುದು ರಾಮಾಶ್ವಮೇಧದ ಜನಪ್ರಿಯತೆಗೆ ಮತ್ತೊಂದು ಕಾರಣ. ಪ್ರಾಚೀನ ಸಂಪ್ರದಾಯದಲ್ಲಿಯೇ ಬೆಳೆದವನಾದರೂ ತನ್ನ ನವನವೋನ್ಮೇಷಶಾಲಿಯಾದ ಪ್ರತಿಭೆಯಿಂದ ತನ್ನ ವಸ್ತುವನ್ನು ಬಹು ನವೀನವಾಗಿ ವರ್ಣಿಸಿದ್ದಾನೆ. ವ್ಯಕ್ತವಾದ ಅಥವಾ ಅವ್ಯಕ್ತವಾದ ಯಾವ ಸನ್ನಿವೇಶ ಅಥವಾ ವ್ಯಕ್ತಿಗಳಾದರೂ ಈತನ ಪ್ರತಿಭಾ ಕುಂಚದಿಂದ ನವ್ಯತೆಯನ್ನು ತಾಳುತ್ತಾರೆ. ಆತನ ಉಲ್ಲೇಖದ ರೀತಿಯು ವರ್ಣಿತ ವಸ್ತುವಿನ ಪ್ರತ್ಯಕ್ಷ ಚಿತ್ರವನ್ನು ಕಣ್ಣೆದುರಿಗೆ ತಂದು ನಿಲ್ಲಿಸುತ್ತದೆ. 'ಓವೋ ಕಾಲಪುರುಷಂಗೆ ಗುಣಮಣಮಿಲ್ಲಂ ಗಡ, ನಿಸ್ತೇಜಂ ಗಡ, ಜಡಂ ಗಡ, ಒಡಲೊಳ್ ಗುಡುಗುಟ್ಟುಗುಂ ಗಡ, ಮಡದಿ ಬಾನ್ನೀಜೆಯೊರ್ವಳ್ ಚಂಚಲ ದೃಷ್ಟಿಯಿನತ್ತಮಿತ್ತಂ ನೋಟ್ಪಳ್, ಮೂಲಿಗೆ ಮರ್ದಂ ಕೊಂಡುಯ್ವೊಡಕ್ಕುಂ, ಸಿಡಿಲಾಳ್ ತಡೆಯದೆಡೆಯ ನಡುವೆಟ್ಟುಗಳ್ಗೆ ಕಟ್ಟುಬ್ಬರದಿಂ ಬಂದೆಜಿಗುಗುಂ; ಕುತ್ತಮೇಂ ? ಸುಗ್ಗಿಯೊಳುಂಡುದಂ ಕಾರೊಳ್ ಕಾಜುವನಕ್ಕುಂ ಕಾಲಂ ಕಷ್ಟಂ ಕಷ್ಟಂ', ಇದು ವರ್ಷಾಕಾಲದ ವರ್ಣನೆ. 'ಮಾಮರನೆಳದಳಿರ ರಸಮಂ ಪಿಟಿದು ಕಳಕಂತನ ಕಂಠನಾಳಕ್ಕೆಜೆದು ಉಬ್ಬಸಮಂ ಕಳೆದು ಕಲಕಲನಾದಮಂ ಪೆರ್ಚಿಸಿಯುಂ ಅರನೇಜಿಲ ದೋರೆವಣ್ಣಂ ತೇದುಂ ನಕ್ಕಿಸುತರಗಿಳಿಯ ನಾಲಗೆಯಂ ತೆಳ್ಪನಾಗಿಸಿ ತೊದುಳ್ನುಡಿಯಂ ತಿರ್ದಿಯುಂ, ಪುಷ್ಪಧೂಳಿಯಂ ಲೆಪ್ಪಂಬಟಿದು ಅದಿರ್ಮುತ್ತೆಯ ಸುರಯಿಯ ಪೊಸಬಂಡನೊಡಲ್ಗಿತ್ತು ಮಜಿದುಂಬಿಗಳ್ಗೆ ಸಂಪಗೆಯತ್ತಣಿನೊದವಿದ ಶಿರೋಭ್ರಮಣಮನಟಿಸಿಯುಂ ಬಸಂತಂ ಬೆಜ್ಜನೆನೆ ಮೈದೋಜಿದಂ. ನಾಡುಂ ಕಾಡುಂ ಬೀಡುಂ ಸೂಡಿಂ ಸೂಕರಿವೋಯ್ತು; ಕಾತ ಮರಂ ಪೂತಬಳ್ಳಿ ಸುರ್ಕಿ ಸುಟಿವಾಡಿದುದು. ಕಲ್ ಸುಣ್ಣ ಬೇವಾಯ್ತು. ಮಟಿಲ್ ಹುರಿಗಡಲೆಯ ಮುಮ್ಮಜಿಯಾಯ್ತು; ವನಜಂತುಗಳ್ ಬಯಲ್ಬೊಜಿಗೆ ಮರುಳ್ಗೊಂಡುವು. ಪಕ್ಷಿಗಳ ಗಳದೆ ಭಿನ್ನಸ್ವರಂ ಪುಟ್ಟಿತ್ತು; ಕಾಂತಾಜನಂ ಪಟ್ಟುಡೆಯಿಂ ಪುಡಿಗಪ್ಪುರಂ ಬೆರೆದ

ಸಿರಿಕಂಡವಣ್ಣಿಂ ಮುತ್ತಿನೊತ್ತೆ ಸರದ ತೊಡವಿನುಳ್ಳಲರ್ದ ಬೈಗುಮಲ್ಲಿಗೆಯ ಚೋಲ್ಲೆಯದ ತುಱುಬಿಂ ಕಣ್ಗೆಡ್ಡ ಮಾದರ್, ಲೋಗರ್ ತೃಷ್ಣೆಗೊಂಡರ್. ಭಾಸ್ಕರನಾಗಳ್ ಕಾಯ್ವೊಳಿರ್ದಂ. ಇಂತು ಕಡುವೇಸಗೆ ಬೇಟಿಲ್ ತೊಡಂಗಿತ್ತು. ತೆೞಿವೆಂಡಿಗಿರ್ಗ್ಗಕಿರ್ಕಿನಬ್ಬರ ಮಡಂಗಿ ತಿಳಿದುದು. ಕೊಳಂಗಳ ಜಳಮೊಳಗೊಳಗಿಂಗಿದುದು. ಬೈಗಿನ ಮುತ್ತಮೊಟ್ಟೆನಚೆಂಬಿಸಲ ಪರ್ಬುಗೆಯ ಬೆಳಗಿನೊಂದಿರವಿಂ ತಾವರೆಯಿರ್ದುದು. ನೀರುಣದೆ ಮುಗಿಲ್ಗಳ್ ಬೆಳರ್ತು ಬೆಂಡಾದುವು. ಪೆಱೆನೇಸರ್ಕಳ ಕೈಗಳ್ ನಿಡಿದಾದವು. ಬಾಂಬೊಲಂ ಬಿತ್ತಿದಚೆಲಗೆಯಿಂ ಸೊಗಯಿಸಿದತ್ತು. ಭೂರಮೆ ಕಱಿಂಗಿ ಬೆಳಹಾರವೆಯೆಂಬ ಕೌಂಗಿನ ಸೀರೆಯನುಟ್ಟು ನಳನಳಿಸುವ ಕೆಯ್ವೊಲಮೆಂಬ ಮಿಸುನಿಗಚ್ಚಿನ ಪೊಂಗುಪ್ಪುಸಮಂ ತೊಟ್ಟು ಕಣ್ಗೆಡ್ಡಮಾಗೆ ಶರತ್ಕಾಲಂ ಕಡುರಮ್ಯಮಾಯ್ತು. ಬಂದಿಗೊಂಡು ಬಂದ ಕಡುಚಳಿ ನಾಡಿ ಗರಂ ಪಿಡಿದುಂ ಅಳುಕಿಸಿಯುಂ ನಡುಗಿಸಿಯುಂ ತಲೆವಾಗಿಸಿಯುಂ ಗುರ್ದಿಯುಂ ತಿರ್ದಿಯುಂ ಕೆಡುಪುವುದಂ ಸುಗಿದು ಸುರಂಟಿ ಮುರಂಟಿ ಮರವಟ್ಟು ಮೆಯ್ಗಿಟ್ಟಸಕಳಿದರೆಲ್ಲರ್. ಪೊಸವರೆಯದ ಜವ್ವನಿಗರ್ ತಂತಮ್ಮ ಕಾದಲೆಯರ ತೋಳ ತಳ್ಕೆಯೊಳೆಸದರ್ – ಬಾಸನಿಟಿಕೆಯ್ವೊಂದುಜ್ವಳದ ಕುಂಡಲಂ, ಬಣ್ಣಿಸಿ ನುಣ್ಣಿಸಿದ ಕರ್ಮಣಿಗಲ್ಲ ಕೈಗನ್ನಡಿಯೆಂತಂತು ತಳತಳಿಪ ಗಂಡಮಂಡಲಂ, ಮುಗಿಲ್ ಪಗಿಲ್ತಾಗಸದ ಪಸರ್ವಣ್ಣದ ಮೆಯ್ಸಿರಿ, ತುಂಬುವೆಱೆಯ ಕಳೆಗೆ ಕೆಳೆಯಪ್ಪ ಮೊಗಸಿರಿ, ಪಲಗೆನೊಸಲಂದಂ, ನಿಱೆಗುರುಳ ಚೆಂದಂ, ಕಿಱುನಗೆಯ ಗಾಡಿ, ಚೆಲ್ವಿನಲರ್ಗಣ್ಗಳ ಕಡೆನೋಟದ ಮೋಡಿ, ಬಗೆಯೊಳಿಂಬುಗೊಡಲೊಡಂ ಮಿಗಗೋಡುಂ ನಾರಸೀರೆಯುಂ ತನ್ನ ಲಚ್ಚಣ ಮಾಗೆ ದೀಕ್ಷೆವೊತ್ತ ಕೋದಂಡದೀಕ್ಷಾಗುರು ಕಾಣಿಸಿದಂ, – ಎಳವಳ್ಳಿಯ ಮೊಗವಾಡಂ, ಬೆಳ್ಳೆಲೆಯ ಮಂಡಪಂ, ಪಸುರೆಲೆಯ ನಟ್ಟವನೆ, ಸೆಳೆಗೊಂಬಿನ ಕೇರ್, ಪಣ್ಣೆಲೆಯ ಪೊದಕೆ, ಚೆಂಧಳಿರ ಪಟ್ಕೆ, ಪೊಸಸುಳಿಯ ಮೂಡಾವಿ, ಅಲರ್ಜೊಂಪದ ಮೇಲ್ಕಟ್ಟು ಚೆಲ್ವಾಗೆ ಪರ್ಣಕುಟಿ ಮನಕಿಂಬಾದುದು – ಒಂದೆ ಬೆಳ್ಗೊಡೆಯೊಳಾಳ್ವರಾಜ್ಯಂ, ಸಾಮಂತರಾಜರ್ ವಶವರ್ತಿಗಳಾಗಲುಂ ಕಾಣ್ಕೆಯನೀಗುಂ ಸಾಸಿರ್ವರ್; ಪೊನ್ನೊಡೆಯನ ಬಂಡಾರದತ್ತಣಿಂ ಮಿಗಿಲ್ಸೈಸಿರಿ, ಪೊಡವಿ ಬಯಕೆವಟ್ಟಲ್, ಮಾರಿಯ ಕೋಱೆಪಲ್ಲಂ ಮುಱಿವ ಭೈರವನ ನಿಡುಜಡೆಯಂ ಪಿಡಿವ ಕಾಳರಕ್ಕಸಿಯ ಕೂರ್ವಾಳಂ ಸೆಳೆವ ಪಡೆವಳರೊಳರ್; ಗುರುಕವಿಗಳಿಂ ಬಳಕೆವೆತ್ತ ಸಚಿವರುಂಟು; ಬಟಿಯೋಜಂ ವಸಿಷ್ಠಂ, ಸಿಂಗನ ಸಿಂಗಮುಂ ಮೊಲನೆಱಿಂಕೆಯುಂ ಮಣಲ ನೆಯ್ಯಂ ತಂದೀವ ಸೋದರರ್ ಬಟಿಯೊಳಿರ್ಪರ್, ನೆಂಟರೆಲ್ಲರ್ ನೇಹಿಗರ್. ನಾಡಿಗರ್ ನುಡಿಯೊಳ್ ನಡೆವರ್. ಐವಾಯ್ ಪುಲಿಯೆನೆ ನಗರರಕ್ಕಸನಿರ್ಕುಂ; ಎಂತುಂ ಕಟ್ಟಾಣತಿ ಜವದಂಡೆ. ಇದು ರಾಘವನ ವೈಭವ. ಈ ಕೆಲವು ವರ್ಣನೆಗಳು ಮಾದರಿ ಮಾತ್ರ. ಗ್ರಂಥದುದ್ದಕ್ಕೂ ಬರುವ ಯಜ್ಞ ವರ್ಣನೆ, ಸೀತೆಯ ವ್ರತಾಭಿಲಾಷೆಯ ವರ್ಣನೆ, ರತ್ನಗ್ರೀವನ ವೈರಾಗ್ಯ ವರ್ಣನೆ ಮೊದಲಾದ ನೂರಾರು ವರ್ಣನೆಗಳು ಬಹು

ಹೃದಯಸ್ಪರ್ಶಿಯಾಗಿವೆ. ಈ ಒಂದೊಂದು ವರ್ಣನೆಯಲ್ಲಿಯೂ ಕವಿಯ ಪ್ರತ್ಯೇಕವಾದ ವರ್ಣನಾ ಕೌಶಲದ ಮುದ್ರೆ ಎದ್ದು ಕಾಣುತ್ತದೆ.

ರಾಮಾಶ್ವಮೇಧದ ಪಾತ್ರಗಳು ಅಲ್ಲಿಯ ವರ್ಣನಗಳಷ್ಟೇ ವೈಭವದಿಂದಿರುವುವಲ್ಲದೆ ಒಂದೊಂದು ಪ್ರತ್ಯೇಕವಾದ ವೈಶಿಷ್ಟ್ಯವನ್ನು ಹೊಂದಿದೆ. ಹಿಂದೆಯೇ ತಿಳಿಸಿರುವಂತೆ ಇಲ್ಲಿ ಏಕಪ್ರಕಾರವಾದ ಕಥಾಸೂತ್ರದ ಬೆಳವಣಿಗೆಯಿಲ್ಲದುದರಿಂದ ಪಾತ್ರಗಳ ಏಕಮುಖವಾದ ಬೆಳವಣಿಗೆಗೆ ಅವಕಾಶವಿಲ್ಲ. ಪಾತ್ರಗಳು ಅಲ್ಲಲ್ಲಿಯೆ ಕುಡಿಮಿಂಚಿನಂತೆ ಸ್ವಲ್ಪ ಕಾಣಿಸಿಕೊಂಡು ತಕ್ಷಣ ವಾಚಕರ ದೃಷ್ಟಿಯಿಂದ ಮಾಯವಾಗುತ್ತವೆ. ಅಷ್ಟರಲ್ಲಿಯೇ ಅವು ತಮ್ಮ ಪ್ರತ್ಯೇಕವಾದ ವೈಶಿಷ್ಟ್ಯ ಮುದ್ರೆಯನ್ನು ಅಚ್ಚೊತ್ತದೇ ಇರುವುದಿಲ್ಲ. ಪ್ರಧಾನವಾದ ಸೀತಾರಾಮರ ಪಾತ್ರಗಳು ಬಹು ಖಚಿತವಾಗಿವೆ.

ದಶರಥನು ಯಶಃಶೇಷನಾಗಲು ಅವನ ಸಹಾಯಕ್ಕಾಗಿ ಅವತರಿಸಿದ್ದ ನಾಲ್ಕು ಉಪಾಯದಂತೆಯೂ ನಾಲ್ಕು ಪುರುಷಾರ್ಥಗಳಂತೆಯೂ ಇದ್ದ ನಾಲ್ಕು ಜನ ಮಕ್ಕಳಲ್ಲಿ ಶ್ರೀರಾಮನೇ ಹಿರಿಯವನು. ಬಾಲ್ಯದಲ್ಲಿ ರಾಮನು ವಿಶ್ವಾಮಿತ್ರನಿಂದ ಮಂತ್ರೋಪದೇಶವನ್ನು ಪಡೆದು ಹರಧನುಸ್ಸನ್ನು ಮುರಿದು ಸೀತೆಯನ್ನು ಮದುವೆಯಾದನು. ಅವಳೂ ಇವನ ಘನಶ್ಯಾಮಲ ಕೋಮಲ ಗಾತ್ರವನ್ನೂ ಸೊಬಗುವ ಕಮಲಮುಖವನ್ನೂ ಸೊಗಸು ದೋರುವ ಸವಿನುಡಿಯ ಜಾಣ್ಮೆಯನ್ನೂ ಕರ್ಣಾಂತವಿಶ್ರಾಂತವಾದ ಸರಳ ನೋಟದ ನೋಟವನ್ನೂ ಕಂಡು ಮೆಚ್ಚಿದಳು. ಆಗಲೇ ತಂದೆಯ ಮಾತಿಗಾಗಿ ರಾಮನು ಕಾಡಿಗೆ ಹೋಗಬೇಕಾಯಿತು. ಸೀತೆಯು ರಾಮನನ್ನು ಅರೆಗಳಿಗೆಯೂ ಬಿಟ್ಟಿರಲಾರನೆಂದು ಅವನ ಹಿಂದೆಯೇ ನಡೆದಳು. ರಾಮನಿಗೆ ಸೀತೆಯಲ್ಲಿ ಮರುಕವೆಷ್ಟು ? ಅರಣ್ಯದಲ್ಲಿ ಪ್ರಯಾಣ ಮಾಡುವಾಗ ಸೀತೆ ಬಳಲಿದರೆ ಹತ್ತಿರಬಂದು ಕೈಹಿಡಿದು ತಂಪಿನೆಡೆಗೆ ಕರೆದುಕೊಂಡು ಹೋಗಿ ತೊಡೆಯಮೇಲೆ ಕುಳ್ಳಿರಿಸಿ ಮೆಯ್ದುದಡವಿ ತನ್ನ ವಸ್ತ್ರದ ಸೆರಗಿನಿಂದ ಅವಳ ಮುಖದ ಬೆವರನ್ನು ಒರಸಿ ಅವಳಿಗೆ ಆಪ್ಯಾಯಮಾನವಾಗುವಂತೆ ಬೀಸಿ ಬಾಯಾರಿದಾಗ ತಿಳಿಗೊಳದ ತಣ್ಣೀರನ್ನು ಕಮಲದೆಲೆಯಲ್ಲಿ ತಂದು ಕುಡಿಸಿ ಬೇಸರಿಕೆಯಾದಾಗ ವಿನೋದವಾದ ಸಂಭಾಷಣೆಗಳಿಂದ ನಗುವಂತೆ ಮಾಡಿ ತಾನೂ ನಕ್ಕು ಉಪಚರಿಸುತ್ತಿದ್ದನು. ಸೀತೆಯೂ ಕೂಡ ತಾನು ಬಳಲಿದ್ದರೂ ಕಿರುನಗೆಯ ಮೋಡಿಯಲ್ಲಿಯೇ 'ನಲ್ಲ, ಬಳಲಿದೆಯಾ ಕುಳ್ಳಿರ' ಎಂದು ಒಂದು ಹಾಸುಗಲ್ಲನ್ನು ತೋರಿಸಿ ತಾನೂ ಪಕ್ಕದಲ್ಲಿಯೇ ಕುಳಿತು ಬಣ್ಣ ಬಣ್ಣದ ಮಾತುಗಳಿಂದ ಅವನಿಗೆ ಸಂತೋಷವನ್ನುಂಟು ಮಾಡಿ ಮುಂದೆ ನಡೆಯುವಳು. ಈ ಮಧ್ಯೆ ರಾವಣನಿಂದ ಸೀತಾದೇವಿಯು ಅಪಹೃತಳಾಗಲು ರಾಮನು ಅವಳನ್ನು ಬಿಡಲಾರದೆ ಮೋಹದಿಂದ ಮರುಗಿ ಕೊರಗಿ ಹುಡುಕಿ ವಿಶೇಷ ಶ್ರಮದಿಂದ ಕಡಲಿಗೆ ಅಣೆಯನ್ನು ಕಟ್ಟಿ ದುಷ್ಟ ರಾಕ್ಷಸರನ್ನು ಸಂಹರಿಸಿ ಸೀತೆಯೊಡನೆ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾದನು. ಸೀತೆಯು ತಾನು ಪಟ್ಟದರಸಿಯಾದೆನೆಂಬ ಸಂತೋಷದಿಂದ ತನ್ನೋರಗೆಯ

ಕೆಳದಿಯರಿಗೂ ತನ್ನ ಸೇವಕರಿಗೂ ಮೆಚ್ಚಿತ್ತುದಕ್ಕೆ ಲೆಕ್ಕವೇ ಇಲ್ಲ. ಆದರೂ ತನ್ನ ನಡತೆಯಲ್ಲಿ, ಮಾತಿನಲ್ಲಿ ತಾನು ರಾಜಪತ್ನಿಯೆಂಬ ಸೊಕ್ಕಿನ ಬಿಂಕವಿಲ್ಲ. ಯಾವಾಗಲೂ ಶೀಲದಿಂದಲೇ ನಡೆದು ಹಿತವಾಗಿ ಮಿತವಾಗಿ ನುಡಿದು ನೇವದಿಂದ ಸಕ್ಕು ನಲಿಸುವ ಆಕೆಯ ರತಿರಹಸ್ಯವು ರಾಮನಿಗೆ ರಮಣೀಯವಾಗಿತ್ತು. ಚಕ್ರವರ್ತಿಯಾದ ರಾಮನು ತಾಳ್ಮೆಯಲ್ಲಿ ಭೂಮಿಯಂತೆಯೂ ಜಾಣ್ಮೆಯಲ್ಲಿ ಬೃಹಸ್ಪತಿಯಂತೆಯೂ ಭೋಗದಲ್ಲಿ ದೇವೇಂದ್ರನಂತೆಯೂ ತ್ಯಾಗದಲ್ಲಿ ಶಿಬಿಯಂತೆಯೂ ಬೀರದಲ್ಲಿ ಭೈರವನಂತೆಯೂ ಇದ್ದು ಸೂರ್ಯನ ತೇಜಸ್ಸನ್ನೂ ಚಂದ್ರನ ತಂಪನ್ನೂ ಸಿಂಹದ ಚಲವನ್ನೂ ಮಾತಂಗದ ಬಲವನ್ನೂ ಸಿಡಿಲ ಶಕ್ತಿಯನ್ನೂ ಕಡಲ ಗಾಂಭೀರ್ಯವನ್ನೂ ತಾಳಿ ಅನೇಕ ವರ್ಷ ರಾಜ್ಯವಾಳಿದನು.

ಹೀಗೆ ಹಲವು ವರ್ಷ ಕಳೆದರೂ ಅವರಿಗೆ ಸಂತಾನ ಪ್ರಾಪ್ತಿಯಾಗಲಿಲ್ಲ. ಎಷ್ಟು ಐಶ್ವರ್ಯವಿದ್ದರೂ ಮಕ್ಕಳಿಲ್ಲದವರ ಬಾಳೊಂದು ಬಾಳೆ ? ಅದರಲ್ಲಿಯೂ ಪುರುಷರಿಗಿಂತಲೂ ಸ್ತ್ರೀಯರಿಗೆ ಈ ಚಿಂತೆ ಹಿರಿದು. ಒಂದು ದಿನ ಸೀತಾದೇವಿಯು ಅಂತಃಪುರದ ತೂಗುಮಂಚದ ಮೇಲೆ ತನ್ನ ಕೆಳದಿ ಚಂದ್ರಮತಿಯೊಡನೆ ಕುಳಿತು ಮಾತನಾಡುತ್ತಿರುವಾಗ ಎದುರಿಗೆ ಗೂಡಿನಲ್ಲಿದ್ದ ಚಿಟಿಕೆಯೊಂದು ತನ್ನ ಮರಿಗೆ ಗುಟುಕಿಕ್ಕುವುದು ಕಣ್ಣಿಗೆ ಬಿತ್ತು. ಅದನ್ನು ನೋಡಿ ಸೀತೆಯು ಆ ಹಕ್ಕಿಯೂ ತನ್ನನ್ನು ಬಂಜೆಯೆಂದು ಹಾಸ್ಯ ಮಾಡುತ್ತಿದೆಯೆಂದು ಬಗೆದು ಯವ್ವನದಲ್ಲಿ ಕೂಸನ್ನು ಹೆತ್ತು ಸಾಕುವ ಅದೃಷ್ಟವನ್ನು ತಾನು ಪಡೆಯಲಿಲ್ಲ. ಕುಲವರ್ಧಕನಾದ ಮಗನನ್ನು ಪಡೆದು ಮೊಲೆಯೂಡಿ ತೊಟ್ಟಿಲಲ್ಲಿ ಮಲಗಿಸಿ ಹಾಡಿ ತೂಗಿ ಕೂಸು ನಿದ್ದೆ ಹೋದ ಮೇಲೆ ತಾನೂ ಅರೆಗಳಿಗೆ ಪಕ್ಕದಲ್ಲಿಯೇ ಮಲಗಿ ಅದರ ಬಾಲಲೀಲೆಯನ್ನು ನೆನೆದು ಅದು ಎದ್ದ ಮೇಲೆ ಅದನ್ನು ಎತ್ತಿ ಮುದ್ದಾಡಿ ಬೇಸರವನ್ನು ಕಳೆಯುವ ಸೈಪು ಎಂದಿಗಾಗುತ್ತದೆಯೋ ಎಂದು ಹಾಗೆಯೇ ಮೂರ್ಛೆ ಹೋದಳು. ಚಂದ್ರಮತಿಯಿಂದ ಇದನ್ನು ತಿಳಿದ ಶ್ರೀರಾಮನು ದಿಮ್ಮನೆದ್ದು ದಿಗ್ಭ್ರಮೆಯಿಂದ ಕಣ್ಗೆಟ್ಟು ಅಂತಃಪುರಕ್ಕೆ ಧಾವಿಸಿ ರಾಣಿಯ ಸಮೀಪಕ್ಕೆ ಬಂದು ಏಳಲು ಪ್ರಯತ್ನಿಸುತ್ತಿದ್ದವಳನ್ನು ತಡೆದು ತಾನೂ ಅರ್ಧಾಸನದಲ್ಲಿ ಕುಳಿತು ತನ್ನ ಕಾಂತೆಯನ್ನು ಕುರಿತು "ನಿನಗೀ ದುಗುಡವುಂಟಾಗುವುದಕ್ಕೆ ಕಾರಣವೇನು ? ನಿನ್ನ ಸೇವಕರು ಅವಿನಯದಿಂದ ನಡೆದರೆ ? ಶರೀರದಲ್ಲೇನಾದರೂ ಅನಾರೋಗ್ಯವೆ ? ಅತ್ತೆಯರೇನಾದರೂ ಬಯ್ದರೆ ? ನನ್ನ ತಮ್ಮಂದಿರೇನಾದರೂ ಅಣಕಿಸಿ ನಿನ್ನ ಮನಸ್ಸಿಗೆ ನೋವನ್ನುಂಟುಮಾಡಿದರೆ ?" ಎಂದು ಪ್ರಶ್ನೆ ಮಾಡಿ ಅವಳ ಕಡೆಗಣ್ಣಿನಲ್ಲಿ ಕೋಡಿ ಹರಿಯುತ್ತಿದ್ದ ಕದುಷ್ಣವಾರಿಯನ್ನು ತನ್ನುತ್ತರೀಯದ ಕೀಳ್ಸೆರಗಿನಿಂದ ಒರೆಸಿ ಮುಂಗುರುಳನ್ನು ತಿದ್ದಿ ಗಲ್ಲವನ್ನಲುಗಿಸಿ ಮೆಲ್ನುಡಿಗಳಿಂದ ಸಮಾಧಾನಮಾಡಿದ ನಿಜಪತಿಗೆ ಲಜ್ಜೆಯಿಂದ ಸೀತೆಯು ಪ್ರತ್ಯುತ್ತರವನ್ನು ಕೊಡದಿರಲು ಪಕ್ಕದಲ್ಲಿದ್ದ ಚಂದ್ರಮತಿಯು ಅದು ಪುತ್ರಾಪೇಕ್ಷೆಯ ಚಿಂತೆಯಿರಬೇಕು ಸೂಚಿಸಲು ರಘುಪ್ರವರನು ಸ್ವಲ್ಪ ಹೊತ್ತು ಚಿಂತಿಸಿ ಹಾಗೆಯೇ ಸಮಾಧಾನಚಿತ್ತನಾಗಿ ತನ್ನ ಕಾಂತೆಯನ್ನು

ಕುರಿತು "ರಮಣಿ, ನಿಷ್ಕಾರಣವಾಗಿ ಚಿಂತಿಸಿದರೆ ಪ್ರಯೋಜನವೇನು ? ಇವೆಲ್ಲ ಅದೃಷ್ಟಾಧೀನವಲ್ಲವೆ ? ದೇವರು ಕಣ್ ತೆರೆದರೆ ಗುರುಜನರನುಗ್ರಹಿಸಿದರೆ ಹಿರಿಯರು ಹರಸಿದರೆ ಇದೇನು ಮಹಾ ದೊಡ್ಡ ವಿಷಯ ? ಆದುದರಿಂದ ನಿಶ್ಚಿಂತೆಯಾಗಿ ಕುಲದೈವವನ್ನು ಅರ್ಚಿಸುತ್ತ ಗುರುಜನಗಳನ್ನು ಪೂಜಿಸುತ್ತ ಗೋಬ್ರಾಹ್ಮಣರನ್ನು ಸೇವಿಸುತ್ತ ಇದ್ದರೆ ಅವರೆಲ್ಲರ ಅನುಗ್ರಹದಿಂದ ಸಂತಾನವಾಗುತ್ತದೆ. ಇವಕ್ಕೆ ನಮ್ಮ ತಂದೆಯೇ ಸಾಕ್ಷಿಯಲ್ಲವೆ ? ನಾನೂ ಹಾಗೆಯೇ ಇಕ್ಷ್ವಾಕುವಂಶವು ನನ್ನಲ್ಲಿ ಬಂದು ಮುರುಟಿತು ಎಂಬ ಅಪವಾದಕ್ಕೆ ಗುರಿಯಾಗದ ಹಾಗೆ ಸಂತಾನ ಲಾಭಕ್ಕೆ ಸಾಧಕವಾದ ಹವನ ಹೋಮಾದಿಗಳನ್ನು ಮಾಡಿ ದೇವತೆಗಳನ್ನು ತೃಪ್ತಿಪಡಿಸುತ್ತೇನೆ" ಎಂದು ಹೇಳಿ ಸಮಾಧಾನಮಾಡಿ ತನ್ನರಮನೆಗೆ ತೆರಳಿದನು.

ಹೀಗೆ ಕೆಲವು ಕಾಲ ಕಳೆಯಲು ಸೀತೆ ಬಸುರಿಯಾದಳು. ಆ ಕಾಲದಲ್ಲೊಂದು ದಿನ ರಘುಪ್ರವರನು ರಾಣಿವಾಸದ ಮೊಗಸಾಲೆಯಲ್ಲಿ ಸಂಧ್ಯಾಕಾಲದಲ್ಲಿ ಸತಿಯೊಡನೆ ಸರಸ ಸಲ್ಲಾಪಗಳನ್ನಾಡುತ್ತಿರಲು ಸೀತೆ ಕಾಂತನನ್ನು ಕುರಿತು "ನಾಥ, ಏಕೊ ಬಲು ಬೇಸರವಾಗುತ್ತಿದೆ ಮನಸ್ಸಿಗೆ ಏನೂ ಬೇಕಾಗುತ್ತಿಲ್ಲ. ಆದುದರಿಂದ ಕೆಲವು ದಿವಸ ಋಷ್ಯಾಶ್ರಮದಲ್ಲಿ ಮುನಿ ಪತ್ನಿಗಳೊಡನೆ ಸುಖ ಸಲ್ಲಾಪಗಳಿಂದ ಕಳೆದು ಬರೋಣವೆಂದು ಆಸೆಯಾಗುತ್ತಿದೆ" ಎಂದಳು. ರಾಜನು "ಹಾಗೆಯೇ ಆಗಲಿ ಆದರೆ ಒಬ್ಬಳೇ ಹೋಗುವುದು ಬೇಡ, ಜೊತೆಗೆ ಲಕ್ಷ್ಮಣನನ್ನೂ ಕಳುಹಿಸುತ್ತೇನೆ" ಎಂದು ಪ್ರತ್ಯುತ್ತರವಿತ್ತನು.

ದಾಂಪತ್ಯ ಜೀವನದಲ್ಲಿ ಇಂತಹ ಅದ್ಭುತವಾದ ಕರ್ತವ್ಯ ನಿಷ್ಠೆಯಿಂದ ನಡೆದ ರಘುಪುಂಗವನು ಕುಸುಮಕೋಮಲನೂ ಹೌದು; ಭೈರವಭೀಷಣನೂ ಹೌದು. ಅವನ ಪ್ರಭುನಿಷ್ಠೆಯ ಪರಾಕಾಷ್ಠೆ ಆಶ್ಚರ್ಯಕರ. ಒಂದು ದಿನ ಸೋದರರಿಂದ ಬಳಸಿ ಆಸ್ಥಾನದಲ್ಲಿದ್ದ ರಾಜನನ್ನು ಕಂಡು ಬೇಹುಕಾರರು ತಾವು ತಿಳಿದ ದಿನದ ವರ್ತಮಾನವನ್ನು ತಿಳಿಸುವುದಕ್ಕೆಂದು ಬಂದು ದೂರದಲ್ಲಿಯೇ ತಲೆಬಾಗಿ ನಿಲ್ಲಲು ರಾಘವನು ಅವರನ್ನು ಕುರಿತು, "ರಾಜ್ಯದಲ್ಲಿ ಪ್ರಜೆಗಳ ಸೌಖ್ಯಕ್ಕೆ ಕುಂದಿಲ್ಲತಾನೆ ? ನಮ್ಮ ಆಜ್ಞೆಗೆ ಭಂಗವಿಲ್ಲವಲ್ಲವೆ ? ರಾಜನನ್ನು ಯಾರಾದರೂ ನಿಂದಿಸುವರೆ ? ಇಂದಿನ ವಾರ್ತೆಯೇನು ?" ಎಂದು ಪ್ರಶ್ನೆ ಮಾಡುವನು. ಗೂಢಚಾರರು "ಸ್ವಾಮಿ, ತ್ರಿಲೋಕಾಧಿಪತಿಯಾದ ತಾವು ರಾಜ್ಯಪಾಲನೆ ಮಾಡುವಾಗ ಪ್ರಜೆಗಳ ಸೌಖ್ಯಕ್ಕೆ ಕುಂದೆಲ್ಲಿಯದು ? ತಮ್ಮ ನಾಮವೇ ತಾರಕಮಂತ್ರವಾಗಿರುವಾಗ ಪಟಿಯೆಲ್ಲಿಂದ ಬಂತು ? ಅಯೋಗ್ಯರಾರೋ ಏನೋ ಹೇಳಿದರೆ ಅದರಿಂದ ಸ್ವಾಮಿಗಾದ ಕುಂದೇನು ?" ಎನ್ನಲಾಗಿ ರಾಜನು ಅವರನ್ನು ಬಹು ಕ್ರೂರ ದೃಷ್ಟಿಯಿಂದ ನೋಡಿ "ಕೊಂಕುನುಡಿಗೆ ಇದವಸರವಲ್ಲ. ಕಂಡದ್ದನ್ನು ಇದ್ದಂತೆ ಹೇಳಿ" ಎನ್ನುವವನು ಚಾರರು ಬಹು ಭಯದಿಂದ ಸ್ವಾಮಿ ನಡುಗೇರಿಯಲ್ಲಿ ಅಗಸನೊಬ್ಬನು ತವರುಮನೆಗೆ ಹೋಗಿದ್ದ ತನ್ನ ಹೆಂಡತಿಯನ್ನು ಕುರಿತು "ಅಗಲ್ದ ಮಡದಿಯಂ ರಘುಜನಂತಿರೆ ಕೊಂಡಾಳೆಂ" ಎಂದು ಕಠೋರವಾಗಿ ನುಡಿದುದನ್ನು ಕೇಳಿ ಕಿವಿಮುಚ್ಚಿ ಬಂದೆವು

ಎಂದರು. ತಕ್ಷಣವೇ ಮಂಡಲೇಶ್ವರನು ಸನ್ನೆಯಿಂದಲೇ ಅವರನ್ನು ಕಳುಹಿಸಿ ರಜಕನ ಪುರುಷೋಕ್ತಿಗೆ ಮನಗೆಟ್ಟು ಕಟ್ಟುಬ್ಬಸದಿಂದ ತನ್ನಲ್ಲಿಯೇ ತಾನು "ಚಿನ್ನದ ಕತ್ತಿಯೆಂದು ಎದೆಗೊತ್ತಿಕೊಂಡೆ. ಹೀಗೆ ಕೊರಳನ್ನು ಕೊಯ್ಯುತ್ತದೆಂದು ಎಣಿಸಿರಲಿಲ್ಲ, ಲೋಕನಿಂದೆಗೆ ಗುರಿಯಾಗುತ್ತೇನೆಂದು ಭಾವಿಸಿರಲಿಲ್ಲ. ಈಗೇನುಮಾಡಲಿ ? ಬೆಳೆಯುವ ಹೊಲದಲ್ಲಿ ಹೆಚ್ಚಿದ ಕಳೆಯನ್ನು ಕಿತ್ತುಹಾಕುವಂತೆ ಸೀತೆಯನ್ನು ಬಿಟ್ಟು ಕಳೆಯುತ್ತೇನೆ" ಎಂದು ನಿಷ್ಕರ್ಷಿಸಿದನು. ಧೂರ್ತನೊಬ್ಬನ ನಿರಾಧಾರವಾದ ಕೀಳ್ನುಡಿಗೆ ಎಡೆಗೊಡಬಾರದೆಂದು ಸೋದರರು ಎಷ್ಟು ಬೇಡಿಕೊಂಡರೂ ಪ್ರಯೋಜನವಾಗಲಿಲ್ಲ. "ನೀವು ಸುಮ್ಮನಿರಿ, ಧರ್ಮದ ರೀತಿ ಅಂಥದಲ್ಲ. ಅಪವಾದ ಹೊದ್ದಿದ ಮೇಲೆ ಹೆಂಡತಿಯನ್ನಾದರೂ ಬಿಟ್ಟೇತೀರಬೇಕು" ಎಂದು ಹೇಳಿ ಲಕ್ಷ್ಮಣನನ್ನು ಕರೆದು ಮುನಿಪತ್ನಿಯರ ದರ್ಶನವ್ಯಾಜದಿಂದ ಸೀತೆಯನ್ನು ಕಾಡಿನಲ್ಲಿ ಬಿಟ್ಟುಬರಲು ಅಪ್ಪಣೆ ಮಾಡುತ್ತಾನೆ. ಭ್ರಾತೃಭಕ್ತಿಪೂರಿತನಾದ ಲಕ್ಷ್ಮಣನು ಅನ್ಯಥಾ ಗತಿಯಿಲ್ಲದೆ ಮನವಿಲ್ಲದ ಮನದಲ್ಲಿ ಹಾಗೆಯೇ ಆಗಲಿ ಎಂದು ಒಪ್ಪಿ ಎದ್ದು ಹೋಗಿ ರಥವನ್ನು ಸಿದ್ಧಪಡಿಸಿ ತಾನು ಹತ್ತದೆ ಸೀತಾದೇವಿಯ ಅಂತಃಪುರದ ಹೊರಬಾಗಿಲಿನಲ್ಲಿ ನಿಲ್ಲಿಸಿ "ವನ ಪ್ರಯಾಣಕ್ಕೆಂದು ರಾಮನು ಕಳುಹಿಸಿದ ತೇರು ಸಿದ್ಧವಾಗಿದೆ ಹೊರಡಬಹುದು" ಎಂದು ಬಿನ್ನಯಿಸುವನು.

ವನಕ್ಕೆ ಹೋಗಿ ಪುಣ್ಯಾಶ್ರಮಗಳನ್ನು ಕಂಡು ಪಾವನೆಯಾಗುತ್ತೇನೆಂದು ಬಗೆದ ಸೀತಾಮಾತೆಯು ಹೊರಗೆ ಬಂದು ಖಿನ್ನನಾಗಿದ್ದ ಲಕ್ಷ್ಮಣನನ್ನು ನೋಡಿ "ಏನಪ್ಪಾ, ಲಕ್ಷ್ಮಣಾ, ಜೀವಿತೇಶನು ಎನ್ನ ವಿಜ್ಞಾಪನೆಯನ್ನು ಉದಾಸೀನ ಮಾಡದೆ ನಡಸಿಕೊಟ್ಟನೆ ? ಕರುಣಾಕರನಲ್ಲವೆ ? ದೀನೆಯನ್ನು ನಲ್ಲನಲ್ಲದೆ ಮತ್ತಾರು ಕಾಯಬೇಕು. ಆತನ ಪಾದಕಮಲವೆಂದಿಗೂ ಪ್ರಸನ್ನವಾಗಿರಲಿ; ಅದಿರಲಿ ಏನು ಪ್ರಾತಃಕಾಲದಲ್ಲಿ ಇಷ್ಟು ಮುಂಚೆಯೇ ಬಂದೆಯಲ್ಲಾ ! ಇನ್ನೂ ನಾನು ಅತ್ತೆಯವರಿಗೆ ನಮಸ್ಕರಿಸಿ ಹರಕೆಗೊಂಡಿಲ್ಲ. ಮಾಳವಿಯರಿಗೆ ತಿಳಿಸಿಲ್ಲ. ಚಂದ್ರಮತಿಗೆ ಹೇಳಿಲ್ಲ. ಹೋಗಲಿ ಹೇಗೂ ಅಲ್ಪಕಾಲದಲ್ಲಿಯೇ ಮತ್ತೆ ಹಿಂತಿರುಗುವೆವಲ್ಲಾ! ಆಗ ಋಷಿಪತ್ನಿಯರು ಹೇಳಿದ ಕಥೆಗಳನ್ನೂ ವನದಲ್ಲಿ ಕಂಡ ವಿನೋದಗಳನ್ನೂ ವಿಸ್ತಾರವಾಗಿ ಬಣ್ಣಿಸಿದರೆ ಸಂತೋಷವಿಮ್ಮಡಿಯಾಗುತ್ತದೆ. ಆಯ್ತು ಹೋಗೋಣ ನಡೆ" ಎಂದು ಹೇಳಿ ಬಹು ಯತ್ನಾಹದಿಂದ ತಾನೇ ಋಷಿಪತ್ನಿಯರಿಗಾಗಿ ಬಿಚ್ಚೋಲೆ, ಶ್ರೀಗಂಧ, ಕರಿಯಮಣಿ ಕಸ್ತೂರಿ ಮೊದಲಾದುವುಗಳನ್ನು ತೆಗೆದುಕೊಂಡು ಹೊರಟಳು. ಕವಡನರಿಯದ ಬಾಲೆ ಪಾಲ್ಗಡಲಿನಲ್ಲಿ ಅಮೃತವುದಯಿಸಿದುದನ್ನು ನೆನೆದಳೇ ವಿಸಾ ನಂಜುಕ್ಕಿದುದನ್ನು ಬಗೆಯದಾದಳು.

ರಥವು ಹೊರಟು ಕೆಲವು ದೂರ ನಡೆಯುವುದರಲ್ಲಿ ಲೋಕಪಾವನೆಯಾದ ತ್ರಿಪಥೆಗೆ ಕಾಣಿಸಿಕೊಂಡಳು. ಸೀತಾ ಲಕ್ಷ್ಮಣರು ಭಾಗೀರಥಿಯನ್ನು ಯಥೋಚಿತವಾಗಿ ಸ್ತೋತ್ರಮಾಡಿದರು. ಮಧ್ಯಾಹ್ನ ಕಾಲವಾಗಲಾಗಿ ಅವರು ಕ್ಷಣಕಾಲ ಕುಳ್ಳಿರ್ದು ತೀರ್ಥದಲ್ಲಿ ಸ್ನಾನಮಾಡಿದರು. ಸೀತೆಯು ತನ್ನ ಕಿರುಬೆರಳಿನಲ್ಲಿದ್ದ ಶ್ರೀರಾಮ

ಮುದ್ರಿಕೆಯನ್ನು ಕೈಗೆ ತೆಗೆದುಕೊಂಡು ಅದಕ್ಕೆ ಗಂಗಾಜಲದಿಂದ ಅಭಿಷೇಕಮಾಡಿ ಲಕ್ಷ್ಮಣನು ಕುಯ್ದು ತಂದ ಪುಷ್ಪದಿಂದ ಅದನ್ನು ಅಲಂಕರಿಸಿ ಸುಪಕ್ವಫಲಗಳನ್ನು ನಿವೇದನ ಮಾಡಿ ತೀರ್ಥಪ್ರಸಾದ ನೈವೇದ್ಯಗಳನ್ನು ಮೈದುನನಿಗೂ ಕೊಟ್ಟು ತಾನೂ ಸ್ವೀಕರಿಸಿದಳು. ಬಿಸಿಲು ಕಡಿಮೆಯಾಗಲು ಅವರಿಬ್ಬರೂ ಉತ್ತರಾಭಿಮುಖವಾಗಿ ಹೊರಟರು. ಸೀತೆಯು ತಿಟ್ಟನ್ನು ಹತ್ತಿ ಬೆಟ್ಟವನ್ನಿಳಿದು ನಡೆದು ನಡೆದು ಬಳಲಿ ಬೆಂಡಾದರೂ ಆಶ್ರಮದ ಗುರುತೇ ಸಿಕ್ಕದಿರಲು "ಹಾ ಪ್ರಾಣನಾಯಕ, ಕೆಟ್ಟೆನಲ್ಲಾ, ಕರುಣಾಕರಾ, ಪುಣ್ಯಮೂರ್ತಿಯಾದ ನೀನೇ ಪಕ್ಕದಲ್ಲಿರುವಾಗ ನಿನಗಿಂತ ಬೇರೆಯಾದ ಪುಣ್ಯಾಶ್ರಮವುಂಟೆ ? ಕಮಲವನ್ನು ಬಿಟ್ಟು ಮಧುಭ್ರಾಂತಿಯಿಂದ ಮುತ್ತಗಕ್ಕೆಜಿಗಿದ ಭ್ರಮರನ ಹಾಗಾಯ್ತಲ್ಲವೇ ನನ್ನ ಗತಿ. ನಿಷ್ಕಾರಣವಾಗಿ ಕಾಡಪಾಲಾದೆನಲ್ಲಾ. ಮುಂದೆ ನನಗೇನು ಗತಿ" ಎಂದು ಹಲುಬಿದಳು.

ಹೀಗೆ ಪ್ರಲಾಪಿಸುತ್ತಿದ್ದ ರಾಘವನರ್ಧಾಂಗಿಯ ಸ್ಥಿತಿಯನ್ನು ಕಂಡು ಲಕ್ಷ್ಮಣದೇವನು ನಡನಡುಗುತ್ತಾ ಅವಳ ಪಾದತಲದಲ್ಲಿ ಬಿದ್ದು "ನಾಡಿನ ಮಡಿವಳನಾವನೋ ಒಬ್ಬ ದೇವಿಯರ ವಿಷಯವಾಗಿ ಕೆಟ್ಟ ಮಾತನಾಡಿದ ಕಾರಣದಿಂದ ಅಗ್ರಜನು ನಿಮ್ಮನ್ನು ಕಾಡಿನಲ್ಲಿ ಬಿಟ್ಟು ಬರಬೇಕೆಂದು ಆಜ್ಞೆಮಾಡಿ ಕಳುಹಿಸಿದ್ದಾನೆ. ಈ ಅಶುಭವಾರ್ತೆಯನ್ನು ತಿಳಿಸುವುದಕ್ಕಾಗಿ ಅದೃಷ್ಟಹೀನನಾದ ನಾನು ಇಲ್ಲಗೆ ಬಂದಿದ್ದೇನೆ; ತಮಗೆ ನಮಸ್ಕಾರಮಾಡಿ ಅಪ್ಪಣೆ ಕೊಟ್ಟರೆ ಹೋಗುತ್ತೇನೆ" ಎಂದು ಗದ್ಗದ ಕಂಠದಿಂದ ಬಿನ್ನಯಿಸಿದನು. ಈ ವಾಕ್ಯವು ಅವಳ ಕರ್ಣಕೋಟರವನ್ನು ನಾಟಿದೊಡನೆಯೇ ಸೀತೆಯು ದುಃಖಾತಿರೇಕದಿಂದ ನಿಶ್ಚೇಷ್ಟಿತಳಾಗಿ ಮೂರ್ಛಿತಳಾದಳು. ಲಕ್ಷ್ಮಣನ ಶೈತ್ಯೋಪಚಾರದಿಂದ ಸ್ವಲ್ಪ ಸ್ವಲ್ಪವಾಗಿ ಎಚ್ಚೆತ್ತು ಸಹಿಸಲಾರದ ದುಃಖದಿಂದ "ಹಾ ಪ್ರಾಣನಾಥಾ, ಖೂಳನೊಬ್ಬನಾಡಿದ ಪಿಸುಣಿಗಾಗಿ ನಿರಪರಾಧಿಯಾದ ನನ್ನನ್ನು ಬಲಿಗೊಡುವುದೆ ? ಊರಿನಲ್ಲಿ ಮಾರಿಯೆಂದು ಮನೆಯ ಹೋರಿಯನ್ನು ಮಾರಿಬಿಡುವುದೇ ? ಅಷ್ಟೇ ಅಲ್ಲ. ಎಲೈ ಮನೋವಲ್ಲಭನೆ ನನ್ನನ್ನುಳಿದು ನೀನು ತಾನೆ ಅರ್ಧ ಶರೀರದಲ್ಲಿ ಹೇಗೆ ಬಾಳಬಲ್ಲೆ ? ನನ್ನಲ್ಲಿ ದೋಷವಿದ್ದರೆ ಮನ್ನಿಸಬಾರದೆ" ಎಂದು ನಾನಾ ರೀತಿಯಲ್ಲಿ ಹಲುಬಿ ಪುನಃ ತನ್ನೆರೆಯನನ್ನೇ ನೆನೆದು ಆತನ ಬಿನ್ನಾಣದ ಬೆಡಗಿನ ಸೊಗಸಿನ ಸಿಂಗರದ ಕೂಟದ ಸುಗ್ಗಿಯನ್ನು ಸ್ಮರಿಸಿಕೊಂಡು ಬಾಯಾರೆ ಬಣ್ಣಿಸಿ "ರಾಘವನು ನನ್ನನ್ನುಳಿದರೂ ನಾನು ಅವನನ್ನುಳಿಯಲಾರೆ, ನನಗಾತನೆ ಗುರು, ನಾಥ, ಬಂಧು, ಬಳಗ, ಜೀವ ಎಲ್ಲವೂ. ಅವನ ಶಾಸನ ಎಲ್ಲೆಲ್ಲಿಯೂ ಬಲಿಷ್ಠವಾಗಿರಲಿ. ಆತನ ಕರುಣೆ ಸರ್ವರಲ್ಲಿಯೂ ಇರಲಿ" ಎಂದು ನಾನಾ ರೀತಿಯಾಗಿ ಕಣ್ಣನಿದುಂಬಿದಳು. ಆಗ ಲಕ್ಷ್ಮಣನು ನುಡಿಯಲಾರದ ನುಡಿಯಿಂದ "ಕೊಲೆಘಾತಕನನ್ನುದ್ಧರಿಸಬೇಕು ತಾಯಿ" ಎಂದು ಕಾಲಮೇಲೆ ಬಿದ್ದನು. ಸೀತೆಯು ತನ್ನಡಿಗೆಜಿಗಿದ ಕರ್ತವ್ಯನಿಷ್ಠನಾದ ಮೈದುನನನ್ನು ಸಮಾಧಾನ ಮಾಡಿ "ನಿನ್ನನ್ನು ನಿಮ್ಮ ಅಣ್ಣನು ನನ್ನ ವಿಷಯವಾಗಿ ಪ್ರಶ್ನೆ ಮಾಡಿದರೆ ನಿನ್ನಾಜ್ಞೆಗೆ ಅಬಲೆ ಮರುಗಲಿಲ್ಲ. ದೂರಲಿಲ್ಲ. ನೀನೇ ಗತಿಯೆಂದು

ನಿನ್ನಡಿಯನ್ನೇ ನೆನೆಯುತ್ತ ತನ್ನಂತ್ಯಕಾಲವನ್ನು ನಿರೀಕ್ಷಿಸುತ್ತಿದ್ದಾಳೆ ಎಂದು ವಿಜ್ಞಾಪಿಸು. ಅತ್ತೆಯರಿಗೆ ನುಡಿಯಿಂದಲೇ ಮಣಿದೆನೆಂದು ತಿಳಿಸು; ಊರ್ಮಿಳಾದ್ಯರಿಗೆ ಮರೆಯದಿರಬೇಕೆಂದು ಕೇಳಿಕೊಂಡನೆಂದು ಹೇಳು. ಅಲ್ಲದೆ ನಮ್ಮಯ್ಯನು ನನಗೆ ಬಳುವಳಿಯಾಗಿ ಕೊಟ್ಟ ಆಭರಣಗಳಲ್ಲಿ ಏಕಾವಳಿ ಸರವನ್ನು ಶ್ರುತ ಕೀರ್ತಿಗೂ, ಪಿಂಡುಗಂಕಣವನ್ನು ಮಾಳವಿಗೂ ಜಕ್ಕಸರವನ್ನು ನಿನ್ನರಸಿಗೂ ಚಂದಿರಗಾವಿ ಸೀರೆಯನ್ನು ನನ್ನ ನಲ್ಗೆಳತಿ ಚಂದ್ರಮತಿಗೂ ಮೆಚ್ಚಾಗಿ ಕೊಡು. ನಿನಗೆ ನನ್ನಲ್ಲಿ ದಯೆಯಿರುವುದಾದರೆ ಲೋಕದವರಿಗೆ ಒಂದು ಧರ್ಮಶಾಲೆಯನ್ನೇರ್ಪಡಿಸು. ಎನ್ನ ನಿತ್ಯಪೂಜೆಯ ಕಪಿಲೆದುರುವನ್ನೂ ಅದರ ಕರುವನ್ನೂ ನಿನ್ನ ತಾಯಿಯ ವಶಪಡಿಸು. ನಮ್ಮೆಲ್ಲರಿಗೂ ಶ್ರೀರಾಮನ ಪಾದಕಮಲದ ಪ್ರೀತಿಯೆಂಬ ವಜ್ರಪಂಜರದ ರಕ್ಷಣೆಯಿರಲಿ, ನೀನು ಹೊರಡು" ಎಂದು ಆಶೀರ್ವದಿಸಿ ಕಳುಹಿಸಿದಳು.

ಆಗ ಸೌಮಿತ್ರಿ ಡೋಲಾಯಮಾನಮಾನಸನಾಗಿ ದೇವಿಯನ್ನು ಪ್ರದಕ್ಷಿಣೆಮಾಡಿ ಅವಳಿಗೆ ಕಾವಲಾಗಿರಬೇಕೆಂದು ದಿಕ್ಪಾಲಕರನ್ನೆಲ್ಲಾ ಪ್ರಾರ್ಥಿಸಿಕೊಂಡು ಅಗಲಿಕೆಯ ದುಃಖವು ಅವನನ್ನು ಮೂಕನನ್ನಾಗಿ ಮಾಡಲು ಹೇಗೋ ಮನವಿಲ್ಲದ ಮನದಲ್ಲಿ ಹಿಂತಿರುಗಿದನು.

ಲಕ್ಷ್ಮಣನು ಹಿಂದಿರುಗಲಾಗಿ ಸೀತೆಯು ರಾಮಧ್ಯಾನದಲ್ಲಿಯೇ ಹಲುಬಿ ಮರುಗುತ್ತಿರಲು ಆ ಹೊತ್ತಿಗೆ ಸರಿಯಾಗಿ ವೇದಪುರುಷನೇ ವೃದ್ಧ ರೂಪಿನಿಂದ ಪ್ರತ್ಯಕ್ಷನಾದನೊ ಎಂಬಂತೆ ವಾಲ್ಮೀಕಿ ಋಷಿಯು ಅಲ್ಲಿಗೆ ಬಂದು ಆಕೆಯ ಮನಸ್ಸಿನ ದುಃಖವನ್ನು ಪರಿಹರಿಸಿ ಸಮಾಧಾನಮಾಡಿ ತನ್ನಲ್ಲಿ ನಂಬಿಕೆ ಬರುವಹಾಗೆ ಮಾಡಿ ಭಾಗ್ಯಲಕ್ಷ್ಮಿಯನ್ನು ಕರೆದುಕೊಂಡು ಹೋಗುವ ದೀನನಂತೆ ತನ್ನ ಆಶ್ರಮಕ್ಕೆ ಕರೆದೊಯ್ದನು.

ಅಲ್ಲಿ ಸೀತೆಯ ಪ್ರತಿನಿತ್ಯವೂ ಉದಯಕ್ಕೆ ಪೂರ್ವಭಾವಿಯಾಗಿಯೇ ಎದ್ದು ರಾಮಧ್ಯಾನಮಾಡಿ ಉದಯಿಸಿಬರುವ ತನ್ನ ಕುಲಗುರುವಾದ ಸೂರ್ಯದೇವನಿಗಭಿವಂದಿಸಿ ಮಿಂದು ಮಡಿಯುಟ್ಟು ಪಿತೃಭಕ್ತಿಯಿಂದ ವಾಲ್ಮೀಕಿಗೆ ಪ್ರದಕ್ಷಿಣ ನಮಸ್ಕಾರ ಮಾಡಿ ಆಶೀರ್ವಾದವನ್ನು ಪಡೆದು ಮುನಿಪತ್ನಿಯರನ್ನೆಲ್ಲ ಮಂಗಳದ್ರವ್ಯಗಳಿಂದರ್ಚಿಸಿ ಅವರೊಡನೆ ಕೆಲವು ಕಾಲ ಸಲ್ಲಾಪದಲ್ಲಿದ್ದು ಅವರನುಗ್ರಹಪೂರ್ವಕವಾಗಿ ಕೊಟ್ಟ ಕಂದಮೂಲ ಫಲಗಳನ್ನು ತನ್ನ ಕಿರುಬೆರಳಿನಲ್ಲಿದ್ದ ರಾಮಮೂರ್ತಿಗೆ ಸಮರ್ಪಿಸಿ ಬಳಿಕ ಆ ಪ್ರಸಾದವನ್ನು ತಾನು ಕೋಡಿವರವ ಕಣ್ಣೀರಿನಲ್ಲಿಯೇ ಭುಜಿಸಿ ಮುನಿಗಳೋದುವ ರಾಮಚರಿತ್ರವನ್ನು ಶ್ರದ್ಧೆಯಿಂದ ಕೇಳಿ ತಾನೂ ಹಂಬಲಿಸಿ ಸಂಧ್ಯಾಕಾಲದಲ್ಲಿ ಸಂಧ್ಯಾದೇವಿಯನ್ನು ಪೂಜಿಸಿ ತನ್ನ ಪ್ರಾಣೇಶ್ವರನ ಗುಣಮಾಲೆಗಳನ್ನೇ ನೆನೆದು ಸಂತೋಷಗೊಂಡು ಮರೆದೊರಗುವಳು. ಕನವರಿಸುವಳು; ನುಡಿಯಲ್ಲಿ ಎಡವಿನಲ್ಲಿ ಜಡದಲ್ಲಿ ಜಂಜಡದಲ್ಲಿ ಅರಿವಿನಲ್ಲಿ ಮರವಿನಲ್ಲಿ ಅಡಿಗಡಿಗೂ ರಾಮಧ್ಯಾನವೇ ! ತನ್ನೆರೆಯನ ಹಾಡು, ತನ್ನಾಣ್ಮನ

ಭಕ್ತಿ, ತನ್ನಿನಿಯನ ನೆನಪು, ತನ್ನರಸನ ಸರಸ, ಯಾವಾಗಲೂ ಆ ಸರಸಿಜಾಕ್ಷಿಗೆ ಎಂತಹ ಸಾಧ್ವೀಮಣಿಯೋ ಅವಳು. ಇನಿಯನು ತನ್ನಲ್ಲಿ ತೋರಿದ ವರ್ತನೆಗೆ ಎಂದೂ ಅವಳು ಬಾಡಲಿಲ್ಲ, ಕೋಡಲಿಲ್ಲ. ತನ್ನ ಆ ದುಃಸ್ಥಿತಿಯನ್ನು ತನ್ನ ಪತಿಯ ವಿಷಯವಾದ ಕೋಪದಲ್ಲಿ ಎಂದೂ ಪರಿವರ್ತಿಸಲಿಲ್ಲ. ಋಷಿಯ ರಕ್ಷಣೆ, ಋಷಿ ಪತ್ನಿಯರ ಸ್ನೇಹ, ತನ್ನ ಪಾತಿವ್ರತ್ಯ ಈ ಮೂರು ಅವಳ ರಕ್ಷಣೆಗೆ ಮುಪ್ಪುರಿಯಾಯ್ತು. ಹೀಗಿದ್ದ ಸೀತೆಗೆ ಕೆಲವು ಕಾಲದಮೇಲೆ ಸೂರ್ಯಚಂದ್ರರಂತಿರ್ದು ಅವಳಿಮಕ್ಕಳು ಜನಿಸಿದರು. ಲವಕುಶರೆಂದು ಅವರಿಗೆ ವಾಲ್ಮೀಕಿಯಿಂದ ನಾಮಕರಣವಾಯಿತು. ಶುಕ್ಲಪಕ್ಷದಂತೆ ಏಕಪ್ರಕಾರವಾಗಿ ಅಭಿವೃದ್ಧಿಯಾಗುತ್ತಿದ್ದ ಆ ನಿಸರ್ಗ ಸುಭಗರ ಚಿಣ್ಣರಾಟವು ಮಾತೆಯಾದ ಸೀತೆಯ ಸಂತೋಷ ಸಮುದ್ರವನ್ನು ಇಮ್ಮಡಿಸಿತು.

ಕೆಲವುಕಾಲ ಹೀಗೆ ಕಳೆಯಲು ರಾಮನ ಯಜ್ಞಾಶ್ವವು ಶತ್ರುಘ್ನನ ರಕ್ಷಣೆಯಲ್ಲಿ ವಾಲ್ಮೀಕಿಯಾಶ್ರಮಕ್ಕೆ ಬಂದಿತು. ವೀರಬಾಲಕನಾದ ಲವನು ಅದನ್ನು ಕಟ್ಟಿ ಶತ್ರುಗಳಲ್ಲಿ ಕಾದಿ ಬಂದಿಯಾದ. ಒಡನಾಡಿಯ ಮಕ್ಕಳಿಂದ ಈ ವಿಷಯವು ಸೀತೆಗೆ ತಿಳಿಯಲು ಅವಳು ತಾಯೊಡಲನ್ನು ಸಹಿಸಲಾರದೆ ನಾನಾ ರೀತಿಯಾಗಿ ಹಲುಬಲು ಮೊದಲು ಮಾಡಿದಳು. ಆ ವೇಳೆಗೆ ಸರಿಯಾಗಿ ಅರಿಗಜಾಂಕುಶನಾದ ಕುಶನು ಬಂದು ಮರುಗುತ್ತಿದ್ದ ಮಾತೆಯನ್ನು ಸಮಾಧಾನ ಮಾಡಿ ಶತ್ರುಸೈನ್ಯವನ್ನೆದುರಿಸಿ ರಾಮಲಕ್ಷ್ಮಣಾದ್ಯರನ್ನು ಕಸವಿಸಿ ಮಾಡುವಷ್ಟರಲ್ಲಿ ವರುಣಲೋಕಕ್ಕೆ ಹೋಗಿದ್ದ ವಾಲ್ಮೀಕಿಯು ತನ್ನಾಶ್ರಮಕ್ಕೆ ಬಂದು ಸೀತಾದೇವಿಯನ್ನು ಸಂತೈಸಿ ರಣರಂಗವನ್ನು ಪ್ರವೇಶಿಸಿ ತಂದೆಮಕ್ಕಳ ಸಾಹಸವನ್ನು ನೋಡಿ ಬೆರಗಾಗಿ ಮಕ್ಕಳನ್ನು ಅಯ್ಯನಡಿಗಿರಸಿದ. ಶ್ರೀರಾಮನು ತನಯರ ಅಂಗಸ್ಪರ್ಶದಿಂದ ಅಭೂತಪೂರ್ವವಾದ ಸಂತೋಷವನ್ನು ತಾಳಿ ಬಾಲಕರ ಜಾಣ್ಮೆಗೆ ಕಾರಣವಾದ ರಾಮಾಯಣವನ್ನು ಹಾಡಿಸಿ ಮನ ಹಿಗ್ಗಿ ಕೇಳಿ ತನ್ನರಸಿಯ ಕುಂದಿಲ್ಲದ ನಡತೆಗೆ ದೇವತೆಗಳೇ ಸಾಕ್ಷಿಯಾಗಿರಲು ತನ್ನ ಅನ್ಯಾಯವನ್ನು ಮನ್ನಿಸಬೇಕೆಂದು ಕೇಳಿಕೊಂಡು ಲಕ್ಷ್ಮಣನನ್ನು ಕಳುಹಿಸಿ ಅವಳನ್ನೂ ಬರಮಾಡಿ ಪತ್ನೀಪುತ್ರ ಪರಿವಾರ ಸಮೇತನಾಗಿ ಅಯೋಧ್ಯೆಗೆ ತೆರಳಿ ಯಜ್ಞಪರಿಸಮಾಪ್ತಿ ಮಾಡಿ ತನ್ನ ಯಶಸ್ಸಿನಿಂದ ಲೋಕವನ್ನೆಲ್ಲ ಬೆಳಗಿ ಸಹೋದರರೊಡನೆ ಅನೇಕಕಾಲ ಸುಖವಾಗಿ ರಾಜ್ಯವಾಳಿದನು.

ಈ ಮೇಲಿನ ಪಾತ್ರ ಚಿತ್ರಣದಲ್ಲಿ ಶ್ರೀರಾಮನ ಕುಸುಮಕೋಮಲ ಹೃದಯವೂ, ವಜ್ರಕಠಿಣವಾದ ಕರ್ತವ್ಯನಿಷ್ಠೆಯೂ ಆದರ್ಶಭೂತವಾದ ಚಕ್ರವರ್ತಿತ್ವವೂ ಪ್ರಕಟವಾಗುತ್ತಿರುವ ಹಾಗೆಯೇ ಸ್ಫಟಿಕಶುದ್ಧಳಾದ ಸೀತೆಯ ಉಚ್ಚ ಪತಿಭಕ್ತಿ ಸ್ತ್ರೀಸಹಜವಾದ ಲಜ್ಜೆ, ಆಸೆ, ಭಯ, ಕಾತರ, ಪುತ್ರವಾಂಛೆ, ಪುತ್ರಪ್ರೇಮ, ಸೋದರೀಸ್ನೇಹ, ದೈವಭಕ್ತಿ, ವಿನಯ ಮೊದಲಾದ ಗುಣರಾಶಿಗಳು ತಾವೇತಾವಾಗಿ ಎದ್ದು ಕಾಣುತ್ತಿವೆ.

ಪ್ರಧಾನ ಪಾತ್ರಗಳಾದ ಸೀತಾರಾಮರೇ ಅಲ್ಲದೆ ರಾಮಾಶ್ವಮೇಧದ ಇತರ ಉಪಪಾತ್ರಗಳೂ ಇಷ್ಟೇ ಖಚಿತವಾಗಿವೆ. ಲಕ್ಷ್ಮಣನ ಅನ್ಯಾದೃಶವಾದ ಭ್ರಾತೃಭಕ್ತಿ.

ಭರತ ಶತ್ರುಘ್ನರ ನಿಸರ್ಗವಾದ ಸೋದರಪ್ರೇಮ, ಚ್ಯವನ, ಋತಂಭರ ಅರಣ್ಯಕ ಮೊದಲಾದವರ ಅವರ್ಣನೀಯವಾದ ರಾಮಭಕ್ತಿ, ಸುಬಾಹು, ವೀರಮಣಿ, ಲವಕುಶ ಮುಂತಾದವರ ಅಳವಿಗಳೆದ ಪೌರುಷ – ಇವು ಮಿಂಚಿನಂತೆ ಕ್ವಚಿತ್ತಾಗಿ ಕಂಡರೂ ಜಾಜ್ವಲ್ಯಮಾನವಾಗಿ ವರ್ಣಿತವಾಗಿವೆ.

ಶೈಲಿಯ ಕವಿಯ ವ್ಯಕ್ತಿತ್ವವನ್ನು ಸ್ಪಷ್ಟಪಡಿಸುತ್ತದೆಂದು ಹೇಳುವುದುಂಟು. ಈ ದೃಷ್ಟಿಯಿಂದ ನೋಡಿದರೆ ಮುದ್ದಣನ ಶೈಲಿಯು ಕವಿಯ ವೈಶಿಷ್ಟ್ಯವನ್ನು ಖಚಿತವಾಗಿ ಹೊರಗೆಡಹುತ್ತದೆಂದು ಹೇಳಬಹುದು. ಹಿಂದೆಯೇ ತಿಳಿಸಿರುವಂತೆ ಮುದ್ದಣನು ಆಗತಾನೆ ರೂಢಿಗೆ ಬರುತ್ತಿದ್ದ ಕಾದಂಬರಿಗಳನ್ನು ಪೂರ್ಣವಾಗಿ ಓದಿ ಪರಿಚಯ ಮಾಡಿಕೊಂಡಿದ್ದನು. ಅಲ್ಲಿಯ ಸಂಭಾಷಣಾ ಶೈಲಿಯೂ ನಾಟಕೀಯತೆಯೂ ಅವನ ಬರವಣಿಗೆಯ ಮೇಲೆಯೂ ಪರಿಣಾಮಕಾರಿಯಾಗಿದ್ದವು. ಕವಿಯೂ ಕತೆಯ ಪಾತ್ರಗಳೊಡನೆ ಪಾತ್ರವಾಗಿ ಸೇರಿಕೊಂಡು ಕೆಲವು ಸಲ ಶ್ರೋತೃವಾಗಿಯೂ ಕೆಲವು ಸಲ ಪ್ರೇಕ್ಷಕನಾಗಿಯೂ ಕೆಲವು ಸಲ ಸಮಾನ ಪಾತ್ರವಾಗಿಯೂ ನಡೆದುಕೊಂಡು ಕತೆಯನ್ನು ಬೆಳೆಸುವುದು ಕಾದಂಬರಿಯ ಹೊಸ ತಂತ್ರ ಅದಕ್ಕನುಗುಣವಾಗಿಯೇ ಮುದ್ದಣನು ಮುದ್ದಣ ಮನೋರಮೆಯರ ಪಾತ್ರಗಳನ್ನು ನಿರ್ಮಿಸಿ ಈಗಿನ ಪ್ರಸಾರ ನಾಟಕಗಳ ಚಾಲಕರ ಸ್ಥಾನವನ್ನಾಕ್ರಮಿಸಿ ಪಾತ್ರಗಳಿಂದ ನೇರವಾಗಿ ಸಂಭಾಷಣೆಯನ್ನು ಬೆಳಸಿಕೊಂಡು ಹೋಗಿದ್ದಾನೆ. ವಾಸ್ತವವಾಗಿ ಕವಿಯೂ ಆತನ ಪತ್ನಿಯೂ ಹಿನ್ನೆಲೆಯಲ್ಲಿದ್ದುಕೊಂಡು ಕತೆಯನ್ನು ಪೂರ್ಣವಾಗಿ ಸಂಭಾಷಣೆಗಳ ಮಾಲೆಯಿಂದಲೇ ಬೆಳಸಿದ್ದಾರೆ. ಈ ಕಾರ್ಯದಲ್ಲಿ ಬಹು ವಿಶೇಷವಾಗಿ ಕುಸುರಿ ಕೆಲಸ ನಡೆದಿದೆ. ಬುದ್ಧಿಯ ವ್ಯಾಪಾರ ಶೈಲಿಯಲ್ಲಿ ಪ್ರಧಾನಪಾತ್ರ ವಹಿಸಿರುವುದರಿಂದ ಬಹು ಸಣ್ಣ ವಿಷಯಗಳಲ್ಲಿಯೂ ಹೆಚ್ಚಿನ ಎಚ್ಚರಿಕೆಯನ್ನು ತೆಗೆದುಕೊಳ್ಳಲಾಗಿದೆ. ಬಹು ಪುಟ್ಟ ವಾಕ್ಯಗಳು, ರಸಸ್ಕಂದಿಗಳಾದ ಮಾತುಗಳು, ವೀರ್ಯವತ್ತಾದ ಸಂಭಾಷಣೆ. ಮುಂದೆ ಲವಕುಶರಿಗೂ ರಾಮಾದಿಗಳಿಗೂ ನಡೆದ ಸಂಭಾಷಣೆಯನ್ನು ಗಮನಿಸಿ ಏನು ವೀರ್ಯವತ್ತಾಗಿದೆ !

ರಾಮನಾಳ್ಗಳ್ :– 'ಪಳ್ಳಿಯ ತುಱುವಳನಂತಿರೆ ಹಸುವನೇನೆಂದು ಕಟ್ಟಿದಯ್ ? ಹಯಮುಮನೆಮ್ಮುಮಂ ನೊಡದೆ ನಾಡರಾಯರೆಂದು ಸಂಕಿಸದೆ ಕದನಕ್ಕಂಜದೆ ಜೀವದಾಸೆಯಿಲ್ಲದೆ ಕಟ್ಟನಿಂದ ನಿನಗೆ ಕಣ್ಣೂಮ್ಮೆರವೇಡಾ ! ನೆಲನಂ ಕಿನ್ನೆಲನಂ ಬಾನಂ ತಾನಂತುಟೊಂದು ಮೈಮೆಯಿಂ ಕಾವ ದೇವಂ ಬೇಳ್ವ ಜನ್ನದ ಮಾನ್ಯದ ಕುದುರೆ ಕಣಾ ! ಅಬ್ಬಾ, ಏಂ ಸೊರ್ಕೋ ? ಸೆಳೆಯ ಸವಿ ಬೇಪೆ; ಪೊನ್ನಪಿಳುಕಿನ ಬಲ್ಲಣೆಯ ಸವಿ ಬೇಪೆ ! ಪೋ. ಪೋ ಕಾಡಕೋಡಗವಸುಳೆ !'

ಲವಂ :– 'ಸರಲಸೋನೆಯಿಂ ಕರೆದು ಘಾತಿಸಿ ಬೊಬ್ಬಿಱಿದು ಕಾಂಬಿರೆ ಕಾಡಕೋಡಗವಸುಳೆಯ ಕೈಚಳಕಮಂ ! ಎನಗೆ ಸೆಣಸಾಟಂ ಸಲ್ವುದೆ ? ಸಾಲ್ವುದೇ ನಿಮಗಿಂದಿನ ಗೆಲ್ಲಂ ಪ್ರಾಯಂ ಕೂಸಾದೊಡೇನೀ ಸಾಯಕಂ ಕೂಸಕ್ಕುಮೆ !

ಜಗದೆ ನೀವೇ ಬಲ್ಲುಳ್ಳರ್ ? ಆಂ ನಡೆವೆತ್ತ ಸೀರ್ಪುಟಬಾಗೆವೆ ! ಅಲ್ಲದೊಡೇಂ ಪೆರ್ಕಳಿಕೆಯೊ ? ಆಮೆ ಜಗದ ಗಂಡರ ಗಂಡರ್ ! ಪೆಜಿರ್ ಪಂದೆಗೊಂದೆಗಳ್ ! ಹಯಂ ಬರ್ಪುದುಮೊಡನೆ ಮಜಿವಾಟ್ಟುದು ! ಕಪ್ಪಮನೊಪ್ಪಿಸುವುದು ಗಡ ! ನಿರ್ಧನರಪ್ಪಿನಂ ಮೊಗಸಿರ್ದ ಜನ್ನಕ್ಕೆ ಪಣಮಂ ಕೊಡಿಮೆಂದು ಬೇಡಿದೊಡಾಗದೆ ? ಲೇಸು ಲೇಸು'

ಶ್ರೀರಾಮಂ :– (ಕುಶನಂ ಕುರಿತು) 'ಎಲೆ ಪಸುಳೆ ನೀನಾವಂ ? ಹಯಮನೇನೆಂದು ಕಟ್ಟಿದಯ್ ? ಎನ್ನಾಣೆ, ನಿನ್ನೊಳೆಗಟ್ಟಿಜುಂಟು. ನೀಂ ಗೆಯ್ದ ದುಜುದುಂಬಿತನಮಂ ಪೊಲ್ಲದ ಕಜ್ಜಮಂ ಮಜಿತಂ. ಇದಕೊಳ್ ನಿನ್ನಂ ಕಾವೆಂ. ನಿಮಗಿನಿತ್ತು ಬಲ್ಪೆಂತುಂಟಾಯ್ತು ? ಬಿಲ್ಲೋಜನಾವಂ ? ಪುಟ್ಟಿದಿರೆಲ್ಲಿ ?'

ಕುಶಂ :– 'ಕೇಳಲೆ ರಾಯ ! ನಿನ್ನ ಹಯಮಂ ಗಿಯಮಂ ನಾಂ ಕಟ್ಟಿದೆನಿಲ್ಲ; ಕಿಜಿಯನಜಿಯದೆ ಕಟ್ಟಿದನಕ್ಕುಂ. ಮೇಣೆನ್ನೊಳಾವುದುಂ ದುಜುದುಂಬಿತನಂ ಬಾರದು. ನಿಮ್ಮವರಾತನಂ ಬಜಿದೆ ನೋಯಿಸಲೊಡಮೆನಗೆ ನಿಮ್ಮೊಳ್ ಮುನಿಸಾಯ್ತು. ನಿಮ್ಮೊಳಿದಿರ್ಚುವೊಡಾದೆಂ. ಎಮಗಜ್ಜಂ ಬಿಲ್ಲೋಜಂ. ಕಾಡೊಳೆ ಪುಟ್ಟಿದೆವು. ಅಬ್ಬೆಯ ಪರಕೆ, ಮುತ್ತಯ್ಯನ ಕಾಪು, ಕೆಳೆಯರ ನಲ್ಮೆ, ಪಿರೆಯರೊಲ್ಮೆ ಎಮಗೀವಗೆಯ ಬಲ್ಪನೊಡರ್ಚಿದತ್ತು.'

ರಾಘವಂ :– 'ಕಿಜುಗೂಸುಗಳ್ ನಿಮಗೆಮೆಗೆ ಜುದ್ದಮಕ್ಕುಮೆ ? ಬಜಿದೆ ಕಾದಿ ಬಟಿಲದಿರಿಂ. ಕೊಂಡ ಹಯಮಂ ಬಿಟ್ಟು ಸಂತಂ ಪೋಗಿಂ.'

ಕುಶಂ :– 'ನಿನ್ನೀ ಕೊರ್ಬಿನ ನುಡಿಯಂತಿರ್ಕೆ ! ಕಟ್ಟಿದ ಹಯಮಂ ಕೊಟ್ಟು ಬಾಳ್ವ ಮಾತುಂಟೆ ? ಅಬ್ಬೆ ಜೋಡಿಸಳೆ ? ಅಜ್ಜಂ ಪಜಿಯನೆ ? ಕೆಳೆಯರೇಡಿಸರೆ ? ಚಲಕಂ ತೋಳ್ವಲಕಂ ಕುಂದಾಗದೆ ? ಎನ್ನ ಮೇಣೆನ್ನ ಪೊನ್ನ ಪಿಳುಕಿನ ಕೋಲ ಬಾಲಿಶಮಂ ನೋಡು !

ಮುದ್ದಣನ ಶೈಲಿಯ ಮತ್ತೊಂದು ವೈಶಿಷ್ಟ್ಯ ಹಿತಮಿತವಾದ ಕನ್ನಡ ಸಂಸ್ಕೃತಗಳ ಮೇಳನ. ಸಾಧ್ಯವಾದಷ್ಟೂ ಹಳಗನ್ನಡ ಶೈಲಿಯನ್ನೇ ಅನುಸರಿಸುತ್ತಿದ್ದರೂ ಮಧ್ಯೆ ಮಧ್ಯೆ ಅಪೂರ್ಣವಾಗಿ ಉಪಯುಕ್ತವಾಗುವ ಸಂಸ್ಕೃತ ವಾಕ್ಯಗಳು ಕೇಸರೀಭಾತಿನ ಮಧ್ಯದ ಗೋಡಂಬಿಯಂತೆ ಆಕರ್ಷಕವಾಗಿವೆ. 'ನಿರ್ಮೋಕ ನಿರ್ಮುಕ್ತ ನಿರ್ಮಲವಪ್ಪ ಫಣಿಯಂತೆ ಸೀತೆಯಂ ತೊಜೆದು ರಾಮಂ ಸೊಗಂ ಬಾಟ್ದಿಂ. ಆನಂದಾಶ್ರುವಿಲುಳಿತ ಕಮಲಲೋಚನೆ ಚಂದ್ರಮುಖಿ ಮುನಿದರ್ಶನೋತ್ಕಂಠೆ ಪುಳುಕಿತ ಸರ್ವಾಂಗಿ ಸೀತೆ ಆತುರದೊಳಿರ್ದಳ್. ಶಶ್ವದ್ಗಳದಶ್ರುಧಾರಾಸಿಕ್ತಕಪೋಲಂ ಕಂಪಿತ ಕಾಯಂ ಲಕ್ಷ್ಮಣಂ. ನಿಜನಿಟಿಲತಟಘಟಿತಕರಸಂಪುಟನಾದನಾ ಋತಂಭರಂ. ಶ್ರೀರಾಮಂ ರಘುಕುಲವಾರ್ಧಿಪೂರ್ಣಶಶಾಂಕಂ. ಈ ಸಂಸ್ಕೃತ ಸಮಾಸಗಳು ಶೈಲಿಯಲ್ಲಿ ವೈವಿಧ್ಯವನ್ನುಂಟುಮಾಡಿವೆ.

ಪ್ರಾಚೀನರಿಗಿದ್ದ ಪ್ರಾಸಪ್ರಿಯತೆ ಮುದ್ದಣನಿಗಿಲ್ಲದಿಲ್ಲ. ಆದರೆ ಅವುಗಳು ಶೈಲಿಗೆ ಶೋಭೆಯನ್ನುಂಟುಮಾಡಿವೆ. ಕೆಲವಂತೂ ಕವಿಯ ಕೌಶಲ್ಯವನ್ನು ಪ್ರಕಟಿಸಲು ಬಹು ಸಹಾಯಕವಾಗಿವೆ. ಸೀತೆ ಕುಂಕುಮದ ಕರ್ಮಣಿಯ ಕಸ್ತೂರಿಯ ಕರ್ಪೂರದ ಕಮ್ಮೆಣ್ಣೆಯ ಕಾವಿಗಪ್ಪಡದ ಕರಂಡಮಂ ಕಯ್ಯೊಳ್ ಕೊಂಡು ಪೊಱಮಟ್ಟಳ್. ಅಣ್ಣನಾಣತಿಯೆಂಬೊಂದು ನೇಣ್ ಗೋಣಂ ಬಿಗಿದೀಲ್ವುಂ, ಪುಷ್ಕಲಂ ಕಿಱಿಯಯ್ಯನ ಬೆಂಬಲಕ್ಕೆಂದು ಪೋಪವಸರದೊಳ್ ಬಿಡುಜಡೆಯ ಬಿಡುಮೊಗದ ಬಿರಿದೆಳ್ಗಣ್ಣ ಬಿಲ್ಪುರ್ಬಿನ, ಬಿಂಗಗೆಕ್ಕೆಯ ಬಿಂಬಾಧರದ ಬಿಲ್ವಸ್ತನದ ಬಿಣ್ಪೊಡೆಯ ಬಡವಾಸೆಯ ಬಳಲ್ನಡುವಿನ ಬಲಮುರಿಸಂಕುಂಗೊರಲ ಬಸೆನಡೆಯ ಬೆಳ್ದಳಿರ್ಗೈಯ ಬಂದುಗೆವೂಗರ ಬಾವೊನ್ನಸೊವಡ ಬಳಲೊಡಲ ಬೆಡಂಗಿನ ಬಾಲೆಯೊರ್ವಳ್ ಬರುತಮಿರ್ದಳ್. ಪ್ರತಾಪಾಗ್ರ್ಯಂ ನಿಂದುಂ ಮುಂದುಂ ಪಿಂದುಂ ಸಂಧಿಸಿದ ಬಂದಿಗಾಱರ ಗೊಂದಣಮಂ ನಂದಿಪೊಂದು ಕುಂದದ ಗರಗರಿಕೆಯ ಕೈದುಗಾಱರತನದ ಬಲ್ಮೆಯೊಳ್ ಬಂದಂ; ಸಿಂಗನೆರ್ದೆಯ ಸಂಗರದಂಗದ ಪ್ರತಾಪಾಗ್ರ್ಯಂ, ನೆಲನಗಲದಗಲ ಚಲದಚಲದ ಬಲದ ಬಲದ ಗಂಡುಗಲಿ ಲಕ್ಷ್ಮೀನಿಧಿ – ಈ ಮೊದಲಾದ ಪದ ಜೋಡಣೆಗಳಲ್ಲಿ ಅನುಪ್ರಾಸವು ಭಾವಪುಷ್ಟಿಗೂ ಸಹಾಯಕವಾಗಿದೆ.

ಮುದ್ದಣನ ನಿಜವಾದ ಶಕ್ತಿ ಜಾಜ್ವಲ್ಯಮಾನವಾಗಿರುವುದು ಆತನ ಉಪಮಾನಗಳಲ್ಲಿ. ಆತನು ಉಪಮಾಲೋಲ. ಆತನು ರೂಪಕ ರಾಜ್ಯದ ಚಕ್ರವರ್ತಿ. (ಈ ಬಿರುದನ್ನು ಶ್ರೀಮಾನ್ ಎಸ್. ವಿ. ರಂಗಣ್ಣನವರು ರನ್ನನಿಗೂ ನಾರಣಪ್ಪನಿಗೂ ಉಪಯೋಗಿಸಿದ್ದಾರೆ; ಮುದ್ದಣನೂ ಈ ಕ್ಷೇತ್ರದಲ್ಲಿ ಅವರಿಗೆ ಕಡಿಮೆಯಲ್ಲವೆನ್ನಬಹುದು) ಆತನು ಸಂಸ್ಕೃತ ಮೂಲದಲ್ಲಿರುವ ಕೆಲವು ಉಪಮಾನಗಳನ್ನುಪಯೋಗಿಸಿಕೊಂಡಿದ್ದರೂ ಸ್ವಪ್ರತಿಭೆಯಿಂದಲೂ ಲೋಕ ಪರಿಚಯದಿಂದಲೂ ಹಲವಾರುಗಳನ್ನು ಉಲ್ಲೇಖಿಸಿದ್ದಾನೆ. ಆತನ ಉಪಮಾನಗಳು ಜೀವನದ ನಾನಾ ಕ್ಷೇತ್ರಗಳಿಂದ ಆರಿಸಿಕೊಂಡವು. ಉಪಮೇಯದ ಸ್ಪಷ್ಟ ಪರಿಚಯಕ್ಕೆ ಬಹು ಸಹಕಾರಿಯಾಗುವವು. 'ಭೂರಮೆಯ ಸೀಮಂತರತ್ನಂಬೊಲಿರ್ದುದು ಅಯೋಧ್ಯಾನಗರಂ. ಕೆಯ್ವೊಲನೊಳ್ ಬೆಳೆದ ಕುಱುಂಬಲ್ಲಂ ಕಿಱ್ತು ಬಿಸುಡುವಂತೆ ಸೀತೆಯ ನುಡಿವೆಂ. ಪಾಪಿ ಕೈವಲ್ಯಲಕ್ಷ್ಮಿಯಂ ಬಿಡುವಂತಿರೆ ನಿರ್ಘೃಣಂ ಲಕ್ಷ್ಮಣಂ ಭಾಗ್ಯಲಕ್ಷ್ಮಿಯಂ ಸೀತೆಯಂ ಬಿಟ್ಟಂ. ತೊಳಚಿ ತೋಂಟದೊಳ್ ತುಱುಚೆ ಪುಟ್ಟುವಂತೆ ನೇಸಱ ಬಟೆಯೊಳ್ ಲಕ್ಷ್ಮಣಂ ಪುಟ್ಟಿದಂ. ಗಾಳಿಗೆ ಮಾಜೊಡ್ಡಿಪೋಪ ಪತಾಕೆಯ ಕೌಸುಂಬಾಂಬರದಂತೆ ಲಕ್ಷ್ಮಣನ ಮನಂ ಪಿಂದುಟೆದುದು. ಭಾಗ್ಯಲಕ್ಷ್ಮಿಯಂ ಕೊಂಡೊಯ್ವ ದೀನನಂತಿರೆ ವಾಲ್ಮೀಕಿ ಸೀತೆಯಂ ಆಶ್ರಮಕ್ಕುಯ್ದಂ. ಮುಸುಂಕಿದ ಲೋಕಂ ಮರುಳ್ಗೆಮೆಯಡಂಗಿದ ಜೋಗಿಯ ಮನದ ನಿರ್ಮಳಿಕೆಯಂತಿರೆ ಕವಡುಗಟ್ಟಿಲೆ ಮಾಸಲೊಡಂ ದೆಸೆಯೆತ್ತಂ ನಿರ್ಮಲಮಾದುದು. ಬಲ್ಲಾನೆಯ ಮೆಟ್ಟಿನಡಿಯ ತೆಂಗಿನಕಾಯಂತೆ ರಥಂಗಳ್ ಜಜ್ಜರಿವೋದುವು. ಮಾಟದ ಬೆಲೆವೆಣ್ಣ

ಕೈಮಸಕಕ್ಕಜೆವುಗೆಟ್ಟು ಕಳವಳಿಪೆಗ್ಗನೆಂತಂತು ಶತ್ರುಹಂ ಚಿಂತಿಸಿದಂ. ಕಾಡಮಜೆಯ ಕಿಱುವಜೆಯನಟ್ಟಿ ಪಿಡಿವ ನಾಡ ನಾಯ್ಗಳಂತೆ ಸೈನಿಕರ್ ಲವನಂ ಪಿಡಿದರ್. ಮಜೆಸಿಂಗನಾನೆವಿಂಡನೆಂತಂತು ಒರ್ವನೆ ಬಾಲಕಂ ಕುಶನನಿಬರುಮಂ ಮಾಮಸಕದಿಂ ದೆಸೆಗೆಡಿಸಿದಂ.'

ಉಪಮೇಯವನ್ನು ಖಚಿತವಾಗಿ ಪರಿಚಯ ಮಾಡುವುದಕ್ಕಾಗಿ ಮುದ್ದಣನು ತನ್ನ ಕಾವ್ಯದ ಉದ್ದಕ್ಕೂ ಅನೇಕ ಮಾಲೋಪಮೆಗಳನ್ನು ಉಪಯೋಗಿಸಿದ್ದಾನೆ. "ತಾಳ್ಮೆಯೊಳ್ ತಿರೆಯಂತಿರೆ, ಜಾಣ್ಮೆಯೊಳ್ ಗುರುವಿಂಗೊರೆ, ಭೋಗದೊಳ್ ಸುರೇಂದ್ರಂ, ತ್ಯಾಗದೊಳ್ ನರೇಂದ್ರಂ, ಬೀರದೊಳ್ ಭೈರವಂ, ಸಾರದೊಳಗಾರವಂ, ಬೆಂಗದಿರನ ಕಾಯ್ಪು, ತಣ್ಗದಿರನ ತಣ್ಪು, ಸಿಂಗದ ಚಲಂ, ಮಾತಂಗದ ಬಲಂ, ಸಿಡಿಲ ಪೊಡರ್ಪು, ಕಡಲ ಗುಣ್ಪು ಪಡಿಗೊಳೆ ದಶರಥಕುಮಾರಂ ರಾಜ್ಯಮನಾಳುತಿರ್ದಂ. ಸೊಬಗಿನ ಬೀಡಿನಂತೆ, ಸಿಂಗರದ ನಾಡಿನಂತೆ, ಸೊಗದ ನೆಲಯಂತೆ, ಸೊಗಸಿನಾಗರದಂತೆ, ಮಂಗಳದ ಮನೆಯಂತೆ, ತೇಜಃಪುರಂ ತೊಳಗುತಿರ್ದುದು. (ಇಲ್ಲಿರುವ ಅನುಪ್ರಾಸವನ್ನೂ ಏಕಾರ್ಥ ಸೂಚಕವಾದ ಭಿನ್ನಪದ ಪ್ರಯೋಗಗಳನ್ನು ಗಮನಿಸಿ). ಎಳನೇಸಱ ಪೊಸವೆಳಗಿಂಗೆ ಸೊಂಪೇಱೆ ನಳನಳಿಪ ತಾವರೆಯಂತೆ, ಕಡುಸುಗ್ಗಿಯ ಭರಕೆ ಕೈವಂದು ಕೊನೆವೆರ್ಚುವ ಮಾಮರನಂತೆ, ತಕ್ಕಿನ ಸೋಗೆಯ ಮೆಲ್ಸರಿಗೆ ಸುಟೆವಿಟ್ಟು ಚಳಚಳಿಪ ಪೊಂಬಾಟೆಯಂತೆ ಕುವರಂ ನವಯವ್ವನದೊದವಿಂಗೆ ನೆಱೆವೆಱೆಯಂತಿರೆ ತುಂಬಿ ಸೊಗಯಿಸಿದಂ. ಪಗೆಗಳ್ ನಗುವಂತು, ಬಳಮುಬ್ಬಸವಡುವಂತು, ಸಾಮಂತರ್ ಸೊರ್ಕುವಂತು, ತಂದೆಯಟಲ್ವಂತು, ದಟಂ ಕಣ್ಗಿಡುವಂತು ರುಕ್ಮಾಂಗದಂ ಮುಚ್ಚೆವೋದಂ. ಪೊತ್ತಿದಗ್ಗಿಯೊಳ್ ನೆಯ್ಯನೆಱೆದಂತುಂ ಕತ್ತಿಯ ಕಡಿಯೊಳುಪ್ಪಂ ಲೆಪ್ಪಿಸಿದಂತುಂ ಉರಿವ ಕಣ್ಣೊಳ್ ಸುಣ್ಣಮ ನಿಟ್ಟಂತುಂ ಕಿಡಿಕಿಡಿವೋಗಿ ಉರಿದೆರ್ದಂ ವೀರಮಣಿ."

ರಾಮಾಶ್ವಮೇಧದಲ್ಲಿ ಉಪಯುಕ್ತವಾಗಿರುವ ದೃಷ್ಟಾಂತ ಮತ್ತು ಉತ್ಪ್ರೇಕ್ಷೆಗಳು ಕವಿಯ ನವನವೋನ್ಮೇಷಶಾಲಿಯಾದ ಪ್ರತಿಭೆಯನ್ನು ಪ್ರಕಾಶಪಡಿಸುತ್ತವೆ. "ಕಿಚ್ಚನಱಿದೊಡಂ ಅಱಿಯದೊಡಂ ಕಿಟ್ಟವರೆಸುಡದೆ? ಪಾಲ್ಗಡಲೊಳ್ ಅಮರ್ದು ಪುಟ್ಟಿದುದಂ ನೆನೆದಳಲ್ಲದೆ ನಂಜುರ್ಕಿದುದನೇಗೆಯ್ದುಂ ಬಗೆಯದಾದಳ್. ಕಡಲ ಶುಕ್ತಿಯಿಂ ಜಗುಟ್ದನುಣ್ಮುತ್ತುಗಳನುಂಡಮೀಂಗಳುಗುಟ್ದುವಿಂತೆನೆ ನಿನ್ನೀ ಕಡೆಗಣ್ಣೊಳಿರ್ಕಡೆಯೊಳಂ ಪರಂಪರೆಯಿಂ ಪನಿಪನಿತು ಸುರಿವಶ್ರುಧಾರೆಯಿರವಿದೇಂ? ಅಂಜನವಿಮಿಶ್ರಿತ ಅಶ್ರುಧಾರೆಯಿದು ತೆಳ್ಗದಂಪಿನೊಳ್ ರನ್ನ ಗನ್ನಡಿಗೆ ಜೀವರೇಖೆಯೆನೆ ಬರೆದ ನೀಲರೇಖೆಯು ಪಾರಂಗಿನೊಳೊಪ್ಪಿಯು ಮೆನ್ನೆರ್ದೆಗೊಂಡು ಕೃಷ್ಣಶಲಾಕೆಯೆಂಬೊಲ್ ಪರಿಣಮಿಕುಮಿಂತೇಂ ಕಾಂತೆ? – ನೀಲಿಯ ಕಡುವಣ್ಣದೊಳಟ್ಟಿ ಪಂದಿಯ ತೊವಲಂ ಮುಸುಂಕಿಟ್ಟು ಮೈದೋಱದೆ ಲೋಕಮಂ ನುಂಗಲ್ಕೆಂದು ಬಂದ ಮಂದೇಹರಾಕ್ಷಸನೆನೆ ಕಟ್ಟಲೆಯೆತ್ತಂ ಪರ್ಬಿದುದು. ನಿಡುವಯಣದೊಂದು ಬಟಲ್ಕೆ ಕಡಿದಾಗೆ ಬಾಯಾಱೆ ತನ್ನ ಕರಂಗಳಿಂ

ಗಂಗಾಜಲಮಂ ಮೊಗೆದೀಂಟಲ್ಕೆಂದು ತೇರನಿಟಿದು ಬಾನನಡುವೆ ನಿಂದನೆನೆ ನಡುವಗಲ ಭಾಸ್ಕರಂ ನಿಶ್ಚಲ ಪೊಳೆಯುತಿರ್ದಂ"

ಚಿರಪರಿಚಿತವಾದ ಅನೇಕ ಗಾದೆಗಳೂ ನಾಣ್ಣುಡಿಗಳೂ ರಾಮಾಶ್ವಮೇಧದ ಮಧ್ಯದಲ್ಲಿ ಹೇರಳವಾಗಿ ಬರುವುದರಿಂದ ವಾಚಕರಿಗೆ ಅದರಲ್ಲಿ ಒಂದು ಆತ್ಮೀಯತೆಯನ್ನುಂಟು ಮಾಡುತ್ತವೆ. "ನರಿಯೂಟಿಡೆ ಸುರಲೋಕಂ ಪಾಟ್ಮೋಕುಮೆ. ನಾಯ್ ಬಗುಳೆ ರಾವುತಂ ಕೀರುಗುಮೆ ? ಪಂದಿಯೊಂದು ಡುಜುಕೆಂದೊಡೆ ಸಿಂಗಮುಂಡಲೆವುದೆ ? ಊರೊಳ್ ಮಾರಿಯೆಂದು ಮನೆಮೋರಿಯುಂ ಮಾಜುಗುಡುವರೆ ? ಪಾಲ್ಬುಜಿತುದೆಂದಾವಂ ಪೊಯ್ವರೆ ? ಕುರುಂಬನ ಪಿತ್ತಕ್ಕೆ ಕುಜೆಯ ಪಿತ್ತಮೆ ಮದ್ದಾಯ್ತು. ಸುಖದುಃಖಂಗಳ್ ಪಗಲಿರುಳವೊಲ್ ಪರಿವರ್ತಿಸುತಿರ್ಕುಂ. ಉಗುರಿಂ ಚಿವುಟಲ್ತಗುವೊಂದು ಕಜ್ಜಕ್ಕೆ ಕೊಡಲಿಯೊಂದು ನೆರವಂ ಪಾರ್ವರೆ ? ಲೋಕದ ರೋಗಕ್ಕೆ ಕಾಡಬೀಟಿಂ ತಂದು ಊರ ಮರನೊತ್ತಿಗಿಡುವುದುಂಟು. ನಾಡೆಳವಳ್ಳಿಯು ಸಮಂತು ಕಾಡ ಕರ್ಮರನೊಳ್ ಪತ್ತುಗುಡುವರೊಳರೆ ? ಮುನ್ನೊಡಲೊಂದುಗೆಯ್ಮೆಯ ನೋಂಪಿಯೆಸಕ ಮೊಡರ್ಚೆ ತಿರುಕುಳಿಯುಮರವೆಂಡಿರ ಭೋಗಮನುಣ್ಗುಂ; ಕೈನೆಯಾಗೆ ರಾಯನ ಕೈವಿಡಿದುಂ ತಿರಿದುಣ್ಗುಂ. ಕೊಡಲಿಯ ಕಾವೆ ಕುಲಕ್ಕೆ ಕೇಡಾದುದು." – ಈ ಮುಂತಾದ ನಾಣ್ಣುಡಿಗಳು ವರ್ಣಿತವಾಗಿರುವ ಸಂದರ್ಭಗಳನ್ನೂ ಸನ್ನಿವೇಶಗಳನ್ನೂ ಚಿರಪರಿಚಿತರನ್ನಾಗಿ ಮಾಡುತ್ತವೆ.

ಮೇಲೆಯೇ ತಿಳಿಸಿರುವಂತೆ ರಾಮಾಶ್ವಮೇಧದಲ್ಲಿ ವಾಕ್ಯಗಳ ಜೋಡಣೆಯಲ್ಲಿಯೂ ಪದಗಳ ಪ್ರಯೋಗದಲ್ಲಿಯೂ ವರ್ಣನೆಯಲ್ಲಿಯೂ ಕವಿಯು ವಿಶೇಷವಾದ ಕುಸುರಿ ಕೆಲಸವನ್ನು ನಡೆಸಿದ್ದಾನೆ. ಪುನರುಕ್ತಿಯಿಂದುಂಟಾಗಬಹುದಾದ ಬೇಸರಿಕೆಯನ್ನು ಕಲೆಯುವುದಕ್ಕಾಗಿ ಬಹು ಎಚ್ಚರಿಕೆಯಿಂದ ಎಲ್ಲ ವಿಷಯಗಳಲ್ಲಿಯೂ ವೈವಿಧ್ಯವನ್ನು ತುಂಬಿದ್ದಾನೆ. ವರ್ಣನೆಗಳಲ್ಲಿ, ವಾಕ್ಯಗಳಲ್ಲಿ, ಪದಗಳಲ್ಲಿ – ಅಂಕಿತನಾಮಗಳಲ್ಲಿ, ಕ್ರಿಯಾಪದಗಳಲ್ಲಿ – ಎಲ್ಲದರಲ್ಲಿಯೂ ವರ್ಣಿತ ವಿಷಯಗಳೇ ಆದರೂ ಭಿನ್ನತೆ ಕಾಣುತ್ತದೆ. ಯಜ್ಞಾಶ್ವದ ನೊಸಲಿನಲ್ಲಿ ಬರೆದ ಲಿಖಿತವು ಏಕರೂಪವಾಗಿದ್ದರೂ ಅದನ್ನು ಬೇರೆ ಬೇರೆಯವರು ಬೇರೆ ಬೇರೆಯಾಗಿ ವಾಚಿಸುತ್ತಾರೆ. ಅಗಸ್ತ್ಯ ಋಷಿಯು, ಮೈತ್ರಾವರುಣಿ, ಲೋಪಾಮುದ್ರಾಪತಿ, ಜಿತವಾತಾಪಿ, ಕೊಡನಕುವರ, ಬಿಂಜದೋಜ ಮೊದಲಾಗಿ ನಾನಾ ರೀತಿಯಲ್ಲಿ ಸಂಭೋದಿತವಾಗಿದ್ದಾನೆ. ಈಶ್ವರನಂತು ಮುಡಿಜಡೆಯನ್, ಬಾಂಗುರುಳನ್, ತೆಜೆದಲೆಯನ್, ಫಣಿಕುಂಡಲನ್, ಕುಂದಗೊರಲನ್, ಪಂದಲೆವಚ್ಚಂ, ಬಗ್ಗದೊವಲನ್, ಬೂದಿಬಡಿಕನ್, ತಿಸುಳಿ, ಮಾದೇವನ್, ನೊಸಲಕಣ್ಣನ್, ಐಮೊಗನ್, ಎಲರುಣಿವೆದೆಯನ್, ದಪ್ಪಗವಗೆ, ಸಬ್ಬ ಎಂಬ ಅನೇಕ ನಾಮಗಳಿಂದ ವರ್ಣಿತನಾಗಿದ್ದಾನೆ. ಕ್ರಿಯಾಪದಗಳೂ ಹಾಗೆಯೇ. ಒಂದೇ ಅರ್ಥವನ್ನು ಕೊಡುವ ಹತ್ತಾರು ಕ್ರಿಯಾಪದಗಳು ಒಂದಾದ ಮೇಲೊಂದು ಬಂದು ಹೇಳುವ ವಿಷಯಗಳು

ನೇರವಾಗಿ ನಾಂಟುವಂತೆ ಮಾಡುತ್ತವೆ. ಕೆಲವು ಸಲವಂತೂ ಕ್ರಿಯಾಪದಗಳ ಏಕಪ್ರಕಾರದ ಪ್ರವಾಹವೇ ಹರಿದುಬಿಡುತ್ತದೆ.

ಈ ಪೀಠಿಕೆಯನ್ನು ಮುಗಿಸುವ ಮೊದಲು ರಾಮಾಶ್ವಮೇಧದ ಜೀವ ಧಾರೆಯಾಗಿರುವ ಹಾಸ್ಯದ ವಿಷಯವಾಗಿ ನಾಲ್ಕು ಮಾತುಗಳನ್ನಾಡಿಯೇ ತೀರಬೇಕು. ಪ್ರಾಚೀನ ಕನ್ನಡ ಗ್ರಂಥಗಳಲ್ಲಿ ಹಾಸ್ಯ ರಸಕ್ಕೆ ಸರಿಯಾದ ಸ್ಥಾನವನ್ನಿತ್ತಿಲ್ಲವೆಂಬುದು ಹಿಂದಿನಿಂದ ಬಂದಿರುವ ಒಂದು ದೊಡ್ಡ ಅಪವಾದ. ಮುದ್ದಣನು ಅದನ್ನು ತನ್ನ ಕಾವ್ಯದಿಂದ ಸಂಪೂರ್ಣವಾಗಿ ಪರಿಹಾರ ಮಾಡಿದ್ದಾನೆ. ಪತಿಪತ್ನಿಯರಾದ ಮುದ್ದಣ ಮನೋರಮೆಯರು ಹಾಸ್ಯದ ಬುಗ್ಗೆಗಳು. ಪತಿಯು ಪತ್ನಿಯನ್ನು ಪ್ರಾಣೇಶ್ವರಿ, ಸುಂದರಿ, ಮೋಹನಾಂಗಿ, ಕಾಮಕಲ್ಪವಲ್ಲರಿ, ಕಾಮಮದಾಂಧಗಂಧಸಿಂಧುರಯಾನೆ ಮೊದಲಾದ ವಿಶೇಷಣಗಳಿಂದ ಸಂಬೋಧಿಸುತ್ತಾನೆ. ಪತ್ನಿಯು ಪತಿಯನ್ನು ಚೆನ್ನಿಗ, ಮದನಮೋಹನ ರಾಜ, ಮುದ್ದುಮೊಗದ ಚೆನ್ನಿಗರಾಯ, ಪ್ರಾಣೇಶ್ವರ, ಎನ್ನರನ್ನ ಮನದನ್ನ ಎಂದು ಪ್ರತ್ಯುತ್ತರಗೊಡುವಳು. ಪತಿಯು ಪತ್ನಿಯನ್ನು ನಾನಾ ರೀತಿಯಲ್ಲಿ ಹಾಸ್ಯ ಮಾಡುವನು. ಅವಳು ತೂಂಕಡಿಸುವಾಗ ಏಕಗುಣಹೀನೆ ಎಂದು ಮೂದಲಿಸುವನು. 'ಕಿವಿಗೆಳ್ಗೆ ಪುರುಳಮರದ ಗುರ್ದಿನಾಟದ ಬಱು ರಗಳೆಯ ನಿಡುಗತೆಗೆ ತೂಂಕಡಿಸದೇವೆನೋ' ಎಂದು ಉತ್ತರ ಕೊಟ್ಟು ಪತ್ನಿಯು ಅವನ ಬಾಯನ್ನು ಕಟ್ಟುವಳು. ಪತಿಯು ಕಬ್ಬಿನ ಸಿವುರನ್ನೂ ಮುಗ್ಗಿದ ಗಾರಿಗೆವುಡಿಯನ್ನೂ ಮನೋರಮೆಗೆ ಕೊಡಲು ಯತ್ನಿಸುತ್ತಾನೆ. ಅವಳು ಮುದ್ದಣನಿಗೆ ಮನದಲ್ಲಿಯೇ ಮಂಡಿಗೆಯನ್ನು ತಿನಿಸುತ್ತಾಳೆ. ಮುದ್ದಣನಿಂದ ಮನೋರಮೆಗಾದ 'ಸಪ್ತಾಕ್ಷರೀಮಂತ್ರೋಪದೇಶ'ದ ಸನ್ನಿವೇಶವು ಬಹು ಹೃದಯಂಗಮವಾಗಿದೆ. ಮುದ್ದಣನು ತನಗೆ ಸಹಜವಾಗಿರುವ ರಸನಾ ಚಾಪಲ್ಯವನ್ನು ತೀರಿಸಿಕೊಳ್ಳಲು ಹೋಳಿಗೆ ತುಪ್ಪಕ್ಕೆ ಸೂಚನೆ ಮಾಡುವನು. 'ಇಂದಿದೇನ್ ನಿನಗೆ ಶೋಭನಮೆ' ಎನ್ನುವಳು ಮನೋರಮೆ. ತಕ್ಷಣವೇ 'ಎನಗೆಂದೊಡೇಂ ? ಎನಗಂ ನಿನಗಂ' ಎಂದು ಹೇಳಿ ಅವಳ ಬಾಯನ್ನು ಮುಚ್ಚಿಸುವನು ಮುದ್ದಣ. ಬಲ್ಲಿದಸುಗಾರ್ತಿಯಾದ ಮನೋರಮೆ ಮುದ್ದಣನನ್ನು ಠಕ್ಕಿಸಿ ಕೊಂಕುನುಡಿಯ ಬಿಂಕದಿಂದ ಮೆಚ್ಚನೀಯದೆ ಮಾಯವಾಗಲು ಯತ್ನಿಸಿದಾಗ ಬಲಾತ್ಕಾರದಿಂದ ಹಿಡಿದು ನಿಲ್ಲಿಸಿ ತಾನು ಮೆಚ್ಚುವಂತೆಯೂ ಕತೆಯ ಪುರುಳ್ಗೊೀವಂತೆಯೂ ನಾಲ್ವರ್ ತಲೆದೂಗುವಂತೆಯೂ ಇರುವ ಉಡುಗೊಱೆಯನ್ನು ಸೆಳೆದುಕೊಂಡೇ ಬಿಡುವನು. ಕಾವ್ಯದ ಉದ್ದಕ್ಕೂ ಇವರ ಸಂಭಾಷಣೆ ಬಹು ಮನೋಹರವಾಗಿದೆ. ಅಷ್ಟೇ ಅಲ್ಲದೆ ಕಾವ್ಯದ ಮಧ್ಯೆ ಬರುವ ಪಾತ್ರಗಳು ಆಡುವ ಮಾತುಗಳಲ್ಲಿ ಹಾಸ್ಯದ ಭಿನ್ನ ರೂಪಗಳಾದ ಕೊಂಕು, ಮೂದಲೆ, ಜಱಿಚು ನುಡಿ, ವ್ಯಂಗ್ಯ ಮೊದಲಾದುವು ಸಹಜವಾಗಿಯೇ ಉದ್ಬೋಧಿತವಾಗಿವೆ. ಮುಂದಿನ ಯಜ್ಞಾಶ್ವದ ಹಣೆಯಲ್ಲಿದ್ದ ಓಲೆಯನ್ನೋದಿದ ದಮನನ ಆರ್ಭಟವನ್ನು ನೋಡಿ :– "ದಮನಂ ಪರಿವಿಡಿಯಿನೋಲೆಯನೋದಿ ಕೈಪೆಯ ನುಂಡಂತುಂ, ಕಲ್ಲೆಡವಿದಂತುಂ, ಮುಳ್ ಬೆಟ್ಟಿದಂತುಂ, ತೇಟುಂಇಱಿದಂತುಂ

ಕಲಂಕುವವಗೆಂರೊಳ್ ಏಱುಗೊಂಡೆಕ್ಕಲನ ದಾಂಟುಗೊಟ್ಟ ಪಾವಿನ ಪೊಸವಗೆಯೊಂದು ಮಸಕದಿಂ ಕಿಡಿಕಿಡಿವೋಗಿ ಕುಡಿವರಿವ ಮೀಸೆಯಂ ತಿರ್ದುತಂ ಆಃ ಶ್ರೀರಾಮಂ ಗಡ ! ಒಂದೆ ಬೆಳ್ಗೊಡೆಯೊಳಾಳ್ವಂ ಗಡ ! ಜನ್ನಗುದುರೆ ಗಡ ! ಬೇಳ್ವಂ ಗಡ ! ತಮ್ಮಂ ಶತ್ರುಘ್ನಂ ಗಡ ! ಕಾಪುಗಡ ! ಜಗಕೆರಾಮನೊರ್ವನೆ ಚಲದಂಕಂ ಶತ್ರುಹನೊರ್ವನೆ ಬೀರಂ, ಮಿಕ್ಕರಾಯಗುವರರ್ ಪಂದೆಗಳೇನಾಗರೆ ! ಏತಜೊಂದು ಪೊಚ್ಚಱದ ಮಾತಿನೊಂದು ನಿಜೆಗೆಯೊ ? ಲೋಗರೊಳ್ ಬಲ್ಲರ್ ತಮ್ಮಾಳ್ತನದ ಪೆರ್ಕಳಿಕೆಯಂ ಗಟಪುವರೆ ? ಲೋಗರ ಕಣ್ಣೆಂಜಲ್ ತಾಕದಂತು ಬೆರ್ಚನಿಟ್ಟು ಪಕ್ಕಿಗಳಂ ಬೆದರ್ಚಲೊಡರ್ಚಿದ ತೋಂಟಿಗನೊಂದಾಯತಿಯಂ ಕಂಡನಕ್ಕುಂ ರಾಮಂ, ಅಕ್ಕೆ, ತಪ್ಪೇಂ ಇಂತೊಂದು ಪೂಣ್ಕೆಎಮ್ಮನ್ನರ್ಗೆ ದಳ್ಳಿಸುವ ಬಲ್ಗಿಚ್ಚಿನೊಳೆಜೆದಪೊಸನೆಯ್ಗೆ ಪಾಸಟಿವಾರದೇಂ ಪೋಕುಂ ?" ಈ ಮೂದಲೆ ಎಷ್ಟು ವೀರ್ಯವತ್ತಾಗಿದೆ ! ಹಾಗೆಯೇ ಮುಂದಿನ ಚಿತ್ರಪುಷ್ಕಲರ ಸಂವಾದವನ್ನು ಗಮನಿಸಿ. ಕೊಂಕಿನ ಕೋಡಿ ಕರೆಗಣ್ಮಿದೆ.

ಚಿತ್ರಂ :– 'ಎಲೆಲೆ ಇದೇನೆತ್ತಣ್ಗೆ ಪೋಗು ? ನಿಲ್ ನಿಲ್.

ಪುಷ್ಕಲಂ :– ಎಮ್ಮುತಶ್ವಮಿರ್ಪತ್ತಣ್ಗೆಮ್ಮ ಪೋಕು ಕಣಾ ! ಎಮ್ಮ ಪೋಗಂ ಬರವಂ ಕೇಳ್ವ ನೀನಾರ್ ?

ಚಿತ್ರಂ :– ಈ ನೆಲದೊಳ್ ಸಂದ ಬೀರರ ಲೆಕ್ಕಕ್ಕೆ ದತ್ತಕನಿಷ್ಠಿಕನಾಗಿ ಅಲರ್ವೊಡೆಯನಡಿಮಲರ ಬಂಡುಣಿಯೆಂಬೊಂದು ಬಿರುದಂ ತಾಳ್ದಿ ಬಾಳ್ವ ಚಕ್ರಾಂಕಪುರದರಸಂಗೆ ಸುಭುಜಂಗೆ ಪುತ್ರಂ ಚಿತ್ರಂ ! ನೀನೇಂ ?

ಪುಷ್ಕಲಂ :– ಇದು ಚಿತ್ರಂ ! ನೀಂ ಸುಬಾಹುಜಂ ಬಾಹುಜರ ನೆಮ್ಮಂ ತಡೆವುದು. ಅಂತಜೆಂದಂ ನಿರ್ನೆರಂ, ಕಡುಗೆಯ್ದು ಕಾಬ್ದುಡದೆ ಸೋದರರೊಂದು ಬಗೆಯ ನಂಟಿಂ ಮಖಾಶ್ವಮಂ ಬಿಟ್ಟು ಕಟ್ಟೆಱಕದಿ ನೆಮ್ಮೊಳ್ ಪುದುವಾಳ್.

ಚಿತ್ರಂ :– ಎಲೆ ಅಣ್ಣಂಗಳಿರಾ ! ಏ ಮಾತೋ ! ಚಲದಿಂ ಬಲದಿಂ ಕಟ್ಟಿದ ಕುದುರೆಯಂ ಮೊನೆಯೆಡೆಯೊಳ್ ಕೊಟ್ಟು ಕೆಮ್ಮನೆ ಮಾಣ್ಬರಾಯರ್ ಪಂದೆಗಳಾಗರೆ ? ಅಂತು ಬೇಟ್ಪ ರಾಯರ್ ಬೀರರೇಂ ? ದಾನಮಂ ಪಾರ್ವ ಪಾರ್ವರಾಗರೇ ? ನಂಟುಂ ಬಂಟುಂ ನೆರಮಿರ್ಪಿನಂ ಗೆಲ್ವುದುಮೊಲ್ವುದುಂ ನಿಮಗಕ್ಕುಂ.

ಪುಷ್ಕಲಂ :– ಬಲ್ಲರ್ ನಯಮಂ ಕೇಳರೆ ! ಬಡರಾಯಗುವರ ! ನಿನಗೆಮ್ಮೊಳ್ ಕಾದುವೊಂದು ಬೆಸನವೇಕೋ ? ಪೆರ್ಮೆಯಿನಾಗಳ್ ಎಮ್ಮಂ ತಾಗಿದ ನಿಮ್ಮಣ್ಣನೇನಾದನೆಂದು ಬಗೆಯದೆ ಕುದುರೆಯೊಂದು ದೂಸಜಿಂ ಬಂದು ಸಾಯಲಿರ್ಪ ನೀಂ ಮರುಳರಾಗಿರೇ ?

ಚಿತ್ರಂ :– ಮರುಳರೆನಲ್ಕಾಂನಾಡನುಟಿದು ಕಾಡಂ ಪೊಕ್ಕು ತೊಟಲುತುಮಿರ್ದೆವೆ ?

ಪುಷ್ಕಲಂ :– ತಾಂ ಪೊಡಸು ನುಡಿ ಬಿಱುಸು ಗಡ ! ಅಯ್ಯನ ನನ್ನಿಗೆಂದು ಕಾಡಂ ಪೊಕ್ಕ ಶ್ರೀರಾಮನಂ ಹಗರಣಂಗೆಯ್ವಾ ! ನಿಮ್ಮನ್ನರಪ್ಪ ಕಾಲುರಿಚರಾಯರ್ ಕ್ಷಾತ್ರಧರ್ಮಂಗಳನೆತ್ತಱಿವರ್ ?

ಚಿತ್ರಂ :– ಕ್ಷತ್ರಿಯಧರ್ಮವುನಱಿಂಪುದಾದೊಂದು ಕೊಱತೆಯಿನ ಱಂಗೆಟ್ಟೆಮ್ಮವರಾವಕಲಿಯಂ ಗನ್ನಗತಕದಿಂ ಮುನ್ನಂ ಕೊಂದರುಂಟುಪೇೞ :

ಪುಷ್ಕಲಂ :– ಕಟ್ಟಣಕದ ನುಡಿಗಾಱ ! ಅಡಿಗಡಿಗೇಂ ಜಱಚುವಯ್. ನಂಬಿದನಂ ಪೊರೆವೊಂದು ಕತದಿಂ ಲೀಲೆಗೆಂತಂತು ವಾಲಿಯಂ ಶ್ರೀರಘುರಾಮಮಂ ಕೊಂದನಕ್ಕುಂ. ನಿಮ್ಮನ್ನರಪ್ಪ ಕ್ಷೀಣಬಲರ್ಗೆ ಇಂತೊಂದು ಗೆಯ್ಮೆ ನಾಣ್ಗೆಟ್ಟ ಕೈಮಸಕದೆಸಕಮಾಗಿ ಪರಿಣಮಿಸಿರ್ಕುಂ.

ಚಿತ್ರಂ :– ನಿರ್ನೆರನೆಮ್ಮಂ ಪೞಿವ ಬಲ್ಮೆಯಿದೇಂ ? ಎಮ್ಮನ್ನರಪ್ಪ ಕ್ಷೀಣಬಲರೊಳಾರಾನುಂ ಮತಿಗೆಟ್ಟು ತಾಂ ತನ್ನ ಕೈವಿಡಿದ ಮಡದಿಯಂ ಪೆಱವರ್ಗೆ ಮಾಱುಗೊಟ್ಟರಂ ನೀಂ ಕಂಡು ಕೇಳ್ದುಮುಂಟೆ ?

ಪುಷ್ಕಲಂ :– ಎಲೆಲೆ ಬಾಯಂ ಮುಚ್ಚು ಮುಚ್ಚು ! ಅಲ್ಲದೊಡೀಗಳ್ ಯಥೇಷ್ಟಂ ಗೞಪುವ ನಿನ್ನ ಕುಡಿನಾಲಗೆಯಂ ಸೌಳನೆ ಸೀಳ್ದು ಕುನ್ನಿಗಿಕ್ಕುವೆಂ.

ಚಿತ್ರಂ :– ಅಂತಿರೆ ಎನ್ನ ನುಡಿಯಂ ಲಾಲಿಸಿ ಪೊಲೆಯಾದ ನಿನ್ನ ಕೊಡಂಕೆಗಳ ಬೆಚ್ಚ ಬೆಸುಗೆಯಂ ಕೞಲ್ಚುವೆನ್.

ಇಂತಹ ಚುಚ್ಚು ಮಾತುಗಳಿಂದ ಕೂಡಿದ ಸಂಭಾಷಣೆಗಳು ಕಾವ್ಯದುದ್ದಕ್ಕೂ ಯಥೇಷ್ಟವಾಗಿದ್ದು ವಾಚಕರನ್ನು ಬೇರೊಂದು ಲೋಕಕ್ಕೇ ಸೆಳೆದು ಒಯ್ಯುವವು.

ಕೊನೆಯಲ್ಲಿ ರಾಮಾಶ್ವಮೇಧದಲ್ಲಿ ಚಿತ್ರಿತವಾಗಿರುವ ಜೀವನ ತತ್ವವನ್ನು ಎಲ್ಲರೂ ಮನಗಂಡು ತಮ್ಮ ಬಾಳಿನಲ್ಲಿ ಹಾಸುಹೊಕ್ಕಾಗಿ ಅಳವಡಿಸಿಕೊಳ್ಳುವುದು ಶ್ರೇಯಸ್ಕರ. ಬಡ ಹುಡುಗನೂ ಹಳ್ಳಿಯ ಪಿಳ್ಳೆಯೂ ಆದ ಮುದ್ದಣನು ತನ್ನ ಜೀವನದ ಚಿತ್ರವೊಂದನ್ನು ಕಾವ್ಯದಲ್ಲಿ ಪ್ರತಿಬಿಂಬಿಸಿ ಲೋಕಕ್ಕೇ ಆದರ್ಶವನ್ನಿತ್ತಿದ್ದಾನೆ. ಅರಮನೆಯಲ್ಲಿ ರನ್ನಗಂಕಣವು ಎಲ್ಲರಿಗೂ ಸಿಕ್ಕದಿರಬಹುದು. ಮಡದಿಯ ಮೆಚ್ಚಿನುಡುಗೊರೆ ಮನದನ್ನರೆಲ್ಲರಿಗೂ ಲಭ್ಯ. ಎಲ್ಲರೂ ಮದನಮೋಹನ ರಾಜರೂ ಕಾಮನಿಯರೂ ಕಾಮಕಲ್ಪವಲ್ಲರಿಯರೂ ಆಗಿರದೇ ಇರಬಹುದು. ಎಲ್ಲ ಮನದನ್ನರೂ ಮುದ್ದು ಮೋಹನಾಂಗರಾಗದಿರಬಹುದು. ಆದರೂ ಪ್ರಾಣೇಶ್ವರ ಪ್ರಾಣೇಶ್ವರಿಯರಾಗಿದ್ದೇ ಇರಬಹುದು. ಮನಸ್ಸನ್ನು ಸ್ವಲ್ಪ ವಿಶಾಲ ಮಾಡಿಕೊಂಡರೆ ಮೋಹನಾಂಗರೂ ಆಗುತ್ತಾರೆ. ಹಾಗೆಯೇ ಸಂಸ್ಕಾರವೊಂದಿದ್ದರೆ, ಬಾಳನ್ನು ಮೇಳವನ್ನಾಗಿಸಿಕೊಂಡರೆ ಸಪ್ತಾಕ್ಷರೀ ಮಂತ್ರದಿಂದಲೂ ಸರ್ವ ಸಿದ್ಧಿಯನ್ನು ಪಡೆದು ಸಂಪೂರ್ಣರಾಗಬಹುದು.

ಇಂತಹ ಉತ್ತಮ ಆದರ್ಶದಿಂದ ಕೂಡಿದ ಶ್ರೇಷ್ಠವಾದ ನುಡಿಗಬ್ಬವನ್ನು ಕನ್ನಡಿಗರಿಗೊದಗಿಸಿ ಇನ್ನೂ ಎಷ್ಟೋ ಅಂತಹ ಕೃತಿರತ್ನಗಳಲ್ಲಿ ತೊಡಗಿದ್ದ ಕವಿಯು ಅಕಾಲದಲ್ಲಿ ಅಸ್ತಮಯನಾದುದು ಕನ್ನಡಿಗರ ದೌರ್ಭಾಗ್ಯ. ಆದರೂ ಆತನ ಕಾವ್ಯರವಿ ಮಾತ್ರ ಎಂದೆಂದೂ ಜಾಜ್ವಲ್ಯಮಾನನಾಗಿದ್ದು ಕನ್ನಡಿಗರ ಹೃದಯ ಕಮಲವನ್ನು ಸರ್ವದಾ ವಿಕಸನಗೊಳಿಸುತ್ತಾನೆಂಬುದರಲ್ಲಿ ಸಂದೇಹವಿಲ್ಲ.

---

ಕೃಪೆ : ಮುದ್ದಣನ ಶ್ರೀರಾಮಾಶ್ವಮೇಧ ಸಂಗ್ರಹಕ್ಕೆ ಬರೆದ ಪೀಠಿಕೆ – ೧೯೫೭

*****

# ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು

ಎಸ್. ವಿ. ರಂಗಣ್ಣ

ಕೆಲವು ಸಂವತ್ಸರಗಳ ಹಿಂದೆ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವು ಮುದ್ದಣ ಕವಿಯ ಜ್ಞಾಪಕೋತ್ಸವವನ್ನು ಅಸಾಧಾರಣ ಶೋಭೆಯಿಂದ ನೆರವೇರಿಸಿದುದನ್ನು ಪ್ರಾಯಶಃ ಅನೇಕರು ಬಲ್ಲರು. ಸಂಘದ ಉದಾರ ಉದ್ದೇಶ ನಾನಾ ಸಾಧನಸನ್ನಾಹಗಳ ಉತ್ತೇಜನ, ಕಾರ್ಯ ನಿರ್ವಾಹಕರಲ್ಲಿ ಪ್ರಚಂಡ ಆಸಕ್ತಿ, ಅತಿಥಿ ಅಭ್ಯಾಗತರಲ್ಲಿ ಘಳಿಗೆ ಘಳಿಗೆಗೆ ಬೆಳೆಯುವ ಕುತೂಹಲ, ಸ್ತೋತ್ರಭಾಷಣಗಳ ಪರಸ್ಪರ ಸ್ಪರ್ಧೆ – ಎಲ್ಲವೂ ಒಂದುಗೂಡಿ ಹಿಡಿದ ಕೆಲಸವು ಒಂದು ಬಗೆಯ ಪರವಶತೆಯ ಪರಮಾವಧಿಯಲ್ಲಿ ಕೊನೆಗೊಂಡಿತು. ಅಷ್ಟೇ ಅಲ್ಲದೆ ಕವಿಯ ಕೀರ್ತಿಯನ್ನು ಬಹುದೂರ ಬೀರಲು ಪ್ರಬುದ್ಧ ಕರ್ನಾಟಕದ ವಿಶೇಷ ಸಂಚಿಕೆಯಾಗಿ 'ಮುದ್ದಣ' ವ್ಯಾಖ್ಯಾನ ಮಾಲೆಯೂ ಪ್ರಕಟವಾಯ್ತು. ಇವುಗಳಿಂದ ಜನರಲ್ಲಿ ಸಹಜವಾಗಿ ಉಂಟಾದ ಅಭಿರುಚಿಯು ಬಲಿದು ಅನುರಾಗವಾಗಿ, ಬಲಿಷ್ಠವಾಗಿ, ಆವೇಶದ ಶಿಖರವನ್ನು ಹತ್ತಿ, ಕವಿಯ ಗ್ರಂಥಗಳನ್ನು ಮಿತಿಯಿಲ್ಲದೆ ಅತಿ ಹೆಚ್ಚಾಗಿ ಪ್ರಶಂಸಿಸುವ ಕಾರ್ಯದಲ್ಲಿ ಪರ್ಯವಸಾನವನ್ನು ಹೊಂದಿತು. ಕವಿಯನ್ನು ಕಂಡು ಗಾಢವಾದ ಪ್ರೀತಿ ವಿಸ್ಮಯ ಸಹಾನುಭೂತಿಗಳು ನಮ್ಮಲ್ಲಿ ಉಲ್ಬಣವಾಗುವುದಕ್ಕೆ ಪ್ರಬಲ ಕಾರಣಗಳಿವೆ. ಕವಿಯ ಅನಹಂಕಾರ ಸರಳ ಜೀವನ; ಅವನು ಎಲ್ಲಿಯೋ ಮೂಲೆಯಲ್ಲಿ ಬಚ್ಚಿಟ್ಟುಕೊಂಡಿದ್ದು ಹಠಾತ್ತು ಕನ್ನಡ ವಾಙ್ಮಯ ರಾಷ್ಟ್ರವನ್ನು ಗೆದ್ದುದು; ಕಾವ್ಯಗಳ ಪ್ರಕಟನೆಗಾಗಿ ನಡೆದ ವಿಚಿತ್ರ ಪ್ರಸಂಗ; ಅವುಗಳ ಸ್ವಾಮಿತ್ವವನ್ನು ಕುರಿತು ಜರುಗಿನ ಅದ್ಭುತ ಚರ್ಚೆ; ಕವಿಯ ಶೀಲ, ಗುಣ, ಸುಹೃತ್ಸಂಪತ್ತು; ಆಧಿವ್ಯಾಧಿಗಳ ದೆಸೆಯಿಂದ ಅವನು ಪಟ್ಟ ಸಂಕಟಗಳು, ಕೇವಲ ಅಂಗವ್ಯಾಯಾಮ ಶಿಕ್ಷಕನಾಗಿದ್ದರೂ ಪಾಂಡಿತ್ಯ ಕವಿತ್ವಗಳನ್ನು ಅರ್ಜಿಸಿದ ಅವನ ಧೈರ್ಯ, ಸಂಕಲ್ಪ; ಅಲ್ಲದೆ ಅವನು ಈಚಿನ ಕಾಲದ ಕಲಾಪುತ್ರನಾಗಿದ್ದುದು; ಎಲ್ಲಕ್ಕಿಂತಲೂ ಮಿಗಿಲಾಗಿ, ಅವನು ಅಕಾಲಮೃತ್ಯುವಿಗೆ ತುತ್ತಾದುದರಿಂದ ಅಖಂಡ ಕರ್ನಾಟಕದ ಖೇದ – ಇತ್ಯಾದಿ ಸಂಗತಿಗಳು ಆತನಲ್ಲಿ ನಮ್ಮ ಪ್ರೇಮ ಔದಾರ್ಯ ಮರುಕ ಮನ್ನಣೆಗಳನ್ನು ಅಭಿವೃದ್ಧಿಪಡಿಸುತ್ತವೆ. ಅಸಾಮಾನ್ಯ ಸಂದರ್ಭಗಳು ಈ ರೀತಿಯಲ್ಲಿ ಎಲ್ಲರ ಮನಸ್ಸನ್ನೂ ತುಂಬಿರಲು, ಅವನ ಗ್ರಂಥಗಳನ್ನು ಅಂಕೆಯಿಲ್ಲದೆ ಹೊಗಳುವುದು ನಿರ್ದುಷ್ಟವೆಂದೂ ಕ್ಷಮ್ಯವೆಂದೂ ಭಾಸವಾಗಬಹುದು. ಕವಿಯ ನೆತ್ತಿಯ ಮೇಲೆ ಅಗತ್ಯವಾಗಿ ಹಿಡಿಯಬಹುದಾದ ಪಾಠಕನ ಪ್ರಸನ್ನತೆಯು ಕವಿಯ ಬರವಣಿಗೆಯನ್ನೂ

ಆಚ್ಛಾದಿಸಿಬಿಡಲು ಬಲವಾಗಿ ಪ್ರಯತ್ನಿಸುತ್ತದೆ. ಅಹುದು, ಕವಿಚರಿತ್ರೆಯನ್ನು ಬಿಸಾಡಿ, ನಿರ್ವಿಷಣ್ಣತೆಯಿಂದ ಕಠಿನವಾಗಿ ತರ್ಕಿಸಿ ಸಿದ್ಧಾಂತ ಮಾಡುವುದು ಸಾಧ್ಯವಲ್ಲದಿರಬಹುದು. ಆದರೆ ನಿಮಿತ್ತವನ್ನನುಸರಿಸಿ ಆನಂದಪಟ್ಟು ಕ್ರಮವನ್ನರಿತು ಗುಣಗ್ರಹಣ ಮಾಡಬೇಕಾದ ಕಾವ್ಯ ಪ್ರದೇಶದಲ್ಲಿ ಸೌಮ್ಯತೆಯನ್ನು ಮುಂದಿಟ್ಟುಕೊಂಡು ನಾವು ಹಿಂದೆ ಹಿಂದೆ ಅಡಿಯಿಟ್ಟರೆ ಒಟ್ಟಿನಲ್ಲಿ ಕವಿಗೆ ಕುಂದೇ ನಿಯತ.

ಕವಿಗೆ ಮೆಚ್ಚಿಗೆಯ ಕಾಣಿಕೆಯನ್ನು ಸಲ್ಲಿಸಬೇಕೆಂದು ಹೊರಟ ಉತ್ಸಾಹದಲ್ಲಿ ಈ ಬಗೆಯ ಉಕ್ತಿಗಳೂ ಹೊರಬಿದ್ದುವು : "ಕವಿಗೆ ಸಾಹಿತ್ಯದಲ್ಲಿ ಅತ್ಯುತ್ತಮವಾದ ಸ್ಥಾನವನ್ನು ಕೊಡತಕ್ಕುದಾಗಿದೆ." "ಪ್ರಕೃತಿ ಸೌಂದರ್ಯದ ವರ್ಣನೆಯಲ್ಲಿ ಈತನು ಕಾಳಿದಾಸ ಷೇಕ್ಸ್‌ಪಿಯರರಿಗಿಂತ ಬಹಳ ಕಡಿಮೆಯಾದವನಲ್ಲ." "ಇವನ ಕನ್ನಡದ ಶೈಲಿಯ ಸೊಗಸು ರಸ್ಕಿನ್, ಡಿಕ್ವೆನ್ಸಿಗಳ ಇಂಗ್ಲಿಷ್ ಶೈಲಿಯ ಸೊಗಸಿಗೆ ಸಮಾನವಾಗುತ್ತದೆ." "ಈ ವರ್ಣನೆಯು ಭಾವನೆಯಲ್ಲಿಯೂ ಊಹೆಯಲ್ಲಿಯೂ ಶೈಲಿಯಲ್ಲಿಯೂ ಸಾಹಿತ್ಯ ಸಾಮ್ರಾಜ್ಯದ ಎಲ್ಲೆಯನ್ನು ಮುಟ್ಟಿರುವುದು." "ಮುದ್ದಣ ಕವಿಯು ಕನ್ನಡ ಭಾಷೆಯಲ್ಲಿ ಮಾತ್ರವಲ್ಲ, ಪ್ರಪಂಚದ ಇನ್ನು ಯಾವ ಭಾಷೆಯಲ್ಲಾದರೂ ಕವಿಗೋಷ್ಠಿಯ ಅಗ್ರಸ್ಥಾನಗಳಲ್ಲಿ ಒಂದಕ್ಕೆ ಅಧಿಕಾರಿಯೆಂದು ಪಾಠಕರಿಗೆ ತೋರುವುದು." 'ಮುದ್ದಣ' ಸಂಚಿಕೆ ಪ್ರಕಟವಾಗಿ ಈಗಾಗಲೇ ಹತ್ತು ವರ್ಷಗಳು ಸಾಗಿವೆ. ಅವನ ಗ್ರಂಥಗಳ ವ್ಯಾಸಂಗ ಕನ್ನಡಿಗರಲ್ಲಿ ಹೆಚ್ಚಿದೆ, ಅಭಿಮಾನದ ಕಾವು ಇಳಿದು ನಿಷ್ಪಕ್ಷಪಾತದ ವಿಮರ್ಶಕ ಬುದ್ಧಿ ತಲೆಯೆತ್ತಿದೆ. ಮುದ್ದಣನ ಸ್ಥಾನ ಯಾವುದು, ಮೇಲಿನ ಹೊಗಳಿಕೆಗೆ ಅವನು ನಿಜವಾಗಿಯೂ ಪಾತ್ರನೆ ಎಂಬ ವಿಷಯದಲ್ಲಿ ಪ್ರಬಲವಾದ ಸಂದೇಹ ಜಿಜ್ಞಾಸೆಗಳು ಮೂಡಿವೆ. ನಮ್ಮೊಳಗೇ ಯೋಚಿಸಿ ನೋಡೋಣ. ಪ್ರಪಂಚದ ಕವಿಶ್ರೇಷ್ಠರಲ್ಲಿ ಒಬ್ಬನು ನಮ್ಮ ಕನ್ನಡದವನೆಂಬ ಸುದ್ದಿ ಬಂದರೆ ನಮಗೆ ಸಂತೋಷವಿಲ್ಲವೆ, ನಮ್ಮ ಹೆಮ್ಮೆಯನ್ನು ಹಿಡಿಯಲಾದೀತೆ ? ಆದರೆ "ಜೈ" ಎಂದು ಕೂಗಲು ಮನೆಯ ಮಹಡಿಯನ್ನು ಏರುವ ಮೊದಲು, ಬಂದಿರುವ ವರ್ತಮಾನ ನಂಬತಕ್ಕದ್ದೇ ಯಥಾರ್ಥವಾದದ್ದೇ ಸ್ಥಿರವಾದದ್ದೇ ಎಂಬ ವಿಚಾರಣೆ ಒಳ್ಳೆಯದು; ಮುಂದೆ ಆಶೆಯು ಕೇವಲ ಗಾಳಿಯಾಗಿ ಸುಳಿದು ಹೋಗುವ ಸಂಭವವಿಲ್ಲ. ಪ್ಯಾಟ್‌ಮೋರ್ (Coventry Patmore) ಎಂಬ ಕವಿಯನ್ನು 'ಎರಡನೆಯ ವರ್ಡ್ಸ್‌ವರ್ತ್' ಎಂದು ಜನರು ಸಂಬೋಧಿಸಲಾರಂಭಿಸಿದಾಗ ಲವೆಲ್ (J.R. Lowell) ಎಂಬುವನು ಒಂದೆರಡು ವಾಕ್ಯಗಳಲ್ಲಿ ಎಚ್ಚರಿಕೆ ಕೊಟ್ಟಿದ್ದೇನು : "ಅವನು ಹತ್ತಿರ ಹತ್ತಿರ ಬ್ರಯಂಟ್ ಕವಿಯ ಬಗೆಯವನು. ಆದರೆ ಆದರೆ ಗೆಳೆಯರೇ, ಇನ್ನೂ ದೊಡ್ಡವನನ್ನಾಗಿ ಅವನನ್ನು ಹಿಗ್ಗಲಿಸಲು ನೀವು ಯತ್ನಿಸಿದರೆ, ನಿಮ್ಮ ಕಕ್ಷಿಗಾರನ ಜೀವಕ್ಕೇ ಅಪಾಯ."[೧]

---

1. He is a very good Bryant. But my friends. You will endanger the life of your client. By trying to stretch him out into a giant."

ಲೋಕದಲ್ಲಿ ನಾಲ್ಕಾರು ಅತ್ಯುತ್ತಮ ಕವಿಗಳು ಆಗಿಹೋಗಿದ್ದಾರೆ; ಅವರ ಕಾವ್ಯಗಳು ಈಗಲೂ ನಮ್ಮ ಆಸ್ತಿಯಾಗಿವೆ. ಆದ್ದರಿಂದ ಅತ್ಯುತ್ತಮ ಕಾವ್ಯದ ಲಕ್ಷಣಗಳಾವುವೆಂದು ಸೂತ್ರೀಕರಿಸಿಕೊಳ್ಳುವುದು ಕಷ್ಟಸಾಧ್ಯವಾದರೂ ಅಸಾಧ್ಯವಾದ ಕಸುಬಲ್ಲ. ಅಂದರೆ ಆತ್ಮನ ಅಕ್ಷಿಯನ್ನು ವಿಶಾಲವಾಗಿ ತೆಗೆದು ವಿಶ್ವ ಸಾರಸ್ವತ ಸಾಮ್ರಾಜ್ಯದಲ್ಲಿ ಧಾರಾಳವಾಗಿ ಎಡೆಯಾಡಿ, ಅಂತಃಕರಣದ ತಂತಿಗಳನ್ನು ಸರಿಯಾಗಿ ಶ್ರುತಿ ಮಾಡಿಕೊಂಡು ಉದಾತ್ತ ನಾದ ಸಮಾಧಿಯೇನೆಂಬುದನ್ನು ಸಾಧಿಸಿ, ಹದನಾದ ವಿವೇಚನೆಯನ್ನು ಗಳಿಸಿಕೊಳ್ಳಬೇಕು. ಉದ್ದಾಮಕವಿಯಲ್ಲಿ ನಾವು ನಿರೀಕ್ಷಿಸಬಹುದಾದ ಮುಖ್ಯಾಂಶಗಳಾವುವೆಂದರೆ :

ಪೃಥಿವಿಯ ನಾನಾ ತೀವ್ರ ಅನುಭವಗಳಿಂದ ಕೂಡಿ ತುಂಬಿದ ವಸ್ತು; ಮಹಾಮನುಷ್ಯತ್ವದ ಮೇಲೆ ಕಾಲೂರಿ ನಿಂತು ದೇವತ್ವದ ಕಡೆಗೆ ಕೈ ಎತ್ತಿರುವ ಎತ್ತರದ ಪಾತ್ರಗಳು; ತಟ್ಟತಳದಿಂದ ಎದ್ದು ನಭದವರೆಗೆ ಚಿಮ್ಮಿರುವ ರಾಗಜ್ವಾಲೆಗಳು; ಹೊಸ ಹೊಸದಾಗಿ ಉಕ್ಕಿಬರುವ ಹಿರಿಯರ್ಥವನ್ನು ಕಿರಿಯದರಲ್ಲಿ ಧ್ವನಿಗೈಯುವ ಗಂಭೀರವಾಣಿ; ಅನಿರ್ವಚನೀಯವಾದ ಸ್ವಾಭಾವಿಕತೆ; ಕಲೆಯೆಂದು ಕಾಣಿಸದಿದ್ದರೂ ಚೇತೋಹಾರಿಯಾದ ಕಲೆ – ಈ ವಿಧಿಗಳ ಘನ ಪರೀಕ್ಷೆ, ಖಂಡಿತ ತೀಪುಗಳನ್ನು ಮುದ್ದಣನ ಕಾವ್ಯವು ತಡೆದುಕೊಳ್ಳಬಲ್ಲದೆ ?

ಶೇಷರಾಮಾಯಣವು ಒಂದೆರಡು ಗಂಟುಗಳನ್ನು ಬಸಿರಿನಲ್ಲಿಟ್ಟುಕೊಂಡು ಅನೇಕ ಭಾವಗಳಿಂದ ಪುಷ್ಟವಾದೊಂದು ಕಥೆ. ಕಥಾವಸ್ತುವನ್ನು ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕೆಂದು ನಾವು ಕವಿಗೆ ನಿಯಮಿಸಹೋಗಬಾರದು. ಆದರೂ ನಮಗೆ ಯೋಗ್ಯವೆಂದು ತೋರಿದ ಕೆಲವು ಸ್ಥೂಲ ಹಂಬಲಗಳನ್ನು ನಿರೂಪಿಸುವುದರಲ್ಲಿ ಬಾಧೆಯಿಲ್ಲ. ಶ್ರೀರಾಮನ ಆಂತರ್ಯದಲ್ಲಿ ನಡೆಯುವ ತುಮುಲಕಾಳಗ, ಸೀತಾಪರಿತ್ಯಾಗ, ಅರಣ್ಯದಲ್ಲಿ ದೇವಿಯ ದುಃಖಸಂಸಾರ, ನಿರ್ಭಾಗ್ಯ ಲಕ್ಷ್ಮಣನ ನಡವಳಿಕೆ – ಇವು ಮನಸ್ಸನ್ನು ಕ್ಷೋಭೆ ಮಾಡಿ ಚಿತ್ತವನ್ನು ಕರಗಿಸುವ ಘಟನೆಗಳು ಹಾಗೂ ವಾಲ್ಮೀಕಿ ಮುನಿಯ ದಿವ್ಯಾಶ್ರಮ, ಕುಶಲವರ ಜನನ ಬಾಲ್ಯ ಅವರ "ಸೆರಗಿಲ್ಲದ ಬಿಲ್ಲಾಳ್ತನ" – ಇವು ನಮ್ಮನ್ನು ಉಬ್ಬಿಸಿ ಉಲ್ಲಾಸಪಡಿಸುವ ಸಂಗತಿಗಳು. ಯಾಗ, ತುರಗದ ಸಂಚಾರ, ಸಮುದ್ರರಾಜನ ತಪಸ್ಸು, ಚ್ಯವನನ ಸಾಹಸ, ನಾಲ್ಕು ಭುಜದ ಶಬರರು, ಗೋಮಾಹಾತ್ಮ್ಯೆ, ಕುದುರೆಯು ಕಾಣಿಸದೆ ಹೋಗುವುದು – ಮೊದಲಾದ ಪ್ರಾಸಂಗಿಕ ಉಪಾಖ್ಯಾನಗಳು ಅಪ್ರಧಾನವಾದುವು. ಆದರೂ ಅವು ಸಮಸ್ಯೆಯೊಂದನ್ನು ತಂದೊಡ್ಡುತ್ತವೆ. ಅವಕ್ಕೆ ಉಚಿತವಾದ ಸ್ಥಾನವಿಸ್ತಾರವನ್ನು ಗಣಿಸಿಕೊಟ್ಟು, ಪ್ರಮುಖಾಂಗಗಳ ಪ್ರಾಶಸ್ತ್ಯ ಕೆಡದಂತೆ, ಒಟ್ಟಿನ ಪ್ರತಿಜ್ಞೆಯನ್ನು ಸಫಲಗೊಳಿಸಿ ಸಮನ್ವಯ ಮಾಡುವುದು ಕವಿಯ ಉತ್ತರವಾದಿತ್ವ. ಮುದ್ದಣನಲ್ಲಿ ಉಪಕಥೆಗಳಿಗೆ ಎಂಟು ಆಶ್ವಾಸ ಅಥವಾ ನೂರಹತ್ತು ಪುಟಗಳು ಮೀಸಲಾಗಿವೆ. ಸೀತಾಪರಿತ್ಯಾಗಕ್ಕೆ ಆರು ಆಶ್ವಾಸ ಅಥವಾ ಐವತ್ತು ಪುಟಗಳನ್ನು ಕೊಟ್ಟಿದೆ. ಅದು ಅನುರೂಪವೇ. ಆದರೆ ಕುಶಲವರ ಯುದ್ಧ, ಜಾನಕಿಯ ವ್ಯಸನ

ವಿಮೋಚನೆಗಳಿಗೆ ಕಥೋಪಸಂಹಾರದ ಹದಿನಾರನೆಯ ಆಶ್ವಾಸ ಮಾತ್ರ ಒಂದಾಶ್ವಾಸದಲ್ಲಿ ಅಧಿಕ ರಸವತ್ತಾದ ಭಾಗವು ಮುಗಿದು ಹೋಗಿದೆ. ಇದು ಶುಷ್ಕ ಅಂಕಗಣಿತವಾಯ್ತು. ಸ್ವಾರಸ್ಯಕ್ಕೆ ಉದ್ದವೇ ಮೂಲವಲ್ಲ, ಬಹುನುಡಿಯ ಬೇಸರಕ್ಕೆ ಬಂಧು; ಮತ್ತು ಸಣ್ಣದರಲ್ಲಿ ಬಣ್ಣ ಬರೆದಿರಕೂಡದೆ? ಹೋಗಲಿ ಒಳಹೊಕ್ಕು ವಿಮರ್ಶಿಸೋಣ. ರಾಮನ ನಡತೆಯನ್ನು ಮೆಚ್ಚುವುದು ಆಧುನಿಕರಿಗೆ ಸಗ್ಗದ ಕೃಷಿಯಾದುದರಿಂದ ಸೀತೆಯ ಅರಣ್ಯ ಪ್ರಯಾಣವನ್ನು ನಾವು ಒಪ್ಪುವಂತೆ ವಿವರಿಸುವುದು ಬಹಳ ಬಿಕ್ಕಟ್ಟು. ವಿಷಯದಲ್ಲಿಯೇ ಹೀಗೆ ಎಡರಿರುವಾಗ ಕವಿಯನ್ನು ನಾವು ಕೇಳುವುದು ಇಷ್ಟೆ : ವಿಧಿವಿಲಾಸವನ್ನು ವ್ಯತ್ಯಾಸ ಮಾಡಲು ಅವನಿಗೆ ಹಕ್ಕಿಲ್ಲದಿದ್ದರೂ ರಾಮನಲ್ಲಿ ಧರ್ಮಾಧರ್ಮದ ಹೋರಾಟ, ಮನೋವೇಧೆ, ಸತಿಯ ಪರವಾಗಿ ಸಂಪೂರ್ಣ ನಂಬಿಕೆ, ಗತಿಮತಿ ತೋಚದ ಮೌಢ್ಯ, ಆಳವಿಲ್ಲದ ಆತ್ಮನಿಂದೆಗಳನ್ನು ವಿಪರೀತಗೊಳಿಸಿ, ಆ ಕುತ್ಸಿತಕಾರ್ಯದ ಕುರೂಪವನ್ನು ಸ್ವಲ್ಪ ಮಟ್ಟಿಗೆ ಇಳಿಸಿ, ನಮ್ಮ ಕಾವ್ಯ ನೀತಿಯ ಕರುಣೆಯಾದರೂ ರಾಮನನ್ನು ಬಿಟ್ಟು ಹೋಗದಂತೆ ಮೇಲೆಯಾದರೂ ಸುಲಕ್ಷಣವಾಗಿ ಅವನು ಬಣ್ಣಿಸಬೇಕು. ಅಯ್ಯೋ ವಿಷಾದ ಸನ್ನಿವೇಶ. ರಾಮನ ಪುರುಷಸಾಹಸ ಕೆಳಗೈಯಾಯ್ತು. ದುರುಳ ವಿಧಿಯ ಅಟ್ಟಹಾಸ ಮೇಳ್ಗೈಯಾಯ್ತು – ಎಂಬ ಭಾವನೆ ನಮ್ಮಲ್ಲಿ ಹುಟ್ಟಿದರೆ ಕವಿಯ ಶ್ರಮ ದಂಡವಲ್ಲ. ನಮ್ಮ "ಅತ್ಯುತ್ತಮ" ಕವಿಯನ್ನು ಪರಿಶೀಲಿಸೋಣ. ಬೇಹಿನವರ ಮಾತು ಕೇಳಿ, ಮಹಾಕಾವ್ಯಕ್ಕನುಸಾರವಾಗಿ "ಮನಗೆಟ್ಟುಂ, ಮರವಟ್ಟುಂ..... ನಿಟ್ಟುಸಿರ ಕಟ್ಟುಬ್ಬಸದಿಂ" ರಾಮ ಅಂದುಕೊಳ್ಳುತ್ತಾನೆ : "ಹಾ ! ಹಾ ! ಪೊಂಜುರಿಗೆಯೆಂದೇ ಎರ್ದೆಗೊತ್ತಿದೆಂ, ಇಂತು ಕರುಳಂ ಕೊಱ'ಗುಮೆಂದಱುತೆನಿಲ್ಲಕ್ಕಟಾ ! .....ಕೆಯ್ವೊಲನೊಳ್ ಬೆಳೆದ ಕುಱುಂಬುಲ್ಲಂ ಕಿಱ್ತು, ಬಿಸುಡುವಂತಿರೆ ಸೀತೆಯಂ ಬಿಡುವೆಂ !"ಯಾರ ದಿವ್ಯನಾಮದ ಗಂಟೆಯು ಕೇಳಿಸಿದೊಡನೆಯೇ ದೋಷ, ಮಲಿನತೆ ಅಮಂಗಳ ಪಿಶಾಚಿಗಳು ಎದ್ದು ಬಿದ್ದೋಡುವುವೋ ಆ ಭದ್ರೆಯು ಪತಿದೇವನ ಕರುಳನ್ನು ಕುಯ್ಯುವ ಸುರಿಗೆಯಂತೆ! ಯಾರ ಸಂಸರ್ಗದಿಂದ ಪಾವನತ್ವವು ಪಾವನವಾಯಿತೋ ಆ ಜನಕಕನ್ಯೆಯು ಹೊಲದಲ್ಲಿ ಬೆಳೆದ ಕುರುಂಬುಲ್ಲಂತೆ! "ಮುನ್ನಂ ಲಂಕೆಯೊಳ್ ಪೇೞ್ದಿಯಲ್ತೆ ಸೀತೆ ಪೂತೆ, ಅವಳಂ ಕಯ್ಕೊಳ್ವುದೆಂದು ಈಗಳೇನಾಯ್ತು?" ಎಂದು ಮಂದಭಾಗ್ಯನಾದ ಲಕ್ಷ್ಮಣನ ಮೇಲೆ ಅಪರಾಧಾರೋಪ! ತಮ್ಮಂದಿರು "ಸೀತೆಯನುಱ'ದುಂ ಸತ್ಯದೇವತೆಗಿನ್ನೆಡೆ ಯಾವುದು ? .....ಕೂಳಂ ಕೊರಚಾಡೆ ನೀನೊಂದಾಡುವುದೇ ?" ಎಂಬ ನಿಷ್ಕಲ್ಮಷದ ಹಿತವನ್ನು ಒರೆಯುತ್ತಿದ್ದರೂ "ದೂಷಿತೆಯಾದೀಮಡದಿಯಂ ಬಿಟ್ಟಲ್ಲದೆ ಮಾಣೆಂ" ಎಂಬ ಹಟಕ್ಕೆ ಎಲ್ಲಿ ಹೋಗೋಣ! ಯಾತನಾಮಾರಿಯ "ಆ" ಎಂದಿರುವ ಬಾಯಿಗೆ ದುರದೃಷ್ಟವು ನೂಕುತ್ತಿರುವ ಆ ಅಬಲೆ ಗರ್ಭಿಣಿ ಸೀತೆಯ ಪರವಾಗಿ ರಾಮನಿಗೆ ಕರುಳು ಹೊರಳಲೇ ಬೇಡವೆ; ತನ್ನ ಯೋಚನೆಯೇ ಯೋಚನೆಯೇ ? "ಪಾವನೆಯೆಂದೇ ಒಪ್ಪುಗೊಂಡೆನದರಿನೀ ವಿಲಗವೊಂದಕ್ಕೆ ತಲೆಮಟ್ಟೆಂ" ಅಗ್ನಿ

ಪರಿಶುದ್ಧೆಯಾದ ತನ್ನ ಅರ್ಧಾಂಗಿಯಲ್ಲಿ ಎಷ್ಟು ಗೌರವ, ಅದರ! ಅಲ್ಲದೆ "ಅವಳಯೋನಿಜೆಯೆಂಬುದಂ ಪಾವನೆಯೆಂಬುದಂ ಪುಣ್ಯಶ್ಲೋಕೆಯೆಂಬುದಂ" ರಾಮನು ಬಲ್ಲನಂತೆ; ಆದರೂ "ಈಗಳೆನ್ನಳವಲ್ತು" "ಸೀತೆಯಂ ತೊಱೆ'ದೆ ಸೊಗಂ ಬಾಳ್ವೆಂ ಇದು ಸಿದ್ಧಂ" ಎಂಬ ನಿಶ್ಚಯ! "ಸೊಗಂ ಬಾಳ್ವೆ" ಕೈಹಿಡಿದ ಹೆಂಡತಿ ತುಂಬಿದ ಬಸುರಿಯನ್ನು ಅಭೋ ಎನ್ನುವ ಕಾಡಿಗಟ್ಟಿ ಸುಖವಾಗಿರುವನಂತೆ! ಉಕ್ತಿಯೊಂದರಿಂದ ದಕ್ಕೀತು ಜೀವನ್ಮುಕ್ತಿ; ಮತ್ತೊಂದರಿಂದ ಬಂದೀತು ಘೋರ ವಿಪತ್ತು! 'ಸೊಗಂಬಾಳ್ವೆಂ' ಎಂಬುದರಿಂದ ಮುದ್ದಣನ ರಾಮನು ದಢೀರೆಂದು ಕೆಳಗುರುಳುವನು; ಪುನಃ ಮೇಲಕ್ಕೇಳಲಾರ. ಇವನ ಸ್ತ್ರೀಪೀಡಕತನಕ್ಕೆ ಬುಡಬೇರಾದ ಪಾಪಿ ಅಗಸನು ಇವನಿಗೊಬ್ಬ ಗುರು : "ರಜಕನೆನ್ನನೇಳಿಸಿದನಿಲ್ಲಮಾದಮೆಚ್ಚಿರಿಸಿದಂ." ಇದೊಂದು ಪ್ರಸ್ತಾವದಲ್ಲಿ ಕವಿಯು "ಮರವಟ್ಟ"ನೋ ಎಂದು ಸಂಶಯವೆರಗಿದಲ್ಲಿ ಮೂರನೆಯ ಆಶ್ವಾಸವನ್ನು ಗಮನಿಸಿ. ರಾವಣ ಕುಂಭಕರ್ಣರ ಪೂರ್ವಜನ್ಮದ ಪರಿಚಯವನ್ನು ಹೊಂದಿದ ಮೇಲೆ ರಾಮನು ಅಳುತ್ತಾನೆ. "ಪೊಲ್ಲದ ಕಜ್ಜಮಂ ಪಣ್ಣಿದೆನ್ನೈಸೆ ? ಲೋಕದೊಳೆನ್ನಂ ಕೂಟಿನೆನರೆ ? ಪೆಣ್ಣೆವದಿಂ ಪಾತಕದಿನಿತೊಂದು ತಿಣ್ಣಮಂ ಪೊಱುವೊಡೆಂದೇ ಬಿದಿ ಮಾಡಿದನೇ!" ದಾನವರ ಸೆರೆಯಿಂದ ಧರ್ಮಪತ್ನಿಯನ್ನು ಬಿಡಿಸಿದುದು ಕರ್ತವ್ಯವಲ್ಲ, ಹೆಂಗಳ್ಳರನ್ನು ಹತಗೈದುದಕ್ಕೆ ಪಶ್ಚಾತ್ತಾಪ! ಕಥನವು ಈ ರೀತಿ ಇರುವಾಗ ಕಥೆಗಾರರನ್ನು ಕವಿಗೋಷ್ಠಿಯ ಅಗ್ರಸ್ಥಾನಗಳಲ್ಲಿ ಒಂದಕ್ಕೆ ಸೇರಿಸಬಹುದೇ ? "ರಾಮಾಶ್ವಮೇಧ" ಕಥೆಯನ್ನು ಉನ್ನತವಾಗಿ ರಚಿಸುವ ವರಕವಿಗೆ ಇನ್ನೂ ಕನ್ನಡದಲ್ಲಿ ಜಾಗ ತೆರವಾಗಿದೆ. ನಮ್ಮನ್ನು ಗೋಳುಗುಟ್ಟಿಸುತ್ತಿರುವ ಒಗಟುಗಳೆಲ್ಲವನ್ನು ಬಿಡಿಸಲು ಅವನೊಬ್ಬನೇ ಬಲ್ಲ. ನನ್ನದು ಇನ್ನೊಂದು ಊಹೆ. ಆ ನಮ್ಮ ಭಾವಿ ಕವಿ ಪುಂಗವನು ಸೀತೆಯು ವನವಾಸಕ್ಕೆ ಹೊರಡುವ ಮೊದಲು ಒಂದು ಸಾರಿ, ತಂದೆ ಮಕ್ಕಳ ಯುದ್ಧದ ಪರ್ಯವಸಾನದಲ್ಲಿ ಒಂದು ಸಾರಿ, ಹೀಗೆ ಸೀತಾರಾಮರ ಎರಡು ಸ್ವರ್ಗೀಯ ಸಮಾಗಮಗಳನ್ನು ವಿಶದವಾಗಿ ಚಿತ್ರಿಸುತ್ತಾನೆ. ಲಕ್ಷ್ಮೀಶನಲ್ಲಿ ಆ ಅಭಿಪ್ರಾಯದ ಸುಳಿವು ಕೂಡ ಇಲ್ಲ : ಸೀತೆ, "ಪುತ್ರರಂ ಪಡೆದಳಿನ್ನರವರಿಸದೆನ್ನ ಬಳಿಗೆ ಕಳುಹೆಂದು" ವಾಲ್ಮೀಕಿಗೆ ಬಿನ್ನವಿಸಿ "ಸುತಸಹೋದರರೊಡನೆ..... ನಿಜಪುರಕ್ಕೆ ಬಂದುಳಿದಿರ್ದ ಯಜ್ಞಮಂ ನಡೆಸಿದಂ." ಸೀತೆಯಿಲ್ಲದೆ ಯಾಗ ಸಮಾಪ್ತಿ; ಅದನ್ನು ಮೂಜಗವು ಪೊಗಳಿತಂತೆ! ಮುದ್ದಣ ಮೇಲು. ಅವನು "ಇನ್ನು ಮುಳಿವನೆ ಸತಿಯಂ"..... "ತನ್ನತನ್ನೆಯಂ ಮನ್ನಿಸೆಂದು ನನ್ನಿವೇಟ್ಟು ಸಂತವಿಟ್ಟು ಸುದತಿ ಸೀತೆಯಂ..... ಕೂಡಿ ಪೋದಂ" ಎಂಬ ಸ್ಪಷ್ಟ ಸುಲಭ ದಾರಿಯಲ್ಲಿ ನುಸುಳಿಕೊಂಡಿದ್ದಾನೆ.

ಹತ್ತಿರವಾಗುತ್ತಿರುವ ಆಪತ್ತನ್ನರಿಯದ ಲೋಕಮಾತೆಯು ದುಗುಡಭಾರದಿಂದ ಆಲಸನಾದ ಲಕ್ಷ್ಮಣನನ್ನು "ಏಂ ಕಂದ! ನಡೆಯೊಳ್ ಪಿಂದಾದಯ್" ಎಂದು ಹಾಸ್ಯ ಮಾಡುವುದು, ವಾಲ್ಮೀಕಿಯು ಇದಿರಾದಾಗ ಲಂಕೆಯನ್ನು ಎಂದಿಗೂ ಮರೆಯದ ಸೀತೆಯು "ಎನ್ನಾಣೆ! ರಾಯನಾಣೆ! ಪತ್ತೆಸಾರದಿರ್" ಎಂದು

ಕಿರಿಚಿಕೊಳ್ಳುವುದು – ಹೀಗೆ ಒಂದೆರಡು ಸನ್ನಿವೇಶಗಳಲ್ಲಿ ಉತ್ಕೃಷ್ಟತೆಯು ಮಿಂಚಿ ಮಾಯವಾಗುವುದು. ಸೀತಾ ಪಾತ್ರವೊಂದನ್ನುಳಿದು ಪಾತ್ರವಿರಚನೆಯಲ್ಲದರಲ್ಲಿಯೂ ಮಧ್ಯಮ ದರ್ಜೆಯ ನೈಪುಣ್ಯವೇ ಹೇರಳ. ಯಜ್ಞತೇಜಿಯ ತಿರುಗಾಟದ ವಿವರಣೆಯು "ಏರ್ದೆವುಗವ", "ಕಿವಿಗೆ ಪುರುಳಮರದ", "ಬರುರಗಳೆಯ ನಿಡುಗತೆಯೇ" ಸರಿ. ಅದು ಕವಿಗೂ ಗೊತ್ತಿದ್ದಂತೆ ಕಾಣುತ್ತದೆ. ಕಥೆಯನ್ನು ಕೇಳುತ್ತಿರುವಾಗ ಮನೋರಮೆಗೆ ಒಂದು ಬಾರಿ ತಡೆಯಲಾರದ ತೂಕಡಿಕೆ. ಇನ್ನೊಂದು ಬಾರಿ "ಅಡಿಮುಡಿಯಿಲ್ಲದ ನಿನ್ನ ಕತೆಗೆ" "ಎನಗೆ ತಲೆ ನೋವುದು" ಎಂದು ಗೊಣಗುಟ್ಟುತ್ತಾಳೆ. ಮುದ್ದಣನ ವ್ಯಕ್ತಿತ್ವವೂ ವೈಶಿಷ್ಟ್ಯವೂ ಸತ್ಯವೂ "ಸುಗ್ಗಿಯೊಳುಂಡುದಂ ಕಾರೊಳ್ ಕಾರುವನಕ್ಕುಂ", "ಪದ್ಯಂ ವಧ್ಯಂ; ಗದ್ಯಂ ಹೃದ್ಯಂ", "ನೀರಿಳಿಯದ ಗಂಟಲೊಳ್ ಕಡುಬಂ ತುರುಂಕಿದಂತಾಯ್ತು", ಸೀತೆ ವನದಲ್ಲಿ "ಮುಂಬಗಲ ಪೆಱೆಯಂತೆ ಕಳೆಗೆಟ್ಟಳ್", ವಾಜಿಪುರದ ರಾಜನು ರಾಮಾಶ್ವವನ್ನು ಕಟ್ಟುವ ಬದಲು "ತಾನೆ ಕೈಕಟ್ಟಿದಂ" ಕುಶಲವರ ಗಾಯನ ಕೇಳಿ "ದೇವಗಾಯಕರ್ ಸಿಗ್ಗಿನೊಳಾದರ್, ತುಂಬುರುನಾದರ್ ಮುಗ್ಗುರುಸಿದರ್", ಸುಮದರಾಜನ ತಪಸ್ಸನ್ನು ಕೆಡಿಸಲಾರದೆ ಅಪ್ಸರೆಯರು "ದೂರದೆ ಕೈಯ್ಮುಗಿದು ಬೆಂಗೊಟ್ಟರ್, ಕಾವನಾವನಾಡನೊ ಪೊಕ್ಕಂ" ಮೊದಲಾದ ಯುಕ್ತಿಯ ವಚನಗಳಲ್ಲಿ ಪ್ರತಿಬಿಂಬಿತವಾಗಿದೆಯೇ ಹೊರತು ಕಥೆಯ ಶಿಲ್ಪ, ವಿಷಯ ಸ್ಥಾಪನೆ, ಪಾತ್ರ ವೈಯ್ಯಾರ, ಭಾವ ಪ್ರಕರ್ಷಗಳಲ್ಲಿ ಕಡಿಮೆ. ಆದರೆ ಕವಿಯ ಕೀರ್ತಿಗೆ ಮೂಲ ಕಾರಣವಾದ ಒಂದು ಅಪೂರ್ವ ವಿದ್ಯಮಾನವನ್ನು ನೆನಪಿನಲ್ಲಿಡಬೇಕು. "ರಾಮಾಶ್ವಮೇಧ" ಕಥೆಯ ಚಿತ್ರವನ್ನು ಬಂಧಿಸಿ ಹಿಡಿದಿರುವ ಮುದ್ದಣ ಮನೋರಮೆಯರ ಸರಸ ಸಲ್ಲಾಪವೆಂಬ ಚೌಕಟ್ಟು, ಆ ಕೌತುಕವನ್ನು ದೀರ್ಘವಾಗಿ ಚರ್ಚಿಸುತ್ತೇನೆ ಮುಂದೆ.

"ರಾಮಾಶ್ವಮೇಧ"ವು ಅರ್ವಾಚೀನ ಕವಿಯೊಬ್ಬನಿಂದ ಲಿಖಿತವಾಗಿದ್ದರೂ ಪ್ರಾಚೀನ ಮಹಾಕಾವ್ಯದ ಮರಿ. ಸಾಂಪ್ರದಾಯಿಕವಾದ, ಕವಿ ಸಂಕೇತಭೂಯಿಷ್ಠವಾದ ವರ್ಣನೆಗಳೇ ಮೊದಲಿನಿಂದ ಕಡೆಯವರೆಗೂ. ಆದರೂ ಅವುಗಳಲ್ಲಿ ಏನಾದರೂ ನೂತನ ಸಾಮರ್ಥ್ಯ ವಿಜೃಂಭಿಸಿದೆಯೇ ನೋಡುವ. ಗ್ರಂಥಾರಂಭದಲ್ಲಿರುವ ವರ್ಷಾಕಾಲದ ವರ್ಣನೆಯನ್ನು ಮೆಚ್ಚಿ ಶಾಭಾಸೆನ್ನದವರು ಅತಿ ವಿರಳ. ಅಲ್ಲಿ ಒಂದು ಹೊಸ ಆವೇಶವಿದೆ. ಅಂದದ ನವೀನತೆಯಿದೆ, ಚುರುಕಿನಿಂದ ಕುಣಿದಾಡುವ ಊಹೆಯಿದೆ, ಬಲವಿದೆ, ಕೇವಲ ಚಮತ್ಕಾರದ ಕೃತಕ ಭ್ರಾಂತಿಯೇ ಅಲ್ಲದೆ ಕಲ್ಪನೆಯ ನಿರ್ಮಾಣವಿದೆ. ಅದರೊಂದಿಗೆ ತಲೆಯೆತ್ತಬಹುದಾದ ಇನ್ನೊಂದು ಉದಾಹರಣೆ ಗೋಚರವಾಗುವುದಿಲ್ಲ. ಮುಂದೆ ಬರುವ ಋತು, ಋಷ್ಯಾಶ್ರಮ, ವನ, ವನಿತೆ, ಯಾಗ, ಯುದ್ಧಗಳ ವರ್ಣನೆ ಯಾವುದರಲ್ಲಿಯೂ ಆ ಬಲವಿಲ್ಲ ಬೆಡಗಿಲ್ಲ, ಆ ಗುರುತಿಲ್ಲ ಗುಣವಿಲ್ಲ. ಕೆಲವರಿಂದ ಬಹಳ ಸ್ತುತ್ಯವಾಗಿರುವ ವಸಂತ ನೀಲಾಚಲ ವರ್ಣನೆಗಳನ್ನು ಬೇಕಾದರೂ ಪರೀಕ್ಷಿಸಿ. ಬರಿಯ ಕವಿಸಮಯದ ಗೂಡೆ. "ಫಲ ವೃಕ್ಷಂಗಳೆಲ್ಲಂ ಕಾಯ್ಕಸುರ್ಗಾಯ್ ಪಣ್ ದೋರೆವಣ್ಗಳಿಂದೆಸೆಯುಂ ಪೂವಳ್ಳಿಗಳ್

ನನೆ ಕೊನೆ ಮುಗುಳರೆಮುಗಳ್ ಬಿರಿಮುಗುಳುಳ್ಳಲರ್ದ ಪೊಸಮಲರ್ಗಳಿಂದ ಸೊಗಯಿಸೆಯಂ ಮನೋಹರಮಾಯ್ತು ಪೊಸ ಸುಗ್ಗಿ" ಎಂಬಲ್ಲಿ ಆವ ಹೆಚ್ಚಿಗೆಯಿದೆಯೋ ನಾನು ಕಾಣೆ. ನೀಲಾಚಲಕ್ಕೆ ಹೋಲಿಸಿರುವ ವಸ್ತುಗಳೆಲ್ಲವೂ ಕಪ್ಪು. ಕವಿಯ ಕಣ್ಣು ಮುಚ್ಚಿ ಕತ್ತಲೆಯಾದಾಗ ನೀಲಿಗೂ ಕಪ್ಪಿಗೂ ನಿಜವಾಗಿ ವ್ಯತ್ಯಾಸವಿಲ್ಲ. ಕಟ್ಟಿಲೆಯ ಬಿಂದ, ಕರ್ಮಣಿಯ ಪಾಸರೆ, ಮದಸಿಂಧುರ ಗಂಡಮಂಡಲ, ಅಚ್ಚವಳುಕಿನ ಗಂಡಶೈಲ – ಎಲ್ಲವೂ ಕನ್ನಡಿಗರಿಗೆ ಶತಮಾನಗಳ ಹಿಂದಿನ ಬಾಂಧವ್ಯದ ವಿವರಗಳು. ನಾಗಚಂದ್ರ, ರುದ್ರಭಟ್ಟ, ಲಕ್ಷ್ಮೀಶ, ಷಡಕ್ಷರಿ, ಚಿಕ್ಕುಪಾಧ್ಯಾಯಾದಿ ನೂರು ಕವಿಗಳಿಗಿಂತ ಬಹು ಮಿಗಿಲಾದ ಕವಿಚೇಷ್ಟೆಯಾಗಲಿ ಅಭಿಪ್ರಾಯ ವೈಖರಿಯಾಗಲಿ ಪ್ರಕೃತಿಜ್ಞಾನವಾಗಲಿ ವಾಸ್ತವಿಕತೆಯಾಗಲೀ ಪ್ರತ್ಯಕ್ಷವಾಗಿಲ್ಲ. ಓದುತೋದುತ್ತಾ ಪಂಪನ ಕಾಲದಿಂದಲೂ ನಾವು ಬಲ್ಲ ಅದೇ "ನೆರೆದ ದೀನಾಂಧಬಧಿರಕುಬ್ಜವರ್ಗ", ಅದೇ "ಪುರ್ವಿನ ಜರ್ವು", "ಮೂಡುವೆಟ್ಟಿನ ಕೋಡುಗಲ್ಲು", ಅದೇ "ಸಿಂಹಶಾರ್ದೂಲಭಲ್ಲೂಕವೃಕಸೂಕರಾದಿ ದುಷ್ಟಮೃಗಂಗಳ ನಿಷ್ಠುರಧ್ವನಿ", ಅದೇ "ಕಯ್ವೊಲನತ್ತಣಿಂ ಪಕ್ಕಿಸೋವ ಕಕ್ಕಸ ಜವ್ವನೆಯರ ಮೆಲ್ಲುಲಿಳ ಅದೇ "ಕರಡಿಗಳ್ ಸಜ್ಜುಗೆಯ್ದು ನೆಲನೊಳ್ ರಂಗವಲ್ಲಿಯಂ ಬರೆವ ಕರ್ಗೋಡಗಂಗಳ್", ಅದೇ "ಊಳ್ವ ಬಳ್ಳುಗಳ ಗೀಟಿ'ಡುವಾನೆಗಳ ಕಿಚಿಕಿಲ್ವ ಹಯಂಗಳ ಕುಣೀವ ಮರಳ್ಗಳ ನಲಿವ ಭೇತಾಳಂಗಳ ಕೋಲಾಹಲಂ ," ಅದೇ "ಬಡನಡುವಿನ ಪಿಡಿನಡೆಯ ಬಿಡುಜಡೆಯ" "ತುಂಬಿ ಗುರುಳ ಬಿಂಬಾಧರದ ಕಂಬುಕಂಧರದಂಬುಜನೇತ್ರೆಯರ್ !" ಶ್ರೀರಾಮನು ಹೇಗಿದ್ದನೆಂದು ಕುತೂಹಲವೆ : "ತಾಳ್ಮೆಯೊಳ್ ತಿರೆಯಂತಿರೆ, ಜಾಣ್ಮೆಯೊಳ್ ಗುರುವಿಂಗೊರೆ, ಭೋಗದೊಳ್ ಸುರೇಂದ್ರಂ. ತ್ಯಾಗದೊಳ್ ನರೇಂದ್ರಂ" ಕೊನೆಗೆ ಚ್ಯವನನಿಗೆ ತನ್ನ ಮಗಳನ್ನು ಕೊಡಬೇಕೆಂದಾಗ ಶರ್ಯಾತಿಯ ಹೆಂಡತಿಯು "ಎತ್ತಣ ಬನಮೆತ್ತಣ ಮುನಿಯೆತ್ತಣ ತಪಮೆತ್ತಣಾಟಂ" ಎಂದೇ ಕೊರಗಬೇಕು. ಅಂದರೆ ಈ ತರಹದ ಮೃತ್ತಿಕಾ ವ್ಯವಸಾಯದಲ್ಲಿ ರಂಜನೆಯಿಲ್ಲವೇ ಇಲ್ಲವೆಂದು ನಾನು ಕಟ್ಟನ್ನು ವಿಧಿಸುವುದಿಲ್ಲ. ಅದನ್ನು ಈಕ್ಷಿಸಿ, ಭಾವಿಸಿ ಮನನ ಮಾಡಿ ಸುಪ್ರೀತರಾಗುವವರು ಆಗಲಿ ಮತ್ತು ನಾವು ಕೂಡ ಎರಡನೆಯ ತರಗತಿಯ ಕರವಾಡವೆಂದು ಒಡಂಬಡೋಣ. ಆದರೆ "ಷೇಕ್ಸ್‌ಪಿಯರ್‌ಗಿಂತ ಬಹಳ ಕಡಿಮೆಯಾದವನಲ್ಲ" "ಸಾಹಿತ್ಯ ಸಾಮ್ರಾಜ್ಯದ ಎಲ್ಲೆಯನ್ನು ಮುಟ್ಟಿರುವುದು" ಎಂಬ ಕೊಡುಗೈಯಿನ ಅಭಯಗಳಿಗೆ ಆಧಾರವಿಲ್ಲ. ಬೆಟ್ಟದ ಮೇಲೆ ಬೆಳಗಿದುದೆಲ್ಲವನ್ನೂ ನಕ್ಷತ್ರವೆಂದೂ ಕೂಗಿದರೆ ಮೋಕ್ಷ ಬಂತೆ ?

ಮುದ್ದಣನನ್ನು ನಿರ್ದಾಕ್ಷಿಣ್ಯವಾಗಿ, ಪ್ರಾಯಶಃ ಬಿರುಸಾಗಿ ವಿಮರ್ಶಿಸುತ್ತಿರುವಾಗಲೇ ಇನ್ನೊಂದು ಸಂಗತಿಯನ್ನು ಬಹಿರಂಗಪಡಿಸಿಬಿಡಬಹುದು. ಕವಿಗೆ ಭಾಷೆಯಲ್ಲಿ, ಅದರಲ್ಲಿಯೂ ಹಳಗನ್ನಡದಲ್ಲಿ ಅಪರಿಮಿತವಾದ ಭಕ್ತಿ. ಶಬ್ದ ದೇವತೆಯ ಉಪಾಸಕನವನು ಎಂದು ಅಂದರೂ ಅನ್ನಬಹುದು. ಅವನಲ್ಲಿ ಅದು ಶಕ್ತಿಯ ಬೀಜವೇ ಆಗಿದೆ. ಆದರೆ ಅತಿ ಹೆಚ್ಚಿದ ಮಾನವನ ಒಲವು ಹುಚ್ಚು ಹಿಡಿಸಿ

ಬೀಳುಗಳೆಯುವುದುಂಟು ! ಅದರಿಂದ ಕಾವ್ಯಕ್ಕೆ ಪ್ರಾಪ್ತಿಸಿರುವ ಕೆಲವು ಅನರ್ಥಗಳನ್ನು ನೋಡಿ – (೧) ಅರ್ಥ ಸನ್ನಿವೇಶಗಳು ಅಪೇಕ್ಷಿಸದಿದ್ದರೂ ಅನುಚಿತವಾಗಿ ಹೆಸರುಗಳನ್ನು ಬದಲಾಯಿಸಿ ಹೇಳುವುದರಿಂದ ಪಾಂಡಿತ್ಯವನ್ನು ಮೆರೆದಂತಾಗಿದೆ. ಅಗಸ್ತ್ಯನನ್ನು 'ಮೈತ್ರಾವರುಣಿ', 'ಲೋಪಾಮುದ್ರಾಪತಿ', 'ಜಿತವಾತಾಪಿ', 'ಕುಂಭೋದ್ಭವಂ', 'ಜಿಂಜದೋಜಂ', 'ಮುನಿಪುಂಗವಂ', 'ಕೊಡನ ಕುವರಂ', ಎಂದೂ ಶತ್ರುಘ್ನನನ್ನು 'ಲವಣಾಂತಕ', 'ಬಲ್ಲಾಳ್ಗಳ ಬಿರುದರ ಮನ್ನೆಯರರಸ', 'ಪಗೆಗಾಜಿರ ಮೊನೆಗಾಜಿರ ಬೀರ', ಚಿಕ್ಕರಸ', ಕೂರಾಳ್ಗಳ ಕಟ್ಟೊಡೆಯ', 'ಮಧುಪುತ್ರಶತ್ರು' ಎಂದೂ ಕರೆಯುವುದು ಒಣ ಆಡಂಬರ. (೨) ಕೆಲವಡೆಗಳಲ್ಲಿ ಪ್ರಸಕ್ತರಾಗದ ಭಾರಕ್ಕೆ ಸಾಲದೇ ಹೋಗಿ ವಾಕ್ಯಗಳು ಅಪಹಾಸ್ಯಕರವಾಗುವುದುಂಟು. "ಮೇಲಜಿುಕೆಯ ಕೈದುಕಾಜಿರ ಬೀರಂ ಪುಷ್ಕಲಂ', 'ನೆಲನಗಲದಗಲದ ಚಲದ ಚಲದ ಬಲದ ಬಲದ ಗಂಡುಗಲಿ ಲಕ್ಷ್ಮೀನಿಧಿ,' 'ಸಿಂಗನೆರ್ದೆಯ ಸಂಗರರಂಗದ ಪ್ರತಾಪಾಗ್ರ್ಯಂ' ಇಲ್ಲಿ ಆ ವೀರರು ಪರಮ ತೇಜಸ್ವಿಗಳು, ಶತ್ರುಗಳಿಗೆ ಕಾಲಾಂತಕಸದೃಶ್ಯರು ಎಂಬುದನ್ನು ಒತ್ತಿ ಹೇಳಬೇಕೆಂದು ಕವಿಯ ಬಯಕೆ; ಓದುವವರಲ್ಲಿ ಆ ಮರ್ಯಾದೆ ಮೂಡಲಾರದು. (೩) ಮೊದಲೇ ಕ್ಲಿಷ್ಟದ ಹಳಗನ್ನಡ, ಅದರ ಜೊತೆಗೆ ಸ್ವೇಚ್ಛೆಯಾದ ಪದಗಳ ಮಾರ್ಪಾಟು, ಇವುಗಳಿಂದ ಕಾವ್ಯವನ್ನು ಓದಿ ವಾಚ್ಯಾರ್ಥ ಮಾಡಿಕೊಳ್ಳುವುದು ದುರ್ಘಟವಾಗಿದೆ. "ಜವಹುರ, ಪರ್ಪರಿಕೆ, ಕಾಲುರಿಚ, ಮೂಗೊಂಕುಮೂಗಿನ, ಜಱುಚು, ಜೀಪ್ಪಿಸೊಪ್ಪಿ ಬಿಂಗೊಕ್ಕೆಯ, ಜಂಕಣೆ, ತಱುಮಿಂಡಿ, ಸೊಬ್ಬೆ, ತುಬ್ಬಾದತ್ತು, ಖೊಪ್ಪರಿಸಿಯುಂ, ಜಾವಳೆ, ಮುಯ್ಯೀರಡಿ, ಜೀೋಡೆಗ, ಮೂಡಾವಿ, ಜೀಕ್ಕಟ, ತೆಪ್ಪತ್ತನಾಗೆ, ದುಕ್ಕುಂಡದ ಪಿಂಡುಗಂಕಣಂ, ಸೂಳರ್ಗೆ, ಪಾಟಿಸ್ಪೋಕುಂ ಜೀರರ ಕೆಲಚಕ್ಕುಮೆ, ಎಡರ್ಗೇಡಿ." ಉತ್ತಮ ಕಾವ್ಯದ ಅರ್ಥವನ್ನು ಪಡೆಯಲು ನಾವು ಮೈ ಕೈಯನ್ನು ದಂಡಿಸದೆ ದುಡಿಯಬೇಕೆಂಬುದೇನೋ ನಿಜ, ಶಿರೋವೇದನೆಯು ಹತ್ತೆಂಟು ಉಪವಾಸಗಳಿಂದಲೂ ಆಗದು. ಆದರೆ ಶ್ರಮಪಟ್ಟರೂ ಸಾರ್ಥಕ; ಮೂರಕ್ಕೆ ನೂರ್ಮಡಿ ಪುರುಷಾರ್ಥ ಹಿಂದುರುಗಿ ಬರುತ್ತದೆ. ಇಲ್ಲಿಯಾದರೋ ಕೇವಲ ಶಬ್ದಾರ್ಥಕ್ಕಾಗಿ ನಾವು ಕೂಲಿಯಾಳುಗಳು; ಅಂತ್ಯದಲ್ಲಿ ಕೂಲಿಯ ವೇತನವೇ ಹೊರತು ಅರಮನೆಯುಡುಗೊರೆಯಲ್ಲ. ನೆಲವನ್ನು ಎಷ್ಟು ಆಳದವರೆಗೆ ಬೇಕೆಂದರೂ ಅಗೆದು ತೋಡೋಣ; ಬೆವರು ಜಡಿಮಳೆಯಂತೆ ಸುರಿದು ಶರೀರವನ್ನು ಅದ್ದಿ ತೋಯಿಸಲಿ. ಆದರೆ ದಿವಸಾವಸಾನದಲ್ಲಿ ಬರಿಯ ಮಣ್ಣು ಹೆಂಟೆ. ಕಗ್ಗಲ್ಲು, ಹೆಂಚಿನ ಬೋಕಿ ಮಾತ್ರ ಸಿಕ್ಕಿದರೆ! (೪) ರಸನೆಯ ಮಾಟಕ್ಕೆ ಕವಿಯು ಪಕ್ಕಾಗಿರುವುದರಿಂದ ಪ್ರಾಸದ ಹುಳಿ ಕೆಲವು ಸಾರಿ ಹವಣುಮೀರಿ ಓದುಗರ ಹಲ್ಲು ಜುಳ್ಳೆನ್ನುತ್ತದೆ. 'ದಟ್ಟಡಿ ಬಟ್ಟಮೊಗಂ ಪುಟ್ಟಗೈ ನಿಟ್ಟಾಲಿ ಸಟ್ಟನಡುವಣ ನಾಭಿ ಕಟ್ಟಾಯುದಮೆಯ್ಸಿರಿ', 'ಜಿಡುಜಡೆಯ ಜಿಡುಮೊಗದ ಬಿರಿದೆಸಳ್ಗಣ್ಣ ಬಿಲ್ಲುರ್ಬಿನ ಜಿಂಗಗೆಕ್ಕೆಯ', 'ಇಚ್ಚೆಗಾರನ ಬೆಚ್ಚ ಪಚ್ಚೆಯ ಕೈಗನ್ನಡಿ! ಓ ಎನ್ನ ಎಚ್ಚ ಮೆಯ್ಯುಗ್ಗಣ್ಣ

ಪೆಣ್ಣೆ ! ಓ, ಎನ್ನಮೀಂಮಚ್ಚಲಚ್ಚಣದ ಸಿರಿಗೈಯೆ !' 'ಮುನಿಗಳಂ ಲೆಕ್ಕಿಸದೆ ತಕ್ಕಟೆದು ಮುಕ್ಕುಳಿಸಿದಂ' ಮತ್ತಮಲ್ಲಿ ರನ್ನಗಲ್ಲಡೆಯ ಪುಲ್ಲ ನಲ್ಲಾಸಿನೊಳ್ ಚೆಲ್ಲದಿಂ ನಲ್ಲಳ್ವೆರಸು ನಿಲ್ಲದೆ ಕುಳ್ಳಿರ್ದುೞ ಮೆಲ್ಲಮೆಲ್ಲನೆ ಲಲ್ಲೆಗರೆವ....' ಹೀಗೆ ಮೂರು ಕಾಸಿನ ನೆಪಪಿಲ್ಲದಿದ್ದರೂ ಮೂವತ್ತೆರಡು 'ಲ್ಲ' ಕಾರವು ಒಟ್ಟಿಗೆ ಬರುತ್ತದೆ. ಇವನ್ನು ಪಠಿಸುವಾಗ ಮುದ್ದಣನು ಯಕ್ಷಗಾನಗಳನ್ನು ಬರೆದು ನುರಿತ ಕೈಯೆಂಬುದು ನೆನಪಾಗದಿರದು (ಶಿ) ಕಾವ್ಯದ ಸವಿಜಲವನ್ನು ಮತ್ತಿಷ್ಟು ಕೊಳಚೆ ಮಾಡುವುದಕ್ಕೆ ಅದರಲ್ಲಿ ಒಂದೇ ಸಮನೆ ಬೀಳುವ ಅರ್ಧರಕಾರದ ಮಳೆಯೂ ಒಂದು ಕಾರಣ; 'ಏತರ್ಕೆ, ಸಿರ್ಕುೞ, ಕರ್ಮುೞಪುರುಷಂಗೆ, ಸೊರ್ಕುೞಂ, ಸಿರ್ಕುೞ, ಮೆಂದಿರ್ಕಣ್ಗತ್ತಿ, ನೀರ್ಗುೞತ್ತಕ್ಕೆ ಮರ್ದನುಸಿರ್ ಏತಕೇಯೋ ನಿರ್ನೆರಂ ಎನ್ನನ್ನರ್ಗೆ ಸೊಕಿಸುರ್ಕಿಂ ಬೀಗಿರ್ಪೞಯ್, ಕರ್ನೆಲದೆ ಕೊರ್ವಿ ಬೆಳೆದ ಕರ್ವಿನ ತನಿಸರಕ್ಕೆ ಪೆರ್ಮರನ ಪಾರುಗೊಂಬಿನೊಳ್, ಉರ್ಕುೞಸೊರ್ಕುೞಂ, ಸೇರ್ದುೞ' ಮುಂತಾದ ಅರ್ಧರಕಾರದ ಪ್ರಾಚರ್ಯುೞದುರ್ಕಿನಿಂದೆ ಓದುಗರ್ಗೆ ಪುರ್ಚುೞ ಪರ್ಚಿ ಪೆರ್ಚದಿರ್ಕುೞಮೆ !

ಮುದ್ದಣನ ಯಶಸ್ಸು ಹಬ್ಬಿ ಹರಡಿ ನಿಲ್ಲುವುದಕ್ಕೆ ಅವನ ಪಾತ್ರ, ಕಥೆ, ವರ್ಣನೆ, ಯಾವುದೂ ಊರೆಗೋಲಲ್ಲ. ಅವನ ಗದ್ಯದ ಧಾಟಿ ಮತ್ತು ಮುದ್ದಣ ಮನೋರಮಾಪ್ರಕರೀ – ಇವೆರಡೇ ಆ ಪರಾಕ್ರಮ ಪೌರುಷವನ್ನು ಹೊಂದಿದವು. ಹಿಂದಿನ ಗದ್ಯವಾವುದರಲ್ಲಿಯೂ ಇಲ್ಲದ ಆಶಾಜನಕವಾದ ಮೋಹಕರವಾದ ಸರಣಿ ಅಥವಾ ವಿನ್ಯಾಸವು "ರಾಮಾಶ್ವಮೇಧ"ದ ಒಂದು ಹೊಳಪು, ವಿಸ್ತಾರವಾಗಿ, ಸಂಕೋಚವಾಗಿ, ಏರಿ ಇಳಿದು, ಬಾಲಕೇಳಿಯಾಡಿ, ವೃದ್ಧಗಾಂಭೀರ್ಯವನ್ನು ತೋರಿ, ನಾನಾ ಮಾರ್ಗಗಳನ್ನು ಹೊಕ್ಕು ಗದ್ಯಗತಿಯು ವೈವಿಧ್ಯದಿಂದ ಹೃದಯಂಗಮವಾಗಿದೆ. ಕೆಲವು ವೇಳೆ ಪರ್ವತದಲ್ಲಿ ಉದ್ಭವಿಸಿ ಬಂಡೆಯಿಂದ ಬಂಡೆಗೆ ಲಂಘಿಸಿ ಭೋರ್ಗುೞಟ್ಟುವ ಝರಿಯಂತೆ ಧುಮ್ಮಿಕ್ಕಿ ಹೋಗುವ ಆಟೋಪ; 'ಬರುಮರುಕದಿಂ ಮನದೆ ಕುದಿವರ್ ಪಲಂಬರೊಳರ್. ತಿಟ್ಟವಿಟ್ಟ ಪಾಪೆಯೆನೆ ಮೂಗುವಟ್ಟಿರ್ಪರ್. ಈತಂಗಳುಪಚಾರಂ ಪ್ರೇತೋಪಚಾರಂ; ಕೂಟಂ ಕಾಲಕೂಟಂ; ನುಡಿ ಬಡಿ; ನೋಟಂ ಕಾಟಂ", "ಕೇಳೆಲೆರಾಯ ! ನಿನ್ನ ಹಯಮಂ ಗಿಯಮಂ ನಾಂ ಕಟ್ಟಿದೆನಿಲ್ಲ. ಕಿಱುಂಯನಱುಂಯದೆ ಕಟ್ಟಿದನಕ್ಕುಂ..... ಈಗಳ್ ನಿಮ್ಮನಿದಿರ್ಚುೞವೊಡಾದೆಂ. ಎಮಗಜ್ಜಂ ಬಿಲ್ಲೋಜಂ, ಕಾಡೊಳ್ ಪುಟ್ಟಿದೆವು. ಅಬ್ಬೆಯ ಪರಕೆ, ಮತ್ತಯ್ಯನ ಕಾಪು, ಕೆಳೆಯರ ನಲ್ಮೆ, ಪಿರಿಯರೊಲ್ಮೆ ಎಮಗೀವಗೆಯ ಬಲ್ಪನೊಡರ್ಚಿತ್ತು." ಆಗಾಗ ಸಮಭೂಮಿಯನ್ನು ಸುಭಿಕ್ಷಗೈಯುವ ಉಪನದಿಯಂತೆ ಶಾಂತ ಮಧುರ ಕಲಕಲರವದಿಂದ ಮೆಲ್ಲಗೆ ಹರಿಯುವ ಚೆಲುವು; "ಸುಖದುಃಖಂಗಳ್ ಪಗಲಿರುಳಂತೆವೋಲ್ ಲೋಕದೊಳ್ ವರ್ತಿಸಿರ್ಕುೞಂ. ಇವಱ ೞಳೆನಗಟ್ಟಿರು ಪೋಯ್ತು; ಶ್ರೀರಾಮನೊಲ್ಮೆಯೊಂದೇ ಶಾಶ್ವತಂ. ಆತನ ನಾಮಸ್ಮರಣೆಯೆ ಎನಗೆ ಬಟ್ಟೆ. ಹೇ ಕಲ್ಯಾಣರೂಪ! ನೀನೆನ್ನಂ ಕೈವಿಡದಿರಯ್! ಹೇ ಜಗದೊಡೆಯ ದೆಸೆಗೆಟ್ಟೆನ್ನಂ ಮಱೆಯದಿರಯ್". ಅಲ್ಲಲ್ಲಿ ಅಗಲ ಆಳಗಳನ್ನು

ಅಧಿಕ ಮಾಡಿಕೊಂಡು ಶುಭ್ರನೀಲದಿಂದಾವೃತವಾಗಿ ಅಗಾಧವಾಗುವ ಸರೋವರ ಸೌಂದರ್ಯ : ಅನಿತಱ'ೊಳ್ ನೀಲಿಯ ಕಡುವಣ್ಣದೊಳಟ್ಟಿ ಪಂದಿಯ ತೊವಲಂಮುಸುಂಕಿಟ್ಟುಮೆಯ್ಯೋಜಿದೆ ಲೋಕಮಂ ನುಂಗಲ್ಕೆಂದು ಬಂದ ಮಂದೇಹರಾಕ್ಷಸನೆನೆ ಕಟ್ಟಿಲೆಯೆತ್ತಂ ಪರ್ಬಿದುದು". "ಎಳನೇಸರ ಪೊಸವೆಳಗಿಂಗೆ ಸೊಂಪೇಜೆ ನಳನಳಿಪ ತಾವರೆಯಂತೆ, ಕಡುಸುಗ್ಗಿಯ ಭರಕೆ ಕೈವಂದು ಕೊನೆವೆರ್ಚುವ ಮಾಮರನಂತೆ, ತಕ್ಕಿನ ಸೋನೆಯ ಮೆಲ್ಸರಿಗೆ ಸುಟಿವಿಟ್ಟು ಚಳಚಳಿಪ ಪೊಂಬಾಟ'ಯಂತೆ ತುಂಬಿತೇರಿದೊಂದುಮೆಯ್ಸಿರಿಯಿಂ ಸೊಗಸಿದನಪ್ಪುದುಂ" ಒಂದೇ ಸ್ಥಳದಲ್ಲಿ ಗಮನ ಭೇದಗಳ ಪುಟ್ಟ ಮೆರವಣಿಗೆಯೂ ಉಂಟು; 'ನಲ್ಮೆ ಮಿಗೆ ಪೆತ್ತ ಕುವರನ ಬಾಲಲೀಲೆಯಂ ಕಾಣದ ಕಣ್ಗಳಿವು ಪೀಲಿಯ ಕಣ್ಗಳಾಗವೆ? ಅಕ್ಕಟಾ! ಮಗನಂ ಪಡೆಯದೆ ನರಕಮಂ ಪುಗುವೊಂದು ಭಾಗ್ಯಮಂ ಬಿದಿಯೆನ್ನೊಳೊಡರ್ಚಿದುದೇ! ನೂಱಿಱೆನೇಂ? ಇಹಕಂ ಪೆರಗಾದ ಬೂತಾದೆಂ ಅಯ್ಯ, ಮುಂತೇಂ ಬಟ್ಟೆ? ಸುಟ್ಟಿಸಿ ತೋಱ!" ಒಂದೊಂದು ಸಂದರ್ಭದಲ್ಲಿ ನಡೆದು. ನಡೆವುದು ಸಾಕಾಗಿ ಓಡಿ, ಓಡುವುದು ಸಾಕಾಗಿ ಹಾರಿ, ಅಡಿ ಅಡಿಗೂ ಹುರುಪು ಹೆಚ್ಚುವ ಸಚೇತನ ಶಬ್ದಗುಂಫನವು ಕಡು ರಮಣೀಯವಾಗಿದೆ. "ಕುತ್ತೆಸಳಿಂ ತೀವಿದ ಪೊಂಗೇದಗೆಯಿಂ, ಮುಗುಳ್ತ ಪಾರಿಜಾತದಿಂ, ಪೂತಮಂದಾರದಿಂ ಉಳ್ಕಲರ್ದ ಸುರಹೊನ್ನೆಯಿಂ, ನನೆಯೇಱಿದಸುಗೆಯಿಂ, ಬಕುಳದಿಂ, ಸಿರಿಸದಿಂ, ಪುನ್ನಾಗದಿಂ, ಸೊಗಯಿಸಿ ತೋರ್ಕುಂ, ಕೊನರಿಲ್ಲದ, ಮಿಡಿಯಿಲ್ಲದ, ಕಸುರ್ಗಾಯಿಲ್ಲದ, ದೋರೆವಣ್ಣಿಲ್ಲದ. ತನಿವಣ್ಣಿಲ್ಲದ ಮರಂಗಳಿಲ್ಲಾ ಬನಬೊಳ್." "ನೆಲನಂ ಕಿನ್ನೆಲಂ ಬಾನಂ ತಾನಂತುಟೊಂದು ಮೈಮೆಯಿಂ ಕಾಮದೇವಂ ಬೇಳ್ವ ಜನ್ನದ ಮಾನ್ಯದ ಹೂನ್ಯದ ಕುದುರೆ ಕಣಾ" ಇನ್ನೊಂದು ಅನುಪಮವಾದ ಅಭ್ಯಾಸವೂ ಮುದ್ದಣನ ಛಂದೋಬೊಕ್ಕಸದಲ್ಲಿದೆ. ಪ್ರಕರಣವೊಂದನ್ನು ಮುಗಿಯಿಸುವಾಗ ಎರಡು ಸಣ್ಣಪದಗಳನ್ನು ಕೊನೆಯಲ್ಲಿ ನಿಲ್ಲಿಸಿ, ಪ್ರಾಸ ಪುರೋಹಿತನಿಂದ ಅವೆರಡಕ್ಕೂ ಪಾಣಿಗ್ರಹಣ ಮಾಡಿಸಿ "ಇನ್ನು ಮಂಗಳವನ್ನು ಪಾಡಿಯಾಯ್ತು ಕೈಕೊಂಡ ಕಾರ್ಯ ಸಮಾಪ್ತವಾಯ್ತು. ಒಳಿತಾಯ್ತು" ಎಂಬ ಸಂತೃಪ್ತ ಸಂಭಾವನೆಯನ್ನು ನಮಗೆ ನೀಡುತ್ತಾನೆ. "ಕೆಲಕೆಲರ್ ವಿಷ್ಣುಸಾರೂಪ್ಯಮಂ ಪೊಂದಿದರ್, ಕೆಲಕೆಲರ್. ಪೊಂದಿ, ವಿಷ್ಣುಲೋಕಕ್ಕೆಯ್ದಿದರ್, ಕೆಲಕೆಲರ್ ಪುರುಷೋತ್ತಮನ ಸೇವೆಯೊಳೆ ನಿಂದರ್, ಕೆಲಕೆಲರ್ ಬಂದರ್." "ಇಂತು ಲಕ್ಷಣಂ ಪಾಷಾಣಕಠಿನ ಹೃದಯನ್ನೆಸೆ! ಎಂತು ಕುಱುಪೋದುದೇ? ಮನದೊಳ್ ಮಮ್ಮಲಂ ಮಱುಗಿದಂ, ನೊಂದಂ, ಬೆಂದಂ" ಮುದ್ದಣನ ಸಾಮಾನ್ಯ ಇತಿವೃತ್ತ ಚಿತ್ರಕ್ಕೆ ಸೊಬಗಿನ ಒಳಕಟ್ಟು ಈ ಗದ್ಯಧಾಟಿ.

ಇನ್ನು ಉಳಿದಿರುವ ಹೊರಕಟ್ಟನ್ನು ಪ್ರಸ್ತಾಪಿಸೋಣ. ನಿಜವಾಗಿಯೂ ಅಮೂಲ್ಯವಾದ ಮುದ್ದಣ – ಮನೋರಮಾ ಸಂವಾದ ರೂಪದ ಹಂಚಿಕೆಯಲ್ಲಿ ಕಥೆಯನ್ನು ಹರಿಸಿಕೊಂಡು ಹೋಗುವ ಚಿತ್ತವು ಅವನಿಗೆ ಸರಸ್ವತಿಯ ಹಸ್ತದಿಂದಲೇ

ಒದಗಿರಬೇಕು. ಆದರೆ ಮೇಲಿನ ಸಂದೇಶ ಬಂದ ಮಾತ್ರಕ್ಕೆ ಯಾಚಿತ ಫಲ ಸಂದಂತಾಗಲಿಲ್ಲ. ಹಾಳತವಾದ ಬಣ್ಣಬಣ್ಣದ ವಿವರಗಳನ್ನು ಆರಿಸಿ ತಂದು ಎಲ್ಲವನ್ನೂ ಹವಣಾಗಿ ಪೋಣಿಸಿ, ದಿವ್ಯ ಪ್ರೇರಣೆಯನ್ನು ಸಮಗ್ರ್ಯೆದಿರುವುದು ಮುದ್ದಣನ ಹೃದಯ ರಸಿಕತೆ, ಸಾಹಿತ್ಯ ಸತ್ವಗಳಿಗೆ ಸಾಕ್ಷಿ ಅವನೆಸಗಿರುವ ಈ ಕವಿಸೃಷ್ಟಿಯಲ್ಲ – ಕಲಾಚೋದ್ಯವನ್ನು ಕುರಿತು ನಾವು ಎಷ್ಟು ಕೊಂಡಾಡಿದರೂ ತಡೆಯಿಲ್ಲ, ಕಡೆಯಿಲ್ಲ ಕನ್ನಡ ಲೇಖನ ರಾಶಿಯಲ್ಲಿ ಅದು ಶುದ್ಧ ನವೀನಮಾರ್ಗ, ವ್ಯಕ್ತಿವಿಶಿಷ್ಟವಾದ ಏಕಮಾರ್ಗ, ಪ್ರತಿಭಾಗಗನದಲ್ಲಿ ಎಲ್ಲಿಯೋ ಮಬ್ಬುಮಬ್ಬಾಗಿ ಮಿಣುಕುತ್ತಿದ್ದ ಒಂದು ವಿಚಿತ್ರ ಸಣ್ಣ ತಾರೆಯ ನೆಲೆಯನ್ನು ಕಂಡುಹಿಡಿದು, ಅದರ ಕುರುಹು, ದೂರ, ವರ್ಣ, ವೇಗ, ಅಳತೆ, ತೂಕವೆಲ್ಲವನ್ನೂ ಚಚ್ಚರದಿಂದ ಲೆಕ್ಕಿಸಿ ಪಟ್ಟಿ ಮಾಡಿಟ್ಟಿರುವುದು ಅವನ ಕೊರಳಿನಲ್ಲಿ ಎಂದಿಗೂ ಬಾಡದ ವಿಜಯಮಾಲೆ, ಕಾವ್ಯದ ಹತ್ತನೆಯ ಒಂದು ಭಾಗವನ್ನು ಮಾತ್ರ ಅದು ಬಳಸಿಕೊಂಡಿತಲ್ಲ ಎಂದು ನನಗೆ ಪರಿತಾಪ. "ಮುಂತೇಂ ! ಮುಂತೇಂ !" "ಎಲೆ ಜಾಣ ! ಅದೆಂತು ?" ಎನ್ನುವ ಕತೆಯ ಕೊಂಡಿಗಳನ್ನು ಬಿಟ್ಟರೆ ಮುದ್ದಣ ಮನೋರಮಪ್ರಣಯ ಪ್ರಕರಣದಲ್ಲಿ ಹದಿನಾರು ಪ್ರವೇಶಗಳಿವೆ. ಅವುಗಳಲ್ಲಿ ಚಿತ್ರ ವಿಚಿತ್ರವು ತಾನೇ ತಾನಾಗಿ ತಾಂಡವವಾಡುತ್ತಿದೆ. ಮೂರು ಪಂಕ್ತಿಯಲ್ಲಿ ಮುಗಿಯುವುದೊಂದಾದರೆ ನಾಲ್ಕು ಪುಟಗಳ ಪೂರಾ ಇನ್ನೊಂದು. ಎರಡು ಮೂರು ಪುಟ ಕೆಲವಕ್ಕೆ; ಮತ್ತೆ ಕೆಲವಕ್ಕೆ ಪುಟದ ಮೂರನೆಯ ಒಂದು ಭಾಗ ಸಾಕು. ಇದು ಬಹಿರಾಕಾರದ ಬಗೆಯಾಯ್ತು. ಎರಡರಲ್ಲಿ ಕರುಣೆ ಶೋಕಗಳು ಕಿಕ್ಕಿರಿದು ತುಂಬಿವೆ ಒಂದರಲ್ಲಿ ಆಶ್ಚರ್ಯದಿಂದ ಅರಳಿದ ನೇತ್ರ; ಮತ್ತೊಂದರಲ್ಲಿ ಹುಬ್ಬುಗಂಟಿಕ್ಕಿ ಹಲ್ಲುಕಡಿಯುವ ಕ್ರೋಧ, ಒಂದೆರಡರಲ್ಲಿ ನೈಜಹರ್ಷವು ಹಾಡುತ್ತಾ ನರ್ತಿಸುತ್ತದೆ. ನಾಲ್ಕೈದರಲ್ಲಿ ಬೆಳ್ಳನೆಯ ಹಾಸ್ಯತರಂಗ; ಒಂದೆರಡನ್ನುಳಿದು ಎಲ್ಲದರಲ್ಲಿಯೂ ಎಲ್ಲೆಲ್ಲಿಯೂ ಅಚ್ಚಶೃಂಗಾರದ ಪ್ರಸಾರ. ಒಂದು ಸಾರಿ ಯಾವುದೋ ಗಹನದ ಗುಟ್ಟನ್ನು ರಟ್ಟು ಮಾಡುವವನಂತೆ ನಟಿಸಿ, ಮನೋರಮೆಯ ಉತ್ಸುಕತೆಯನ್ನು ಬೆಳಸಿ, ಕೊನೆಗೆ ಒಳಗೊಳಗೇ ನಗುತ್ತಾ ಭವತಿ ಭಿಕ್ಷಾಂದೇಹಿ ಎಂಬ "ಕಬ್ಬಿಗರ ಸಪ್ತಾಕ್ಷರೀ"ಯನ್ನು ಉಚ್ಚರಿಸಿ, ಮುದ್ದಣನು ಪ್ರಿಯೆಯನ್ನು ಸೋಲಿಸುವನು. ಮರುಕ್ಷಣದಲ್ಲಿ ಮನೋರಮೆಯು ವ್ರತದ ವಿಚಾರವನ್ನೆತ್ತಿ, ಗಂಡನ ಬಾಯಲ್ಲಿ ನೀರೂರುವಂತೆ ಭಕ್ಷ್ಯದಾಸೆಯನ್ನು ನಿರವಿಸಿ, ಆದರೆ ಉಪವಾಸವಿದ್ದ ಹೊರತು ವ್ರತವಾಗದೆಂದು ನಿಯಮ ಹೇಳಿ ಮುದ್ದಣನನ್ನು ಸೋಲಿಸಿ ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವಳು. ಕೆಲವು ದೃಶ್ಯಗಳು ಕಥೆಯಲ್ಲಿ ಬರುವ ಉಪಖ್ಯಾನಗಳಿಗೆ ಪೀಠಿಕೆ; ಮತ್ತೆ ಕೆಲವು ಅವುಗಳ ಮೇಲಣ ಟೀಕೆಗಳು; ಕಥೆಯಿಂದ ಹುಟ್ಟಿದರೂ ಸ್ವತಂತ್ರವಾಗಿ ಜರುಗುವುವು ಕೆಲವು. ಮನೋರಮೆಯು ಒಂದು ಸಮಯದಲ್ಲಿ ಭಕ್ತ ಮುದ್ದಣನಿಂದ ಆರಾಧಿಸಿಕೊಳ್ಳುವ ದೇವಿ : ಇನ್ನೊಂದರಲ್ಲಿ ನಾಥನಿಂದ ಬುದ್ಧಿ ಕಲಿಯುವ ಮುಗ್ಧೆ; ಮತ್ತೊಂದು ಘಳಿಗೆ ಪ್ರೇಮದ ಬಯಕೆಗೆ ಪಾತ್ರಳಾದ ಹೆಂಡತಿ; ಅಲ್ಲಿ ಮಾತಿಗೆ ಮಾತು ತಗಲುವುದರಿಂದ ಚಟಪಟ ಸದ್ದು;

ಇಲ್ಲಿ 'ಮಕ್ಕಳ ಸೆರಗಿಲ್ಲದ ಸಾಹಸ'ದ ಬೆರಗಿನಿಂದ ಅಥವಾ 'ಅಳಲ್ ಕೊರಳನೌಂಕು'ವುದರಿಂದ ನಾಲಗೆಯೇ ಅಲ್ಲಾಡದ ಮೌನ. ಅನೇಕ ಸಂದರ್ಭಗಳಲ್ಲಿ ನಾಯಕ ನಾಯಿಕೆಯರ ಅನಂತ ಅಭಿನಯ; ಒಂದೊಂದು ಹೊತ್ತು ಮುದ್ದಣನಿಗೆ ಪುರಾಣಿಕನ ಪೀಠ, ಮನೋರಮೆಗೆ ಶ್ರೋತೃವಿನ ನಮ್ರಾಸನ. ಒಂದೆಡೆ ಮಿಥ್ಯಾಕೋಪವಿದ್ದರೆ ಇನ್ನೊಂದೆಡೆ ಠಕ್ಕಿನ ತಾತ್ಸಾರ; ಮತ್ತೆ ಎರಡಕ್ಕೂ ಈಡಾಗಿ ಸಹಜತೆಯ ಉತ್ಕರ್ಷ. ಹೀಗೆ ಹದಿನಾರರಲ್ಲಿಯೂ ಹದಿನಾರು ತರಹದ ಚಿತ್ತವೃತ್ತಿ, ದೇಶಿ, ಅಲಂಕಾರ, ಚೂಟಗಳು ಅವರ್ಣನೀಯವಾಗಿ ಸ್ಫುರಿಸಿವೆ. ತಮ್ಮ ಭೇದವಿಭೇದಗಳ ಮರೆಯಲ್ಲಿ ಎಲ್ಲವೂ ಪ್ರತಿಪಾದಿಸುವ ಹಿತವಾದ ಮುಖ್ಯ ತತ್ವವೊಂದೇ; ಗೃಹಸ್ಥ ಸಂಸಾರದ ಗಂಡ–ಹೆಂಡಿರ ಸಾತ್ವಿಕ ಪ್ರಣಯ; ಶೃಂಗಾರ ಹಾಸ್ಯಗಳಲ್ಲಿ ಹಚ್ಚ ಹೊಸ ಚಿಹ್ನೆ, ಹಸನು, ಸಭ್ಯಸುರಸತ್ವ, ಬಗೆಬಗೆಯ ಬೆಡಗು, ಸೊಂಪು, ನಿಷ್ಕಳಂಕ ಮೃದುತ್ವ – ಇವು ನಮಗೆ ಬೇಕಾದರೆ ಕನ್ನಡ ಕವಿವೀಥಿಯಲ್ಲಿ ಮುದ್ದಣನದೊಂದೇ ಅಂಗಡಿ. 'ಈ ಬಗೆಯ' ದಾಂಪತ್ಯ ನಾಟಕವು 'ಮುಂತಿಲ್ಲ ಪಿಂತಿಲ್ಲವೆಂದಾಯ್ತು,' 'ಬಲ್ಲೊಗಸು !' ಕರ್ಣಾಟಕದಲ್ಲಿ ಯಾವಾಗಲೂ ಜೀವಂತವಾಗಿರಲಾರ್ಹವಾದ ಆ ಎರಡು ಪಾತ್ರಗಳನ್ನು ಸ್ಥೂಲವಾಗಿಯೂ ಸೂಕ್ಷ್ಮವಾಗಿಯೂ ಹೇಗೆ ಕೆತ್ತಿದ್ದಾನೆ ಪರಿಭಾವಿಸಿ. ಮುದ್ದಣನು ಪಂಡಿತ, ರಸಿಕ, ಕವಿ; ಜಾತಿವಾಚಾಳತೆಗನುಸಾರವಾಗಿ ನೂರಾರು ನಾಮಪದ, ವಿಶೇಷಣ, ಸಮಾಸಗಳಿಂದ ಕಾಂತೆಯನ್ನು ಪೂಜಿಸುವನು, ಉಪಚಾರ ಮಾಡುವನು, ದೂರುವನು, ಗದರಿಸಿಕೊಳ್ಳುವನು. ಅಲ್ಲದೆ ಗಂಡಸು; ಗಂಡಸಿನ ಸದರ, ಸ್ವಾತಂತ್ರ್ಯ, ಸ್ವಾಮಿಗಳ ಕಡಗ ವಸ್ತ್ರ ಕಿರೀಟಗಳನ್ನು ಆಗಾಗ ಧರಿಸುವನು. ಆದರೂ ಅವನಲ್ಲಿ ಮನೋರಮೆಯೇ ತನ್ನ ಮನೋವಲ್ಲಭೆಯೆಂಬ ಕವಲಿಲ್ಲದೆ ನಿಶ್ಶಂಕೆಯ ಭಾವನೆ, ಅವಳಾದರೋ ಏಕಾಂತದಲ್ಲಿದ್ದರೂ ಪ್ರಾಣಪ್ರಿಯನ ಪಕ್ಕದಲ್ಲಿ ಕುಳಿತಿದ್ದರೂ ಒಂದೊಂದು ವೇಳೆ ಬಾಯಿಬಿಟ್ಟು ಮಾತನಾಡಿದರೂ ತಾನು ಪರಾಧೀನೆ, ಗೃಹಿಣಿ, ಹೆಂಗಸೆಂಬುದನ್ನು ಮರೆಯಲಾರಳು. ಗಂಡನ ಮನೆಗೆ ಬಂದು ಕೆಲವು ವರ್ಷಗಳು ಕಳೆದುಹೋಗಿದ್ದರೂ ಇನ್ನೂ ಬಾಲಿಕಾ ಸ್ವಭಾವವು ಅವಳಿಂದ ದೂರವಾಗಿಲ್ಲ. ಸಲಿಗೆಯನ್ನು ತೆಗೆದುಕೊಂಡು ಸಲಿಗೆಯನ್ನು ಕೊಟ್ಟು ನಗುಮುಖನಾಗಿದ್ದರೂ ಮುದ್ದಣನು ಮೇಧಾವಿ, ಕಬ್ಬಿಗ, ಅಶೇಷ ಮಹಿಮಾಸ್ಪದನೆಂದು ಪೂಜ್ಯಭಾವ ಅವಳಲ್ಲಿ; ಅದರೊಂದಿಗೆ ಅಂಥವನನ್ನು ಕೈಹಿಡಿದ ಸೌಭಾಗ್ಯಕ್ಕೆ ಸಂತುಷ್ಟಿ. ಅವರಿಬ್ಬರಿಗೂ ರೂಪಾಯಿನಲ್ಲಿ ಹದಿನಾರಾಣೆಯ ಜಾತಕಾನುಕೂಲ. ಪೂರ್ವದ ಕಟ್ಟುಕಟ್ಟಳೆಗಳಿಗೆ ಶಿಷ್ಟದಾಸರಾದರೂ ಆಧುನಿಕರಿಗೆ ಶ್ಲಾಘ್ಯಮಾದರಿಗಳು.

ಈ ಸಲ್ಲಾಪ ಸಂವಾದ ವಿಷ್ಕಂಭಗಳಿಂದ ಕವಿಯು ಪಡೆಯಬಹುದಾದ ಉಪಯೋಗಗಳು ಅನೇಕ. ಕಥೆಯು ಬುಱುರಗಳೆಯಾಗದೆ ಸ್ವಲ್ಪ ಮಟ್ಟಿಗೆ ಕಾರ್ಯ ಸ್ಥಿತಿ, ಘನತ್ವ, ಸ್ಪರ್ಶಾರ್ಹತೆಯನ್ನು ಹೊಂದುತ್ತದೆ "ಏನೆಲಗೆ ! ಕಡೆಗೆ ಹುಂ ಗುಟ್ಟದೆ ಗುಱುಗುಮ್ಮನಿರ್ಪಯ್". "ಅಂತೇಂ ! ಮಾದೇವಂ ರಾಯಂಗೆಂತಗಳಿಯ–

ನಾದಂ", "ಈಗಳಜೆತೆಂ ಹಸುವಂ ಕಟ್ಟಿದ ಬಾಲರಾರೆಂಬುದಂ", "ಎನ್ನೊಡೆಯ, ನೀನುಮೆಂತು ಕಲ್ಮನನಾದ್ಯೆ?" – ಮುಂತಾದ ವಚನಗಳಿಂದ ಕಥೆಯು ಹಾಗೆ ಆಯ್ತು. ಹೀಗೆ ನಡೆಯಿತು ಎಂಬ ನೀರಸ ಕಥನವಾಗದೆ ನಮ್ಮಿಂದ ಆಸಕ್ತಿಯನ್ನು ಕೋರುವ ಸಜೀವ ಘಟನಾ ಸಮೂಹವಾಗುತ್ತದೆ. ಮನಸ್ಸಿಗೆ ತೋಚಿದುದನ್ನು ಮುಚ್ಚು ಮರೆಯಿಲ್ಲದೆ ಒದರಿ, ಮನೋರಮೆಯು ಪಾಠಕರ ಮತ್ತು ಜನಸಾಮಾನ್ಯದ ಪ್ರತಿನಿಧಿಯಂತಿರುವಳೆಂಬುದು ಸಕಲರಿಗೂ ತಿಳಿದಿದೆ. "ಸುಡು ಸುಡು ನಿನ್ನ ಜನ್ನಗುದುರೆಯಂ !" "ಏತರ ಸೀತಾರಾಮಂ..... ಆ ಕಲ್ಲೆರ್ದೆಯಂ ರಾಮನೋ ಭೀಮನೋ ?" ಎಂಬ ರೋಷದ ನುಡಿಗಳನ್ನಾಡಿ ನಮ್ಮ ಒಡಲಿನಲ್ಲಿರುವ ದುಃಖವನ್ನು ಹೊರಗೆಳೆದು ಕಡಿಮೆ ಮಾಡಿ, ನಮ್ಮನ್ನು ಸಮರ್ಥಿಸುವುದರಿಂದ ಅವಳು ನಮಗೆ ಶಾಶ್ವತ ಸಹೋದರಿ. ಇಷ್ಟೆ ಅಲ್ಲ. ಈ ದೃಶ್ಯಗಳಿಂದ ಹಲವು ಪ್ರಮೇಯಗಳನ್ನು ಕುರಿತು ರುಚಿಕರವಾದ ವಿಡಂಬನಕ್ಕೆ ಅವಕಾಶ ದೊರಕಿದೆ. "ಇದು ಸಕ್ಕದದೊಂದು ಚೆಲ್ವು!" "ಅಂತದು ಪಾಡಿನ ಜೋಡಿನ ಧಾಟಿಯ್ಯೆಸೆ". "ಕೇಳ್ವರ್ಗೆ ಮನಕ್ಕೆ ಬಾರದೊಡಕ್ಕುಮೆ ?" ಭವತಿ ಭಿಕ್ಷಾಂದೇಹಿಯೆ ಗತಿಯಾದರೂ "ತಮ್ಮೊಂದೆ ನುಡಿಯ ಬಲ್ಪಿಂ ಮೂಜಗಮನುಟೆಯಿಸುವಟೆಯಿಸುವ ಪೊಗಟ್ವಿ ತೆಗಟ್ವಿ ಕೊಳ್ವಾಳ್ವ ಸಿಂಗರದ ಬಣ್ಣಗಬ್ಬಿಗ"ರಿಗೇನು ಕೊರತೆ? ಕಥಾವಸ್ತುವಿಗೆ ಅಪ್ರಕೃತವೆಂದು ತೋರಿದರೂ ಓದುವವರಿಗೆ ಸುಖಮಯವಾಗಿ ತನ್ಮೂಲಕ ಅವಶ್ಯಕವಾಗುವ ನಾನಾ ರಾಗಗಳನ್ನು ಕವಿಯು ಹೀಗೆ ಆಲಾಪನೆ ಮಾಡಬಹುದು.

"ರಾಮಾಶ್ವಮೇಧ"ದ ವಿದ್ಯಾರ್ಥಿಗಳಲ್ಲಿ ಬಹುಶಃ ಎಲ್ಲರಿಗೂ ಮುದ್ದಣ ಮನೋರಮಾ ನಾಟಕವನ್ನು ಓದಿ, ಸವಿದು, ದಣಿಯದೆ, ಪುನಃ ಓದಿ ಧನ್ಯರಾಗುವ ಸಂಭ್ರಮವೇ ಸಂಭ್ರಮ. ಉಳಿದ ಹಾಳೆಗಳನ್ನು ಮುಗುಚಿಹಾಕಿ ಅದಕ್ಕೆ ನೇರವಾಗಿ ನುಗ್ಗುವ ಆತುರವೂ ಕೆಲವರಿಗೆ. ಅವರೆಂದಿಗೂ ಮೂಢರಲ್ಲ. ಈ ಗ್ರಂಥವು ಒಂದು ಕಾಡು ದಾರಿಗೆ ಸಾಟಿಯಾಗಿದೆ. ಕಲ್ಲು, ಮುಳ್ಳು, ಕೊಂಬೆಗಳ ಅಡಚಣೆ, ಮೃಗಗಳ ಹೆದರಿಕೆ, ಏರಿಬರುವ ಆಯಾಸ – ಎಲ್ಲವೂ ಇವೆ. ಇದಿರಾಗುವ ಪ್ರವಾಸ ಮಂದಿರಗಳಲ್ಲಿ ಪ್ರಯಾಣಿಕನಿಗೆ ಒಂದೊಂದರಲ್ಲೊಂದೊಂದು ಸಮಕಟ್ಟಿನ ಶ್ರೀಮಂತ ಆತಿಥ್ಯ. ಒಂದನ್ನು ಸೇರಿದೊಡನೆಯೇ ತನ್ನ ನಡೆದ ನೋವೆಲ್ಲವನ್ನೂ ಹೋಗಲಾಡಿಸಿಕೊಂಡು ಉಲ್ಲಾಸಸಂಯುಕ್ತನಾಗಿ ಆಮೋದದಲ್ಲಿ ಮೈಮರೆಯುವುದರಿಂದ, ಮುಂದಕ್ಕೆ ಹೊರಡುವ ಯೋಚನೆಯ ಹಂಗು ಅವನಿಂದ ಸಡಿಲಿ ಹೋಗುವುದು. ಕೆಲವು ದಿವಸಗಳಾದ ತರುವಾಯ, ಮುಂದೆ ಇನ್ನಾವ ಲಾವಣ್ಯದ ಆಶ್ರಮ ಸಿಕ್ಕುವುದೋ ಎಂಬ ತವಕದಿಂದ ಎಚ್ಚತ್ತು, ಹಿಂದಿರುಗಿ ನೋಡುತ್ತಾ ಮುಂದಕ್ಕೆ ಕಾಲು ಹಾಕುತ್ತಾನೆ. ಅರಣ್ಯಪಥವಾದರೂ ಪ್ರಾರಂಭದಲ್ಲಿ ಅವನನ್ನು ಆಕರ್ಷಿಸುವ ಗಿಡ, ಗುಹೆ, ಹಕ್ಕಿ, ಪ್ರಾಣಿಗಳುಂಟು. ಆದರೆ ಹೋಗುತ್ತ ಹೋಗುತ್ತ ನಡುವಣ ಹಾದಿಯ ಭವ್ಯತೆ ತೀರ ಕಡಿಮೆಯಾಗಿ, ಅವನ ಮನಸ್ಸೆಲ್ಲವೂ ಸದ್ಯದಲ್ಲಿ ಭೇಟಿಯಾಗಲಿರುವ ಮಜಲಿನ ಕಡೆಗೇ ಸರಿದು ಬಿಡುತ್ತದೆ.

ಅಂದಮೇಲೆ ಷೇಕ್ಸ್‌ಪಿಯರ್, ಕಾಳಿದಾಸ, ರಸ್ಕಿನ್, ಡಿಕ್ವಿನ್ಸಿ, ಸಾಹಿತ್ಯದ ಎಲ್ಲೆಗಳ ಮಾತುಬೇಡ. ಆಕಾಶದಲ್ಲಿ ಸಾವಿರ ಮೋಡಗಳಿವೆ: ಎಲ್ಲದರಲ್ಲಿಯೂ ಮಳೆಯ ನೀರಿಲ್ಲ : ಒಂದೊಂದು ತನ್ನ ರೂಪಿನಿಂದ, ಒಂದೊಂದು ತನ್ನ ರಂಗಿನಿಂದ, ನಮ್ಮನ್ನು ಒಲಿಸಿಕೊಳ್ಳುವುದು. ಹಾಗಾಗಬಾರದೇತಕ್ಕೆ? ಮುದ್ದಣನು ಈಯಬಲ್ಲ ಒಂದು ವಿಶೇಷದಾನಕ್ಕೆ ಕೈಯೊಡ್ಡಿ ನಲಿಯೋಣ. ಅವನಲ್ಲಿಲ್ಲದ ಗುಣದ್ರವ್ಯಗಳನ್ನು ಬೇಡಿ, ಹಲಕೆಲವು ಅಕ್ಕಿಯ ಕಾಳುಗಳ ಭಿಕ್ಷೆಯನ್ನು ಕೊಟ್ಟರೂ "ಅವನಂದದ ಉಪಕಾರಿ ಧರೆಯ ಮೇಲಿಲ್ಲ"ವೆಂಬ ವಂದಿಸ್ತುತಿಯ ಹವ್ಯಾಸಕ್ಕೆ ಹೋಗದೆ, ಕಾವ್ಯ ಪ್ರಪಂಚದಲ್ಲಿ ಅವನಿಗೊಂದು ಪ್ರತ್ಯೇಕ ಸ್ಥಾನವು ನಿಶ್ಚಯವಾಗಿದೆ ಎಂದು ನಂಬಿದರೆ ಕವಿಗೆ ಮಾನ್ಯ, ವಿಮರ್ಶಕ ಜನ್ಮವು ಸಾರ್ಥಕ. ಚಿತ್ರವು ಸತ್ಯವಾಗಿ ಸಾಮಾನ್ಯ; ಚೌಕಟ್ಟು ಶಿವನಾಣೆ ಸುವರ್ಣ.

---

ಕೃಪೆ : ಪ್ರಬುದ್ಧ ಕರ್ನಾಟಕ, ೧೬-೧

*****

# ಮುದ್ದಣನ ರಾಮಾಶ್ವಮೇಧ ಮತ್ತು ಪುರಾಣದ ಶೇಷರಾಮಾಯಣ

ಬನ್ನಂಜೆ ಗೋವಿಂದಾಚಾರ್ಯ

೧

ಮುದ್ದಣನ 'ರಾಮಾಶ್ವಮೇಧ' ಹೆಸರೇ ಸೂಚಿಸುವಂತೆ ಪದ್ಮಪುರಾಣದ 'ಪಾತಾಳಖಂಡ'ದಲ್ಲಿ ಬರುವ 'ರಾಮಾಶ್ವಮೇಧ'ದ ಹಿನ್ನೆಲೆಯಲ್ಲಿ ಬರೆದ ಗ್ರಂಥ. ಮುದ್ದಣನ ಕವಿಹೃದಯ ಬರಿಯ ಸಂಸ್ಕೃತದ ಅನುಷ್ಟುಪ್‌ಗಳನ್ನು ಕನ್ನಡದ ಗದ್ಯಕ್ಕೆ ಭಟ್ಟಿ ಇಳಿಸುವ ಕರಣೀಕನ ಕೆಲಸವನ್ನು ಮಾಡಿದೆ ಎಂದು ಮಾತ್ರ ಯಾರೂ ಭ್ರಮಿಸಬಾರದು. ವ್ಯಾಸರು ಹಾಕಿಕೊಟ್ಟ ಚೌಕಟ್ಟಿನಲ್ಲಿ ಮುದ್ದಣನ ಕಾವ್ಯಪ್ರಜ್ಞೆ ತನ್ನ ಸ್ವಂತಿಕೆಯ ರಸವಂತಿಕೆಯನ್ನೆರೆದು ಹೊಸ ಪಾಕವೊಂದನ್ನು ತಯಾರಿಸಿದೆ. ಈ ಹೊಸ ಕಾವ್ಯಪಾಕ ಕನ್ನಡದ ಕಾವ್ಯಲೋಕಕ್ಕೆ ಮುದ್ದಣನ ಅಪೂರ್ವ ಕೊಡುಗೆಯಾಗಿದೆ. ಭವಭೂತಿಯ 'ಉತ್ತರರಾಮಚರಿತ', ದಿಜ್ ನಾಗನ 'ಕುಂದಮಾಲೆ' ಹೇಗೆ ರಾಮಾಯಣದ ಚೌಕಟ್ಟಿನಲ್ಲಿ ನಿಂತೂ ಕವಿಯ ಸ್ವಂತಿಕೆಯ ಸೀಮೆಯನ್ನು ಸೂರೆಗೊಂಡಿದೆ ಹಾಗೆ ಮುದ್ದಣನ 'ರಾಮಾಶ್ವಮೇಧ' ಮುದ್ದಣನದೇ ಮುದ್ರೆಯನ್ನು ಹೊತ್ತ ಅಪೂರ್ವ ಕಾವ್ಯ.

ಸಂಸ್ಕೃತ 'ರಾಮಾಶ್ವಮೇಧ' ಪದ್ಮಪುರಾಣದ ಪಾತಾಳ ಖಂಡದಲ್ಲಿ ಒಟ್ಟು ೬೮ ಅಧ್ಯಾಯಗಳಲ್ಲಿ ಬಂದಿದೆ. ಇದು ಮುದ್ದಣನ ರಾಮಾಶ್ವಮೇಧಕ್ಕಿಂತ ಸುಮಾರು ಎರಡು ಪಟ್ಟು ದೊಡ್ಡ ಗ್ರಂಥ. ಹೆಚ್ಚು-ಕಡಿಮೆ ೪,೩೦೦ ಶ್ಲೋಕಗಳಲ್ಲಿ ಈ ಕಥೆ ಹೆಣೆದು ನಿಂತಿದೆ. ಪುರಾಣಗಳಲ್ಲಿ ಪರಿಗಣಿತವಾದರೂ ಪುರಾಣ ಚ್ಛಾಯೆಗಿಂತ ಹೆಚ್ಚು ಕಾವ್ಯಚ್ಛಾಯೆಯನ್ನು ಹೊತ್ತ ಗ್ರಂಥ. ಈ ಕಾರಣದಿಂದಲೇ ಇದನ್ನು ವ್ಯಾಸರ ಕೃತಿ ಅಲ್ಲ ಎನ್ನುವವರೂ ಇದ್ದಾರೆ. ಈ ಮಾತು ಏನಿದ್ದರೂ ನಮಗೆ ಪ್ರಕೃತಕ್ಕೆ ಸಂಬಂಧಪಟ್ಟದ್ದಲ್ಲ. ಅದನ್ನು ಯಾರೇ ಬರೆದಿರಲಿ, ಮುದ್ದಣನಿಗಿಂತ ಮೊದಲು ಇದರ ರಚನೆಯಾಗಿತ್ತು ಮತ್ತು ಇದರ ಹಿನ್ನೆಲೆಯಲ್ಲೇ ಮುದ್ದಣ ತನ್ನ ಕೃತಿಯನ್ನು ರಚಿಸಿದ ಎನ್ನುವುದು ವಾದಾತೀತವಾದ ಸಂಗತಿ; ಮುದ್ದಣನೇ ತನ್ನ ಕಥಾಮುಖದಲ್ಲಿ ಒಪ್ಪಿಕೊಂಡ ಸಂಗತಿ.

ಕನ್ನಡ 'ರಾಮಾಶ್ವಮೇಧ' ಮುದ್ದಣ-ಮನೋರಮೆಯರ ಸಂವಾದವಾದರೆ ಪದ್ಮಪುರಾಣದ ಸಂಸ್ಕೃತ 'ರಾಮಾಶ್ವಮೇಧ' ಶೇಷ ವಾತ್ಸ್ಯಾಯನರ ಸಂವಾದ.

ವಾತ್ಸಾಯನನ ಪ್ರಶ್ನೆಗೆ ಶೇಷನಿಂದ ಉತ್ತರ. ಅದರಿಂದಲೇ ಮುದ್ದಣ ಇದನ್ನು 'ಶೇಷರಾಮಾಯಣ' ಎಂದು ಕರೆದ :

ಮುದ್ದಣ : ಈಗಳರಿತೆಂ. ಶೇಷರಾಮಾಯಣಂ ಪೇಳ್ವುದೆಂಬೆಯ ?

ಮನೋರಮೆ : ಅಪ್ಪುದಪುದು ಆದೊಡೆ ಮುನ್ನಂ ಆರ್ ಆರ್ಗೆ ಇದನೊರೆದರ್ ?

ಮುದ್ದಣ : ಮುನ್ನಂ ಶೇಷಂ ವಾತ್ಸ್ಯಾಯನಂಗೆ ಪೇಳ್ದನ್. ಅದನೆಯೆ ನಿನಗೆ ಬಿತ್ತರಿಪೆಂ. ಆದೊಡೆ ಬಲ್ಗತೆ ಕಣಾ. ಒಂದೆರಳ್‌ದೆವಸಕ್ಕೆ ಮುಗಿಯದು.

ಹೀಗೆ ಮುದ್ದಣ ಈ ಕಾವ್ಯವನ್ನು ಪತಿ–ಪತ್ನೀ ಸಂವಾದ ರೂಪವಾಗಿ ಹೆಣೆಯಲು ತಾನು ಮೂಲವಾಗಿ ಆಯ್ದುಕೊಂಡ ಶೇಷರಾಮಾಯಣವೂ ಸಂವಾದ ರೂಪದಲ್ಲಿರುವುದು ಒಂದು ಪ್ರಚೋದಕವಾಯಿತು. ಈ ಶೇಷರಾಮಾಯಣಕ್ಕೆಯೆ 'ರಾಮಾಶ್ವಮೇಧ' ಎನ್ನುವುದು ಇನ್ನೊಂದು ಹೆಸರು. ಈ ಮಾತು ಪದ್ಮಪುರಾಣದ **colophon** ನಿಂದ ಸ್ಫುಟವಾಗುತ್ತದೆ :

"ಇತಿ ಶ್ರೀಪಾದ್ಮೇ ಮಹಾಪುರಾಣೇ  
ಪಾತಾಳಖಂಡೇ ಶೇಷವಾತ್ಸ್ಯಾಯನ ಸಂವಾದೇ  
ರಾಮಾಶ್ವಮೇಧೇ–"

ಮುದ್ದಣ ಮೂಲದ ವಿಸ್ತಾರವನ್ನು, ಹರವನ್ನು ಒಪ್ಪಿಕೊಂಡಿದ್ದಾನೆ. ಅದನ್ನು ಅವಸರದಲ್ಲಿ ಕನ್ನಡಿಸುವುದು ಸಾಧ್ಯವಿಲ್ಲ ಎನ್ನುವ ಅರಿವೂ ಅವನಿಗುಂಟು. ಮುಂದೆ ಅವನ ದೇಹಾರೋಗ್ಯ ತೀರ ಕೆಡಲಾಗಿ ಅವನು ತನ್ನ ಗ್ರಂಥದ ಹರವನ್ನು ಮೊಟಕುಗೊಳಿಸಿರಬೇಕು ಎಂದು ಕಾಣುತ್ತದೆ. ಅದರಿಂದಲೇ ಅವನು ಕೆಲವೊಮ್ಮೆ ಮೂಲದ ನಾಲ್ಕೈದು ಅಧ್ಯಾಯಗಳ ಕಥೆಯನ್ನು ಒಂದೇ ಆಶ್ವಾಸದಲ್ಲಿ ತುಂಬುವ ಭರದಲ್ಲಿ ಅಸ್ವಾಭಾವಿಕ ಎನ್ನಿಸುವಷ್ಟು ವೇಗದಲ್ಲಿ ಬರವಣಿಗೆಯನ್ನು ಓಡಿಸುತ್ತಾನೆ.

ಲಕ್ಷ್ಮೀಶ ಜೈಮಿನಿ ಭಾರತವನ್ನು ಕನ್ನಡಕ್ಕೆ ತಂದಾಗ ಮೂಲದಂತೆಯೇ ಪದ್ಯದ ಪರಿಪಾಟಿಯನ್ನೇ ಬಳಸಿಕೊಂಡ. ಶೇಷರಾಮಾಯಣದ ಮೂಲವೂ ಪದ್ಯ ರೂಪದಲ್ಲೇ ಇದೆ. ಅದರಿಂದ ತನ್ನ ಈ ಕೃತಿ ಪದ್ಯ ರೂಪವಾಗಿರಬೇಕೆ, ಇಲ್ಲ, ಗದ್ಯ ರೂಪವಾಗಿರಬೇಕೆ ಎಂಬ ಜಿಜ್ಞಾಸೆ; ಗದ್ಯದಲ್ಲೆ ಬರೆದು ಕನ್ನಡಕ್ಕೊಂದು ಹೊಸ ಪ್ರಯೋಗವನ್ನು ನೀಡಬೇಕು ಎನ್ನುವ ನಿರ್ಧಾರದ ಹಂಬಲ – ಇವು ಮುದ್ದಣನ ಮುಂದಿನ ಸಾಲುಗಳಿಂದಲೇ ವ್ಯಕ್ತವಾಗುತ್ತವೆ :

ಮುದ್ದಣ : ಆವ ಧಾಟಿಯೊಳ್ ಪೇಳ್ವೆಂ ? ಪದ್ಯದೊಳ್ ಪೇಳೆನೊ ? ಗದ್ಯದೊಳ್ ಪೇಳ್ವೆನೊ ?

ಮನೋರಮೆ : ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು.

ಹೀಗೆ ಮೊದಲನೆಯ ಆಶ್ವಾಸ 'ಕಥಾಮುಖ' ಮುಂದಿನ ಗ್ರಂಥದ ಮುನ್ನುಡಿ ಅಷ್ಟೆ. ಇಂದಿನ ಲೇಖಕರು 'ಮುನ್ನುಡಿ' ಎಂದು ಪಟ್ಟಿ ಹಚ್ಚಿ ಬರೆಯುವ ಮಾತನ್ನು

ಮುದ್ದಣ 'ಕಥಾಮುಖ'ದಲ್ಲಿ ತುಂಬಿದ್ದಾನೆ. ಮುಂದೆ, ಎರಡನೆಯ ಆಶ್ವಾಸದಿಂದ ಪದ್ಮಪುರಾಣದ ಕತೆಯನ್ನು ಕವಿ ಕೈಗೆತ್ತಿಕೊಳ್ಳುತ್ತಾನೆ.

೨

ರಾಮಾಶ್ವಮೇಧದ ಎರಡನೆಯ ಆಶ್ವಾಸ "ಅಗಸ್ತ್ಯಾಗಮನ". ಇದು ಶೇಷರಾಮಾಯಣದಲ್ಲಿ ಐದನೆಯ ಅಧ್ಯಾಯದಲ್ಲಿ ಬರುವ ಕಥಾಭಾಗ. ಮೊದಲ ನಾಲ್ಕು ಅಧ್ಯಾಯಗಳಲ್ಲಿ ಪಟ್ಟಾಭಿಷೇಕದ ಕಥೆ ಇದೆ. ತನ್ನ ಬೇರೊಂದು ಕೃತಿಯಲ್ಲಿ ಮುದ್ದಣ ಈ ಕಥೆಯನ್ನು ಬಳಸಿಕೊಂಡಿರುವುದರಿಂದ ಇಲ್ಲಿ ಅದನ್ನು ಬೆಳೆಸಲಿಲ್ಲ. "ನಾಲ್ಕುಂ ಉಪಾಯದಂತೆ, ನಾಲ್ಕುಂ ಪುರುಷಾರ್ಥದಂತೆ ಮೈಗೊಂಡು ಪುಟ್ಟಿದ ನಾಲ್ವರ್ ಕುವರರೊಳ್ ಪಿರಿಯಂ ರಾಮಂಗೆ ಪಟ್ಟಾಭಿಷೇಕಮಾಯ್ತು" ಎಂದು ಒಂದೆ ಒಕ್ಕಣೆಯಲ್ಲಿ ಇಡಿಯ ಪೂರ್ವಕಥೆಯನ್ನು ನಿರೂಪಿಸಿ ಮುಂದುವರಿಯುತ್ತಾನೆ.

ಶೇಷರಾಮಾಯಣದ ಐದನೆಯ ಅಧ್ಯಾಯದಲ್ಲಿ ಅಯೋಧ್ಯೆಯ ವರ್ಣನೆ ಬರುತ್ತದೆ; ರಾಮನ ಆಳ್ವಿಕೆಯ ಕಾಲದ ಸಮೃದ್ಧಿಯ ವರ್ಣನೆ ಬರುತ್ತದೆ. ಮುದ್ದಣನ ಕೃತಿಯಲ್ಲೂ ಬರುತ್ತದೆ. ಈ ಎರಡು ವರ್ಣನೆಗಳಲ್ಲಿ ಸಾಕಷ್ಟು ಸಾಮ್ಯವನ್ನು ಕಾಣಬಹುದು :

"ನದ್ಯಃ ಕುಟಿಲಗಾಮಿನ್ಯಃ ನ ಯತ್ರ ವಿಷಯೇ ಪ್ರಜಾಃ।" (೫–೩೪)

ರಾಮನು ರಾಜ್ಯವಾಳುತ್ತಿದ್ದಾಗ ಅಯೋಧ್ಯೆಯಲ್ಲಿ ನದಿಗಳು ಮಾತ್ರವೆ ವಕ್ರಮಾರ್ಗದಲ್ಲಿ ನಡೆಯುತ್ತಿದ್ದವು; ಪ್ರಜೆಗಳಲ್ಲ.

ಈ ವರ್ಣನೆಯ ಮಾತು ಮುದ್ದಣನ ಕೈಯಲ್ಲಿ ರೂಪಾಂತರಗೊಂಡು ಹೀಗೆ ಬಂತು :

"ನಾಡಿಗರೊಳೆಲ್ಲರುಂ ಭೋಗಿಗಳ್ ಕುಟಿಲಗಾಮಿಗಳಲ್ತು."

ಇಲ್ಲಿ ಕವಿ ಪುರಾಣದ ನದಿಯ ಬದಲಿಗೆ ಭೋಗಿ ಶಬ್ದದ ಶ್ಲೇಷವನ್ನು ಬಳಸಿದ್ದಾನೆ. ಭೋಗಿ ಎಂದರೆ ಸುಖಭೋಗಿ ಎನ್ನುವುದು ಪ್ರಕೃತದ ಅರ್ಥ. ಹಾವು ಎನ್ನುವುದು ಮುಂದಿನ ವಿಶೇಷಣದಿಂದ ಧ್ವನಿಸುವ ಅರ್ಥ. ಇದರಿಂದ ಶ್ಲೇಷದ ಜತೆಗೆ ಮೂಲದಲ್ಲಿರುವ ಹೊಸತೊಂದು ಅಲಂಕಾರ – ವಿರೋಧಾಭಾಸ – ಸೇರಿಕೊಂಡಿತು. ಮೂಲಕ್ಕೆ ಒಪ್ಪಕೊಡುವ ಇಂಥ ಹೊಸ ಸಂಯೋಜನೆಗಳು ಅವನ ಪ್ರತಿಭೆಯ ಪ್ರತೀಕವಾಗಿ, ಸ್ವಂತಿಕೆಗೆ ಸಾಕ್ಷಿಯಾಗಿ ಗ್ರಂಥದುದ್ದಕ್ಕೂ ನಮಗೆ ಸಾಕಷ್ಟು ಸಿಗುತ್ತವೆ.

ಇನ್ನೊಂದು ಉದಾಹರಣೆ :

"ತಮೋಯುಕ್ತಾ: ಪ್ರಜಾ ಯತ್ರ ಬಹುಲೇಷು ನ ಮಾನವಾಃ।" (೫–೩೫)

ತಮಸ್ಸು ಕೃಷ್ಣಪಕ್ಷದ ಇರುಳಲ್ಲಿ ಮಾತ್ರವೆ ಇತ್ತು; ಪ್ರಜೆಗಳಲ್ಲಿ ಅಲ್ಲ. ಈ ಮಾತೂ ಮುದ್ದಣನ ಕೈಯಲ್ಲಿ ಚಮತ್ಕಾರವಾಗಿ ಮಾರ್ಪಾಟುಗೊಂಡಿದೆ :

"ಜೈವಾತೃಕರ್ ದೋಷಾಕರರಲ್ತು."

ಜೈವಾತೃಕ ಎಂದರೆ ಚಂದ್ರ ಎಂದು ಒಂದು ಅರ್ಥ. ದೀರ್ಘಜೀವಿ ಎಂದು ಇನ್ನೊಂದು ಅರ್ಥ. ಮೊದಲನೆಯ ಅರ್ಥ ಶ್ಲೇಷದ ವಿರೋಧಕ್ಕೆ ಪೂರಕವಾಗುತ್ತದೆ. ಚಂದ್ರನಾಗಿದ್ದೂ ದೋಷಾಕರನಲ್ಲ. ದೋಷಾ ಎಂದರೆ ರಾತ್ರಿ, ಚಂದ್ರ ರಾತ್ರಿಕಾರಕನಲ್ಲ ಎನ್ನುವುದು ವಿರೋಧ. ಪ್ರಜೆಗಳು ದೀರ್ಘ ಜೀವಿಗಳಾಗಿದ್ದೂ ದೋಷ+ಆಕರರಲ್ಲ ಎನ್ನುವ ಎರಡನೆಯ ಅರ್ಥ ವಿರೋಧವನ್ನು ಪರಿಹರಿಸಿ ಪ್ರಕೃತದ ಪ್ರಸಂಗಕ್ಕೆ ವಿಷಯವನ್ನು ಸಮನ್ವಯಗೊಳಿಸುತ್ತದೆ.

ಹೀಗೆಯೇ "ಸ್ನೇಹತ್ಯಾಗಃ ಖಲೇಷ್ವೇವ" (೫.೪೪) ಎನ್ನುವ ಮಾತು "ಇಳಿನೇಹಂ ತಾಣದೀವಿಗೆಯೊಳ್" ಎಂದು ರೂಪಾಂತರಗೊಂಡು ಬಂದಿದೆ. ಯಾವುದೇ ವರ್ಣನೆಗೂ ತನ್ನತನದ ಮುದ್ರೆ ಒತ್ತದೆ ಬರಿದೆ ಬಟ್ಟಿ ಇಳಿಸುವ ಕೆಲಸವನ್ನು ಮುದ್ದಣ ಮಾಡಿಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಶ್ಲೇಷ–ವಿರೋಧಾಭಾಸಗಳೇ ಕಾವ್ಯದಲ್ಲೆಲ್ಲ ತುಂಬಿದ್ದರೆ ಅಂಥ ಕೆಟ್ಟ ಕಾವ್ಯವನ್ನು ಯಾವ ಸಹೃದಯನೂ ಮೂಸುವುದಿಲ್ಲ. ಕಾವ್ಯಕ್ಕೆ ಅಷ್ಟೊಂದು ಶೋಭೆ ತರದ ಈ ಬೆಟ್ಟೆ ಅಲಂಕಾರಗಳನ್ನು ಮುದ್ದಣ ಹದವರಿತು, ಅವುಗಳ ಬೆಟ್ಟೆತನವನ್ನು ಅರ್ಥ ಮಾಡಿಕೊಂಡು ಸಾಕಷ್ಟು ಎಚ್ಚರದಿಂದ ಮಿತವಾಗಿ ಬಳಸಿಕೊಂಡದ್ದರಿಂದಲೇ ಅವನ ಕಾವ್ಯ ಕೆಟ್ಟ ಕಾವ್ಯ ಆಗಲಿಲ್ಲ. ಇವುಗಳನ್ನು ಪೂರ್ತಿ ಕೈಬಿಡುವಷ್ಟು ಇಂದ್ರಿಯ ನಿಗ್ರಹ ಹಿಂದಿನ ಯಾವ ಕವಿಗೂ ಇರಲಿಲ್ಲ. ಅಂತು ಇಂಥ ಅಯೋಧ್ಯೆಗೆ "ಆಜಗಾಮ ಮುನಿಶ್ರೇಷ್ಠಃ ಕುಂಭೋತ್ಪತ್ತಿರ್ಮುನಿರ್ಮಹಾನ್." ಮುದ್ದಣನೂ ಆಶ್ವಾಸವನ್ನು ಉಪಸಂಹರಿಸುತ್ತ ಹೇಳುತ್ತಾನೆ : "ಕುಂಭೋದ್ಭವಂ ಶ್ರೀರಾಮನೋಲಗಕೆ ಬರುತುಮಿರ್ದಂ."

೩

ಮೂರನೆಯ ಆಶ್ವಾಸ "ಯಜ್ಞೋಪದೇಶ". ಶೇಷರಾಮಾಯಣದ ೬ ರಿಂದ ೮ ಮತ್ತು ೯ನೆಯ ಅಧ್ಯಾಯದ ಕೆಲವು ಶ್ಲೋಕಗಳ ಕಥೆ ಈ ಒಂದು ಆಶ್ವಾಸದಲ್ಲಿ ಸಂಗ್ರಹವಾಗಿ ಬಂದಿದೆ.

ತಾನು ಕೊಂದ ರಾವಣನ ಕುಲ–ಗೋತ್ರಗಳನ್ನು ರಾಮ ಅಗಸ್ತ್ಯನ ಬಳಿ ಕೇಳುತ್ತಾನೆ :

"ಕೋऽಸೌ ಮಯಾ ಹತೋ ಯೋ ಹಿ ರಾವಣೋ ವಿಬುಧಾರ್ದನಃ ।
ಕುಂಭಕರ್ಣೋऽಪಿ ಕಸ್ತ್ವೇಷ ಕಾ ಜಾತಿರ್ವೈ ದುರಾತ್ಮನಃ ॥" (೬–೧೪)

ನಮ್ಮ ಮುದ್ದಣನ ರಾಮನೂ ಹೀಗೆಯೆ ಕೇಳುತ್ತಾನೆ :

"ಅಂತಿರ್ದ ರಾವಣ-ಕುಂಭಕರ್ಣರೆಂದೊಡೆ ಆರವರ್ ? ಪುಟ್ಟು ಏತರ್ಕೆ ? ಎಂತು ?"

ಇಲ್ಲಿ ಮೂಲದ "ಕಾ ಜಾತಿಃ" ಎನ್ನುವುದನ್ನು "ಪುಟ್ಟು ಏತಕೆ ? ಎಂತು ?" ಎಂದು ಮುದ್ದಣ ಕನ್ನಡಿಸಿದ್ದಾನೆ. ಎರಡು ಭಾಷೆಗಳಲ್ಲು ಕವಿಗೆ ತೂಕದ ಪಾಂಡಿತ್ಯ ಇತ್ತು ಎನ್ನುವುದಕ್ಕೆ ಇದು ನಿದರ್ಶನ. ಬೇರೆ ಯಾರಾದರೂ ಆಗಿದ್ದರೆ 'ಅವನು ಯಾವ ಜಾತಿಯವನು ?' ಎಂದು ಅನುವಾದಿಸಿ ಬಿಡುತ್ತಿದ್ದರು.

ಅಗಸ್ತ್ಯ ರಾವಣನ ಜನನದ ಕಥೆ ಹೇಳುತ್ತಾನೆ. ಅದಕ್ಕೆ ಪೂರಕವಾಗಿ ಜಯವಿಜಯರಿಗೆ ಸನಕಸನಂದನರ ಶಾಪದ ಪೂರ್ವ ಕಥೆಯನ್ನು ಮುದ್ದಣ ಸೇರಿಸಿಕೊಂಡಿದ್ದಾನೆ. ಮೂಲದಲ್ಲಿ ಈ ಮಾತು ಮುಂದೆ ಸೂಚ್ಯವಾಗಿ ಮಾತ್ರ ಬಂದಿದೆ.

"ರಾವಣೋಽಪಿ ನವೈ ದೈತ್ಯಃ ವೈಕುಂಠೇ ತವ ಸೇವಕಃ ।
ಋಷೀಣಾಂ ಶಾಸತೋ ವಾಪ್ತೋ ದೈತ್ಯತ್ವಂ ದನುಜಾಂತಕಃ ॥" (೮-೨೧)

ಅಲ್ಲಿಂದ ಮುಂದೆ ವಿಶ್ರವಸನ ಸಂತತಿಯ ಕಥೆ ಬರುತ್ತದೆ :

"ಬ್ರಹ್ಮಂಗೆ ಪೌಲಸ್ತ್ಯನೆನಿಪ ಮಾನಸಪುತ್ರನೊರ್ವನುಂಟು. ಈತನಿಂ ವಿಶ್ರವಸ್ಸು ಪುಟ್ಟಿದಂ. ಈತಂಗೆ ಮಂದಾಕಿನೀ ಕೈಕಸೆಯರೆನುತ ಇರ್ವರ್ ಪೆಂಡಿರೊಳರ್. ಪಿರಿಯಳ್ಗೆ ಧನದಂ ಕಿರಿಯಳ್ಗೆ ರಾವಣ ಕುಂಭಕರ್ಣ ವಿಭೀಷಣ ಶೂರ್ಪನಖೆಯರ್ ಉದ್ಭವಿಸಿದರ್."

ಈಗ ಶೇಷರಾಮಾಯಣದ ಈ ಭಾಗವನ್ನು ನೋಡಿ :

"ರಾಜನ್ ಸೃಷ್ಟಿಕರೋ ಬ್ರಹ್ಮಾ ಪುಲಸ್ತ್ಯಸ್ತತ್‌ಸುತೋ ಭವತ್ ।
ತತಸ್ತು ವಿಶ್ರವಾ ಜಜ್ಞೇ ವೇದವಿದ್ಯಾವಿಶಾರದಃ ॥

ತಸ್ಯ ಪತ್ನೀದ್ವಯಂ ಜಾತಂ ಪಾತಿವ್ರತ್ಯ ಚರಿತ್ರಭೃತ್ ।
ಏಕಾ ಮಂದಾಕಿನೀ ನಾಮ್ನಾ ದ್ವಿತೀಯಾ ಕೈಕಸೀ ಸ್ಮೃತಾ ॥

ಪೂರ್ವಸ್ಯಾಂ ಧನದೋ ಜಜ್ಞೆ ಲೋಕಪಾಲವಿಲಾಸಭೃತ್ ।
ಯೋಽಸೌ ಶಿವಪ್ರಸಾದೇನ ಲಂಕಾವಾಸಮಚೀಕರತ್ ॥

ವಿದ್ಯುನ್ಮಾಲಿಸುತಾಯಾಂ ತು ಪುತ್ರತ್ರಯಮಭೂನ್ಮಹತ್ ।
ರಾವಣಃ ಕುಂಭಕರ್ಣಶ್ಚ ತಥಾ ಪುಣ್ಯೋ ವಿಭೀಷಣಃ ॥" (೬.೧೭-೨೦)

ಮುದ್ದಣನ ಅಗಸ್ತ್ಯನೂ ಇದೇ ಮಾತನ್ನು ಕನ್ನಡದಲ್ಲಿ ಹೇಳುತ್ತಾನೆ. ಬಹಳ ವ್ಯತ್ಯಾಸವೇನೂ ಇಲ್ಲ. ಶೂರ್ಪಣಖೆಯ ಮಾತು ಒಂದು ಹೆಚ್ಚು ಬಂದಿದೆ. ಮುಂದೆ ಮೂಲದಲ್ಲಿ ರಾವಣನ ದೌರಾತ್ಮ್ಯ, ಲಂಕಾ ವಿಜಯದ ಕಥೆ, ಸಜ್ಜನರನ್ನು ತುಳಿದ

ಕಥೆ, ಅದಕ್ಕಾಗಿ ದೇವತೆಗಳು ಭಗವಂತನ ಬಳಿ ಪ್ರಾರ್ಥಿಸಿಕೊಂಡದ್ದು, ಭಗವಂತನು ರಾಮನಾಗಿ ಅವತರಿಸಿದ್ದು ಈ ಎಲ್ಲ ಸಂಗತಿಗಳು ಸಾಕಷ್ಟು ವಿವರವಾಗಿ ಬಂದಿವೆ. ರಾಮನ ಮುಂದೆಯೆ ರಾಮನ ಅವತಾರದ ಕಥೆಯನ್ನು ಬಣ್ಣಿಸುವ ಅವಶ್ಯಕತೆಯಿಲ್ಲ ಎಂದು ಮನಗಂಡ ಮುದ್ದಣ ಆ ಭಾಗವನ್ನು ಕೈಬಿಟ್ಟಿದ್ದಾನೆ. ಆದರೆ ಮುಂದೆ 'ನಿನ್ನ ಅವತಾರದ ಕಥೆ ನಮಗೆ ಗೊತ್ತಿಲ್ಲವೆ ?' ಎಂದು ರಾಮನ ಬಳಿ ಅಗಸ್ತ್ಯ ಅಣಕವಾಡುವಂತೆ ಆ ಮಾತು ಸೇರಿಸಿದ್ದಾನೆ :

"ಎಂ ಕೇಳ್ದು ಅರಿಯೆವೆ ದಾನವರ ಉಪಟಳಕೆ ಬಣ್ಣಂಗುಂದಿ ಬಾರ್ತೆಗೆಟ್ಟು ದೂರಿದ ಬರ್ದಿಲರ್ಗೆ ನಾರಾಯಣಂ – ಸೈರಿಪುದು ಸೈರಿಪುದು ಪಂತಿ ದೇರಂಗೆ ರಾಮವೆಸರಿಂ ಪುಟ್ಟುವನ್ನಂ ಎಂದು ಸೈತಿಟ್ಟು ಮರಳ್ದಿದ ತೆರನಂ ?".......

ಮೂಲದಲ್ಲಿರದ ಭಾಗವನ್ನು ಸೇರಿಸುವಾಗ ಹೇಗೆ ಹಾಗೆ ಮೂಲದಲ್ಲಿರುವ ಕೆಲವು ಭಾಗವನ್ನು ಕೈಬಿಡುವಾಗ ಕೂಡ ಕವಿ ಕಾವ್ಯಶಿಲ್ಪದ ಒಟ್ಟಂದ ಕೆಡದಂತೆ ಎಚ್ಚರವಹಿಸಿದ್ದಾನೆ. ಕಾವ್ಯದ ಸಮಗ್ರತೆಗೆ ಪೋಷಕವಲ್ಲ ಎನಿಸಿದ ಕಥಾಭಾಗವನ್ನು ಕೈಬಿಡಲು ಅವನು ಎಂದೂ ದಾಕ್ಷಿಣ್ಯ ಮಾಡಿಲ್ಲ. ಚಿಕಿತ್ಸಕ ದೃಷ್ಟಿಯಿಂದಲೇ ಅವನು ಮೂಲವನ್ನು ಬಳಸಿಕೊಂಡಿದ್ದಾನೆ ಹೊರತು ಪುರಾಣ ಭಕ್ತಿಯಿಂದಲ್ಲ.

ರಾವಣನನ್ನು ಕೊಂದು ಬಂದ ಬ್ರಹ್ಮಹತ್ಯೆಯ ಪರಿಹಾರಕ್ಕಾಗಿ ಅಶ್ವಮೇಧವನ್ನು ಮಾಡುವಂತೆ ಅಗಸ್ತ್ಯರು ಸೂಚಿಸುತ್ತಾರೆ. ಈ ಅಶ್ವಮೇಧದ ಅಶ್ವ ಎಂಥದಿರಬೇಕು ? ವ್ಯಾಸರು ಹೇಳುತ್ತಾರೆ :

ಗಂಗಾಜಲಸಮಾನೇನ ವರ್ಣೇನ ವಪುಷಾ ಶುಭಃ ।
ಕರ್ಣೇ ಶ್ಯಾಮೋ ಮುಖೇ ರಕ್ತಃ ಪೀತಃ ಪುಚ್ಛೇ ಸುಲಕ್ಷಿತಃ ॥" (೯.೨)

ಮುದ್ದಣನೂ ಇದನ್ನೇ ಅಚ್ಚಗನ್ನಡದಲ್ಲಿ ಹೇಳುತ್ತಾನೆ :

ಮೈಯೊಳ್ ಬೆಳ್ಪು, ಕೊಂಡಂಕೆಯೊಳ್ ಕರ್ಪು, ಮೊಗದೊಳ್ ಕೆಂಕಂ, ಬಾಲದೊಳ್ ಪೊಂಬಣ್ಣಂ..."

ವ್ಯಾಸರು "ಉಚ್ಚೈಶ್ರವಃ ಸಮಪ್ರಭಃ" ಎನ್ನುತ್ತಾರೆ. ಮುದ್ದಣ "ಮೆಯ್ಗಣ್ಣನ ಕುದುರೆಯೊಂದಂ ಪೋಲ್ವುದೈಸೆ" ಎನ್ನುತ್ತಾನೆ.

ಕುದುರೆಯನ್ನು ಬಿಡುವ ದಿನ, ವಿಧಿ ಎಂಥದು ? ಮುದ್ದಣ ಹೇಳುತ್ತಾನೆ :

"ವಿಧಿ ಇಂತುಟು, ಬೇಸಗೆಯ ಹುಣ್ಣಿವೆಯೊಳ್ ಅಂತಪ್ಪ ಹಯಮನರ್ಚಿಸಿ ಹಣೆಯೊಳ್ ಬಿಳಿವಿರುದಂ ತನ್ನಗ್ಗಳಿಕೆಯಂ ಬರೆದು ಓಲೆಯಂ ಬಿಗಿದು ನಾಡೊಳ್ ಒರ್ಕಾಲಂ ಯಥೇಷ್ಟಂ ತೊಳಲಲ್ಕೆ ಬಿಡುವುದು. ಎಂತೆಂತು ಕುದುರೆಯ ಬಟ್ಟೆ ಅಂತಂತು ಬೆಂಬತ್ತುವುದು ಕಾಪಿನ ಭಟರ್."

ಇದರ ಸಂಸ್ಕೃತ ಮೂಲ ಹೀಗಿದೆ :

"ವೈಶಾಖಪೂರ್ಣಮಾಸ್ಯಾಂ ತು ಪೂಜಯಿತ್ವಾ ಯಥಾವಿಧಿ ।
ಪತ್ರಂ ಲಿಖಿತ್ವಾ ಭಾಲೇತು ಸ್ವನಾಮಬಲಚಿಹ್ನಿತಮ್ ॥

ಮೋಚನೀಯಃ ಪ್ರಯತ್ನೇನ ರಕ್ಷಕೈಃ ಪರಿರಕ್ಷಿತಃ ।
ಯತ್ರ ಗಚ್ಛತಿ ಯಜ್ಞಾಶ್ವಃ ತತ್ರ ಗಚ್ಛೇತ್ ಸುರಕ್ಷಕಃ ॥" (೯.೪-೫)

ಇಂಥ ಕಡೆಗಳಲ್ಲೆಲ್ಲ ಮುದ್ದಣ ಮೂಲದ ಯಥಾಪ್ರತಿ ನಕಲನ್ನೂ ಕೊಡುತ್ತಾನೆ. ಕೆಲವೊಮ್ಮೆ ಒಳ್ಳೆಯ ಕವಿಯಂತೆ, ಕೆಲವೊಮ್ಮೆ ಒಳ್ಳೆಯ ಅನುವಾದಕನಂತೆ ಅವನು ನಡೆದುಕೊಳ್ಳುತ್ತಾನೆ.

ಈ ಒಂದು ವರ್ಷ ಕಾಲ ಯಜ್ಞ ದೀಕ್ಷಿತನಾದ ಯಜಮಾನ ಹೇಗಿರಬೇಕು ? ವಾತ್ಸ್ಯಾಯನ ಶೇಷನಿಗೆ ಈ ವಿವರ ಕೊಟ್ಟಿದ್ದಾನೆ :

"ಮೃಗಶೃಂಗಧರೋ ಭೂತ್ವಾ ಬ್ರಹ್ಮಚರ್ಯ ಸಮನ್ವಿತಃ ।
ವ್ರತಂ ಪಾಲಯಮಾನಶ್ಚ ಯಾವದ್ ವರ್ಷಮತಿಕ್ರಮೇತ್ ॥

ತಾವದ್ ದೀನಾಂಧಕೃಪಣಾಃ ಪರಿತೋಷ್ಯಾ ಧನಾದಿಭಿಃ ।
ಅನ್ನಂತು ಬಹುಶೋ ದೇಯಂ ಧನಂ ವಾ ಭೂರಿ ಮಾರಿಷ ॥" (೯.೭-೮)

ಮುದ್ದಣ ಇದನ್ನೆಲ್ಲ ಹೇಳುತ್ತಾನೆ; ಜತೆಗೆ ಇದರಲ್ಲಿ ಹೇಳದ್ದನ್ನೂ ಕೆಲವನ್ನು ಹೇಳುತ್ತಾನೆ. ಮುದ್ದಣನ ರಾಮನಿಗೆ ಅನುಷ್ಠಾನ ಸ್ವಲ್ಪ ಹೆಚ್ಚು :

"ಎನ್ನೆವರಂ ಅಶ್ವಂ ಇಳೆಯೊಳ್ ಸಂಚರಿಕುಂ ಅನ್ನೆವರಂ ಯಜಮಾನಂ ಮೃಗಶೃಂಗಧರಂ ನವನೀತವಿಲಿಪ್ತ ಸುಗಾತ್ರಂ ಬ್ರಹ್ಮಚರ್ಯವ್ರತಮನಪ್ಪು ಕೆಯ್ದು, ನಮೆವ ದೀನಾಂಧಬಧಿರರಂ ದಾನಧರ್ಮಂಗಳಿಂ ಪಾಲಿಸುತುಂ, ಬ್ರಾಹ್ಮಣರಂ ಭೋಜನದಿಂ ಸಂತುಷ್ಟಿಗೊಳಿಸುತುಂ, ಕಾಣಲ್ಕೆಂದು ಬರ್ಪ ಪುರದ ಮನ್ನೆಯರಂ ಮನ್ನಿಸುತುಂ ಐದೆಯರನ್ಯೆದೆ ಪೂಜಿಸುತುಂ, ಕಾಲಮಂ ಸಮೆಯಲಕ್ಕುಂ..."

ಹೀಗೆ ಕಥನದ ಭಾಗ ಬಂದಹಾಗೆಲ್ಲ ಮುದ್ದಣ ಉದ್ದೋ ಉದ್ದಕ್ಕೆ ಮೂಲದ ಅನುವಾದವನ್ನು ಚೊಕ್ಕವಾದ ಕನ್ನಡದಲ್ಲಿ ಕೊಡುತ್ತಾ ಹೋಗುತ್ತಾನೆ. ಅಲ್ಲೊಂದು, ಇಲ್ಲೊಂದು ಹೊಸ ವಿಶೇಷಣಗಳ ಸೇರ್ಪಡೆ. ಮೂಲದಲ್ಲಿರದ ಕೆಲ ಹೊಸ ವಿಶೇಷಣಗಳನ್ನು ಸೇರಿಸುವ ಮುದ್ದಣನ ಉದ್ದೇಶವೇನು ಎನ್ನುವುದು ಸ್ಪಷ್ಟವಾಗಿ ಗೊತ್ತಾಗುವುದಿಲ್ಲ. ಉದಾ : 'ನವನೀತವಿಲಿಪ್ತಸುಗಾತ್ರಂ' ತಾನು ಎಂದೋ ಎಲ್ಲೋ ಕೇಳಿದ ಒಂದು ಸಂಪ್ರದಾಯದ ಮಾತನ್ನು ಇಲ್ಲಿ ಸೇರಿಸಬೇಕು. ಇಲ್ಲವಾದರೆ ರಾಮ ಮೈಗೆಲ್ಲ ಬೆಣ್ಣೆ ಬಳಿದುಕೊಳ್ಳುವ ಅಗತ್ಯವೇನಿತ್ತೊ ಮುದ್ದಣನಿಗೇ ಗೊತ್ತು!

೪

ನಾಲ್ಕನೆಯ ಆಶ್ವಾಸ 'ಗರ್ಭಧಾರಣಂ'. ಈ ಇಡಿಯ ಆಶ್ವಾಸವೆ ಮುದ್ದಣನ ಕಲ್ಪನಾವಿಲಾಸ. ಸೀತೆಗೆ ಮಕ್ಕಳಾಗಲಿಲ್ಲ ಎನ್ನುವ ಕೊರಗು. ಅದಕ್ಕೆ ರಾಮನ ಸಂತೈಕೆ, ಹೀಗೆ ಬಹಳ ಕಾಲದ ಅನಂತರ ಸೀತೆ ಬಸಿರಿಯಾದದ್ದು – ಈ ಕಥೆ ರಾಮಾಶ್ವಮೇಧದಲ್ಲಿ ಬರುವುದಿಲ್ಲ. ರಾಮಾಯಣದಲ್ಲೂ ಬರುವುದಿಲ್ಲ, ಸಂಸ್ಕೃತದ ರಾಮಾಯಣಗಳ ಪ್ರಕಾರ ರಾಮ–ಸೀತೆಯರ ಅನ್ಯೋನ್ಯ ದಾಂಪತ್ಯದ ಫಲವಾಗಿ ಸೀತೆ ಬಸಿರಿಯಾಗುತ್ತಾಳೆ – ಅಷ್ಟೆ. ಅಲ್ಲಿ ತಾಯ್ತನದ ಹಂಬಲ, ಮಕ್ಕಳಾಗದ ಕೊರಗು ಎಲ್ಲೂ ಕಾಣಿಸುವುದಿಲ್ಲ. ಇದಕ್ಕೆ ಪೌರಾಣಿಕವಾದ ಕಾರಣವುಂಟು : ದಶರಥ ಅರುವತ್ತು ಸಾವಿರ ವರ್ಷಗಳು ದಾಟಿದ ಮೇಲೆ ಮಕ್ಕಳಾಗಲಿಲ್ಲ ಎಂದು ಯಾಗಕ್ಕೆ ತೊಡಗಿದವ. ಆದರೆ ರಾಮನಿಗಿನ್ನೂ ಐವತ್ತು ವರ್ಷ ಕೂಡ ಆಗಿಲ್ಲ; ಮಕ್ಕಳಾಗಿಲ್ಲ ಎಂದು ಗಾಬರಿಯಾಗುವ, ಪರಿತಪಿಸುವ ವಯಸ್ಸು ಬಂದಿಲ್ಲ.

ಮುದ್ದಣ ಮಾತ್ರ ಇಂಥ ಒಂದು ಪ್ರಸಂಗವನ್ನು ಮೂಲದಲ್ಲಿ ಇಲ್ಲ ಎಂದು ಕೈಬಿಡಲಿಕ್ಕೆ ಸಿದ್ಧನಿಲ್ಲ. ತನ್ನ ಪ್ರತಿಭೆಯ ಎಳೆ–ಎಳೆಯನ್ನೂ ಈ 'ನಿರ್ಮೂಲ'ವಾದ ಕತೆಯ ಬಿತ್ತರದಲ್ಲಿ ಅವನು ಸಾರ್ಥಕಪಡಿಸಿಕೊಳ್ಳುತ್ತಾನೆ. ಕವಿ ಮುದ್ದಣ ಈ ಆಶ್ವಾಸದಲ್ಲಿ ಬಾಣಭಟ್ಟನನ್ನು ನೆನಪಿಗೆ ತರುತ್ತಾನೆ.

೫

ಐದನೆಯ ಆಶ್ವಾಸ ಸೀತಾಪರಿತ್ಯಾಗ. ಇದು ರಾಮಾಶ್ವಮೇಧ ಮೂಲದಲ್ಲಿ ೫೫ನೆಯ ಅಧ್ಯಾಯದಲ್ಲಿ, ಲವ ರಾಮನ ಯಜ್ಞಾಶ್ವವನ್ನು ಕಟ್ಟಿ ಹಾಕಿದ ಪ್ರಸಂಗದಲ್ಲಿ ಬರುತ್ತದೆ. ಆದರೆ ಕಥೆಯ ಸಾಂಗತ್ಯದ ಚೆಲುವಿನ ದೃಷ್ಟಿಯಿಂದ ಮುದ್ದಣ ಮೂಲದ ಕ್ರಮವನ್ನು ಬದಲಿಸಿ ಆ ಕಥೆಯನ್ನು ಮೊದಲೇ ಹೇಳಿ ಬಿಡುತ್ತಾನೆ. ಅದಕ್ಕೆ ಅವನು ನಿರ್ಮಿಸಿಕೊಂಡ ಪ್ರಸಂಗವೂ ಸುಂದರವಾಗಿದೆ. ಸೀತೆಯ ಸ್ವರ್ಣ ಪ್ರತಿಮೆಯನ್ನು ಕೂಡಿಕೊಂಡು ರಾಮ ಯಾಗ ಮಾಡಿದ ಎಂದು ಮುದ್ದಣ ನುಡಿದಾಗ – ಮನೋರಮೆ 'ಏಕೆ ಸ್ವರ್ಣಪ್ರತಿಮೆ ? ಸೀತೆ ಏನಾದಳು' ಎನ್ನುತ್ತಾಳೆ ಮನೋರಮೆ. ಈ ಪ್ರಶ್ನೆಗೆ ಉತ್ತರವಾಗಿ ಸೀತಾ ಪರಿತ್ಯಾಗದ ಕಥೆ ಬರುತ್ತದೆ :

"ವಸಿಷ್ಠಂ ರಾಘವಂಗೆ ಪೊನ್ನಸೀತೆವೆರಸು ವ್ರತಮನಪ್ಪುಕೆಯ್ವುದೆಂದಳ್ಪರಿಸಿದಂ. ಮನೋರಮೆ – ರಮಣ, ಇಂತಿದೇಂ ಪೊನ್ನ ಸೀತೆಯೆಂಬೈ ? ರನ್ನ ಸೀತೆಯೆತ್ತವೋದಳ್ ?"

ಇಲ್ಲಿ, "ನಹಿ, ನಹಿ, ಹಿರಣ್ಮಯೀ ಸೀತಾಪ್ರತಿಕೃತಿಃ" ಎಂದ ಮಹಾಕವಿ ಭವಭೂತಿಯ ಮೇರುಕೃತಿ ಉತ್ತರರಾಮಚರಿತದ ಪ್ರಭಾವ ಮುದ್ದಣನ ಮೇಲೆ ಬಿದ್ದಿದೆ ಎನ್ನುವುದು ಸ್ಪಷ್ಟ.

೫೫ ರಿಂದ ೫೮ರ ತನಕದ ನಾಲ್ಕು ಅಧ್ಯಾಯಗಳ ಕತೆ ಈ ಒಂದು ಆಶ್ವಾಸದಲ್ಲಿ ಬಂದಿದೆ. ಜತೆಗೆ ಮುದ್ದಣನಿಗೇ ಮೀಸಲಾದ ಬಣ್ಣನೆಯ ಚೆನ್ನು ಮಾತುಗಳು. ಆದರೆ ಕತೆಯಲ್ಲಿ ಹೇಳಿಕೊಳ್ಳುವ ವ್ಯತ್ಯಾಸವೇನೂ ಇಲ್ಲ. ಪರಿಚ್ಛೇದದ ಪೂರ್ವಾಪರೀಭಾವದಿಂದ ಆದ ವ್ಯತ್ಯಾಸ ಎಷ್ಟೊ ಅಷ್ಟೆ. ಸೀತೆ ಬಾಲ್ಯದಲ್ಲಿ – ಒಂದು ಹೆಣ್ಣು ಗಿಳಿಯನ್ನು ಬಂಧಿಸಿ ಅದರ ಪ್ರಿಯಕರನ ವಿಯೋಗಕ್ಕೆ ಕಾರಣಳಾದದ್ದರಿಂದ ಅವಳಿಗೆ ಇಂಥ ಪತಿವಿರಹ ಪ್ರಾಪ್ತವಾಯಿತು ಎಂಬ ಒಂದು ಪೂರ್ವೈತಿಹ್ಯವನ್ನು ಮಾತ್ರ ಮುದ್ದಣ ಕೈಬಿಟ್ಟಿದ್ದಾನೆ.

ಈ ಪ್ರಸಂಗದಲ್ಲಿ ಪದ್ಮಪುರಾಣದ ಒಂದು ಶ್ಲೋಕ ಮುದ್ದಣನಿಗೆ ಸ್ಫೂರ್ತಿಯ ಸೆಲೆಯನ್ನೇ ಚಿಮ್ಮಿಸಿದ ಒಂದು ಉದಾಹರಣೆಯನ್ನು ನೋಡಬೇಕು :

"ಸೂರ್ಯೋ ಜಗತ್ ಪ್ರಕಾಶಾಯ ಸಮುದೇತಿ ಜಗತ್ಪ್ರಹೋ ।
ಉಲೂಕಾನಾಂ ರುಚಿಕರೋ ನ ಭವೇತ್ ತತ್ರ ಕಾ ಕ್ಷತಿಃ ॥" (೫೮–೧೨)

"ನರಿಯೂಳಿಡೆ ಸುರಲೋಕಂ ಪಾಳ್ ಪೋಕುಮೆ ! ನಾಯ್ ಬಗುಳೆ ರಾವುತಂ ಕೀರುಗುಮೆ ! ಪಂದಿಯೊಂದು ಡುರುಕೆಂದೊಡೆ ಸಿಂಗಮಂಡಲೆವುದೆ ! ಕೂಳಂ ಕೊರಚಾಡೆ ನೀಸೊಂದಾಡುವುದೇ !"

೬

ಆರನೆಯ ಆಶ್ವಾಸ ವಾಲ್ಮೀಕಿ ದರ್ಶನ. ಪಾತಾಳ ಖಂಡದ ೫೯ನೆಯ ಅಧ್ಯಾಯದ ಕಥೆ. ಇಲ್ಲಿ ಸೀತೆ ವಾಲ್ಮೀಕಿಯನ್ನು ಕಂಡಾಗ ಮತ್ತೆ ರಾವಣನ ಸನ್ಯಾಸಿ ರೂಪವನ್ನು ನೆನೆದು ಹೆದರಿಕೊಂಡದ್ದು, ಅದಕ್ಕೆ ವಾಲ್ಮೀಕಿ ಸಂತೈಸಿದ್ದು – ಈ ಪ್ರಸಂಗವನ್ನು ಮುದ್ದಣ ತನ್ನ ಕೃತಿಯಲ್ಲಿ ಸೇರಿಸಿ ಕಾವ್ಯದ ಚಮತ್ಕಾರವನ್ನು ಹೆಚ್ಚಿಸಿದ್ದಾನೆ.

ಪದ್ಮಪುರಾಣದ ಸೀತೆ ಋಷಿ ವಾಲ್ಮೀಕಿ ಬಂದ ಕೂಡಲೇ ಯಾರು – ಏನು ಎಂದು ತಿಳಿಯುವ ಮುನ್ನವೇ ತನ್ನ ಪರಿಚಯ ಹೇಳಿ ನಮಸ್ಕರಿಸುತ್ತಾಳೆ. ಆದರೆ ಮುದ್ದಣನ ಸೀತೆ ವಾಲ್ಮೀಕಿಯನ್ನು ಕಂಡ ಕೂಡಲೇ ಬೆಚ್ಚಿ ಚೀಳುತ್ತಾಳೆ.

"ಸೀತೆ ಮುನ್ನಿನೊಂದು ಜನ್ನಮಂ ನೆನೆದು ರಕ್ಕಸರ ಮಾಯೆಯೆಂದೇ ಬಗೆದು – ಎನ್ನಾಣೆ, ರಾಯನಾಣೆ, ಪತ್ತೆ ಸಾರದಿರ್, ಸಾರದಿರ್ – ಎಂದು ಕಿಸುಗಣ್ಚಿ ಮರನಂ ಮರೆವೋದಳ್."

ಆಗ ವಾಲ್ಮೀಕಿಯೆ ಆಕೆಗೆ ಭರವಸೆ ನೀಡಬೇಕಾಗುತ್ತದೆ :

"ದೇವೀ, ರಾಮನಾಣೆ ! ತನ್ನಾಣೆ ! ಆಂ ಕವಡುದವಸಿಯಲ್ತು, ವಾಲ್ಮೀಕಿ ಕಣಾ !"

೭-೧೬

ಅಲ್ಲಿಂದ ಮುಂದೆ ಅಶ್ವದ ದಿಗ್ವಿಜಯದ ಕಥೆ ಪ್ರಾರಂಭ. ಏಳನೆಯ ಆಶ್ವಾಸದಿಂದ ಹದಿನಾರನೆಯ ಆಶ್ವಾಸದ ಕುದುರೆ ದೇಶದ ಎಲ್ಲೆಡೆಯೂ ಸುತ್ತಾಡಿ – ಮರಳಿ ಬಂದು ಜತೆಗೆ ಸೀತೆ, ಕುಶಲವರು ದೊರೆತು, ಸಂಭ್ರಮದ ಅಶ್ವಮೇಧದೊಡನೆ ಮುದ್ದಣನ ಮಂಗಳಾಂಕವಾಗಿ ಮುಕ್ತಾಯವಾಗುತ್ತದೆ. ಮುದ್ದಣನ ಕುದುರೆ ಯಾವ ಕ್ರಮದಲ್ಲಿ, ಯಾವ ಊರುಗಳಿಗೆಲ್ಲ ಹೋಗುತ್ತದೆ – ಅದೇ ಕ್ರಮದಲ್ಲಿ ಅದೇ ಊರುಗಳಿಗೆ ಪದ್ಮಪುರಾಣದ ಕುದುರೆಯೂ ಚಲಿಸುತ್ತದೆ. ಆದರೆ ಎಲ್ಲಿಯೂ ಮುದ್ದಣ ತನ್ನ ಸ್ವಂತಿಕೆಯನ್ನು ಮಾತ್ರ ಕಳೆದುಕೊಳ್ಳುವುದಿಲ್ಲ. ಪದ್ಮಪುರಾಣದ ಸಾಕ್ಷಾತ್ ಛಾಯೆ ಕಂಡಲ್ಲಿ ಕೂಡ ಮುದ್ದಣನದೇ ಆದ ಒಂದು ನಿರ್ಮಿತಿ ಅಲ್ಲಿ ಎದ್ದು ಕಾಣದೇ ಇರುವುದಿಲ್ಲ. ಕಾಳಿದಾಸನ ಶಾಕುಂತಲ ಮಹಾಭಾರತದ ಶಾಕುಂತಲೋಪಾಖ್ಯಾನದಿಂದ ಹೇಗೆ ಗತಾರ್ಥವಾಗುವುದು ಸಾಧ್ಯವಿಲ್ಲವೋ ಹಾಗೆ, ಭವಭೂತಿಯ 'ಉತ್ತರ ರಾಮಚರಿತೆ' ವಾಲ್ಮೀಕಿ ರಾಮಾಯಣದ ಉತ್ತರ ಕಾಂಡದಿಂದ ಹೇಗೆ ಗತಾರ್ಥವಾಗುವುದು ಸಾಧ್ಯವಿಲ್ಲವೋ ಹಾಗೆ ಮುದ್ದಣನ 'ರಾಮಾಶ್ವಮೇಧ' ಪದ್ಮಪುರಾಣದಿಂದ ಗತಾರ್ಥವಾಗದ ಒಂದು ರಮ್ಯ ಕಾವ್ಯ. ಇದು ಅನೇಕ ಸ್ವತಂತ್ರ ಕೃತಿಗಳಿಗಿಂತ ಹೆಚ್ಚು ಸ್ವತಂತ್ರವಾಗಿದೆ. ಶೇಷನೋ ವಾತ್ಸ್ಯಾಯನನೋ, ಯಾರು ಯಾರಿಗೆ ಬೇಕಾದರೆ ಹೇಳಿರಲಿ. ನಮ್ಮ ಮಟ್ಟಿಗೆ ಇದು ಮುದ್ದಣನೇ ಹೇಳಿದ್ದು; ಮನೋರಮೆಗೇ ಹೇಳಿದ್ದು.

ಈ ಲೇಖನವನ್ನು ನಾನು ಇಲ್ಲಿಗೇ ಮೊಟಕುಗೊಳಿಸುತ್ತಿರುವುದರ ಮುಖ್ಯ ಕಾರಣ – ಶೇಷ ರಾಮಾಯಣ ಮತ್ತು ಮುದ್ದಣ ರಾಮಾಯಣ ಎರಡೂ ಮಹತ್ತ್ವದ ಕಾವ್ಯ ನಿರ್ಮಾಣಗಳು ಎನ್ನುವುದೇ ಆಗಿದೆ. ಇವುಗಳ ವಿಸ್ತಾರವಾದ ತುಲನೆ – ವಿಮರ್ಶೆಗಳಿಗೆ ಒಂದು ಮಹಾ ಪ್ರಬಂಧವೇ ರಚನೆಯಾಗುವಷ್ಟು ಆಹಾರವುಂಟು. ಅಂಥ ಪ್ರಚೋದನೆ ಯಾರಿಗಾದರೂ ಆಗುವುದಾದರೆ – ಮುಂದೊಂದು ದಿನ ನನಗೇ ಆದರೂ ಸರಿಯೆ – ಅಂಥ ಒಂದು ಒಳ್ಳೆಯ ಕಾರ್ಯಕ್ಕೆ ಇಂದು ನಾಂದಿಯಾಗಲಿ ಎನ್ನುವ ದೃಷ್ಟಿಯಿಂದ ಮಾತ್ರವೇ ನಾನು ಈ ಖಂಡ ಲೇಖನವನ್ನು ಬರೆದಿದ್ದೇನೆ. ಇಲ್ಲಿ ಮುದ್ದಣನ ಬಗೆಗೆ ಆಳವಾದ ವ್ಯಾಸಂಗಕ್ಕೆ ಒಂದು ಹೊಸ ದಾರಿ ತೆರೆದಿಟ್ಟಿದೆ.

---

ಕೃಪೆ – ಜಾಣ ಮುದ್ದಣ ಗ್ರಂಥದಿಂದ (೧೯೭೦)

*****

# ಮಹಾಕವಿ ಮುದ್ದಣ – ಒಂದು ನೆನಪು

## ಬೇಲೂರು ರಾಮಮೂರ್ತಿ

'ಅರಂಕುಶಮಿಟ್ಟೊಡಂ ನೆನವುದೆನ್ನಮನಂ ಬನವಾಸಿ ದೇಶಮಂ' ಅಂದೊಡನೆ ನಮಗೆ ನೆನಪಾಗುವುದು ಪಂಪ. ಹಾಗೇ 'ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು. ಕನ್ನಡಂ ಕತ್ತೂರಿಯಲ್ತೆ. ಪದ್ಯಂ ವದ್ಯಂ ಗದ್ಯಂ ಹೃದ್ಯಂ, ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು, ಸಪ್ತಾಕ್ಷರೀ ಮಂತ್ರ' ಮುಂತಾದ ಮಾತುಗಳನ್ನು ಕೇಳಿದಾಗ ನಮಗೆ ನೆನಪಾಗುವುದು ಮುದ್ದಣ. ಕನ್ನಡ ಹೊಸ ಸಾಹಿತ್ಯದ ಮುಂಗೋಳಿ ಎಂದೇ ಹೆಸರಾಗಿದ್ದ ಮುದ್ದಣ ನಮ್ಮನ್ನ ಅಗಲಿ ಹೋಗಿ ೧೦೭ ವರ್ಷಗಳು ಕಳೆದರೂ ಇಂದಿಗೂ ಕನ್ನಡ ಸಾರಸ್ವತ ಲೋಕದಲ್ಲಿ ಪ್ರಸ್ತುತನಾಗಿದ್ದಾನೆ ಅಂದರೆ ಹುಟ್ಟಿದರೇ ಕನ್ನಡ ನಾಡಿನಲ್ಲಿ ಹುಟ್ಟಬೇಕು ಅನ್ನೋ ಹಾಗೆ ಬದುಕಿದರೇ ಮುದ್ದಣನ ಹಾಗೆ ಬದುಕಬೇಕು ಅನಿಸುತ್ತದೆ. ಹೌದು ಅವನು ಬದುಕಿದ್ದು ಕೇವಲ ೩೧ ವರ್ಷಗಳೇ ಆದರೂ ಮಾಡಿದ ಸಾಧನೆ ಮಾತ್ರ ಅಪಾರ.

ಇಂತಹ ಮಹಾನ್ ಕವಿ ನಂದಳಿಕೆ ಲಕ್ಷ್ಮೀನಾರಾಯಣ ಹುಟ್ಟಿದ್ದು ೨೪-೦೧-೧೮೭೦ ರಲ್ಲಿ ಉಡುಪಿಯ ಬಳಿಯ ನಂದಳಿಕೆ ಗ್ರಾಮದಲ್ಲಿ. ಕಾಲವಾಗಿದ್ದು ಉಡುಪಿಯಲ್ಲಿ. ಹುಟ್ಟಿದ್ದು ೧೯ನೇ ಶತಮಾನದಲ್ಲಿಯಾದರೆ ಕಾಲವಾಗಿದ್ದು ೨೦ನೇ ಶತಮಾನದ ಪ್ರಾರಂಭದಲ್ಲಿ ಅಂದರೆ ೧೬-೦೨-೧೯೦೧.

ಹುಟ್ಟೋ ನಮಗೆ ಗೊತ್ತಿರುವುದಿಲ್ಲ ನಾವು ಏನಾಗುತ್ತೀವಿ ಅನ್ನುವುದೂ ನಮಗೆ ಗೊತ್ತಿರುವುದಿಲ್ಲ. ಆದರೆ ಅದೆಲ್ಲೋ ಆಸೆಯ ಬೀಜವೊಂದು ಸೇರಿಕೊಂಡುಬಿಟ್ಟಿದ್ದರೆ ಅದು ಚಿಗುರೊಡೆಯುವುದನ್ನೇ ಕಾಯುತ್ತಿರುತ್ತದೆ. ಚಿಗುರೊಡೆದಾಗ ಅದು ಯಾವ ರೀತಿ ಬೆಳೆಯುತ್ತದೆ ಅನ್ನುವುದು ಸ್ವತಃ ಆ ಬೀಜಕ್ಕೇ ಗೊತ್ತಿರುವುದಿಲ್ಲ. ಹಾಗೇ ಆಗಿದ್ದು ಮುದ್ದಣನ ಬದುಕಿನ ಕಥೆಯೂ ಕೂಡ. ಹುಟ್ಟಿದ್ದು ಉಡುಪಿಯ ನಂದಳಿಕೆ ಅಂದ ಮೇಲೆ ಪ್ರಾಥಮಿಕ ವಿದ್ಯಾಭ್ಯಾಸವೂ ಅಲ್ಲಿಯೇ ನಡೆಯಿತು. ಮುದ್ದಣ ಹೆಸರಿಗೆ ತಕ್ಕ ಹಾಗೆ ಮುದ್ದು ಮುದ್ದಾಗಿದ್ದನಂತೆ. ಅವನಿಗೆ ಮುದ್ದಣ ಹೆಸರು ಬರಲು ಇದೇ ಕಾರಣ. ಲಕ್ಷ್ಮೀನಾರಾಯಣ ಮುದ್ದಣನಾಗಿ ರೂಪುಗೊಂಡಿದ್ದು ಹೀಗೆ. ಮನೆ ದೇವರು ನಂದಳಿಕೆಯ ಮಹಾಲಿಂಗೇಶ್ವರ ಸ್ವಾಮಿ. ತಂದೆ ತಮ್ಮಯ್ಯ ಮುದ್ದಣನಿಗೆ ಓದುವುದರ ಜೊತೆಗೆ ಚಿಕ್ಕಪುಟ್ಟ ಕೆಲಸ ಮಾಡಿಕೊಂಡು ತಂದೆಯ ಜೊತೆ ದಿನಾ ದೇವಾಲಯಕ್ಕೆ ಹೂವು

ಕಟ್ಟಿಕೊಡುವ ಕೆಲಸ. ತಮ್ಮಯ್ಯನಿಗೆ ಇಬ್ಬರು ಗಂಡು ಮಕ್ಕಳು. ಮುದ್ದಣನೇ ಹಿರಿಯ. ಚಿಕ್ಕವನು ಶಿವರಾಮಯ್ಯ. ಅವನಿಗೆ ಏನೊಂದು ಆಸ್ತಿಯೂ ಇರಲಿಲ್ಲ. ದುಡಿಯಬೇಕು ಉಣ್ಣಬೇಕು ನಾಲ್ಕು ಹೊಟ್ಟೆ ತುಂಬಬೇಕು. ಹೀಗೆ ದಿನಾ ದೇವಾಲಯಕ್ಕೆ ಹೂವು ಕಟ್ಟಿಕೊಡುವ ಕಾಯಕದಲ್ಲಿ ಮುದ್ದಣನೂ ಭಾಗಿಯಾಗುತ್ತಿದ್ದ. ಜೊತೆಗೆ ಹಬ್ಬದ ಸಂದರ್ಭಗಳಲ್ಲಿ ಅಲ್ಲಿ ನಡೆಯುತ್ತಿದ್ದ ಯಕ್ಷಗಾನ ಪ್ರಸಂಗಗಳನ್ನು ಅವನು ಕುತೂಹಲದಿಂದ ಗಮನಿಸುತ್ತಿದ್ದ. ಇದು ಅವನ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಬೀರಿತ್ತು ಅಂದರೆ ಅವನು ಎಲ್ಲಿಯಾದರೂ ಏಕಾಂತದಲ್ಲಿ ನಿಂತು ತಾನು ಕಂಡು ಕೇಳಿದ ಯಕ್ಷಗಾನದ ಮಟ್ಟುಗಳನ್ನು ಅಭ್ಯಾಸ ಮಾಡುತ್ತಿದ್ದ ಓದಿನಲ್ಲಿಯೂ ಹಿಂದೆ ಬೀಳದ ಮುದ್ದಣನ ಈ ಆಸಕ್ತಿಯನ್ನು ಗಮನಿಸಿದ ಹಿರಿಯರೊಬ್ಬರು ತಮ್ಮಯ್ಯನಿಗೆ ನಿನ್ನ ಮಗನಿಗೆ ಯಕ್ಷಗಾನ ಕಲಿಸು ಅಂದು ಸಲಹೆ ಮಾಡಿದರು. ಆದರೆ ಸಂಸಾರದ ಹೊರೆ ಬಹಳ ಭಾರವಾಗಿದ್ದುದರಿಂದ ತಮ್ಮಯ್ಯ ಮುದ್ದಣನನ್ನು ನಾಲ್ಕನೇ ಕ್ಲಾಸು ಮುಗಿದೊಡನೆ ಒಬ್ಬರ ಮನೆಗೆ ಕೂಲಿಗೆ ಕಳಿಸಿಬಿಟ್ಟ. ಇದು ಮುದ್ದಣನ ಬದುಕಿನ ದಿಕ್ಕನ್ನೇ ಬದಲಾಯಿಸಿತು. ಬೆಟ್ಟದಷ್ಟು ಆಸೆ ಹೊತ್ತು ನಾನು ಮುಂದೆ ಓದಬೇಕು ಅಂತ ಹಂಬಲಿಸುತ್ತಿದ್ದ ಮುದ್ದಣ ಪ್ರಪಾತಕ್ಕೆ ಬಿದ್ದ ಹಾಗೆ ಒದ್ದಾಡಿದ. ನಾನು ಉಡುಪಿಗೆ ಹೋಗಿ ಓದಿ ಮುಂದೆ ಬರ್ತಿನಿ ಅಂತ ಹೊರಟೇ ಬಿಟ್ಟ.

ಓದುವುದು ಸರ್ಕಾರೀ ಶಾಲೆಯಾದರೂ ಅವನ ನೆಲೆಗೆ, ವಾರಾನ್ನಕ್ಕೆ ವ್ಯವಸ್ಥೆ ಆಗಬೇಡವೇ. ಓದುವುದು ಅವನ ಹಣೆಯಲ್ಲಿ ಬರೆದಿತ್ತು ಅದಕ್ಕೇ ವಿಧಿ ಅವನನ್ನು ಉಡುಪಿಗೆ ಕರೆದುಕೊಂಡು ಬಿಟ್ಟಿತು. ವಾರಾನ್ನದ ಮನೆಯೊಂದನ್ನು ಗೊತ್ತುಮಾಡಿಕೊಂಡು ಮುದ್ದಣ ಉಡುಪಿಯ ಸರ್ಕಾರೀ ಶಾಲೆಯಲ್ಲಿ ಐದನೇ ಕ್ಲಾಸಿಗೆ ಸೇರಿಯೇ ಬಿಟ್ಟ. ಐದಾಯಿತು, ಆರಾಯಿತು. ಮತ್ತೆ ಮುಂದೆ ಓದು ಮುಂದುವರಿಸುವುದು ಸಾಧ್ಯವಿರಲಿಲ್ಲ. ಆಗ ಅಲ್ಲಿನ ಹೆಡ್ ಮಾಸ್ಟರ್ ಸಲಹೆಯಂತೆ ಕನ್ನಡ ತರಪೇತಿ ಶಾಲೆಯನ್ನು ಸೇರಿದ. ಅಲ್ಲಿ ಸ್ಟೈಫಂಡ್ ಸಿಗುತ್ತಿದ್ದರಿಂದ ಅದು ಅವನ ಬದುಕಿಗೂ ಸಹಾಯಕವಾಯಿತು. ಆದರೆ ಎರಡು ವರ್ಷ ತರಪೇತಿ ಪಡೆದು ಬಂದರೂ ಅವನಿಗೆ ಕೆಲಸ ಸಿಗಲಿಲ್ಲ. ಆಗ ಮುದ್ದಣನ ಕಟ್ಟುಮಸ್ತಾದ ದೇಹವನ್ನು ಕಂಡು ನೀವು ಮದರಾಸಿಗೆ ಹೋಗಿ ದೈಹಿಕ ಶಿಕ್ಷಣ ತರಪೇತಿಯನ್ನೂ ಪಡೆದು ಬನ್ನಿ ಅಂದರು. ಮುದ್ದಣ ಮದರಾಸಿಗೆ ಹೋದ. ಅಲ್ಲಿ ದೈಹಿಕ ಶಿಕ್ಷಣದ ಜೊತೆಗೆ ಇನ್ನಿತರ ಓದನ್ನೂ ಮಾಡಿದ. ಆಮೇಲೆ ಉಡುಪಿಯ ಸರ್ಕಾರೀ ಶಾಲೆಯಲ್ಲಿ ಒಂದು ವ್ಯಾಯಾಮ ಶಿಕ್ಷಕನ ಹುದ್ದೆ ದೊರೆಯಿತು.

ಹೀಗೆ ಬದುಕಿಗೊಂದು ಆಸರೆಯಾದ ನಂತರ ಮುದ್ದಣ ತನ್ನ ಆಸಕ್ತ ವಿಷಯದತ್ತ ಗಮನ ಹರಿಸಿದ. ಶಾಲೆಯಲ್ಲಿದ್ದ ಪುಟ್ಟ ಗ್ರಂಥಾಲಯದಲ್ಲಿದ್ದ ಪುಸ್ತಕಗಳನ್ನು ಓದಲಾರಂಭಿಸಿದ. ಆಗ ಮಳಲಿ ಸುಬ್ಬರಾಯರು ಅಲ್ಲಿ ಕನ್ನಡ ಕಲಿಸುವ ಪಂಡಿತರಾಗಿದ್ದರು. ಅವರು ಮುದ್ದಣನ ಓದಿನ ಆಸಕ್ತಿಯನ್ನು ಗಮನಿಸಿ ಯಾವ

ಯಾವ ಪುಸ್ತಕಗಳನ್ನು ಓದಬೇಕು ಅನ್ನುವ ಸಲಹೆ ಕೊಟ್ಟರು. ಅದಾಗಲೇ ಮುದ್ದಣ ಯಕ್ಷಗಾನದ ವಿಷಯಗಳನ್ನು ಚೆನ್ನಾಗಿ ಅರಿತುಕೊಂಡು ಓದುವುದರ ಜೊತೆಗೆ ಬರೆಯುವುದನ್ನೂ ಹವ್ಯಾಸ ಮಾಡಿಕೊಂಡು ೧೮೮೯-೯೨ರ ಸುಮಾರಿನಲ್ಲಿ ರತ್ನಾವತಿ ಕಲ್ಯಾಣ, ಕುಮಾರ ವಿಜಯ ಅನ್ನುವ ಎರಡು ಯಕ್ಷಗಾನ ಪ್ರಸಂಗಗಳನ್ನು ಬರೆದ. ಆದರೆ ಅವುಗಳನ್ನು ಪ್ರಕಟಣೆ ಮಾಡೋರು ಯಾರು. ಬರೆದದ್ದನ್ನು ಹಾಗೇ ಮನೆಯಲ್ಲಿ ಇಟ್ಟುಕೊಳ್ಳಲು ಅವನ ಮನಸ್ಸು ಒಪ್ಪಲಿಲ್ಲ. ಹೀಗಾಗಿ ಅವುಗಳನ್ನು ತಾನೇ ಮುದ್ರಣ, ಪ್ರಕಟಣಗೊಳಿಸಿದ. ಅದರಿಂದ ಸಾಕಷ್ಟು ಕೈ ಸುಟ್ಟುಕೊಂಡ ಅನ್ನುವುದು ಬೇರೆ ಮಾತು. ಅಲ್ಲಿಂದ ಮುಂದೆ ಅವನು ಯಾವ ಪುಸ್ತಕಗಳನ್ನೂ ಪ್ರಕಟಿಸುವ ಗೋಜಿಗೆ ಹೋಗಲಿಲ್ಲ.

ಮಳಲಿ ಸುಬ್ಬರಾಯರು ಓದುತ್ತಿದ್ದ ಗ್ರಂಥಗಳೆಲ್ಲವೂ ಮುದ್ದಣನ ಓದಿಗೂ ದೊರಕಿದವು. ಆ ಕಾಲದಲ್ಲಿ ಮುದ್ದಣನ ಸಮಕಾಲೀನರು ಎಂದರೆ ಹುರುಳಿ ಭೀಮರಾಯರು (ಇವರ ಮನೆಯ ಪಕ್ಕದಲ್ಲೇ ಮುದ್ದಣನ ವಾಸ. ಭೀಮರಾಯರ ಅಣ್ಣನ ಓರಗೆಯವನು ಮುದ್ದಣ.) ಅನೇಕ ದಿನ ಭೀಮರಾಯರ ಮನೆಯಲ್ಲೇ ಓದು, ಊಟ ಎಲ್ಲ ನಡೆಯುತ್ತಿತ್ತು. ಐರೋಡಿ ಶಿವರಾಮಯ್ಯನವರು, ವೆಂಕಟರಮಣ ಹೆಬ್ಬಾರರು, ಮಂಜೇಶ್ವರ ಗೋವಿಂದ ಪೈಗಳು ಮುಂತಾದವರಾರೂ ಮುದ್ದಣನ ಓದಿಗೆ, ಬರವಣಿಗೆಗೆ ಸ್ಫೂರ್ತಿ ಇತ್ತು ಆಸಕ್ತಿಯನ್ನು ಮೂಡಿಸಿದವರು ಮಳಲಿ ಸುಬ್ಬರಾಯರು. ಅವರ ಸಲಹೆಯಂತೆ ಮುದ್ದಣ ಹಳೆಗನ್ನಡವನ್ನೂ ಸಂಸ್ಕೃತವನ್ನೂ ಅಧ್ಯಯನ ಮಾಡಿದ. ಜೊತೆಗೆ ಕೇಶೀರಾಜನ 'ಶಬ್ದಮಣಿ ದರ್ಪಣ', 'ಕಿಟ್ಟಲ್ ಪದಕೋಶ' ಅವನಿಗೆ ಸಹಾಯಕವಾದವು. ನಿತ್ಯವೂ ಮುದ್ದಣ ಮಳಲಿ ಸುಬ್ಬರಾಯರ ಬಳಿ ಕೂತು ಅವರ ಸಲಹೆಯಂತೆ ರಚಿಸಲು ತೊಡಗಿದ್ದ 'ಅದ್ಭುತ ರಾಮಾಯಣ' ಕೃತಿಯ ಬಗೆಗೆ ಚರ್ಚೆ ನಡೆಸುತ್ತಿದ್ದ. ಇದು ಮುದ್ದಣನ ಬದುಕಿಗೊಂದು ತಿರುವಾಯಿತು. ಅಲ್ಲಿಂದ ಮುಂದೆ ಮಳಲಿ ಸುಬ್ಬರಾಯರಿಗೆ ಕುಂದಾಪುರದ ಶಾಲೆಗೆ ವರ್ಗವಾದಾಗ ಅವನಿಗೆ ಬಹಳ ಬೇಸರವಾಯಿತು. ಯಾಕೆಂದರೆ ಇದರಿಂದಾಗಿ ಮಳಲಿ ಸುಬ್ಬರಾಯರ ಸಂಪರ್ಕ ತಪ್ಪಿ ಹೋಗುತ್ತದೆ. ಅವರೊಡನೆ ಚರ್ಚೆ ತಪ್ಪಿ ಹೋಗುತ್ತದೆ ಅಂತ. ಆದರೆ ಅವರು ಕುಂದಾಪುರಕ್ಕೆ ಹೋಗೋದು ಅನಿವಾರ್ಯವಾಯಿತು. ಆದರೂ ಮುದ್ದಣ ಕುಂದಾಪುರಕ್ಕೆ ಹೋಗಿ ಬಂದು ಮಾಡುತ್ತಾ ಇದ್ದು ಕೃತಿ ರಚನೆಗೆ ಯಾವುದೇ ಭಂಗ ಬರದಂತೆ ನೋಡಿಕೊಂಡ. ಹೀಗೆ ತಯಾರಾದದ್ದೇ ಅದ್ಭುತ ರಾಮಾಯಣ. ಹಾಗೆ ನೋಡಿದರೆ ಯಕ್ಷಗಾನದ ಹೊರತಾಗಿ ಮುದ್ದಣ ಬರೆದ ಮೂರೂ ಗ್ರಂಥಗಳೂ ರಾಮಾಯಣ ಕುರಿತದ್ದೇ.

ಅದ್ಭುತ ರಾಮಾಯಣ ವಿಷಯದ ಆಯ್ಕೆ, ರಚನಾ ಕೌಶಲ ಮುಂತಾದವುಗಳನ್ನು ಅವನು ಮಳಲಿ ಸುಬ್ಬರಾಯರ ಸಲಹೆಯಂತೆಯೇ ರಚಿಸಿದ. ಗ್ರಂಥ ಅಂತೂ ತಯಾರಾಯಿತು. ಮುಂದೆ ಏನು ಮಾಡುವುದು. ತಾನಂತೂ ಅದನ್ನು ಕೈಯಿಂದ ದುಡ್ಡು ಹಾಕಿ ಪ್ರಕಟಿಸುವುದಂತೂ ಆಗದ ಮಾತು. ಹಾಗಾದರೆ

ಅವರ ಗತಿ. ಆಗ ಮಳಲಿ ಸುಬ್ಬರಾಯರು ಸಲಹೆ ಕೊಟ್ಟರು. ಆಗ ಮೈಸೂರಿನಿಂದ 'ಕಾವ್ಯಮಂಜರಿ' ಅನ್ನುವ ಮಾಸಪತ್ರಿಕೆ ಬರುತ್ತಿತ್ತು. ಸುಬ್ಬರಾಯರು ಅದಕ್ಕೆ ಚಂದಾದಾರರಾಗಿದ್ದರು. 'ಕಾವ್ಯಮಂಜರಿ'ಯನ್ನು ಮುದ್ದಣನೂ ಓದಿದ್ದ. ಸುಬ್ಬರಾಯರು ನೀವು ನಿಮ್ಮ 'ಅದ್ಭುತ ರಾಮಾಯಣ' ಕೃತಿಯನ್ನು 'ಕಾವ್ಯಮಂಜರಿ'ಗೆ ಯಾಕೆ ಕಳಿಸಬಾರದು ಅನ್ನುವ ಸಲಹೆಯನ್ನು ಕೊಟ್ಟರು. ಮುದ್ದಣನಿಗೂ ಅದು ಸರಿ ಅನಿಸಿದರೂ ಯಾಕೋ ಅಳುಕು ಮನೆ ಮಾಡಿತು. ಹೇಳಿ ಕೇಳಿ ನಾನು ಕೇವಲ ಆರನೇ ಕ್ಲಾಸು ಪಾಸು ಮಾಡಿರುವವನು. ನನ್ನಂಥವನಿಂದ ಇಂಥಾ ಗ್ರಂಥ ರಚಿತವಾಗಿದೆ ಅಂದರೆ ಪ್ರಕಾಶಕರು ಅನುಮಾನ ಪಡೋದು ನಿಶ್ಚಯ. ಜೊತೆಗೆ ನಾನು ಯಾವುದೋ ಕೃತಿಚೌರ್ಯ ಮಾಡಿದೀನಿ ಅನ್ನುವ ಅನುಮಾನವನ್ನೂ ಪಡಬಹುದು ಅಂತ ಹಿಂದೇಟು ಹಾಕಿದ. ಆದರೆ ಮಳಲಿ ಸುಬ್ಬರಾಯರು ಧೈರ್ಯ ತುಂಬಿದರೂ ಅವನು 'ಕಾವ್ಯಮಂಜರಿ'ಗೆ 'ಅದ್ಭುತ ರಾಮಾಯಣ' ಕೃತಿ ಕಳಿಸುವಾಗ ಇದು ನನಗೆ ಸಿಕ್ಕಿದ ಹಸ್ತಪ್ರತಿ. ಇದರ ಲೇಖಕರು ಯಾರೋ ಗೊತ್ತಿಲ್ಲ ಇದು ಸೂಕ್ತ ಅನಿಸಿದರೆ ಪ್ರಕಟಿಸಿ ಅಂತ ಬರೆದು ಕಳಿಸಿದ. ಕೆಲವೇ ದಿನಗಳಲ್ಲಿ 'ಕಾವ್ಯಮಂಜರಿ'ಯಿಂದ ಶ್ರೀ ರಾಮಾನುಜೈಯಂಗಾರರು ಪತ್ರ ಬರೆದು ಕೃತಿ ಅದ್ಭುತವಾಗಿದೆ ಇದನ್ನು ನಾವು ಕೂಡಲೇ ಪ್ರಕಟಣೆಗೆ ತೆಗೆದುಕೊಳ್ಳುತ್ತೇವೆ. ಇದರ ಕರ್ತೃ ಯಾರೆಂದು ತಿಳಿಸಿ ಅಂತ ಬರೆದರು. ಆಗ ಸುಬ್ಬರಾಯರು ಈಗಲಾದರೂ ನಿಜ ಹೇಳಿ ಅಂದರೆ ಮುದ್ದಣ ಆಗಲೂ ಹಿಂದೇಟು ಹೊಡೆದ. ಒಂದು ಸಾರಿ ಅದು ನನ್ನದಲ್ಲ ಅಂತ ಅವರಿಗೆ ಹೇಳಿರುವಾಗ ಈಗ ಅದು ಚೆನ್ನಾಗಿದೆ ಅಂದಾಗ ಅದು ನನ್ನದು ಅಂತ ಹೇಳೋದು ಹೇಗೆ ಅಂತ ಇದರ ಕರ್ತೃ ಯಾರೋ ನನಗೂ ಗೊತ್ತಿಲ್ಲ ಅದನ್ನು ಯಥಾವತ್ತಾಗಿ ಪ್ರಕಟಿಸಿ ಅಂತ ಬರೆದುಬಿಟ್ಟ. ಹೀಗೆ 'ಕಾವ್ಯಮಂಜರಿ'ಯಿಂದ 'ಅದ್ಭುತ ರಾಮಾಯಣ' ಲೇಖಕರ ಹೆಸರಿಲ್ಲದೇ ಅಚ್ಚಾಯಿತು. ಮುಂದೆ ಅವನು ರಚಿಸಿದ 'ಶ್ರೀರಾಮಪಟ್ಟಾಭಿಷೇಕ' ಕೃತಿಗೆ ಮಹಾಲಕ್ಷ್ಮೀ ವಿರಚಿತ ಅಂತ ತಾಯಿಯ ಹೆಸರಿಟ್ಟ. ಈ ಮಹಾಲಕ್ಷ್ಮಿ ಯಾರು ಎಲ್ಲಿದ್ದಾರೆ ಅಂತ ಕೇಳಿದಾಗ ಕೂಡಾ ಯಾರೋ ನನಗೆ ತಿಳಿಯದು. ನನಗೆ ಸಿಕ್ಕಿದ ಹಸ್ತಪ್ರತಿ ನಿಮಗೆ ಕಳಿಸಿದ್ದೇನೆ ಅಂತ ಬರೆದುಬಿಟ್ಟ. ಅವನಿಗೆ ಯಾಕಂಥಾ ಕೀಳರಿಮೆ ಬಂದಿತ್ತು ಅನ್ನೋದು ಯಾರಿಗೂ ಅರ್ಥವಾಗದ ವಿಷಯವಾಗಿಯೇ ಉಳಿಯಿತು.

ಮುದ್ದಣ ಮುಂದೆ ಉಡುಪಿಯ ಕ್ರಿಶ್ಚಿಯನ್ ಶಾಲೆಯಲ್ಲಿ ಕನ್ನಡ ಅಧ್ಯಾಪಕರ ಹುದ್ದೆ ಖಾಲಿ ಇದೆ ಅಂತ ಅರಿವಾಗಿ ತುಸು ಸಂಬಳ ಹೆಚ್ಚು ಬರುತ್ತೆ ಅನ್ನುವ ಕಾರಣಕ್ಕೆ ತಾನೂ ಅರ್ಜಿ ಹಾಕಿದ. ಅವನಿಗೆ ಕೆಲಸವೂ ಸಿಕ್ಕಿತು. ಅಲ್ಲಿ ಕೆಲವು ತಿಂಗಳುಗಳ ಕಾಲ ಕೆಲಸ ಮಾಡಿದ ನಂತರ ಮಂಗಳೂರಿನಲ್ಲಿದ್ದ ಸರ್ಕಾರೀ ಶಾಲೆಗೆ ಕನ್ನಡ ಅಧ್ಯಾಪಕರ ಹುದ್ದೆಗೆ ಕರೆ ಬಂದಿತ್ತು. ಸಂದರ್ಶನಕ್ಕೆ ಹೋದೋರು ಇಬ್ಬರೇ ಮುದ್ದಣ ಒಬ್ಬನಾದರೆ ಪಂಜೆ ಮಂಗೇಶರಾಯರು ಇನ್ನೊಬ್ಬರು. ಆದರೆ ಆಯ್ಕೆಯಾಗಿದ್ದು ಪಂಜೆ ಮಂಗೇಶರಾಯರು. ಅವನಿಗೆ ಪಂಜೆ ಮಂಗೇಶರಾಯರ

ಪರಿಚಯವಾದದ್ದು ತುಂಬಾ ಸಂತೋಷವಾಗಿತ್ತು. ಆದರೆ ಅಲ್ಲಿ ಮುದ್ದಣ ಆಯ್ಕೆಯಾಗದೇ ಪದವೀಧರರು ಅನ್ನುವ ಕಾರಣಕ್ಕೆ ಪಂಜೆಯವರು ಆಯ್ಕೆಯಾದಾಗ ಪಂಜೆಯವರು 'ಭತ್ತದ ಸಿಪ್ಪೆಯನ್ನು ಕುಟ್ಟುವ ಒನಕೆಯನ್ನು ಕನ್ನಡ ಕಲಿಸಲು ತಂದರು. ಆದರೆ ಚಿತ್ರ ಬಿಡಿಸುವ ಬಣ್ಣದ ಗರಿಯನ್ನು ಕಿವಿ ಕೊಳೆ ತೆಗೆಯುವ ಕುಗ್ಗೆ ಕಡ್ಡಿಯನ್ನಾಗಿ ಮಾಡಿದರು' ಅಂತ ನೊಂದು ನುಡಿದಿದ್ದರು. ಮುಂದೆ ಅವನು ಬರೆದ 'ರಾಮಾಶ್ವಮೇಧ' ಕೃತಿಗೆ ತನ್ನನ್ನು ಚಿಕ್ಕಂದಿನಿಂದ ಮನೆಯವರು ಕರೆಯುತ್ತಿದ್ದ 'ಮುದ್ದಣ' ಎನ್ನುವ ಹೆಸರನ್ನೇ ಇಟ್ಟ. ಆಗ 'ಕಾವ್ಯಮಂಜರಿ' ಪತ್ರಿಕೆ ನಿಂತುಹೋಗಿತ್ತು. ಮುದ್ದಣನಿಗೆ ಬಹಳ ಬೇಸರವಾಗಿತ್ತು. ಈಗಿನಂತೆ ಆಗ ಅನೇಕ ಪತ್ರಿಕೆಗಳಿರಲಿಲ್ಲ. ಆದರೆ ಕೆಲವೇ ದಿನಗಳಲ್ಲಿ ರಾಮಾನುಜೈಯಂಗಾರರು ನಾವು 'ಕರ್ನಾಟಕ ಕಾವ್ಯಕಲಾನಿಧಿ' ಅನ್ನುವ ಪತ್ರಿಕೆ ಪ್ರಾರಂಭಿಸುತ್ತಿದ್ದೇವೆ ಅಂತ ಬರೆದಾಗ ಅದಕ್ಕೆ ಮುದ್ದಣ ತಾನು ರಚಿಸಿದ 'ಶ್ರೀರಾಮಾಶ್ವಮೇಧ' ಕೃತಿಯನ್ನು ಕಳಿಸಿದ. ಕೃತಿ ತಲುಪಿದ ಮೇಲೆ ರಾಮಾನುಜೈಯಂಗಾರರು ಕಾಗದ ಬರೆದು ನೀವು ಕಳಿಸಿದ ಮೂರೂ ಕೃತಿಗಳ ರಚನೆ, ಪದ ವಿನ್ಯಾಸ, ಪದ ಪುಂಜ ಎಲ್ಲದರಲ್ಲೂ ತುಂಬಾ ಸಾಮ್ಯವಿದೆ. ಇವು ಮೂರನ್ನೂ ಬರೆದವರು ಒಬ್ಬರೇ ಇರಬೇಕು ಅನ್ನುವ ಅನುಮಾನ ನಮಗಿದೆ. 'ರಾಮಾಶ್ವಮೇಧ' ಬರೆದವರು ನೀವೇ ಇರಬೇಕು ಅಂತ ನಮ್ಮ ಊಹೆ. ಹಾಗಿದ್ದ ಮೇಲೆ ಹಿಂದಿನ ಎರಡು ಕೃತಿಗಳನ್ನು ಬರೆದವರೂ ನೀವೇ ಇರಬೇಕು ಅಂತ ಬರೆದರೂ ಅವನು ಬದಲು ಉತ್ತರ ಬರೆಯಲಿಲ್ಲ. ಆದರೆ 'ರಾಮಾಶ್ವಮೇಧ' ಮಾತ್ರ ಅಚ್ಚಾಗಲಾರಂಭಿಸಿತು. ಆದರೆ ಅದು ಪೂರ್ಣವಾಗುವ ವೇಳೆಗೆ ಅವನು ಇರಲೇ ಇಲ್ಲ. ಕ್ಷಯ ರೋಗ ಅವನನ್ನು ಬಲಿ ತೆಗೆದುಕೊಂಡಿತ್ತು.

ಅವನ ಸಾಂಸಾರಿಕ ಸ್ಥಿತಿಗತಿಗಳ ಕಡೆಗೆ ಒಮ್ಮೆ ಗಮನ ಹರಿಸುವುದಾದರೆ, ಮುದ್ದಣನಿಗೆ ಒಂದು ಕೆಲಸ ಅಂತ ಆಯ್ತು ಅಂತ ಸಮಾಧಾನ ಹೊಂದಿದ ತಮ್ಮಯ್ಯ ಮಹಾಲಕ್ಷ್ಮಿ ದಂಪತಿಗಳು ಮುದ್ದಣನಿಗೆ ಶಿವಮೊಗ್ಗದ ಬಳಿಯ ಕಾಗೆಕೋಡಮಗ್ಗಿ ಗ್ರಾಮದ ಹುಡುಗಿ ಕಮಲ ಅನ್ನುವವಳನ್ನು ತಂದು ಮದುವೆ ಮಾಡೇ ಬಿಟ್ಟರು. ಪುಟ್ಟ ಮನೆ ಪುಟ್ಟ ಸಂಸಾರ. ಕಮಲ ಹೆಚ್ಚು ಓದಿದವಳಲ್ಲ. ಅವಳಿಗೆ ಅವನ ಸಾಹಿತ್ಯದ ಸಾಧನೆಯ ಬಗೆಗೆ ಹೆಚ್ಚಿನ ಒಲವು ಇರಲಿಲ್ಲ. ಆದರೆ ಇಷ್ಟಂತೂ ನಿಜ. ಎಳೆಯ ವಯಸ್ಸಿನ ಹೆಂಡತಿ ಕಮಲ ಅಕ್ಕ ಪಕ್ಕದ ಮನೆಯ ಹೆಂಗಸರ ಬಳಿ ಇರುವ ಸರ, ಬಳೆ, ಓಲೆ, ಸೀರೆ ಮುಂತಾದವುಗಳನ್ನು ಕಂಡು ಅಂಥವು ನನಗೂ ಬೇಕು ಅನ್ನುವ ಆಸೆಯನ್ನು ಮುದ್ದಣನ ಬಳಿ ವ್ಯಕ್ತಪಡಿಸಿರಲಿಕ್ಕೆ ಸಾಕು. ಅವುಗಳನ್ನು ತೆಗೆದುಕೊಡಲು ಶಕ್ತನಲ್ಲದ ತನ್ನ ಸ್ಥಿತಿಯಿಂದ ಅವನಿಗೆ ಬೇಜಾರಾಗಿರುವುದಕ್ಕೂ ಸಾಕು. ಅದಕ್ಕೇ ಅವನು 'ಶ್ರೀರಾಮಾಶ್ವಮೇಧ' ಕೃತಿ ಬರೆಯುವಾಗ ಒಂದು ಕಡೆ 'ಎಳೆಯ ಹೆಂಡಿರ ಕೈಯಲ್ಲಿ ಸಿಕ್ಕು ನಲುಗುವ ಕವಿಗಳ ಬಾಳೇ ದೂಷ್ಯ' ಅಂತ ಬರೆದಿದ್ದಾನೆ. ಕೆಲವೇ ದಿನಗಳಲ್ಲಿ ಮುದ್ದಣ

ತಂದೆಯಾದ. ಮನೆಯಲ್ಲಿ ಪುಟ್ಟ ಮಗು ಆಟಾಡಿಕೊಂಡಿರುವುದು ಅವನಿಗೆ ಸಂತಸ ತಂದು ಅವನ ಬಡತನವನ್ನೂ ಮರೆಸಿತು. ಆದರೆ ವಿಧಿಯಾಟವೇ ಬೇರೆ ಇತ್ತು.

ಕೆಮ್ಮು ಅಂತ ಷುರುವಾಗಿದ್ದು ಅವನಿಗೆ ಕೆಲವೇ ದಿನಗಳಲ್ಲಿ ಅದು ಕ್ಷಯ ರೋಗ ಅಂತ ಗೊತ್ತಾಯಿತು. ಆಗಿನ ಕಾಲದಲ್ಲಿ ಅದು ಸಾಂಕ್ರಾಮಿಕ ರೋಗ ಒಬ್ಬರಿಂದೊಬ್ಬರಿಗೆ ಬಲು ಬೇಗ ಹರಡುತ್ತಿತ್ತು. ಕ್ಷಯ ರೋಗ ಬಂದವರನ್ನು ಒಂದು ಕೋಣೆಯಲ್ಲಿ ಕೂಡಿಹಾಕುತ್ತಿದ್ದರು. ಅವರ ಹತ್ತಿರ ಯಾರೂ ಸುಳಿಯುತ್ತಿರಲಿಲ್ಲ. ಊಟ, ತಿಂಡಿ ಎಲ್ಲ ಬಹಳ ದೂರದಿಂದಲೇ. ಅಂಥಾ ಭಯಾನಕ ಕಾಹಿಲೆ ಮುದ್ದಣನಿಗೂ ಬಂತು. ಆಗ ಮುದ್ದಣ ಯೋಚಿಸಿದ. ಈ ಹಾಳು ಕಾಹಿಲೆ ನನಗೆ ಬಂದಿದೆ ಇದು ಕಮಲೆಗೂ ಮಗು ರಾಧಾಕೃಷ್ಣನಿಗೂ ಬರದೇ ಇರಲಿ ಅಂತ ಏನೋ ಒಂದು ನೆಪ ಮಾಡಿ, ಕಮಲೆ ವಿರೋಧ ವ್ಯಕ್ತಪಡಿಸಿದರೂ ಬಲವಂತವಾಗಿ ಅವಳನ್ನೂ ಮಗುವನ್ನೂ ಅವಳ ತವರಿಗೆ ಸಾಗಹಾಕಿದ. ಅವರು ಊರಿಗೆ ಹೊರಟಾಗ ಮುದ್ದಣನಿಗೆ ಅನಿಸಿತ್ತು ನಾನು ಇವರಿಬ್ಬರನ್ನೂ ನೋಡುತ್ತಿರುವುದು ಇದೇ ಕಡೆಯ ಸಾರಿ ಅಂತ. ಉಕ್ಕಿಬಂದ ದುಃಖವನ್ನು ತಡೆದುಕೊಂಡು ಅವರನ್ನು ಸಾಗಹಾಕಿದ. ಇತ್ತ ರೋಗ ಉಲ್ಬಣವಾಗುತ್ತಾ ಬಂತು. ಚಿಕಿತ್ಸೆಗೂ ಹಣ ಇಲ್ಲ. ಕ್ಷಯರೋಗ ಬಂದ ಮೇಲೆ ಅವನು ಶಾಲೆಗೆ ಹೋಗಲಿಲ್ಲ. ಒಂದೆರಡು ತಿಂಗಳು ಮಾತ್ರ ಸಂಬಳ ಬಂತು. ಆಗ ಮುದ್ದಣ ತನ್ನ ಶಿಷ್ಯರಲ್ಲೊಬ್ಬನಾದ ರಾಜಗೋಪಾಲಕೃಷ್ಣ ಅನ್ನುವವನನ್ನು ಕರೆದು "ನೋಡು ಈ ಪುಸ್ತಕಗಳು, ಹಸ್ತಪ್ರತಿಗಳು ನನಗೆ ಇನ್ನು ಬೇಡ. ಇವುಗಳಿಂದ ನನಗೆ ಇನ್ನೇನೂ ಪ್ರಯೋಜನವಿಲ್ಲ. ಇದನ್ನು ನೀನು ತೆಗೆದುಕೊಂಡು ನಿನಗೆ ತೋಚಿದಷ್ಟು ಹಣ ಕೊಡು. ಅದು ನನಗೆ ಸಹಾಯಕವಾಗುತ್ತದೆ" ಅಂದ. ಕವಿಗೆ ಅಂಥಾ ಬಡತನ ಕಾಡುತ್ತಿದ್ದುದು ನಿಜ. ಏನೇ ಆದರೂ ಅವನಿಗೆ ಬಂದಂಥ ಕಾಹಿಲೆ ಯಾವ ಚಿಕಿತ್ಸೆಗೂ ಫಲಕಾರಿಯಾಗದೇ ಕೆಮ್ಮಿ ಕೆಮ್ಮಿ ರಕ್ತ ಕಾರಿಕೊಂಡು ಮುದ್ದಣ ಇಹಲೋಕ ವ್ಯಾಪಾರ ಮುಗಿಸಿದ. ಅಂದು ೧೬-೦೨-೧೯೦೧. ಕನ್ನಡ ಸಾರಸ್ವತ ಲೋಕದ ಮುಂಗೋಳಿ ಎಂದೇ ಕರೆಸಿಕೊಂಡ ಮಹಾನ್ ಕವಿಯೊಬ್ಬನ ದಾರುಣ ಅಂತ್ಯ ಹೀಗಾಯಿತು. ಆದರೆ ಮುದ್ದಣ ನಮ್ಮನ್ನಗಲಿ ೧೧೭ ವರ್ಷಗಳೇ ಕಳೆದು ಹೋಗಿದ್ದರೂ ಇಂದಿಗೂ ಅವನ ಕೃತಿಗಳ ಮುಖಾಂತರ ಕನ್ನಡ ಸಾರಸ್ವತ ಲೋಕದಲ್ಲಿ ಜೀವಂತವಾಗಿದ್ದಾನೆ ಎಂದರೆ ತಪ್ಪಲ್ಲ.

ಅವನ ಮರಣಾನಂತರ ಮುದ್ದಣನ ತಂದೆ ಮತ್ತು ತಮ್ಮ ಮನೆಯಲ್ಲಿ ಅಳಿದುಳಿದಿದ್ದ ಮುದ್ದಣನ ರಚನೆಗಳನ್ನು ಯಾವ ರೀತಿ ವಿಲೇವಾರಿ ಮಾಡಿದರೋ ಅವುಗಳನ್ನು ಜೋಪಾನ ಮಾಡಬೇಕು ಇವು ಕನ್ನಡ ಸಾರಸ್ವತ ಲೋಕದ ಅನರ್ಘ್ಯ ರತ್ನಗಳು ಅಂತ ಅವರಿಗೆ ಖಂಡಿತಾ ತಿಳಿದಿರಲಿಲ್ಲ. ಮುದ್ದಣನ ಮಗ ರಾಧಾಕೃಷ್ಣ ಬೆಳೆದು ದೊಡ್ಡವನಾದ ಮೇಲೆ ಪ್ರಕಾಶಕರೊಬ್ಬರ ಬಳಿ ನಾನು ಮುದ್ದಣನ ಮಗ, ನನ್ನ ತಂದೆಯ ಕೃತಿಗಳ ಗೌರವಧನವೇನಾದರೂ ದೊರೆಯಬಹುದೇ ಅಂತ

ವಿಚಾರಿಸುತ್ತಿದ್ದ ಅಂತಲೂ ಕೆಲವರು ಹೇಳುತ್ತಾರೆ. ಹೀಗೆ ಕವಿಗೆ ತನ್ನ ಕಾವ್ಯದಿಂದ ತನಗೂ ತನ್ನ ಕುಟುಂಬಕ್ಕೂ ಏನೂ ಉಪಯೋಗವಾಗಲಿಲ್ಲ ಅನ್ನೋದು ಸತ್ಯ. ಆದರೆ ಅವನ ಹೆಸರು ಮಾತ್ರ ಕನ್ನಡ ಸಾರಸ್ವತ ಲೋಕ ಇರುವವರೆಗೂ ಅಜರಾಮರ ಅನ್ನೋದು ಸುಳ್ಳಲ್ಲ.

ಮುದ್ದಣನ ನೆನಪನ್ನು ಸದಾ ಹಸಿರಾಗಿಸಿರಬೇಕು ಎನ್ನುವ ಉಲ್ಕಟಪೇಕ್ಷೆಯಿಂದ ನಂದಳಿಕೆಯವರೇ ಆದ ಶ್ರೀ ಬಾಲಚಂದ್ರರಾಯರು ಮೊದಲಿಗೆ ಮುದ್ದಣ ಸ್ಮಾರಕ ರೈತ ಸಂಘ ಅಂತ ಇದ್ದುದನ್ನು ಮುಂದೆ ಮುದ್ದಣ ಸ್ಮಾರಕ ಮಿತ್ರ ಮಂಡಳಿ ಅಂತ ಬದಲಾಯಿಸಿ ೧೯೭೯ರಲ್ಲಿ ಯುವಕರನ್ನೆಲ್ಲ ಸಂಘಟಿಸಿ ಮಹಾಲಿಂಗೇಶ್ವರ ದೇವಾಲಯಕ್ಕೆ ಬೇಕಾದ ಅನುಕೂಲತೆಗಳನ್ನು ಮಾಡುವುದರ ಜೊತೆಗೆ ಮುದ್ದಣನ ಹೆಸರನ್ನು ಜೀವಂತವಾಗಿಸುವ ಕಾರ್ಯದಲ್ಲಿ ತೊಡಗಿಕೊಂಡರು. ಮುದ್ದಣನ ೧೨೫ನೇ ಜನ್ಮ ದಿನೋತ್ಸವವನ್ನು (೧೯೯೫) ಆಚರಿಸುವುದರ ಜೊತೆಗೆ ಮತ್ತೊಮ್ಮೆ ಮುದ್ದಣನ ಹೆಸರು ಅಜರಾಮರವಾಯಿತು. ಅದರ ಹಿಂದೆಯೇ ಮುದ್ದಣನ ಜನ್ಮ ಶತಮಾನೋತ್ಸವ (೨೦೦೦) ವನ್ನೂ ಆಚರಿಸಿತು. ಅದೇ ವರ್ಷ ಪುತ್ತೂರಿನ ಕರ್ನಾಟಕ ಸಂಘ 'ನಂದಳಿಕೆಯ ನಂದಾದೀಪಗಳು' ಕೃತಿಯನ್ನು ಪ್ರಕಟಿಸಿತು. ಮಿತ್ರಮಂಡಲಿಯ ಬೆಳ್ಳಿಹಬ್ಬದ ಅಂಗವಾಗಿ ೨೦೦೪ರಲ್ಲಿ 'ನಂದಳಿಕೆಯ ನಂದನ' ಪುಸ್ತಕವನ್ನು ಪ್ರಕಟಿಸಿತು. ನನ್ನ 'ಮಹಾಕವಿ ಮುದ್ದಣ' ಪುಸ್ತಕ ಪ್ರಥಮಾವೃತ್ತಿ ಬಿಡುಗಡೆಯಾದದ್ದೇ ನಂದಳಿಕೆಯಲ್ಲಿ. ಇದು ನನ್ನ ಬದುಕಿನ ಒಂದು ಬಹುದೊಡ್ಡ ಭಾಗ್ಯ ಅಂದುಕೊಳ್ಳುತ್ತೇನೆ. ಆಗ ಡಾ. ಹಾ. ಮಾ ನಾಯಕರು ನಂದಳಿಕೆಗೆ ಬಂದು ಪುಸ್ತಕ ಬಿಡುಗಡೆ ಮಾಡಿದರು. ಅದೇ ದಿನ ಉಡುಪಿಯ ಮುನಿಸಿಪಲ್ ಆಫೀಸ್ ಆವರಣದಲ್ಲಿ ಮುದ್ದಣನ ಪುತ್ಥಳಿಯನ್ನೂ ಅನಾವರಣಗೊಳಿಸಲಾಯಿತು. ಹೀಗೆ ನಂದಳಿಕೆ ಬಾಲಚಂದ್ರರಾವ್ ಅವರ ಮುಂದಾಳತ್ವದಲ್ಲಿ ನಂದಳಿಕೆಯನ್ನೂ ಒಳಗೊಂಡಂತೆ ದಕ್ಷಿಣ ಕನ್ನಡದಲ್ಲಿ ಮುದ್ದಣನ ನೆನಪನ್ನು ಅಜರಾಮರವಾಗಿಸುವ ಕಾರ್ಯ ನಿರಂತರವಾಗಿ ಸಾಗಿದೆ. ಬರೀ ಇದಷ್ಟೇ ಸಾಲದು ಮುದ್ದಣನ ಎಲ್ಲ ಕೃತಿಗಳ ಕುರಿತು ನಾಡಿನ ನಾನಾ ಕಡೆ ಸಾಹಿತ್ಯ ಗೋಷ್ಠಿಗಳು ನಡೆಯಬೇಕು. 'ಶ್ರೀರಾಮ ಪಟ್ಟಾಭಿಷೇಕ', 'ಅದ್ಭುತ ರಾಮಾಯಣ', 'ಶ್ರೀ ರಾಮಾಶ್ವಮೇಧ' ಮುಂತಾದ ಕೃತಿಗಳ ಕುರಿತು ಉಪನ್ಯಾಸ ನಡೆಸಬೇಕು. ಇಂದಿನ ಪೀಳಿಗೆಗೆ ಮುದ್ದಣನ ಎಲ್ಲ ಕಾವ್ಯಗಳ ಪರಿಚಯವಾಗಬೇಕು. ನಾನಂತೂ ಯಾರು ಎಲ್ಲಿ ಕರೆದರೂ ಹೋಗಿ ಮುದ್ದಣನ ಬದುಕು ಮತ್ತು ಸಾಹಿತ್ಯದ ಬಗೆಗೆ ಉಪನ್ಯಾಸ ಕೊಡುತ್ತಿದ್ದೇನೆ. ಬೆಂಗಳೂರಿನ ಗಾಂಧೀ ಸಾಹಿತ್ಯ ಸಂಘದಲ್ಲಿ, ಗೋಖಲೆ ಇನ್ಸಿಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್‌ನಲ್ಲಿ ಹಾಗೂ ಬೆಳಗಾಂ ಸಾಹಿತ್ಯ ಕೂಟದಲ್ಲಿ ಉಪನ್ಯಾಸ ಕೊಟ್ಟಿದ್ದೇನೆ. ನನ್ನ ಕೃತಿ 'ಮಹಾಕವಿ ಮುದ್ದಣ' ಎರಡನೇ ಆವೃತ್ತಿ ಕೂಡಾ ಪ್ರಕಟವಾಗಿ ಅಪಾರ ಜನಮನ್ನಣೆ ಗಳಿಸಿದೆ.

*****

# ಸಂಕ್ರಮಣಕವಿ – ಮುದ್ದಣ

## ವೇಣುಗೋಪಾಲ

ಹತ್ತೊಂಬತ್ತನೆಯ ಶತಮಾನ ಕೇವಲ ಕರ್ನಾಟಕದ ಮಾತ್ರವಲ್ಲ ಇಡೀ ಭಾರತದ ಸಾಂಸ್ಕೃತಿಕ ಚರಿತ್ರೆಯ ದೃಷ್ಟಿಯಿಂದ ಅತ್ಯಂತ ಪ್ರಮುಖ ಕಾಲಾವಧಿಯಾಗಿದೆ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಿ ಈ ಕಾಲ ಅನೇಕ ಸಂಘರ್ಷಗಳಿಂದ ಕೂಡಿಕೊಂಡಿತು ಎಂಬುದನ್ನು ಯಾವ ಪ್ರಜ್ಞಾವಂತ ವ್ಯಕ್ತಿಯೂ ಗುರುತಿಸಬಹುದು.

ಪರಂಪರೆ, ಸಂಪ್ರದಾಯಗಳ ಜಾಡ್ಯ ಎಲ್ಲ ನಿಟ್ಟಿನಿಂದಲೂ ಆವರಿಸಿಕೊಂಡಿದ್ದುದರಿಂದ ಇಡೀ ರಾಷ್ಟ್ರಜೀವನ ಮೂಲಭೂತ ಬದಲಾವಣೆಯನ್ನು ಬಯಸುತ್ತಿತ್ತು. ಆದರೆ ಈ ಜಾಗೃತಿಗೆ ರಾಜಕೀಯ ನೆಲೆಯಲ್ಲಿ ಮಾತ್ರ ದೇಶದಾದ್ಯಂತ ಮೂರ್ತರೂಪ ದೊರಕಿತೇ ವಿನಾ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಷ್ಟಾಗಿ ಲಭಿಸಲಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ನಡೆದ ಚಟುವಟಿಕೆಗಳೆಲ್ಲ ಒಂದೋ ಸಮಾಜ ಸುಧಾರಣೆಗೆ ಇಲ್ಲವೇ ದೇಶಪ್ರೇಮದ ಪ್ರೇರಣೆಗೆ ಸೀಮಿತವಾದುವು. ಈ ಎರಡು ಬದ್ಧ ಧೋರಣೆಗಳಿಗೂ ಅಂಟಿಕೊಳ್ಳದ ಕೆಲವು ಸಾಹಿತ್ಯಿಕ ಪ್ರವೃತ್ತಿಗಳು ಹಳೆಯ ಕಾವ್ಯ ಸಂಪ್ರದಾಯದ ಪುನರುತ್ಥಾನದಲ್ಲೋ ಮಾರ್ಗ ಪರಂಪರೆಯಿಂದ ಬಿಡುಗಡೆ ಹೊಂದುವುದರಲ್ಲೋ ಆಸಕ್ತವಾದುವು ಇಂತಹ ಸಂಕೀರ್ಣ ಕಾಲಘಟ್ಟದಲ್ಲಿ ಮುದ್ದಣ ತನ್ನ ಲೇಖನಿಯನ್ನೆತ್ತಿಕೊಂಡ ಎಂಬುದನ್ನು ವಿಮರ್ಶಕರು ಗಮನಿಸಬೇಕು.

ಮುದ್ದಣನ ಕಾಲಕ್ಕಾಗಲೇ ನಡುಗನ್ನಡ ಹೊಸಗನ್ನಡಕ್ಕೆ ಹೊರಳಿಕೊಂಡಿರುವುದನ್ನು ಸಮಕಾಲೀನ ಗದ್ಯದಲ್ಲಿ ಮುಖ್ಯವಾಗಿ ಅನುವಾದ ಸಾಹಿತ್ಯದಲ್ಲಿ ಕಾಣಬಹುದು. ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗದಲ್ಲಿ ಬಿ. ವೆಂಕಟಾಚಾರ್ಯರಿಂದ ಅನುವಾದಿತವಾದ ಕಾದಂಬರಿಗಳು ಜನಪ್ರಿಯವಾಗಿ ಬಿಟ್ಟಿದ್ದುವು. ಮುದ್ದಣ ಅವುಗಳನ್ನು ಗಮನಿಸಿದ್ದ ಮಾತ್ರವಲ್ಲ ಓದಿ ಮೆಚ್ಚಿಕೊಂಡಿದ್ದ ಎನ್ನುವುದಕ್ಕೆ ಪುರಾವೆಗಳಿವೆ. ಮಾತ್ರವಲ್ಲ ಆತನ ಯಕ್ಷಗಾನ ಪ್ರಸಂಗಗಳಲ್ಲಿ ಹೊಸಗನ್ನಡದ ಪ್ರಭಾವ ಸ್ಪಷ್ಟವಿದೆ. ಆದರೂ ಆತ ತನ್ನ ಪ್ರಾಯೋಗಿಕ ಕೃತಿಗಳಾದ ಅದ್ಭುತ ರಾಮಾಯಣ, ರಾಮಾಶ್ವಮೇಧಗಳಲ್ಲಿ ಯಾಕೆ ಸರಳೀಕೃತ ಹಳೆಗನ್ನಡವನ್ನು ಉಪಯೋಗಿಸಿಕೊಂಡ ? ಇದು ಕೇವಲ ಪೌರಾಣಿಕ ವಸ್ತುಗಳ ಅಭಿವ್ಯಕ್ತಿಯ ಅನುಕೂಲಕ್ಕೆ ಅಂತ ಹೇಳಬರುವುದಿಲ್ಲ. ತನ್ನ ಕಾಲದ ಪಂಡಿತವರ್ಗವನ್ನು

ಒಲಿಸಿಕೊಳ್ಳುವುದಕ್ಕೆ, ಆತ ಏನನ್ನಾದರೂ ಮಾಡಲೇಬೇಕಾಗಿತ್ತು. ಈ ಸಂದಿಗ್ಧತೆಯಲ್ಲಿ ಹೊಸದೊಂದು ನುಡಿಗಟ್ಟನ್ನು ಬಳಸಿ ಅಂಡಯ್ಯ ವಿಫಲನಾಗಿರುವುದು ಬಹುಶಃ ಮುದ್ದಣನ ಮನಸ್ಸಿನಲ್ಲಿದ್ದಿರಬಹುದು. ಅಥವಾ ಪ್ರಯತ್ನಪೂರ್ವಕ ಕರಗತ ಮಾಡಿಕೊಂಡಿದ್ದ ಹಳೆಗನ್ನಡ ಕಾವ್ಯ ಸಂಸ್ಕಾರವೂ ಕಾರಣವಾಗಿರಬಹುದು. ಅಂತೂ ಆತ ಸಂಪ್ರದಾಯದೊಂದಿಗೆ ರಾಜಿ ಮಾಡಿಕೊಳ್ಳಲೇ ಬೇಕಾಯಿತು. ಇಲ್ಲದಿದ್ದರೆ "ರಾಮಾಶ್ವಮೇಧ"ದ ಕಥಾಮುಖದಲ್ಲಿ ಓದುಗರ ಪ್ರತಿನಿಧಿಯಾಗಿ ಬರುವ ಮನೋರಮೆ "ತಿರುಳ್ಗನ್ನಡದ ಬೆಳ್ನುಡಿಯೊಳೆ" ಕಥೆ ಹೇಳಬೇಕೆಂದು ಅಪೇಕ್ಷಿಸಿದಾಗ "ಅದೊಡಂ..... ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆರೆಯೆ, ತಿರುಳ್ಗನ್ನಡದೊಳ್ ಕತೆಯನುಸಿರ್ವೆಂ" ಎಂದು ಆತ ಸಮನ್ವಯ ಧೋರಣೆಯನ್ನು ವಹಿಸುತ್ತಿರಲಿಲ್ಲ.

ಹೊಸ ಮನೋಧರ್ಮ ಮುದ್ದಣನ ವೈಶಿಷ್ಟ್ಯವಾಗಿದ್ದರೂ ವಸ್ತುವಿನ ಆಯ್ಕೆಯಲ್ಲಿ ಆತ ಸಂಪ್ರದಾಯಕ್ಕೇ ಹಿಂದಿರುಗಬೇಕಾಯಿತು. ಪೂರ್ಣವಾದ ತನ್ನೆಲ್ಲ ಕೃತಿಗಳಲ್ಲೂ ಆತ ಸಿದ್ಧವಸ್ತುಗಳನ್ನೇ ಆರಿಸಿಕೊಂಡ. ಸಂಕ್ರಮಣ ಕಾಲದಲ್ಲಿ ಹೊಸ ಕತೆಗಳನ್ನು ಸೃಷ್ಟಿಸುವ ಆವಶ್ಯಕತೆ ಅಂಡಯ್ಯನಿಗಿಂತ ಹೆಚ್ಚಿದ್ದರೂ, ಅಂತಹ ನೈತಿಕ ಧೈರ್ಯ ಪರಿಸರದ ಬೆಂಬಲ ಮುದ್ದಣನಿಗೆ ಇರಲಿಲ್ಲ. ತನ್ನ ಪರಿಮಿತಿಯೊಳಗೆ – ಅದೂ ಹಳೆಯ ವಸ್ತುವೊಂದಕ್ಕೆ ಹೊಸ ಚೈತನ್ಯವನ್ನು ತುಂಬುವುದರಲ್ಲಿ– ಆತ ತೃಪ್ತನಾಗಬೇಕಾಯಿತು. ಕಟು ವಿಮರ್ಶೆಯ ಬಗ್ಗೆ ಅಸ್ಪಷ್ಟ ಭೀತಿ, ಪರಂಪರೆಯನ್ನೆದುರಿಸುವುದಕ್ಕೆ ಭಯ – ಇವುಗಳಿಂದಾಗಿಯೇ ಆತ ಸಂಪ್ರದಾಯದ ಮುಖವಾಡವನ್ನು ಹಾಕಿಕೊಂಡ. ಗುಪ್ತನಾಮಗಳಲ್ಲಿ ಆತ ತನ್ನ ಕೃತಿಗಳನ್ನು ಪ್ರಕಟಿಸಬೇಕಾಯಿತು ಎಂಬುದನ್ನು ನೆನಸಿಕೊಂಡರೆ ಹೊಸಬರಿಗೆ ಸಾಹಿತ್ಯ ಕ್ಷೇತ್ರದಲ್ಲಿ ಆಗ ಎಷ್ಟು ಸ್ವಾಗತವಿತ್ತು ಎಂಬುದನ್ನು ಊಹಿಸಬಹುದು.

ಮುದ್ದಣನ ಸಾಹಿತ್ಯ ಮಾರ್ಗವನ್ನು ನಿರ್ಧರಿಸುವಲ್ಲಿ ಪರಂಪರೆ ಸಂಪ್ರದಾಯಗಳು ಎಷ್ಟು ಪಾತ್ರ ವಹಿಸಿದ್ದುವೋ ಅಷ್ಟೇ ಆತನ ವ್ಯಕ್ತಿಗತ ದೌರ್ಬಲ್ಯಗಳೂ ಕೂಡಾ. ಆತನ ಪ್ರತಿಭೆಯ ಮೂಲ ಸೆಲೆ ಯಕ್ಷಗಾನಗಳಿಂದ ಚಿಮ್ಮಿತ್ತು ಎಂಬುದನ್ನು ಗಮನಿಸಿದರೆ ಆತನಲ್ಲಿ ಕಂಡುಬರುವ ಪ್ರಾಸವ್ಯಾಮೋಹ, ಪದಗುಂಫನ, ನಿರರ್ಗಳ ಮಾತುಗಾರಿಕೆ ವರ್ಣನಾಚಮತ್ಕಾರ – ಇವೆಲ್ಲಕ್ಕೆ ಅರ್ಥ ಹೊಳೆಯುತ್ತದೆ. ಮಾರ್ಗ ಸಂಪ್ರದಾಯದ ಕಾವ್ಯಗಳನ್ನು, ವ್ಯಾಕರಣ ಛಂದಸ್ಸುಗಳನ್ನು ಚೆನ್ನಾಗಿ ಅರಗಿಸಿಕೊಂಡಿದ್ದ ಮುದ್ದಣನಿಗೆ ಆ ವಿದ್ವತ್ತನ್ನು ತನ್ನ ಕೃತಿಗಳಲ್ಲಿ ಪ್ರದರ್ಶಿಸುವ ಚಾಪಲ್ಯವನ್ನು ದಮನಿಸುವುದು ಅಸಾಧ್ಯವಾಗಿತ್ತು. 'ರಾಮಾಶ್ವಮೇಧ'ವನ್ನು ಬರೆಯುವ ಹೊತ್ತಿಗೆ ಮುದ್ದಣ ತನ್ನ ದೌರ್ಬಲ್ಯವನ್ನು ತಕ್ಕಮಟ್ಟಿಗೆ ಅರಿತುಕೊಂಡಿದ್ದ; ಸಾಕಷ್ಟು ವಿಮರ್ಶಕ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದ. ಮನೋರಮೆಯ ಆಕ್ಷೇಪಗಳ ಮೂಲಕ ತನ್ನ ದೌರ್ಬಲ್ಯಗಳಿಗೆ ಅಲ್ಲಲ್ಲಿ ತಡೆಯನ್ನು ನಿರ್ಮಿಸಿಕೊಂಡಿರುವುದು ಇದಕ್ಕಾಗಿಯೇ. ಮಾತ್ರವಲ್ಲ ಸಂಪ್ರದಾಯ ಹೊಸ ಮಾರ್ಗಗಳ ನಡುವಿನ ತನ್ನ ಇಬ್ಬಂದಿತನವನ್ನು ಸೂಚಿಸುವುದಕ್ಕೆ ಕೂಡಾ ಇರಬೇಕು.

ಹೊಸ ಮನೋಧರ್ಮದ ತುಡಿತ : 'ರತ್ನಾವತೀ ಕಲ್ಯಾಣ', 'ಕುಮಾರ ವಿಜಯ'ಗಳೆಂಬ ಎರಡು ಯಕ್ಷಗಾನ ಪ್ರಸಂಗಗಳು ಹಾಗೂ 'ಶ್ರೀರಾಮಪಟ್ಟಾಭಿಷೇಕ'ವೆಂಬ ಒಂದು ಖಂಡಕಾವ್ಯ ಮುದ್ದಣನ ಸಾಂಪ್ರದಾಯಿಕ ಮನಃಸ್ಥಿತಿಯನ್ನು ಪ್ರತಿಬಿಂಬಿಸಿದರೆ, 'ಅದ್ಭುತ ರಾಮಾಯಣ', 'ರಾಮಾಶ್ವಮೇಧ'ಗಳೆಂಬ ಎರಡು ಗದ್ಯಕೃತಿಗಳು ಈತನ ಹೊಸ ಮನೋಧರ್ಮಕ್ಕೆ ಬೆಳಕು ಚೆಲ್ಲುತ್ತವೆ. ಮಾರ್ಗ ಸಂಪ್ರದಾಯ ಕಾವ್ಯ ಮಾಧ್ಯಮದಲ್ಲಿ ಬೆಳವಣಿಗೆಯ ಶಿಖರವನ್ನು ತಲುಪಿ ನಿಸ್ತೇಜ ಹೊಂದುತ್ತಿರುವಾಗ ಈ ಬಂಜರು ಕ್ಷೇತ್ರವನ್ನು ಗದ್ಯ ಮಾಧ್ಯಮದ ಮೂಲಕ ಕೃಷಿ ಮಾಡ ಹೊರಟದ್ದೇ ಮುದ್ದಣನ ಆಧುನಿಕ ಮನೋವೃತ್ತಿಯನ್ನು ಸೂಚಿಸುತ್ತದೆ. ಯಾವುದೇ ಸಾಂಪ್ರದಾಯಿಕ ಸ್ತುತಿನಿಂದೆಗಳಿಲ್ಲದೆ ವಾಲ್ಮೀಕಿ ಆಶ್ರಮದ ವರ್ಣನೆಯಿಂದ ಅದ್ಭುತ ರಾಮಾಯಣವನ್ನಾರಂಭಿಸಿದ್ದು, ಸಂಪೂರ್ಣ ಹೊಸ ಜಾಡಿನ ಕಥಾಮುಖವನ್ನು ಸೃಷ್ಟಿಸಿ ರಾಮಾಶ್ವಮೇಧವನ್ನು ಬರೆದದ್ದು, ಮುದ್ದಣ ಪರಂಪರೆಯಿಂದ ತನ್ನನ್ನು ತಾನು ಕಳಚಿಕೊಳ್ಳುತ್ತಿರುವುದಕ್ಕೆ ಮುಖ್ಯ ಉದಾಹರಣೆಗಳು. ಕೆಲವೆಡೆ ಸಂಗ್ರಹ, ಇನ್ನು ಕೆಲವೆಡೆ ಅನುವಾದ, ಅನಗತ್ಯ ಭಾಗಗಳ ಲೋಪ ಇತ್ಯಾದಿಗಳಿಂದ ಸಂಸ್ಕೃತ ಮೂಲದ ಅದ್ಭುತ ರಾಮಾಯಣವನ್ನು ಆತ ತನ್ನದಾಗಿಸಿಕೊಂಡಿದ್ದಾನೆ. ಒಂದು ರೀತಿಯಲ್ಲಿ ಈ ಕೃತಿ ಮುದ್ದಣನ ಗದ್ಯಶೈಲಿಗೆ ಗರಡಿ ಇದ್ದಂತೆ ಎನ್ನಬಹುದು. ಇಲ್ಲಿ ಕಥಾವಸ್ತುವಿನ ಸುಸಂಗತ ಬೆಳವಣಿಗೆಯೆಡೆಗೆ ಮಾತ್ರ ಆತನ ಲಕ್ಷ್ಯ ಹೊರತು ನೀರಸ ವರ್ಣನೆಗಲ್ಲ. ಪುಟ್ಟ ಪುಟ್ಟ ವಾಕ್ಯ ವಿನ್ಯಾಸ, ಹಳೆಗನ್ನಡದ ಸರಳೀಕರಣ ಅಚ್ಚುಕಟ್ಟಾದ ಕಥನಕಲೆ, ನಾಟಕೀಯ ಸಂವಾದ ಮುಂತಾದುವು ಅದ್ಭುತ ರಾಮಾಯಣದಲ್ಲಿ ಕವಿ ತೋರುವ ಹೊಸತನ.

ಅದೇ ರೀತಿ ಶೇಷ ರಾಮಾಯಣದ ಪುರಾಣ ಕತೆಯನ್ನು ತನ್ನ ರಾಮಾಶ್ವಮೇಧದಲ್ಲಿ ಮುದ್ದಣ ಉಪಯೋಗಿಸಿಕೊಂಡ. ಅದ್ಭುತ ರಾಮಾಯಣದ ಬರವಣಿಗೆಯಲ್ಲಿ ಆತ ಗ್ರಂಥಕರ್ತನಾಗಿಯೇ ಔಚಿತ್ಯ ಅನೌಚಿತ್ಯಗಳನ್ನು ನಿರ್ಧರಿಸಿಕೊಂಡರೆ ಇಲ್ಲಿ ಅದಕ್ಕಾಗಿ ಹೊಸ ಪಾತ್ರವೊಂದನ್ನು ಸೃಷ್ಟಿಸಿದ. ಕಾವ್ಯದ ಚೌಕಟ್ಟಿನಲ್ಲೇ ಶ್ರೋತೃವಿನ ಪಾತ್ರ ಒಳಗೊಂಡಿದ್ದು ಕನ್ನಡ ಸಾಹಿತ್ಯದಲ್ಲಿ ಇದೇ ಪ್ರಥಮ ಬಾರಿಯಲ್ಲ. ಆದರೆ ವಿಮರ್ಶಕ ಪ್ರಜ್ಞೆಯುಳ್ಳ, ಸಹೃದಯನ ಪ್ರತಿನಿಧಿಯಾಗಬಲ್ಲ ಮನೋರಮೆಯಂಥ ಪಾತ್ರವೊಂದು ಕನ್ನಡದಲ್ಲಿ ಅದ್ವಿತೀಯವಾದದ್ದು. ಇಲ್ಲಿ ಕಾಣುವ ನಲ್ಲನಲ್ಲೆಯರ ಒನಪುವಯ್ಯಾರಗಳು, ಒಲವು–ಮುನಿಸುಗಳು, ಪ್ರಣಯ ಚೇಷ್ಟೆಗಳು, ಚಿಕ್ಕ, ಚೊಕ್ಕ ಸಂವಾದಗಳು, ಸರಸ ವಾದಗಳು ಓದುಗನನ್ನು ಹುಚ್ಚುಗಟ್ಟಿಸುತ್ತವೆ. ಆದರೆ ಮುದ್ದಣ ಈ ತಂತ್ರವನ್ನು ಬಹಳ ಜಾಣತನದಿಂದ ಉಪಯೋಗಿಸಿಕೊಂಡ. ಅದುವೇ ಆತನ ಯಶಸ್ಸಿನ ಗುಟ್ಟು ಕೂಡಾ.

ಓದುಗರ ಅಭಿರುಚಿ ಬದಲಾಗುತ್ತಿರುವುದು, ಕನ್ನಡ ಸಾಹಿತ್ಯ ತನ್ನ ಹಳೆಯ ಒಲವುಗಳಿಂದ ಮುಕ್ತ ಹೊಂದುತ್ತಿರುವುದು ಹಾಗೂ ನಡುಗನ್ನಡ ಭಾಷೆ ಹೊಸ ಕನ್ನಡಕ್ಕೆ ಹೊರಳಿಕೊಳ್ಳುತ್ತಿರುವುದು – ಈ ಎಲ್ಲ ಸಂಕ್ರಮಣ ಪ್ರವೃತ್ತಿಗಳು ಮುದ್ದಣನ

ಸೂಕ್ಷ್ಮಬುದ್ಧಿಗೆ ನಿಲುಕದಿರಲಿಲ್ಲ. ಎಲ್ಲ ನಿಟ್ಟಿನಿಂದಲೂ ಬದಲಾಗುತ್ತಿರುವ ಸಾಹಿತ್ಯ ಮಾರ್ಗದಲ್ಲಿ ನಡೆಯುವುದಕ್ಕೆ ಸಾಕಷ್ಟು ಧೈರ್ಯ, ಪೂರ್ವ ತಯಾರಿ ಅವನಿಗೆ ಅಗತ್ಯವಿತ್ತು. ಇಂತಹ ಎಲ್ಲ ಸಮಸ್ಯೆಗಳನ್ನು ಬಗೆಹರಿಸುವ ವೇದಿಕೆಯಾಗಿ ಆತ ಮುದ್ದಣ ಮನೋರಮೆಯರ ಸಂವಾದವನ್ನು ರೂಪಿಸಿದ. ಇದರಿಂದಾಗಿ ಆತ ಹಲವು ಉದ್ದೇಶಗಳನ್ನು ಒಮ್ಮೆಲೇ ಈಡೇರಿಸಿಕೊಂಡ ಅನ್ನಬಹುದು. ಮುಖ್ಯವಾಗಿ ಸಹೃದಯರನ್ನು ಥಟ್ಟನೆ ಆಕರ್ಷಿಸಿ ಬೆರಗುಪಡಿಸುವ ಸಾಧನವಾಗಿ ಈ ತಂತ್ರ ಕೆಲಸ ಮಾಡಿತು. ಅನಂತರ ಸಂಕ್ರಮಣ ಕಾಲದ ಆಕರ್ಷಣೆ ವಿಕರ್ಷಣೆಗಳನ್ನು ಒರೆಹಚ್ಚಿ ತನ್ನ ನಿಲುವನ್ನು ಪರೋಕ್ಷವಾಗಿ ಸಮರ್ಥಿಸಿಕೊಳ್ಳುವ, ಅದರೊಂದಿಗೆ ಓದುಗರನ್ನು ಕೂಡಾ ಚಿಂತಿಸುವುದಕ್ಕೆ ಪ್ರಚೋದಿಸುವ ಪ್ರಾಯೋಗಿಕ ವಿಮರ್ಶೆಯಾಯಿತು. ಸತಿಪತಿಯರ ಸಂಭಾಷಣಾ ರೂಪದಲ್ಲಿ ಬರುವ ಈ ಭಾಗಗಳು ಪುರಾಣ ಕತೆಯೊಂದಕ್ಕೆ ನಾಟಕೀಯ ತಿರುವುಗಳನ್ನು ನೀಡಿ ಕೃತಿಗೆ ಹೊಸ ಆಯಾಮವೊಂದನ್ನು ಕಲ್ಪಿಸಿದುವು. ಮುದ್ದಣನನ್ನು ಸೃಷ್ಟ್ಯಾತ್ಮಕ ಪ್ರತಿಭೆಯ ಪ್ರತೀಕವಾಗಿ ಹಾಗೂ ಮನೋರಮೆಯನ್ನು ವಿಮರ್ಶಕ ಪ್ರಜ್ಞೆಯ ಸಂಕೇತವಾಗಿ ತಿಳಿದುಕೊಂಡರೂ ಸರಿಯೇ, ಮುದ್ದಣನ ಹೊಸತನ ವ್ಯಕ್ತವಾಗದಿರುವುದಿಲ್ಲ.

ವಸ್ತುವಿನ ನಿರ್ವಹಣೆ, ಕಥಾಸಂವಿಧಾನ, ಪಾತ್ರ ರಚನೆ, ಶೈಲಿ ಎಲ್ಲದರಲ್ಲೂ ರಾಮಾಶ್ವಮೇಧ ಮುದ್ದಣನ ಹೊಸ ಒಲವುಗಳನ್ನು ಪ್ರತಿನಿಧೀಕರಿಸುತ್ತದೆ. ವಿಸ್ತಾರ ವರ್ಣನೆಗಳು ಮನೋರಮೆಯ ಔಚಿತ್ಯಪೂರ್ಣ ಪ್ರಶ್ನೆಗಳಿಂದ ಚುಟುಕುಗೊಳ್ಳುತ್ತವೆ. ಮಾತುಗಾರಿಕೆಯ ಫಲವಾಗಿ ಎಲ್ಲೆಲ್ಲೋ ಹರಿದ ಕಥೆ 'ಫ್ಲಾಶ್ ಬ್ಯಾಕ್' ತಂತ್ರದಿಂದ ಸುಸಂಗತವಾಗುತ್ತದೆ. ಪಾತ್ರಗಳ ಕುರಿತು ಪೂರ್ವಗ್ರಹ ಇಲ್ಲಿ ಕಾಣಿಸುವುದಿಲ್ಲ. ಕೃತಿಯ ನಾಯಕನೂ ದೌರ್ಬಲ್ಯ, ದೋಷಗಳಿಂದ ಮುಕ್ತಿ ಹೊಂದಿರುವುದಿಲ್ಲ. ಹಳೆಗನ್ನಡದ ಸ್ವರೂಪ, ಹೊಸಗನ್ನಡದ ಸತ್ಯ ಪರಸ್ಪರ ಬೆಸೆದುಕೊಂಡಿರುವ ಈ ಭಾಷೆ ಕನ್ನಡ ಗದ್ಯ ಸಾಹಿತ್ಯಕ್ಕೆ ಮುದ್ದಣನ ವಿಶಿಷ್ಟ ಕೊಡುಗೆಯಾಗಿದೆ. ಸರಸ ಮಾತುಗಾರಿಕೆ ಆಧುನಿಕ ವಾಕ್ಯರಚನಾ ವಿಧಾನ, ಜೀವಂತ ನುಡಿಗಟ್ಟುಗಳ ಬಳಕೆ ಇವು ಆತನನ್ನು ಸಾಂಪ್ರದಾಯಿಕ ಕವಿಗಿಂತ ಭಿನ್ನನೆಂದು ತೋರಿಸಿಕೊಡುತ್ತವೆ.

ಗದ್ಯಪದ್ಯಗಳ ಕುರಿತು ಮುದ್ದಣನ ಅಭಿಪ್ರಾಯ "ಪದ್ಯಂ ವಧ್ಯಂ ಗದ್ಯಂ ಹೃದ್ಯಂ" ಎಂಬುದು ಹಲವರ ಟೀಕೆಗೆ, ಸ್ವಾಗತಕ್ಕೆ ಗುರಿಯಾಗಿದೆ. ಅದ್ಭುತ ರಾಮಾಯಣ ಮತ್ತು ರಾಮಾಶ್ವಮೇಧಗಳನ್ನು ಬರೆಯುವ ಹೊತ್ತಿಗಾಗಲೇ ಹೊಸಯುಗದ ಅವಶ್ಯಕತೆ ಗದ್ಯವೇ ಹೊರತು ಪದ್ಯವಲ್ಲ ಎಂಬುದನ್ನು ಆತ ಖಚಿತವಾಗಿ ತಿಳಿದಿದ್ದ. ಕೆಂಪು ನಾರಾಯಣನ "ಮುದ್ರಾಮಂಜೂಷ, ಅನುವಾದಿತ ಕಾದಂಬರಿಗಳ ಯಶಸ್ಸು ಆತನ ಮುಂದಿರುವಂತೆಯೇ, ಇತರರು ಬರೆಯುವ ಕಾವ್ಯಗಳು ಮಾತ್ರವಲ್ಲ ತನ್ನದೇ ಕಾವ್ಯ "ಶ್ರೀ ರಾಮ ಪಟ್ಟಾಭಿಷೇಕ" ಸಹೃದಯರ ಅವಜ್ಞೆಗೆ ಗುರಿಯಾಗಿರುವುದು ಆತನನ್ನು ಈ ಹೊತ್ತಿನಲ್ಲಿ ಕಾಡಿರಬಹುದು. ಆದ್ದರಿಂದ ಈ ಮಾತು ಆತನ ಸಾಹಿತ್ಯಿಕ ಸಂದರ್ಭಕ್ಕೆ ಸೀಮಿತವಷ್ಟೇ ಹೊರತು ಸಾರ್ವತ್ರಿಕವಲ್ಲ.

ಛಂದಸ್ಸು ಅಭಿವ್ಯಕ್ತಿಗೆ ಅನಿವಾರ್ಯವಾಗಿ ಬರಬೇಕು ಎಂಬುದು ಮಾತ್ರ ಮುದ್ದಣನ ಇಂಗಿತ ಹೊರತು ಪದ್ಯಕಾವ್ಯಗಳೆಲ್ಲಾ ವಧ್ಯ ಎಂದಲ್ಲ. ಅಷ್ಟಕ್ಕೂ "ಪುರುಳಿಲ್ಲದ ಸಲ್ಲದ ಪೊಲ್ಲದೆನ್ನ ಬರುವಣ್ಣನೆಯ ಬೇಸರಿಕೆಯ ಪಾಳ್ಗಬ್ಬಮಂ ಪೊಳ್ಳೆಂದೆ ನುಡಿದೆಂ" ಎಂದು ಒಂದು ಕಡೆ ಆತನೇ ಒಪ್ಪಿಕೊಂಡಿದ್ದಾನೆ. ಆದ್ದರಿಂದ ಮುದ್ದಣನ ಗದ್ಯಕೃತಿಗಳು ಹಾಗೂ ಅವನ ಸಾಹಿತ್ಯಿಕ ಚರ್ಚೆಗಳನ್ನು ಅವಲೋಕಿಸಿದಾಗ ವ್ಯಕ್ತವಾಗುವ ಅಂಶವೆಂದರೆ ಆತ ತನ್ನ ಕಾಲಕ್ಕೆ, ತನ್ನ ಓದುಗರಿಗೆ ಅತ್ಯಂತ ನಿಷ್ಠನೂ, ಜವಾಬ್ದಾರನೂ ಆಗಿದ್ದಾನೆ ಎಂಬುದು. ಆತ ಸಿದ್ಧವಸ್ತುವನ್ನು ಆರಿಸಿಕೊಂಡ ನಿಜ. ಆದರೆ ಕಾಲದ ಒಲವನ್ನು ಗುರುತಿಸಿದ, ಸಹೃದಯರ ಅಭಿರುಚಿಯನ್ನು ಗಮನಿಸಿದ. ಹೀಗೆ ಪರಿಸರ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಯುಗಧರ್ಮವನ್ನು ಗೌರವಿಸಿದ. ಸಂಪ್ರದಾಯದ ಅವಶೇಷಗಳು ಆತನ ಕೃತಿಗಳಲ್ಲಿ ಅಲ್ಲಲ್ಲಿ ಗೋಚರಿಸಬಹುದು. ಆದರೆ ಆತನ ಗದ್ಯಕೃತಿಗಳ ಉದ್ದಕ್ಕೂ ಹೊಸ ಮನೋಧರ್ಮವೊಂದು ಜ್ವಲಂತವಾಗಿ ತುಡಿಯುತ್ತಿರುವುದನ್ನು ನಿರ್ಲಕ್ಷಿಸುವ ಹಾಗಿಲ್ಲ.

ಸಂಧಿಕಾಲದ ಕವಿಯಲ್ಲಿ ಸಹಜವಾಗಿ ಹೊಸ ಮನೋಧರ್ಮ ಕಂಡುಬರುವುದಾದರೂ ಆತ ಇನ್ನೂ ಪರಂಪರೆಯ ಪ್ರಭಾವದಿಂದ, ಸಂಪ್ರದಾಯದ ಬಂಧನದಿಂದ ಪೂರ್ತಿಯಾಗಿ ಕಳಚಿಕೊಂಡಿರುವುದಿಲ್ಲ. ಅದಕ್ಕೆ ಸಾಹಿತ್ಯಿಕ ಕಾರಣಗಳಿಗಿಂತಲೂ ಹೆಚ್ಚಾಗಿ ಬಾಹ್ಯ ಕಾರಣಗಳು ಪ್ರಮುಖವಾಗಿರುತ್ತದೆ. ಸಂಕ್ರಮಣ ಕವಿ ಸಾಮಾಜಿಕ ವ್ಯಕ್ತಿಯೇ ಆಗಿರುವುದರಿಂದ ಆತ ಪ್ರತಿಷ್ಠಿತ ಸಮಾಜವನ್ನೋ, ಸಂಪ್ರದಾಯಗಳನ್ನೋ ಕಡೆಗಣಿಸುವ ಹಾಗಿಲ್ಲ. ಅದರೊಂದಿಗೇ ಆತ ಸಮಾನ ಧರ್ಮವುಳ್ಳ ಸಮಕಾಲೀನ ಜನಾಂಗಕ್ಕೆ ಹೆಚ್ಚು ಆಪ್ತವೂ ಪ್ರಾಮಾಣಿಕವೂ ಆಗಿರಬೇಕಾಗುತ್ತದೆ. ಈ ದ್ವಂದ್ವಕ್ಕೆ ಸಿಲುಕಿದ ಕವಿ ಯಾವ ವರ್ಗವನ್ನೂ ಸಂಪೂರ್ಣ ನಿರ್ಲಕ್ಷಿಸುವುದು ಆತನ ಅಸ್ತಿತ್ವಕ್ಕೆ ಮಾರಕವಾಗಬಹುದು. ತನ್ನ ಗದ್ಯಕೃತಿಗಳಲ್ಲಿ ಈ ಎರಡು ವರ್ಗದ ಸಾಹಿತ್ಯಕ ಆಸ್ಥೆ ಆಕಾಂಕ್ಷೆಗಳನ್ನು ಒಮ್ಮೆಲೇ ಈಡೇರಿಸುವ ಸಾಹಸದಲ್ಲಿ ಮುದ್ದಣ ತೊಡಗಿರುವುದು ಸ್ಪಷ್ಟವಾಗಿದೆ. ಈ ದೃಷ್ಟಿಯಿಂದ ಹೆಚ್ಚು ಕಡಿಮೆ ಇದೇ ಶತಮಾನದಲ್ಲಿ ಆದರೆ ಮುದ್ದಣನಿಗಿಂತ ಮೊದಲು ಗದ್ಯಕೃತಿಯೊಂದನ್ನು ರಚಿಸಿದ ಕೆಂಪು ನಾರಾಯಣನೊಂದಿಗೆ ಈತನನ್ನು ಹೋಲಿಸುವುದು ಕುತೂಹಲಕರವಾಗಿದೆ.

ಕೆಂಪು ನಾರಾಯಣನಲ್ಲಿ ನಡುಗನ್ನಡದ ಪಳೆಯುಳಿಕೆಗಳು ಹಾಗೂ ಹೊಸಗನ್ನಡದ ಒಲವುಗಳು ನಿಚ್ಚಳವಾಗಿ ಕಂಡುಬರುತ್ತವೆ. ಸಂಸ್ಕೃತದ ಕಥಾರೂಪವನ್ನು ಕನ್ನಡದ ನೀಳ್ಗತೆಯಾಗಿ ಮಾರ್ಪಡಿಸಿಕೊಂಡುದನ್ನು ಮುದ್ರಾಮಂಜೂಷದಲ್ಲಿ ನಾವು ನೋಡುತ್ತೇವೆ. ಆದರೆ ಆತನಲ್ಲಿ ಕಾಣಬಹುದಾದ ಹೊಸಗನ್ನಡದ ಒಲವು ಜಾಗೃತವಾದ ತಿಳುವಳಿಕೆಯಾಗಿರಲಿಲ್ಲ. ತನಗರಿವಿಲ್ಲದೆಯೇ ಆತ ಹೊಸಗನ್ನಡದ ನಾಂದಿ ಹಾಡಿದ. ಕೆಂಪು ನಾರಾಯಣನ ಗಮನ ಕತೆಯ ಬೆಳವಣಿಗೆಯ ಕುರಿತಾಗಿತ್ತೇ ವಿನಾ ತಂತ್ರ, ರೂಪ, ವಿನ್ಯಾಸಗಳ ಕಡೆಗಿರಲಿಲ್ಲ. ಈ ದೃಷ್ಟಿಯಲ್ಲಿ ಮುದ್ದಣ ಕೆಂಪುನಾರಾಯಣನಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ

ಎನಿಸುತ್ತದೆ. ಸಂಕ್ರಮಣ ಕಾಲದಲ್ಲಿ ಸೃಷ್ಟ್ಯಾತ್ಮಕ ಪ್ರತಿಭೆಗೆ ಹೊಸ ರೂಪವನ್ನು ನೀಡಲು ಅತ್ಯಗತ್ಯವಾದ ವಿಮರ್ಶಕ ಪ್ರಜ್ಞೆ ಮುದ್ದಣನಲ್ಲಿತ್ತು. ಮನ್ವಂತರದ ಹಳೆಯ ಹೊಸ ಸಂವೇದನೆಗಳು ಕೆಂಪು ನಾರಾಯಣನಲ್ಲಿ ಅವ್ಯಕ್ತವಾಗಿ ಧ್ವನಿಗೊಳ್ಳುವುದಿದ್ದರೆ ಮುದ್ದಣನಲ್ಲಿ ಅದು ಪ್ರಜ್ಞಾವಂತ ಪ್ರತಿಭೆಯಾಗಿ ರೂಪದಾಳುತ್ತದೆ. ಮುದ್ರಾಮಂಜೂಷದಲ್ಲಿ ಸಂಧಿಕಾಲದ ಗೊಂದಲದ ಭಾಷೆ ಕಾಣಿಸಿಕೊಂಡರೆ ರಾಮಾಶ್ವಮೇಧದಲ್ಲಿ ಭಾಷೆಯ ಕುರಿತಾದ ನಿರ್ದಿಷ್ಟ ನಿಲುವು ಗೋಚರಿಸುತ್ತದೆ. ಆದ್ದರಿಂದ ಭಾಷೆ, ಶೈಲಿ ಮತ್ತು ಅವುಗಳ ಕುರಿತಾದ ಪ್ರಜ್ಞೆ ಈ ಎಲ್ಲ ದೃಷ್ಟಿಯಿಂದಲೂ ಮುದ್ದಣ ಕೆಂಪು ನಾರಾಯಣನಿಗಿಂತಲೂ ಹೆಚ್ಚು ಸಮಂಜಸವಾಗಿ ಸಂಕ್ರಮಣ ಕವಿ ಎಂದು ಕರೆಸಿಕೊಳ್ಳುವುದಕ್ಕೆ ಅರ್ಹನಾಗಿದ್ದಾನೆ.

ಮುದ್ದಣನ ಸಂಕ್ರಮಣ ವ್ಯಕ್ತಿತ್ವವನ್ನು ಬಾಹ್ಯ ಹಾಗೂ ಆಂತರಿಕ ಕಾರಣಗಳಿಂದ ಸಮರ್ಥಿಸಬಹುದು. ಪ್ರಥಮವಾಗಿ ಆತನ ಸಾಹಿತ್ಯಿಕ ಬೆಳವಣಿಗೆಯನ್ನು ಗಮನಿಸಬೇಕು. ಜಾನಪದ ಪ್ರಕಾರದಲ್ಲಿ ಆಸಕ್ತವಾದ ತನ್ನ ಪ್ರತಿಭೆಯನ್ನು, ಎರಡು ಯಕ್ಷಗಾನ ಪ್ರಸಂಗಗಳನ್ನು ರಚಿಸುವ ಮೂಲಕ ದುಡಿಸಿದ ಪ್ರತಿಭೆ, ವಿದ್ವತ್ತುಗಳ ಸಂಗಮವಾದಾಗ ಶ್ರೀ ರಾಮ ಪಟ್ಟಾಭಿಷೇಕವೆಂಬ ಸಾಂಪ್ರದಾಯಿಕ ಕಾವ್ಯ ಹುಟ್ಟಿ ಬಂತು. ಕಾವ್ಯ ಪ್ರಕಾರದಲ್ಲಿ ತನ್ನ ಲೇಖನಿಗೆ ಸ್ವಾತಂತ್ರ್ಯವಿಲ್ಲದುದನ್ನು ಅರಿತುಕೊಂಡಾಗ ಆತ ಎರಡು ಗದ್ಯಕೃತಿಗಳನ್ನು ಸಂಪ್ರದಾಯಕ್ಕೆ ಆತುಕೊಂಡೇ ರೂಪಿಸಿದ. ಅಷ್ಟಕ್ಕೂ ನಿಲ್ಲದೆ, ಓದುಗರ ನಾಡಿಯ ಮಿಡಿತವನ್ನು ತಿಳಿದುಕೊಂಡಾಗ "ಗೋದಾವರಿ" ಎಂಬ ಕಾದಂಬರಿಯನ್ನು ಅದೂ ಹೊಸಗನ್ನಡದಲ್ಲಿ ಬರೆಯುವುದಕ್ಕಾರಂಭಿಸಿದ. ಹೀಗೆ ಕೃತಿಯಿಂದ ಕೃತಿಗೆ ಸ್ವರೂಪ, ಭಾಷೆ, ವಸ್ತು, ತಂತ್ರ, ಮನೋಧರ್ಮಗಳಲ್ಲಿ ಬೆಳೆದು ನಿಂತಿರುವುದು, ಪ್ರತಿಯೊಂದು ಮಾಧ್ಯಮವನ್ನೂ ಪರೀಕ್ಷಿಸಿ ನೋಡಿರುವುದು – ಇವನ್ನೆಲ್ಲ ಗಮನಿಸಿದಾಗ ಮುದ್ದಣ ಇನ್ನಷ್ಟು ಕಾಲ ಬದುಕಿದ್ದರೆ ನವೋದಯ ಕಾಲದ ಅತೀ ಮಹತ್ವದ ವ್ಯಕ್ತಿಯಾಗಿಬಿಡುತ್ತಿದ್ದ ಅನ್ನುವುದು ಸ್ಪಷ್ಟ.

ಯಾವುದೇ ಸಂಕ್ರಮಣಾವಸ್ಥೆಯಲ್ಲಿ ಬರೆಯುವ ಪ್ರಜ್ಞಾವಂತ ಸಾಹಿತಿ ತನ್ನ ಜನಾಂಗದ ಆಶೋತ್ತರಗಳನ್ನು, ಮಾನಸಿಕ ತುಡಿತಗಳನ್ನು ಅರಿತಿರಬೇಕಾಗುತ್ತದೆ. ಮುದ್ದಣನಿಗೆ ಅಂಥ ತಿಳುವಳಿಕೆ ಇತ್ತು ಎನ್ನುವುದಕ್ಕೆ ರಾಮಾಶ್ವಮೇಧದಲ್ಲಿರುವ ಸಾಹಿತ್ಯಿಕ ಚರ್ಚೆ ಸಾಕ್ಷಿ ಹೇಳುತ್ತದೆ. ಮುದ್ದಣ "ಏಂ ಭೋಜ ಪ್ರಬಂಧಂ; ವಿಕ್ರಮ ವಿಜಯಂ, ಮಹಾವೀರ ಚರಿತಂ ?" ಎಂದು ಪ್ರಶ್ನಿಸಿದಾಗ ಮನೋರಮೆ "ಇಸ್ಸೀ ! ಇವರೊಳೆನಗಳ್ಕರಿಲ್ಲ" ಎಂದು ಹೀನೈಸಿ, ತಾನಿಷ್ಟಪಡುವ ಮಾಧ್ಯಮವನ್ನು ನಿರ್ದೇಶಿಸುತ್ತಾ "ಪದ್ಯಂ ವಧ್ಯಂ ಗದ್ಯಂ ಹೃದ್ಯಂ, ಹೃದ್ಯಮಪ್ಪಗದ್ಯದೊಳ್" "ನಲ್ಗತೆಯಂ ಪೇಳ್" ಎಂದು ಕೇಳಿಕೊಳ್ಳುವುದು ಮುದ್ದಣನ ಕಾಲದ ಓದುಗರ ಅಪೇಕ್ಷೆ ಅಭಿರುಚಿಗಳು ಏನಿದ್ದುವೆಂಬುದನ್ನು ಸ್ಪಷ್ಟಪಡಿಸುತ್ತದೆ. ಮುದ್ದಣ ತನ್ನ ಕತೆಯನ್ನು ಸಾಂಪ್ರದಾಯಿಕವಾಗಿ "ಸ್ವಸ್ತಿ ಶ್ರೀ ಮತ್ಸುರಾಸುರೇಂದ್ರ....." ಎಂದು ಮುಂತಾಗಿ

ಆರಂಭಿಸಿದಾಗ ಮನೋರಮೆ ಅದನ್ನು ಪುನಃ ಆಕ್ಷೇಪಿಸುತ್ತಾಳೆ. ಆಗಿನ ಕಾಲದ ಸಾಹಿತ್ಯಿಕ ಒಲವು ಬದಲಾಗಿರುವುದನ್ನು ಮುದ್ದಣ ಕಂಡುಕೊಂಡಿದ್ದಾನೆಂಬುದಕ್ಕೆ ಮತ್ತೂ ಒಂದೆರಡು ನಿದರ್ಶನಗಳನ್ನು ಕೊಡಬಹುದು. "ಆನುಂ ನೋಳ್ಪೆಂ ಕತೆಯ ಪುರುಳೆಂತಿರ್ಕು ಮೆಂದು" "ತೂಂಕಡಿಸದೇವೆನೊ ಕಿವಿಗಳ್ಗೆ ಪುರುಳಮರದ ಗುರ್ದಿನಾಟದ ಬರುರಗಳೆಯ ನಿಡುಕತೆಗೆ..... ಎರ್ದೆವುಗುವ ಪೊಚ್ಚಪೊಸ ನಲ್ಗತೆಗಳನೆ ಮೆಚ್ಚುವೆಂ" "ಬಣ್ಣನೆಯ ಧರಣಿ ಮಂಡಲ ತರಣಿ ಮಂಡಲಗಳೇಕೆ ಒಂದುಳಿಯದಂತು ತಿರುಳನೆ ಕೂಡಿ ಪೇಳಯ್" ಎಂದು ಮನೋರಮೆ ತನ್ನ ಬಯಕೆಯನ್ನು ತೋಡಿಕೊಳ್ಳುತ್ತಾಳೆ. ಬದಲಾಗುತ್ತಿರುವ ಭಾಷೆಯ ಬಗ್ಗೆಯೂ ಮುದ್ದಣನಿಗೆ ತಿಳುವಳಿಕೆ ಇದೆ. "ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು ಕನ್ನಡದ ಸೊಗಸಿನರಿಯೆ ಲಾರ್ತನಿಲ್ಲೆನಗೆ ಸಕ್ಕದದ ಸೊಗಸಂ ಪೇಳ್ವುಂಗಡ! ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೆಗೊಂಡುದೆ ಪೇಳ್ವುದು ಕನ್ನಡಂ ಕತ್ತುರಿಯಲ್ತೆ". ಹೀಗೆ ತನ್ನ ಎಲ್ಲ ಸಮಕಾಲೀನ ಸಾಹಿತ್ಯಿಕ ಸಮಸ್ಯೆಗಳನ್ನು ಈ ಸಂವಾದಗಳ ಮೂಲಕ ಮಂಡಿಸಿರುವುದನ್ನು ಪರೀಕ್ಷಿಸಿದಾಗ ಆತ ಮುಂದಿನ ಸಾಹಿತ್ಯ ಯಾವ ಹಾದಿಯನ್ನು ಹಿಡಿಯಬೇಕು ಎನ್ನುವ ಬಗ್ಗೆ ತನ್ನದೇ ಒಂದು ತೀರ್ಮಾನಕ್ಕೆ ಬಂದಿರುವಂತೆ ಕಾಣುತ್ತದೆ.

ಮುದ್ದಣನ ಕುರಿತ ರಾಗದ್ವೇಷಾದಿಗಳ ಅತಿರೇಕವೆಲ್ಲ ಇಳಿದು ಹೋದ ಈ ಕಾಲದಲ್ಲಿ ಆತನ ಕೃತಿಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸಬಹುದು. ಆತನ ಕಾರ್ಯ ಕ್ಷೇತ್ರ ಹಾಗೂ ಬದುಕಿದ ಕಾಲ ಎರಡೂ ಸೀಮಿತವಾದದ್ದು. ತನ್ನ ಸಾಧ್ಯತೆಯಲ್ಲಿ ಆತ ಅಸಾಧಾರಣ ಕುಶಲತೆಯನ್ನು ತೋರಿದ; ಹಳೆಯ ವಸ್ತುವನ್ನಾರಿಸಿಕೊಂಡು ಹೊಸ ತಂತ್ರ ಸಂವೇದನೆಗಳನ್ನು ಅವುಗಳಲ್ಲಿ ಅಭಿವ್ಯಕ್ತಿಸಿದ. ಮುದ್ದಣನ ಶ್ರೇಷ್ಠತೆ ಇರುವುದು ಆತನ ಕೃತಿಗಳ ತಿರುಳಿನಲ್ಲಲ್ಲ; ಸ್ವರೂಪದಲ್ಲಿ. ಹೀಗೆಂದಾಗ ಆತನ ಬರಹ ಸತ್ವಹೀನ ಅಂದಂತಾಗಲಿಲ್ಲ. ಆತನ ವಾಲ್ಮೀಕಿ ಆಶ್ರಮದ ವರ್ಣನೆ, ಸೀತೆಯ ಸಂತಾನದ ಹಂಬಲ, ಮಕ್ಕಳ ಬಾಲಲೀಲೆ, ಶ್ರೀಮತಿಯ ಸೌಂದರ್ಯ ವರ್ಣನೆ ಸೀತಾರಾಮರ ವನವಾಸ ಚಿತ್ರ, ದುರ್ಗಾವತಾರದ ವರ್ಣನೆ ಇತ್ಯಾದಿ ಭಾಗಗಳು ಹೃದಯಂಗಮವಾಗಿವೆ. ಆತನ ಗದ್ಯದಲ್ಲಿರುವ ನಾದಮಾಧುರ್ಯ, ತಾಯ್ನೆಲದ ನುಡಿಗಟ್ಟುಗಳು, ಕಣ್ಣಿಗೆ ಕಟ್ಟಿರುವಂತಿರುವ ಶಬ್ದ ಚಿತ್ರಗಳು, ಸಣ್ಣ ಕತೆಗಳ ಸತ್ವ ನಿಜಕ್ಕೂ ಆತನನ್ನು ಒಳ್ಳೆಯ ಕವಿ ಎನ್ನುವಂತೆ ಮಾಡುತ್ತವೆ. "ಮುದ್ದಣನ ಕೃತಿಗಳ ಹಿರಿಮೆಗೆ ಅವನ ಅಪೂರ್ವ ರಸಜ್ಞತೆ ಹಾಗೂ ಅವನ ಕಥನ ಕಲಾಪರಿಣತಿಗಳೇ ಕಾರಣ" ಎಂಬ ದೇ.ಜ.ಗೌ. ಮಾತು ಅಕ್ಷರಶಃ ಸತ್ಯ. ಆದರೆ ಆತನ ಯಶಸ್ಸಿಗೆ ಆತನ ಆಡುಮಾತಿನ ಲಯ ಹಾಗೂ ನಾಟಕೀಯ ಚಿತ್ರ ಶೈಲಿ ಕೂಡಾ ಕಾರಣ ಎಂಬುದನ್ನು ಮರೆಯುವಂತಿಲ್ಲ.

ಮುದ್ದಣನ ಕೃತಿಗಳಲ್ಲಿ ದೌರ್ಬಲ್ಯಗಳೂ ದೋಷಗಳೂ ಇಲ್ಲದೆ ಇಲ್ಲ. ಅತಿ ಮುಖ್ಯವಾದದ್ದು ಅವನ ವಾಚಾಳಿತನ. ಇದು ಯಕ್ಷಗಾನದ

ಪ್ರಭಾವದಿಂದಾಗಿರಬಹುದು ಅಥವಾ ಅರಗಿಸಿಕೊಂಡ ಕಾವ್ಯಶಾಸ್ತ್ರಗಳ ಪರಿಣಾಮವೂ ಇರಬಹುದು. ನೀರಸ ವರ್ಣನೆಗಳು, ಪ್ರಾಸದ ಕೋಲಾಹಲಗಳು, ತದ್ಭವಗಳ ಪ್ರಾಚುರ್ಯ ಅತಿ ಶ್ಲೇಷೆಗಳ ವ್ಯಾಮೋಹ ಇವೆಲ್ಲ ದೋಷಗಳು ಆತನ ಕೃತಿಗಳ ಗುಣಮಟ್ಟವನ್ನು ತಗ್ಗಿಸುತ್ತವೆ. ಮಾತ್ರವಲ್ಲ ಭಾಷೆಯ ಕುರಿತಾಗಿಯೂ ಕೂಡಾ ಆತ ಮಡಿವಂತನಾಗಿದ್ದ ಅನಿಸುತ್ತದೆ. ಒಟ್ಟನಲ್ಲಿ ಇಷ್ಟು ಹೇಳಬಹುದು : ಎಲ್ಲೆಲ್ಲಿ ಆತ ಸಂಪ್ರದಾಯ ಪರಂಪರೆಗಳನ್ನು ಬಿಟ್ಟಿಲ್ಲವೋ ಅಲ್ಲೆಲ್ಲ ಎಡವಿದ್ದಾನೆ; ತನ್ನ ಕೃತಿಗಳ ಕಳೆಯನ್ನು ಕುಂದಿಸಿಕೊಂಡಿದ್ದಾನೆ.

ಮುದ್ದಣನನ್ನು 'ಕ್ರಾಂತಿಕಾರಿ' 'ಆಧುನಿಕ ಗದ್ಯ ಸಾಹಿತ್ಯಕ್ಕೆ ಮೂಲಪುರುಷ' ಎಂದೆಲ್ಲ ಕರೆಯುವುದು ಅತಿಶಯೋಕ್ತಿಯ ಹೊರತು ಬೇರೇನಲ್ಲ. ಆತನಿನ್ನೂ ವಿಕಾಸದ ಹಂತದಲ್ಲಿದ್ದ ಅಷ್ಟೆ. ಒಂದು ವೇಳೆ ಆತ ಇನ್ನೂ ಒಂದೆರಡು ದಶಕಗಳಷ್ಟು ಜೀವಿಸಿದ್ದರೆ "ನವೋದಯ ಸಾಹಿತ್ಯದ ಮುಂಗೋಳಿ" ಆಗಬಹುದಿತ್ತೇನೊ. ಯಾಕಂದರೆ ಆತನ ಗದ್ಯ, ಇಪ್ಪತ್ತನೇ ಶತಮಾನದ ಗದ್ಯದ ಮೇಲೆ ನೇರವಾದ, ಸ್ಪಷ್ಟವಾದ ಯಾವ ಪ್ರಭಾವವನ್ನೂ ಬೀರಿಲ್ಲ. ಆದ್ದರಿಂದ ಮುದ್ದಣನನ್ನು "ಆಧುನಿಕ ಗದ್ಯ ಸಾಹಿತ್ಯ ಪ್ರವರ್ತಕ" ಎನ್ನುವುದು ಅಸಂಗತವಾದದ್ದು. ಸಿ.ಪಿ.ಕೆ.ಯವರು ಹೇಳುವಂತೆ "ಮುದ್ದಣ ಹೊಸ ಯುಗದ ಪ್ರವರ್ತಕನಲ್ಲ. ಅದರ ಆಗಮನವನ್ನು ಸಾರಿ ಹೇಳಿದ ಹರಿಕಾರ." ಹಿರಿಯ ವಿಮರ್ಶಕ ಡಿ.ವಿ.ಜಿ. ಅವರ ಮಾತುಗಳು ಸ್ವಲ್ಪ ಜಿಪುಣತನದ್ದು ಅಂತ ಅನ್ನಿಸುವುದಿದ್ದರೂ ಅವುಗಳಲ್ಲಿ ಮುದ್ದಣನ ಕೃತಿಗಳ ಯೋಗ್ಯ ವಿಮರ್ಶೆ ಇದೆಯೆಂದು ತೋರುತ್ತದೆ. "ಲಕ್ಷ್ಮೀನಾರಾಯಣ ಕವಿಯು ನೂತನ ಮಾರ್ಗದರ್ಶಕರಾದ ಕೆಲವು ಮಂದಿಯ ಪಂಕ್ತಿಗೆ ಸೇರತಕ್ಕವನು. ಪೂರ್ವಿಕರ ಕತೆಗಳಲ್ಲಿ ಕಾಣಬರದಿರುವ ಲಕ್ಷಣಗಳೊಂದೆರಡು ಆತನ ಕೃತಿಗಳಲ್ಲಿ ಕಂಡುಬರುತ್ತದೆ. ಆ ಲಕ್ಷಣಗಳು ಇನ್ನೂ ಪ್ರಾರಂಭ ದೆಸೆಯಲ್ಲಿರುವುವು....... ಸಾಂಪ್ರದಾಯಿಕ ಕಾವ್ಯವನ್ನು ಬರೆಯಲು ಪ್ರತಿಭೆ ಪಾಂಡಿತ್ಯಗಳೆರಡೂ ಅತಿ ಮುಖ್ಯವಾದುವು ಸ್ವತಂತ್ರ ಕಾವ್ಯ ರಚನೆಗೆ ಹೊಸದೊಂದು ಮನೋವೃತ್ತಿಯೂ ಧೈರ್ಯವೂ ಇರಬೇಕು. ಅವು ಆತನಿಗೆ ಬಂದಿದ್ದುವು." ಸಾರಾಂಶ ಇಷ್ಟು : ಕಾವ್ಯಾಸಕ್ತನಾದ ಓದುಗ ಪ್ರಪಂಚವೊಂದಕ್ಕೆ ಮುದ್ದಣ ಗದ್ಯದ ಸೊಗಸನ್ನು ತೆರೆದು ತೋರಿಸಿ ಕುತೂಹಲ ಹುಟ್ಟುವಂತೆ ಮಾಡಿದ. ಆತ ಹೊಸಗನ್ನಡದ ಪ್ರವರ್ತಕನೇನಲ್ಲ. ಪರಂಪರೆ ಸಂಪ್ರದಾಯಗಳಲ್ಲಿ ಕಾಲೂರಿ, ಹೊಸ ಮಾರ್ಗಕ್ಕೆ ಜಿಗಿಯಲೆತ್ನಿಸಿದ ಸಂಕ್ರಮಣ ಕವಿ.

*****

# ಮುದ್ದಣನ ಜೀವನದ ಕೆಲವು ಮುಖ್ಯ ವರುಷಗಳು

೧೮೩೯ ತಂದೆ ಪಾತಾಳಿ ತಿಮ್ಮಪ್ಪಯ್ಯನವರ ಜನನ

೧೮೫೪ ತಾಯಿ ಮಹಾಲಕ್ಷ್ಮಮ್ಮನವರ ಜನನ

೧೮೭೦ ಜನವರಿ ೨೪ ಕವಿಯ ಜನನ

೧೮೮೯ ಹೈಸ್ಕೂಲಿನಲ್ಲಿ ಅಂಗಸಾಧನೆಯ ಶಿಕ್ಷಕನಾಗಿ ಕೆಲಸಕ್ಕೆ ಸೇರಿದುದು.

೧೮೯೨ ಮಾರ್ಚ : ಕುಂದಾಪುರದ ಹೈಸ್ಕೂಲಿಗೆ ವರ್ಗವಾದದ್ದು.

೧೮೯೩ ಮದುವೆ

ಅದ್ಭುತರಾಮಾಯಣವನ್ನು ಬರೆಯಲು ಪ್ರಾರಂಭಿಸಿದ್ದು.

೧೮೯೪ ಅದ್ಭುತರಾಮಾಯಣವನ್ನು ಬರೆದು ಮುಗಿಸಿದ್ದು.

೧೮೯೫ ಜನವರಿ ೧ : ಕರ್ಣಾಟಕ ಕಾವ್ಯ ಮಂಜರಿಯ ಆಫೀಸಿಗೆ ಅದ್ಭುತ ರಾಮಾಯಣದ ವಿಷಯವನ್ನು ಕುರಿತು ಕಾಗದ ಬರೆದದ್ದು.

ಶ್ರೀ ಪಂಜೆಯವರು ನಂದಳಿಕೆಯವರ 'ಕುಮಾರವಿಜಯ'ವನ್ನು ಬಹಿರಂಗ ಸಭೆಯಲ್ಲಿ ಪ್ರಶಂಸಿಸಿದ್ದು.

ಮಾರ್ಚ ೨ : ಅದ್ಭುತರಾಮಾಯಣವನ್ನು ಪ್ರಕಟಣೆಗೆ ಕಳುಹಿಸಿ ಕೊಟ್ಟದ್ದು. ಜುಲೈ : ಅದ್ಭುತರಾಮಾಯಣದ ಮುದ್ರಣ ಪ್ರಾರಂಭ. ಮಂಗಳೂರು ಗವರ್ನಮೆಂಟ್ ಕಾಲೇಜಿನಲ್ಲಿ ಕನ್ನಡ ಪಂಡಿತನ ಕೆಲಸಕ್ಕೆ ಅರ್ಜಿ ಹಾಕಿಕೊಂಡದ್ದು.

ಸೆಪ್ಟಂಬರ್ ೨೫ : ಶ್ರೀರಾಮಪಟ್ಟಾಭಿಷೇಕವನ್ನು ಪ್ರಕಟಿಸಬೇಕೆಂದು ಕಾವ್ಯಮಂಜರಿಯವರನ್ನು ಕೋರಿದ್ದು, ಅದರ ಕೈಬರಹದ ಪ್ರತಿಯನ್ನು ಕಳುಹಿಸಿಕೊಟ್ಟದ್ದು.

ಅಕ್ಟೋಬರ್ : ಅದ್ಭುತ ರಾಮಾಯಣದ ಮುದ್ರಣ ಪೂರ್ತಿಯಾದದ್ದು.

ನವೆಂಬರ್ : ಶ್ರೀರಾಮಪಟ್ಟಾಭಿಷೇಕದ ಮುದ್ರಣ ಪ್ರಾರಂಭ.

೧೮೯೬ ಜನವರಿ : ಶ್ರೀ ರಾಮಪಟ್ಟಾಭಿಷೇಕದ ಮುದ್ರಣ ಪೂರ್ತಿ ಆದದ್ದು. ಉಡುಪಿ ಮಿಷನ್ ಸ್ಕೂಲಿಗೆ ತಿರುಗಿ ವರ್ಗವಾದದ್ದು. ಅದ್ಭುತ

ರಾಮಾಯಣದ ಟಿಪ್ಪಣಿ ಮುಖಪತ್ರಗಳ ಮುದ್ರಣಗಳೊಂದಿಗೆ ಕೃತಿ ಪ್ರಕಟವಾದದ್ದು.

ಜೂನ್ ೧೬ : ನಂದಳಿಕೆಯವರಿಗೆ ಅದ್ಭುತ ರಾಮಾಯಣದ ೧೦ ಪ್ರತಿಗಳನ್ನು ಕಾವ್ಯಮಂಜರಿಯವರು ಕಳುಹಿಸಿಕೊಟ್ಟದ್ದು.

೧೮೯೭ ಜನವರಿ : ಶ್ರೀರಾಮಪಟ್ಟಾಭಿಷೇಕ ಗ್ರಂಥದ ಪೀಠಿಕೆ ಬರೆದು ಮುದ್ರಿಸಿದ್ದು.

ಸೆಪ್ಟಂಬರ್ : ರಾಮಾಶ್ವಮೇಧದ ಪ್ರಕಟನೆಯ ವಿಷಯವನ್ನು ಕುರಿತು ಕಾವ್ಯಮಂಜರಿಯವರಿಗೆ ಕಾಗದ ಬರೆದದ್ದು.

ಅಕ್ಟೋಬರ್ : ಕವಿ ರಾಮಾಶ್ವಮೇಧದ ಸ್ವ ಹಸ್ತಾಕ್ಷರದ ಪ್ರತಿಯನ್ನು ಕಾವ್ಯಮಂಜರಿಯವರಿಗೆ ಕಳುಹಿಸಿಕೊಟ್ಟದ್ದು.

೧೮೯೮ ಮುದ್ದಣನಿಗೆ ಮಗನು ಹುಟ್ಟಿದ್ದು.

ಶ್ರೀರಾಮಪಟ್ಟಾಭಿಷೇಕ ಅದ್ಭುತ ರಾಮಾಯಣಗಳು ಮದ್ರಾಸ್ ಯುನಿವರ್ಸಿಟಿಯ ಎಫ್. ಎ. ಪರೀಕ್ಷೆಗೆ ಪಠ್ಯಪುಸ್ತಕವಾಗಿ ಗೊತ್ತಾದದ್ದು. ‘ತಾಂಡವಮುನಿ’ಯ ಕಥೆಗೆ ಟಿಪ್ಪಣಿ ಬರೆದದ್ದು.

ಸೆಪ್ಟಂಬರ್ : ರಾಮಾಶ್ವಮೇಧದ ಹಸ್ತಪ್ರತಿ ಪಂಜೆಯವರಿಗೆ ಕಳುಹಿಸಿಕೊಟ್ಟದ್ದು.

೧೯೦೦ ಏಪ್ರಿಲ್ : ಪಂಜೆ ಮತ್ತು ಬೆನಗಲ್‌ರವರನ್ನು ಕವಿ ಸಂದರ್ಶಿಸಿದ್ದು.

ಡಿಸೆಂಬರ್ : ‘ಜೋ ಜೋ’ ಪ್ರಬಂಧ ‘ಸುವಾಸಿನಿ’ಯಲ್ಲಿ ಪ್ರಕಟವಾದದ್ದು.

೧೯೦೧ ಕರ್ಣಾಟಕ ಕಾವ್ಯ ಕಲಾನಿಧಿಯಲ್ಲಿ ‘ರಾಮಾಶ್ವಮೇಧ’ ಮುದ್ರಣ ಪ್ರಾರಂಭ. (೧೯೦೨ನೇ ನವಂಬರ್ ೨೯ರಲ್ಲಿ ಪೀಠಿಕೆ ಮುಖಪತ್ರಗಳೊಡನೆ ಗ್ರಂಥ ಪ್ರಕಟನೆ.)

ಫೆಬ್ರುವರಿ ೧೫ : ಉಡುಪಿಯಲ್ಲಿ ಕವಿ ತನ್ನ ೩೨ನೆಯ ವಯಸ್ಸಿನಲ್ಲಿ ಕ್ಷಯರೋಗ ಪೀಡಿತನಾಗಿ ಇಹಲೋಕ ಯಾತ್ರೆಯನ್ನು ಸಮಾಪ್ತಿಗೊಳಿಸಿದ್ದು.

ಕನ್ನಡ ಸಾಹಿತ್ಯದಲ್ಲಿ 'ಮುದ್ದಣ' ಕಾವ್ಯನಾಮದ ನಂದಳಿಕೆ ಲಕ್ಷ್ಮೀನಾರಾಯಣಪ್ಪ ಅದ್ವಿತೀಯ ಸಾಧನೆ ಮಾಡಿದ ಕವಿ. 'ರತ್ನಾವತೀ ಕಲ್ಯಾಣ', 'ಕುಮಾರವಿಜಯ' ಎಂಬ ಯಕ್ಷಗಾನ ಕೃತಿಗಳನ್ನೂ, 'ಶ್ರೀರಾಮಪಟ್ಟಾಭಿಷೇಕ' ಷಟ್ಪದಿ ಕಾವ್ಯವನ್ನೂ, 'ಅದ್ಭುತ ರಾಮಾಯಣ', 'ಶ್ರೀರಾಮಾಶ್ವಮೇಧ' ಗದ್ಯ ಕೃತಿಗಳನ್ನು ರಚಿಸಿದ ಮುದ್ದಣ ನಂದಳಿಕೆಯವನು ಎಂಬುದು ನಮ್ಮೆಲ್ಲರ ಹೆಮ್ಮೆ. ನಂದಳಿಕೆ ಕಾರ್ಕಳ ತಾಲೂಕಿನ ಒಂದು ಗ್ರಾಮವಾಗಿದ್ದು ಈಗ ಅದು ಮುದ್ದಣನಿಂದಾಗಿ ಸಾಂಸ್ಕೃತಿಕ ತಾಣವಾಗಿದೆ. ೧೯೭೯ರಲ್ಲಿ ಆರಂಭವಾದ 'ಕವಿ ಮುದ್ದಣ ಸ್ಮಾರಕ ಮಿತ್ರ ಮಂಡಳಿ' (ರಿ) ನಂದಳಿಕೆಯ ಜನರ ಸಹಕಾರದಿಂದ ಮುದ್ದಣ ಹೆಸರಿನಲ್ಲಿ ಗ್ರಾಮಾಭಿವೃದ್ಧಿ ಮೂಲಭೂತ ಸೌಕರ್ಯ ಕಾರ್ಯಗಳನ್ನು ನಡೆಸಿ ಕರ್ನಾಟಕವೆ ಹೆಮ್ಮೆ ಪಡುವಂತೆ ಅಭಿವೃದ್ಧಿಗೊಳಿಸಿದೆ. ಮುದ್ದಣ ಯಕ್ಷಗಾನ, ತಾಳಮದ್ದಳೆ, ವಿಚಾರ ಸಂಕಿರಣ, ಪ್ರವಚನ, ಮುದ್ದಣ ಭಂಡಾರ ಗ್ರಂಥಗಳ ಅನಾವರಣ, ಮುದ್ದಣ ಕವಿಗೋಷ್ಠಿ, ಗಂಜೀಫಾ ಚಿತ್ರ ಪ್ರದರ್ಶನ, ಮುದ್ದಣ ಅಂಚೆ ಚೀಟಿ, ಮುದ್ದಣ ಅವಧಾನ, ಹೀಗೆ ನಿರಂತರವಾಗಿ ಕಾರ್ಯಕ್ರಮಗಳನ್ನು ನಡೆಸುತ್ತ ಕವಿ ಸ್ಮರಣೆಯನ್ನು ನಿತ್ಯವಾಗಿಸುತ್ತ ಬಂದಿದೆ. ಮುದ್ದಣ ಹೆಸರನ್ನು ಮುಂದಿನ ಪೀಳಿಗೆಗೆ ಶಾಶ್ವತವಾಗಿಸುವ ಗ್ರಂಥ ಪ್ರಕಟಣೆಯ ಕಾರ್ಯವನ್ನು ನಡೆಸಲಾಗಿದೆ. ಮುದ್ದಣ-೧೨೫ ವರ್ಷದಲ್ಲಿ 'ಮುದ್ದಣನಿಗೆ ನಮನ', ಮುದ್ದಣ ೧೪೫ನೆಯ ವರ್ಷದಲ್ಲಿ 'ನಂದಳಿಕೆಯ ನಂದನ' ಗ್ರಂಥಗಳನ್ನು ಪ್ರಕಟಿಸಿದ್ದು ಈಗ ಮುದ್ದಣ ಕವಿಯ ಶತಮಾನೋತ್ತರ ಸುವರ್ಣ ವರ್ಷ ಹಾಗೂ ಮುದ್ದಣ ಪ್ರಕಾಶನದ ರಜತ ಸಂಭ್ರಮದಲ್ಲಿ 'ನಂದಳಿಕೆಯ ನಂದಾದೀಪ' ಕೃತಿಯನ್ನು ಪ್ರಕಟಿಸುತ್ತಿದ್ದೇವೆ. ಸಾಹಿತ್ಯ ಲೋಕದ ಹಿರಿಯರಾದ ಮಾಸ್ತಿ, ತ. ಸು. ಶಾಮರಾಯ, ಕೀರ್ತಿನಾಥ ಕುರ್ತುಕೋಟಿ, ರಂ. ಶ್ರೀ. ಮುಗಳಿ, ಎಂ. ಮರಿಯಪ್ಪ, ಭಟ್ಟ, ಎಸ್. ವಿ. ಪರಮೇಶ್ವರ ಭಟ್ಟ, ಎಸ್. ಅನಂತ ರಂಗಾಚಾರ್, ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಕೆ. ನರಸಿಂಹ ಶಾಸ್ತ್ರಿ, ಎಸ್. ವ್ಹಿ. ರಂಗಣ್ಣ, ಬನ್ನಂಜೆ ಗೋವಿಂದಾಚಾರ್ಯ, ಕ. ವೆಂ. ರಾಜಗೋಪಾಲ, ವೇಣುಗೋಪಾಲ, ಬೇಲೂರು ರಾಮಮೂರ್ತಿ ಅವರು ಬರೆದ ಮುದ್ದಣ ಸಾಹಿತ್ಯಾನುಸಂಧಾನ ಲೇಖನಗಳು ಈ ಗ್ರಂಥದಲ್ಲಿವೆ. 'ನಂದಳಿಕೆ ನಂದಾದೀಪ' ಮುದ್ದಣ ೧೫೦ ಸಂಸ್ಮರಣ ಗ್ರಂಥವನ್ನು ಹಿರಿಯ ವಿದ್ವಾಂಸರಾದ ಡಾ. ಜಿ. ಎಂ. ಹೆಗಡೆ ಸಂಪಾದಿಸಿದ್ದಾರೆ. ಮುದ್ದಣ ಸಾಹಿತ್ಯ ಸಹೃದಯರು 'ನಂದಳಿಕೆಯ ನಂದಾದೀಪ' ಗ್ರಂಥವನ್ನು ಆಸ್ವಾದಿಸುವ ಮೂಲಕ ಮುದ್ದಣ ಸಾಹಿತ್ಯಾನುಸಂಧಾನ ನಡೆಸುವಂತಾಗಲಿ ಎಂದು ಆಶಿಸುತ್ತೇನೆ.

ನಂದಳಿಕೆ ಬಾಲಚಂದ್ರರಾವ್


**ಅಕ್ಷರ ಮಂಟಪ**

ನಂ. 1667, 6ನೇ ಅಡ್ಡರಸ್ತೆ, 6ನೇ 'ಸಿ' ಮೇನ್,
ಹಂಪಿನಗರ, ಬೆಂಗಳೂರು-560 104